ಸ್ವಾತಂತ್ರ್ಯದ ಅಂಚುಗಳು

ರಾಮಮನೋಹರ ಲೋಹಿಯಾ

ಪ್ರಾತಿನಿಧಿಕ ಲೇಖನಗಳು



ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಾ. ರಾಮಮನೋಹರ ಲೋಹಿಯಾ
ಬ್ಬ ದಿಟ್ಟ ವ್ಯಕ್ತಿ. ಕ್ರಿಯಾ ಶೀಲರೂ,
ೕಮಂತರೂ ಆದ ಅವರು ಹಿಡಿದದ್ದು
್ಯಾಗ ಮತ್ತು ಸೇವೆಯ ಹಾದಿ. ದೇಶವನ್ನು
ಗುಲಾಮಗಿರಿಯ ಸಂಕೋಲೆಯಿಂದ
ಬಿಡುಗಡೆಗೊಳಿಸುವುದು ಅವರ ಬದುಕಿನ
ಮೂಲ ಉದ್ದೇಶ. ತಮ್ಮ ಉಳಿವಿಗೆ
ಲೋಹಿಯಾ ಮುಳುವಾಗುತ್ತಾರೆಂಬ
ಭಯದಿಂದ ಬ್ರಿಟಿಷ್ ಸರ್ಕಾರ ಅವರನ್ನು
ಸೆರೆಮನೆಗೆ ತಳ್ಳಿತ್ತು. ಆದರೆ, ನಾನು
ಅವರನ್ನು ನೋಡುವ ದೃಷ್ಟಿಯೇ
ಬೇರೆ. ತಾಯ್ನಾಡಿನ ಮೇಲಿನ ಪ್ರೀತಿಗಾಗಿ
ತಮ್ಮ ಎಲ್ಲವನ್ನೂ ತ್ಯಾಗಮಾಡಿದ
ಅಪರೂಪದ ದೇಶಭಕ್ತ ಅವರು.

– ಮಹಾತ್ಮಾ ಗಾಂಧಿ



ರಾಮಮನೋಹರ ಲೋಹಿಯಾ

ಭಾರತೀಯ ಸಮಾಜವಾದದ ಪ್ರಮುಖ ಚಿಂತಕ-ರಾಜಕಾರಣಿ ಡಾ. ರಾಮಮನೋಹರ ಲೋಹಿಯಾ 1910 ಮಾರ್ಚ್ 23ರಂದು ಉತ್ತರ ಪ್ರದೇಶದ ಫೈಜಾಬಾದ್ ಜಿಲ್ಲೆಯ ಅಕ್ಬರ್‌ಪುರದಲ್ಲಿ ಹುಟ್ಟಿದರು. ತಂದೆ : ಹೀರಾಲಾಲ್, ತಾಯಿ: ಚಂದ್ರಿ. ಮುಂಬಯಿ, ಕಾಶಿ, ಕಲ್ಕತ್ತಾದಲ್ಲಿ ವಿದ್ಯಾಭ್ಯಾಸ ಮಾಡಿದ ಲೋಹಿಯಾ 1932ರಲ್ಲಿ ಜರ್ಮನಿಯ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಉಪ್ಪಿನ ಸತ್ಯಾಗ್ರಹ ಕುರಿತು ಪ್ರೌಢಪ್ರಬಂಧ ಬರೆದು ಅರ್ಥಶಾಸ್ತ್ರದಲ್ಲಿ ಪಿಎಚ್.ಡಿ. ಪದವಿ ಪಡೆದರು. ಜರ್ಮನ್ ಭಾಷೆಯಲ್ಲೇ ಮಾರ್ಕ್ಸ್ ಮತ್ತು ಹೆಗೆಲ್‌ರ ಕೃತಿಗಳನ್ನು ಅಭ್ಯಸಿಸಿದ ಲೋಹಿಯಾ ಅವರಿಬ್ಬರಿಗಿಂತಲೂ ಭಿನ್ನವಾಗಿ ಚರಿತ್ರೆಯನ್ನು ಅರಿಯುವ ಅಗತ್ಯ ಕುರಿತು ಚಿಂತಿಸಿದರು. 1934ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆಗಾಗಿ ದುಡಿದರು. 1936-38ರ ವರೆಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ವಿದೇಶಾಂಗ ವ್ಯವಹಾರ ವಿಭಾಗದ ಕಾರ್ಯದರ್ಶಿಯಾಗಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಹಲವು ಸಲ ಬ್ರಿಟಿಷ್ ಸರ್ಕಾರದಿಂದ ಬಂಧನಕ್ಕೊಳಗಾದರು. 1942ರ 'ಭಾರತ ಬಿಟ್ಟು ತೊಲಗಿ' ಚಳುವಳಿಯ ಕಾಲದಲ್ಲಿ ಭೂಗತ ಹೋರಾಟ ಮುಂದುವರೆಸಿದರು. 1946ರ ಜೂನ್ ಆರರಂದು ಗೋವಾ ಸ್ವಾತಂತ್ರ್ಯ ಹೋರಾಟದಲ್ಲಿ ಬಂಧನಕ್ಕೊಳಗಾದರು.

ಗಾಂಧೀಜಿಯವರ ಮೆಚ್ಚಿನ ಶಿಷ್ಯರಾಗಿದ್ದ ಲೋಹಿಯಾ ಗಾಂಧಿಯ ಆರಾಧಕರಾಗಿದ್ದಂತೆ ವಿಮರ್ಶಕರೂ ಆಗಿದ್ದರು. ಸ್ವಾತಂತ್ರ್ಯೋತ್ತರದಲ್ಲಿ ನೆಹರೂ ಯುಗದ ಕಟುಟೀಕಾಕಾರರಾದ ಲೋಹಿಯಾ ಕಾಂಗ್ರೆಸ್ ವಿರೋಧೀವಾದದ ತೀವ್ರ ಪ್ರತಿಪಾದಕರಾಗಿದ್ದರು. 1952ರಲ್ಲಿ ಪ್ರಜಾ ಸಮಾಜವಾದಿ ಪಕ್ಷದ ರಚನೆಯ ಸೂತ್ರಧಾರಿಯಾಗಿದ್ದ ಅವರು 1962ರಲ್ಲಿ ನೆಹರೂ ವಿರುದ್ಧ ಲೋಕಸಭೆಗೆ ಸ್ಪರ್ಧಿಸಿ ಸೋತರು. 1963ರಲ್ಲಿ ಫರೂಕಾಬಾದ್ ಲೋಕಸಭಾ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದ ಲೋಹಿಯಾ 1967ರಲ್ಲಿ ಕನೌಜ್ ಕ್ಷೇತ್ರದಲ್ಲಿ ಗೆದ್ದರು. 'ಮ್ಯಾನ್‌ಕೈಂಡ್' (ಇಂಗ್ಲಿಷ್) ಹಾಗೂ 'ಚೌಕಂಭಾ' (ಹಿಂದಿ) ನಿಯತಕಾಲಿಕ ಪತ್ರಿಕೆಗಳ ಸಂಪಾದಕರಾಗಿದ್ದ ಲೋಹಿಯಾ ಉತ್ತಮ ಲೇಖಕರೂ ಆಗಿದ್ದರು. 'ದಿ ಕಾಸ್ಟ್ ಸಿಸ್ಟಮ್' 'ಮಾರ್ಕ್ಸ್, ಗಾಂಧಿ ಅಂಡ್ ಸೋಷಲಿಸಂ', 'ಗಿಲ್ಟಿ ಮೆನ್ ಆಫ್ ಇಂಡಿಯಾಸ್ ಪಾರ್ಟಿಷನ್,' 'ಇಂಟರ್‌ವಲ್ ಡ್ಯೂರಿಂಗ್ ಪಾಲಿಟಿಕ್ಸ್', 'ಲ್ಯಾಂಗ್ವೇಜ್', 'ರುಪೀಸ್ 25000/- ಎ ಡೇ', 'ನೋಟ್ ಅಂಡ್ ಕಾಮೆಂಟ್ಸ್' - ಇವು ಅವರು ಇಂಗ್ಲಿಷಿನಲ್ಲಿ ಬರೆದ ಕೃತಿಗಳು. 'ಸಮಾಜವಾದಿ ಆಂದೋಲನ್ ಕಾ ಇತಿಹಾಸ್' 'ಹಿಂದೂ, ಮುಸಲ್ಮಾನ್', 'ಅನ್ನ ಸಮಸ್ಯಾ', 'ಆಜಾದ್ ಹಿಂದೂಸ್ಥಾನ್ ಕಿ ನಯಿ ರುಜ್‌ಹಾನ್' -ಇವು ಹಿಂದಿ ಭಾಷೆಯಲ್ಲಿರುವ ಅವರ ಮುಖ್ಯ ಕೃತಿಗಳು.

ಅವಿವಾಹಿತರಾಗಿಯೇ ಉಳಿದಿದ್ದ ಲೋಹಿಯಾ 1967ರ ಅಕ್ಟೋಬರ್ 12ರಂದು ಕಾಲವಶರಾದರು.

ಸ್ವಾತಂತ್ರ್ಯದ ಅಂತರ್ಜಾಲ

ಡಾ. ರಾಮಮನೋಹರ ಲೋಹಿಯಾ
ಅವರ ಪ್ರಾತಿನಿಧಿಕ ಲೇಖನಗಳು

ಸಂಪಾದಕರು

ಪ್ರೊ. ಕಾಳೇಗೌಡ ನಾಗವಾರ

ಡಾ. ನಟರಾಜ್ ಹುಳಿಯಾರ್

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಬೆಂಗಳೂರು

SWATANTRYADA ANTARJALA : An anthology of representative writings of Dr. Ram Manohar Lohia edited by Prof. Kalegowda Nagavara & Dr. Nataraj Huliyar and Published by Y.K. MudduKrishna, Director, Directorate of Kannada and Culture, 14/3A Nrupathunga Road, Bangalore - 560 002

Pp : 340+XIV

First Edition : 1996

ಬೆಲೆ : ರೂ. 25-00

ರಕ್ಷಾಪುಟ ವಿನ್ಯಾಸ : ಶ್ರೀ ಸುದೇಶ್ ಮಹಾನ್

ಲಕ್ಷ್ಮಿ ಮುದ್ರಣಾಲಯ
ಚಾಮರಾಜಪೇಟೆ
ಬೆಂಗಳೂರು - 560 018
ದೂರವಾಣಿ : 6613123, 6618752

ಪರಿವಿಡಿ

ಪ್ರಸ್ತಾವನೆ VII
ಪ್ರಕಾಶಕರ ಮಾತು XI

ಭಾಗ : ಒಂದು
ಲೋಹಿಯಾ ಬರಹಗಳು

ಸ್ವಾತಂತ್ರ್ಯದ ಅಂತರ್ಜಲ 1
ಹಿಂದಿಯಿಂದ ಕನ್ನಡಕ್ಕೆ : ಮಂಗ್ಳೂರು ವಿಜಯ

ಮಹಾತ್ಮಾ ಗಾಂಧಿ 10
ಹಿಂದಿಯಿಂದ ಕನ್ನಡಕ್ಕೆ : ಬಿ. ಎ. ಸನದಿ

ಭರತಭೂಮಿ, ಭೂಮಿತಾಯಿ 45
ಹಿಂದಿಯಿಂದ ಕನ್ನಡಕ್ಕೆ : ಲಕ್ಷ್ಮೀನಾರಾಯಣ ಅರೋರಾ

ದ್ರೌಪದಿಯೊ? ಸಾವಿತ್ರಿಯೊ ? 53
ಹಿಂದಿಯಿಂದ ಕನ್ನಡಕ್ಕೆ : ತಿಪ್ಪೇಸ್ವಾಮಿ

ಸೌಂದರ್ಯ ಮತ್ತು ಮೈಬಣ್ಣ 83
ಇಂಗ್ಲಿಷಿನಿಂದ ಕನ್ನಡಕ್ಕೆ : ಕೆ. ವಿ. ಸುಬ್ಬಣ್ಣ

ರಾಮ, ಕೃಷ್ಣ, ಶಿವ 93
ಇಂಗ್ಲಿಷಿನಿಂದ ಕನ್ನಡಕ್ಕೆ : ಕೆ. ವಿ. ಸುಬ್ಬಣ್ಣ

ಜಾತಿ, ಲಿಂಗ ಕುರಿತ ಪ್ರತ್ಯೇಕತೆ 120
ಇಂಗ್ಲಿಷಿನಿಂದ ಕನ್ನಡಕ್ಕೆ : ನಟರಾಜ್ ಹುಳಿಯಾರ್

ವಸಿಷ್ಠರು ಮತ್ತು ವಾಲ್ಮೀಕಿಗಳು 132
ಹಿಂದಿಯಿಂದ ಕನ್ನಡಕ್ಕೆ : ಲಕ್ಷ್ಮೀನಾರಾಯಣ ಅರೋರಾ

ಯಜಮಾನಿಕೆಯ ಭಾಷೆ ಹಾಗೂ ಜನಭಾಷೆಗಳ ಮುಖಾಮುಖಿ 163
ಹಿಂದಿಯಿಂದ ಕನ್ನಡಕ್ಕೆ : ಹಸನ್ ನಯೀಂ ಸುರಕೋಡ

ಹಿಂದೂ, ಮುಸ್ಲಿಂ 178
ಹಿಂದಿಯಿಂದ ಕನ್ನಡಕ್ಕೆ : ಹಸನ್ ನಯೀಂ ಸುರಕೋಡ

ಇತಿಹಾಸ ಮತ್ತು ಅದರ ಉದ್ದೇಶ 208
ಇಂಗ್ಲಿಷಿನಿಂದ ಕನ್ನಡಕ್ಕೆ : ಕೆ. ಎಸ್. ಭಗವಾನ್

ಗಾಂಧಿವಾದ ಮತ್ತು ಸಮಾಜವಾದ 214
ಇಂಗ್ಲಿಷಿನಿಂದ ಕನ್ನಡಕ್ಕೆ : ಕೆ. ಪಿ. ಪೂರ್ಣಚಂದ್ರ ತೇಜಸ್ವಿ

ಭಾಗ : ಎರಡು

ಲೋಹಿಯಾ ಕುರಿತು

ರಾಮಮನೋಹರ ಲೋಹಿಯಾ : ಬದುಕಿನ ಹೆಜ್ಜೆಗಳು 239
ನಾನಕ್ ಚಂದ್ ಮೆಹ್ರೋತ್ರ
ಇಂಗ್ಲಿಷಿನಿಂದ ಕನ್ನಡಕ್ಕೆ : ಲಕ್ಷ್ಮೀನಾರಾಯಣ ಅರೋರಾ

ಲೋಹಿಯಾ ವ್ಯಕ್ತಿತ್ವ ಮತ್ತು ವಿಚಾರಧಾರೆ 265
ಮಧು ಲಿಮಯೆ
ಇಂಗ್ಲಿಷ್‌ನಿಂದ ಕನ್ನಡಕ್ಕೆ : ಗುರುರಾಜ ಬೀಡೀಕರ್

ಲೋಹಿಯಾ ಚಿಂತನೆಯ ಹಲವು ಮುಖಗಳು 280
ಜಾರ್ಜ್ ಫರ್ನಾಂಡಿಸ್
ಇಂಗ್ಲಿಷಿನಿಂದ ಕನ್ನಡಕ್ಕೆ : ನಟರಾಜ್ ಹುಳಿಯಾರ್

ಲೋಹಿಯಾ ಅವರ ಜಾತ್ಯತೀತತೆ 291
ಮುಖ್ತಾರ್ ಅನೀಸ್
ಹಿಂದಿಯಿಂದ ಕನ್ನಡಕ್ಕೆ : ಬಿ. ಎ. ಸನದಿ

ಲೋಹಿಯಾ ನೆನಪುಗಳು 295
ಕೋಣೆ ಸದಾಶಿವ ಕಾರಂತ
ಇಂಗ್ಲಿಷಿನಿಂದ ಕನ್ನಡಕ್ಕೆ : ಸಿ. ನಾಗಣ್ಣ

ಲೋಹಿಯಾ ಮತ್ತು ಜಯಪ್ರಕಾಶ್ 307
ಮಧು ಲಿಮಯೆ
ಹಿಂದಿಯಿಂದ ಕನ್ನಡಕ್ಕೆ : ಬಿ.ಎ. ಸನದಿ

ಅನುಬಂಧ 331

ಪ್ರಸ್ತಾವನೆ

ಅಸಾಧಾರಣ ಮಾನವಪ್ರೇಮಿಯಾಗಿದ್ದ ಡಾ. ರಾಮಮನೋಹರ ಲೋಹಿಯಾ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮನ್ನು ತೀವ್ರವಾಗಿ ತೊಡಗಿಸಿಕೊಂಡಿದ್ದರು. ಮಹಾತ್ಮಾ ಗಾಂಧಿಯವರ ನೇರ ಶಿಷ್ಯನೂ, ಮಾನಸಪುತ್ರನೂ ಆಗಿದ್ದ ಅವರು ತಮ್ಮ ಬದುಕಿನ ಉದ್ದಕ್ಕೂ ಬಡವರ, ಎಲ್ಲಾ ಬಗೆಯ ಅಪಮಾನಿತ ಜನವರ್ಗದ ಅಂತರಾಳದ ದನಿಯಾಗಿ ಬಾಳಿದವರು. ಶ್ರೇಷ್ಠ ಸಮಾಜವಾದಿ ಚಿಂತಕರಾದ ರಾಮಮನೋಹರರು ಭರತಖಂಡದ ಒಟ್ಟು ಸಾಂಸ್ಕೃತಿಕ ಬದುಕಿನಲ್ಲಿ ತಮ್ಮ ಅತ್ಯಂತ ಸಂವೇದನಾಶೀಲ ಚಟುವಟಿಕೆಗಳ ಮೂಲಕ ಮಹತ್ವದ ಪಾತ್ರವಹಿಸಿದವರು.

ಉತ್ತರ ಪ್ರದೇಶದ ಫೈಜಾಬಾದ್ ಜಿಲ್ಲೆಯ ಅಕ್ಬರಪುರದಲ್ಲಿ 23-3-1910ರಲ್ಲಿ ಜನಿಸಿದ ಲೋಹಿಯಾ ಅವರು ತಮ್ಮ ಐವತ್ತೇಳು ವರ್ಷಗಳ ಬದುಕಿನಲ್ಲಿ-ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯಾನಂತರ; ಭಾರತದಲ್ಲಿ ಮತ್ತು ಕೆಲವು ಹೊರದೇಶಗಳಲ್ಲಿ- ನಿರಂತರವಾಗಿ ನಾಗರಿಕ ಹಕ್ಕುಗಳ ಪರವಾಗಿ ಹೋರಾಡುತ್ತಾ ಪದೇ ಪದೇ ಬಂಧನ ಮತ್ತು ಸೆರೆಮನೆವಾಸವನ್ನು ಅನುಭವಿಸುತ್ತಲೇ ಬಂದವರು. ಸದಾ ಸಮುದಾಯದ ನೋವು ಮತ್ತು ನೋವಿನ ಆಳದ ಕನಸುಗಳನ್ನು ಹುಡುಕಿ ಅರ್ಥೈಸುವ ಅದಮ್ಯ ಹೆಣಗಾಟದ ಹಿರಿಯ ಚೇತನವಾಗಿದ್ದ ಅವರು ನಮ್ಮ ನಡುವಣ ಬಗೆಬಗೆಯ ಅನ್ಯಾಯಗಳ ಬೇರುಗಳನ್ನು ತಡಕಿ, ಅವುಗಳನ್ನು ನಿರ್ಮೂಲನ ಮಾಡಬೇಕೆನ್ನುವ ತೀವ್ರ ಹಠ ಹಾಗೂ ಆಳದ ಕಾಳಜಿಗಳ ವ್ಯಕ್ತಿಯಾಗಿದ್ದರು. ಇಂಡಿಯಾದ ವರ್ಗ, ವರ್ಣ, ಜಾತಿ, ಲಿಂಗಭೇದ ನೀತಿಯ ಸೂಕ್ಷ್ಮಗಳ ಬಗ್ಗೆ; ಅಸ್ಪೃಶ್ಯತೆ, ಮೌಢ್ಯ, ಕೀಳರಿಮೆಗಳು ಯಾವುದೇ ರಾಷ್ಟ್ರವನ್ನು ಇನ್ನಿಲ್ಲದಂತಹ ವಿಕಾರ ತುಂಬಿದ ಅವನತಿಗೆ ತಳ್ಳಬಹುದಾದ ಭಯಂಕರ ಸ್ಥಿತಿಯ ಬಗ್ಗೆ ಚೆನ್ನಾಗಿ ಅರಿತುಕೊಂಡಿದ್ದ ಅವರು ಪ್ರಜಾಪ್ರಭುತ್ವ, ವಿಕೇಂದ್ರೀಕರಣ ಮತ್ತು ಅಹಿಂಸೆಯ ಹಾದಿಯನ್ನು ಆಯ್ಕೆಮಾಡಿಕೊಂಡು ಮಾನವೀಯ ಮೌಲ್ಯಗಳಿಗಾಗಿ ಕೆಚ್ಚಿನಿಂದ ಹೋರಾಡುತ್ತಲೇ ಬಂದವರು. ಜನಸಮುದಾಯದ ಒಟ್ಟು ಬದುಕಿನ ಬತ್ತಿದ ಆಸೆಗಳು, ಕೊರತೆಗಳು, ಕನಸುಗಳು ಹಾಗೂ ಎಲ್ಲ ಬಗೆಯ ತೀವ್ರಾನುರಾಗದ ಬಗ್ಗೆ ಲೋಹಿಯಾಗೆ ಇದ್ದ ಅರಿವು ಹಾಗೂ ಸೂಕ್ಷ್ಮಜ್ಞತೆ ನಿಜಕ್ಕೂ ದಂಗುಬಡಿಸುವಂತದ್ದು. ಎಲ್ಲ ಸತ್ಯಗಳಿಗೂ ತೆರೆದುಕೊಳ್ಳಬೇಕೆಂದು ನಿರಂತರವಾಗಿ ಹಾತೊರೆಯುತ್ತಿದ್ದ ಶ್ರೇಷ್ಠ ಸೃಜನಶೀಲ ಮನಸ್ಸು ಅವರದಾಗಿತ್ತು. ನಮ್ಮ ಸುತ್ತಣ ಯಾವುದೇ ಪ್ರಮಾಣದ ಅನ್ಯಾಯದ ವಿರುದ್ಧ ಸೆಣಸಾಡುವ ಉತ್ಕಟವಾದ ಬಯಕೆಯು ತಂತಾನೆ ಆರೋಗ್ಯಪೂರ್ಣವೂ, ಅದಮ್ಯ ಶಕ್ತಿಶಾಲಿಯೂ ಆಗಿಯೇ ತೀರುತ್ತದೆನ್ನುವ ಅಚಲ ನಂಬಿಕೆಯಿಂದ, ಜೀವನೋತ್ಸಾಹ ಹಾಗೂ ಕರ್ತವ್ಯ ಪ್ರಜ್ಞೆಯ ಹೊಳಹುಗಳ ಮೂಲಕ ಬಾಳಿದ ಹಿರಿಯ ಸಂಗಾತಿ ಈ ರಾಮಮನೋಹರ ಲೋಹಿಯಾ.

(i) ಸ್ತ್ರೀ–ಪುರುಷ ಸಮಾನತೆ (ii) ವರ್ಣಭೇದವನ್ನು ಅನುಸರಿಸಿದ ಅಸಮಾನತೆಯ ನಾಶ (iii) ಹುಟ್ಟಿನ ಆಧಾರವನ್ನು ಅನುಸರಿಸುವ ಅಸಮಾನತೆಯ ನಿವಾರಣೆ (iv) ವಿದೇಶಿ ದಬ್ಬಾಳಿಕೆಯ ಅಂತ್ಯ ಹಾಗೂ ವಿಶ್ವಸರ್ಕಾರದ ಸ್ಥಾಪನೆ (v) ವ್ಯಕ್ತಿಗತ ಸಂಪತ್ತಿನಿಂದ ಉದ್ಭವಿಸುವ ಆರ್ಥಿಕ ಅಸಮಾನತೆಯ ನಾಶ ಹಾಗೂ ಸಮಾನತೆಯ ಸಾಧನೆ (vi) ಶಸ್ತ್ರಾಸ್ತ್ರಗಳ ಬಯಕೆಯ ಮೇಲಿನ ಹತೋಟಿ ಮತ್ತು ಸಾರ್ವಜನಿಕ ಕಾನೂನು ಭಂಗ ತತ್ವದ ಪ್ರತಿಷ್ಠಾಪನೆ ಮತ್ತು (vii) ವೈಯಕ್ತಿಕ ಸ್ವಾತಂತ್ರ್ಯದ ಮೇಲೆ ಆಗುವ ಅತಿಕ್ರಮಣದ ವಿರುದ್ಧ ಹೋರಾಟ ಮುಂತಾದ ಅಂಶಗಳ ಬಗ್ಗೆ ನಾವು ಕಟ್ಟೆಚ್ಚರದಿಂದ ಇರಬೇಕಾದುದನ್ನು ಲೋಹಿಯಾ ಮನಗಂಡಿದ್ದರು.

ರಾಮಮನೋಹರರ ಪ್ರಭಾವ ಕರ್ನಾಟಕದ ರಾಜಕೀಯ, ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದ ಮೇಲೆ ಸಾಕಷ್ಟು ದೊಡ್ಡ ಪ್ರಮಾಣದಲ್ಲಿಯೇ ಆಗಿದೆ. ಹೊಸ ಸಾಂಸ್ಕೃತಿಕ ಬದುಕಿನ ಹಾರೈಕೆಯ ಸೂಕ್ಷ್ಮ ಮನಸ್ಸುಗಳು ಲೋಹಿಯಾ ಚಿಂತನೆಯ ಬೆಳಕಿನಲ್ಲಿ ಸೃಜನಶೀಲವಾಗಿ ತಂತಮ್ಮ ಕ್ಷೇತ್ರಗಳಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ.

ಜನತೆ ಮತ್ತು ಜನಭಾಷೆಗಳ ಬಗ್ಗೆ ಅಪಾರ ಕಳಕಳಿಯನ್ನು ಹೊಂದಿದ್ದ ಲೋಹಿಯಾ ಅವರ ಚಿಂತನೆ ಎಲ್ಲರಿಗೂ ದಕ್ಕುವಂತೆ ಆಗಬೇಕಾಗಿದೆ. ಅಪ್ಪಟ ಜನಪ್ರೀತಿಯ ಈ ಹೊಸಬದುಕಿನ ಹರಿಕಾರರ ವಿಚಾರಗಳು ಭಾರತೀಯ ಭಾಷೆಗಳಲ್ಲಿ, ಅಚ್ಚುಕಟ್ಟಾದ ರೀತಿಯಲ್ಲಿ ತಮ್ಮೆಲ್ಲ ಅಸಲೀತನದ ಜೊತೆಯಲ್ಲಿ ದೊರಕುವಂತೆ ಆಗಬೇಕೆಂಬುದು ನಮ್ಮ ಕನಸಾಗಿದೆ. ಲೋಹಿಯಾ ಅವರ ಕೃತಿಗಳು–ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳೂ ಸೇರಿದಂತೆ – ಈ ತನಕ ಯಾವುದೇ ಭಾಷೆಯಲ್ಲಿ ಒಂದುಕಡೆಗೆ ದೊರೆಯುತ್ತಿಲ್ಲ. ಹಿಂದಿ ಭಾಷೆಯಲ್ಲಿ ಸಹ ಇಲ್ಲಿಯವರೆಗೆ ಈ ಬಗೆಯ ಕಾರ್ಯ ಆಗದಿರುವುದು ಆಶ್ಚರ್ಯ ಮತ್ತು ನೋವಿನ ಸಂಗತಿಯಾಗಿದೆ. (ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದ ಶ್ರೀ ಮುಲಾಯಂ ಸಿಂಗ್ ಯಾದವ್ ಅವರು 1994ರ ಜೂನ್ ತಿಂಗಳಿನಲ್ಲಿ ತಮ್ಮ ಸರ್ಕಾರದ ವಾರ್ತಾ ಮತ್ತು ಜನಸಂಪರ್ಕ ಇಲಾಖೆಯ ಮೂಲಕ ಲೋಹಿಯಾ ಛಾಯಾಚಿತ್ರ ಸಂಪುಟವನ್ನು ಪ್ರಕಟಿಸಿರುವುದು ಸಂತೋಷದ ವಿಷಯ.)

ಕರ್ನಾಟಕದ ಸಮಾಜವಾದಿಗಳು ಮತ್ತು ಸಮಾಜವಾದಿ ಹಿನ್ನೆಲೆಯ ಕನ್ನಡ ಬರಹಗಾರರು ರಾಮಮನೋಹರ ಲೋಹಿಯಾ ಅವರ ಆರೋಗ್ಯಕರ ವಿಚಾರಧಾರೆಗೆ ಮಾರುಹೋಗಿ, ಸುಮಾರು 1960 ರಿಂದ ಈಚೆಗೆ ಕನ್ನಡದಲ್ಲಿ ಅಲ್ಲಲ್ಲಿ ಲೇಖನಗಳನ್ನು ಪ್ರಕಟಿಸುತ್ತಾ ಬಂದಿದ್ದಾರೆ. "ರಾಜಕೀಯದ ಮಧ್ಯೆ ಬಿಡುವು", "ಜಾತಿಪದ್ಧತಿ", "ಇತಿಹಾಸ ಚಕ್ರ", "ಸಮಾನತೆಯ ಅರ್ಥ", "ಮಾರ್ಕ್ಸ್‌ವಾದ ಮತ್ತು ಸಮಾಜವಾದ", "ಹಿಂದೂ ಧರ್ಮ ಮತ್ತು ಹಿಂದೂ ಮುಸಲ್ಮಾನ ಸಮಸ್ಯೆ", "ಲೋಹಿಯಾ : ವ್ಯಕ್ತಿ – ವಿಚಾರ – ವಿಮರ್ಶೆ", "ಸಮಾಜವಾದಿ ಲೋಹಿಯಾ" – ಮುಂತಾದ ಕೃತಿಗಳು ಈ ಹಿಂದೆ ಕನ್ನಡದಲ್ಲಿ ಹೊರಬಂದಿವೆ. ಆದರೆ ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿರುವ ಲೋಹಿಯಾ ಹೆಚ್ಚಿನ ಬರವಣಿಗೆಯು ನಮಗೆಲ್ಲ ಇನ್ನೂ ಸರಿಯಾಗಿ ಪರಿಚಯವೇ ಆಗಿಲ್ಲ. ಅದರಲ್ಲೂ ದಕ್ಷಿಣ ಭಾರತದ ದ್ರಾವಿಡ ಭಾಷೆಗಳ ಹಿನ್ನೆಲೆಯ ನಮಗೆ ರಾಮಮನೋಹರರ ತಾಯ್ನುಡಿಯಾದ ಹಿಂದಿಯಲ್ಲಿರುವ ಅವರ ಬರಹಗಳು ಮತ್ತು ಭಾಷಣಗಳ ಬಗೆಗೆ ಅಷ್ಟಾಗಿ ತಿಳಿದೇ ಇಲ್ಲ; ಇವೆಲ್ಲ ವ್ಯವಸ್ಥಿತವಾಗಿ ಒಂದು ಕಡೆಯಲ್ಲಿ ದೊರೆಯುವ

ಸ್ಥಿತಿಯಲ್ಲಿ ಕೂಡ ಇಲ್ಲ. ಸಮಾಜವಾದಿ ಹಿನ್ನೆಲೆಯ ಗೆಳೆಯರೆಲ್ಲರೂ ಈ ಬಗ್ಗೆ ತೀವ್ರಗಮನ ಹರಿಸದೇ ಹೋಗಿದ್ದೇ ಇದಕ್ಕೆಲ್ಲ ಕಾರಣವಾಗಿದೆ.

ಲೋಹಿಯಾ ಅವರ ಸಮಗ್ರ ಬರವಣಿಗೆಯನ್ನು ಕನ್ನಡದಲ್ಲಿ ಪ್ರಕಟಿಸುವ ಮಹತ್ವ ಪೂರ್ಣವಾದ ತೀರ್ಮಾನವನ್ನು ತೆಗೆದುಕೊಂಡ ಕರ್ನಾಟಕ ಸರ್ಕಾರವು ಈ ಕೆಳಕಂಡವರನ್ನು ಒಳಗೊಂಡಿರುವ ಡಾ. ರಾಮಮನೋಹರ ಲೋಹಿಯಾ ಸಮಗ್ರ ಕೃತಿಗಳ ಪ್ರಕಟಣಾ ಸಮಿತಿಯನ್ನು ನೇಮಿಸಿ 21-12-1995ರಂದು ಆದೇಶವನ್ನು ಹೊರಡಿಸಿತು:

ಪ್ರೊ. ಕಾಳೇಗೌಡ ನಾಗವಾರ	ಅಧ್ಯಕ್ಷರು
ಪ್ರೊ. ಸಿದ್ಧಲಿಂಗಯ್ಯ	ಸದಸ್ಯರು
ಡಾ. ನಟರಾಜ್ ಹುಳಿಯಾರ್	ಸದಸ್ಯರು
ಶ್ರೀ ಹಸನ್ ನಯೀಂ ಸುರಕೋಡ್	ಸದಸ್ಯರು
ಪ್ರೊ. ತಿಪ್ಪೇಸ್ವಾಮಿ	ಸದಸ್ಯರು
ಡಾ. ಎಸ್. ಆರ್. ಹೊನ್ನಲಿಂಗಯ್ಯ ಸಹ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ	ಸದಸ್ಯ-ಕಾರ್ಯದರ್ಶಿಗಳು

ಈ ಸಮಿತಿಯು ತನ್ನ ಕಾರ್ಯವನ್ನು ಆರಂಭಿಸಿ ಬೇರೆ ಬೇರೆಡೆಗಳಲ್ಲಿ ಚದುರಿ ಹೋಗಿರುವ ಲೋಹಿಯಾ ಅವರ ಎಲ್ಲ ಬರಹಗಳನ್ನು ಒಂದೆಡೆ ಕಲೆಹಾಕಿ, ಕನ್ನಡಕ್ಕೆ ಅನುವಾದಿಸಿ-ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಇತಿಹಾಸ, ಭಾಷೆ, ಅಂತರರಾಷ್ಟ್ರೀಯ ವಿಚಾರಗಳು ಮುಂತಾದ ವಿಷಯಗಳಿಗೆ ಅನುಗುಣವಾಗಿ ವಿವಿಧ ಸಂಪುಟಗಳಲ್ಲಿ ಹೊರತರುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಈ ಸಂಪುಟಗಳು ಹೊರಬರುತ್ತಿರುವುದಕ್ಕೆ ಮುಂಚಿತವಾಗಿ ಲೋಹಿಯಾ ಅವರ ಬಹುಮುಖವಾದ ಆಸಕ್ತಿಗಳಿಗೆ ಕನ್ನಡಿ ಹಿಡಿಯುವಂತಹ ಪ್ರಾತಿನಿಧಿಕ ಬರಹಗಳ ಸಂಕಲನವಾದ "ಸ್ವಾತಂತ್ರ್ಯದ ಅಂತರ್ಜಲ" ಸಂಪುಟವನ್ನು ಈ ಮಹಾನ್ ಚೇತನದ ಮುವ್ವತ್ತನೆಯ ಸ್ಮರಣೆಯ ದಿನವಾದ ದಿನಾಂಕ 12-10-1996ರಂದು ಬಿಡುಗಡೆ ಮಾಡುತ್ತಿದ್ದೇವೆ. ಈ ಸಂಕಲನವು ರಾಮಮನೋಹರರ ಆಲೋಚನೆಗಳ ವೈವಿಧ್ಯವನ್ನೂ ತುಂಬು ಜೀವನಪ್ರೀತಿಯ ಬೆಚ್ಚನೆಯ ಒಳಮುಖಗಳನ್ನೂ ಯಶಸ್ವಿಯಾಗಿ ಪ್ರತಿನಿಧಿಸುತ್ತದೆ. ಜೊತೆಗೆ, ಅವರ ಆತ್ಮೀಯ ಒಡನಾಡಿಗಳಾಗಿದ್ದು, ಅವರ ವ್ಯಕ್ತಿತ್ವ ಮತ್ತು ಸತತ ಕ್ರಿಯಾಶೀಲ ಚಟುವಟಿಕೆಗಳನ್ನು ಹತ್ತಿರದಿಂದ ಬಲ್ಲ ಮನಸ್ಸುಗಳು ಕಂಡುಂಡ ಅನುಭವಗಳ ಚಿತ್ರಣದ ಪುಟ್ಟಭಾಗವೂ ಈ ಕೃತಿಯ ಕೊನೆಯಲ್ಲಿ ಸೇರಿದೆ.

ರಾಮಮನೋಹರರಂಥ ಧೀಮಂತ ಚಿಂತಕರ ಸಮಗ್ರ ಬರಹಗಳು ಕನ್ನಡದಲ್ಲಿ ಪ್ರಕಟಗೊಳ್ಳಬೇಕೆಂಬ ಹಂಬಲವನ್ನು ಹೊತ್ತ ಕರ್ನಾಟಕ ಸರ್ಕಾರದ ಈ ವಿಶಿಷ್ಟ ಯೋಜನೆಯು ಐತಿಹಾಸಿಕವೂ, ರಾಷ್ಟ್ರಮಟ್ಟದಲ್ಲಿ ಮಾದರಿಯಾದುದೂ ಆಗಿದೆ. ಇಂತಹ ಮೋಹಕ ಹಂಬಲವು ಸಾಧ್ಯವಾದಷ್ಟು ಬೇಗ ಭಾರತದ ಇತರ ಭಾಷೆಗಳಿಗೂ ಹಬ್ಬಲೆಂದು ನಾನು ತುಂಬುಮನಸ್ಸಿನಿಂದ ಹಾರೈಸುತ್ತೇನೆ.

ಈ ಯೋಜನೆಯು ಕಾರ್ಯಗತವಾಗಲು ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ಎಚ್. ಡಿ. ದೇವೇಗೌಡರು, ಮುಖ್ಯಮಂತ್ರಿಗಳಾದ ಶ್ರೀ ಜೆ. ಎಚ್. ಪಟೇಲರು, ಉಪ-ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು, ಸಚಿವರುಗಳಾದ ಶ್ರೀ ಎಂ. ಪಿ. ಪ್ರಕಾಶ್ ಅವರು, ಹಾಗೂ ಡಾ. ಎಚ್. ಸಿ. ಮಹದೇವಪ್ಪನವರು ಕಾರಣಕರ್ತರಾಗಿದ್ದಾರೆ. ಅದರಲ್ಲೂ ಶ್ರೀ ಎಂ. ಪಿ. ಪ್ರಕಾಶ್‌ರವರು ಮತ್ತು ಡಾ. ಎಚ್. ಸಿ. ಮಹದೇವಪ್ಪನವರು ತಮ್ಮ ಅಪರಿಮಿತವಾದ ಆಸಕ್ತಿಯಿಂದ, ಕ್ರಿಯಾಶೀಲತೆಯಿಂದ ಈ ಯೋಜನೆಯ ವೇಗವರ್ಧಕಗಳಾಗಿ ದುಡಿದಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ ಅವರು ಈ ಯೋಜನೆಯ ಬಗ್ಗೆ ಆಸಕ್ತಿವಹಿಸಿ ಕಾರ್ಯನಿರ್ವಹಿಸುತ್ತಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ ಅವರು ಹಾಗೂ ಸಹ ನಿರ್ದೇಶಕರಾದ ಡಾ. ಎಸ್. ಆರ್. ಹೊನ್ನಲಿಂಗಯ್ಯನವರು ಹೆಚ್ಚಿನ ಮುತುವರ್ಜಿಯಿಂದ ಈ ಯೋಜನೆಯ ಯಶಸ್ಸಿಗಾಗಿ ದುಡಿಯುತ್ತಿದ್ದಾರೆ. ಸಮಿತಿಯ ಸದಸ್ಯರು ಮತ್ತು ಅನುವಾದಕ ಮಿತ್ರರು ಉತ್ತಮ ಸಹಕಾರ ನೀಡಿದ್ದಾರೆ. ಡಾ. ನಟರಾಜ್ ಹುಳಿಯಾರ್, ಡಾ. ಲಕ್ಷ್ಮೀನಾರಾಯಣ ಅರೋರಾ, ಪ್ರೊ. ತಿಪ್ಪೇಸ್ವಾಮಿ, ಶ್ರೀ ಜೆ. ಎನ್. ಶಾಮರಾವ್ ಮುಂತಾದ ಹಲವಾರು ಗೆಳೆಯರು ಈ ಕೃತಿಯ ವಿವಿಧ ಹಂತಗಳಲ್ಲಿ ನೆರವಾಗಿದ್ದಾರೆ. ಇವರೆಲ್ಲರಿಗೂ ನನ್ನ ಪ್ರೀತಿಯ ವಂದನೆಗಳು ಸಲ್ಲುತ್ತವೆ.

28-9-1996

ಕಾಳೇಗೌಡ ನಾಗವಾರ
ಅಧ್ಯಕ್ಷರು
ಡಾ. ರಾಮಮನೋಹರ ಲೋಹಿಯಾ ಸಮಗ್ರ
ಕೃತಿಗಳ ಪ್ರಕಟಣಾ ಸಮಿತಿ

ಪ್ರಕಾಶಕರ ಮಾತು

ಕರ್ನಾಟಕದ ರಾಜಕೀಯ ಜೀವನ ಮತ್ತು ಸಾಹಿತ್ಯ ಚಿಂತನೆಯ ಮೇಲೆ ಅಗಾಧ ಪರಿಣಾಮವನ್ನು ಬೀರಿದ ಡಾ. ರಾಮಮನೋಹರ ಲೋಹಿಯಾ ಅವರು ಆಧುನಿಕ ಭಾರತದ ಮಹಾನ್ ಚಿಂತಕರು. ಭಾರತದ ರಾಜಕೀಯ ಜೀವನದಲ್ಲಿ ಅದಮ್ಯ ಉತ್ಸಾಹದಿಂದ ನೂತನ ಸಮಾಜದ ರಚನೆ ಕುರಿತು ಹೋರಾಡಿದ ಶ್ರೇಷ್ಠ ರಾಜನೀತಿಜ್ಞರು. ದೇಶದ ಪ್ರಜ್ಞಾವಂತರನ್ನು, ಅಂತೆಯೇ ನೊಂದ ಜನತೆಯನ್ನು ಏಕಕಾಲಕ್ಕೆ ತಟ್ಟಿದ ಧೀಮಂತರು ಅವರು.

ರಾಮಮನೋಹರ ಲೋಹಿಯಾ ಅವರ ಚಿಂತನೆಯ ಪ್ರಸ್ತುತತೆಯನ್ನು ಗಮನದಲ್ಲಿಟ್ಟುಕೊಂಡು ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಮೂಲಕ ಅವರ ಸಮಗ್ರ ಕೃತಿಗಳನ್ನು ಕನ್ನಡದಲ್ಲಿ ಪ್ರಕಟಿಸುವ ಬೃಹತ್ ಯೋಜನೆಯೊಂದನ್ನು ಕೈಗೊಂಡಿದೆ.

ಈ ಯೋಜನೆಯ ಅಂಗವಾಗಿ, ಮೊದಲಿಗೆ ಡಾ. ಲೋಹಿಯಾ ಅವರ ಪ್ರಾತಿನಿಧಿಕ ಲೇಖನಗಳ ಸಂಕಲನ ''ಸ್ವಾತಂತ್ರ್ಯದ ಅಂತರ್ಜಲ'' ಕೃತಿಯನ್ನು ಪ್ರಕಟಿಸಲಾಗುತ್ತಿದೆ.

ಈ ಸಂಪುಟವನ್ನು ಸಿದ್ಧಪಡಿಸಿಕೊಟ್ಟಿರುವ ಡಾ. ರಾಮಮನೋಹರ ಲೋಹಿಯಾ ಸಮಗ್ರ ಕೃತಿಗಳ ಪ್ರಕಟಣಾ ಸಮಿತಿಯ ಅಧ್ಯಕ್ಷರಾದ ಪ್ರೊ. ಕಾಳೇಗೌಡ ನಾಗವಾರ ಅವರಿಗೆ, ಸದಸ್ಯರಾದ ಪ್ರೊ. ಸಿದ್ಧಲಿಂಗಯ್ಯ, ಡಾ. ನಟರಾಜ ಹುಳಿಯಾರ್, ಶ್ರೀ ಹಸನ್ ನಯೀಂ ಸುರಕೋಡ, ಪ್ರೊ. ತಿಪ್ಪೇಸ್ವಾಮಿ ಅವರಿಗೆ, ಈ ಗ್ರಂಥವನ್ನು ಸಂಪಾದಿಸಿಕೊಟ್ಟಿರುವ ಡಾ. ಕಾಳೇಗೌಡ ನಾಗವಾರ ಹಾಗೂ ಡಾ. ನಟರಾಜ ಹುಳಿಯಾರ್ ಅವರಿಗೆ ಹಾಗೂ ಸಮಿತಿಯ ಸಂಚಾಲಕರಾದ ಇಲಾಖೆಯ ಸಹ ನಿರ್ದೇಶಕರು ಡಾ. ಎಸ್. ಆರ್. ಹೊನ್ನಲಿಂಗಯ್ಯ ಅವರಿಗೆ ನಾನು ಆಭಾರಿಯಾಗಿದ್ದೇನೆ.

ಇಂದಿನ ಒಟ್ಟಾರೆ ಬದುಕಿಗೆ ಅತ್ಯಂತ ಪ್ರಸ್ತುತರಾಗಿರುವ ಡಾ. ರಾಮಮನೋಹರ ಲೋಹಿಯಾ ಅವರ ಚಿಂತನೆಗಳು ಕನ್ನಡಿಗರನ್ನು ಹೊಸ ಚಿಂತನೆಗೆ ಹಚ್ಚಲಿ ಎಂದು ಆಶಿಸುತ್ತೇನೆ.

28.9.96
ಬೆಂಗಳೂರು

ವೈ. ಕೆ. ಮುದ್ದುಕೃಷ್ಣ
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಭಾಗ : ಒಂದು

ಲೋಹಿಯಾ ಬರಹಗಳು

ಸ್ವಾತಂತ್ರ್ಯದ ಅಂತರ್ಜಾಲ

(ಭಾರತದ ಅಂದಿನ ವೈಸರಾಯ್‌ಗೆ ಲೋಹಿಯಾ ಬರೆದ ಬಹಿರಂಗ ಪತ್ರ *)

ಪ್ರಿಯ ಲಾರ್ಡ್ ಲಿನ್‌ಲಿಥ್‌ಗೊ,

ಈ ಪತ್ರವನ್ನು ನಿಮಗೆ ಏಕೆ ಬರೆಯುತ್ತಿದ್ದೇನೆ ಎಂಬುದು ಖುದ್ದು ನನಗೂ ಗೊತ್ತಿಲ್ಲ. ನಿಮ್ಮ ಆಡಳಿತದಲ್ಲಿ ನನಗೆ ಯಾವ ಭರವಸೆಯೂ ಉಳಿದಿಲ್ಲ. ನೀವು ಪ್ರತಿನಿಧಿಸುತ್ತಿರುವ ಭ್ರಷ್ಟ ಹಾಗೂ ಕೊಲೆಗಡುಕ ಸರ್ಕಾರ ಹಾಗೂ ನಾನು ಪ್ರತಿನಿಧಿಸುತ್ತಿರುವ ಆಂದೋಲನ ಇವೆರಡೂ ನನ್ನ ನಾಡಿನಲ್ಲಿ ಒಟ್ಟೊಟ್ಟಿಗೆ ಇರಲು ಸಾಧ್ಯವಿಲ್ಲ. ಆದರೂ ನೀವು ವಿಶ್ವದ ಸಹಾನುಭೂತಿಯ ಬಗ್ಗೆ, ಕಾಂಗ್ರೆಸ್ ಮತ್ತದರ ಅನ್ಯಾಯದ ಬಗ್ಗೆ ಮಾತಾಡಿದ್ದೀರಿ; ಅಲ್ಲದೇ ಈ ಬಗ್ಗೆ ನ್ಯಾಯವನ್ನು ನಿರೀಕ್ಷಿಸಿದ್ದೀರಿ. ಈ ಅಂಶಗಳು ಗಾಳಿಗೆ ತೂರಿ ಬಿಡುವಂಥವಲ್ಲ. ಬಹುಶಃ ಈ ಕಾರಣದಿಂದಾಗಿಯೇ ನಾನು ಈ ಪತ್ರವನ್ನು ಬರೆಯುತ್ತಿದ್ದೇನೆ.

ಚರಿತ್ರೆ ಈವರೆಗೆ ನ್ಯಾಯದ ಒಂದೇ ಒರೆಗಲ್ಲನ್ನು ತಿಳಿದಿದೆ. ಒಬ್ಬ ವ್ಯಕ್ತಿ ಅಥವಾ ಒಂದು ಸಮಾಜ ದಬ್ಬಾಳಿಕೆಯ ಎದುರು ಮಂಡಿಯೂರಿ ಕುಳಿತು ಬಿಡಬೇಕೇ ಅಥವಾ ಅದನ್ನು ಪ್ರತಿಭಟಿಸಬೇಕೇ? ಬಹುಕಾಲದಿಂದ ವಿಶ್ವದ ಸಹಾನುಭೂತಿಯು ನಿಮ್ಮ ಮತ್ತು ನಿಮ್ಮ ಆಡಳಿತದ ವಿರುದ್ಧವಾಗಿದೆ. ಹಾಗೂ ಅದು ನಮ್ಮ ಪ್ರಯತ್ನಗಳ ಪರವಾಗಿದೆ; ನಿಮ್ಮ ವ್ಯವಸ್ಥೆಯನ್ನು ಪ್ರತಿಭಟಿಸುತ್ತಿರುವ ಜನತೆಯ ಪರವಾಗಿದೆ. ಇದುವರೆಗೆ ನಿಮ್ಮ ಪಾಲಿಗೆ ಮುಚ್ಚಿರುವ ಈ ಪುಸ್ತಕವನ್ನು ನಿಮ್ಮ ಮುಂದಿನ ಪೀಳಿಗೆ ಓದಲಿದೆ. ಬಹುಶಃ ನೀವೂ ನಿಮ್ಮ ನೆನಪು ಮಂಕಾದ ಕಾಲದಲ್ಲಿ ಇದನ್ನು ಓದಬಹುದು.

ಗಾಂಧೀಜಿ ಇನ್ನೂ ಒಂದು ಒರೆಗಲ್ಲನ್ನು ರೂಪಿಸಿದ್ದಾರೆ: ಯಾವುದೇ ಒಬ್ಬ ವ್ಯಕ್ತಿ ಅಥವಾ ಒಂದು ರಾಷ್ಟ್ರ, ಹಿಂಸಾಚಾರವಿಲ್ಲದೆ, ಆಸ್ತಿಪಾಸ್ತಿಗೆ ಹಾನಿ ಉಂಟುಮಾಡದೇ, ದಬ್ಬಾಳಿಕೆಯನ್ನು ಕೊನೆಗೊಳಿಸಲು ಸಾಧ್ಯವಿದೆಯೇ? ಈವರೆಗೆ

---

* ಮಹಾತ್ಮಾ ಗಾಂಧಿ ಅವರು ಈ ಪತ್ರದ ಮೇಲೆ ಕಣ್ಣಾಡಿಸಿದ್ದರು ಎಂದು ಹೇಳಲಾಗಿದ.

ಇದು ಸಾರ್ವತ್ರಿಕವಾಗಿ ಸ್ವೀಕೃತವಾದ ಒರೆಗಲ್ಲಲ್ಲ. ಇಡೀ ವಿಶ್ವದಲ್ಲಿ ನಾವು ಭಾರತೀಯರು ಮಾತ್ರ ಈ ಒರೆಗಲ್ಲಿನ ಪ್ರಾಮಾಣಿಕತೆಯನ್ನು ಸಾಬೀತುಪಡಿಸುವ ಪ್ರಯತ್ನ ಮಾಡಿದ್ದೇವೆ. ಈ ಒರೆಗಲ್ಲನ್ನು ಒಪ್ಪಿಕೊಳ್ಳುವ ದಿಕ್ಕಿನಲ್ಲಿ ನೀವು ನಿಜಕ್ಕೂ ಗಂಭೀರವಾಗಿ ವಿಚಾರ ಮಾಡಿದ್ದೀರಾ? ಯಾಕೆಂದರೆ, ಇದರಲ್ಲಿ ನಿಮ್ಮ ಜವಾಬ್ದಾರಿಯೂ ಅಡಗಿದೆ ಎಂಬುದನ್ನು ನೀವು ತಿಳಿದುಕೊಳ್ಳಬೇಕು.

ಆಗಸ್ಟ್ 9ರ ಮುಂಚೆ ಬಂಧಿಸಲಾದ ಕಾಂಗ್ರೆಸ್ ನಾಯಕರ ಚಟುವಟಿಕೆಗಳನ್ನು ಹಾಗೂ ನಂತರ ಇಡೀ ಜನಸಮುದಾಯ ಮತ್ತು ಪ್ರಸಿದ್ಧ ಕಾಂಗ್ರೆಸಿಗರು ನಡೆಸಿದ ಕಾರ್ಯಚಟುವಟಿಕೆಗಳನ್ನು ಈ ಒರೆಗಲ್ಲಿಗೆ ಹಚ್ಚಲು ನೀವು ಪ್ರಯತ್ನಿಸಿದ್ದೀರಿ. ನಮ್ಮ ನಿರೀಕ್ಷೆಯಂತೆ, ಈ ಮೂರರಲ್ಲೂ ಕೊರತೆಗಳು ನಿಮಗೆ ಕಾಣಿಸಿವೆ. ನಿಮ್ಮ ಆಡಳಿತ ಇಡೀ ವಿಶ್ವದಲ್ಲೇ ಅತ್ಯಂತ ಹಿಂಸೆಯಿಂದ ಕೂಡಿದ್ದಾಗಿದೆ. ಇಂಥ ಸಂದರ್ಭದಲ್ಲಿ ಯಾವುದಾದರೂ ಒಂದು ಪರಿಹಾರ ಕಂಡುಕೊಳ್ಳಲು ನೀವು ಒಬ್ಬ ಆಡಳಿತಗಾರನಾಗಿ ಇರದೆ, ತಟಸ್ಥ ವ್ಯಕ್ತಿಯಾಗಿ ಇರಬೇಕಿತ್ತು.

ಗಾಂಧೀಜಿ ಮತ್ತು ಇತರ ಕಾಂಗ್ರೆಸ್ ನಾಯಕರು ಕಟ್ಟಿದ ಸಂಘಟನೆ ಮತ್ತು ಹಾಕಿಕೊಂಡ ಯೋಜನೆಯಿಂದ ಹಿಂಸಾಚಾರವಾಯಿತು ಎಂದು ನೀವು ಆರೋಪಿಸಿದ್ದೀರಿ. ನಿಮ್ಮ ಈ ಮಾತು ಇನ್ನೂ ವ್ಯಾಪಕವಾಗಿ ಪ್ರಸಾರವಾಗಿಲ್ಲ. ಆದರೆ ಇದು ಕಾಲ ಕಳೆದಂತೆ ತೀವ್ರವಾಗಿ ಹರಡಬಹುದು. ನಿಮ್ಮ ಈ ಮಾತನ್ನು ಒಪ್ಪಿಕೊಂಡರೆ, ಕಾಂಗ್ರೆಸ್ ಸಂಸ್ಥೆಯ ಬಳಿ ಅಹಿಂಸಾತ್ಮಕವಾದ ಯಾವುದೇ ಯೋಜನೆ ಅಥವಾ ಸಂಘಟನೆ ಇರಲಿಲ್ಲ ಎಂದು ಜನರು ಆರೋಪಿಸಿದ್ದರು ಎಂದೇ ಅರ್ಥ ವಾಗುತ್ತದೆ. ಯೋಜನೆ ಮತ್ತು ಸಂಘಟನೆ ಶಬ್ದಗಳಿಗೆ ನೀವು ತಿಳಿದಂಥ ಅರ್ಥವನ್ನೇ ನಾನೂ ತಿಳಿಯುವುದಾದರೆ, ಈ ಆರೋಪ ಸಂಪೂರ್ಣವಾಗಿ ತಪ್ಪು. ಕಾಂಗ್ರೆಸ್ ಇಂಥ ಯಾವುದೇ ಯೋಜನೆಯನ್ನು ಮಾಡಿರಲಿಲ್ಲ. ನಿಮಗೆ ನಿಮ್ಮದೇ ಕೊಳಕು ಭ್ರಾಂತಿಯ ಪ್ರೇತ ಮಾತ್ರ ಕಾಣುತ್ತಿದೆ.

ನಾಲ್ಕೂ ದಿಕ್ಕಿನಲ್ಲಿರುವ ಭೂಮಿ ಮತ್ತು ಬೆಟ್ಟ-ಗುಡ್ಡಗಳ ಅಡಿಯಲ್ಲಿ ಹರಿಯುತ್ತಿರುವ ಸಹಸ್ರಾರು ಅಂತರ್ಜಲಧಾರೆಗಳ ಹಾಗೆ "ಅಹಿಂಸಾತ್ಮಕ ಕ್ರಾಂತಿ"ಯು ನಮ್ಮ ಸುತ್ತಲೂ ಹರಿಯುತ್ತಿದೆ. ಇದಕ್ಕಾಗಿ ಕಾಲುವೆಗಳನ್ನೇನೂ ಹೊಸತಾಗಿ ತೋಡಬೇಕಾಗಿಲ್ಲ.

ಆಗಸ್ಟ್ 9ರಂದು ಪ್ರಾರಂಭವಾದ ಕ್ರಾಂತಿಗೆ ಪೂರ್ವಭಾವಿಯಾಗಿ ಯಾವ ಯೋಜನೆಯನ್ನೂ ಮೇಲಿನಿಂದ ಹೇರಲಾಗಿರಲಿಲ್ಲ. ಅದು ಭೂತಕಾಲದ

ರೋಮಾಂಚಕ ನೆನಪುಗಳ ಜೊತೆಗೆ, ಭಾರತದ ಜೀವಂತ ವಾಸ್ತವದಿಂದಲೂ ಸ್ಫೂರ್ತಿ ಪಡೆದಿತ್ತು. ಸ್ವಾತಂತ್ರ್ಯದ ಕನಸು ಕಾಣುತ್ತಿದ್ದ ಸಮಸ್ತ ಜನಮನದ ಉತ್ಸಾಹ ತುಂಬಿದ ಕ್ರಿಯೆ ಅದಾಗಿತ್ತು. ಉತ್ಸಾಹ ಮತ್ತು ವಾಸ್ತವಗಳೆರಡರ ಸಂವೇದನಾಶೀಲ ಮಿಲನದ ಬಲದಿಂದ ಒಬ್ಬ ವ್ಯಕ್ತಿ ಹಿಂದಿನ ಇಪ್ಪತ್ತಮೂರು ವರ್ಷಗಳಿಂದ ಮಾಡಿಕೊಂಡು ಬಂದಿದ್ದ ಸಂಕಲ್ಪ ಶಕ್ತಿಯ ಪ್ರತಿಫಲನವು ಅಲ್ಲಿ ರೂಪ ತಾಳಿತ್ತು. ನಿಮ್ಮ ದೇಶಕ್ಕಿಂತ ಐದು ಪಟ್ಟು ಹೆಚ್ಚು ಶತಮಾನಗಳಿಂದ ಅಸ್ತಿತ್ವ ಉಳಿಸಿಕೊಂಡಿರುವ ಒಂದು ದೇಶದ ಜನತೆಯ ಮನಃಸ್ಥಿತಿಯನ್ನು ನಾನು ನಿಮಗೆ ಬಿಚ್ಚಿಡಬಯಸುತ್ತೇನೆ. ಉತ್ಸಾಹ ಎಂಬುದು ಯಾರೂ ಕಸಿಯಲಾಗದ ಒಂದು ಮನಃಸ್ಥಿತಿ. ಇದನ್ನು ಯಾವ ಗುಂಡುಗಳೂ ಹೊಸಕಿಹಾಕಲಾರವು; ಯಾವ ಬೇಟೆ ನಾಯಿಗಳೂ ಇದರ ಹೆಜ್ಜೆ ಗುರುತುಗಳನ್ನು ಪತ್ತೆಮಾಡಲಾರವು. ನೀವು ಲಕ್ಷಾಂತರ ಜನರ ಮೇಲೆ ಹಲ್ಲೆ ನಡೆಸಿದಿರಿ; ಬಲಾತ್ಕಾರ ಮಾಡಿದಿರಿ; ಅವರನ್ನು ಸುಟ್ಟು ಹಾಕಿದಿರಿ. ಸಂಘಟನೆಗಳನ್ನು ಧೂಳೀಪಟ ಮಾಡಿದಿರಿ, ಲಕ್ಷಾಂತರ ಮಂದಿಯನ್ನು ಬಂದೀಖಾನೆಗೆ ದೂಡಿದಿರಿ. ಆದರೆ, ಇಷ್ಟೆಲ್ಲ ನಡೆದ ಮೇಲೂ ಹೊಸ ಹೊಸ ಜನ ಮತ್ತು ಸಂಘಟನೆಗಳು ಈ ಉತ್ಸಾಹದ ಗಾಳಿಯತ್ತ ಆಕರ್ಷಿತರಾಗಿ, ತಮ್ಮನ್ನು ತಾವು ಸಮರ್ಪಿಸಿಕೊಳ್ಳಲಿಲ್ಲವೇನು? ಏನೇ ಆಗಲಿ, ಈ ಉತ್ಸಾಹ ನಿಮ್ಮ ಆಳ್ವಿಕೆ ಕೊನೆಗೊಳ್ಳುವವರೆಗೆ ನಿಮ್ಮನ್ನು ಹಿಂಬಾಲಿಸುತ್ತಲೇ ಇರುತ್ತದೆ. ನೀವು ಕಾಂಗ್ರೆಸ್ಸನ್ನು ನಾಶ ಮಾಡುವಲ್ಲಿ ಸಫಲರಾಗಬಹುದು. ಆದರೆ ಅದಕ್ಕೂ ಮುನ್ನ ಹೊಸದಾದ ಮತ್ತು ಇನ್ನೂ ಶಕ್ತಿಶಾಲಿಯಾದ ಕಾಂಗ್ರೆಸ್ಸು ಜನ್ಮ ತಾಳಿರುತ್ತದೆ. ಹೀಗಾಗಿ ನಿಮಗೆ ನೆಮ್ಮದಿ ಸಿಗುವುದು ಖಂಡಿತ ಸಾಧ್ಯವಿಲ್ಲ.

ಒಂದು ವೇಳೆ ಜೇಡಿಮಣ್ಣು ನಮ್ಮ ಸ್ವಾತಂತ್ರ್ಯ ಭಾವನೆಯ ಜೀವಾಳವೆನಿಸಿದರೆ ಅದರೊಡನೆ ಕೆಲಸಮಾಡುವ ಕ್ರಾಂತಿಕಾರಿ ತಂತ್ರಜ್ಞನೇ ಕುಂಬಾರನಾಗುತ್ತಾನೆ. ಸಾಕಷ್ಟು ಆಲೋಚನೆ, ಚಿಂತನೆ ನಡೆಸಿ ಶಸ್ತ್ರಾಸ್ತ್ರಗಳ ಬಳಕೆಯನ್ನು ಕೈಬಿಟ್ಟಿರುವ ಜನತೆಯೇ ಇಂಥ ತಂತ್ರಜ್ಞನ ರೂವಾರಿ. ಕಾರ್ಖಾನೆಗಳನ್ನು ಬಂದ್ ಮಾಡುವ, ಹಳ್ಳಿ-ಪಟ್ಟಣ-ನಗರಗಳ ನಡುವಣ ವ್ಯಾಪಾರ ನಿಂತು ಹೋಗುವ ಹಾಗೆ ಮಾಡುವ ಹಾಗೂ ಸಂಚಾರ ವ್ಯವಸ್ಥೆಯನ್ನು ಮತ್ತು ಆಡಳಿತ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ-ಎಲ್ಲ ಅಪೂರ್ವ ಪ್ರಯತ್ನಗಳ ಹಿಂದೆ ಇದೇ ಮಹಾನ್‌ತಂತ್ರ ಅಡಗಿದೆ. ಇದು ಶಸ್ತ್ರಾಸ್ತ್ರಗಳನ್ನು ಹಿಡಿದು ಕಾದಾಡುವ ನೀತಿಯಲ್ಲ. ಬದಲಾಗಿ ಎದುರಾಳಿಗಳನ್ನು ಅಸಹಾಯಕರನ್ನಾಗಿಸುವ, ನಿರ್ವಿಣ್ಣರನ್ನಾಗಿಸುವ ತಂತ್ರ ಇದಾಗಿದೆ. ಬಲಾತ್ಕಾರದಿಂದ ಇನ್ನೊಂದು ರಾಷ್ಟ್ರದ ಮೇಲೆ ಅಧಿಕಾರ ಸ್ಥಾಪಿಸಲು ಹೊರಡುವ ಜನ ಮಾತ್ರ ಈ ತಂತ್ರವನ್ನು ಎದುರಿಸಲಾಗದೇ, ಶರಣಾಗತರಾಗಿ

ಬಿಡುತ್ತಾರೆ; ಅವರಿಗೆ ಬೇರೆ ದಾರಿಯೇ ಉಳಿದಿರುವುದಿಲ್ಲ. ನಮ್ಮ ಈ ನೀತಿಯ ಉದ್ದೇಶ ಎಲ್ಲೋ ಕೆಲವು ಪ್ರಾಂತಗಳಲ್ಲಿ ಮಾತ್ರ ಅಧಿಕಾರಕ್ಕೆ ಬರುವುದಲ್ಲ. ಬದಲಾಗಿ ಇಡೀ ರಾಷ್ಟ್ರದಿಂದ ಆಕ್ರಮಣಕಾರಿ ಆಡಳಿತವನ್ನು ಬುಡಸಹಿತ ಕಿತ್ತೊಗೆಯುವುದಾಗಿದೆ. ಅಧಿಕಾರವನ್ನು ವಶಪಡಿಸಿಕೊಳ್ಳುವುದಲ್ಲ; ಅಧಿಕಾರವನ್ನು ಧೂಳೀಪಟ ಮಾಡುವ ನೀತಿ ಇದು. ಭಾರತೀಯ ಕ್ರಾಂತಿಯು ಇದೊಂದು ಅಂಶದಿಂದಾಗಿ ಪಡೆದುಕೊಂಡಿರುವ ಮಹತ್ವದ ಮುಂದೆ ರಷ್ಯಾ ಮತ್ತು ಫ್ರಾನ್ಸ್ ಕ್ರಾಂತಿಗಳೂ ಕೂಡ ನಿಸ್ತೇಜವಾಗಿ ಕಾಣುವುದು ಸತ್ಯ. ಯಾಕೆಂದರೆ, ಈ ಕ್ರಾಂತಿಯು ಎಲ್ಲೋ ಕೆಲವು ಸಶಸ್ತ್ರ ಅಲ್ಪಸಂಖ್ಯಾತರಿಂದ ನಡೆಯುತ್ತಿರುವಂಥದಲ್ಲ; ಬದಲಾಗಿ ರಾಷ್ಟ್ರದ ಸಮಸ್ತ ಜನತೆಯು ಮನಃಪೂರ್ವಕವಾಗಿ ನಡೆಸುತ್ತಿರುವ ಕ್ರಾಂತಿ ಇದು. ಇತಿಹಾಸದಲ್ಲಿ ಮೊದಲ ಬಾರಿಗೆ ಶ್ರೀಸಾಮಾನ್ಯ ಬಂಡಾಯ ಎದ್ದಿದ್ದಾನೆ. ಅವನ ಬಳಿ ಯಾವ ಶಸ್ತ್ರಾಸ್ತ್ರಗಳೂ ಇಲ್ಲ. ಏಕೆಂದರೆ ಅವನ ಪಾಲಿಗೆ ಆತ್ಮಶಕ್ತಿಯೇ ಶ್ರೇಷ್ಠ ಅಸ್ತ್ರ.

ಜನಜಂಗುಳಿ ನಡೆಸಿದ ಹಿಂಸಾಚಾರದ ಬಗ್ಗೆ ನೀವು ಪ್ರಸ್ತಾಪಿಸಿದ್ದೀರಿ. ಇದರ ಬಗ್ಗೆ ಕೆಲವು ವಿವರಗಳನ್ನು ನೀವು ಗಮನಿಸಬೇಕು: ದೃಢಸಂಕಲ್ಪ ಹೊಂದಿದ್ದ ಇಪ್ಪತ್ತಕ್ಕೂ ಹೆಚ್ಚು ಮಂದಿ ನಿರಾಯುಧ ಜನ ಆಗಸ್ಟ್ 18ರಂದು ಒಂದು ಗ್ರಾಮೀಣ ಪೊಲೀಸ್ ಠಾಣೆಯ ಮೇಲೆ ಆಕ್ರಮಣ ಮಾಡಿದರು. ಆಗ ಪೊಲೀಸ್ ಇನ್‌ಸ್ಪೆಕ್ಟರ್-ಪೊಲೀಸರು ಮತ್ತು ಅವರ ಮನೆ ಮಂದಿ, ಮಕ್ಕಳು ಠಾಣೆಯನ್ನು ಖಾಲಿ ಮಾಡುವಷ್ಟು ಸಮಯ ನೀಡಬೇಕೆಂದು ವಿನಂತಿಸಿಕೊಂಡರು. ಭಾರತೀಯರು ದಯಾಪರರು; ಧರ್ಮಪಾರಾಯಣರು. ಈ ವಿನಂತಿಯನ್ನು ಮನ್ನಿಸಿದ ಜನಸ್ತೋಮ ಕೆಲಕಾಲ ಹೊರಗೇ ಉಳಿಯಿತು. ಆದರೆ ಅಷ್ಟರಲ್ಲಿ ಜನತೆ ಕಂಡಿದ್ದೇನು? ವಿನಂತಿ ಮಾಡಿಕೊಂಡ ಇನ್‌ಸ್ಪೆಕ್ಟರ್ ಸಹಿತ ಹಲವು ಪೊಲೀಸರು ಠಾಣೆಯ ಮಾಳಿಗೆ ಏರಿ, ಬಂದೂಕು ಹಿಡಿದು ನಿಂತಿದ್ದಾರೆ. ಠಾಣೆಯ ಬಾಗಿಲಿಗೆ ಒಳಗಿನಿಂದ ಚಿಲಕ ಹಾಕಿಕೊಳ್ಳಲಾಗಿತ್ತು. ಆ ಹೊತ್ತಿನಲ್ಲಿ 23 ವರ್ಷದ ಯುವಕನೊಬ್ಬ, ಈ ಮೋಸಕ್ಕಾಗಿ ಬುದ್ಧಿ ಕಲಿಸಬೇಕೆಂದು ನುಸುಳಿಕೊಂಡು ಠಾಣೆಯ ಮಾಳಿಗೆ ಏರಿದ; ಇನ್‌ಸ್ಪೆಕ್ಟರ್ ಮೇಲೆ ಮುಗಿಬಿದ್ದು, ಅವನ ಕೈಯಿಂದ ಬಂದೂಕು ಕಸಿದುಕೊಳ್ಳಲು ಪ್ರಯತ್ನಿಸಿದ : ಸಹಸ್ರಾರು ಜನ ನೋಡುತ್ತಿದ್ದ ಹಾಗೆ, ಆ ಯುವಕನ ದೇಹವನ್ನು ಪೊಲೀಸ್ ಬಂದೂಕುಗಳು ಛಿದ್ರಭಿದ್ರಗೊಳಿಸಿಬಿಟ್ಟವು. ನಂತರ ಗೋಲಿಬಾರ್ ನಡೆಯಿತು. ಹದಿನೆಂಟು ಜನ ಸ್ಥಳದಲ್ಲೇ ಸತ್ತರು ; ಸುಮಾರು ಇನ್ನೂರು ಜನ ಗಾಯಗೊಂಡರು. ಇಷ್ಟಾದರೂ ಜನಸ್ತೋಮ ದಿಕ್ಕಾಪಾಲಾಗಿ ಓಡಲಿಲ್ಲ. ಪೊಲೀಸರ ಮದ್ದು ಗುಂಡು ಖಾಲಿಯಾದವು. ಆಗ ಪೊಲೀಸರು ಗಾಬರಿಯಾದರು. ಅವರನ್ನು ಭಯ ಮುತ್ತಿಕೊಂಡಿತು. ಸಹಸ್ರ ಸಹಸ್ರ ಜನ ಆಗ ಠಾಣೆಯನ್ನು ವಶಪಡಿಸಿಕೊಂಡರು. ಅನಂತರ ಏನಾಯಿತು

ಎಂಬುದನ್ನು ದೇವರೇ ಬಲ್ಲ. ಠಾಣೆಯನ್ನು ಜನ ಸುಟ್ಟು ಹಾಕಿದರು. ಆದರೆ ಒಬ್ಬನೇ ಒಬ್ಬ ಪೊಲೀಸನ ಕೂದಲು ಕೂಡ ಕೊಂಕಲಿಲ್ಲ. ನಾನು ಉದ್ದೇಶ ಪೂರ್ವಕವಾಗಿ ಈ ಪೊಲೀಸ್ ಠಾಣೆಯ ಹೆಸರು ಹೇಳಿಲ್ಲ. ಯಾಕೆಂದರೆ ಇಂಥ ಪ್ರಸಂಗಗಳು ಸಹಸ್ರಾರು ಠಾಣೆಗಳಲ್ಲಿ ನಡೆದಿರಲು ಸಾಧ್ಯವಿದೆ.

ನಿಮ್ಮ ''ಜನ'' ಭಾರತೀಯ ಮಹಿಳೆಯರನ್ನು ಬೆತ್ತಲೆಗೊಳಿಸಿ, ಅವರನ್ನು ಮರಕ್ಕೆ ಕಟ್ಟಿ ಹಾಕಿ, ಹಿಂಸಿಸಿ ಸಾಯಿಸಿದ್ದಾರೆ. ನಿಮ್ಮ ''ಜನ'' ಅವರನ್ನು ಬೆದರಿಸಿ, ಬೀದಿ ಬೀದಿಯಲ್ಲಿ ಅವರ ಮೇಲೆ ಬಲಾತ್ಕಾರ ಮಾಡಿದ್ದಾರೆ ಮತ್ತು ಕೊಂದಿದ್ದಾರೆ. ನೀವು ಫ್ಯಾಸಿಸ್ಟ್ ಸೇಡಿನ ನೀತಿಯನ್ನು ಉದಾಹರಿಸಿದ್ದೀರಿ. ಆದರೆ ನಿಮ್ಮ ''ಜನ'' ತಮಗೆ ಬೇಕಾದ ಹೋರಾಟಗಾರರು ಸಿಕ್ಕದಿದ್ದಾಗ, ಅವರ ಮನೆಯ ಹೆಂಗಸರ ಮೇಲೆ ಬಲಾತ್ಕಾರ ಮಾಡಿ, ಅವರನ್ನು ಕೊಲೆ ಮಾಡಿದ್ದಾರೆ. ಈ ಎಲ್ಲಾ ದುಷ್ಕೃತ್ಯಗಳಿಗೆ ನೀವು ಮತ್ತು ನಿಮ್ಮ ''ಜನ'' ಉತ್ತರಿಸಬೇಕಾದ ಕಾಲ ಶೀಘ್ರದಲ್ಲೇ ಬರಲಿದೆ.

ಒಂದು ಸಾವಿರಕ್ಕಿಂತ ಕಡಿಮೆ ದೇಶಭಕ್ತರನ್ನು ಕೊಂದಿರುವುದಾಗಿ ನೀವು ಹೇಳಿಕೊಂಡಿದ್ದೀರಿ. ಆದರೆ ವಾಸ್ತವವಾಗಿ ಐವತ್ತು ಸಾವಿರಕ್ಕಿಂತ ಹೆಚ್ಚು ಜನ ದೇಶಭಕ್ತರು ಜೀವ ಕಳೆದುಕೊಂಡಿದ್ದಾರೆ; ಅದಕ್ಕಿಂತ ಎಷ್ಟೋಪಟ್ಟು ಹೆಚ್ಚು ಮಂದಿ ಗಾಯಗೊಂಡಿದ್ದಾರೆ, ದೌರ್ಜನ್ಯಕ್ಕೀಡಾಗಿದ್ದಾರೆ. ಕೇವಲ ಎರಡು ವಾರಗಳ ಕಾಲ ದೇಶವನ್ನು ಸುತ್ತಲು ನನಗೆ ಅವಕಾಶ ಕೊಡಿ; ನಿಮ್ಮ ಪೊಲೀಸರು ನನ್ನನ್ನು ತಡೆಯದಿರಲಿ. ಆಗ, ನಿಮ್ಮ ದೌರ್ಜನ್ಯಕ್ಕೆ ಬಲಿಯಾದ ಹತ್ತು ಸಾವಿರಕ್ಕೂ ಹೆಚ್ಚು ದೇಶಭಕ್ತರ ಹೆಸರು, ವಿಳಾಸಗಳನ್ನು ನಾನು ಪಟ್ಟಿಮಾಡಿ ಕೊಡುತ್ತೇನೆ. ಇದಕ್ಕೂ ಹೆಚ್ಚಿನ ಜನ ಬಲಿಯಾಗಿರುವುದನ್ನು ಕುರಿತ ಅಂಕಿ ಅಂಶಗಳು ಬಹುಶಃ ನನ್ನ ರಾಷ್ಟ್ರವು ಸ್ವಾತಂತ್ರ್ಯ ಪಡೆದ ಮೇಲೆಯೇ ಬಯಲಾಗಬಹುದೇನೋ ?

ಕಳೆದ ಆರು ತಿಂಗಳಲ್ಲಿ ದೇಶದ ನಾನಾ ಭಾಗಗಳಲ್ಲಿ ಜಲಿಯನ್‌ವಾಲಾಬಾಗ್ ರೀತಿಯ ಹತ್ಯಾಕಾಂಡಗಳು ಎಷ್ಟೋ ನಡೆದಿವೆ. ಆದರೆ ಒಂದು ಬದಲಾವಣೆ ಕಾಣುತ್ತದೆ. ಅದೆಂದರೆ, ನಿಮ್ಮದು ಕೊಲೆಪಾತಕ ಆಡಳಿತವೆಂದು ಸಾಬೀತಾದ ಮೇಲೆ, ನಿಮ್ಮನ್ನು ಎದುರಿಸಲು ಭಾರತದ ಜನತೆ ಇನ್ನೂ ಹೆಚ್ಚಿನ ಆತ್ಮಸ್ಥೈರ್ಯದಿಂದ ದೃಢಸಂಕಲ್ಪ ಮಾಡಿದ್ದಾರೆ. ನಿಮ್ಮ ಆಡಳಿತದ ಗೋಲಿಬಾರ್ ಎದುರಿಸಲು ನಿಶ್ಶಸ್ತ್ರರಾದ ಭಾರತೀಯರು ತಮ್ಮ ದೈವೀಸಾಹಸವನ್ನು ತೋರುತ್ತ ಮುಂದಡಿ ಇಟ್ಟಿದ್ದಾರೆ.

ನಿಮ್ಮನ್ನು ಹೊಡೆದೋಡಿಸುವಲ್ಲಿ ನಾವು ಬಹುಮಟ್ಟಿಗೆ ಸಫಲರಾಗಿಬಿಟ್ಟಿದ್ದೆವು. ರಾಷ್ಟ್ರದ ಶೇಕಡಾ ಹದಿನೈದರಷ್ಟು ಭಾಗದಲ್ಲಿ ನಿಮ್ಮ ಆಡಳಿತವನ್ನು ಕಿತ್ತೊಗೆದು ಬಿಟ್ಟಿದ್ದೆವು. ಆದರೆ ನಮ್ಮ ಸ್ವತಂತ್ರ ಪ್ರಾಂತಗಳನ್ನು ನಿಮ್ಮ ಸೇನೆ ಎರಡನೇ ಬಾರಿಗೆ ಜಯಿಸಿತು. ನಮ್ಮ ಜನರೂ ಹಿಂಸಾಚಾರಕ್ಕೆ ಇಳಿದಿದ್ದರೆ, ನೀವು ಹೀಗೆ ಎರಡನೇ ಬಾರಿಗೆ ಜಯಗಳಿಸಲು ಸಾಧ್ಯವಿತ್ತೇನು? ಹೀಗೇನಾದರೂ ಆಗಿದ್ದರೆ, ನಿಮ್ಮ ಸೇನೆ ಕೂಡ ಭಾರತೀಯ ಮತ್ತು ಇಂಗ್ಲಿಷ್ ಎಂಬ ಎರಡು ಬಣಗಳಾಗಿ ವಿಭಜನೆ ಗೊಂಡಿರುತ್ತಿತ್ತು.

ಶ್ರೀಮಾನ್ ಲಿನ್‌ಲಿಥ್‌ಗೊ, ನಾನು ಖಚಿತವಾಗಿ ಹೇಳುತ್ತೇನೆ : ಒಂದು ವೇಳೆ ನಮ್ಮ ಜನತೆ ಶಸ್ತ್ರ ಹಿಡಿದು ನಿಂತಿದ್ದರೆ, ಹಿಂಸೆಯನ್ನು ಆಯ್ಕೆ ಮಾಡಿಕೊಂಡಿದ್ದರೆ ಈ ಹೊತ್ತು ನಿಮಗೆ ಮರಣ ದಂಡನೆಯಾಗಿರುತ್ತಿತ್ತು; ಸ್ವತಂತ್ರಜನತೆ ಹಾಗೂ ಆ ಜನತೆಯ ಸರ್ಕಾರ ನಿಮಗೆ ನೀಡಿದ್ದ ಈ ಮರಣದಂಡನೆಯ ಶಿಕ್ಷೆಯನ್ನು ನಿಲ್ಲಿಸಲು ಗಾಂಧೀಜಿ ಹಾಗೂ ಭಾರತದ ಕರುಣಾಳು ಹೃದಯಿಗಳು ಪ್ರಯತ್ನಿಸುತ್ತಾ ಇರುತ್ತಿದ್ದರು.

ಆದರೆ ಇನ್ನೂ ನಾನು ಅಸಂತುಷ್ಟನಾಗಿಲ್ಲ: ಏಕೆಂದರೆ, ಇನ್ನೊಬ್ಬರಿಗಾಗಿ ದುಃಖ ಅನುಭವಿಸುವುದು ಹಾಗೂ ಆ ಮೂಲಕ ಅವರನ್ನು ಸರಿದಾರಿಗೆ ತರುವುದು ಭಾರತದ ಪರಂಪರೆಯೇ ಆಗಿದೆ. ನಿರಾಯುಧರಾದ ಸಾಮಾನ್ಯ ಜನತೆಯ ಚರಿತ್ರೆಯು ಆಗಸ್ಟ್ ಒಂಬತ್ತರ ಭಾರತೀಯ ಕ್ರಾಂತಿಯಿಂದಲೇ ಪ್ರಾರಂಭವಾಗುತ್ತದೆ.

ಐವತ್ತು ಸಾವಿರ ಭಾರತೀಯರು ಸಾವಿಗೆ ಹಾಗೂ ತೀವ್ರ ಗಾಯಗಳಿಗೆ ತುತ್ತಾದರು. ಆದರೆ, ನಿಮ್ಮ ಸೇನೆಯ ದಬ್ಬಾಳಿಕೆಗೆ ಪ್ರತಿಕ್ರಿಯೆಯಾಗಿ ಭಾರತೀಯರಿಂದ ಹೆಚ್ಚು ಹಿಂಸಾಚಾರ ನಡೆಯಲಿಲ್ಲ. ಆದರೂ, ನಿಮ್ಮ ಸೇನೆಗೆ ಸೇರಿದ ಸುಮಾರು ಒಂದು ನೂರು ಜನ ಪ್ರಾಣ ಕಳೆದುಕೊಳ್ಳುವ ಹಾಗಾಯಿತಲ್ಲ ಎಂಬ ಬಗ್ಗೆ ನನಗೆ ತೀವ್ರ ದುಃಖವಾಗಿದೆ. ಈ ಪ್ರಪಂಚದಲ್ಲಿ ದುಃಖ ತರುವ ಘಟನೆಗಳು ನಡೆಯುವುದು ಸಹಜ. ಆದರೆ ಇದಕ್ಕೂ ನಾನು ನಿಮ್ಮನ್ನೇ, ನಿಮ್ಮ ಆಡಳಿತವನ್ನೇ ಜವಾಬ್ದಾರರನ್ನಾಗಿಸಲು ಬಯಸುತ್ತೇನೆ. ಯಾಕೆಂದರೆ ನಮ್ಮ ಜನರಿಗೆ ಸೂಚನೆ ಹಾಗೂ ನಿರ್ದೇಶನ ನೀಡಬಹುದಾಗಿದ್ದ ನಮ್ಮ ಸಂಘಟನೆಯನ್ನೇ ನೀವು ನಾಶ ಮಾಡಿದ್ದೀರಿ. ನಮ್ಮ ಜನತೆಯಲ್ಲಿ ಕೇವಲ ಸ್ವಯಂ ನಿಯಂತ್ರಣ ಮಾತ್ರ ಉಳಿದಿತ್ತು. ಲಕ್ಷಾಂತರ-ಕೋಟ್ಯಾಂತರ ಸಂಖ್ಯೆಯಲ್ಲಿದ್ದ ಭಾರತೀಯ ಜನತೆ ಇಂಥ ಗೊಂದಲದಲ್ಲೂ, ಇಂಥ ಪ್ರಚೋದನೆಯಲ್ಲೂ ಇಷ್ಟು ಸಂಯಮ ತೋರಿದ್ದೇ ಒಂದು ಅದ್ಭುತ. ಇದು

ಬಹುಶಃ ನಿಮಗೆ ಅರ್ಥವಾಗಲಾರದು. ನಾವು ಸಭ್ಯರು. ಒಬ್ಬ ಮಹಾನ್ ಗುರುವಿನಿಂದ ಕಳೆದ ಇಪ್ಪತ್ತಮೂರು ವರ್ಷಗಳ ಕಾಲ ದೀಕ್ಷೆ ಪಡೆದವರು. ಆದರೆ ನೀವು ಇಡೀ ದೇಶದ ಮೇಲೆ ಅಂಕುಶ ಹಿಡಿದು ಕಾವಲು ನಿಂತವರು. ನಿಃಶಸ್ತ್ರರಾದ ಲಕ್ಷಾಂತರ ಜನತೆಯನ್ನು ದಮನ ಮಾಡಲು ಶಸ್ತ್ರಧಾರಿ ಸೇನೆ ಬಂದಾಗ ವಿಷಾದಕರವೆನಿಸುವ ಚಿಕ್ಕ ಪುಟ್ಟ ಘಟನೆಗಳು ಜರುಗುವುದು ಸಹಜವಲ್ಲವೆಂದು ಹೇಳಲು ಯಾರಿಗೆ ತಾನೆ ಸಾಧ್ಯ ?

ಇನ್ನು ಚಿರಪರಿಚಿತ ಕಾಂಗ್ರೆಸಿಗರ ಕಾರ್ಯಚಟುವಟಿಕೆಗಳ ಬಗ್ಗೆ ಹೇಳುತ್ತೇನೆ. ನಿಮ್ಮ ಕಾರ್ಯದರ್ಶಿಯು ಆಂದೋಲನದ ಕಾರ್ಯಕರ್ತರ ಅಹಿಂಸಾತ್ಮಕ ಚಟುವಟಿಕೆಗಳನ್ನು ವಿವರವಾಗಿ ವರದಿ ಮಾಡಿದ ಗೃಹಖಾತೆಯ ರಹಸ್ಯ ಕಡತ (ಸಮೀಕ್ಷೆ-2)ವನ್ನು ನಾನು ಸಾಕ್ಷ್ಯವಾಗಿ ನೀಡುತ್ತೇನೆ. ನೀವು ಅದನ್ನು ಪರಿಶೀಲಿಸಿ. ಕಾಂಗ್ರೆಸಿಗರ ಚಲನವಲನಗಳ ಮೇಲೆ ಕಣ್ಣಿಡಲು ನೀವು ಇಂಡಿಯನ್ ರಾಯಲ್ ನೇವಿಯ ಬ್ರಿಟಿಷ್ ಅಧಿಕಾರಿಗಳಿಗೆ ಆದೇಶ ನೀಡಿದಿರಿ. ನೀವು ಹೀಗೆ ಮಾಡಿರದಿದ್ದರೆ ಸೂಕ್ತವಾಗಿರುತ್ತಿತ್ತು. ಯಾಕೆಂದರೆ ಸೌಜನ್ಯಶೀಲರಾದ ಆ ಅಧಿಕಾರಿಗಳು ಕೂಡ ಈ ಬಗ್ಗೆ ವ್ಯಥೆಪಟ್ಟದ್ದನ್ನು ನಾನು ಬಲ್ಲೆ.

ನಿಮ್ಮ ಆಡಳಿತವು ಆದಷ್ಟು ಬೇಗನೇ ಎಲ್ಲವನ್ನೂ ವಿನಾಶಮಾಡುವುದರ ಬಗ್ಗೆ ನನಗೆ ಚೆನ್ನಾಗಿ ತಿಳಿದಿದೆ. ಆಗಸ್ಟ್ ಒಂಬತ್ತರ ನಂತರದ ಕೆಲವೇ ದಿನಗಳಲ್ಲಿ ಕಾಂಗ್ರೆಸ್ಸನ್ನು ಅಪ್ರಸ್ತುತಗೊಳಿಸಲು ನೀವು ಪ್ರಯತ್ನಿಸಿದಿರಿ. ಆದರೂ ಕಾಂಗ್ರೆಸ್ಸು ನಿಮ್ಮ ತಂತ್ರವನ್ನು ವಿಫಲಗೊಳಿಸಿತು. ಯಾಕೆ ಗೊತ್ತೇ? ಇಂದು ಪ್ರತಿಯೊಬ್ಬ ನಿಜವಾದ ಭಾರತೀಯನೂ ಒಬ್ಬ ಕಾಂಗ್ರೆಸಿಗನೇ ಆಗಿದ್ದಾನೆ.

ನಾನು ಆತ್ಮವಿಶ್ವಾಸದಿಂದ ಹೇಳುತ್ತೇನೆ: ಬೇರೆ ರಾಷ್ಟ್ರಗಳಲ್ಲಿನ ಕ್ರಾಂತಿಕಾರಿಗಳಿಗಿಂತ ಕಾಂಗ್ರೆಸಿಗರು ಭಿನ್ನವಾಗಿದ್ದಾರೆ. ಅವರು ಹಿಂಸಾಚಾರದಿಂದ ಬಹು ದೂರ. ಅವರು ನಿರ್ದೋಷಿಗಳನ್ನು ಹಿಂಸೆಗೆ ಗುರಿಪಡಿಸುವುದು ಹಾಗಿರಲಿ, ನಿಮ್ಮಂಥ ಕೊಲೆಪಾತಕಿಗಳನ್ನು ಕೂಡ ಹಿಂಸೆಗೊಳಪಡಿಸಲು ಮುಂದಾಗಿಲ್ಲ. ನಿಮ್ಮ ರಾಷ್ಟ್ರದ ಕ್ರಾಂತಿಕಾರಿಗಳು ಈ ಅಪೂರ್ವ ವಸ್ತುಸ್ಥಿತಿಯ ಬಗ್ಗೆ ಏನು ಹೇಳುತ್ತಾರೆ? ತಮ್ಮ ಜೀವಕ್ಕೆ ಸಂಚಕಾರ ಶತಃಸಿದ್ಧ ಎಂದು ಮನವರಿಕೆಯಾದ ಮೇಲೂ ಹಿಂಸೆಯನ್ನು ಒಪ್ಪದ, ಅದನ್ನು ಆತ್ಮರಕ್ಷಣೆಗಾಗಿ ಕೂಡ ಬಳಸದ ಕ್ರಾಂತಿಕಾರಿಗಳ ಬಗ್ಗೆ ಯಾರಿಗಾದರೂ ಗೊತ್ತೇನು? ಈಗ ಭಾರತದಲ್ಲಿ ನಡೆಯುತ್ತಿರುವುದು ಇಂಥ ಅತ್ಯಂತ ಅಪರೂಪವಾದ ವಿದ್ಯಮಾನ. ಇದಕ್ಕೆ ಕೆಲವು ಅಪವಾದಗಳೂ ಉಂಟು.

ಈ ಅಪವಾದಗಳ ಸಂಖ್ಯೆ ಹೆಚ್ಚಲೂಬಹುದು. ಏಕೆಂದರೆ, ಒಂದು ರೀತಿಯಲ್ಲಿ ಭಾರತ ಮತ್ತು ಬ್ರಿಟನ್ ನಡುವೆ ಹೋರಾಟದ ನಿರ್ಧಾರ ಆಗಿಹೋಗಿದೆ. ಅಂತಿಮ ಹೋರಾಟ ನಡೆಸುವ ರೀತಿ ಯಾವುದು ಎಂಬುದು ಮಾತ್ರ ಈಗ ನಿರ್ಧಾರವಾಗಬೇಕಿದೆ, ಅಷ್ಟೇ.

ನೀವು ಸಾಕ್ಷ್ಯ ಮತ್ತು ನ್ಯಾಯತೀರ್ಮಾನದ ಬಗ್ಗೆ ಮಾತಾಡಿದ್ದೀರಿ. ನೀವು ಈ ದಾರಿ ಹಿಡಿದಿದ್ದರೂ ಪರಿಣಾಮವೇನೂ ಬೇರೆ ಆಗುತ್ತಿರಲಿಲ್ಲ. ನಿಃಶಸ್ತ್ರರಾದ ಲಕ್ಷಾಂತರ ಜನತೆಯನ್ನು ಸೇನೆಯ ಬಲದಿಂದ ಕೊಲೆಗೈದ ನೀವು ಬಾಗಿಲು ಮುಚ್ಚಿ ನ್ಯಾಯಾಲಯಗಳ ಒಳಗೆ ವಿಚಾರಣೆ ಎಂಬ ಏಕಪಕ್ಷೀಯ ತಂತ್ರದಲ್ಲಿ ಸಿಲುಕಿಸಿ, ಈ ಜನರನ್ನು ಕೊಲೆಗೈಯುತ್ತಿದ್ದಿರಿ, ಅಷ್ಟೇ. ನಿಮಗೆ ಧೈರ್ಯ ಇದ್ದಲ್ಲಿ, ನನ್ನ ಸವಾಲನ್ನು ಅಂಗೀಕರಿಸಿ: ಸಾರ್ವಜನಿಕ ವಿಚಾರಣೆಯನ್ನು ನಮ್ಮ ಜನರ ಬಗೆಗೆ ನಡೆಸಿ. ತೀರ್ಪನ್ನು ನೀವೇ ಕೊಡಿ ಅಥವಾ ನಿಮ್ಮ ಜನರೇ ಕೊಡಲಿ. ನಮಗೆಲ್ಲ ಬದುಕು ಪ್ರಿಯವಾದುದು. ನಮಗೆ ಭವಿಷ್ಯದ ಬಗ್ಗೆ ತೀವ್ರವಾದ ಕಾಳಜಿಯೂ ಇದೆ. ಆದ್ದರಿಂದಲೇ ಇಂಥ ಮುಕ್ತ ವಿಚಾರಣೆಯ ಸಂದರ್ಭದಲ್ಲಿ ಎದುರಾಗುವ ಸಾಕ್ಷ್ಯಗಳು ಕುತೂಹಲಕರವಾಗಿದ್ದು, ಹೊಸ ಮಾಹಿತಿಗಳನ್ನು ಖಂಡಿತ ಹೊರಹಾಕು ವಂತವುಗಳಾಗಿರುತ್ತವೆ.

ನಮಗೆ ಭವಿಷ್ಯದ ಬಗ್ಗೆ ತೀವ್ರವಾದ ಕಾಳಜಿ ಇದೆ ಎಂದು ನಾನು ಹೇಳಿದೆ. ಜಯ ನಿಮ್ಮದಾದಲ್ಲಿ ಹತಾಶೆ, ಮತ್ತು ಗಾಢಾಂಧಕಾರ ಎಲ್ಲೆಡೆ ಆವರಿಸಿರುತ್ತದೆ. ಸ್ವತಂತ್ರ ಭಾರತ ಈ ಹೋರಾಟವನ್ನು ಪ್ರಜಾಸತ್ತಾತ್ಮಕವಾದ ಮುಕ್ತಾಯದೆಡೆಗೆ ತೆಗೆದುಕೊಂಡು ಹೋಗಬಲ್ಲದೆಂಬುದು ಈ ಹೊತ್ತಿನಲ್ಲಿ ಕಾಣುವ ಏಕ ಮಾತ್ರ ಆಶಾಜ್ಯೋತಿ.

ನಿಮ್ಮ ಜನ ಎಲ್ಲರೂ ಕೂಡಿ ಹೊರಲಾಗದಂಥ ಹೊಣೆಗಾರಿಕೆಯನ್ನು ನೀವು ಹೊತ್ತುಕೊಂಡಿದ್ದೀರಿ. ಪಾಂಟಿಯಸ್ ಪೈಲೆಟ್ ಎಂಬ ಶ್ರೀಮಂತ ಎಲ್ಲರನ್ನೂ ಅಪಹಾಸ್ಯ ಮಾಡುತ್ತಿದ್ದ; ಆದರೆ ಅವನು ನಾಸ್ತಿಕ. ನೀವಾದರೋ ಆಸ್ತಿಕರೆಂಬಂತೆ ಮಾತನಾಡುತ್ತೀರಿ. ಚರಿತ್ರೆಯು ನಿಮ್ಮ ಹೆಸರನ್ನು ಮರೆಯಲು ಪ್ರಯತ್ನ ನಡೆಸುತ್ತಲೇ ಇರುತ್ತದೆ. ಈ ಪ್ರಯತ್ನದಲ್ಲಿ ಚರಿತ್ರೆಗೆ ಯಶಸ್ಸು ಸಿಗುವವರೆಗೆ ನೋವು ಮತ್ತು ನಿಸ್ಸಹಾಯಕತೆ ಉಳಿದಿರುತ್ತವೆ.

ನಿಮ್ಮ ಆತ್ಮಸಾಕ್ಷಿಗೆ ಹೆದರಿ-ನಿಮ್ಮಲ್ಲೂ ಅದು ಇದ್ದಿರಲೇಬೇಕು-ಅಥವಾ ಜನತೆಯ ಕೋಪೋದ್ರೇಕಕ್ಕೆ ಭಯಭೀತರಾಗಿ ನೀವು ಗಾಂಧೀಜಿಯವರನ್ನು ಬಿಡುಗಡೆ

ಮಾಡಬಹುದು. ನೀವು ಬಿಡುಗಡೆ ಮಾಡಿ ಇಲ್ಲವೇ ಬಿಡಿ, ನೀವು ಸಂಪೂರ್ಣ ಶರಣಾಗತರಾಗುವವರೆಗೆ ನಮ್ಮ ಸ್ವಾತಂತ್ರ್ಯದ ಹುಮ್ಮಸ್ಸು ಮಾತ್ರ ನಿಮ್ಮ ಬೆನ್ನು ಬಿಡುವುದಿಲ್ಲ, ನೆನಪಿರಲಿ.

ದಬ್ಬಾಳಿಕೆಯ ಸಂದರ್ಭದಲ್ಲಿ ಲಭ್ಯವಿರುವ ಈ ಸಂಪರ್ಕ ಸಾಧನದ ಮೂಲಕ ಈ ಪತ್ರವನ್ನು ನಿಮಗೆ ಕಳಿಸುತ್ತಿದ್ದೇನೆ.

ನಿಮ್ಮ ಹಿತೈಷಿ,

ರಾಮಮನೋಹರ ಲೋಹಿಯಾ

●

(ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಲೋಹಿಯಾ ಅವರು 1942ರ ಆಗಸ್ಟ್ 8 ರಿಂದ1944ರ ಮೇ 20ರವರೆಗೆ ಭೂಗತರಾಗಿದ್ದರು. ಸ್ವಾತಂತ್ರ್ಯ ಚಳುವಳಿಗಾರರ ಮೇಲೆ ಬ್ರಿಟಿಷ್ ಸರ್ಕಾರ ನಡೆಸಿದ ಹಿಂಸೆಯನ್ನು ಪ್ರತಿಭಟಿಸಿ ಲೋಹಿಯಾ 1942ರ ಕೊನೆಯ ಭಾಗದಲ್ಲಿ ಬರೆದ ಚಾರಿತ್ರಿಕ ಪತ್ರ ಇದು.)

ಹಿಂದಿಯಿಂದ ಕನ್ನಡಕ್ಕೆ : ಮಂಗ್ಳೂರು ವಿಜಯ

ಮಹಾತ್ಮಾ ಗಾಂಧಿ

ನಮ್ಮ ಪೀಳಿಗೆಯ ಅದೆಷ್ಟೋ ಜನಗಳಂತೆ ನನ್ನ ಎಳೆತನದಲ್ಲಿ - ಅಂದರೆ ನನ್ನ ಶಾಲಾ ದಿನಗಳಲ್ಲೇ–ಗಾಂಧೀಜಿಯವರನ್ನು ಕಾಣುವ ಅವಕಾಶ ನನಗೆ ದೊರೆಯಿತು. 1919 ಅಥವಾ 1920 ರಲ್ಲಿ ಗಾಂಧೀಜಿಯವರ ಮೊದಲ ಅಸಹಕಾರ ಚಳುವಳಿಯ ಕರೆ ಕೇಳಿ, ನನ್ನಂಥ 9–10 ವರ್ಷ ವಯಸ್ಸಿನ ವಿದ್ಯಾರ್ಥಿಗಳು ಶಾಲೆಗಳಿಗೆ ಚಕ್ಕರ್ ಹೊಡೆದು ಹೊರಬೀದಿಗಿಳಿದಿದ್ದರು. ನನ್ನ ತಂದೆ ನನ್ನನ್ನು ಗಾಂಧೀಜಿಯವರ ಬಳಿಗೊಯ್ದಿದ್ದರು. ಆ ಘಟನೆಯ ಬಗ್ಗೆ ನನಗೆ ನೆನಪಿರುವ ಪ್ರಕಾರ, ನಾನು ಅವರ ಪಾದ ಮುಟ್ಟಿ ನಮಸ್ಕರಿಸಿದ್ದೆ, ಅವರು ನನ್ನ ಮೈದಡವಿದ್ದರು. ಆ ಘಟನೆ ಕುರಿತು ನನ್ನಲ್ಲಿ ಅಭಿಮಾನವೇ ಮೂಡಿತ್ತು. ಒಮ್ಮೆ ಗಾಂಧೀಜಿಯವರು, ನಾನವರನ್ನು ಮೊದಲ ಸಲ ಯಾವಾಗ ಕಂಡಿದ್ದೆನೆಂದು ಕೇಳಿದಾಗ, ಅವರಿಗೆ ಈ ಘಟನೆಯ ಬಗ್ಗೆ ವಿವರಿಸಿದೆ. ಆಗ ಅವರೆಂದರು : "ಹಾಂ ಸರಿ, ನಿಮಗೆ ಅದೆಲ್ಲ ನೆನಪಿರಬಹುದು. ಆದರೆ ನನಗಿಲ್ಲ." ನಮ್ಮ ಪೀಳಿಗೆಯ ಅಸಂಖ್ಯ ಜನರಿಗೆ ಇಂಥದ್ದೇ ಅನುಭವ ಆಗಿರಬಹುದು; ಆ ಕರುಣಾಮಯಿ ಹಾಗೂ ಶಕ್ತಿಶಾಲಿ ಹಸ್ತಸ್ಪರ್ಶದಿಂದ ಸಾಕಷ್ಟು ಪ್ರಭಾವಿತರೂ ಆಗಿರಬಹುದು ಎಂಬ ವಿಶ್ವಾಸ ನನ್ನದು. ಆನಂತರದ ವರ್ಷಗಳಲ್ಲಿ ನಮ್ಮಲ್ಲಿ ಕೆಲವರು ಆ ಸ್ಪರ್ಶವನ್ನೊಂದು ವಿಶಾಲ ದೃಷ್ಟಿಯಿಂದ ನೋಡಿ ಅರ್ಥೈಸುವ ಸೌಭಾಗ್ಯಕ್ಕೂ ಪಾತ್ರರಾದೆವು. ನಾನಿಲ್ಲಿ ಒಂದು ಸಂಗತಿಯನ್ನು ಒತ್ತಿ ಹೇಳಬೇಕೆಂದೆನಿಸುತ್ತದೆ : ನಾನು ನಮ್ಮ ಕುಟುಂಬದ ಹೊರಗಿನವರ ಪಾದಸ್ಪರ್ಶವನ್ನು ಎಂದೂ ಮಾಡಿದವನೇ ಅಲ್ಲ, ಅದೂ ಅಂಥ ಎಳೆಯ ವಯಸ್ಸಿನಲ್ಲಿ.

ಒಮ್ಮೆ, ನಾನು ಯೂರೋಪ್‌ನಲ್ಲಿ ವಿದ್ಯಾರ್ಥಿಯಾಗಿದ್ದ ಕಾಲದಲ್ಲಿ ಬಿಡುವಿನ ದಿನಗಳನ್ನು ಕಳೆಯಲು ಪ್ಯಾರಿಸ್‌ನಲ್ಲಿದ್ದಾಗ ಇಂಥದ್ದೇ ಒಂದು ಅನುಭವದಿಂದ ವಂಚಿತನಾಗಿದ್ದೆ. ಒಂದು ದಿನ ಬೆಳಗಿನ ಐದೂವರೆಗೆ ಗಾಂಧೀಜಿಯವರು ಪ್ಯಾರಿಸ್ ತಲುಪಲಿದ್ದಾರೆಂದು ನನಗೆ ತಿಳಿಯಿತು. ಯೂರೋಪಿನ ಮಾತು ಬಿಡಿ, ಭಾರತದಲ್ಲೂ ಬೆಳಗಿನ ಐದೂವರೆ ಗಂಟೆಯೆಂದರೆ ಬೆಚ್ಚಗೆ ಮಲಗುವ ಸಮಯವೇ, ವಿಶೇಷವಾಗಿ

ಆಗಿನ ನನ್ನಂಥ ವಯಸ್ಸಿನವರಿಗೆ. ನಾನೇನೋ ಸ್ಟೇಶನ್‌ಗೆ ಹೋಗಬೇಕೆಂದೇ ನಿಶ್ಚಯ ಮಾಡಿದೆ. ಆ ನಿರ್ಧಾರದಂತೆಯೇ ಎದ್ದದ್ದೂ ಆಯ್ತು. ಎದ್ದು ನೋಡಿದರೆ ಗಡಿಯಾರದಲ್ಲಿ ಆಗಲೇ ಐದೂವರೆ ಆಗಿತ್ತು. ಅಂದರೆ ನಾನು ಸ್ಟೇಶನ್‌ನಲ್ಲಿರಬೇಕಾದ ಆ ಗಳಿಗೆಯಲ್ಲಿ ನಾನು ಉಳಿದಿದ್ದ ಹೋಟೆಲಿನಲ್ಲೇ ಉಳಿದಿದ್ದೆ. ಆ ಕಡೆಯಿಂದ ಈ ಕಡೆಗೆ ನೋವಿನಿಂದ ಓಡಾಡುತ್ತಿದ್ದೆ.

ನಾನು ನನ್ನ ಅಧ್ಯಯನ ಮುಗಿಸಿ, ಯೂರೋಪ್‌ನಿಂದ ಮರಳಿ ಬಂದ ಬಳಿಕ ಗಾಂಧೀಜಿಯವರನ್ನು ಮೊದಲ ಬಾರಿ ಹತ್ತಿರದಿಂದ ಕಾಣುವ ಹಾಗೂ ಗಾಂಧೀಜಿಯವರು ಮಾಲವೀಯ ಅವರೊಡನೆ ನಡೆಸಿದ ವಿಚಾರ ವಿನಿಮಯವನ್ನು ಕೇಳುವ ಅವಕಾಶ ಒದಗಿತು. ನನಗೆ ಆ ಮೊದಲೇ ಪರಿಚಿತರಾಗಿದ್ದ ಪ್ರಭಾವತಿಯವರ (ಅವರ ಪತಿಯ ಪರಿಚಯವಾಗುವುದಕ್ಕಿಂತ ಮೊದಲೇ ಅವರ ಪರಿಚಯ ನನಗಾಗಿತ್ತು.) ನೆರವಿನಿಂದ ಅಳುಕುತ್ತಲೇ ಒಳ ಸೇರಿದೆ. ಆಗ ನಾನೆಂದೆ : "ನಾನು ನಿಮ್ಮ ಹಿಂದೆ ಹಿಂದೆಯೇ ಬರುತ್ತೇನೆ ; ನೀವು ನನ್ನ ಪಾಲಿಗೆ ಗುರಾಣಿ. ನೀವು ಮುಂದೆ ಕೂತಿರಬೇಕು. ನಾನು ನಿಮ್ಮ ಹಿಂದೆ ಕೂತಿರುತ್ತೇನೆ. ಅವರಿಬ್ಬರ ಮಾತುಗಳನ್ನು ನಾವು ಕೇಳೋಣ". "ನೀನೇಕೆ ಮುಂದೆ ಬರುವುದಿಲ್ಲ ?" ಎಂದು ಅವರು ಕೇಳಿದರು. ನಾನೆಂದೆ : "ಇಲ್ಲ, ಕಡೇ ಪಕ್ಷ ಇವತ್ತಂತೂ ಆಗೋದಿಲ್ಲ." ನಾನು ಅವರ ಚರ್ಚೆಯನ್ನಾಲಿಸಿದೆ. ಕಾಂಗ್ರೆಸ್‌ನ ಸ್ಥಿತಿ ಕೆಟ್ಟಿತ್ತು. ಬ್ರಿಟಿಷರೇ ಭಾರತವನ್ನು ದಕ್ಕಿಸಿಕೊಳ್ಳುತ್ತಾರೆಂಬುದು ಅನೇಕರ ಅಭಿಪ್ರಾಯವಾಗಿತ್ತು. ಇಡೀ ರಾಷ್ಟ್ರವೇ ಪೆಚ್ಚಾಗಿದ್ದ ಹಿನ್ನೆಲೆಯಲ್ಲಿ ಎಲ್ಲರ ಬಾಯಲ್ಲೂ ರಾಜಿಯ ಮಾತುಗಳೇ ಕೇಳಿ ಬರುತ್ತಲಿದ್ದವು. ಸಾಕಷ್ಟು ದೀರ್ಘ ಚರ್ಚೆಯ ನಂತರ, ಭಾರತದ ವಿಚಾರದ ಬಗ್ಗೆ ಪ್ರತಿಪಾದಿಸಲು ಕಾಂಗ್ರೆಸ್‌ನ ಪ್ರತಿನಿಧಿ ಮಂಡಲಿಯೊಂದು ಇಂಗ್ಲೆಂಡಿಗೆ ತೆರಳಿದರೆ ಒಳಿತೆಂದು ಮಾಲವೀಯ ಅವರು ಸೂಚಿಸಿದರು. ಗಾಂಧೀಜಿಯವರು ಗಮನವಿತ್ತು ಆಲಿಸುತ್ತಲಿದ್ದರು. ಮಾಲವೀಯ ಅವರ ಮಾತು ಪೂರ್ತಿಯಾಗಿ ಮುಗಿದ ಬಳಿಕ ಗಾಂಧೀಜಿ ನಿಧಾನವಾಗಿ, ಆದರೆ ಮನಸ್ಸಿಗೆ ಮುಟ್ಟುವಂತೆ ದೃಢವಾದ ಸ್ವರದಲ್ಲಿ ನುಡಿದರು : "ನೀವೆಂಥಾ ಮಾತು ಹೇಳ್ತೀರಿ ? ಭಾರತದ ಬಗ್ಗೆ ನಿಲುವು ಮಂಡಿಸಲು ಕಾಂಗ್ರೆಸ್‌ನ ಪ್ರತಿನಿಧಿ ಮಂಡಲವು ಇಂಗ್ಲೆಂಡ್‌ಗೆ ಹೋಗುವ ವಿಚಾರ ಮಾಡುವುದು ಕೂಡ ಅಸಂಭವವೆನಿಸುವಂಥ ಒಂದು ಹಂತಕ್ಕೆ ನಾವು ಬಂದು ತಲುಪಿಲ್ಲವೆ ?". ಅದೇ ಅವರ ವಿಚಾರ ವಿನಿಮಯದ ಕೊನೆಯ ಮಾತಾಗಿತ್ತು !

ಕೆಲವೇ ದಿನಗಳ ನಂತರದ ಮಾತು. ನಾನು ಗಾಂಧೀಜಿಯವರ ಪಕ್ಕದ ಕೋಣೆಯಲ್ಲಿ ಮಲಗಿದ್ದೆ. ತಡವಾಗಿ ಏಳುವುದೇ ಆಗಿನ ನನ್ನ ರೂಢಿ. ಶ್ರೀ ಜಮನಾಲಾಲ್ ಬಜಾಜ್ ಅವರು ನನ್ನನ್ನು ಹಾಸಿಗೆಯಿಂದೆಳೆದು ಎಚ್ಚರಿಸಿದರು.

ಏಕೆಂದರೆ ಗಾಂಧೀಜಿಯವರ ಬಳಿ ಹೆಚ್ಚು ಸಮಯವಿರಲಿಲ್ಲ. ಒಂದು ಗಂಟೆಯ ನಂತರ ನಾನೂ ಕಲ್ಕತ್ತಾಗೆ ಹೊರಡಬೇಕಾಗಿತ್ತು. ಅದೇ ಮಂಪರು ಸ್ಥಿತಿಯಲ್ಲಿ ನನ್ನನ್ನೊಯ್ದು ಅವರೆದುರು ನಿಲ್ಲಿಸಲಾಯಿತು. ಪ್ರಾಯಶಃ ಅವರು ಕೇಳಿದ ಮೊದಲ ಅಥವಾ ಎರಡನೆಯ ಪ್ರಶ್ನೆಯೆಂದರೆ : ''ಏನು ಹೊಟ್ಟೆ, ಬಟ್ಟೆಗೆ ಅನುಕೂಲವಾಗಿರುವ ಮನೆತನದವರೇ ನೀವು ?''. ಒಂದು ವೇಳೆ ಬೇರೆಯವರಾರಾದರೂ ಮೊದಲ ಭೇಟಿಯಲ್ಲೇ ಇಂಥ ಪ್ರಶ್ನೆ ಕೇಳಿದ್ದರೆ, ಆರಂಭದಲ್ಲಿಯೇ ಇಂಥ ವಿಲಕ್ಷಣ ಪ್ರಶ್ನೆಯೇ? ಎಂದು ನನಗೆ ತುಂಬ ವಿಚಿತ್ರವೆನಿಸಬಹುದಿತ್ತು.ಆದರೆ ಅದು ಗಾಂಧೀಜಿಯವರು ಕೇಳಿದ ಪ್ರಶ್ನೆಯಾಗಿತ್ತು. ಆ ಕ್ಷಣದಲ್ಲಿ ನನಗೆ ಕಿಂಚಿತ್ತೂ ಅಸಮಾಧಾನ ಆಗಿರಲಿಲ್ಲ ಎಂಬುದು ನನ್ನ ನೆನಪಿನಲ್ಲಿದೆ. ಆ ವಿಷಯವಾಗಿ ಅವರು ಚಿಂತಿಸಬೇಕಾದ ಅಗತ್ಯವಿಲ್ಲ ಎಂದು ಜಮನಾಲಾಲರು ಗಾಂಧೀಜಿಯವರಿಗೆ ಸೂಚಿಸಿದರು. ಅವರ ಎದೆಭಾರ ಹಗುರಗೊಂಡಂತೆನಿಸಿತು. ''ಹಾಗಾದ್ರೆ ಪರವಾಯಿಲ್ಲ. ನಾವು ಮತ್ತೆ ಭೇಟಿಯಾಗೋಣ'' ಎಂದು ಅವರು ತಿಳಿಸಿದರು. ಆ ಮಾತು ಅಲ್ಲಿಗೇ ಮುಗಿದಂತಾಯಿತು. ಏಕೆಂದರೆ ಅವರಂಥ ವ್ಯಕ್ತಿಗಳಿಗೆ ಪ್ರತಿಯೊಂದನ್ನೂ ವಿಸ್ತರಿಸಿ ಹೇಳುವ ಅಗತ್ಯವಿತ್ತು. ರಾಜಕೀಯದಲ್ಲಿ ನನಗೆ ಆಸಕ್ತಿಯಿರುವುದನ್ನು ಕುರಿತು ಪ್ರಾಯಶಃ ಯಾರೋ ಅವರಿಗೆ ಮೊದಲೇ ಹೇಳಿದ್ದರೆಂದು ಕಾಣುತ್ತದೆ. ನನ್ನ ಸ್ಥಿತಿ ಹೇಗಿದೆಯೆಂದು ತಿಳಿದುಕೊಳ್ಳುವುದಷ್ಟೇ ಅವರ ಉದ್ದೇಶವಾಗಿರಲೂಬಹುದು. ಆ ವಿಷಯವಾಗಿ ಅವರು ಚಿಂತಿಸುವ ಅಗತ್ಯವಿಲ್ಲ ಎಂದು ಹೇಳಿದಾಗ, ನಿಜವಾಗಿಯೂ ಅವರ ಎದೆ ಭಾರ ಇಳಿದ ಹಾಗೆಯೇ ಆಗಿತ್ತು.

ಆ ನಂತರ ನಮ್ಮ ಪಕ್ಷದ (ಆಗ ಕಾಂಗ್ರೆಸ್ ಸಮಾಜವಾದಿ ಪಕ್ಷ) ವಾರ ಪತ್ರಿಕೆಯ ಸಂಪಾದಕನ ಜವಾಬ್ದಾರಿಯನ್ನು ನಾನು ಹೊರಬೇಕಾಯಿತು. ನಮ್ಮ ಪತ್ರಿಕೆಗೆ ಒಂದು ಲೇಖನ ಬರೆಯುವಂತೆ ಗಾಂಧೀಜಿಯವರನ್ನು ನಾನು ಕೇಳಿ, ಅವರಿಂದ ಒಪ್ಪಿಗೆ ಪಡೆದಿದ್ದೆ. ಇಂಥ ವಿಷಯಗಳಲ್ಲಿ ಅವರು ತುಂಬಾ ಉದಾರಿಯಾಗಿದ್ದರು. ಬಹುಶಃ ನಾನು ಯುವಕನಾಗಿದ್ದುದರಿಂದ ಅವರು ನನ್ನನ್ನು ಪ್ರೋತ್ಸಾಹಿಸುವ ಹುಮ್ಮಸ್ಸಿನಲ್ಲಿದ್ದರು. ಸಾಮಾನ್ಯವಾಗಿ ಸೂಕ್ಷ್ಮ ಮನಸ್ಸಿನ ಹಿರಿಯ ಚೇತನಗಳು ಹೊಸ ಯುವಕರ ಬಗೆಗೆ ಆಕರ್ಷಿತರಾಗಿರುತ್ತಾರೆ. ಕೆಲವು ಹಿರಿಯ ವ್ಯಕ್ತಿಗಳು ವ್ಯವಹಾರದಲ್ಲಿ ಕೊಂಚ ತಾತ್ಸಾರ ತೋರಿದರೆ ಅಥವಾ ಬಿರುಸು ಮಾತುಗಳನ್ನಾಡಿದರೆ ಅವರ ಮನಸ್ಸಿನಲ್ಲೊಂದು ಆಕರ್ಷಣೆಯುಂಟೆಂದೇ ಭಾವಿಸಬೇಕೆಂದು ನನಗನಿಸುತ್ತದೆ. ಆದರೆ ಇಪ್ಪತ್ತೈದು ಅಥವಾ ಅದಕ್ಕೂ ಹೆಚ್ಚಿನ ವಯಸ್ಸಿನ ಯುವಕರು ಹಟಮಾರಿತನದಿಂದ ಅವಹೇಳನ ಮಾಡಿದರೆ, ಹಿರಿಯರಿಗೆ ಅದೆಲ್ಲ ಹಿಡಿಸುವುದಿಲ್ಲ. 1932–33ರ ಚಳವಳಿಯ ಅಸಫಲತೆ, ಗಾಂಧೀಜಿಯವರ ಹೋರಾಟ,

ಅಖಿಲ ಭಾರತೀಯ ಗ್ರಾಮೋದ್ಯೋಗ ಸಂಘ ಇತ್ಯಾದಿ ವಿಷಯಗಳ ಬಗೆಗೆ ನಾನೊಂದು ಲೇಖನ ಬರೆದೆ. ಇಂಥ ಚಳವಳಿಗಳು ಅಸಫಲಗೊಂಡವೆಂದು ಹೇಳುವುದೇಕೆಂಬುದೇ ನನಗೆ ಆಶ್ಚರ್ಯದ ಸಂಗತಿ. ಅಂದ ಹಾಗೆ ಎಲ್ಲೋ ಸ್ವಲ್ಪ ಕಾಲ ಅವು ಅನಿವಾರ್ಯವಾಗಿ ಯಶಸ್ಸು ಕಾಣದೆ ಹೋಗಿರಬಹುದು. ಇಂಥ ಸಂದರ್ಭಗಳಲ್ಲಿ ಗಾಂಧೀಜಿ ಮುಖ್ಯವಾಗಿ ಯಾವುದಾದರೊಂದು ರಚನಾತ್ಮಕ ಕಾರ್ಯದ ವಿಷಯವಾಗಿ ಮಾತನಾಡುತ್ತಿದ್ದರು ; ಆ ಕಾರ್ಯದತ್ತ ಜನರ ಮನಸ್ಸು ಹರಿಯುವಂತೆ ಮಾಡುತ್ತಿದ್ದರು. ಏಕೆಂದರೆ ಯಾವ ಪಕ್ಷವೂ ಕೇವಲ ನಿರಂತರ ಸಂಘರ್ಷದ ಮಾತುಗಳ ಮೇಲೇ ಬದುಕಲಾರದು. ಯಾರೊಬ್ಬರೂ ಸತತ ಸಂಘರ್ಷದ ದಾರಿಯ ಮೇಲೆ ಜನತೆಯನ್ನು ಮುನ್ನಡೆಸಲಾರರು. ನಡುವೆ ಅರಾಜಕತ್ವದ ಕಾಲ ಬಂದೇ ಬರುತ್ತದೆ. ನಾನು ಕಂಡುಕೊಂಡ ಪ್ರಕಾರ, ಯಾವ ರಾಜಕೀಯ ಧೋರಣೆ ಅಥವಾ ವ್ಯವಸ್ಥೆಯಲ್ಲಿಯೂ ಇಂಥ ಅರಾಜಕತೆಯ ಕಾಲದಲ್ಲಿ ಕೃತಕ ಸಂಘರ್ಷದ ಹೊರತಾಗಿ ಬೇರೆ ದಾರಿಯೆಂಬುದಿರುವುದಿಲ್ಲ. ಆದರೆ ಗಾಂಧೀಜಿಯವರ ಪಾಲಿಗೆ ಮಾತ್ರ ರಚನಾತ್ಮಕ ಕಾರ್ಯಕ್ರಮದ ದಾರಿಯಿತ್ತು.

ಅದಕ್ಕಿಂತಲೂ ಹಿಂದೆ, ಅಖಿಲ ಭಾರತೀಯ ಚರಖಾ ಸಂಘವಿತ್ತು. 1934-35ರಲ್ಲಿ ಅಖಿಲ ಭಾರತ ಗ್ರಾಮೋದ್ಯೋಗ ಸಂಘ ಹಾಗೂ ನಂತರ ತರಬೇತಿ ಸಂಘ ಹುಟ್ಟಿಕೊಂಡಿತು. ಇದು ರಚನಾತ್ಮಕ ಕಾರ್ಯಕ್ರಮಗಳ ಒಂದು ನಿರಂತರ ಮುನ್ನಡೆಯಾಗಿತ್ತು. ಆದರೆ ಇನ್ನಿತರ ಅನೇಕರಂತೆ, ಇದೊಂದು ಹಳೆಯ ರೂಢಿಯೆಂದೇ ನಾನೂ ಭಾವಿಸಿಕೊಂಡಿದ್ದೆ. ಭಾರತದ ಸ್ವಾತಂತ್ರ್ಯ ಇಂಥ ಸಣ್ಣ ಪುಟ್ಟ ಕಾರ್ಯ ಕ್ರಮಗಳಿಂದ ಕೈಗೆಟುಕುವಂತಹದಲ್ಲ. ಯಾಕೆಂದರೆ ಇವುಗಳಿಂದ ಭಾರತೀಯರಲ್ಲಿ ಕೊಂಚ ಶಕ್ತಿಯನ್ನು ತುಂಬಬಹುದಾದರೂ ಬ್ರಿಟಿಷ್ ಸಾಮ್ರಾಜ್ಯದೊಡನೆ ಸೆಣಸಾಡುವ ಸಾಮರ್ಥ್ಯ ಅವುಗಳಿಗಿಲ್ಲವೆಂದೇ ನನಗೆನಿಸುತ್ತಿತ್ತು. ಭಾರತದಿಂದ ಬ್ರಿಟಿಷರನ್ನು ಹೊಡೆದೋಡಿಸುವುದೆಂದರೆ ಹಿಮಾಲಯದಷ್ಟು ದೊಡ್ಡ ಕಾರ್ಯ ; ಕೈಯಿಂದ ಅಕ್ಕಿ ಕುಟ್ಟುವ ಅಥವಾ ಬೀಸುವ ಕಾರ್ಯಕ್ರಮಗಳಿಂದ ಈ ದೊಡ್ಡ ಧ್ಯೇಯ ಸಾಧನೆಯಾಗ ಲಾರದೆಂದೇ ನಾನು ಸ್ಪಷ್ಟವಾಗಿ ಬರೆದೆ. ನಾನು ದೊಡ್ಡ ದೊಡ್ಡ ಶಬ್ದಗಳ ಪ್ರಯೋಗವನ್ನೂ ಮಾಡಿದ್ದೆ. ಆ ಮುದ್ರಿತ ಲೇಖನದ ಪ್ರತಿಯನ್ನು ಗಾಂಧೀಜಿಯವರಿಗೆ ಕಳಿಸಿ, ಆ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸಬೇಕೆಂದು ಕೇಳಿಕೊಂಡಿದ್ದೆ. ನನ್ನ ಬಗ್ಗೆ ಅವರು ನಿಜಕ್ಕೂ ಬೇಸರಗೊಂಡದ್ದು ಅವರು ನನಗೆ ಬರೆದ ಕಾಗದದ ಒಕ್ಕಣೆಯಿಂದ ಸ್ಪಷ್ಟವಿತ್ತು: "ನೀವು ನನ್ನ ಅಭಿಪ್ರಾಯ ಕೇಳುವ ಅಗತ್ಯವಿರಲಿಲ್ಲ. ಏಕೆಂದರೆ, ನಿಮ್ಮಲ್ಲಿ ವಿರೋಧಿಗಳ ದೃಷ್ಟಿಕೋನವನ್ನು ಸಹಿಸಿಕೊಳ್ಳುವ ಧೈರ್ಯವೇ ಇಲ್ಲ". ಇದರಿಂದ ನಾನು ಕೋಪಿಸಿಕೊಂಡೆ ಎನ್ನಲಾಗದಿದ್ದರೂ ಸಿಡಿಮಿಡಿಗೊಂಡದ್ದು ನಿಜ.

ನಾನು ಮತ್ತೆ ಅವರಿಗೆ ಬರೆದೆ: "ಪ್ರಾಯಶಃ ನಾನು ಶಬ್ದಗಳ ಸರಿಯಾದ ಪ್ರಯೋಗ ಮಾಡಿಲ್ಲದಿರಬಹುದು, ಆದರೆ ನೀವು ನನ್ನ ಆಶಯವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕಿತ್ತು. ನನ್ನ ಆಶಯವನ್ನು ತಿಳಿದುಕೊಂಡು ನೀವು ಉತ್ತರ ಕೊಡಬಹುದಿತ್ತು". ಅವರಿಂದ ಕೂಡಲೇ ಮಾರೋಲೆ ಬಂತು. ಮೊದಲಿನದು ಎಷ್ಟು ಖಾರವಾಗಿತ್ತೋ ಅಷ್ಟೇ ಪ್ರೀತಿಯಿಂದ ಕೂಡಿತ್ತು ಹಾಗೂ ಮಧುರವಾಗಿತ್ತು ಅವರ ಆ ಎರಡನೆಯ ಪತ್ರದ ಒಕ್ಕಣೆ.

ನಾನಂತೂ ಅಲೆಮಾರಿ. ಕಾಗದ ಪತ್ರಗಳನ್ನು ಜೋಪಾನವಾಗಿಟ್ಟುಕೊಳ್ಳುವ ಅಭ್ಯಾಸವಿಲ್ಲದವನು. ಆದರೆ ಈ ಪತ್ರವನ್ನು ನಾನು ಜೀವನದುದ್ದಕ್ಕೂ ಕಾಯ್ದಿಡಬೇಕಾಗಿತ್ತು. ತಮ್ಮ ವಿರೋಧಿಗಳ ಅಭಿಪ್ರಾಯಗಳನ್ನು ಗಮನಿಸದಿರುವುದೊಂದು ಭಯಾನಕ ರೋಗವೇ ಸರಿ. ನನ್ನನ್ನು ಮಹಾತ್ಮಾ ಗಾಂಧೀಜಿಯ ವಿರೋಧಿಯ ಸ್ಥಾನದಲ್ಲಿರಿಸಿಕೊಳ್ಳಲು ನಾನೆಂದೂ ಬಯಸಲಾರೆ. ಒಂದು ವೇಳೆ, ವಿರೋಧಿಗಳ ದೃಷ್ಟಿಕೋನ ನಮಗೆ ಸಮ್ಮತವಿಲ್ಲದಿದ್ದರೂ ಅದನ್ನು ಗಮನವಿಟ್ಟು ಆಲಿಸಿ, ಅರ್ಥ ಮಾಡಿಕೊಳ್ಳಬೇಕು; ಈ ಗುಣವನ್ನು ನಾವು ಇಂದಿನ ಈ ಆಧುನಿಕ ಯುಗದಲ್ಲಿ ಕಳೆದುಕೊಳ್ಳುತ್ತಿದ್ದೇವೆ. ನಾವು ನಮ್ಮ ಆಲೋಚನೆಗಳಲ್ಲೇ ಮುಳುಗಿ ಹೋಗಿರುವುದರಿಂದ, ನಮ್ಮ ಆಲೋಚನೆಯಲ್ಲಿರಬಹುದಾದ ಕೊರತೆ ಅಥವಾ ದೋಷಗಳನ್ನು ನಾವು ಒಪ್ಪುವುದಿಲ್ಲ. ನಾವು ನಮ್ಮದನ್ನಷ್ಟೇ ಗಮನಿಸುತ್ತೇವೆ. ಅನೇಕ ಬಾರಿ ಇತರರೊಡನೆ ಮಾತುಕತೆ ನಡೆದಾಗ, ನಾನು ನಿಜಕ್ಕೂ ಇತರರೊಡನೆ ಮಾತಾಡುತ್ತಿರುವೆನೇ ಎಂದು ಅನುಮಾನಪಡುತ್ತ ಸೋಜಿಗಗೊಳ್ಳುತ್ತೇನೆ. ಅವರು ಕೂಡ ತಮ್ಮ ಮಾತುಗಳ ಬೀಸಿನಲ್ಲಿ, ನಾನೂ ಏನಾದರೂ ಹೇಳಬಲ್ಲೆನೆಂಬ ಸಂಗತಿಯನ್ನೇ ಮರೆತುಬಿಟ್ಟಂತಿರುತ್ತಾರೆ. ವಿರೋಧಿಗಳ ವಿಚಾರಗಳು ಭಿನ್ನವಾಗಿರುವುದು ಸಹಜ. ಅವುಗಳನ್ನು ಕೇಳುತ್ತ ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಬಗೆಗಿದ್ದ ನನ್ನ ವಿಚಾರಗಳನ್ನು ಆಮೂಲಾಗ್ರವಾಗಿ ಬದಲಾಯಿಸಬೇಕೇ ಎಂಬ ಅನುಮಾನವೂ ಮೂಡಿತು. ಚರಖಾ ಎಂದರೆ ಸೂರ್ಯ, ಈ ಸೂರ್ಯನ ಸುತ್ತಲೂ ಸಮಸ್ತ ರಚನಾತ್ಮಕ ಕಾರ್ಯಕ್ರಮಗಳೂ ಪರಿಭ್ರಮಣ ಮಾಡುತ್ತಿರುತ್ತವೆ ಎಂಬ ಗಾಂಧೀಜಿಯವರ ವಿಚಾರವನ್ನು ಪ್ರಾಯಶಃ ನಾನು ಇಂದಿಗೂ ಒಪ್ಪಲಾರೆ. ನಾನು ಅವರ ಸೂರ್ಯನ ಸ್ಥಾನದಲ್ಲಿ ಗುದ್ದಲಿಯನ್ನಿಡಬಯಸುತ್ತೇನೆ. ಏಕೆಂದರೆ, ನಮ್ಮ ನಡುವಣ ಲಕ್ಷೋಪಲಕ್ಷ ಕೋಟ್ಯಾಂತರ ಜನರು ಈ ಗುದ್ದಲಿಯಿಂದಲೇ ಕೆರೆ-ಕಟ್ಟೆ-ಕಾಲುವೆಗಳಲ್ಲಿ ಬಾವಿ-ರಸ್ತೆಗಳಲ್ಲಿ ಹೊಲ ಗದ್ದೆ, ತೋಟ ತುಡಿಕೆಗಳಲ್ಲಿ ಬೆವರು ಹರಿಸಿ ಪ್ರತಿನಿತ್ಯ ದುಡಿಯುತ್ತಿರುತ್ತಾರೆ.

ಅನಂತರ ನಾನೊಮ್ಮೆ ಗಾಂಧೀಜಿಯವರ ಬಳಿ ಹೋದಾಗ ಬ್ರಿಟಿಷರು ರಚಿಸಿದ ಹೊಸ ಬಗೆಯ ದಮನಕಾರಿ ಕಾನೂನುಗಳನ್ನು ವಿರೋಧ ಮಾಡುವ ಚಳವಳಿಯ ಮಾತು ಹೊರಬಂತು. ಆಗ ಗಾಂಧೀಜಿಯವರೇ ತಮ್ಮ ಮೊದಲಿನ ಮಾತನ್ನು ನೆನಪಿಸಿಕೊಟ್ಟರು. "ನೀವೀಗ ನನ್ನ ಪತ್ರಿಕೆಯಲ್ಲಿ ಲೇಖನ ಬರೆಯುವ ಬಗ್ಗೆ ಯೋಚನೆ ಮಾಡುವಿರಾ ?" ಎಂದು ನಾನು ಕೇಳಿದೆ. ಅವರೆಂದರು: ನೋಡಿ, ನಾನು 'ಹರಿಜನ' ಪತ್ರಿಕೆಗೆ ನಿಮ್ಮದೊಂದು ಲೇಖನವನ್ನು ಆಯ್ದುಕೊಂಡಿದ್ದೇನೆ." ಭಾರತದ ಕೃಷಿ-ಸಮಸ್ಯೆಗಳಿಗೆ ಸಂಬಂಧಿಸಿದ ಲೇಖನ ಅದಾಗಿತ್ತು. ಬಳಿಕ ಅವರು ತಮ್ಮದೇ ಆದ ರೀತಿಯಲ್ಲಿ ಜೋರಾಗಿ ನಕ್ಕು ಹೇಳಿದರು : "ರಾವಣನಿಂದಲೂ ಏನಾದರೂ ಕೊಂಚ ಕಲಿಯುವುದು ಸಾಧ್ಯ". ತಾವು ರಾಮನೆಂದೂ, ನಾನು ರಾವಣನೆಂದೂ ಅವರ ಮಾತಿನ ಸ್ಪಷ್ಟ ಆಶಯವಾಗಿತ್ತು. ಅವರ ಮಾತಿನಿಂದ ನನಗೇನೂ ನಿರಾಸೆಯೆನಿಸಲಿಲ್ಲ. ಏಕೆಂದರೆ, ರಾವಣನೂ ಸಹ ಸಾಕಷ್ಟು ದೊಡ್ಡ ವಿದ್ವಾಂಸನೇ ಆಗಿದ್ದ !

ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯ ವಿಶೇಷ ಅಧಿವೇಶನವೊಂದರ ಬಗ್ಗೆ ನಾನಿಲ್ಲಿ ಪ್ರಸ್ತಾಪಿಸಬಯಸುತ್ತೇನೆ. ಅದು ಎರಡನೆಯ ಮಹಾಯುದ್ಧ ಆರಂಭವಾಗುವ ಕೆಲ ಕಾಲದ ಹಿಂದೆಯಷ್ಟೆ ಸೇರಿದ ಅಧಿವೇಶನ. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರು ನಡೆಸಿದ ಅಸಹಕಾರ ಆಂದೋಲನದ ಬಗ್ಗೆ ಆ ಅಧಿವೇಶನದಲ್ಲಿ ಚರ್ಚೆ ನಡೆಯಿತು. ದಕ್ಷಿಣ ಆಫ್ರಿಕಾದಲ್ಲಿ ನೆಲೆಸಿದ ಭಾರತೀಯರು ಅಲ್ಲಿಯ ನಿರುಪಯೋಗಿ ಕಾನೂನುಗಳ ವಿರುದ್ಧ ಸದಾ ಸಂಘರ್ಷ ಮಾಡುತ್ತಲೇ ಬಂದಿದ್ದಾರೆ. ಗಾಂಧೀಜಿಯವರು ಸ್ವತಃ ಈ ಗೊತ್ತುವಳಿಯ ಕರಡು ತಯಾರಿಸಿದ್ದರು. ಅದನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮುಂದೆ ಇಡಲಾಯಿತು. ವಿಶ್ವಶಾಂತಿಯ ಬಗೆಗಿದ್ದ ನನ್ನ ವಿಚಾರಗಳನ್ನು ಆ ಮೊದಲೇ ನಾನು ನಿವೇದಿಸಿಕೊಂಡಿದ್ದೆ. ಕಾಂಗ್ರೆಸ್ ಅಧ್ಯಕ್ಷರು ಮೊದಲೇ ಪ್ಯಾರಿಸ್‌ನ ವಿಶ್ವಕಾಂಗ್ರೆಸ್‌ಗೆ ತಂತಿ ಕಳಿಸುವ ತಪ್ಪು ಮಾಡಿಬಿಟ್ಟಿದ್ದರು. ಆ ಬಗ್ಗೆ ನಾನು ಅಧ್ಯಕ್ಷರಿಂದ ಸ್ಪಷ್ಟೀಕರಣ ಕೇಳಿದ್ದೆ. ಅದರ ಹೊರತಾಗಿ, ಆ ಗೊತ್ತುವಳಿಯ ಮಂಡನೆಯಾದಾಗ, ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರನ್ನು "ಬ್ರಿಟಿಷ್ ಭಾರತೀಯರು" ಎಂದು ಕರೆಯುತ್ತಿದ್ದುದೂ, ದಕ್ಷಿಣ ಆಫ್ರಿಕಾದಲ್ಲಿ ನಾಗರಿಕ ಅಸಹಕಾರಕ್ಕಾಗಿ ಆಹ್ವಾನ ನೀಡಲಾಗಿದ್ದುದೂ ನನ್ನ ಗಮನಕ್ಕೆ ಬಂತು. ನಾನು ಈ ಎರಡು ಅಂಶಗಳ ಬಗೆಗೂ ನನ್ನ ತಿದ್ದುಪಡಿಗಳನ್ನು ಮಂಡಿಸಿದೆ: ಮೊದಲನೆಯದಾಗಿ, ಭಾರತೀಯರು ಭಾರತದಲ್ಲೇ ಇರಲಿ ಅಥವಾ ದಕ್ಷಿಣ ಆಫ್ರಿಕಾದಲ್ಲಿರಲಿ, ಅವರನ್ನು ಬ್ರಿಟಿಷ್ ಭಾರತೀಯರು ಎಂದು ಕರೆಯದೆ ಕೇವಲ ಭಾರತೀಯರು ಎಂದೇ ಸಂಬೋಧಿಸಬೇಕು. ಎರಡನೆಯದಾಗಿ, ದಕ್ಷಿಣ ಆಫ್ರಿಕಾದಲ್ಲಿ

ನಡೆಸುವ ನಾಗರಿಕ ಅಸಹಕಾರ ಚಳವಳಿಯನ್ನು ಕೇವಲ ಭಾರತೀಯರಿಗೆ ಮಾತ್ರವೇ ಸೀಮಿತಗೊಳಿಸದೆ, ಅದು ಭಾರತೀಯ, ನೀಗ್ರೋ, ಅರಬ್ ಅಥವಾ ಬಿಳಿಯರಲ್ಲೂ ಕಡು ಬಡವರಾಗಿರುವ ಎಲ್ಲರ ಸಂಯುಕ್ತ ಆಂದೋಳನವಾಗುವಂತೆ ನೋಡಿ ಕೊಳ್ಳಬೇಕು. ಸುದೈವದಿಂದ ಕಾಂಗ್ರೆಸ್‌ನ ಪ್ರಮುಖ ನಾಯಕರಿಗೆ ನನ್ನ ವಿಚಾರಗಳು ಹಿಡಿಸಿದ್ದರಿಂದ, ಅವರು ಅವುಗಳ ಸಮರ್ಥನೆ ಮಾಡಿದರು. ನನ್ನ ತಿದ್ದುಪಡಿಗಳು ಸ್ವೀಕೃತಗೊಂಡವು; ಅದೊಂದು ಅಭಿಮಾನದ ಸಂಗತಿಯೇ ಹೌದು. ನಾನು ನನ್ನ ಕರ್ತವ್ಯ ಪೂರೈಸಿದ ಸಮಾಧಾನದೊಡನೆ ಹೊರಗಡೆ ತಿರುಗಾಡಲು ಹೋದೆ. ಆಗ ನಾನಿನ್ನೂ ಎಳೆಯ ವಯಸ್ಸಿನ ಯುವಕ. ಅಧಿವೇಶನದಿಂದ ಹೊರಗೆ ಹೋದಾಗ ನನ್ನನ್ನು ಹುಡುಕಲು ಆರಂಭಿಸಿದ ಸಂಗತಿ ತಿಳಿಯಿತು. ಅದು 1938ನೇ ಇಸವಿ. ಮಹಾದೇವ ದೇಸಾಯಿಯವರು ಗಾಂಧೀಜಿಯವರ ಸಂದೇಶದೊಡನೆ ನನ್ನ ಬಳಿ ಬಂದರು. ನನ್ನ ಮನಸ್ಸು ಉತ್ತೇಜನಗೊಂಡಿತು. ಎಲ್ಲರೂ ನನ್ನನ್ನು ತಮ್ಮ ಬಳಿ ಕರೆಯುವವರೇ. ಆದರೆ ನಾನು ಮಾತ್ರ ನನ್ನ ತಿದ್ದುಪಡಿಗಳಿಗೆ ಸಮರ್ಥನೆ ನೀಡಿದ ವ್ಯಕ್ತಿಯ ಬಳಿಗೇ ಹೋಗಿ ಕುಳಿತೆ. ಏಕೆಂದರೆ ಅವರ ಬಗ್ಗೆ ಆಗಲೇ ನನ್ನ ಮನಸ್ಸಿನ ಆಳದಲ್ಲಿ ಅಪರಿಮಿತವಾದ ಆತ್ಮೀಯತೆ ಮಡುಗಟ್ಟಿ ನಿಂತಿತ್ತು.

ನನ್ನ ತಿದ್ದುಪಡಿಗಳಿಂದಾಗಿ ಗಾಂಧೀಜಿಯವರಿಗೆ ತುಂಬ ಕೋಪ ಬಂದಿತ್ತೆಂದು ನನಗೆ ತಿಳಿಯಿತು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯವರು ತಮ್ಮ ಗೊತ್ತುವಳಿಯನ್ನು ಮೂಲ ಸ್ವರೂಪದಲ್ಲೇ ಸ್ವೀಕರಿಸಬೇಕೆಂದೂ, ಇಲ್ಲವಾದರೆ ಅದನ್ನು ಹಿಂದಿರುಗಿಸ ಬೇಕೆಂದೂ ಅವರು ಹೇಳಿಕಳಿಸಿದ್ದರು. ನನ್ನನ್ನು ಮೊದಲು ಸಮರ್ಥಿಸಿದ ಕಾಂಗ್ರೆಸ್ ಮಹಾನಾಯಕರೇ ಈಗ ಮೂಲ ಗೊತ್ತುವಳಿಯನ್ನೇ ಒಪ್ಪಿಬಿಡಬೇಕೆಂದು ಒತ್ತಡ ಹೇರಲಾರಂಭಿಸಿದರು. ನಾನೆಂದೆ : ''ಇದೀಗ ನಾಲ್ಕು ಗಂಟೆಗಳ ಹಿಂದೆ ನಾವು ಗೊತ್ತುವಳಿಯನ್ನು ಅಂಗೀಕರಿಸಿದ್ದೇವೆ. ಈಗ ಮತ್ತೆ ಈ ಬದಲಾವಣೆ ಯಾಕೆ ?''

ನಾನೇ ಹಠ ಹಿಡಿಯುತ್ತಿರುವೆನೆಂದು ಆ ಕಾಂಗ್ರೆಸ್ ಮಹಾನುಭಾವರಿಗೆ ಅನಿಸಿತ್ತು. ಆಗ ನಾನು ಮಹಾದೇವ ಭಾಯಿಯವರತ್ತ ತಿರುಗಿ ಹೇಳಿದೆ : ''ನಿಮ್ಮ ತರ್ಕ ನನಗೆ ಸಮ್ಮತವಿಲ್ಲ. ಆದರೂ ಒಂದು ಪ್ರಶ್ನೆ ಉಳಿದೇ ಉಳಿಯುತ್ತದೆ. ಅದೆಂದರೆ ಈ ಕಾರ್ಯಕಾರಿಣಿಯಾಗಲೀ, ನನ್ನಂಥ ಹಲವು ಜನರಾಗಲೀ ದಕ್ಷಿಣ ಆಫ್ರಿಕದಲ್ಲಿ ನಾಗರಿಕ ಅಸಹಕಾರ ಚಳುವಳಿಯನ್ನು ನಡೆಸುವವರಲ್ಲ. ಅದಂತೂ ಗಾಂಧೀಜಿಯವರೇ ಹೊತ್ತ ಹೊಣೆ. ಆದ್ದರಿಂದ, ಅವರು ನಮ್ಮ ಸೂಚನೆ ಸ್ವೀಕರಿಸಲು ಒಪ್ಪದಿರುವ ಪಕ್ಷದಲ್ಲಿ ನಾನಾದರೂ ನಾಗರಿಕ ಆಂದೋಲನದಲ್ಲಿ ಸ್ವಲ್ಪಮಟ್ಟಿಗೆ ಭಾಗಿಯಾಗುವ ಅಥವಾ ಎಳ್ಳಷ್ಟೂ ಭಾಗವಹಿಸದಿರುವ ಸ್ಥಿತಿಗಳಲ್ಲಿ ಒಂದನ್ನು

ಆಯ್ಕೆ ಮಾಡಲೇಬೇಕಾಗುವುದು''. ಮಹಾದೇವ ಭಾಯಿ ಅಂದರು : ''ಹೌದು, ಇದೀಗ ಸರಿಯಾದ ಮಾತು, ಸರಿಯಾದ ದೃಷ್ಟಿಕೋನ''. ನಾನೆಂದೆ: ''ಅಂದ ಮೇಲೆ ನನ್ನ ತಿದ್ದುಪಡಿಯನ್ನು ನಾನೇ ವಾಪಸ್ಸು ಪಡೆಯದೇ ಬೇರೆ ದಾರಿಯಿಲ್ಲ''. ಹೀಗಾಗಿ ನನ್ನ ತಿದ್ದುಪಡಿ ವಾಪಸ್ಸು ಮಾಡಿ ಮೂಲ ಗೊತ್ತುವಳಿಯನ್ನೇ ಅಂಗೀಕರಿಸಲಾಯಿತು. ಯಾವ ಚರ್ಚೆಗೂ ಇಳಿಯದೆ, ''ಬ್ರಿಟಿಷ್ ಭಾರತೀಯರು'' ಎಂದಿದ್ದುದನ್ನು ''ಭಾರತೀಯರು'' ಎಂದು ಮಾತ್ರ ನಮೂದಿಸಲಾಯಿತು.

ನಾನು ಸಭೆಯಿಂದ ಹೊರಬಂದಾಗ ಸುಭಾಷ್‌ಚಂದ್ರಬೋಸ್ ನನ್ನ ಬಳಿ ಬಂದು ಕೇಳಿದರು : ''ನೀವೇನು ತಿಳಿದಿರಿ, ಮಹಾತ್ಮಾ ಗಾಂಧಿಯವರು ಶಕ್ತಿವಂತರೋ? ಅಥವಾ ಕಾಂಗ್ರೆಸ್ ಪಕ್ಷವೋ?'' ನಾನೆಂದೆ : ''ನಾನು ಯಾವಾಗಲೂ ಸರಿಯಾಗಿ ತಿಳಿದುಕೊಂಡೇ ನನ್ನ ಕರ್ತವ್ಯ ಮಾಡುತ್ತಿರುತ್ತೇನೆ''. ಗಾಂಧೀಜಿಯವರ ಶಕ್ತಿ ಕಾಂಗ್ರೆಸ್ ಪಕ್ಷಕ್ಕಿಂತ ಹೆಚ್ಚಿನದೆಂಬುದು ನಿಶ್ಚಿತ. ಆದರೆ ಪಕ್ಷದ ಮೂಲಕ ಸ್ವೀಕೃತವಾದ ಗೊತ್ತುವಳಿಗಿಂತ ಗಾಂಧೀಜಿಯವರ ಸಂಕಲ್ಪ ಶಕ್ತಿ ಇನ್ನೂ ಹೆಚ್ಚು ದೊಡ್ಡದಾಗಿತ್ತು.

ಕೆಲವು ತಿಂಗಳಲ್ಲೇ ಮಹಾಯುದ್ಧ ಆರಂಭವಾಗಿಬಿಟ್ಟಿತು. ಬ್ರಿಟಿಷ್ ವೈಸ್‌ರಾಯರ ಭೇಟಿಯ ಬಳಿಕ ಗಾಂಧೀಜಿಯವರು ನೀಡಿದ ಹೇಳಿಕೆಯನ್ನು ಆಲ್ ಇಂಡಿಯಾ ರೇಡಿಯೋ ಮೂಲಕ ಪ್ರಸಾರಗೊಳಿಸಲಾಯಿತು. ಅದರಲ್ಲಿ ವೆಸ್ಟ್‌ಮಿನಿಸ್ಟರ್ ಎಬೆಗೆ ಸಂಭವಿಸಿತೆನ್ನಲಾಗಿದ್ದ ಹಾನಿಯನ್ನು ಕುರಿತು ದುಃಖ ವ್ಯಕ್ತಪಡಿಸಲಾಗಿತ್ತು. ಯಾಕೆಂದರೆ ವೆಸ್ಟ್ ಮಿನಿಸ್ಟರ್ ಎಬೆ ಬ್ರಿಟಿಷ್ ಚರಿತ್ರೆ ಹಾಗೂ ಬ್ರಿಟಿಷ್ ಶಿಲ್ಪಕಲೆಯ ಒಂದು ಮಹಾಸ್ಮಾರಕದಂತಿತ್ತು. ಯುದ್ಧದಿಂದಾಗಿ ಬ್ರಿಟಿಷರಿಗಾಗುವ ಇಂಥ ಹಾನಿ-ಗ್ಲಾನಿಗಳ ಬಗ್ಗೆ ಗಾಂಧೀಜಿಯವರ ಹೇಳಿಕೆಯಲ್ಲಿ ಅವರ ಕಣ್ಣೀರೇ ಮಡುಗಟ್ಟಿದ ಹಾಗಿತ್ತು. ಗಾಂಧೀಜಿಯವರ ಮಾತುಗಳನ್ನು ಆಕಾಶವಾಣಿಯವರು ಪೂರ್ತಿಯಾಗಿ ಪ್ರಸಾರಗೊಳಿಸದೆ, ಅಲ್ಲಲ್ಲಿ ಕತ್ತರಿಯಾಡಿಸಿ ಬಿತ್ತರಿಸಿದ್ದರು. ನನ್ನಂಥ ವ್ಯಕ್ತಿಗಳಿಗೆ ಅವರ ಮಾತುಗಳಿಂದ ಸಿಟ್ಟು ಬರುವಂಥ ರೀತಿಯಲ್ಲೇ ಅವರ ವ್ಯಕ್ತಿತ್ವವನ್ನು ಪ್ರಸಾರಗೊಳಿಸಲಾಯಿತು. ಅದನ್ನು ಕೇಳಿ ನನಗೆ ನಿಜಕ್ಕೂ ಮೊದಲ ಬಾರಿ ಗಾಂಧೀಜಿಯವರ ಮೇಲೆ ತುಂಬಾ ಕೋಪ ಉಂಟಾಯಿತು. ನಾನವರನ್ನು ಚೆನ್ನಾಗಿ ಅರಿತುಕೊಂಡಿದ್ದೆ, ನಿಜ. ಅಂತೆಯೇ ಅವರು ಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯ ಮಾಡುವ ಬಗ್ಗೆ ಮಾತೆತ್ತುವುದು ಸಾಧ್ಯವಿರಲಿಲ್ಲ. ಆದರೂ ಕೇವಲ ಮಾನವೀಯ ದೃಷ್ಟಿಯಿಂದ ಸಹಾನುಭೂತಿ ತೋರಿಸಲು ಬ್ರಿಟಿಷ್ ವೈಸ್‌ರಾಯರ ಮುಂದೆ ಗಾಂಧೀಜಿ ಹಾಗೆ ಹೇಳಿರಬಹುದೆಂದು ನನಗೆ ಅನ್ನಿಸಿತು. ಬ್ರಿಟಿಷರ ಕುರಿತಾದ ಭಾವುಕತೆ, ಹಾಗೂ ಎಬೆಗೆ ಸಂಭವಿಸಿರಬಹುದಾದ ಹಾನಿಯ

ಕಲ್ಪನೆಯಿಂದ ಗಾಂಧೀಜಿಯವರಿಗೆ ಕಣ್ಣೀರು ಬಂದಿರಬೇಕು. ಮರುದಿನ ಪತ್ರಿಕೆಗಳಲ್ಲಿ ಪ್ರಕಟವಾದ ಅವರ ಸಂಪೂರ್ಣ ಹೇಳಿಕೆಯನ್ನೋದಿ ಅವರ ಬಗೆಗಿನ, ನನ್ನ ಸಿಟ್ಟು ಕರಗಿ ಹೋಯಿತು. ಅದರ ಪ್ರಭಾವ ಅಷ್ಟೇನೂ ಕೆಟ್ಟದಾಗಲಿಲ್ಲ. ಆದರೆ ಗಾಂಧೀಜಿಯವರಾಡಿದ್ದ ಕೆಲವು ಮಾತುಗಳಿಂದ ಮಾತ್ರ ಅವರ ಭಾವುಕತೆ ಹಾಗೂ ಬ್ರಿಟಿಷ್‌ಪರವಾದ ಒಲವು ಎದ್ದು ಕಾಣುವಂತಿತ್ತು. ಬಾನುಲಿಯಲ್ಲಿ ಅವರ ಹೇಳಿಕೆಯನ್ನಾಲಿಸಿ ಬೇಸರಗೊಂಡಿದ್ದೆನಾದರೂ ಪತ್ರಿಕೆಗಳಲ್ಲಿ ಅದರ ಪೂರ್ತಿ ಪಾಠವನ್ನೋದಿ ನನ್ನ ಮನಸ್ಸಿನಲ್ಲಿದ್ದ ಅನುಮಾನವೆಲ್ಲ ದೂರವಾಯಿತೆಂದು ಅವರಿಗೊಂದು ಕಾಗದ ಬರೆದೆ. ಗಾಂಧೀಜಿಯವರು ಬ್ರಿಟಿಷರೊಡನೆ ಭಾರತದ ಸ್ವಾತಂತ್ರ್ಯದ ವಿಚಾರದಲ್ಲಿ ರಾಜಿಮಾಡಿಕೊಳ್ಳಬಹುದೆಂದು ಒಂದು ಕ್ಷಣ ಕೂಡ ನಾನು ಯೋಚಿಸುವಂತಿರಲಿಲ್ಲ. ಆದರೆ ಅವರ ಇಂಥ ಹೇಳಿಕೆಗಳು ಅವರನ್ನು ವಿಶ್ವನಾಯಕತ್ವದ ಹಂತದಿಂದ ಕೆಳಗಿಳಿಸಿವೆ. ಏಕೆಂದರೆ ಅವರು ಇಂಥ ಹೇಳಿಕೆಗಳಲ್ಲಿ ಪಕ್ಷಪಾತ ಪ್ರಕಟಪಡಿಸಿದ್ದಾರೆ. ತತ್ವಜ್ಞಾನಿ ನೀತ್ಷೆಯ ಪ್ರಕಾರ ತಮ್ಮ ಸದ್ಭಾವನೆಯ ಪ್ರೇರಣೆಯಿಂದ ಯಾರು ಇಡಿಯ ವಿಶ್ವವನ್ನೇ ಅಪ್ಪಿಕೊಳ್ಳಲೆಳಸುವರೋ ಅವರು ಯಾವೊಬ್ಬ ವ್ಯಕ್ತಿಯನ್ನೂ ವಿಶ್ವದ ಪ್ರತಿನಿಧಿಯೆಂದು ಭಾವಿಸಿ ಅಪ್ಪಿಕೊಳ್ಳಬಹುದು. ನಮ್ಮಲ್ಲಿ ಯಾರೊಬ್ಬರು ಇನ್ನೊಬ್ಬ ವ್ಯಕ್ತಿಯನ್ನು ಅಪ್ಪಿಕೊಳ್ಳುವ ಸಂದರ್ಭದಲ್ಲಿ, ಆ ವ್ಯಕ್ತಿ ಸಮಸ್ತ ಮನುಷ್ಯಕುಲವನ್ನು ಪ್ರತಿನಿಧಿಸುತ್ತಿದ್ದಾನೆ ಎಂದು ಭಾವಿಸುವುದೊಂದು ಮಹಾ ಕಲ್ಪನೆಯೇ ಸರಿ.

ಗಾಂಧೀಜಿಯವರು ವೆಸ್ಟ್‌ಮಿನಿಸ್ಟರ್ ಎಬೆಗೆ ಸಂಭವಿಸಿರಬಹುದಾದ ವಿನಾಶದ ಮಾತೆತ್ತಿದಾಗ ಅವರು ಸಮಸ್ತ ಮಾನವ ಕುಲ, ಅದರ ಬೆಳವಣಿಗೆ ಹಾಗೂ ಐತಿಹಾಸಿಕ ವೈಭವದ ಬಗ್ಗೆ ಅಭಿಮಾನ ವ್ಯಕ್ತಪಡಿಸುತ್ತಿದ್ದಾರೆಂದೂ, ವೆಸ್ಟ್‌ಮಿನಿಸ್ಟರ್ ಎಬೆಯನ್ನು ಈ ಕಲ್ಪನೆಯ ಪ್ರತೀಕ ಮಾತ್ರವಾಗಿ ಬಳಸುತ್ತಿದ್ದಾರೆಂದೂ ಭಾವಿಸಿ, ನನಗೆ ಅನ್ನಿಸಿದ ರೀತಿಯಲ್ಲಿ ಗಾಂಧೀಜಿಯವರಿಗೆ ನಾನೊಂದು ಕಾಗದ ಬರೆದೆ. ಗಾಂಧೀಜಿಯವರು ಆ ಕೂಡಲೇ 'ಹರಿಜನ' ಪತ್ರಿಕೆಯಲ್ಲಿ ಮತ್ತೊಂದು ವ್ಯಕ್ತಿತ್ವವನ್ನು ಪ್ರಕಟಿಸಿದುದನ್ನು ಕಂಡು ನನಗೆ ಆನಂದವಾಯಿತು. ಅದರಲ್ಲಿ ಅವರು ವೆಸ್ಟ್‌ಮಿನಿಸ್ಟರ್ ಎಬೆ ಇರಲಿ, ರಷ್ಯಾದ ಕ್ರೆಮ್ಲಿನ್ ಆಗಿರಲಿ ಅಥವಾ ಅಮೇರಿಕೆಯ ಜೆಫರ್ಸನ್ ಸ್ಮಾರಕವಾಗಿರಲಿ ಯಾವುದರ ವಿನಾಶವೂ ತಮಗೆ ಅಪಾರ ದುಃಖವನ್ನು ಉಂಟು ಮಾಡುವುದೆಂದು ಸ್ಪಷ್ಟಪಡಿಸಿದರು.

ಆ ಬಳಿಕ ಒಂದು ಸಲ ನಾನು ಗಾಂಧೀಜಿಯವರನ್ನು ಕಂಡಾಗ, ಅವರು ದೇಶ ಅಥವಾ ವಿಶ್ವ ಅಥವಾ ಯುದ್ಧ ಇಂಥ ಯಾವುದೇ ವಿಷಯದ ಬಗ್ಗೆ ಅವರ ಮಾತುಗಳು ಪ್ರಕಟವಾದಾಗ, ನಾನು ಕೂಡಲೇ ಅವರಿಗೆ ಕಾಗದ ಬರೆಯುತ್ತಿರಬೇಕೆಂದು

ಸೂಚಿಸಿದರು. ಅದರಿಂದ ಅವರ ಅಭಿಪ್ರಾಯಗಳ ಬಗ್ಗೆ ನನಗೆ ಅನ್ನಿಸಿದುದನ್ನು ತಿಳಿಸುವ ಸ್ವಾತಂತ್ರ್ಯ ಅನಾಯಾಸವಾಗಿ ದೊರೆತಂತಾಯಿತು.

ದೀರ್ಘ ಕಾಲದ ಸೆರೆಮನೆ ವಾಸದಿಂದ, 1942ರ ಚಳುವಳಿಯ ಕೆಲವು ವಾರಗಳ ಮೊದಲು ನಾನು ಹೊರಬಂದಾಗ, ಕಾಂಗ್ರೆಸ್ಸಿನ ಇತರ ನಾಯಕರು ತುಂಬಾ ತೀವ್ರಗತಿಯಿಂದ ನಮ್ಮ ದೇಶವನ್ನು ಬ್ರಿಟಿಷರ ದೃಷ್ಟಿಕೋನಕ್ಕೆ ನೆರವಾಗುವಂತೆ ಅನುಗೊಳಿಸುವ ಕ್ರಿಯೆಯಲ್ಲಿ ತೊಡಗಿರುವ ಹಾಗೆ ನನಗೆ ಕಂಡುಬಂತು. ಜಪಾನಿನ ವಿರುದ್ಧ ಬ್ರಿಟಿಷರಿಗೆ ನೆರವಾಗಿ ನಿಂತು ಕ್ಷಿಪ್ರ ದಾಳಿಯ ಪಡೆಯನ್ನು ಸಂಘಟನೆ ಮಾಡುವ ವಿಚಾರದಲ್ಲಿ ಇವರೆಲ್ಲ ತೊಡಗಿದ್ದರು. ಸರ್ ಸ್ಟಾಫರ್ಡ್ ಕ್ರಿಪ್ಸ್ ತಮ್ಮ ಸಂಭಾವಿತ ಸದಸ್ಯರ ಒಂದು ಮಂಡಳಿಯೊಡನೆ ಭಾರತಕ್ಕೆ ಬಂದಿದ್ದರು. ಭಾರತದ ಎಲ್ಲ ನಗರಗಳನ್ನು ಮುಕ್ತವೆಂದು ಸಾರುವಂತೆ ಗಾಂಧೀಜಿಯವರು ಬ್ರಿಟಿಷ್ ಸರಕಾರಕ್ಕೆ ಸೂಚಿಸುವಂತೆ ಒತ್ತಾಯಿಸಬೇಕೆಂಬ ವಿಚಾರ ನನ್ನ ಮನಸ್ಸಿನಲ್ಲಿ ಮೂಡಿತು. ಯುದ್ಧದ ಸಂದರ್ಭದಲ್ಲಿ, ಯಾವುದೇ ನಗರ ಅಥವಾ ಕೆಲವು ನಗರಗಳು ಮುಕ್ತವಾಗಿದೆಯೆಂದು ಘೋಷಿಸುವಂತೆ ಯಾವುದೇ ದೇಶವು ತನ್ನ ವೈರಿಯ ಮೇಲೂ ಒತ್ತಡ ತರುವ ಹಕ್ಕುನ್ನು ಹೊಂದಿರುತ್ತದೆ. ಯಾವುದೇ ನಗರ ಒಮ್ಮೆ ಹೀಗೆ ಮುಕ್ತವೆಂದು ಘೋಷಿತಗೊಂಡರೆ, ಆ ನಗರವನ್ನು ಶಸ್ತ್ರಾಸ್ತ್ರಗಳ ಉತ್ಪಾದನಾ ಕೇಂದ್ರದಂತೆ ಬಳಸಲಾಗದು; ತತ್ಪರಿಣಾಮವಾಗಿ ವೈರಿಗಳೂ ಆ ನಗರದ ವಿನಾಶದ ಬಗ್ಗೆ ಯೋಚಿಸುವುದಿಲ್ಲ ಅಥವಾ ಆ ನಗರದ ಮೇಲೆ ಬಾಂಬ್ ದಾಳಿಯನ್ನೂ ನಡೆಸುವುದಿಲ್ಲ. ನಾನು ಈ ಸೂಚನೆಯೊಡನೆ ಗಾಧೀಜಿಯವರ ಬಳಿಗೆ ಹೋದೆ. ನಾವು ಈ ಒಂದೇ ವಿಷಯವನ್ನು ಕುರಿತು ಮೂರು ದಿನಗಳವರೆಗೆ ಚರ್ಚೆ ಮಾಡಿದ್ದು ನನಗೆ ನೆನಪಿದೆ. ಇತಿಹಾಸ, ಭೂಗೋಳ ಹಾಗೂ ರಾಜನೀತಿ ಈ ಎಲ್ಲ ದೃಷ್ಟಿಗಳಿಂದಲೂ ನನ್ನ ಸೂಚನೆಯ ಔಚಿತ್ಯವನ್ನು ಆಗ ನಾನು ವಿವರಿಸಿದೆ. ಅಶ್ವತ್ಥಾಮ ಹಾಗೂ ಕುರುಕ್ಷೇತ್ರ ಇತ್ಯಾದಿ ದೃಷ್ಟಾಂತಗಳನ್ನು ಅವರೆದುರು ಮಂಡಿಸಿದೆ. ನಾನೆಂದೆ : "ಹಿಂದಿನ ಕಾಲದಲ್ಲೂ ಯುದ್ಧನಿರತ ಸೇನೆಗಳು ಮಾನವೀಯ ದೃಷ್ಟಿಯಿಂದ ದೊಡ್ಡ ನಗರಗಳ ಮೇಲೆ ದಾಳಿಯಿಡುತ್ತಿರಲಿಲ್ಲ; ಈ ಸಂಬಂಧವಾಗಿ ಇತಿಹಾಸದಲ್ಲೂ ಉದಾಹರಣೆಗಳು ದೊರೆಯುತ್ತವೆ."

ಕೊನೆಗೆ ಗಾಂಧೀಜಿ ನುಡಿದರು : "ನಿಮ್ಮ ತರ್ಕ ಗೊಂದಲಮಯವಾಗಿದೆ." ಬ್ರಿಟಿಷರಿಂದ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ದೊರೆಯಬೇಕೆಂಬ ಇಚ್ಛೆಯೇ ನನ್ನಲ್ಲಿ ಪ್ರಬಲವಾಗಿತ್ತಲ್ಲದೆ, ಇನ್ನಾವ ಗೊಂದಲದ ಕಡೆಗೂ ನನ್ನ ಗಮನವಿರಲಿಲ್ಲ. ಆಗ ಗಾಂಧೀಜಿಯವರೆಂದರು : "ನೀವು ನನ್ನನ್ನೆಲ್ಲಿ ಎಳೆದೊಯ್ಯಬಯಸುವಿರೆಂಬುದು ನನಗೆ ಅರ್ಥವಾಗುತ್ತದೆ. ನೀವು ಬ್ರಿಟಿಷರೊಡನೆ ತೀವ್ರ ಸಂಘರ್ಷಕ್ಕಿಳಿಯ

ಬೇಕೆನ್ನುತ್ತೀರಿ. ಅಲ್ಲವೇ ?". ನಾನೆಂದೆ : "ಹೌದು, ಅದೇ ನನ್ನಿಚ್ಛೆ". ಆಗ ಅವರೆಂದರು : "ಹಾಗೆ ನೇರವಾಗಿ ಹೇಳಬಾರದೇಕೆ ? ಸರಿ, ನಾವು ಮುಂದಿನ ಆಲೋಚನೆ ಮಾಡಬೇಕಾಗುವುದು. ಆದರೆ ಯುದ್ಧದ ಬಗ್ಗೆ ಮಾತಾಡಿದ ಮಾತ್ರಕ್ಕೆ ಯುದ್ಧ ಮಾಡಲಾಗುವುದಿಲ್ಲ. ಮುಂದಿನ ಘಟನೆಗಳು ಯಾವ ಸ್ವರೂಪ ಹೊಂದಬಹುದೆಂಬುದನ್ನು ನೋಡಬೇಕಾಗುವುದು."

ನನ್ನ ವಿಚಾರವನ್ನು ಗಾಂಧೀಜಿಯಯವರು ಪೂರ್ಣವಾಗಿ ಒಪ್ಪಲಿಲ್ಲ, ನಿಜ. ಆದರೆ, ಅವರು ಒಂದೇ ಸಮನಾಗಿ ಮೂರು ತಿಂಗಳ ಕಾಲ ನಾವು ಯುದ್ಧದಲ್ಲಿ ಯಾರ ಪಕ್ಷವನ್ನೂ ವಹಿಸುವುದಿಲ್ಲವೆಂದೇ 'ಹರಿಜನ' ಪತ್ರಿಕೆಯಲ್ಲಿ ಬರೆಯುತ್ತ ಹೋದುದೇನು ಸಣ್ಣ ಮಾತೇ ? ಯುದ್ಧಕ್ಕೆ ಸಂಬಂಧಿಸಿದಂತೆ ತಮ್ಮ ನಿಷ್ಪಕ್ಷಪಾತ ನಿಲುವಿನ ಘೋಷಣೆಯ ಜೊತೆಜೊತೆಗೇ ಭಾರತದ ಸ್ವಾತಂತ್ರ್ಯದ ಹಕ್ಕೊತ್ತಾಯವನ್ನೂ ಅವರು ಒಟ್ಟೊಟ್ಟಿಗೇ ಮುಂದಿಡುತ್ತಾ ಬಂದರು. ನಗರಗಳ ಮುಕ್ತತೆಯ ವಿಷಯದಲ್ಲಿ ನಡೆದ ಚರ್ಚೆಯ ನಾಲ್ಕನೆಯ ಹಾಗೂ ಕೊನೆಯ ದಿನ ಗಾಂಧೀಜಿಯವರು ನನ್ನನ್ನು . ಕರೆದು ಹೇಳಿದರು: "ನೀವು ನನ್ನ ಅಂತರಾತ್ಮನ ಧ್ವನಿ ಕೇಳಿ ನಗಬಹುದು !". ಆಗ ನಾನೇನೂ ನಗಲಿಲ್ಲ. ಮತ್ತೆ ತಮ್ಮ ಅಂತರಾತ್ಮನ ಬಗೆಗೆ ಮಾತೆತ್ತಿ ಹೇಳಿದರು : "ನಿಮ್ಮ ಈ ಸೂಕ್ಷ್ಮ ಕಲ್ಪನೆಯ ಬಗೆಗೆ ಯಾವಾಗಲೂ ನಾನು ಯೋಚಿಸುತ್ತಲೇ ಇದ್ದೆ. ನಿನ್ನೆ ರಾತ್ರಿಯಂತೂ ಎರಡು ಗಂಟೆಗೇ ಎಚ್ಚರವಾಯ್ತು". ಅವರಿಗೆ ನನ್ನಿಂದಿಷ್ಟು ತೊಂದರೆಯಾಯಿತಲ್ಲ ಎಂದು ನಾನು ದುಃಖಿತನಾದೆ. ಕಳೆದ ರಾತ್ರಿಯೇ ವೈಸ್‌ರಾಯ್ ಲಾರ್ಡ್ ಲಿನ್‌ಲಿಥ್‌ಗೋ ಅವರಿಗೆ ಕಾಗದ ಬರೆದುದಾಗಿಯೂ ಅವರು ಹೇಳಿದರು. ಆ ಕಾಗದವನ್ನೇ ನನಗೆ ತೋರಿಸಿದರು. ಅದು ತೀರಾ ಸ್ಪಷ್ಟವಾಗಿತ್ತು. ಅದರಲ್ಲಿ ನಾನೊಬ್ಬ ಅಹಿಂಸೆಯಲ್ಲಿ ಆಸಕ್ತಿಯಿರುವ ಸಮಾಜವಾದಿ ಗೆಳೆಯನೆಂದು ವಿವರಿಸಲಾಗಿತ್ತು. ಭಾರತೀಯ ನಗರಗಳನ್ನು ಮುಕ್ತಗೊಳಿಸುವ ನನ್ನ ವಿಚಾರದ ಪ್ರಸ್ತಾಪವೂ ಆ ಪತ್ರದಲ್ಲಿ ದಾಖಲಾಗಿತ್ತು. ಆ ಕಾಗದದ ಒಕ್ಕಣೆಕೆಯೇನೋ ಚೆನ್ನಾಗಿದ್ದರೂ, ನನ್ನ ಅಂತರಾಳದ ಆಲೋಚನೆಗೆ ಗಾಂಧೀಜಿಯವರ ಒಪ್ಪಿಗೆಯಿದೆ ಎಂಬುದರ ಎಳ್ಳಷ್ಟು ಸುಳಿವೂ ಅದರಲ್ಲಿರದ ಸಂಗತಿಯ ಕಡೆಗೆ ನಾನು ಮಹಾತ್ಮರ ಗಮನವನ್ನು ಸೆಳೆದೆ: ಆಗ ಅವರು ಹೇಳಿದರು : "ನಾನು ಹಾಗೆ ಬರೆಯಲಾರೆ". ನಾನೆಂದೆ : "ಹಾಗಾದರೆ ವೈಸ್‌ರಾಯರು ನನ್ನ ಸೂಚನೆ ಹೇಗೆ ಗಮನಿಸಿಯಾರು ? ಅವರ ದೃಷ್ಟಿಯಲ್ಲಿ ನಾನು ಯಾರು ? ನಾನು ಏನುತಾನೆ ಮಾಡಬಲ್ಲೆ ? ನೀವು ನನ್ನ ಸೂಚನೆಗೆ ಸ್ವಲ್ಪ ಮಟ್ಟಿಗಾದರೂ ಸಮ್ಮತಿ ಸೂಚಿಸಿದ್ದರೆ, ಅವರು ನಿಮಗೆ ಉತ್ತರ ಕಳಿಸುವ ಮುನ್ನ ಎರಡೆರಡು ಬಾರಿ ಯೋಚಿಸಬೇಕಾಗುತ್ತದೆ".

ಹಾಗೆ ನಾನು ಯೋಚಿಸುವುದು ಸರಿಯಲ್ಲವೆಂದೂ, ಯಾವುದೇ ವಿಷಯದ

ಬಗ್ಗೆ ವೈಸ್‌ರಾಯರಿಗೆ ತಾವು ಕಾಗದ ಬರೆಯುವುದೆಂದರೆ, ಅವರು ಆಲೋಚನೆ ಮಾಡಿಯೇ ಉತ್ತರ ಬರೆಯುವಂತೆ ಮಾಡುತ್ತದೆಂದೂ ಗಾಂಧೀಜಿ ನನಗೆ ಹೇಳಿದರು. ಅವರ ಮಾತುಗಳ ಅಂತರಂಗ ನನಗೆ ಮನವರಿಕೆಯಾಗಿ ನಿರಾಳವೆನಿಸಿತು. ಆದರೆ, ದುರದೃಷ್ಟಕರ ಸಂಗತಿಯೆಂದರೆ ನಮ್ಮ ಈ ಮಾತುಕತೆಯ ಆ ಕ್ಷಣದಲ್ಲಿ ಅದೇ ಕೋಣೆಯಲ್ಲಿ ಮತ್ತೊಬ್ಬರೂ ಕುಳಿತಿದ್ದರು. ಆ 'ಮಹಾನುಭಾವ' ಹೇಳಿದರು : "ನೋಡಿ ಬಾಪೂಜೀ, ನೀವು ಈ ಕಾಗದ ಬರೆದು ಈ ವ್ಯಕ್ತಿಯನ್ನು ನೇರವಾಗಿ ಪೊಲೀಸರ ಕೈಗೊಪ್ಪಿಸುತ್ತಿದ್ದೀರಿ". ಸರಿ, ಅಲ್ಲಿಗೆ ಆ ಮಾತಿಗೆ ಪೂರ್ಣವಿರಾಮ ಬಿತ್ತು. ಕಾಗದವನ್ನು ವೈಸ್‌ರಾಯ್‌ಗೆ ಕಳಿಸಲೇ ಇಲ್ಲ. ಯಾಕೆಂದರೆ, ಆ ಮೂರನೆಯ ವ್ಯಕ್ತಿಯ ತರ್ಕವು ಗಾಂಧೀಜಿಯವರಿಗೆ ಸರಿಯೆನಿಸಿತ್ತು. ಅವರು ನನ್ನ ಬಗೆಗೆ ಎಳ್ಳಷ್ಟೂ ಚಿಂತಿಸಕೂಡದೆಂದು ನಾನು ಪರಿಪರಿಯಾಗಿ ಬೇಡಿಕೊಂಡೆ. ಏಕೆಂದರೆ ಬ್ರಿಟಿಷ್ ಸರಕಾರ ಈ ಕಾಗದದ ನಿಮಿತ್ತದಿಂದಾಗಲಿ, ಅಥವಾ ಎರಡು ಮೂರು ತಿಂಗಳ ನಂತರವಾಗಲೀ ನನ್ನನ್ನು ಸೆರೆಹಿಡಿದೇ ಹಿಡಿಯುತ್ತದೆಂದ ಬಳಿಕ, ನನಗೆ ಯಾವುದೇ ಅಳುಕು ಯಾಕೆ? ಆದರೆ ನನ್ನ ಯಾವ ತರ್ಕಸರಣಿಯನ್ನೂ ಗಾಂಧೀಜಿ ಒಪ್ಪಲೂ ಇಲ್ಲ; ಆ ಕಾಗದವನ್ನೂ ಕಳಿಸಲೂ ಇಲ್ಲ.

ಅದೇ ಸಮಯಕ್ಕೆ, ಒಂದು ಹೊಸ ಜಗತ್ತನ್ನೇ ನಿರ್ಮಾಣಗೊಳಿಸಲು ಸಾಧ್ಯವಾಗುವಂತೆ ಬುನಾದಿ ಹಾಕುವ ಕೆಲಸದಲ್ಲಿ ಕೈಗೂಡಿಸುವಂತೆ, ಜಗತ್ತಿನಲ್ಲಿ ಸಾಧ್ಯವಾದ ಎಲ್ಲ ಸರಕಾರಗಳಿಗೂ ಗಾಂಧೀಜಿಯವರು ಮನವಿ ಮಾಡಿಕೊಳ್ಳುವಂತೆ ಅವರ ಮನವೊಲಿಸಲು ಪ್ರಯತ್ನಿಸಿದೆ. ಆ ಕುರಿತು ನಾನು ನಾಲ್ಕು ಸೂತ್ರಗಳನ್ನು ಮಂಡಿಸಿದೆ:

(i) ಒಂದು ದೇಶ ಇನ್ನೊಂದು ದೇಶದೊಳಗೆ ಈವರೆಗೆ ಹೂಡಿದ ಬಂಡವಾಳವನ್ನು ಜಪ್ತಿ ಮಾಡುವುದು. (ii) ಸಮಸ್ತ ಜನರಿಗೆ ಯಾವ ಭಾಗಕ್ಕೂ ಹೋಗಿ ಬರುವ ಹಾಗೂ ಅವರ ಇಚ್ಛೆಪಟ್ಟಲ್ಲಿ ಅಲ್ಲಿಯೇ ನೆಲೆಸುವ ಹಕ್ಕು ನೀಡುವುದು. (iii) ಜಗತ್ತಿನ ಎಲ್ಲ ರಾಷ್ಟ್ರಗಳಿಗೂ ರಾಜಕೀಯ ಸ್ವಾತಂತ್ರ್ಯ ಹಾಗೂ ಸಂವಿಧಾನಾತ್ಮಕ ಸಂಘಟನೆ ಹಾಗೂ (iv) ಯಾವುದಾದರೊಂದು ರೀತಿಯ ವಿಶ್ವ ನಾಗರಿಕತೆ.

ಈ ನಾಲ್ಕು ಸೂತ್ರಗಳ ಬಗ್ಗೆ ಗಾಂಧೀಜಿ ತಾಳ್ಮೆಯಿಂದ ಕೇಳಿದರು. ಆದರೂ ಯಾವ ಕಾಗದವನ್ನೂ ಅವರು ಬರೆಯಲೇ ಇಲ್ಲ; ಯಾಕೆ ಬರೆಯಲಿಲ್ಲ ಎಂಬುದರ ವಿಶ್ಲೇಷಣೆಗೆ ನಾನು ಇಲ್ಲಿ ತೊಡಗುವುದಿಲ್ಲ. ಅಂದಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಇದೊಂದು ಅವ್ಯಾವಹಾರಿಕ ಕ್ರಮವಾಗಬಹುದೆಂದು ಅವರಿಗೆನಿಸಿರಲೂಬಹುದು. ಸಿದ್ಧಾಂತದ ರೂಪದಲ್ಲಾದರೂ ಅವರು ಈ ವಿಚಾರವನ್ನು ಏಕಾಂತಕವಾಗಿ

ಒಪ್ಪಿಕೊಳ್ಳಬಹುದಿತ್ತು. ಆದರೆ ಈ ಸಿದ್ಧಾಂತದ ಕಾರ್ಯಾಚರಣೆ ಸಫಲಗೊಳ್ಳ ಬಹುದೆಂಬುದರ ಬಗ್ಗೆ ಅವರಿಗೆ ನಂಬುಗೆಯಿರಲಿಲ್ಲ. ಜಗತ್ತಿನ ವಿವಿಧ ಸರಕಾರಗಳಿಗೆ ಸೂಚನೆ ಕೊಡುವ ವಿಚಾರವೂ ಅವರಿಗೆ ಸರಿಯೆನಿಸಲಿಲ್ಲ. ಏಕೆಂದರೆ, ಆ ಸೂಚನೆಯ ಅನುಷ್ಠಾನದ ಬಗೆಗೆ ಅವರಿಗೆ ಭರವಸೆಯಿರಲಿಲ್ಲ. ಇದು ಗಾಂಧೀಜಿಯವರ ತಾರ್ಕಿಕ ವಿಶ್ಲೇಷಣೆಯ ಒಂದು ಮಾದರಿ. ನನ್ನಂಥ ಹಮ್ಮು-ಬಿಮ್ಮುಗಳಿಲ್ಲದ ವ್ಯಕ್ತಿಯ ಮಾತೇ ಬೇರೆ. ಆದರೆ ದೊಡ್ಡ ನಾಯಕರು ತಮ್ಮ ನಡೆ-ನುಡಿಗಳಲ್ಲಿ, ಹೆಜ್ಜೆಹೆಜ್ಜೆಗೂ ಎಚ್ಚರಿಕೆ ವಹಿಸಬೇಕಾಗುತ್ತದೆ. ಆದರೆ, ಗಾಂಧೀಜಿಯವರು 'ಹರಿಜನ' ಪತ್ರಿಕೆಯಲ್ಲಿ ಈ ಸಿದ್ಧಾಂತಕ್ಕೆ ಸಮರ್ಥನೆ ನೀಡಿದರು. ಸಂಪೂರ್ಣ ಸಮರ್ಥನೆ! ವಿಶ್ವದ ಸಮಸ್ಯೆಗಳ ಬಗೆಗೆ ಅವರೂ ಪೂರ್ಣವಾಗಿ ಮುಕ್ತ ಮನಸ್ಸಿನವರಾಗಿದ್ದರೆಂದೇ ಇದರಿಂದ ನಮಗೆ ಮನವರಿಕೆಯಾಗುತ್ತದೆ.

ಭಾರತಕ್ಕೆ ಬಂದು ಹೋಗಿದ್ದ ಸರ್ ಸ್ಟ್ಯಾಫರ್ಡ್ ಕ್ರಿಪ್ಸ್ ಅವರಿಗೆ ಸಂಬಂಧಿಸಿದ ಒಂದು ಘಟನೆ : 1942ರ ಕಾಲ. ನಾನು 'ಕ್ರಿಪ್ಸ್-ರಹಸ್ಯ' ಕುರಿತು ಒಂದು ಲೇಖನ ಬರೆದೆ. ಅದು ಅಷ್ಟೇನೂ ಖುಷಿ ತರುವ ಲೇಖನವಾಗಿರಲಿಲ್ಲ. ಬ್ರಿಟಿಷ್ ರಾಜ್ಯದ ಒಂದು ಅನಿವಾರ್ಯ ಅಸಹಾಯಕತೆ ಎಂದರೆ, ತಮ್ಮ ರಾಜ್ಯ ನಿರಂತರವಾಗಿ ಮುಂದುವರೆಯಬೇಕು ಎಂಬ ವಾಕ್ಯವೂ ಅದರಲ್ಲಿತ್ತು. ಇಂಗ್ಲೆಂಡ್‌ನಲ್ಲಿ ಬ್ರಿಟಿಷ್ ರಾಜ್ಯ, ಬ್ರಿಟಿಷ್ ಜನರಿಗಾಗಿ, ಅವರ ಅಸ್ತಿತ್ವಕ್ಕಾಗಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಅಗತ್ಯವಿತ್ತು. ನನ್ನ ಲೇಖನವನ್ನು ಪೂರ್ತಿ ಓದಿದ ನಂತರ ಗಾಂಧೀಜಿಯವರು ಅದೇ ವಾಕ್ಯದ ಮೇಲೆ ಬೆರಳಿಟ್ಟು ಕೇಳಿದರು : "ಈ ವಾಕ್ಯದಿಂದ ನೀವು ಹೇಳಬೇಕೆಂಬು ದೇನು?". ನಾನೆಂದೆ : "ಬ್ರಿಟಿಷ್ ಜನರು ಭಾರತೀಯ ನಡೆಯ ಔಚಿತ್ಯ ಏನು ಎಂಬುದನ್ನು ತಿಳಿದುಕೊಂಡರೂ ಆ ತಿಳಿವಳಿಕೆಗೆ ಕಾರ್ಯರೂಪ ನೀಡಲು ತಕ್ಕ ಕ್ರಮ ಕೈಗೊಳ್ಳುವುದು ಅವರಿಗೆ ಸಾಧ್ಯವಾಗಲಿಕ್ಕಿಲ್ಲ." ಅವರು ಕೇಳಿದರು : "ಯಾಕೆ ?". ನಾನೆಂದೆ : "ಯಾಕೆಂದರೆ, ಇಂಗ್ಲೆಂಡ್ ಇತ್ತ ಸಾಧಿಸಿದ ಸ್ವಾತಂತ್ರ್ಯದ ಘನತೆಯ ಹಿನ್ನೆಲೆಯಲ್ಲಿ ತಮ್ಮ ಸದ್ಯದ ನಡೆ-ನುಡಿಗಳ ಮಟ್ಟವನ್ನು ಏಕಪ್ರಕಾರವಾಗಿ ಕಾಯ್ದಿರಿಸಿಕೊಳ್ಳುವುದೂ ಕಷ್ಟವಾಗಬಹುದು, ಅದೂ ಭಾರತದಿಂದ ಬ್ರಿಟಿಷ್ ಸಾಮ್ರಾಜ್ಯ ಕಾಲ್ದೆಗೆಯುವ ಪ್ರಸಂಗವೇ ಬಂದ ಪಕ್ಷದಲ್ಲಿ". ಗಾಂಧೀಜಿ ಅಂದರು : "ಅವರೇನು ಆಸ್ಟ್ರೇಲಿಯಾ ಅಥವಾ ಕೆನಡಾಗಳಿಗೆ ಹೋಗಲಾರರೇ ?". ನಾನೆಂದೆ: "ಯಾವೊಬ್ಬ ಆಂಗ್ಲ ನಾಗರಿಕನೂ ಆಸ್ಟ್ರೇಲಿಯಾ ಅಥವಾ ಕೆನಡಾಕ್ಕೆ ಹೋಗಿ ನೆಲೆಸಿದರೆ ಆತ ಬ್ರಿಟಿಷ್ ನಾಗರಿಕನಾಗಿ ಉಳಿಯುವುದಿಲ್ಲ. ಆತನೊಬ್ಬ ಆಸ್ಟ್ರೇಲಿಯನ್ ಅಥವಾ ಕೆನಡಿಯನ್ ಆಗಿಬಿಡುತ್ತಾನೆ. ಹೀಗಾಗಿ ಬ್ರಿಟಿಷ್ ರಾಜ್ಯ ಕರಗುತ್ತ ಹೋಗುತ್ತದೆ. ಆದ್ದರಿಂದ ಬ್ರಿಟಿಷ್ ರಾಜ್ಯ ತನ್ನ ನಾಗರಿಕರನ್ನು ಬೇರೆ ಕ್ಷೇತ್ರಗಳಿಗೆ

ಕಳಿಸಿ ತನ್ನ ಶಕ್ತಿ ಕಡಿಮೆಯಾಗಗೊಡಬಹುದೆಂದು ನನಗೆನಿಸುವುದಿಲ್ಲ. ಇದೊಂದು ಪರಂಪರಾಗತ ರಾಜನೀತಿಯ ಸಿದ್ಧಾಂತ. ನಾನಿಲ್ಲಿ ಹೇಳುತ್ತಿರುವುದು ಅಂಥ ಮೌಲಿಕ ಮಾತೇನೂ ಅಲ್ಲ. ಜಗತ್ತಿನಲ್ಲಿ ನಡೆಯುತ್ತ ಬಂದದ್ದೇ ಹೀಗೆ. ಪ್ರತಿಯೊಂದು ರಾಷ್ಟ್ರಕ್ಕೂ ತನ್ನ ಅಸ್ತಿತ್ವದ ಹೊಣೆಗಾರಿಕೆಯೊಂದು ಇದ್ದೇ ಇರುತ್ತದೆಂದು ನನಗೆನಿಸುತ್ತದೆ.''

ಈ ಚರ್ಚೆ ಬಲು ದೀರ್ಘವಾಗಿ ನಡೆಯಿತು. ಗಾಂಧೀಜಿ ಅಂದರು : ''ಹಾಗೂ ಆಗಬಹುದು. ಭಾರತವನ್ನು ತನ್ನ ಅಧಿಕಾರದ ಹಿಡಿತದಿಂದ ಬಿಡುಗಡೆಗೊಳಿಸುವುದು ಇಂಗ್ಲೆಂಡಿಗೆ ಕಷ್ಟವಾಗಲಿಕ್ಕಿಲ್ಲವೆಂದೇ ನಾನು ನಂಬಿದ್ದೇನೆ''. ನಾನು ಈ ಮಾತನ್ನು ಸದಾ ನೆನಪಿಡಬಯಸುತ್ತೇನೆ. ಇದರೊಡನೆಯೇ ಹೃದಯ ಪರಿವರ್ತನೆಯ ವಿಷಯವೂ ಹೊಂದಿಕೊಂಡಿದೆ. ಈ ಮಾತು ಕೇವಲ ಗಾಂಧೀಜಿಯವರನ್ನು ಟೀಕಿಸುವವರಿಂದ ಮಾತ್ರವಲ್ಲ, ಅವರ ಪ್ರಶಂಸೆ ಮಾಡುವವರಿಂದಲೂ ಅನುಯಾಯಿಗಳಿಂದಲೂ ದೂಷಣೆಗೆ ಒಳಪಡುತ್ತ ಬಂದಿದೆ. ಎಲ್ಲಿ ಈ ಮಾತನ್ನು ಕೆಲವರು ಕ್ರಾಂತಿಯನ್ನು ದಮನ ಮಾಡುವ ಸಾಧನವೆಂದು ತಿಳಿದಿದ್ದಾರೋ ಅಲ್ಲಿಯೇ ಮತ್ತೆ ಕೆಲವರು ಇದನ್ನೇ ವಿದ್ರೋಹದ ಬೀಜರೂಪವೆಂದೂ ಭಾವಿಸಿ ಬಳಸುತ್ತಾರೆ.

ನಾನಿನ್ನು ಮತ್ತೊಂದು ಕಾಲ ಘಟ್ಟದ ಕಡೆಗೆ ಹೊರಳ ಬಯಸುತ್ತೇನೆ: ಲಾರ್ಡ್ ಮೌಂಟ್ ಬ್ಯಾಟನ್ ಅವರು ಭಾರತದ ವಿಭಜನೆಯ ಮೂಲಕ ಈ ದೇಶದ ಸಮಸ್ಯೆಗೆ ಪರಿಹಾರ ಸೂಚಿಸಿದ ಕಾಲ ಅದು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಕಲ್ಕತ್ತಾ, ಪಂಜಾಬ್ ಮತ್ತು ಇತರ ಭಾಗಗಳಲ್ಲಿ ಆಗ ಅಸಂಖ್ಯ ದಂಗೆಗಳು ನಡೆದಿದ್ದವು. ಹಿಂದೂಗಳು ಮತ್ತು ಮುಸ್ಲಿಮರು ಪರಸ್ಪರ ಪಶುಗಳಾಗಿದ್ದರು; ಕೇಡು ಬಗೆದು ಒಬ್ಬರನ್ನೊಬ್ಬರು ಹತ್ತಿಕ್ಕಲು ಪ್ರಯತ್ನಿಸಿದರು. ಇದೇ ಸಮಯದಲ್ಲಿ ನಾನು ಗೋವಾದಲ್ಲಿ ಜನಪರ ಚಳುವಳಿಯನ್ನು ಆರಂಭಿಸಿದ್ದೆ. ಅಲ್ಲಿನ ನನ್ನ ಚಟುವಟಿಕೆಗಳ ಬಗ್ಗೆ ನನ್ನಿಂದ ಯಾವುದೇ ವಿವರವನ್ನು ಕೇಳದೆ ಗಾಂಧೀಜಿಯವರು ನನ್ನನ್ನು ಸಮರ್ಥಿಸಿ ಹೇಳಿಕೆ ನೀಡಿದರು. ಇದರಿಂದಾಗಿ ನನ್ನ ಹೋರಾಟಕ್ಕೆ ಬಹು ದೊಡ್ಡ ಉತ್ತೇಜನ ಸಿಕ್ಕಿತು. ಅವರು ನನಗೆ ಆಮೇಲೆ ತಿಳಿಸಿದ ಪ್ರಕಾರ, ಗೋವಾದಲ್ಲಿ ನನ್ನನ್ನು ಸೆರೆ ಹಿಡಿದ ಸಮಾಚಾರ ಅವರಿಗೆ ಹತ್ತು ಗಂಟೆಗೆ ತಲುಪಿತು ಹಾಗೂ ಅವರು ಹನ್ನೆರಡು ಗಂಟೆಗೆ ನನ್ನನ್ನು ಸೆರೆಹಿಡಿದ ಕ್ರಮವನ್ನು ಖಂಡಿಸುವ ಹಾಗೂ ಗೋವಾ ಚಳವಳಿಯನ್ನು ಸಮರ್ಥಿಸುವ ಹೇಳಿಕೆ ನೀಡಿದ್ದರು. ಮತ್ತೆ ನಾನು ಅವರಿಗೆ ನನ್ನ ಕಾರ್ಯಯೋಜನೆಯ ಬಗ್ಗೆ ಏನೂ ಹೇಳದಿದ್ದರೂ, ತಾವು ತಮ್ಮ ಕರ್ತವ್ಯಪಾಲನೆ ಮಾಡಿದ್ದರೆಂದು ಕೊಂಚ ಆಕ್ಷೇಪ ಮತ್ತು ನೋವಿನೊಂದಿಗೆ ನನಗೆ ಹೇಳಿದರು.

ನಾನು ಗೋವಾದಲ್ಲಿ ಏನು ಮಾಡುವುದು ಸಾಧ್ಯವಿತ್ತೆಂಬುದು ನನಗೇ ಮುಂಚಿತವಾಗಿ ತಿಳಿದಿರಲಿಲ್ಲವೆಂದು ನಾನು ಅವರಿಗೆ ಹೇಳಿದೆ. ನಿಜಕ್ಕೂ ನನಗೆ ಆ ಕೆಲಸದ ಅಂದಾಜು ಇರಲೇ ಇಲ್ಲ. ನಾನು ಅಲ್ಲಿಯ ನನ್ನ ಮಿತ್ರ ಜೂಲಿಯೋ ಮೆನೇಜರ್ ಅವರನ್ನು ಕಾಣಲು ಹೋಗಿದ್ದೆ. ಅವರ ಮನೆಯಲ್ಲಿ ತಂಗಿದ್ದ ನನ್ನನ್ನು ಕಾಣಲು ಮೂರು ಅಥವಾ ನಾಲ್ಕನೆಯ ದಿನ ಹಲವಾರು ಜನರು ಬಂದರು. ಅವರಲ್ಲಿ ವಿದ್ಯಾರ್ಥಿಗಳು, ವ್ಯಾಪಾರಿಗಳು, ಅಧ್ಯಾಪಕರು, ಪೊಲೀಸರು, ಸರಕಾರಿ ಉದ್ಯೋಗಿಗಳೂ ಇದ್ದರು. ಗೋವಾದಲ್ಲಿ ಯಾರಿಗೂ ಯಾವ ನಾಗರಿಕ ಹಕ್ಕುಗಳೂ ಇಲ್ಲವೆಂದು ಅವರೆಲ್ಲರೂ ನನಗೆ ವಿವರಿಸಿದರು. ಪೊಲೀಸರ ಅಪ್ಪಣೆ ಇಲ್ಲದೆ ಒಂದು ಲಗ್ನಪತ್ರಿಕೆಯನ್ನು ಅಚ್ಚು ಹಾಕಿಸುವುದು ಸಹ ಸಾಧ್ಯವಿಲ್ಲವೆಂಬುದು ನನಗೆ ಮನವರಿಕೆಯಾಯಿತು. ಇಂಥ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಗಾಂಧೀಜಿಯವರು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಅದು ಗೋವಾ ಆಂದೋಲನ ಅಥವಾ ನೇಪಾಳ ಹೋರಾಟ ಆಗಿರಬಹುದು. ಅವರು ತಕ್ಷಣವೇ ಇಂಥ ಚಳುವಳಿಗಳನ್ನು ಸಮರ್ಥಿಸಿ ಹೇಳಿಕೆ ನೀಡುತ್ತಿದ್ದರು. ತಾವು ಯಾರನ್ನು ಯೋಗ್ಯರೆಂದು ನಂಬುತ್ತಿದ್ದರೋ ಅವರು ಖಂಡಿತಾ ಒಳ್ಳೆಯ ಕಾರ್ಯದಲ್ಲಿಯೇ ತೊಡಗಿರುತ್ತಾರೆಂದು ಅವರು ಸಹಜವಾಗಿ ಭಾವಿಸುತ್ತಿದ್ದರು. ಅವರು ನನ್ನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಲ್ಲದೆ, ನನ್ನಿಂದ ಒಳ್ಳೆಯ ಕೆಲಸವೇ ನಡೆಯುತ್ತದೆಂಬ ಭರವಸೆಯನ್ನೂ ಇಟ್ಟುಕೊಂಡಿದ್ದರು. ಇದರಿಂದಾಗಿ ನನ್ನ ನೈತಿಕ ಹೊಣೆಗಾರಿಕೆ ಇನ್ನಷ್ಟೂ ಹೆಚ್ಚಾಯಿತು.

ನಾನು ಈ ಸಂದರ್ಭದಲ್ಲಿ ಕಲ್ಕತ್ತಾದಲ್ಲಿರಬೇಕೆಂದು ಅವರು ಪದೇ ಪದೇ ಪ್ರೀತಿಯಿಂದ ಹೇಳಿದಾಗ, ಮೊದಮೊದಲು ನಾನು ಹಿಂಜರಿದೆ. ಹಿಂದೂ-ಮುಸ್ಲಿಂ ಬಂಧುಗಳ ದಂಗೆ-ರಕ್ತಪಾತಗಳ ನಡುವೆ ನಾನೇನೂ ಮಾಡಲಾರೆನೆಂಬ ಅಳುಕು ನನ್ನದಾಗಿತ್ತು. ನನಗೆ ಬೇರೆ ದಾರಿ ಇರಲಿಲ್ಲ ; ಒಂದೆರಡು ದಿನ ಹೀಗೇ ಎಳೆದಾಡಿ, ನಾನು ಅವರಿಗೆ ಹೇಳಿದೆ : "ಆಗಲಿ, ನಾನು ಅಲ್ಲಿಗೆ ಹೋಗುತ್ತೇನೆ".

ಕಲ್ಕತ್ತೆಗೆ ಹೋಗಿ ನಾನು ಅಲ್ಲಿ ಏನು ಮಾಡಬೇಕೆಂದು ನನಗೆ ಗೊತ್ತಿರಲಿಲ್ಲ. ಈ ಬಗ್ಗೆ ನಾನು ಗಾಂಧೀಜಿಯವರನ್ನು ಮೊದಲು ಕೇಳಲೂ ಇಲ್ಲ; ಅವರಾಗಿಯೇ ನನಗೆ ಏನೂ ಹೇಳಲೂ ಇಲ್ಲ. ಕೊನೆಗೆ ನಾನೇ ಅವರನ್ನು ಕೇಳಿದೆ : "ಅಲ್ಲಿ ನಾನೇನು ಮಾಡಬೇಕೆಂದು ನೀವು ಬಯಸುತ್ತೀರಿ?". ನಾನು ಏನು ಮಾಡಬೇಕೆಂಬ ಬಗ್ಗೆ ಅವರೇನೂ ಹೇಳುವುದಿಲ್ಲವೆಂದೂ, ನನಗೆ ಸರಿಯೆಂದು ಕಂಡದ್ದನ್ನು ನಾನು

ಮಾಡಬಹುದೆಂದೂ ಅವರು ಸೂಚಿಸಿದರು. ಅವರ ಹೇಳಿಕೆಯ ಪ್ರಕಾರ- ಮುಖ್ಯ ಸಂಗತಿಯೆಂದರೆ, ನಾನು ಕಲ್ಕತ್ತಾದಲ್ಲಿರಬೇಕೆಂಬುದು. ಕೆಲಕ್ಷಣಗಳ ನಂತರ ಏನನ್ನೋ ಜ್ಞಾಪಿಸಿಕೊಂಡಂತೆ ಅವರೆಂದರು : "ನೀವು ಅಲ್ಲಿರುವ ನಿಮ್ಮ ಹಳೆಯ ಮುಸಲ್ಮಾನ್ ಮಿತ್ರರನ್ನು ಹುಡುಕಿಕೊಂಡು ಅವರ ಮನೆ ಮನೆಗೆ ಹೋಗಿ ಭೇಟಿ ಮಾಡಿರಿ. ನಿಮ್ಮ ಮೈತ್ರಿಯನ್ನು ಮತ್ತೆ ಜೀವಂತಗೊಳಿಸಿರಿ". ಇದು ತೀರ ಸುಲಭ, ಸಣ್ಣ ಹಾಗೂ ಮಾಮೂಲೀ ಕೆಲಸವೆನಿಸಬಹುದು. ಆದರೆ ಅದು ಹಾಗಿರಲಿಲ್ಲ. ಆಗ ಇಡೀ ಕಲ್ಕತ್ತಾ ನಗರ ಎರಡು ಯುದ್ಧಭೂಮಿಗಳೆಂಬಂತೆ ಹಂಚಿಹೋಗಿತ್ತು. ಒಂದು ಮುಸಲ್ಮಾನರದು, ಮತ್ತೊಂದು ಹಿಂದೂಗಳದ್ದು. ಆಗ ಒಬ್ಬ ಹಿಂದೂ ವ್ಯಕ್ತಿಯು ಮುಸ್ಲಿಮರ ಮೊಹಲ್ಲಾದಲ್ಲಿ ಹೋಗುವುದಾಗಲಿ ಒಬ್ಬ ಮುಸಲ್ಮಾನನು ಹಿಂದೂಗಳ ಮೊಹಲ್ಲಾದಲ್ಲಿ ಕಾಲಿರಿಸುವುದಾಗಲಿ ತುಂಬಾ ಕಷ್ಟದ ಕಾರ್ಯ ಆಗಿತ್ತು. ವಾಸ್ತವವಾಗಿ ಇಡೀ ಒಂದು ವರ್ಷ, ಹಿಂದೂ-ಮುಸ್ಲಿಂ ಮೊಹಲ್ಲಾಗಳು ಸೇರುವ ಜಾಗದಲ್ಲಿ ಉದ್ದಕ್ಕೂ ದೊಡ್ಡ ಸಂತೆಯೇ ನೆರೆದಿರುತ್ತಿತ್ತು: ಅವರು ಪರಸ್ಪರ ಹೊಡೆದಾಡುತ್ತಿದ್ದರು; ಅದಕ್ಕಿಂತ ಹೆಚ್ಚಾಗಿ ಅವರೆಲ್ಲ ಕೊಡುಕೊಳ್ಳುವ ವ್ಯವಹಾರದಲ್ಲಿ ಮುಳುಗಿರಲೇಬೇಕಾದ ಅನಿವಾರ್ಯತೆ ಮಹತ್ವದಾಗಿತ್ತು. ಹೊಟ್ಟೆ-ಬಟ್ಟೆಗೆ ಸಂಬಂಧಿಸಿದ ಅಗತ್ಯ ವಸ್ತುಗಳ ವ್ಯವಹಾರ ತಪ್ಪದೆ ನಡೆಯುತ್ತಿತ್ತು.

ಹಿಂದೂಗಳು ಮತ್ತು ಮುಸಲ್ಮಾನರು ತಮ್ಮ ತಮ್ಮ ಮೊಹಲ್ಲಾಗಳಿಂದ ಬಂದು ತುಂಬಿದ ಬುಟ್ಟಿಗಳನ್ನು ಸಂತೆಯಲ್ಲಿಟ್ಟು ಹೋಗುತ್ತಿದ್ದರು. ಅವರ ವೇಳೆಯೂ ನಿಶ್ಚಿತವಾದುದಾಗಿತ್ತು. ಒಂದು ತಂಡ ಬಂದು ಹೋದ ಬಳಿಕ ಮತ್ತೊಂದು ಬರುತ್ತಿತ್ತು. ಆಯಾ ತಂಡದ ಜನರು ತಮ್ಮ ಬುಟ್ಟಿಗಳನ್ನು ತೆಗೆದುಕೊಂಡು ಬೇರೆ ಸಾಮಾನುಗಳನ್ನು ಬಿಟ್ಟು ಹೋಗುತ್ತಿದ್ದರು. ಇದೊಂದು ವಿಚಿತ್ರ ಸನ್ನಿವೇಶವೇ. ಅವರು ಪರಸ್ಪರ ಕತ್ತು ಹಿಸುಕಲು, ಕೊಲ್ಲಲು ಮುಂದಾಗುತ್ತಿದ್ದರೂ ವ್ಯಾಪಾರ-ವ್ಯವಹಾರದಲ್ಲಿ ಮಾತ್ರ ಪ್ರಾಮಾಣಿಕತೆ ಹಾಗೂ ಸತ್ಯನಿಷ್ಠೆಗಳನ್ನು ಪಾಲಿಸುತ್ತಿದ್ದರು; ಸಮಸ್ತ ವ್ಯವಹಾರವೂ ಸುಗಮವಾಗಿತ್ತು.

ಇಂಥ ಗಂಭೀರ ಪರಿಸ್ಥಿತಿಯ ದಿನಗಳು ಅವು. ಕಲ್ಕತ್ತಾದಲ್ಲಿ ನನ್ನ ಹಳೆಯ ಮುಸ್ಲಿಂ ಗೆಳೆಯರು ಅನೇಕರಿದ್ದರು. ನಾನು ಅವರನ್ನು ಪತ್ತೆ ಹಚ್ಚುವ ಪ್ರಯತ್ನವನ್ನು ಆರಂಭಿಸಿದೆ. ಯಾರನ್ನಾದರೂ ನಾನು ಅವರ ಮನೆಗಳಿಗೆ ಕಳಿಸಿದಾಗಲೆಲ್ಲ ಒಂದೇ ರೀತಿಯ ಉತ್ತರ ಬರುತ್ತಿತ್ತು: "ಅವರು ಕಲ್ಕತ್ತಾದಿಂದ ಹೊರಗೆ ಹೋಗಿದ್ದಾರೆ, ಅವರು ಮನೆಯೊಳಗಿಲ್ಲ, ಅವರು ಸ್ವತಃ ಬಂದು ಕಾಣುತ್ತಾರೆ. . . . ." ಇತ್ಯಾದಿ.

ಆದರೆ, ಒಬ್ಬರೂ ಒಂದು ಭೇಟಿಯಾಗುತ್ತಿರಲಿಲ್ಲ. ಐದಾರು ದಿನಗಳವರೆಗೆ ಹೀಗೆಯೆ ನಡೆಯಿತು. ನನಗೆ ತುಂಬಾ ಬೇಸರವಾಯಿತು. ನನ್ನ ಮುಸ್ಲಿಂ ಗೆಳೆಯರನ್ನು ಕಾಣುವುದು ಅಸಾಧ್ಯವಾದಾಗ, ನಾನು ಯಾವ ಪೂರ್ವಾಲೋಚನೆ ಮಾಡದೆ ಹಾಗೂ ಆ ಸ್ನೇಹಿತರಿಗೆ ಪೂರ್ವಸೂಚನೆ ಕೊಡದೆ, ನೇರವಾಗಿ ಅವರಿರುವ ಕಡೆಗೆ ಹೊರಟೆ. ನಾನು ಒಂದು ಮುಸ್ಲಿಂ ಮೊಹಲ್ಲಾದಲ್ಲಿ ಕಾಲಿಟ್ಟಾಗ ಕಂಡ ಆ ಬಗೆಯ ವಾತಾವರಣವನ್ನು ಈ ಮೊದಲು ಎಲ್ಲೂ ಕಂಡಿರಲಿಲ್ಲ; ಅಷ್ಟಲ್ಲದೆ, ನಾನು ಮುಸ್ಲಿಂ ಮೊಹಲ್ಲಾದಿಂದ ಹಿಂದಿರುಗಿದಾಗ ಮೊಹಲ್ಲಾದ ಎಲ್ಲೆಕಟ್ಟಿನ ಬಳಿ ಸುಮಾರು ಇನ್ನೂರು ಮುನ್ನೂರು ಹಿಂದೂಗಳು ಒಟ್ಟಾಗಿ ಸೇರಿದ್ದುದನ್ನು ಕಂಡೆ. ನನಗೆ ಏನಾದರೂ ತೊಂದರೆ ಆಗಿರಬಹುದೆ-ಎನ್ನುವ ಆತಂಕ ಅವರ ಕಣ್ಣುಗಳಲ್ಲಿ ಇತ್ತು.

ನಾನು ಆ ಮುಸ್ಲಿಂ ಬಂಧುಗಳ ಮೊಹಲ್ಲಾದಲ್ಲಿ ಕಾಲಿಟ್ಟಾಗ, ಅಲ್ಲಿಯ ವಾತಾವರಣವೆಲ್ಲ ಬದಲಾಗಿದ್ದಂತೆ ಭಾಸವಾಯಿತು. ಅನೇಕರ ಮುಖಭಾವಗಳನ್ನು ಗಮನಿಸಿದರೆ, ಅವೆಲ್ಲ ಹಿಂಸೆಗಾಗಿ ಹಾತೊರೆಯುತ್ತಿದ್ದವು. ಅದರ ಹಿನ್ನೆಲೆ ನನಗೆ ತಿಳಿದೇ ಇತ್ತು; ಯಾವುದೇ ಒಬ್ಬ ಮುಸಲ್ಮಾನ, ಯಾವುದೇ ಒಂದು ಹಿಂದೂ ಮೊಹಲ್ಲಾಕ್ಕೆ ಹೋದರೆ ಕೂಡ ಇಷ್ಟೇ ಕೋಪತುಂಬಿದ ಮುಖಗಳನ್ನು ಕಾಣ ಬೇಕಾಗುತ್ತಿತ್ತು. ನನಗೂ ಒಳಗೊಳಗೇ ಒಂದು ಬಗೆಯ ಅಳುಕು ಇದ್ದೇ ಇತ್ತು. ಆದರೂ, ಯಾರಾದರೂ ಎದುರು ಬಂದೊಡನೆ ನಾನು ಥಟ್ಟನೆ ಮುಗುಳ್ನಗುತ್ತಿದ್ದೆ. ಹೀಗೇ ಬಹಳ ಹೊತ್ತು ಕಳೆಯಿತು. ತುಂಬಾ ಕೋಪಗೊಂಡ ಮುಖಗಳು ಎದುರು ಬಂದಾಗ, ನಾನು ಯಾರನ್ನು ಕಾಣಬೇಕೆಂದು ಹೊರಟಿದ್ದೆನೋ ಆ ಸ್ನೇಹಿತರ ಮನೆಯ ಬಗ್ಗೆ ಆ ಕೋಪೋದ್ರಿಕ್ತ ವ್ಯಕ್ತಿಯನ್ನೇ ಕೇಳಿಬಿಡುತ್ತಿದ್ದೆ. ನಾನು ಇಷ್ಟು ಕೇಳಿದ್ದರ ಕಾರಣದಿಂದಾಗಿ ಅಲ್ಲಿಯ ವಾತಾವರಣ ಸ್ವಲ್ಪಮಟ್ಟಿಗೆ ತಿಳಿಗೊಳ್ಳುತ್ತಿತ್ತೆಂದು ನಾನು ಖಂಡಿತವಾಗಿ ಹೇಳಬಲ್ಲೆ. ಏನಾದರೇನು, ನಾವೆಲ್ಲರೂ ಮನುಷ್ಯರೇ! ಯಾವೊಬ್ಬ ವ್ಯಕ್ತಿಯನ್ನು ಮುಗುಳುನಗೆಯೊಡನೆ ನೀವು ಮಾತಾಡಿಸಿದರೆ ಅಥವಾ ಸರಳ ಸಾಮಾನ್ಯ ಪ್ರಶ್ನೆಯನ್ನು ಕೇಳಿದರೆ ನಿಮಗೆ ಯೋಗ್ಯ ಹಾಗೂ ಮಾನವೀಯ ಪ್ರತಿಕ್ರಿಯೆಯೇ ಸಿಗುತ್ತದೆ. ಆದರೂ ಇದು ನೂರಕ್ಕೆ ನೂರರಷ್ಟು ಗ್ಯಾರಂಟಿ ಎಂದೇನೂ ನಾನು ಹೇಳಲಾರೆ.

ಒಮ್ಮೊಮ್ಮೆ ನನಗೆನಿಸುತ್ತದೆ: ಮನುಷ್ಯತ್ವವೇ ಇಲ್ಲದಂತಾಗಿರುವ ಈ ಪರಿಸ್ಥಿತಿಯಲ್ಲಿ, ನಾನಿದನ್ನೆಲ್ಲ ಹೇಳಲು ಉಳಿದುಕೊಂಡಿರದಿದ್ದರೇನೇ ಚೆನ್ನಾಗಿರು ತ್ತಿತ್ತೇನೋ ? ಹಾಗೆಯೇ ನಾನು ಮುಂದೆ ಸಾಗಿದೆ. ನನಗೆ ದಾರಿ ತೋರಿಸುವ ಕೆಲವು ವ್ಯಕ್ತಿಗಳೂ ಸಿಗುತ್ತ ಹೋದರು. ನಾನು ಹುಡುಕುತ್ತಿದ್ದ ವ್ಯಕ್ತಿಗಳವರೆಗೆ ನನ್ನನ್ನು

ಕರೆದೊಯ್ಯಬಲ್ಲ ಪುಟ್ಟ ಬಾಲಕನೊಬ್ಬ ನನಗೆ ದೊರಕಿದ. ಆಗ ಕಲ್ಕತ್ತಾದ ಮುಸ್ಲಿಮ್ ವಿದ್ಯಾರ್ಥಿಗಳ ಕೇಂದ್ರವಾಗಿದ್ದ ಒಂದು ಮನೆಗೆ ಆತ ನನ್ನನ್ನು ಕರೆದೊಯ್ದ. ಆ ವಿದ್ಯಾರ್ಥಿಗಳೊಡನೆ ನಾನು ಎರಡು ಗಂಟೆಗಳ ಕಾಲ ಚರ್ಚೆ ಮಾಡಿದೆ- ನಾನು ಹಿಂದೂ ವಿದ್ಯಾರ್ಥಿಗಳೊಡನೆ ಚರ್ಚಿಸುವ ರೀತಿಯಲ್ಲೇ. ಯಾಕೆಂದರೆ, ನಾನು ಯಾವುದೇ ಮನೆಯನ್ನು ಹೊಕ್ಕರೂ ಅಲ್ಲಿನ ಎಲ್ಲ ಎಲ್ಲೆಕಟ್ಟುಗಳೂ ಮಾಯವಾಗಿ ಬಿಡುತ್ತಿದ್ದವು. ನಾನು ನನ್ನಷ್ಟಕ್ಕೇ ಅಲ್ಲಿ ಯಜಮಾನನೆನಿಸುತ್ತಿದ್ದೆ. ಆ ತರುಣ ಮಿತ್ರರು ಭಾರತದ ಇತರ ಯುವಕರಿಗಿಂತ ನನಗೆ ಭಿನ್ನವಾಗಿ ಕಾಣಿಸಲಿಲ್ಲ. ಅವರು ನನಗೆ ನೇರ ಪ್ರಶ್ನೆಗಳನ್ನು ಕೇಳಿದರು : "ಜಿನ್ನಾ ಅವರು 'ಗದ್ದಾರ್' (ಅಂದರೆ ದೇಶದ್ರೋಹಿ) ಅಥವಾ ಮೀರ್ ಜಾಫರ್‌ನಂತಿದ್ದಾರೆಂದು ಹೇಳುವ ಜಯಪ್ರಕಾಶರ ಮಾತಿಗೆ ನಿಮ್ಮ ಸಮ್ಮತಿ ಇದೆಯೇ?". ಇದೊಂದು ಭಾವುಕ ಉತ್ತೇಜನದ ಪ್ರಶ್ನೆಯೆಂಬ ಕಲ್ಪನೆ ನನಗಿತ್ತು. ನಾನು ನೇರವಾಗಿ ಉತ್ತರಿಸಿದೆ: 'ಹೌದು'. ನಾನು ಆ ಶಬ್ದವನ್ನೇನೂ ಬಳಸಲಿಲ್ಲ, ಬಳಸುವ ಇಚ್ಛೆಯೂ ನನಗಿರಲಿಲ್ಲ. ನಾನು ವಿವರವಾಗಿ ಇದನ್ನೆಲ್ಲಾ ತಿಳಿಸಿ ಹೇಳಿದಾಗ, ಕೆಲವು ಹುಡುಗರಿಗೆ ಸಿಟ್ಟು ಬಂದು ಸಿಡಿಮಿಡಿಗೊಂಡರು : "ನೀವು ಹೀಗೆ ತಿಳಿದುಕೊಂಡದ್ದೇ ಆದರೆ ನೀವೂ ಗದ್ದಾರರೇ"-ಎಂದು ನನಗೆ ಹೇಳಿದರು. ನಾನೆಂದೆ-"ಇದನ್ನು ತಿಳಿದುಕೊಳ್ಳಲೆಂದೇ ನಾನಿಲ್ಲಿ ಬಂದಿದ್ದೆ. ನೀವು ಬೇಕಾದರೆ ನನ್ನನ್ನು ಗದ್ದಾರ್ ಎಂದೇ ಭಾವಿಸಬಹುದು". ಆಗ ಆ ಯುವಕರು ಒಂದು ಪರಿಹಾರವನ್ನು ನನ್ನೆದುರಿಗಿಟ್ಟರು : ಒಂದು ವೇಳೆ ನಾವು ಪಾಕಿಸ್ತಾನವನ್ನು ಒಪ್ಪಿಕೊಳ್ಳುವುದಾದರೆ, ಅವರು ಮತ್ತು ನಾವು ಸೇರಿಯೇ ಬಿರ್ಲಾಗಳ ಜೊತೆ ಪರಕೀಯರೊಡನೆ ಕಾದಾಡಬಲ್ಲೆವು ಎಂಬುದು ಆ ಯುವಕರ ಉತ್ಸಾಹದ ಆಲೋಚನೆಯಾಗಿತ್ತು. ಬಹಳಷ್ಟು ಕಾಲ ವಾದ ವಿವಾದ ನಡೆಯಿತು. ಚರ್ಚೆಗೆ ಬಿಸಿಯೇರಿತು; ಏನಾದರೂ ಅದೊಂದು ಸಾಧಾರಣ ಸಂವಾದವೇ ಆಗಿತ್ತು. ತಮಗಿಂತ 10-15 ವರ್ಷ ಹೆಚ್ಚು ವಯಸ್ಸಾದವನಿಗೆ ವಯಸ್ಸಿಗೆ ತಕ್ಕ ಮರ್ಯಾದೆ ಕೊಡುತ್ತಲೇ ಅವರು ಮಾತುಕತೆ ನಡೆಸಿದ್ದರು. ಅವರಲ್ಲೊಬ್ಬ "ನೀವಿಲ್ಲಿ ಬಂದ ಹಾಗೆ ನಮ್ಮ ಜತೆ ಮಾತುಕತೆ ಆಡಲು ನಮ್ಮ ಯೂನಿವರ್ಸಿಟಿ ಪ್ರೊಫೆಸರರು ಯಾಕೆ ಬರುವುದಿಲ್ಲ ?" ಎಂದು ಕೇಳಿದ. ಈ ಮಾತು ಕೇಳಿ ನನಗೆ ಪರಮಾನಂದವೇ ಆಯಿತು. ಆತ ಕೆಲವು ಸ್ಥಳೀಯ ನಾಯಕರ ಹೆಸರುಗಳನ್ನೂ ನೆನಪಿಸಿಕೊಂಡ. ನಾನೆಂದೆ : "ಅದು ನನಗೆ ಗೊತ್ತಿಲ್ಲ. ವಾಸ್ತವವಾಗಿ ನಾನೂ ನಾನಾಗಿಯೇ ಇಲ್ಲಿಗೆ ಬರುತ್ತಿದ್ದೆನೋ ಇಲ್ಲವೋ-ಗಾಂಧೀಜಿಯವರು ಈ ಸೂಚನೆ ನೀಡಿರದಿದ್ದರೆ...." ಇದೇ ಬಗೆಯ ಅನೇಕ ಅನುಭವಗಳು ನನಗೆ ಉಂಟಾದವು...... ಇದೆಲ್ಲಾ ಗಾಂಧೀಜಿಯವರ ಕಥಾಸರಣಿಯ ಒಂದು ಭಾಗವೇ ಆಗಿದೆ ಏಕೆಂದರೆ, ಅವರ

ಸಂಪರ್ಕವಿರದಿದ್ದರೆ ನನಗಿಂಥ ಅನುಭವಗಳೂ ಆಗುತ್ತಿರಲಿಲ್ಲ. ಇದೊಂದು ಸಣ್ಣ ಹಾಗೂ ಸಾಧಾರಣ ಕೆಲಸವಾಗಿತ್ತು. ಆ ಬಗ್ಗೆ ಮೊತ್ತಮೊದಲು ನಾನು ಕೇಳಿದಾಗ, ಇದರ ಗಂಭೀರ ಪರಿಣಾಮಗಳ ಕಲ್ಪನೆ ಕೂಡ ನನಗೆ ಇರಲಿಲ್ಲ. ಇದೇ ಕೆಲಸವನ್ನು ನನ್ನ ಇನ್ನೊಬ್ಬ ಮಿತ್ರನೂ ಮಾಡಲಾರಂಭಿಸಿದ್ದ. ಈ ಕಾರ್ಯಾಚರಣೆಯಲ್ಲಿಯೇ ಆತ ತನ್ನ ಪ್ರಾಣ ಕಳೆದುಕೊಳ್ಳಬೇಕಾಯಿತು. ಹೀಗೆಯೇ ಅನೇಕರು ಪ್ರಾಣ ಬಿಟ್ಟರು. ಇಂಥ ಪ್ರಾಣಹಾನಿಗಳಿಂದ ನಾವೆಷ್ಟು ದುಃಖಿತರಾದರೂ ಇಲ್ಲಿ ಒಂದು ಪ್ರಶ್ನೆಯೇಳುತ್ತದೆ :''ಹಾಗಾದರೆ, ನಮ್ಮ ಜೀವನದ ದೃಷ್ಟಿಕೋನ ಯಾವುದು?''

1947ರ ಆಗಸ್ಟ್ ಹದಿನೈದರಂದು ಎಣೆಯಿಲ್ಲದ ಉತ್ಸಾಹ, ಸಂಭ್ರಮ: ಆ ದಿನ ಹಿಂದೂಗಳು ಮತ್ತು ಮುಸಲ್ಮಾನರು ಪರಸ್ಪರ ಅಪ್ಪಿಕೊಳ್ಳಲಾರಂಭಿಸಿದರು. ಒಂದು ವರ್ಷಕ್ಕಿಂತ ಹಿಂದಿನಿಂದ ಬೆಳೆದು ಬಂದ ವೈಮನಸ್ಯ ಹಾಗೂ ಧರ್ಮೋನ್ಮಾದಗಳು ಸಮಾಪ್ತಗೊಂಡು ಪ್ರತಿಯೊಂದು ಮೊಹಲ್ಲಾ ಕೂಡ ಪ್ರತಿಯೊಬ್ಬರ ಪಾಲಿಗೂ ತೆರೆಯಿತು. ಅದೇ ಕ್ಷಣದಲ್ಲಿ ನಮಗೊಂದು ವಿಚಾರ ಹೊಳೆಯಿತು; ಹಾಗೂ ನಾವು ಇಡೀ ರಾತ್ರಿ ಒಂದು ಮೆರವಣಿಗೆಯ ಏರ್ಪಾಟು ಮಾಡಿದೆವು. ಆ ಮೆರವಣಿಗೆಯು ಹಿಂದಿನ ಎಲ್ಲ ಕಹಿ ಅನುಭವಗಳನ್ನೂ, ಆತಂಕಗಳನ್ನೂ ದೂರ ಮಾಡಿತು.

ದೆಹಲಿಯಲ್ಲಿ, ಒಮ್ಮೆ ಮುಸ್ಲಿಂ ಬಾಲಕನೊಬ್ಬ ನನಗೆ ಪಾಠ ಕಲಿಸಿದ. ನನ್ನ ಜತೆಗಿದ್ದರೆ ಆತ ಸಂಪೂರ್ಣ ಸುರಕ್ಷಿತನಾಗಿರಬಹುದೆಂಬುದು ಆತನ ಸ್ವಾಭಾವಿಕ ತಿಳುವಳಿಕೆಯಾಗಿತ್ತು. ಆದರೆ ಗುಂಪಿನ ಜನ ಏನೆಲ್ಲ ಮಾಡಿಬಿಡಬಹುದೆಂಬುದರ ಕಲ್ಪನೆ ಆ ಎಳೆಯ ಮನಸ್ಸಿಗೆ ಗೊತ್ತಿರಲಿಲ್ಲ. ಒಂದು ಕೋಪೋದ್ರಿಕ್ತ ಗುಂಪಿನ ಎದುರಲ್ಲಿ ನಾನು ಯಾವ ಲೆಕ್ಕ ? ಆ ಹುಡುಗನಿಂದಾಗಿ ನಮ್ಮ ಮೇಲೆ ಯಾವುದೇ ದೊಡ್ಡ ಗಂಡಾಂತರ ಬಂದು ಒದಗಬಹುದೆಂದು ನನಗೆ ಅನ್ನಿಸುತ್ತಲೇ ಇತ್ತು. ಆದರೆ, ಅವನೆದುರು ಹಾಗೆಂದು ಹೇಳುವುದೂ ಸಾಧ್ಯವಿರಲಿಲ್ಲ. ಯಾಕೆಂದರೆ, ಆತನೊಬ್ಬ ಸರಳ ನಡವಳಿಕೆಯ ಬಾಲಕನಾಗಿದ್ದ. ಆ ಕಾಲಕ್ಕೆ ದೆಹಲಿಯಲ್ಲಿ ಒಬ್ಬ ಮುಸಲ್ಮಾನ ಹುಡುಗನ ಸುತ್ತ ಎಷ್ಟೊಂದು ಕೆಂಡಕಾರುವ ಜನಜಂಗುಳಿ ಸೇರಬಹುದೆಂಬ ಅರಿವಿದ್ದರೂ ನನ್ನಿಂದ ಅದನ್ನು ತಡೆಯಲಾಗಲಿಲ್ಲ. ನಾವೊಂದು ಭಯಂಕರ ಸನ್ನಿವೇಶವನ್ನು ಎದುರಿಸಲು ಹೊರಟಿದ್ದೇವೆ ಎಂದು ಅನ್ನಿಸಿದಾಗ ನನ್ನಷ್ಟಕ್ಕೆ ನಾನು ಕೇಳಿಕೊಂಡೆ: ಈಗ ಮಾಡುವುದಾದರೂ ಏನು ? ಏನಾಗುತ್ತದೋ ನೋಡೋಣ, ಎಂದುಕೊಂಡೆ. ಕೊನೆಗೂ ನನ್ನ ಮನಸ್ಸಿನಲ್ಲಿದ್ದ ಭಯ ನಿಜವಾಗಿಯೇ ಬಿಟ್ಟಿತು. ಆ ಬಾಲಕ ಕೆಲವು ಮುಸಲ್ಮಾನ ಮಹಿಳೆಯರಿಗೂ ಮತ್ತು ತಮ್ಮ

ಮನೆಮಠ ಬಿಟ್ಟು ಓಡುತ್ತಿದ್ದ ಜನರಿಗೂ ಧೈರ್ಯದ ಮಾತುಗಳನ್ನು ಹೇಳುತ್ತಿದ್ದ. ಸಿಟ್ಟುಗೊಂಡ ಗುಂಪೊಂದು ನನ್ನ ವಾಹನವನ್ನು ಮುತ್ತಿತು. ಆ ಗುಂಪಿಗೆ ಬೇಕಾಗಿದ್ದುದು ಈ ಹುಡುಗನ ತಲೆ. ಹುಡುಗನ ಬಳಿ ಆಯುಧವಿದ್ದು, ಆತ ಅದನ್ನು ತನ್ನ ಬಟ್ಟೆಗಳಲ್ಲಿ ಅಡಗಿಸಿಟ್ಟಿರಬಹುದೆಂದು ಗುಂಪಿನ ಜನ ಗದ್ದಲವೆಬ್ಬಿಸಿದರು. ನಾನು ದೂರ ನಿಂತು, ಆ ಹುಡುಗನನ್ನು ಜಪ್ತಿ ಮಾಡಲು ಅನುವು ಮಾಡಿಕೊಡಬೇಕೆಂಬುದು ಅವರ ಬೇಡಿಕೆಯಾಗಿತ್ತು. ನಿಜಕ್ಕೂ ಅದೊಂದು ಉದ್ಧಟತನದ ಕ್ರಿಯೆಯಾಗಿತ್ತು. ಅದರ ಪರಿಣಾಮ ಏನಾಗಬಹುದೆಂದು ಹೇಳುವುದೇ ಸಾಧ್ಯವಿರಲಿಲ್ಲ. ನಾನು ವಾಹನದ ಬಾಗಿಲ ಬಳಿ ನಿಂತು, ಗುಂಪನ್ನು ಅಡ್ಡಗಟ್ಟಿದೆ. "ನೀನು ಯಾರು" ಎಂದು ಕೆಲವರು ಕಿರುಚಿದರು. "ಲಾಹೋರಿನ ಘಟನೆ ನಡೆದಾಗ ನೀನು ಎಲ್ಲಿದ್ದೆ?" ಎಂದು ಒಬ್ಬ ಕೂಗಿದ. ನಾನೂ ಕೊಂಚ ಸಿಟ್ಟಿನಿಂದ, ಏರುದನಿಯಲ್ಲೇ ಹೇಳಿದೆ : "ನಾನು ಬಹು ಕಾಲ ಲಾಹೋರ್ ಕೋಟೆಯೊಳಗಿದ್ದೆ. ಬ್ರಿಟಿಷ್ ರಾಜ್ಯದಲ್ಲಿ ಲಾಹೋರ್ ಕೋಟೆಯಲ್ಲಿ ಏನೆಲ್ಲ ನಡೆದಾಗ ನೀವೆಲ್ಲಿದ್ದಿರಿ?"

ಗುಂಪಿನ ಬಹು ಭಾಗ ಶಾಂತವಾಗಿತ್ತು. ಆದರೆ ಅದರಲ್ಲಿ ಸಹಜವಾದ ಶಾಂತಿ ಎಂಬುದು ಇರಲಿಲ್ಲ. ನಾನು ನಿಂತಲ್ಲಿಂದ ದೂರ ಸರಿಯಬೇಕು, ಅವರು ಹುಡುಗನ ಮೈ ಜಪ್ತಿ ಮಾಡಬೇಕು ಎಂಬುದೇ ಗುಂಪಿನ ಆಶಯವಾಗಿತ್ತು. ತಪಾಸಣೆಯ ನೆಪ ಒಡ್ಡಿ ಅವರು ಹುಡುಗನ ಜೊತೆ ಹೇಗೆಲ್ಲ ನಡೆದುಕೊಳ್ಳಬಹುದೆಂಬುದರ ಅರಿವು ನನಗಿತ್ತು. ಆದ್ದರಿಂದ, ನನ್ನ ಮಟ್ಟಿಗೆ, ನಾನು ನಿಂತ ಜಾಗದಿಂದ ಕದಲುವುದು ಸಾಧ್ಯವೇ ಇರಲಿಲ್ಲ. ಕೊನೆಗೆ ಮೂರ್ನಾಲ್ಕು ಜನರು ಮುಂದೆ ಬಂದು ಮೋಟಾರ್ ಬಾಗಿಲಿನಿಂದ ನನ್ನನ್ನು ದೂರಸರಿಸಲು ಪ್ರಯತ್ನಿಸಿದರು. ಸುದೈವದಿಂದ ಈ ಯತ್ನದಲ್ಲಿ ಗುಂಪು ಇಡಿಯಾಗಿ ಕೈಗೂಡಿಸಲೂ ಇಲ್ಲ, ನನ್ನನ್ನು ನೋಯಿಸಲೂ ಇಲ್ಲ. ಪ್ರಯತ್ನಪೂರ್ವಕವಾಗಿ ನನ್ನನ್ನು ಪಕ್ಕಕ್ಕೆ ಎಳೆಯುತ್ತಿದ್ದರು; ನಾನು ಮತ್ತೆ ಅದೇ ಜಾಗಕ್ಕೆ ಬಂದು ನಿಲ್ಲುತ್ತಿದ್ದೆ! ಈ ಎಳೆದಾಟ ನಡೆದೇ ಇತ್ತು. ಅವರು ನನ್ನನ್ನು ಚೆನ್ನಾಗಿ ತದುಕಬಹುದಿತ್ತು; ಆದರೆ, ಒಂದು ಮಾತು ಮಾತ್ರ ನಿಜ, ಗುಂಪು ಎಷ್ಟೇ ದೊಡ್ಡದಾಗಿರಲಿ, ಎಷ್ಟೇ ಸಿಟ್ಟಿನಿಂದ ಕುದಿಯುತ್ತಿರಲಿ, ಪೂರ್ವಯೋಜನೆಯಿಲ್ಲದ ಗುಂಪಿನಲ್ಲಿ ಪುಂಡರ ಸಂಖ್ಯೆ ಕಡಿಮೆಯೇ ಇರುತ್ತದೆ, ಉಳಿದವರು ಉತ್ತೇಜನಗೊಂಡ ಪ್ರೇಕ್ಷಕರಾಗಿರುತ್ತಾರೆ. ಅವರಲ್ಲಿ ಒಬ್ಬ ಒಳ್ಳೆಯವ ಏನಿದ್ದರೂ -ನಾನು ಅಂಥ ಒಳ್ಳೆಯವನೆಂದು ಹೇಳಲಾರೆ-ಆತ ನಿಜಕ್ಕೂ, ಒಬ್ಬಂಟಿಯಾಗಿದ್ದಾಗ ಕೂಡ ಯಾವುದೇ ಬಗೆಯ ಪುಂಡರನ್ನು ಎದುರಿಸುವ ಶಕ್ತಿಯನ್ನು ಪಡೆದಿರುತ್ತಾನೆ. ನನ್ನಂಥವರು ಗಾಂಧೀಜಿಯಿಂದ ಕಲಿತದ್ದು ಇದೇ ಪಾಠ !

ಮೌಂಟ್‌ಬ್ಯಾಟನ್ ಮಾಡಿದ ವಿಭಜನೆಗೆ ಇದೇ ಹಿನ್ನೆಲೆಯಾಗಿತ್ತು. ಆ ಕಾಲದಲ್ಲಿ ಕಾಂಗ್ರೆಸ್‌ನೊಳಗಿನ ಸಮಾಜವಾದಿಗಳನ್ನು ಗಾಂಧೀಜಿ ಕಣ್ಣಲ್ಲಿ ಕಣ್ಣಿಟ್ಟು ನೋಡಲು ಆರಂಭಿಸಿದ್ದರು. ಹೀಗೆ ನಮ್ಮಲ್ಲನೇಕರ ಜೊತೆಗೆ ಸಾಮೂಹಿಕವಾಗಿ ಹಾಗೂ ಒಬ್ಬೊಬ್ಬರ ಜೊತೆಗೆ ಅವರು ಮಾತಾಡಿದಾಗಲೆಲ್ಲ, ನಾವು ಬ್ರಿಟಿಷ್ ಅಧಿಕಾರಿಗಳ ಹಾಗೂ ಅವರ ಕಾರ್ಯಕಾರಿಣಿಯ ವಿರುದ್ಧ ಹೋರಾಡುವ ಬಗ್ಗೆ ಭರವಸೆ ಇಡಬಹುದೋ ಹೇಗೆ ಎಂದು ನಮ್ಮನ್ನೆಲ್ಲ ಗಾಂಧೀಜಿ ಪರೀಕ್ಷೆ ಮಾಡಿ ನೋಡುತ್ತಿದ್ದರು. ಕಾರ್ಯಕಾರಿಣಿಯ ವರಿಷ್ಠರು ಮೌಂಟ್‌ಬ್ಯಾಟನ್‌ರ ದೇಶ ವಿಭಜನೆಯ ಸೂಚನೆಯನ್ನು ಸ್ವೀಕರಿಸಿಬಿಟ್ಟಿದ್ದರೆಂಬುದು ಅವರಿಗೆ ತಿಳಿದೇಬಿಟ್ಟಿತ್ತು. ಆ ಸ್ವೀಕೃತಿಯ ನಂತರವೂ ಅದನ್ನು ವಿರೋಧಿಸುವಲ್ಲಿ ತಮ್ಮೊಡನೆ ಸಹಕರಿಸಬಲ್ಲ ಶಕ್ತಿಕೇಂದ್ರಗಳ ಹುಡುಕಾಟದಲ್ಲಿ ಅವರು ತೊಡಗಿದ್ದರು. ನಮ್ಮ ಬಗ್ಗೆ ಅವರಿಗೆ ಸಂಪೂರ್ಣ ಭರವಸೆ ಮೂಡಲೇ ಇಲ್ಲವೆಂದು ನಾನು ಹೇಳಬಯಸುತ್ತೇನೆ. ಯಾಕೆಂದರೆ ಅವರು ಅಂತ್ಯದಲ್ಲಿ ತಾವೇನೂ ಮಾಡುವ ಸ್ಥಿತಿಯಲ್ಲಿ ಇಲ್ಲವೆಂದೇ ಭಾವಿಸಿದರು. ಮೌಂಟ್‌ಬ್ಯಾಟನರ ಸೂಚನೆಯ ಪರಿಶೀಲನೆಗಾಗಿ ಸೇರಿದ ಕಾರ್ಯಕಾರಿಣಿಯ ಸಭೆಯಲ್ಲಿ ಒಬ್ಬಿಬ್ಬರು ಅಥವಾ ಮೂವರು ಅಷ್ಟಿಷ್ಟು ಮಾತಾಡಿದರು, ಅಷ್ಟೇ. ವಾಸ್ತವದಲ್ಲಿ ಆ ಸಭೆಯಲ್ಲಿ ಮಾತಾಡಿದವರು ಇಬ್ಬರೇ. ಉಳಿದವರೆಲ್ಲ ಸುಮ್ಮನೇ ಕುಳಿತಿದ್ದರು. ಆಟ ಮುಗಿದೇ ಹೋಯಿತೆಂದು ನಾನು ಭಾವಿಸಿದೆ. ಈ ಸಭೆಯಲ್ಲಿ ಗಾಂಧೀಜಿಯವರ ಬಗೆಗೂ ಸಾಕಷ್ಟು ರೋಷ ವ್ಯಕ್ತಗೊಂಡಿತು. ಒಂದು ಹಂತದಲ್ಲಿ ಸರ್ದಾರ್ ಪಟೇಲರು ನನಗೆಂದರು: "ವಿಭಜನೆಯ ನಂತರ ಭಾರತದ ಗತಿಯೇನಾದೀತೆಂದು ಈಗ ಚಿಂತಿಸುವುದೇಕೆ? ಆಗ ಅವರು ಜಿನ್ನಾ ಅವರೊಡನೆ ದೊಣ್ಣೆಯ ಮೂಲಕ ಮಾತಾಡಬಹುದು." ನಾನೆಂದೆ : "ನಾನು ವರ್ಷದುದ್ದಕ್ಕೂ ಖಡ್ಗದ ಭಾಷೆ ಕೇಳುತ್ತಲೇ ಬಂದಿದ್ದೇನೆ (ವರ್ಷದ ಹಿಂದೆ ಸರ್ದಾರ್ ಪಟೇಲರು ಸ್ವತಃ ಇದೇ ಮಾತನ್ನಾಡಿದ್ದರು). ಇನ್ನು ಭವಿಷ್ಯದಲ್ಲಿ ದೊಣ್ಣೆಯ ಮಾತನ್ನೂ ಕೇಳಬಹುದು" ಆಗ ಸರ್ದಾರರು, ತಾವು ಸ್ವಾತಂತ್ರ್ಯಸಂಗ್ರಾಮ ಮಾಡಿದ್ದು ನಮಗಾಗಿ ಎಂದು ಹೇಳಿದರು : "ಕೊನೆಗೂ ನಾವು ಸ್ವತಂತ್ರ ಭಾರತವನ್ನು ಬಿಟ್ಟು ಹೋಗುವುದು ನಿಮಗಾಗಿ; ನೀವು ಅದನ್ನು ಕಟ್ಟಬಲ್ಲಿರೆಂಬ ನಿರೀಕ್ಷೆಯೊಡನೆ" ಎಂದು ಹೇಳಿದರು. ನಾನೆಂದೆ: "ಧನ್ಯವಾದ. ನೀವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ವರಿಷ್ಠ ಸೇನಾಧಿಕಾರಿಯಂತೆ ಹೋರಾಡಿದ್ದರೆ, ನಾವು ಸಾಮಾನ್ಯ ಸಿಪಾಯಿಗಳಂತೆ ಹೋರಾಡಿದ್ದೇವೆ. ಇದರಲ್ಲಿ ಕೊಡು-ಕೊಳ್ಳುವ ಮಾತು ಬರುವುದೆಲ್ಲಿಂದ ? ಯಾಕೆಂದರೆ ಕೆಲವು ಹಿರಿಯರು ಮುಂದಿನ ಪೀಳಿಗೆಯ ಸಲುವಾಗಿಯೇ ಏನಾದರೂ ಸಂಪಾದಿಸಿ ಇಡುತ್ತಾರೆ ಎನ್ನುವ

ಮಾತೇ ಅಷ್ಟು ಉಚಿತವಾದುದಲ್ಲ. ಪ್ರತಿಯೊಂದು ಪೀಳಿಗೆಯೂ ಒಂದಿಲ್ಲೊಂದು ಕಾರ್ಯಸಾಧನೆ ಮಾಡುತ್ತಲೇ ಇರುತ್ತದೆ.''

ಮೌಂಟ್‌ಬ್ಯಾಟನ್‌ರ ಸೂಚನೆಯ ಸಂಬಂಧವಾಗಿ ಚರ್ಚೆ ನಡೆದಾಗ, ಭಾರತ ಇಬ್ಭಾಗ ಮಾಡುವ ಸಿದ್ಧಾಂತವನ್ನು ನಾವು ತಿರಸ್ಕರಿಸಬೇಕೆಂದು ನಿರ್ಧರಿಸಿದೆವು. ಆದರೆ, ನೆಹರೂ ಅವರು ತಮ್ಮ ಜೇಬಿನಿಂದ ತೆಗೆದ ಮೂಲಸೂಚನೆಯಲ್ಲಿ ಆ ವಿಚಾರವೇ ಇರಲಿಲ್ಲ. ಪರಿಣಾಮದಲ್ಲಿ, ರಾಷ್ಟ್ರ ಇಬ್ಭಾಗ ಮಾಡುವ ಸಿದ್ಧಾಂತದ ಸ್ವೀಕೃತಿಯೇ ಅದರಲ್ಲಿ ಅಡಕಗೊಂಡಿತ್ತು. ಅರ್ಥಾತ್ ನಾವು ನಮ್ಮ ಮನಸ್ಸಿನಲ್ಲಿ ಮೂಡಿಸಿಕೊಂಡಿದ್ದ ಭಾರತದ ಚಿತ್ರವು ಸರ್ದಾರರ ಪಾಲಿಗೆ ಕನಸಾಗಿಯೇ ಉಳಿಯಲಿತ್ತು ಹಾಗೂ 'ಭಾರತ ವಿಭಜನೆಯ ಸಿದ್ಧಾಂತ'ವನ್ನು ವಿರೋಧಿಸುವ ನನ್ನ ಸೂಚನೆಗೆ ಗಾಂಧೀಜಿಯವರ ಸಮರ್ಥನೆ ದೊರೆತಿದ್ದರೂ ಆ ಮೂಲಸೂಚನೆಯಲ್ಲಿ ಅದರ ಮಾತೇ ಇರಲಿಲ್ಲ. ಮೊದಲೇನೋ ಆ ಮಾತಿಗೆ ಮನ್ನಣೆ ದೊರೆತಿತ್ತು. ಆದ್ದರಿಂದ ನಾನು ನನ್ನ ಸೂಚನೆಯನ್ನು ಪುನರುಚ್ಚರಿಸಿದೆ; ಆಗ ಗಾಂಧೀಜಿಯವರು ಮತ್ತೆ ಅದಕ್ಕೆ ಸಮರ್ಥನೆ ನೀಡಿದರು. ಇದನ್ನು ಗಮನಿಸಿದ ನೆಹರೂ ಸಿಡಿಮಿಡಿಗೊಂಡು ಗುಡುಗಿದರು : ''ನಾವು ಜಿನ್ನಾ ಅವರ ಮಾತಿಗೆ ಅಪಾರ್ಥ ಹಚ್ಚಿ, ವಿನಾಕಾರಣ ಚರ್ಚೆಯ ಗೊಂದಲವೆಬ್ಬಿಸುತ್ತಿದ್ದೇವೆ. ಜನರೆಲ್ಲ ಪರಸ್ಪರ ಕತ್ತಿಗೆ ಕೈ ಹಾಕುತ್ತಿರುವಾಗ ಕೇವಲ 'ಭಾಯೀ-ಭಾಯೀ' (ಪರಸ್ಪರ ಸಹೋದರರು) ಎಂದರೇನರ್ಥ ?''. ಆಗ ನಾನು ಆಶ್ಚರ್ಯಚಕಿತನಾಗಿ ಹೇಳಿದೆ: ''ಅಮೆರಿಕಾದ ಆಂತರಿಕ ಯುದ್ಧದಲ್ಲಿ ಮೂರ್‍ನಾಲ್ಕು ಲಕ್ಷ ಜನರು ಪ್ರಾಣ ನೀಗಿದ್ದರೂ ಉಳಿದವರು ಅಣ್ಣ-ತಮ್ಮಂದಿರಂತೆಯೇ ಇದ್ದರು. ಹಿಂದೂ ಮತ್ತು ಮುಸಲ್ಮಾನರು ಇಂದು ಪಶುಗಳಂತೆ ಪರಸ್ಪರ ಕಾದಾಡಿದರೂ ಅವರ ಬಾಂಧವ್ಯವೇನೂ ನಶಿಸಿ ಹೋಗಲಾರದು.'' ಗಾಂಧೀಜಿ ಈ ಎಲ್ಲ ಮಾತುಗಳನ್ನೂ ಸೂಕ್ಷ್ಮವಾಗಿ ಆಲಿಸುತ್ತಿದ್ದರು. ನಡುನಡುವೆ ಮುಗುಳುನಕ್ಕು ತಮ್ಮ ಮಾತನ್ನೂ ಸೇರಿಸುತ್ತಿದ್ದರು. ನನ್ನ ಮಾತಿನ ತಾತ್ಪರ್ಯವಿಷ್ಟೆ : ಗಾಂಧೀಜಿ ದೇಶದ ವಿಭಜನೆಗೆ ಸಂಪೂರ್ಣ ವಿರೋಧಿಗಳಾಗಿದ್ದರು.

ಆಗ ಗಾಂಧೀಜಿಯವರಿಂದ ಮಹತ್ವದ ಸೂಚನೆ ಬಂತು: ಮೌಂಟ್‌ಬ್ಯಾಟನ್ ಹಾಗೂ ಕಾರ್ಯಕಾರಿಣಿಯ ನಡುವೆ ನಡೆದ ರಾಜಿಯ ಬಗ್ಗೆ ತಮಗೆ ಯಾವ ಪೂರ್ವ ಸೂಚನೆಯೂ ಇರಲಿಲ್ಲವೆಂದು ಅವರು ಹೇಳಿದರು. ಅಲ್ಲಿದ್ದ ನಾಯಕರು ಆ ಮಾತನ್ನೊಪ್ಪದೆ, ಮೊದಲೇನು ನಡೆದಿತ್ತೆಂದು ವಿವರವಾಗಿ ಅಲ್ಲದಿದ್ದರೂ

ಸಂಕ್ಷಿಪ್ತದಲ್ಲಿ ಗಾಂಧೀಜಿಯವರ ಗಮನಕ್ಕೆ ತರಲಾಗಿತ್ತೆಂದೇ ನಿವೇದಿಸಿದರು. ಆದರೆ, ಭಾರತದ ವಿಭಜನೆ ಮಾಡುವುದೇ ಬ್ರಿಟನ್‌ನ ತೀರ್ಮಾನವಾಗಿತ್ತೆಂಬುದರ ಬಗ್ಗೆ ಗಾಂಧೀಜಿಯವರಿಗೆ ಸ್ಪಷ್ಟವಾಗಿ ಯಾರೂ ತಿಳಿಸಿರಲಿಲ್ಲವೆಂಬ ಮಾತು ಈಗ ಸ್ಪಷ್ಟವಾಯಿತು. ಆಗ ಗಾಂಧೀಜಿಯವರೆಂದರು : "ನೀವು ಮಾತುಕೊಟ್ಟು ಬಿಟ್ಟಿರುವಿರೆಂದ ಬಳಿಕ, ವಿಭಜನೆಯ ಸಿದ್ಧಾಂತವನ್ನೂ ಒಪ್ಪಿಕೊಂಡಿರುವಿರೆಂದೇ ಅರ್ಥವಾಗುತ್ತದೆ. ನೀವು ನಿಮ್ಮ ಮಾತು ಮುರಿಯಬೇಕೆಂದು ನಾನು ಹೇಳಲಾರೆ. ಆದರೆ, ನೀವು ನನ್ನ ಒಂದು ಸೂಚನೆಯ ಬಗ್ಗೆ ದಯವಿಟ್ಟು ಆಲೋಚಿಸಬೇಕಾಗಿ ವಿನಂತಿ: ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ವಿಭಜನೆಯ ಸಿದ್ಧಾಂತವನ್ನು ಒಪ್ಪಿಕೊಂಡಿದೆ. ಆದರೂ ಅದನ್ನು ಅನುಷ್ಠಾನದಲ್ಲಿ ತರುವಲ್ಲಿ ಬ್ರಿಟಿಷ್ ಅಧಿಕಾರಿಗಳ ಹಸ್ತಕ್ಷೇಪವಿರಕೂಡದೆಂದು ಬ್ರಿಟಿಷ್ ವೈಸ್‌ರಾಯ್‌ರಿಗೆ ಬರೆದು ತಿಳಿಸಿರಿ. ಈ ಸಿದ್ಧಾಂತವನ್ನು ಒಪ್ಪಿಕೊಂಡ ಕೂಡಲೇ ಇಂಗ್ಲಿಷ್ ಅಧಿಕಾರಿಗಳು ಹೊರಟು ಹೋಗಲಿ. ಕಾಂಗ್ರೆಸ್ ಪಕ್ಷ ಹಾಗೂ ಮುಸ್ಲಿಮ್ ಲೀಗ್ ಪ್ರತಿನಿಧಿಗಳು ಒತ್ತಟ್ಟಿಗೆ ಸೇರಿ ಈ ಸಿದ್ಧಾಂತಕ್ಕೆ ಕ್ರಿಯಾರೂಪ ನೀಡಲಿ". ಇದು ಬಲು ಮಹತ್ವದ ಹಾಗೂ ತುಂಬ ಸೂಕ್ತವಾದ ಸೂಚನೆಯಾಗಿತ್ತು. ಇದು ಬಹುಶಃ ಒಬ್ಬ ರಾಜಕಾರಣಿಯು ಸಂತನಾಗುವ ಅಥವಾ ಸಂತನೊಬ್ಬ ರಾಜಕಾರಣಿಯಾಗುವ ಇಚ್ಛೆಯ ಪರಿಣಾಮವಾಗಿತ್ತೋ ? ನನಗೆ ಗೊತ್ತಿಲ್ಲ ! ಅದರಲ್ಲಿ ಯಾವ ವಿಶೇಷ ವ್ಯತ್ಯಾಸವೂ ಆಗುವುದಿಲ್ಲ. ಆದರೂ ಇದೊಂದು ಬಲು ಮಹತ್ವದ ಸೂಚನೆಯೆಂಬುದರಲ್ಲಿ ಅನುಮಾನವಿಲ್ಲ. ಆದರೆ, ಕಾರ್ಯಕಾರಿ ಸಮಿತಿಯವರು ಅದಕ್ಕೆ ನೀಡಿದ ಮಹತ್ವ ಎಷ್ಟರ ಮಟ್ಟಿಗಿತ್ತೆಂದರೆ ಎಲ್ಲರೂ ಸ್ತಬ್ಧರಾಗಿ ಕುಳಿತುಬಿಟ್ಟಿದ್ದರು.

ಕೇವಲ ಒಬ್ಬ ವ್ಯಕ್ತಿ ಮಾತ್ರ ಈ ಬಗ್ಗೆ ತುಂಬ ಕಟುವಾಗಿ ಮಾತಾಡಿದರು: ಇದರರ್ಥವೆಂದರೆ ನಾವು ಸೂಚನೆಯನ್ನು ತಿರಸ್ಕರಿಸಿಬಿಡುವುದೆಂದು. ಯಾಕೆಂದರೆ ಬ್ರಿಟಿಷ್ ಅಧಿಕಾರಿಗಳ ಅನುಪಸ್ಥಿತಿಯಲ್ಲಿ ಮುಸ್ಲಿಮ್ ಲೀಗ್ ಈ ಸಿದ್ಧಾಂತದ ಕಾರ್ಯಾಚರಣೆಯ ಬಗ್ಗೆ ಕಾಂಗ್ರೆಸ್ ಪಕ್ಷದೊಡನೆ ಏನು ಮಾಡೀತು ? ಆಗ ಗಾಂಧೀಜಿಯವರಾದರೂ ಏನು ಮಾಡಿಯಾರು ? ಅವರ ಸೂಚನೆ ಬಿದ್ದು ಹೋಯಿತು. ಒಂದು ವೇಳೆ ಅದನ್ನು ಒಪ್ಪಿಕೊಂಡಿದ್ದರೆ, ಪ್ರಾಯಶಃ ಮೌಂಟ್‌ಬ್ಯಾಟನ್‌ರ ಸೂಚನೆಯ ಸ್ವೀಕೃತಿಗೆ ವಚನಬದ್ಧರಾಗಿದ್ದ ಕಾರ್ಯಕಾರಿ ಸಮಿತಿಯ ನಾಯಕರ ಮಾನವೂ ಉಳಿದಂತಾಗುತ್ತಿತ್ತು. ಅವರೆನ್ನಬಹುದಿತ್ತು : "ನಮಗೆ ಈ ಸಿದ್ಧಾಂತ ಒಪ್ಪಿಗೆಯಿದೆ. ಆದರೆ ಅದರ ಕಾರ್ಯಾಚರಣೆಯನ್ನು ಮಾತ್ರ ಮುಸ್ಲಿಮ್ ಲೀಗ್ ಹಾಗೂ ನಮ್ಮ ಪ್ರತಿನಿಧಿಗಳು ಸೇರಿ ಮಾಡುತ್ತಾರೆ". ಆದರಿಂದ ಪ್ರಾಯಶಃ ಸಿದ್ಧಾಂತವೂ ನಿರರ್ಥಕವೆನಿಸಿಬಿಡಬಹುದಿತ್ತು. ಯಾಕೆಂದರೆ ಕಾಂಗ್ರೆಸ್ ಜೊತೆಗೆ ಪ್ರತ್ಯಕ್ಷ ಮಾತುಕತೆಗಳಿಗಾಗಿ ಮುಸ್ಲಿಮ್ ಲೀಗ್ ಮುಂಬರುವುದೇ ದುಸ್ತರವಿತ್ತು.

ಹಾಗಾಗಿದ್ದರೆ ಭಾರತದ ಭಾಗ್ಯ ಬೇರೆಯೇ ಆಗಿರುತ್ತಿತ್ತೇನೋ? ಆದರೆ ಹಾಗಾಗುವಂತಿರಲಿಲ್ಲ. ಗಾಂಧೀಜಿಯವರಿಗೆ ಮುಸ್ಲಿಮ್ ಲೀಗ್, ತಮ್ಮ ಕಾರ್ಯಕಾರಿ ಸಮಿತಿಯ ಹಾಗೂ ಬ್ರಿಟಿಷ್ ಅಧಿಕಾರಿಗಳು ಈ ಎಲ್ಲರ ಜೊತೆಗೆ ಏಕಕಾಲಕ್ಕೆ ತಲೆಗೊಡಲು ಯಾವ ಆಧಾರವೂ ಸಿಗದಂತಾಗಿತ್ತು. ನಾವು ಆ ಕೆಲಸಕ್ಕಾಗಿ ಯೋಗ್ಯರೆಂದೆನಿಸಲಿಲ್ಲ.

ಆ ದಿನಗಳಲ್ಲಿ ನನ್ನ ಹಾಗೂ ಗಾಂಧೀಜಿಯವರ ನಡುವೆ ಸುದೀರ್ಘ ಮಾತುಕತೆಗಳು ನಡೆಯುತ್ತಿದ್ದವು: ಒಂದು ದಿನ ಬೆಳಿಗ್ಗೆ ಸಿಕ್ಕಾಗ, ಅಂದು ಸಾಯಂಕಾಲ ಮತ್ತೆ ಭೇಟಿಯಾಗುವಂತೆ ಸೂಚಿಸಿದರು. ನನ್ನೊಡನೆ ಬಲು ಮಹತ್ವದ ಮಾತುಗಳನ್ನಾಡುವುದಿದೆಯೆಂದೂ ಸೂಚಿಸಿದರು. ಸಾಯಂಕಾಲದ ಅವರ ಪ್ರಾರ್ಥನೆ ಮುಗಿದ ನಂತರ ನಾನು ಹೋದೆ. ಅವರ ವಾಯುವಿಹಾರದಲ್ಲಿ ನಾನೂ ಸೇರಿದೆ. ಅವರು ಅಲ್ಲಿದ್ದ ಇತರರಿಗೆ ದೂರ ಹೋಗುವಂತೆ ಸೂಚಿಸಿ, ನನ್ನ ಹೆಗಲ ಮೇಲೆ ಕೈಯಿಟ್ಟು ಮಾತನಾಡಲಾರಂಭಿಸಿದರು. ಅವರ ಜೊತೆಯಲ್ಲಿ ಹಾಗೆ ಅಷ್ಟೊಂದು ಆತ್ಮೀಯವಾಗಿ ನಾನು ನಡೆದುಹೋಗುವೆನೆಂದು ತಿಳಿದಿರಲಿಲ್ಲ. ಅವರು ಕಳೆದ ಹದಿಮೂರು ವರ್ಷಗಳಿಂದಲೂ ನನ್ನನ್ನು ಬಲ್ಲವರಾಗಿದ್ದರು. ಈ ಅವಧಿಯಲ್ಲಿ ನಾವೆಂದೂ ಖಾಸಗಿ ಜೀವನದ ವಿಷಯಗಳನ್ನು ಮಾತಾಡಿರಲೇ ಇಲ್ಲ. ಆದ್ದರಿಂದ, ಅವರು ನನ್ನ ಸಿಗರೇಟ್, ಚಹಾ ಹಾಗೂ ಕಾಫಿ ಸೇವನೆಯ ಕುರಿತು ಮಾತಾಡ ಲಾರಂಭಿಸಿದಾಗ ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ, ಹದಿಮೂರು ವರ್ಷಗಳ ಅವಧಿಯಲ್ಲಿ ಅನೇಕ ಬಾರಿ ಅವರೊಡನೆ ಸುದೀರ್ಘ ಮಾತುಕತೆ ನಡೆಸುವ ಅವಕಾಶಗಳು ಒದಗಿದ್ದವು. ಆದರೆ, ಎಂದಾದರೂ ಒಂದು ದಿನ ಮಹಾತ್ಮರು ನನ್ನ ಸಿಗರೇಟ್ ಸೇದುವಂಥ ವ್ಯಕ್ತಿಗತ ವಿಷಯದ ಬಗೆಗೂ ಮಾತಾಡಬಹುದೆಂದು ನಾನೆಂದೂ ಭಾವಿಸಿರಲಿಲ್ಲ. ನಾನು ಆಗ ಸಿಗರೇಟ್ ಸೇದುತ್ತಿದ್ದೆ. ನಾನು ಬಹಳ ಸಿಗರೇಟ್ ಸೇದುತ್ತೇನೆ, ಹೆಚ್ಚಿಗೆ ಚಹಾ-ಕಾಫಿ ಕುಡಿಯುತ್ತೇನೆ ಎಂದು ಅವರೆಂದರು. ಸಿಗರೇಟ್, ಚಹಾ-ಕಾಫಿಗಳ ಸೇವನೆಯಿಂದ ಯಾವುದೇ ವ್ಯಕ್ತಿಯ ಆರೋಗ್ಯಕ್ಕೆ ಎಷ್ಟು ಹಾನಿ ಉಂಟಾಗುತ್ತದೆಂಬುದನ್ನೂ ಸವಿಸ್ತಾರವಾಗಿ ವಿವರಿಸಿದರು. ಅಷ್ಟೇ ಅಲ್ಲ, ಸಿಗರೇಟ್, ಚಹಾ-ಕಾಫಿಗಳ ಚಟಗಳಿಂದ ಮುಕ್ತರಾಗುವ ಜಪಾನೀ ಹಾಗೂ ಚೀನೀ ಪದ್ಧತಿಗಳನ್ನೂ ವಿವರಿಸಿದರು; ಮುಂದುವರೆದು, ಈ ವಿಷಯವೂ ಸಮಾಜವಾದಕ್ಕೆ ನೇರವಾಗಿ ಸಂಬಂಧಿಸಿದ್ದೇ ಎಂದು ನುಡಿದರು. ಒಬ್ಬ ಸಮಾಜವಾದಿಯಾಗಿ, ನಾನು ಜನತೆಯೊಡನೆ ಒಂದಾಗಿರಬೇಕೆಂದು ಅವರು ಸೂಚಿಸಿದರು. ಜನತಾ ಪ್ರತಿನಿಧಿ ಜನತೆಯೊಡನೆ ಒಂದಾಗಿರಲು ಇದೇ ಆಧಾರ. ಭಾರತದಲ್ಲಿ ಸಿಗರೇಟು ಸೇದುವ ಚೌಚಿತ್ಯವೇನೆಂದು ಸಿದ್ಧಪಡಿಸಲು ಯಾವ ಆಧಾರವಿದೆಯೆಂದೂ ಅವರು ನನ್ನನ್ನು ಪ್ರಶ್ನಿಸಿದರು.

ನನ್ನ ಜೀವನದಲ್ಲಿ ಇಂಥ ಸಂಕೋಚದ ಕ್ಷಣಗಳು ಬಂದದ್ದೇ ಕಡಿಮೆ. ಅವರ ಕೈ ನನ್ನ ಹೆಗಲ ಮೇಲಿತ್ತು; ನಾನು ಓಡಲು ಬಯಸಿದ್ದರೂ ಓಡುವುದು ಸಾಧ್ಯ ವಿರಲಿಲ್ಲ. ಆದ್ದರಿಂದ, ಸುಮ್ಮನೇ ಅವರ ಮಾತಿಗೆ ಕಿವಿಗೊಡದೆ ಗತ್ಯಂತರವಿರಲಿಲ್ಲ. ನಾನು ಮೌನವಾಗಿದ್ದೆ. ಆದರೆ, ಅವರು ಸುಮ್ಮನಿರಲಿಲ್ಲ. ಯಾಕೆಂದರೆ ಅವರು ಸಾಧಾರಣ ಅರ್ಥದಲ್ಲಿ ಮಹಾವ್ಯಕ್ತಿಯೆನಿಸಿಕೊಂಡವರಲ್ಲ. ಅಂತೆಯೇ ನಾನು, ನನ್ನ ಮಟ್ಟಿಗೆ ಅಸಭ್ಯ ಆಚರಣೆಯೆನಿಸಿದರೂ, ಮೌನದಿಂದಿರುವುದು ಅನಿವಾರ್ಯವಾಯಿತು. ಆಗ, ಅವರು ತಮ್ಮ ಮಾತಿನ ದಿಕ್ಕನ್ನೇ ಬದಲಾಯಿಸಿ ಒಬ್ಬ ಜನತಾ ಪ್ರತಿನಿಧಿ ಹೇಗಿರಬೇಕೆಂಬ ವಿಷಯವನ್ನು ಎತ್ತಿದರು. ನನಗೆ ಏನಾದರೂ ಹೇಳುವುದಿದೆಯೇ ಎಂದು ಅವರು ಮತ್ತೊಮ್ಮೆ ನನ್ನನ್ನು ಕೇಳಿದರು. ಆಗಲೂ ನಾನು ಸುಮ್ಮನಿದ್ದೆ. ಹಾಗಾದರೆ ತಾವೂ ಏನೂ ಮಾತಾಡದೇ ಸುಮ್ಮನಿರಬೇಕೇ ಎಂದು ಅವರು ಕೇಳಿದರು. ಅವರು ಮಾತಾಡುತ್ತಿರುವಂತೆ ನಾನು ಕೇಳಿಕೊಂಡೆ. "ಸಾರ್ವಜನಿಕ ಹಾಗೂ ವೈಯಕ್ತಿಕ ಜೀವನಗಳ ಮಧ್ಯೆ ಬಹಳ ಅಂತರವಿದೆಯೆಂದು ನೀವು ಭಾವಿಸುತ್ತೀರಾ?" ಎಂದು ಕೇಳಿದರು. ಹಾಗೆಯೇ "ನಿನ್ನ ಸಾರ್ವಜನಿಕ ಜೀವನದೊಡನೆ ಮಾತ್ರ ಸಂಬಂಧವಿರಿಸಿಕೊಳ್ಳಬೇಕೆಂದು ನಿನಗೆ ಅನ್ನಿಸುತ್ತದೆಯೇ?" ಎಂದೂ ಪ್ರಶ್ನಿಸಿದರು. ನಾನು ಅಂತಹ ಅಂತರವನ್ನು ಒಪು ್ಪವುದಿಲ್ಲವೆಂದೂ, ಇತರರ ಇಂಥ ಮಾತುಗಳಿಗೆ ಹಸ್ತಕ್ಷೇಪವೆಂದು ಆರೋಪಿಸ ಬಹುದಾದರೂ, ಗಾಂಧೀಜಿಯವರ ವಿಷಯದಲ್ಲಿ ಮಾತ್ರ ಹಾಗೆ ಹೇಳಲಾರೆನೆಂದೂ ಸ್ಪಷ್ಟಪಡಿಸಿ ಆಕಾಶದ ಕೆಳಗಿರುವ ಯಾವುದೇ ವಿಷಯವನ್ನು ಕುರಿತು ನನಗೆ ಏನನ್ನಾದರೂ ಹೇಳುವ ಸ್ವಾತಂತ್ರ್ಯ ಅವರಿಗಿದೆಯೆಂದೂ ನಾನು ತಿಳಿಸಿದೆ.

ಅವರು ತಮ್ಮ ಮಾತು ಮುಂದುವರಿಸಿ, ಸುಮಾರು ಐವತ್ತೈದು ನಿಮಿಷಗಳವರೆಗೆ ಮಾತಾಡುತ್ತಲೇ ಇದ್ದರು. ಆಗ ನಾನು ಆ ಹಿರಿಯ ಚೈತನ್ಯಕ್ಕೆ ಸ್ಪಷ್ಟವಾಗಿ ಹೇಳಲೇಬೇಕಾಯಿತು: "ನಾನಿಂದು ನಿಮಗೆ ಯಾವ ಉತ್ತರವನ್ನೂ ಕೊಡಲಾರೆ, ಆದರೆ ಶೀಘ್ರವೇ ಉತ್ತರಿಸುತ್ತೇನೆ". ಗಾಂಧೀಜಿಯವರ ತರ್ಕಸರಣಿಯೆಲ್ಲ ಸರಿಯಾಗಿತ್ತೋ ಇಲ್ಲವೋ ನಾನು ಹೇಳಲಾರೆ. ಜನತಾ ಪ್ರತಿನಿಧಿಯಾಗುವ ಈ ಬಗೆ ಎಷ್ಟರಮಟ್ಟಿಗೆ ಸರಿಯಾದುದೆಂಬುದು ನನಗಿಂದಿಗೂ ಮನವರಿಕೆಯಾಗಿಲ್ಲ.

ಆದರೆ, ಒಂದು ಮಾತನ್ನು ಅವರು ಇಷ್ಟು ಒತ್ತು ಕೊಟ್ಟು ಹೇಳಿದ ಬಳಿಕ, ಎರಡು ತಿಂಗಳ ನಂತರ ಹೋಗಿ ಅವರನ್ನು ಕಂಡೆ ; ನಾನು ಸಿಗರೇಟು ಸೇದುವುದನ್ನು ಬಿಟ್ಟಿರುವ ಬಗ್ಗೆ ತಿಳಿಸಿದೆ. ಆ ದಿನ ಸಿಗರೇಟು ಸೇದುವುದನ್ನು ಬಿಟ್ಟ ನಾನು, ಗಾಂಧೀಜಿಯವರು ಬದುಕಿರುವ ತನಕ ಅದನ್ನು ಮುಟ್ಟಿರಲೇ ಇಲ್ಲ. ಇಂಥ

ಯಾವೊಬ್ಬ ಮಹತ್ವದ ವ್ಯಕ್ತಿಯ ಬಗ್ಗೆ ಹಾಗೂ ಅವರ ವಿಚಾರ ಸರಣಿಯ ಬಗ್ಗೆ ಮಾತಾಡುವುದು ಬಲು ದುಃಖದ ಸಂಗತಿ. ನಿಜ ಹೇಳಬೇಕೆಂದರೆ, ಅವರ ಕೊಲೆಯಾದಾಗ ನನಗೆನಿಸಿದ್ದು ಅವರಿಷ್ಟು ಬೇಗ ಹೊರಟುಹೋಗಿ ನನ್ನ ಹಾಗೂ ಈ ರಾಷ್ಟ್ರದ ಜನತೆಯನ್ನು ನಡುನೀರಿನಲ್ಲೇ ಕೈ ಬಿಟ್ಟಂತಾಗಿದೆ. ಮತ್ತೆ, ಇಂಥ ವ್ಯಕ್ತಿಯ ಗೌರವಕ್ಕಾಗಿ ಸಿಗರೇಟ್ ಬಿಡುವುದರಲ್ಲಿ ಏನರ್ಥವಿದೆ ? ಇಂಥ ಕೆಲ ಹುಂಬ ಆಲೋಚನೆಗಳು ನನ್ನ ಮನಸ್ಸಿನಲ್ಲಿ ಸುಳಿದವು. ಒಬ್ಬ ಮಹಾವ್ಯಕ್ತಿ ಯಾರಿಂದಲಾದರೂ, ಯಾವುದಾದರೂ ಕೆಲಸ ಮಾಡಿಸಬೇಕಾದರೆ ಅದಕ್ಕೆ ತಕ್ಕ ತರ್ಕವೊಂದನ್ನು ಮಂಡಿಸುತ್ತಾನೆ. ಆ ತರ್ಕಸರಣಿಯ ಬಗ್ಗೆ ಒಪ್ಪಿಗೆಯಿರಲಿ, ಬಿಡಲಿ, ಆ ಮಹಾವ್ಯಕ್ತಿಯ ವಿಶ್ವಾಸ, ಪ್ರಭಾವ ಮಾತ್ರದಿಂದ ಒಂದು ಬಗೆಯ ಸ್ವಯಂಶಿಸ್ತು ಆರಂಭ ಗೊಳ್ಳುವುದುಂಟು. ಇದರ ಒಂದಿಲ್ಲೊಂದು ರೀತಿಯ ಸಂಬಂಧ ಮಾನವತೆಯ ಪುನರ್ನಿರ್ಮಾಣದೊಡನೆ ಬಂದೇ ಬರುತ್ತದೆ.

ಕೊಂಚ ಸಂಕೋಚದಿಂದಲೇ ಒಪ್ಪಿಕೊಳ್ಳಬೇಕಾದ ಮಾತೆಂದರೆ ಈ ಕಾಲದ ನಾವೆಲ್ಲ ಕೇವಲ ಒಳ್ಳೆಯ ವಿಚಾರಗಳಿಂದ ಪ್ರೇರಿತರಾಗಿಯೇ ಒಳ್ಳೆಯ ಕೆಲಸ ಮಾಡುತ್ತೇವೆ ಎಂದೇನಿಲ್ಲ. ಸಾಮಾನ್ಯವಾಗಿ ಯಾವುದಾದರೂ ಪ್ರಮುಖ ಪ್ರಭಾವದಿಂದಾಗಿ ಅಂಥ ಕೆಲಸ ಮಾಡುತ್ತೇವೆ. ಯಾರದೊ ವಿಶ್ವಾಸ, ಯಾರದೊ ಅನುಕರಣಕ್ಕಾಗಿಯೂ ಮಾಡುತ್ತೇವೆ. ಬಡದೇಶದ ಜನತಾ ಪ್ರತಿನಿಧಿತ್ವ ಪ್ರಾಪ್ತವಾಗಬೇಕಾದರೆ ಸಿಗರೇಟ್ ಸೇದುವುದನ್ನು ಬಿಡುವುದು ಅಗತ್ಯವೆಂದು ಆಗ ನನಗೆನಿಸಿರಲಿಲ್ಲ. ಆದರೆ, ಗಾಂಧೀಜಿ ಬಹುಕಾಲ ಬದುಕಿದ್ದರೆ ಮಾತ್ರ ಅವರ ಪ್ರಭಾವದಿಂದಾಗಿ ನಾನು ಸಂಪೂರ್ಣವಾಗಿ ಸಿಗರೇಟ್ ಸೇದುವುದನ್ನು ಬಿಟ್ಟಿರುತ್ತಿದ್ದೆ.

ಗಾಂಧೀಜಿಯವರ ನಿಧನದಿಂದಾಗಿ ನನ್ನ ಮೇಲಾದ ಒಳ್ಳೆಯದೋ ಕೆಟ್ಟದೋ ಪರಿಣಾಮವೆಂದರೆ ನಾನಿನ್ನು ನನ್ನ ಮನಸ್ಸಿಗೆ ಬಂದಂತೆ ಏನನ್ನು ಮಾಡುವುದಕ್ಕೂ ಸ್ವತಂತ್ರ ಎಂಬ ಭಾವನೆ ಮೂಡಿಸಿಕೊಂಡದ್ದು. ಅವರು ಜೀವಿಸಿದ್ದಾಗ ನನ್ನ ಮೇಲೊಂದು ಪ್ರೀತಿಯ ಅಂಕುಶವಿದೆಯೆಂದೇ ನನಗೆ ಸದಾ ಕಾಲ ಭಾಸವಾಗುತ್ತಿತ್ತು. ಆದರೆ ಯಾರೂ ಬಹಳಷ್ಟು ಅವಿವೇಕದ ಮಾತುಗಳನ್ನಾಡುವುದು ಸರಿಯಲ್ಲ. ನನ್ನಲ್ಲಿ ಅದೇ ಭಾವನೆಯಿತ್ತು. ನಾನು ಗಾಂಧೀಜಿಯವರಿಗೆ ಹೆದರಿಕೊಂಡೇ ಇರುತ್ತಿದ್ದೆನೆಂದು ಇದರರ್ಥವಲ್ಲ. ಒಮ್ಮೊಮ್ಮೆ ಅವರೊಡನೆ ಮಾತಾಡುತ್ತಿರುವಾಗ ತುಂಬ ಬಿರುಸಾದ ಮಾತುಗಳನ್ನೂ ನಾನು ಸಹಜವಾಗಿ ಬಳಸುತ್ತಿದ್ದೆ. ಹಾಗೆ ಮಾತಾಡುವಾಗ ನನಗೆ ಎಳ್ಳಷ್ಟೂ ಭಯವೆನಿಸುತ್ತಿರಲಿಲ್ಲ. ಅದರ ಒಂದೇ ಮುಖ್ಯ

ಕಾರಣವೆಂದರೆ ಅವರು ಬದುಕಿರುವವರೆಗೆ ನಾನು ಬಹಳ ಕೆಟ್ಟವನೆಂದೆನಿಸಿ ಕೊಳ್ಳಬಾರದೆಂಬ ಬಯಕೆ.[1]

ಗಾಂಧೀಜಿಯವರೊಡನೆ ಮಾತಾಡುವಾಗ ನನ್ನ ಬಾಯಿಂದ ಬಿರುಸು ಮಾತುಗಳೂ ಹೊರಡುತ್ತಿದ್ದವೆಂದು ಹೇಳಿದೆನಷ್ಟೆ. ಅಂಥ ಒಂದು ವಿಚಿತ್ರ ಘಟನೆಯನ್ನಿಲ್ಲಿ ನಿರೂಪಿಸುತ್ತೇನೆ. ಗುಪ್ತಚರ ವಿಭಾಗದವರು ಆಂಗ್ ಸಾಂಗ್‌ರಂತೆ ಭಾರತ ಸರಕಾರವನ್ನು ಉರುಳಿಸುವ ಸನ್ನಾಹದಲ್ಲಿ ನಾನಿದ್ದೇನೆಂಬ ಕಥೆಯನ್ನು ಸೃಷ್ಟಿಸಿದರು. ಆಂಗ್ ಸಾಂಗ್ ಬರ್ಮಾದ ಪ್ರಧಾನಿಯಾಗಿದ್ದರು. ಅವರ ಹಾಗೂ ಅವರ ಅನೇಕ ಮಂತ್ರಿಗಳ ಹತ್ಯೆ ಆಗ ನಡೆದಿತ್ತು. ಇದೇ "ಆಂಗ್ ಸಾಂಗ್ ಪದ್ಧತಿ"ಯಿಂದ ನಾನು ಭೂಗತ ಆಂದೋಲನದ ಮೂಲಕ ಭಾರತ ಸರಕಾರದ ಮಂತ್ರಿಗಳ ಹತ್ಯೆ ನಡೆಸುವ ವಿಚಾರದಲ್ಲಿರುವುದಾಗಿ, ನಾಗಪುರದ ಗುಪ್ತಚರ ಪೋಲಿಸರು ವರದಿ ಮಾಡಿದ್ದರು. ನಾನೊಂದು ದಿನ ಗಾಂಧೀಜಿಯವರ ಕೋಣೆಯನ್ನು ಪ್ರವೇಶಿಸುತ್ತಿರುವಾಗಲೇ ಅಲ್ಲಿಂದ ಹೊರಬೀಳುತ್ತಲಿದ್ದ ಸರ್ದಾರ ಪಟೇಲರು ತಡೆದು ನಿಂತು, "ನೀನು ನಮ್ಮನ್ನೆಲ್ಲ ಮುಗಿಸಿಬಿಡುವುದು ಯಾವಾಗ ?" ಎಂದು ನನ್ನನ್ನು ಕೇಳಿದರು. ಗುಪ್ತಚರ ವಿಭಾಗದ ವರದಿಯ ಸತ್ಯಾಸತ್ಯತೆಯ ಬಗೆಗೆ ವಿಚಾರ ಮಾಡದೆ, ಗೃಹ ಮಂತ್ರಿಗಳು ಆ ಮಾತು ಹೇಳಿದ್ದರು. ನಾನು ಚೇಷ್ಟೆಯ ದನಿಯಲ್ಲೇ, "ನಮಗಿನ್ನೂ ಅಷ್ಟು ಶಕ್ತಿಸಂಚಯ ಆಗಿಲ್ಲ; ಆದರೆ, ನಿಮ್ಮನ್ನು ಪಕ್ಕಕ್ಕೆ ತಳ್ಳಿ ನಿಮಗಿಂತ ಅಯೋಗ್ಯರು ನಿಮ್ಮ ಸ್ಥಾನಗಳಿಗೆ ಬರದಂತೆ ನೋಡಿಕೊಳ್ಳಲು ನನ್ನ ಸರ್ವಶಕ್ತಿಯನ್ನೂ ಬಳಸುತ್ತಿದ್ದೇನೆ" ಎಂದು ಹೇಳಿದೆ. ಯೋಗಾಯೋಗವೆಂಬಂತೆ, ಒಂದೆರಡು ದಿನಗಳಲ್ಲೇ ಇದೇ ಮಾತನ್ನು ಮತ್ತೆ ಬಲು ಗಂಭೀರವಾಗಿ ವಿವರಿಸುವ

---

1. ನಾನಿಲ್ಲಿ ಆಮೇಲಿನ ಮಾತು ಸೇರಿಸುತ್ತೇನೆ : ಗಾಂಧೀಜಿಯವರು ತೀರಿಕೊಂಡು ಇಂದಿಗೆ ಹನ್ನೆರಡು ವರ್ಷಗಳಾಗುತ್ತಿದೆ. ಹಾಗೂ ನಾನು ಸಿಗರೇಟ್ ಬಿಟ್ಟು ಐದು ವರ್ಷಗಳಾಗಿ ಹೋಗಿವೆ. ಆದ್ದರಿಂದ ಅದೇ ಚಟಕ್ಕೆ ಮತ್ತೆ ಶರಣಾಗುವ ಸಾಧ್ಯತೆ ತೀರಾ ಕಡಿಮೆ. ಜನತಾ ಪ್ರತಿನಿಧಿಯಾಗಿ ನನ್ನ ಧೋರಣೆಯೇನೆಂದು ನಾನು ವಿವರಿಸಬಯಸುವುದಿಲ್ಲ. ಒಮ್ಮೆ ಗಾಂಧೀಜಿ ನಾನೊಬ್ಬ ಧೈರ್ಯಶಾಲಿಯೆಂದು ಪ್ರಶಂಸಿಸಿದರು. ಆದರೆ ಇತರ ಅನೇಕರೂ ಧೈರ್ಯಶಾಲಿಗಳಾಗಿರುತ್ತಾರಲ್ಲ? ಹಾಗೆಯೇ ನಗುತ್ತ, ಹುಲಿಯೂ ಧೈರ್ಯಶಾಲಿ ಎನಿಸಿಕೊಂಡಿರುತ್ತದೆ ಎಂದರು. ಅದೇ ರೀತಿಯಲ್ಲಿ ನನಗಿಂತಲೂ ಅಧಿಕ ವಿದ್ವಾಂಸ ಜನರಿದ್ದಾರೆ, ವಕೀಲರೂ ವಿದ್ವಾಂಸರಾಗಿರುತ್ತಾರೆ. ಆದರೆ ನನ್ನಲ್ಲಿರುವ ನಡತೆ-ನಡೆವಳಿಕೆ, ಆ ನಡವಳಿಕೆಯನ್ನು ಒಂದೇ ರೀತಿಯಲ್ಲಿ ಕಾಪಾಡಿಕೊಂಡು ಬರುವ ಸಾಮರ್ಥ್ಯ ಬೇರೆಯವರಲ್ಲಿ ಸಿಗಲಾರವು ಎಂದೂ ನುಡಿದರು. ಒಮ್ಮೊಮ್ಮೆ ಗಾಂಧೀಜಿಯವರು ಜನರ ಗುಣ ವಿಶೇಷಗಳನ್ನು ಗುರುತಿಸುವಲ್ಲಿ ತಪ್ಪಿಬಿಡುತ್ತಿದ್ದರು. ನನಗೆನಿಸುವ ಮಟ್ಟಿಗೆ ನನ್ನ ಪ್ರತಿಯಾಗಿ ಅಷ್ಟೊಂದು ಸ್ನೇಹಾದರವಿರದ ಕಾರಣ, ಅವರು ನನ್ನ ಬಗ್ಗೆ ತಪ್ಪು ಕಲ್ಪನೆ ಮಾಡಿಕೊಂಡಿರಲೂ ಬಹುದು. ಆದರೆ ಅವರೆಂದುದು ಸತ್ಯವೇ ಆಗಿದ್ದರೆ ನನಗಂತೂ ಸಂತೋಷವೇ. ಧೈರ್ಯಶಾಲಿಯಾಗಿರಲಿ, ಬಿಡಲಿ; ಯೋಗ್ಯತೆ ಹಾಗೂ ಜ್ಞಾನವಿರಲಿ, ಬಿಡಲಿ, ನಡೆವಳಿಕೆಯನ್ನು ಒಂದೇ ರೀತಿಯಲ್ಲಿ ಕಾಪಾಡಿಕೊಂಡು ಹೋಗುವುದು ಒಂದು ದೊಡ್ಡ ಮಾನವೀಯ ಗುಣವೇ ಆಗಿದೆ. (1960, ಅಕ್ಟೋಬರ್.)

ಸನ್ನಿವೇಶ ಬಂತು. ನನ್ನ ಮಾತು ಕೇಳಿ, ಗಾಂಧೀಜಿಯವರು ಗುಪ್ತಚರ ವಿಭಾಗದ ವರದಿಯ ವಿಷಯವನ್ನು ನನಗೆ ತಿಳಿಸಿದರು. ''ನೀವು ಅಂಥ ಆಲೋಚನೆ ಮಾಡಿದ್ದು ನಿಜವೇ ?'' ಎಂದು ಅವರು ನನ್ನನ್ನು ಕೇಳಿದರು: ಬ್ರಿಟಿಷ್ ಆಡಳಿತದ ಕಾಲದಲ್ಲೂ ಸಾರಿಗೆ-ಸಾಗಾಣಿಕೆ ನಿಲ್ಲಿಸುವ, ಸುಡುವ, ಬುಡಮೇಲು ಮಾಡುವ, ಸಾರ್ವಜನಿಕ ಆಸ್ತಿ ಪಾಸ್ತಿಗಳನ್ನು ನಾಶಗೊಳಿಸುವ ಹಾಗೂ ಜನರ ಪ್ರಾಣಾಪಾಯಕ್ಕೆ ಕಾರಣವಾಗುವ ಯಾವುದೇ ವಿನಾಶಕಾರಿ ಚಟುವಟಿಕೆಗಳಿಂದ ನಾನು ಹರಿದಾರಿ ದೂರವಿದ್ದ ಸಂಗತಿಯನ್ನು ಅವರಿಗೆ ನೆನಪಿಸಿಕೊಟ್ಟೆ. 1942-43ರ ಅವಧಿಯಲ್ಲಿ ಬ್ರಿಟಿಷರ ವಿರುದ್ಧ ತೀವ್ರ ಸಂಘರ್ಷಕ್ಕೆ ಇಳಿದಾಗಲೂ ಇಂಥ ವಿನಾಶಕಾರಿ ಕೆಲಸಗಳಿಗೆ ನಾನು ಕೈ ಹಾಕಿರಲಿಲ್ಲ.

ಗಾಂಧೀಜಿಯವರಿಗೆ ಈ ಎಲ್ಲ ಸಂಗತಿಗಳನ್ನು ವಿವರಿಸುವಾಗ, ನಾನು ಸಾಕಷ್ಟು ಬಿರುಸು ಮಾತುಗಳನ್ನೇ ಬಳಸಿದ್ದೆ. ಸದ್ಯದ ಸರಕಾರ ಅಯೋಗ್ಯ, ಪ್ರಭಾವಹೀನ, ಅವಿವೇಕಿ ಹಾಗೂ ತರ್ಕಹೀನ ಜನರಿಂದ ತುಂಬಿದೆಯೆಂದು ನಾನು ಕೂಗಾಡಿದೆ. ನನಗಂತೂ ಈ ಸರಕಾರದಿಂದ ಸಂಪೂರ್ಣ ಭ್ರಮನಿರಸನವಾಗಿತ್ತು. ಗಾಂಧೀಜಿ ನಗುತ್ತ ''ಸರಿ, ಇವು ನಿಮ್ಮ ವಿಚಾರಗಳು'' ಎಂದರಲ್ಲದೆ, ನಾನು ಗೃಹಮಂತ್ರಿಗಳಿಗೊಂದು ಪತ್ರ ಬರೆದು, ಅವರ ಸರಕಾರ ಉರುಳಿಸುವ ವಿಚಾರವೇನೂ ನನಗಿಲ್ಲ ಎಂದು ತಿಳಿಸಿಬಿಡಬೇಕೆಂದೂ ಸೂಚಿಸಿದರು. ನಾನಿಂಥ ಪತ್ರವನ್ನು ಬರೆಯಲಾರೆನೆಂದೂ, ಯಾಕೆಂದರೆ ಹಾಗೆ ಮಾಡುವುದು ನನಗೆ ಅವಮಾನಕರವೆಂದೂ, ನಾನು ಅವರಿಗೆ ಸ್ಪಷ್ಟಪಡಿಸಿದೆ. ಅಂಥ ಪತ್ರವನ್ನು ನಾನು ಯಾಕಾದರೂ ಬರೆಯಬೇಕು? ಅವರುತಮ್ಮ ಮನೆಯಲ್ಲಿರುವವರು; ನಾನು ನನ್ನ ಮನೆಯಲ್ಲಿ. ಅವರಿಗೆ ಇಂಥ ವರದಿ ಬಂದಿದ್ದರೆ, ಅದರ ಸತ್ಯಾಸತ್ಯತೆಯ ಬಗ್ಗೆ ಅವರೇ ನನಗೆ ಬರೆದು ಕೇಳಬೇಕು. ಗಾಂಧೀಜಿ ಒಬ್ಬ ಅದ್ಭುತ ವ್ಯಕ್ತಿ. ಆಗಿಂದಾಗ ಸಮಸ್ಯೆಗಳಿಗೆ ಪರಿಹಾರ ಸೂಚಿಸಬಲ್ಲವರು. ಗೃಹಮಂತ್ರಿಗಳಿಗಲ್ಲವಾದರೆ ತಮಗಾದರೂ ಅಂಥ ಒಂದು ಪತ್ರ ಬರೆಯಬಹುದಲ್ಲ ಎಂದು ನನಗೆ ಸೂಚಿಸಿದರು. ಕಾಂಗ್ರೆಸ್ ಸರಕಾರ ಅಯೋಗ್ಯ, ಭ್ರಷ್ಟ ಹಾಗೂ ವಿವೇಕರಹಿತವೆಂಬುದನ್ನು ಒಪ್ಪಿಕೊಳ್ಳುತ್ತ, ಪ್ರಜಾಸತ್ತಾತ್ಮಕ ಕ್ರಮದಿಂದ ಅದನ್ನು ಬದಲಾಯಿಸಬೇಕೆಂದೂ ಅಭಿಪ್ರಾಯಪಟ್ಟರು. ಈ ಪತ್ರವು ಈಗಲೂ ಗೃಹ ಶಾಖೆಯ ಫೈಲುಗಳಲ್ಲಿ, ನನ್ನ ದೂರದರ್ಶಿತ್ವದ ಮಾದರಿಯೆಂಬಂತೆ, ಬಿದ್ದಿರಬಹುದು.

ಗಾಂಧೀಜಿಯವರ ಎದುರು ಮಾತಾಡಲು ಬೇಕಾದಷ್ಟು ಸ್ವಾತಂತ್ರ್ಯವಿರುತ್ತಿತ್ತು. ಯಾವ ಸಂಕೋಚವಿಲ್ಲದ, ಯಾವುದೇ ಬಗೆಯ ಅಂಜಿಕೆಯಿಲ್ಲದ ಸಂಪೂರ್ಣ ಸ್ವಾತಂತ್ರ್ಯ ಅದು. ಇದಕ್ಕಿಂತ ವಿಶಾಲವಾದ ತುಂಬು ಮನಸ್ಸಿನ ಮತ್ತೊಬ್ಬ ವ್ಯಕ್ತಿ

ನನಗೆ ಗೊತ್ತಿಲ್ಲ. ಇತರರೊಡನೆ ಮಾತಾಡುವಾಗ ನಾನು ತುಂಬ ಎಚ್ಚರಿಕೆಯಿಂದಿರುತ್ತಿದ್ದೆ. ಆದರೆ, ಗಾಂಧೀಜಿಯವರೊಡನೆ ಮುಕ್ತವಾಗಿ ಮಾತಾಡುತ್ತಿದ್ದೆ. ಯಾಕೆಂದರೆ, ಅವರು ನನ್ನೊಳಗಿದ್ದುದೆಲ್ಲವೂ ಬಯಲಿಗೆ ಬರುವಂತೆ ಮಾಡುತ್ತಿದ್ದರು. ನನ್ನ ಸ್ಪಷ್ಟ ಹಾಗೂ ತೀಕ್ಷ್ಣ ಮಾತುಗಳೇ ನನ್ನ ಆಸ್ತಿಯೆನಿಸಿತ್ತು. ಅದು ಒಳ್ಳೆಯದಿರಲಿ, ಕೆಟ್ಟದ್ದಾಗಿರಲಿ. ನನ್ನ ನಡೆ-ನುಡಿಗಳೆಲ್ಲ ಭಯರಹಿತ ವಾಗಿರುತ್ತಿದ್ದವು. ಯಾಕೆಂದರೆ, ಅವರು ಭಾರತದ ರಕ್ಷಕರಾಗಿದ್ದುಕೊಂಡು ನಮ್ಮೆಲ್ಲ ಚಟುವಟಿಕೆಗಳ ಮೇಲೆ ಸದಾ ನಿಗಾ ಇಡುತ್ತಿದ್ದರು. ಒಂದು ವೇಳೆ ಜಗತ್ತಿನ ಪ್ರತಿ ರಾಷ್ಟ್ರಕ್ಕೂ ಇಂಥವನೊಬ್ಬ ರಕ್ಷಕ ದೊರಕಿದ್ದರೆ ! ಇಷ್ಟು ಯೋಗ್ಯತೆಯ ರಕ್ಷಕರು ಸಿಗುವುದೇ ಕಷ್ಟ: ಯಾಕೆಂದರೆ, ಇಂಥವರು ಹುಟ್ಟಿ ಬರುವುದೇ ಅನೇಕ ಶತಮಾನಗಳಿಗೊಮ್ಮೆ ಮಾತ್ರ ! ಎಲ್ಲರ ಗೌರವಕ್ಕೆ ಪಾತ್ರನಾಗಿ, ತನ್ನ ಜನರ ಕೆಲಸ ಕಾರ್ಯಗಳಲ್ಲಿ ಅಂಕುಶವಾಗಿ ನಿಲ್ಲಬಲ್ಲ ರಕ್ಷಕನು ವಿರಳರಲ್ಲಿ ವಿರಳನೇ ಸರಿ !

ಒಮ್ಮೆ ಗಾಂಧೀಜಿ ನನಗೊಂದು ಪ್ರಶ್ನೆ ಕೇಳಿದರು : "ನೀನು ದೇವರಲ್ಲಿ ನಂಬಿಕೆಯಿಟ್ಟಿದ್ದೀಯ?" ನಿಜ ಹೇಳಬೇಕೆಂದರೆ, ಇಂಥ ಪ್ರಶ್ನೆಗಳ ಕಾಲ ಮೀರಿ ಹೋಗಿತ್ತು. ಯಾಕೆಂದರೆ ನಾನು ಅನೇಕ ವರ್ಷಗಳಿಂದ ಗಾಂಧೀಜಿಯವರನ್ನು ಬಲ್ಲವನಾಗಿದ್ದೆ. ಆ ಮೊದಲೆಂದೂ ಅವರು ಇಂಥ ಪ್ರಶ್ನೆಯನ್ನು ಕೇಳಿರಲಿಲ್ಲ, ನಾನು ಅವರಿಗೆ ಕೇಳಬೇಕೆಂದುಕೊಂಡಿದ್ದ ಅನೇಕ ಪ್ರಶ್ನೆಗಳನ್ನು ನಾನೂ ಕೇಳಲಿಲ್ಲ. ಯಾಕೆಂದರೆ ಅವರು ಸದಾಕಾಲ ಜೀವಿಸಿರುತ್ತಾರೆಂದು ನಾನು ಮೂರ್ಖನಂತೆ ಭಾವಿಸಿಕೊಂಡಿದ್ದೆ ! ನಾನು ಯಾವುದೇ ಪ್ರಶ್ನೆ ಕೇಳಬಹುದಿತ್ತು ಎಂದೇನಲ್ಲ. ಯಾಕೆಂದರೆ ನನ್ನ ಪರಿಚಯದ ಹುಡುಗಿಯೊಬ್ಬಳ ಹೆಗಲಮೇಲೆ ಕೈಯಿಡಬಹುದೇ? ಬೇಡವೇ? ಎಂಬಂಥ ಕ್ಷುಲ್ಲಕ ಪ್ರಶ್ನೆಗಳ ಬಗ್ಗೆ ಗಾಂಧೀಜಿಯವರ ಮಾರ್ಗದರ್ಶನದ ಅವಶ್ಯಕತೆ ನನಗೆಂದೂ ನನಗೆಂದೂ ಭಾಸವಾಗಲಿಲ್ಲ. ಇಂಥ ವಿಷಯಗಳ ಬಗ್ಗೆ ಅವರ ಅಭಿಪ್ರಾಯ ಕೇಳುತ್ತ ಕುಳಿತುಕೊಳ್ಳುವ ವ್ಯಕ್ತಿ ನಾನಲ್ಲ. ಒಂದು ವೇಳೆ ಮಾಡುವುದು ಉಚಿತವೆನಿಸಿದರೆ ನಾನು ಅಗತ್ಯವಾಗಿ ಹಾಗೆ ಮಾಡುತ್ತಿದ್ದೆ. ಇರಲಿ, ಗಾಂಧೀಜಿ ನನ್ನನ್ನು ಕೇಳಿದ ಪ್ರಶ್ನೆ: "ನೀವು ದೇವರ ಮೇಲೆ ವಿಶ್ವಾಸವಿಡುವಿರಾ?" ಅದಕ್ಕೆ ನಾನು ಕೊಟ್ಟ ಉತ್ತರ : "ಇಲ್ಲ !"

"ನೀನು ದೇವರಲ್ಲಿ ವಿಶ್ವಾಸವಿಲ್ಲದವನಾಗಿದ್ದರೆ, ನೀನೆಂದಾದರೂ ಒಳ್ಳೆಯ ಸತ್ಯಾಗ್ರಹಿಯಾಗಬಲ್ಲೆಯಾ?"-ಎಂದು ಗಾಂಧೀಜಿಯವರು ಶಂಕೆಯಿಂದ ಪ್ರಶ್ನಿಸಿದರು. ಮರುಕ್ಷಣವೇ ಅವರು, "ಯಾರಿಗೆ ಗೊತ್ತು, ದೇವರನ್ನು ನಂಬದವರೂ ನಾಳೆ ತಮ್ಮದೇ ಆದ ರೀತಿಯಲ್ಲಿ ಸತ್ಯಾಗ್ರಹ ಕೈಗೊಳ್ಳಲೂಬಹುದು" ಎಂದು ಹೇಳಿದರು.

ಆ ಪ್ರಶ್ನೆಯನ್ನು ಅವರು ಅಲ್ಲಿಯೇ ಬಿಟ್ಟುಬಿಟ್ಟರು. ಮತ್ತೆಂದೂ ಅದನ್ನೆತ್ತಲಿಲ್ಲ. ಇದು ಸಣ್ಣದಾದರೂ ನಿರ್ಣಾಯಕ ಸ್ವೀಕೃತಿಯಾಗಿತ್ತು. ಪ್ರತಿಯೊಬ್ಬರದೂ ತಮ್ಮದೇ ಆದ ವಿಧಾನವಿರುತ್ತದೆಂದು ಯಾರಿಗೆ ತಾನೇ ಗೊತ್ತಿಲ್ಲ ! ನಾನು ಮಾತ್ರ ಸ್ಪಷ್ಟವಾಗಿಯೇ ಹೇಳಿದ್ದೆ: ನಾನು ದೇವರನ್ನು ನಂಬುವವನಲ್ಲ. ದೇವರನ್ನು ನಂಬುವವರಿಗಿಂತ ನಾನು ಶ್ರೇಷ್ಠನೆಂದು ತಿಳಿದುಕೊಳ್ಳುವಷ್ಟು ಭ್ರಮೆಯೂ ನನಗಿಲ್ಲ. ಪ್ರತಿಯೊಬ್ಬರದೂ ಒಂದೊಂದು ವಿಧಾನ. ದೇವರನ್ನು ನಂಬಿರುವ ಸಾಧಾರಣ ಜನರನ್ನೂ ನಾನು ಕಂಡಿದ್ದೇನೆ. ಅಂಥವರು ದೇವಸ್ಥಾನ, ಮಸೀದಿ, ಚರ್ಚುಗಳಿಗೆ ಹೋಗಿ ಶಾಂತಿ ಪಡೆಯುವುದುಂಟು. ಅವರಿಗೆ ನಾನೆಂದೂ ಅಡ್ಡಿಮಾಡುವವನೂ ಅಲ್ಲ. ಯಾಕೆಂದರೆ ಹಾಗೆ ಮಾಡುವುದರಿಂದ ಅವರ ಮುಖಗಳ ಮೇಲೆ ಮೂಡುವ ಶಾಂತಿಯನ್ನು ಪ್ರಾಯಶಃ ಬೇರಾವ ರೀತಿಯಿಂದಲೂ ನಾನು ಅವರಿಗೆ ಕೊಡಲಾರೆ. ಪರಿಸ್ಥಿತಿ ಹೀಗಿರುವಾಗ ಅವರನ್ನು ತಡೆಯಲು ನಾನು ಯಾರು ?

ನಾನು ದೇವರಲ್ಲಿ ನಂಬಿಕೆಯಿಲ್ಲದವನೇನೋ ನಿಜ. ಆದರೆ ಎಷ್ಟೋ ಕಲಾತ್ಮಕ ಕಲ್ಪನೆಗಳು ನನ್ನ ಮನಮಿಡಿಯುತ್ತವೆ. ಉದಾ : ಶಿಲುಬೆಯ ಮೇಲಿರುವ ಯೇಸುವಿನ ಕಲ್ಪನೆಯು ಲಕ್ಷಗಟ್ಟಲೆ, ಕೋಟಿಗಟ್ಟಲೆ ಕ್ರಿಶ್ಚಿಯನ್‌ರಂತೆಯೇ ನನ್ನ ಮನವನ್ನೂ ಸೆಳೆಯುತ್ತದೆ. ಹ್ಯಾಮ್ಲೆಟ್ ಹಾಗೂ ಜೂಲಿಯೆಟ್‌ರು ನನ್ನ ಮನ ಮಿಡಿಯ ಬಹುದಾದರೆ ಹುಸೇನ್ ಮತ್ತು ಏಸು ನನ್ನ ಮನ ಸೆಳೆಯಬಾರದೇಕೆ ? ಅದರಂತೆಯೇ ರಾಮ, ಕೃಷ್ಣ ಮತ್ತು ಶಿವನ ಕಲ್ಪನೆಯೂ ನನಗೆ ಆಕರ್ಷಣೀಯವೆನಿಸುತ್ತವೆ; ಆ ಶಿವನಂತೂ ಎಲ್ಲರಿಗಿಂತ ಹೆಚ್ಚಿಗೆ ! ಔಚಿತ್ಯಪೂರ್ಣ ಕೆಲಸಗಳನ್ನು ಮಾಡಿದವರ ಚಮತ್ಕಾರಗಳ ಬಗ್ಗೆ ನಿನ್ನೆ ತಾನೆ ಒಬ್ಬರು ವಿಚಾರಿಸಿದರು. ಅವರ ಯಾವ ಕೆಲಸಕ್ಕೂ ಇನ್ನೊಬ್ಬರ ಸಮರ್ಥನೆ ಬೇಕಿಲ್ಲ.

ದೇವರಲ್ಲಿ ನಂಬಿಕೆಯಿರಲಿ ಬಿಡಲಿ, ಇಂಥ ಕಲಾಪೂರ್ಣ ಕಲ್ಪನೆಗಳು ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಿಯೇ ತೀರುತ್ತವೆ.

ಕಲ್ಕತ್ತಾದಲ್ಲಿ ಹಿಂದೂ ಮತ್ತು ಮುಸ್ಲಿಮರ ನಡುವೆ ದಂಗೆಗಳು ಆದಾಗ, ಗಾಂಧೀಜಿಯವರು ಉಪವಾಸ ಕೈಕೊಂಡ ಸಂದರ್ಭದ ಬಗೆಗೂ ನಿವೇದಿಸ ಬಯಸುತ್ತೇನೆ: ಭಾರತವು ಸ್ವತಂತ್ರವಾಗಿತ್ತು. ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಿತ್ತು. ಒಂದು ಮಾತು ಸ್ಪಷ್ಟವಾಗಿದೆ. ಅದೆಂದರೆ, ಗಾಂಧೀಜಿಯವರ ಮನೆಯು ಬಂಗಾಳ ಸರಕಾರದ ಗುಪ್ತಚರ ಕೇಂದ್ರಕ್ಕಿಂತಲೂ ದೊಡ್ಡ ವಾರ್ತಾಕೇಂದ್ರದಂತಿತ್ತು. ಒಂದು ಸಲ ಬಂಗಾಳದ ಮುಖ್ಯಮಂತ್ರಿಗಳು ದಂಗೆಯ ಬಗ್ಗೆ ಬಲು ಹುರುಪಿನಿಂದ ಗಾಂಧೀಜಿಯವರಿಗೆ ವಿವರಿಸಲು ಆರಂಭಿಸಿದ್ದರು. ಆದರೆ, ಆ ಸನ್ನಿವೇಶದ ಬಗೆಗೆ

ನಮಗೆ ನಾಲ್ಕೈದು ಗಂಟೆಗಳ ಮೊದಲೇ ಮಾಹಿತಿ ಸಿಕ್ಕಿ ಹೋಗಿತ್ತು.ನನಗೆ ಬಲು ವಿಚಿತ್ರವೆನಿಸಿತು; ತಡೆಯಲಾಗಲಿಲ್ಲ. ಇಂಥ ಸನ್ನಿವೇಶಗಳಲ್ಲಿ ಗಾಂಧೀಜಿಯವರ ಮುಖದ ಮೇಲೊಂದು ಮಂದಹಾಸ ಅರಳಿ ನಿಲ್ಲುತ್ತಿತ್ತು. ಆದರೆ, ಒಮ್ಮಿಂದೊಮ್ಮೆಲೇ ಪರಿಸ್ಥಿತಿ ಬಲು ಗಂಭೀರವಾಯಿತು. ದಂಗೆಯಲ್ಲಿ ಲೈಸನ್ಸ್ ಇಲ್ಲದೆ ಬಳಸಲಾಗುತ್ತಿದ್ದ ಶಸ್ತ್ರಗಳನ್ನೆಲ್ಲ ಒಪ್ಪಿಸಿಬಿಡುವುದಾದರೆ, ಗಾಂಧೀಜಿಯವರು ಪ್ರಾಯಶಃ ಬಲು ಬೇಗ ತಮ್ಮ ಉಪವಾಸ ನಿಲ್ಲಿಸಬಹುದೆಂದು ನನಗೆ ತಿಳಿಸಲಾಯಿತು. 1942ರ ಚಳವಳಿಯ ಕಾಲದ ಕೆಲವು ಶಸ್ತ್ರಗಳೂ ಅದರಲ್ಲಿದ್ದುವೆಂದು ನನಗೆ ಗೊತ್ತಿತ್ತು. ಈಗಲೂ ಅವುಗಳ ಬಳಕೆ ನಡೆದಿತ್ತು. ಇವುಗಳನ್ನು ಬಳಸುವ ಜನರು ಮೊದಲಿನ ರಾಷ್ಟ್ರೀಯ ಸಂಘರ್ಷದಿಂದ ಧಾರ್ಮಿಕ ಸಂಘರ್ಷಕ್ಕೆ ಇಳಿದಿದ್ದರು. ಅವರಲ್ಲಿ ಕೆಲವರಾದರೂ ಈಗಲೂ ನನ್ನ ಮಾತು ಕೇಳುವ ಸಾಧ್ಯತೆಯಿತ್ತು, ಅದೂ ಮುಖ್ಯವಾಗಿ ಇಂಥ ಆಪತ್ಕಾಲದಲ್ಲಿ. ಅವರೆಲ್ಲ ತಮ್ಮ ತಮ್ಮ ರೀತಿಯಲ್ಲಿ ಧೈರ್ಯಶಾಲಿಗಳೇ ಆಗಿದ್ದರು.

ಇಂಥ ಕೆಲವು ರಾಜಕೀಯ ಕಾರ್ಯಕರ್ತರು ನನಗೀಗಲೂ ಪರಿಚಿತರಾಗಿದ್ದರು. ಅಂತೆಯೇ ಶಸ್ತ್ರಗಳನ್ನು ಒಪ್ಪಿಸುವ ಸೂಚನೆ ಮುಂದೆ ಬಂದೊಡನೆ, ತಕ್ಷಣ ನನ್ನ ಪರಿಚಯದ ಪ್ರಭಾವವನ್ನು ಬಳಸಿ ಕೆಲಸ ಸಾಧಿಸಬೇಕೆಂದು ನಿರ್ಧರಿಸಿದೆ. ಮೊದಲು ಭೇಟಿಯಾದ ಜನರು ಶಸ್ತ್ರಾಸ್ತ್ರಗಳನ್ನು ಹುಡುಕಿದರೂ ಬೇಗ ಸಿಗಲಿಕ್ಕಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು. 1942ರ ಅವಧಿಯಲ್ಲಿ ನನ್ನ ನೇತೃತ್ವದಲ್ಲಿ ಕೆಲಸ ಮಾಡಿದವರಲ್ಲಿ ಜಗಮೋಹನ್‌ಬೋಸ್ ಎಂಬ ಯುವಕನಿದ್ದ. ಅವನನ್ನು 'ಜಗ್ಗೂ' ಎಂದೇ ನಾನು ಕರೆಯುತ್ತಿದ್ದೆ. ನಾನು ಈ ಗೆಳೆಯನನ್ನು ಕಂಡು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಹಾಗೂ ಒಪ್ಪಿಸುವ ವಿಷಯವಾಗಿ ಮಾತಾಡಿದೆ. ಈ ಕೆಲಸಕ್ಕಾಗಿ ಆತ ಬೇರೊಬ್ಬ ವ್ಯಕ್ತಿಯ ಹೆಸರು ಸೂಚಿಸಿದ. ಜಗ್ಗೂ ಬಲು ಸ್ಪಷ್ಟವಾಗಿ "ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳುವುದು ಅಷ್ಟೊಂದು ಅಗತ್ಯವೇ? ಅಥವಾ ಗಾಂಧೀಜಿಯವರ ಜೀವನಕ್ಕೂ ಇದಕ್ಕೂ ನೇರವಾದ ಸಂಬಂಧವಿದೆಯೋ ?" ಎಂದು ಆತ ಕೇಳಿದ. ನಾನೆಂದೆ : "ಹೌದು." ಸರಿ, ಅವನು ತನ್ನ ಮನಸ್ಸಿನಲ್ಲಿ ನಿಶ್ಚಯಮಾಡಿಯೇಬಿಟ್ಟ.

ಈ ಕೆಲಸದ ಬಗ್ಗೆ ಮಾತಾಡಲು, ಕತ್ತಲಾದ ಬಳಿಕ ಬೇರೊಬ್ಬ ಗೆಳೆಯನ ಬಳಿಗೆ ನನ್ನನ್ನು ಕರೆದೊಯ್ಯುವುದಾಗಿ ಜಗ್ಗೂ ಹೇಳಿದ. ಆತ ನನ್ನನ್ನು ಒಂದು ಮೋಟಾರಿನಲ್ಲಿ ಕುಳ್ಳಿರಿಸಿಕೊಂಡು, ಎಲ್ಲೆಲ್ಲೋ ಸುತ್ತಾಡಿಸಿ, ಕೊನೆಗೊಂದು ಅಜ್ಞಾತ ಸ್ಥಳಕ್ಕೆ ಕರೆದೊಯ್ದ. ಅಲ್ಲಿಂದ ಲಿಫ್ಟ್ ಮೂಲಕ ಒಂದು ಕಟ್ಟಡದ ಮೇಲಂತಸ್ತಿಗೆ. ಅಲ್ಲಿರುವ ವ್ಯಕ್ತಿಯೂ ನಮ್ಮ ಕೆಲಸಕ್ಕೆ ಬರುವಂಥವನೇ ಎಂದು ನನಗೆ ಅನ್ನಿಸಿತು. ಸ್ವಲ್ಪ ಹೊತ್ತಿನ ಮೇಲೆ ಒಬ್ಬ ವ್ಯಕ್ತಿ ಹೊರಬಂದ. ನನ್ನ ಜೀವನದಲ್ಲಿ ಮೊದಲೆಂದೂ ಕಾಣಲು ಸಿಗದಂಥ ವಿಲಕ್ಷಣ ವ್ಯಕ್ತಿ. ಆತ ಚೀಣೀ ಕಥೆಗಳಲ್ಲಿನ ಪಾತ್ರದಂತಿದ್ದ.

ಅವನನ್ನು ಕಂಡೊಡನೆ ಮೈಮೇಲಿನ ರೋಮಗಳು ಎದ್ದು ನಿಲ್ಲುವ ಹಾಗೆನಿಸಿತು. ಆ ವ್ಯಕ್ತಿ ಗುಂಡು ಹೊಡೆದಂತೆ ನನಗೆ ಪ್ರಶ್ನೆ ಹಾಕಿದ: "ನೀವಿಲ್ಲಿ ಬಂದದ್ದು ಯಾತಕ್ಕಾಗಿ"? ನಾನೆಂದೆ : "ನನ್ನನ್ನಿಲ್ಲಿ ಕರೆತಂದದ್ದು ಯಾತಕ್ಕಾಗಿ ಎಂದು ನನಗೂ ಗೊತ್ತಾಗಬೇಕು". ಆ ನಂತರ ಆತ ಭ್ರಾಮಕ ರಾಷ್ಟ್ರೀಯತೆಯ ಮೇಲೆ ತನ್ನ ಶಬ್ದಪ್ರಹಾರಗೈದ. "ನೀವು ಮುಸಲ್ಮಾನರಿಗೆ ನೆರವು ನೀಡುವ ಹಾಗೂ ಹಿಂದೂಗಳಿಗೆ ನಷ್ಟವುಂಟುಮಾಡುವ ದೋಷವೆಸಗುತ್ತೀರಿ" ಎಂದು ವಿವರಿಸಿದ. ಒಂದು ವೇಳೆ ಎಲ್ಲ ಶಸ್ತ್ರಗಳನ್ನು ಒಪ್ಪಿಸಿ ಬಿಟ್ಟರೆ, ಹಿಂದೂಗಳಿಗೆ ಮತ್ತೆ ಬೇಕೆನಿಸಿದರೆ ತರುವುದೆಲ್ಲಿಂದ ? ಎಂದು ಆತ ಕೇಳಿದ. ಕೈ ಹಾಗೂ ಮನಸ್ಸು ಚೆನ್ನಾಗಿದ್ದರೆ, ಯಾವಾಗ ಬೇಕಾದರೂ ಶಸ್ತ್ರಾಸ್ತ್ರಗಳು ದೊರೆಯುತ್ತವೆಂದೂ ಅಥವಾ ಶಸ್ತ್ರಾಸ್ತ್ರಗಳಿಲ್ಲದೆಯೇ ಹೋರಾಡಬಹುದೆಂದೂ ನಾನು ಹೇಳಿದೆ. ಆ ವ್ಯಕ್ತಿಯ ತುಟಿಗಳ ಮೇಲೆ ನವಿರಾದ ಮುಗುಳು ನಗೆ ಮೂಡಿತು. ಜಗ್ಗೂ ನನ್ನ ಪಕ್ಕದಲ್ಲೇ ಇದ್ದ. ಅದೇ ರಾತ್ರಿ ನಾವು ಒಂದು ಸ್ಟೆನ್‌ಗನ್, ಕೆಲವು ಕೈಗುಂಡು ಹಾಗೂ ಮತ್ತಿತರ ವಿಸ್ಫೋಟಕ ಅಸ್ತ್ರಗಳನ್ನು ಒಟ್ಟುಗೂಡಿಸಿದೆವು.

ಒಪ್ಪಿಕೊಂಡ ಕೆಲಸ ಮುಗಿಯುತ್ತಲೇ ನಾನು ಸಾಮಾನ್ಯವಾಗಿ ಹಿಂದೆ ಸರಿದುಬಿಡುತ್ತೇನೆ. ನನ್ನ ಮಿತ್ರರು ಆ ಆಯುಧಗಳನ್ನೊಯ್ದು ಗಾಂಧೀಜಿಯವರ ವಶಕ್ಕೊಪ್ಪಿಸಿದರು. ನಾನು ಹೊರಗೇ ನಿಂತುಕೊಂಡಿದ್ದೆ. ಆಗ ಮಧ್ಯರಾತ್ರಿಯ ಆಚೀಚೆಯ ಸಮಯ. ಗಾಂಧೀಜಿಯವರು ಮಲಗಿರಬಹುದೆಂದು ನಾನು ಭಾವಿಸಿದ್ದೆ. ನಾವು ಸಮಾಧಾನದ ನಿಟ್ಟುಸಿರು ಬಿಡುತ್ತ, ಮೋಟಾರಿನಲ್ಲಿ ಕುಳಿತು ಮರಳಿ ಹೊರಟೆವು. ನಾವು ಸುಮಾರು ಎಂಟು ಮೈಲಿಗಳಷ್ಟು ದೂರ ಸಾಗಬೇಕಿತ್ತು. ಕೈಗುಂಡುಗಳು ಯಾವ ಕ್ಷಣದಲ್ಲೂ ಸ್ಫೋಟಗೊಳ್ಳಬಲ್ಲವೆಂದು ನಡುದಾರಿಯಲ್ಲಿ ನೆನಪಾಯಿತು. ನಾವು ಮತ್ತೆ ಮರಳಿ ಹೋದೆವು. ನನ್ನ ಮಿತ್ರರು ಮತ್ತೆ ಗಾಂಧೀಜಿಯವರ ಕೋಣೆ ಒಳಹೊಕ್ಕು ಆ ಎಲ್ಲ ಕೈಬಾಂಬ್‌ಗಳನ್ನು ನೀರಿನ ಬಾಟಲಿಗಳಲ್ಲಿ ಹಾಕಿಟ್ಟರು.

ದೆಹಲಿಯಲ್ಲಿ ಹಿಂದೂಗಳು ಮತ್ತು ಮುಸ್ಲಿಮರ ಏಕತೆಯ ಕೆಲಸ ಬಲು ಕಠಿಣವಾಗಿತ್ತು. ಏಕತೆಯ ವಿಷಯವಾಗಿ ವಿಚಾರ ವಿನಿಮಯ ಮಾಡಲು ನಾನು ಇನ್ನೂರು-ಮುನ್ನೂರು ಆಯ್ದ ಹಿಂದೂಗಳು ಮತ್ತು ಮುಸಲ್ಮಾನರನ್ನೂ, ಸಿಕ್ಖರನ್ನೂ ಕಲೆ ಹಾಕುವುದಾಗಿ ಗಾಂಧೀಜಿಯವರಿಗೆ ಹೇಳಿದೆ. ಆ ಸಭೆಯಲ್ಲಿ ಅವರೂ ಉಪಸ್ಥಿತರಿರಬೇಕು ಎಂದು ಕೇಳಿಕೊಂಡೆ. ಗಾಂಧೀಜಿ ಆಗಲಿ ಎಂದರು.

ನಾನು ಮೂರೂ ಸಂಪ್ರದಾಯಗಳ ಜನರೊಡನೆ ಮಾತಾಡಿದೆ. ಸಭೆಯ ಕಾರ್ಯಕ್ರಮ ನಿಶ್ಚಯಗೊಳಿಸಿದೆ. ದೆಹಲಿಯ ಕಾಂಗ್ರೆಸ್ ಕಚೇರಿಯ ಕಾರ್ಯದರ್ಶಿಯು ನಿಯಮಾನುಸಾರ ಸಭೆ ಸೇರಿಸುವಂತೆ ಆಗ್ರಹಪಡಿಸಿದೆ. ಆತ ಇಲ್ಲವೆನ್ನಲಿಲ್ಲವಾದರೂ ಇಂದು-ನಾಳೆ ಎಂದು ಅಡ್ಡಗಾಲು ಹಾಕುವ ಕೆಲಸ ಮಾಡಿಯೇ ಮಾಡಿದ.

ಕಾಂಗ್ರೆಸ್‌ನವರು ಇಂಥ ಸಭೆಗಳಲ್ಲಿ ಆಸಕ್ತಿ ವಹಿಸುವುದಿಲ್ಲ ಎಂದು ನನಗೆ ಮನವರಿಕೆಯಾಯಿತು. ಆಗ ನಾನು ಗಾಂಧೀಜಿಯವರ ಬಳಿ ಹೋಗಿ, ಅವರು ಸಮ್ಮತಿಸಿದರೆ ಸಮಾಜವಾದಿ ಪಕ್ಷದ ಪರವಾಗಿ ಆ ಸಭೆ ಕರೆಯಬಹುದೆಂದು ಹೇಳಿದೆ. ಗಾಂಧೀಜಿಯವರು ಆಲೋಚಿಸಿ 'ಪರವಾಗಿಲ್ಲ' ಎಂದರು. ಯಾವುದಾದರೂ ಒಳ್ಳೆಯ ಕೆಲಸ ಆಗುವ ಹಾಗಿದ್ದರೆ, ಅದನ್ನು ಯಾರು ಮಾಡುತ್ತಾರೆಂಬುದರ ಬಗ್ಗೆ ಯಾವ ಚರ್ಚೆಯ ಅಗತ್ಯವೂ ಇರುವುದಿಲ್ಲ.

ಆದರೆ, ಈ ಸಭೆ ಕರೆದ ದಿನವೇ ದೆಹಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯನ್ನೂ ಸೇರಿಸಲಾಗಿತ್ತು. ಆ ದಿನ ಮುಂಜಾನೆ ಎದ್ದು ಪತ್ರಿಕೆಯ ಮೇಲೆ ಕಣ್ಣಾಡಿಸಿದರೆ, ಆ ಸಭೆಯ ಪ್ರಕಟಣೆಯನ್ನು ಒಂದು ಸಾಧಾರಣ ಸಭೆಯ ಮಾದರಿಯಲ್ಲಿ ಕೊಡಲಾಗಿತ್ತು. ಇವರು ಹೀಗೇಕೆ ಮಾಡಿದರು ? ಸಭೆಯಂತೂ ಆಯ್ದ ಜನಗಳದ್ದಾಗಿತ್ತು. ನನ್ನ ಚಿಂತೆಯನ್ನು ಗಮನಿಸಿ, "ನೀವೇಕೆ ಇಷ್ಟು ಚಿಂತೆ ಮಾಡುತ್ತೀರಿ?" ಎಂದು ಗಾಂಧೀಜಿ ಕೇಳಿದರು.

ಸಭೆಯ ಸಮಯಕ್ಕೆ ದೊಡ್ಡ ಸಂಖ್ಯೆಯಲ್ಲಿ ಜನ ಸೇರಿದರು. ಸಭೆಯನ್ನು ಕೇವಲ ಕೆಲವೇ ಜನರಿಗಾಗಿ ಕರೆಯಲಾಗಿತ್ತೆಂದು ನಾನು ಬಾಯ್ಬಿಟ್ಟು ಹೇಳಬೇಕಾಯಿತು. ಆಗ ಬಹಳಷ್ಟು ಜನರು ಹೊರಟು ಹೋಗಿ, ಆಮಂತ್ರಿತರಾಗಿ ಬಂದ ಕೆಲವರೇ ಉಳಿದರು. ಸಭೆ ಮೂರು ತಾಸು ನಡೆಯಿತು. ಸಭೆಯಲ್ಲಿ ಅನೇಕ ಅಡ್ಡಿ-ಅಡಚಣೆಗಳು ಉಂಟಾದವು. ಗಾಂಧೀಜಿಯವರ ಪ್ರತಿಯೊಂದು ಸಭೆಯಲ್ಲೂ ಆಲ್ ಇಂಡಿಯಾ ರೇಡಿಯೋದ ಧ್ವನಿವರ್ಧಕ ವ್ಯವಸ್ಥೆ ಇದ್ದೇ ಇರುತ್ತಿತ್ತು. ಯಾವಾಗಲೂ ಕೆಡದೆ ಕೆಲಸ ಮಾಡುವ ಆ ವ್ಯವಸ್ಥೆಯೂ ಈ ಬಾರಿ ತೊಂದರೆ ಕೊಟ್ಟಿತು.

ನಮ್ಮ ಸಭೆ ನಡೆದೇ ಇತ್ತು. ಅಷ್ಟರಲ್ಲಿ ಗಾಂಧೀಜಿಯವರಿಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರ ಕರೆ ಬಂತು. ತಾವು ಇಲ್ಲದಿದ್ದರೂ ಆ ಸಭೆಯನ್ನು ನಡೆಸುವಂತೆ ಗಾಂಧೀಜಿ ಹೇಳಿ ಕಳಿಸಿದರು. ಆದರೂ ಒಬ್ಬರ ಹಿಂದೊಬ್ಬರಂತೆ ಕಾರ್ಯಕಾರಿಣಿಯ ಅನೇಕ ಸದಸ್ಯರು ಅವರನ್ನು ಕರೆಯಲು ಬಂದರು. ಎಲ್ಲರೂ ನಿರಾಸೆಯಿಂದ ಮರಳಿ ಹೋಗಬೇಕಾಯಿತು; ಕೊನೆಗೆ, ನೆಹರೂ ಹಾಗೂ ಪಟೇಲರೇ ಬಂದರು. ಆದರೆ ಗಾಂಧೀಜಿ ಸಭೆಯಿಂದ ಕದಲಲಿಲ್ಲ! ಗಾಂಧೀಜಿ ಈ ಸಭೆಯಿಂದ ತುಂಬಾ ಸಂತಸಗೊಂಡಿದ್ದರು. ಯಾಕೆಂದರೆ ಈ ಸಭೆಯ ಕಾರ್ಯ ಚಟುವಟಿಕೆಗಳು ಅವರ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದ್ದವು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಗಾಂಧೀಜಿ ಅವರು ಭಾಗವಹಿಸದಿರುವ ಬಗ್ಗೆ ಕಾಂಗ್ರೆಸ್ ವರಿಷ್ಠರಿಗೆ ಬಹಳಷ್ಟು ನಿರಾಸೆಯಾಯಿತು. ಅದು ಸ್ವಾಭಾವಿಕವೂ ಆಗಿತ್ತು. ಒಂದು ದಿನ, ಒಂದು ಮುಸ್ಲಿಮ್ ಬಡಾವಣೆಯಲ್ಲಿ ಮುನ್ನೂರ ಮೂರು ಬಂದೂಕುಗಳು ದೊರೆತವೆಂದು ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಯಿತು. ನಿಜ ಸಂಗತಿಯೆಂದರೆ, ಒಬ್ಬ ಮುಸಲ್ಮಾನ ಮನೆಯಲ್ಲಿ ಒಂದು ಬಂದೂಕು ಸಿಕ್ಕಿತ್ತು. ಅದರ ಹೆಸರು ಮುನ್ನೂರ ಮೂರು! ಆ ಬಂದೂಕಿನ ಹೆಸರಿನ ಅಂಕಿಯನ್ನೇ ಬಂದೂಕುಗಳ ಒಟ್ಟು ಸಂಖ್ಯೆಯೆಂಬಂತೆ ಆ ವಾರ್ತೆಯಲ್ಲಿ ಕಾಣಿಸಲಾಗಿತ್ತು. ಇಂಥ ತಪ್ಪು ವಾರ್ತೆಗಳನ್ನು ಪ್ರಕಟಿಸಿ ನಮ್ಮಂಥವರ ಕೆಲಸದಲ್ಲಿ ಏಕೆ ಅಡಚಣೆ ಉಂಟು ಮಾಡುತ್ತಾರೋ ಎಂದು ನಾನು ಕೋಪದಿಂದಲೇ ಗಾಂಧೀಜಿಯವರನ್ನು ಕೇಳಿದೆ. ನನ್ನ ಸಿಟ್ಟನ್ನು ಶಮನಗೊಳಿಸುವ ದೃಷ್ಟಿಯಿಂದ ಗಾಂಧೀಜಿಯವರು ಒಂದು ಹಾಸ್ಯ ಚಟಾಕಿ ಹಾರಿಸಿದರು: "ನಿಮ್ಮ ತಂದೆಯಂತೂ ನನ್ನ ಕಟ್ಟಾ ಭಕ್ತರಾಗಿದ್ದರು. ಮತ್ತೆ ನೀವಿಷ್ಟು ಜಗಳಗಂಟರಾದದ್ದು ಹೇಗೆ ?" ನಾನೇನೋ ನನ್ನ ಮಾತನ್ನೇ ಮುಂದುವರಿಸಿದೆ: "ಆದರೆ ಬಾಪೂಜೀ, ವಾರ್ತಾ ಮತ್ತು ಪ್ರಸಾರ ಇಲಾಖೆಯ ಮುಖಾಂತರ ಪ್ರಕಟಗೊಂಡ ವರದಿ, ನಾವು ವಾರಗಟ್ಟಲೆ ಮಾಡಿದ ಕೆಲಸವನ್ನೆಲ್ಲ ಹಾಳು ಮಾಡಿಬಿಟ್ಟಿತು". "ನೀವು ಈ ಇಲಾಖೆಯನ್ನು ನಡೆಸುವುದು ಸಾಧ್ಯವಿಲ್ಲವೇ?' ಎಂದು ಕೇಳಿದ ಗಾಂಧೀಜಿಯವರು ಅಂದರು: "ನೀವಂತೂ ಜವಾಬ್ದಾರಿಯಿಂದ ಓಡಿಹೋಗುತ್ತೀರಿ." ಆಗ ನಾನೆಂದೆ: "ಕಾಂಗ್ರೆಸ್‌ನಲ್ಲಿರುವವರು ಮಾತ್ರ ದೇಶದ ಸರ್ವಶ್ರೇಷ್ಠ ನಾಯಕರಲ್ಲ ಎಂಬ ತೀರ್ಮಾನಕ್ಕೆ ಬಂದಾಗ ನೀವು ನನಗೇನಾದರೂ ಜವಾಬ್ದಾರಿ ಹೊರಿಸಬಹುದು". ಗಾಂಧೀಜಿ ಅದೇ ನಿಲುವಿನಲ್ಲಿ ಕೇಳಿದರು : "ನೀವು ನೆಹರೂಗಿಂತ ಉತ್ತಮ ನಾಯಕರೆಂದು ಘೋಷಣೆ ಮಾಡಲೇನು ?". ನಾನೆಂದೆ :"ಅಂಥ ಘೋಷಣೆ ಮಾಡಿದರೂ ಅಭ್ಯಂತರವೇನಿಲ್ಲ. ಇದಕ್ಕೆ ದಯವಿಟ್ಟು ವ್ಯತಿರಿಕ್ತವಾದ ಕಾರಣಗಳೇನಾದರೂ ಇದ್ದರೆ ಹೇಳಿ". ಅದಾದ ಮೂವತ್ತಾರು ಗಂಟೆಗಳ ನಂತರ, ರಾತ್ರಿಯ ಸಮಯದಲ್ಲಿ ಗಾಂಧೀಜಿ ತಮ್ಮ ಮಲಗುವ ಕೋಣೆಗೆ ನನ್ನನ್ನು ಕರೆದು ಕೇಳಿದರು : "ಅವರೆಲ್ಲಾ ಸರ್ವಶ್ರೇಷ್ಠರೆಂದು ನಾನೆಂದಾದರೂ ಹೇಳಿದ್ದೇನೆಯೇ?". ನಾನೆಂದೆ : "ಹೌದು ನೀವು ಒಂದಲ್ಲ, ಸಾವಿರ ಸಲ ಹಾಗೆ ಹೇಳಿದ್ದೀರಿ." ಆಗ ಗಾಂಧೀಜಿ ಅಂದರು : "ನಾನು ಹೇಳಿದ್ದು ಅವರಿಗಿಂತ ಹೆಚ್ಚು ಒಳ್ಳೆಯವರು ಸದ್ಯಕ್ಕೆ ಇಲ್ಲ ಅಂತ. ಎರಡಕ್ಕೂ ವ್ಯತ್ಯಾಸವುಂಟು"

ಜನವರಿ ಇಪ್ಪತ್ತಾರರಂದು ಗಾಂಧೀಜಿಯವರು "ನಿಮ್ಮೊಡನೆ ಅವಶ್ಯ ಮಾತಾಡುವುದಿದೆ, ನಾಳೆ-ನಾಡಿದ್ದು ಮಾತಾಡುತ್ತೇನೆ" ಎಂದರು. ಜನವರಿ ಇಪ್ಪತ್ತೆಂಟರಂದು ಮತ್ತೆ ಅಂದರು: "ಸಮಯವೇ ಸಿಗುವುದಿಲ್ಲ. ನಿಮ್ಮೊಡನೆ ವಿಸ್ತಾರವಾಗಿ ಮಾತಾಡುವುದಿದೆ". ಇಪ್ಪತ್ತೊಂಬತ್ತರಂದು ಮತ್ತೆ ಹೇಳಿದರು :

"ನಾಳೆ ನಿಮ್ಮೊಡನೆ ಅಗತ್ಯ ಮಾತಾಡುತ್ತೇನೆ. ಕೊನೆಗೂ ನಿಮ್ಮ ಪಕ್ಷಕ್ಕೂ ಹಾಗೂ ಕಾಂಗ್ರೆಸ್ ಬಗ್ಗೆ ಏನಾದರೂ ತೀರ್ಮಾನ ಮಾಡಲೇಬೇಕು. ನಾಳೆ ಸಾಯಂಕಾಲ ಅಗತ್ಯ ಬನ್ನಿ. ಮನಸ್ಸು ಪೂರ್ತಿ ಮಾತಾಡೋಣ". ನಮ್ಮ ಪಕ್ಷ ಹಾಗೂ ಕಾಂಗ್ರೆಸ್‌ನ ಸದ್ಯದ ರೂಢಿಗೂ ತಾಳಮೇಳ ಹೊಂದಲಿಕ್ಕಿಲ್ಲವೆಂದೇ ಗಾಂಧೀಜಿಯವರು ತಿಳಿದಿದ್ದರು. ಈ ಹಿನ್ನೆಲೆಯಲ್ಲಿ ಒಂದು ತೀರ್ಮಾನಕ್ಕೆ ಬರಬೇಕೆಂಬ ಗಾಂಧೀಜಿಯ ಆಲೋಚನೆ ಸಾಮಯಿಕವಾಗಿತ್ತು ಹಾಗೂ ಅನುಕೂಲಕರವಾಗಿತ್ತು. ಮೂವ್ವತ್ತರಂದು ನಾನೊಂದು ಟ್ಯಾಕ್ಸಿಯಲ್ಲಿ ಕುಳಿತು, ಗಾಂಧೀಜಿಯವರನ್ನು ಕಾಣಲು 'ಬಿರ್ಲಾ ಭವನ'ದತ್ತ ಹೊರಟೆ. ಆದರೆ, ದಾರಿಯಲ್ಲಿಯೇ ಗಾಂಧೀಜಿಯವರ ಕಗ್ಗೊಲೆಯ ಸುದ್ದಿ ತಲುಪಿತು.

ಬಿರ್ಲಾ ಭವನ ತಲುಪಿದೆ; ಅಲ್ಲಿ ಆಗಲೇ ದೊಡ್ಡ ಜನಸಮೂಹ ಸೇರಿತ್ತು. ಅದರಲ್ಲಿ ಗಾಂಧೀಜಿ ಮಾತ್ರ ಇರಲಿಲ್ಲ. ಒಳಗೆ ಕೋಣೆಯಲ್ಲಿ ಅವರ ಮೃತಶರೀರ ಮಾತ್ರ ಇತ್ತು.

ಆ ದಿನ ನಿಜವಾದ ಅರ್ಥದಲ್ಲಿ ನಾನು ಅನಾಥನಾದೆನೆಂದು ಮೊದಲ ಸಲ ನನಗೆ ಅನ್ನಿಸಿತು. ದೇಶದ ರಕ್ಷಕ ಕಣ್ಣೆದುರೇ ಸತ್ತು ಬಿದ್ದಿದ್ದ, ಹಾಗೂ ದೇಶದ ದೊರೆಗಳೆನಿಸಿಕೊಂಡವರು ಕಣ್ಣೀರು ಹರಿಸುತ್ತಿದ್ದರು.

ಗಾಂಧೀಜಿಯವರ ನೆಚ್ಚಿನ ಶಿಷ್ಯರಾದ ನೆಹರೂ, ಪಟೇಲರು ಅಧಿಕಾರದ ಗದ್ದುಗೆಯ ಮೇಲಿರುವಾಗಲೇ ಗಾಂಧೀಜಿಯವರ ಹತ್ಯೆ ನಡೆದಿತ್ತು.

'ದೇವರಲ್ಲಿ ನಂಬುಗೆ ಇಡುವ' ಬಗ್ಗೆ ಗಾಂಧೀಜಿ ಆಡಿದ ಮಾತು ನನಗೆ ನೆನಪಾಯಿತು. ದೇವರಲ್ಲಿ ಅಚಲ ಶ್ರದ್ಧೆ ಹೊಂದಿ, ಜೀವನದುದ್ದಕ್ಕೂ ಅಹಿಂಸೆಯ ಆರಾಧಕರಾಗಿದ್ದವರೇ ಇಂದು ಹಿಂಸೆಯ ಮೂಲಕ ಹತ್ಯೆಗೊಳಗಾದರೆಂದರೆ ಎಂಥ ವಿಪರ್ಯಾಸ !

ಗಾಂಧೀಜಿಯವರ ಮೃತ ಶರೀರವನ್ನು ನೋಡಿ ನಾನು ತತ್ತರಿಸಿ ಹೋದೆ : "ನೀವು ನಡು ನೀರಿನಲ್ಲೇ ನಾಡಿನ ಜನತೆಯನ್ನು ಕೈಬಿಟ್ಟು ಹೋದದ್ದೇಕೆ ? ಹೀಗೇಕೆ ಮೋಸ ಮಾಡಿದಿರಿ ?"

ಆದರೆ, ನನಗೆ ಉತ್ತರ ಕೊಡುವವರು ಯಾರು ? ●

(1960)

ಹಿಂದಿಯಿಂದ ಕನ್ನಡಕ್ಕೆ : ಬಿ. ಎ. ಸನದಿ

ಭರತಭೂಮಿ, ಭೂಮಿತಾಯಿ

ಜನರಲ್ ತಿಮ್ಮಯ್ಯನವರು ತೀರಿಕೊಂಡಿದ್ದು ಸೈಪ್ರಸ್ಸಿನಲ್ಲಿ. ಆದರೆ ಅವರ ಪಾರ್ಥಿವಶರೀರವನ್ನು ಸಾವಿರಾರು ಮೈಲಿ ದೂರದಲ್ಲಿದ್ದ ಭಾರತದ ಬೆಂಗಳೂರಿಗೆ ತಂದು ಅಲ್ಲಿ ಅಂತ್ಯಕ್ರಿಯೆ ನಡೆಸಿದರು. ಜನರಲ್ ನಿಮ್ಮೊ ಕಾಶ್ಮೀರವನ್ನು ಕುರಿತಂತೆ ಕೆಲಸಮಾಡುತ್ತಾ ಪಾಕಿಸ್ತಾನದಲ್ಲಿ ಸಾವನ್ನಪ್ಪಿದರು; ಆದರೆ, ಅವರ ಮೃತಶರೀರವನ್ನು ಆಸ್ಟ್ರೇಲಿಯದ ಬ್ರಿಸ್ಬೇನ್ ನಗರಕ್ಕೆ ಕೊಂಡೊಯ್ಯಲಾಯಿತು. ಇವರಿಬ್ಬರೂ ವಿಶ್ವಸಂಸ್ಥೆಯ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಇಡೀ ಪ್ರಪಂಚ ಒಂದು. ಆದರೆ ಪ್ರಪಂಚದ ಕೆಲಸಮಾಡುವಂತಹ ಜನ ಎಲ್ಲಿಯೇ ಸತ್ತರೂ ಅವರ ಮೃತಶರೀರವನ್ನು ಅವರವರ ನಾಡಿಗೆ ಕೊಂಡೊಯ್ಯಲಾಗುತ್ತದೆ. ಇಲ್ಲಿ ಅಗತ್ಯವಾದ ಅಂಶವೆಂದರೆ ಹಾಗೆ ಸತ್ತವರು ಸಾಕಷ್ಟು ಶ್ರೀಮಂತರಾಗಿರಬೇಕು; ಇಲ್ಲವೆ, ಸಾಕಷ್ಟು ಹೆಸರಾಂತ ವ್ಯಕ್ತಿಗಳಾಗಿರಬೇಕು ಹಾಗೂ ಅವರ ಪಾರ್ಥಿವ ಶರೀರಕ್ಕಾಗಿ ಅಷ್ಟು ಖರ್ಚುಮಾಡಲು ಸಾಧ್ಯವಾಗುವಂತಿರಬೇಕು.

ಪ್ರಪಂಚ ಕುಗ್ಗಿ ಹೋಗಿದೆ ಎಂಬುದು ಈಚೆಗೆ ಪದೇ ಪದೇ ಕೇಳಿಬರುತ್ತಿರುವ ವಾಡಿಕೆಯ ಮಾತಾಗಿದೆ. ಜನ, ಕೆಲವೇ ಗಂಟೆಗಳಲ್ಲಿ ಪ್ರಪಂಚದ ಒಂದು ಮೂಲೆಯಿಂದ ಹೊರಟು ಇನ್ನೊಂದು ಮೂಲೆ ಸೇರಬಲ್ಲರು. ರಾಷ್ಟ್ರೀಯ ಭಾವನೆ ಕಡಿಮೆಯಾಗುತ್ತಿದೆ. ಅಂತಾರಾಷ್ಟ್ರೀಯ ಭಾವನೆ ಹೆಚ್ಚಾಗುತ್ತಿದೆ ಎಂದು ಸಹ ಹೇಳಲಾಗುತ್ತಿದೆ. ಆದರೆ ಈ ಶರೀರವನ್ನು ಕುರಿತಂತೆ ಏನು ವ್ಯವಹಾರ ನಡೆಯುತ್ತದೋ ಅದರಿಂದ ಪ್ರಪಂಚದ ಎಲ್ಲೆಕಟ್ಟುಗಳು ವಿಸ್ತರಿಸುತ್ತಿವೆ, ರಾಷ್ಟ್ರೀಯತೆಯ ಭಾವನೆ ಇನ್ನೂ ಹೆಚ್ಚಾಗುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

ಸತ್ತವರ ಪಾಲಿಗೆ ಅವರ ಸ್ವಜನರು, ಬಂಧು ಬಾಂಧವರು ಇರುತ್ತಾರೆ, ನಿಜ. ಕೊನೆಯ ಬಾರಿಗೆ, ತೀರಿಕೊಂಡ ತಮ್ಮವರ ಮುಖದರ್ಶನ ಮಾಡುವ ಆಸೆ ತೀವ್ರವಾಗಿರುತ್ತದೆ. ತಾಯ್ನಾಡು ಕೂಡ ಪ್ರಾಯಶಃ ಗೌರವ ಸಲ್ಲಿಸಲು ಬಯಸಬಹುದೇನೊ? ಆದರೆ ಈ ಭೂಮಿ ಅನ್ನುವುದಕ್ಕೆ ಏನಾದರೂ ಅರ್ಥವಿದೆಯೋ

ಇಲ್ಲವೋ? ಈ ಜಗತ್ತಿನಲ್ಲಿ ಬರೀ ರಾಷ್ಟ್ರಮಾತೆಯರು ಮಾತ್ರ ಇರುತ್ತಾರೊ, ಅಥವಾ ಈ ನಮ್ಮ ಪೃಥ್ವೀಮಾತೆಗೆ ಏನಾದರೂ ಜಾಗ ಉಂಟೊ! ನಮಗಂತೂ ಭೂಮಿಯನ್ನು ವಿಷ್ಣುಪತ್ನಿ ಎಂದು ಕರೆಯುವುದೇ ಹೆಚ್ಚು ಸೊಗಸಾಗಿ ಕಾಣುತ್ತದೆ. ಸಮುದ್ರವನ್ನು ಹೊದ್ದ ಪರ್ವತತನಯೆ ಈ ಪೃಥ್ವಿ.

ಒಂದು ಕಾಲದಲ್ಲಿ, ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಓಡಾಡುವುದಕ್ಕೆ ಪ್ರಮಾಣಪತ್ರಗಳ ಹಾಗೂ ಪ್ರವೇಶಪತ್ರ ಇಲ್ಲವೆ ಪಾಸ್‌ಪೋರ್ಟುಗಳ ಅಗತ್ಯ ಬೀಳುತ್ತಿರಲಿಲ್ಲ. ಹಾಗಾದರೆ ಈಗ ರಾಷ್ಟ್ರೀಯತೆಯ ಭಾವನೆ ಕಡಮೆಯಾಗುತ್ತಿದೆಯೊ ಹೆಚ್ಚಾಗುತ್ತಿದೆಯೊ? ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಭಯ ಹೆಚ್ಚಾಗುತ್ತಿದೆಯೊ ಕಡಿಮೆಯಾಗುತ್ತಿದೆಯೊ? ಹಾಗೆಯೇ, ಅದರೊಟ್ಟಿಗೆ ಈ ಸುವಿಶಾಲ ಮನದನ್ನೆ ಪೃಥ್ವಿಗೆ ಅವಮರ್ಯಾದೆಯಾಗುವಂತೆ ಎಲ್ಲ ವಿಭಿನ್ನ ರೀತಿ– ನೀತಿಗಳು, ಪದ್ಧತಿಗಳು, ಸಂಪ್ರದಾಯಗಳು ಹೆಚ್ಚುತ್ತಿವೆ. ಇಂತಹ ಅನಾದರವನ್ನು ಅದು ಯಾವ ತರ್ಕದ ಮೇಲೆ ಸ್ವದೇಶಾಭಿಮಾನ ಎಂದು ಕರೆಯುತ್ತಾರೋ ನಾ ಕಾಣೆ.

ಈ ಇಬ್ಬರು ಜನರಲ್‌ಗಳೂ ಅಂತಾರಾಷ್ಟ್ರೀಯ ಕಾರ್ಯಗಳಲ್ಲಿ ತೊಡಗಿದ್ದವರು. ಇವರಲ್ಲಿ ಜನರಲ್ ತಿಮ್ಮಯ್ಯನವರ ಗುಣ ದೋಷಗಳು ಏನೇ ಇರಲಿ– ಏಕೆಂದರೆ, ಅವರ ವಿದ್ಯಾಭ್ಯಾಸ, ತರಬೇತಿ ಎಲ್ಲ ನಡೆದದ್ದು ಇಂಗ್ಲಿಷ್ ಗುಲಾಮಗಿರಿಯಲ್ಲಿ– ಅವರಲ್ಲಿ ಒಂದು ಅದ್ಭುತವಾದ ಗುಣವಿತ್ತು. ಅದು ಅವರ ಮನಸ್ಸಿನ, ಆತ್ಮದ ಶಾಂತಗುಣ. ಪ್ರಾಯಶಃ ಇಂತಹ ಶಾಂತಸ್ವಭಾವವನ್ನು ಮೈಗೂಡಿಸಿಕೊಳ್ಳುವುದು ಭಾರತೀಯರಾಗಿದ್ದ ಅವರಿಗೆ ಐತಿಹಾಸಿಕ ಕಾರಣಗಳಿಂದ ಸಾಧ್ಯವಾಗಿತ್ತೇನೊ? ಹೀಗೆಂದರೆ, ಭಾರತೀಯರ ಇತರ ಅವಗುಣಗಳು ಬೇರೆಯವರ ಅವಗುಣಗಳಿಗಿಂತ ಹೆಚ್ಚು ಕೆಟ್ಟದ್ದಾಗಿಲ್ಲ ಎಂಬ ಅರ್ಥವಲ್ಲ. ಇಲ್ಲಿ ಆಲೋಚನೆ ಮಾಡತಕ್ಕ ಅಂಶವೆಂದರೆ, ಅಂತಾರಾಷ್ಟ್ರೀಯ ಕೆಲಸ ಕಾರ್ಯಗಳಲ್ಲಿ ನಿರತವಾಗಿದ್ದ ಒಂದು ಶಾಂತ ಆತ್ಮವನ್ನೂ ಈ ವಿಶಾಲ ಭೂಮಿಯಿಂದ ಸೆಳೆದುಕೊಳ್ಳಲಾಗುತ್ತದೆ, ಅಂತಾರಾಷ್ಟ್ರೀಯ ನೆಲೆಯಿಂದ ರಾಷ್ಟ್ರೀಯ ನೆಲೆಗೆ ಕರೆತರಲಾಗುತ್ತದೆ.

ಈ ವಿಷಯ ಇಷ್ಟಕ್ಕೇ ನಿಲ್ಲುವುದಿಲ್ಲ. ಒಂದು ದೇಶದ ಒಳಗೇ ಒಬ್ಬ ವ್ಯಕ್ತಿ ಸತ್ತರೆ ಆತನ ಶವವನ್ನು ವಿಮಾನದಲ್ಲಿ ಸಾವಿರಾರು ಮೈಲಿದೂರ ಕೊಂಡೊಯ್ದು ಸುಡುವ ಇಲ್ಲವೆ ಹೂಳುವ ಪರಿಪಾಠವೂ ಉಂಟು. ಡಾ. ಪಂಜಾಬರಾವ್ ದೇಶಮುಖ್ ದೆಹಲಿಯಲ್ಲಿ ಸತ್ತರು. ಅವರ ಮೃತಶರೀರವನ್ನು ಅವರ ಹುಟ್ಟೂರು ಅಮರಾವತಿಗೆ ಕೊಂಡೊಯ್ಯಬೇಕೆ, ಹೇಗೆ? ಎಂಬ ಪ್ರಶ್ನೆ ಎದ್ದಿತು. ಹಾಗೆ ಕೊಂಡೊಯ್ಯುವ ಪದ್ಧತಿಯಂತೂ ಇತ್ತು. ಆದರೆ ಕೊನೆಗೆ ವಿಮಲಾಬಾಯಿ ಹಾಗೂ ಅವರ ಮಗ ಒಳ್ಳೆಯ ಬುದ್ಧಿ ತೋರಿಸಿದರೆನ್ನಿ.

ಶವವನ್ನು ಸುಡುವುದು ಇಲ್ಲವೆ ಹೂಳುವುದು ಕೂಡ ಈಗೀಗ ಫ್ಯಾಷನ್ ಆಗಿಹೋಗಿದೆ. ಒಬ್ಬ ವ್ಯಕ್ತಿ ಸತ್ತಾಗ ಅವನನ್ನು ಅಲ್ಲಿಯೆ ಸುಟ್ಟು ಹಾಕಿವರೆ, ಅವನು ದೊಡ್ಡ ಮನುಷ್ಯ ಅಲ್ಲ ಎಂಬ ಭಾವನೆ ಪ್ರಚಲಿತವಾಗಿದೆ. ಅವನನ್ನು ತನ್ನ ಚಿಕ್ಕಮನೆಗೆ ಕೊಂಡೊಯ್ಯುವುದು ಅವಶ್ಯಕವಾಗಿಹೋಗಿದೆ. ಭೂಮಿತಾಯಿಗೆ ಅನಾದರ ಮಾಡುತ್ತಲೇ, ಭರತಭೂಮಿಗೆ ಕೂಡ ಅನಾದರ ಮಾಡುವ ಹುನ್ನಾರ ನಿರಂತರವಾಗಿ ಸಾಗಿದೆ.

ಈ ತೆವಲಿಗಾಗಿ ಎಷ್ಟೊಂದು ಹಣ ಖರ್ಚಾಗುತ್ತದೆ? ಸಾಮಾನ್ಯವಾಗಿ ಇಂತೆಡೆಗಳಲ್ಲಿ ಖರ್ಚಾಗುವುದು ಸರ್ಕಾರದ ಹಣ. ಅಂದರೆ, ಬಡಬೋರೇಗೌಡ ತೆತ್ತಹಣ. ಕೆಲವೊಮ್ಮೆ ಸತ್ತವ್ಯಕ್ತಿಯ ಆಪ್ತರು ಹಾಗೂ ಬಂಧು ಬಾಂಧವರು ಒಂದು ವಿಮಾನವನ್ನು ತಮಗಾಗಿ ಏರ್ಪಾಡುಮಾಡಿಕೊಡುವಂತೆ ಸರ್ಕಾರಿ ಅಧಿಕಾರಿಗಳನ್ನು ಪದೇ ಪದೇ ಬೇಡಿಕೊಳ್ಳುವ ಪ್ರಸಂಗ ಉದ್ಭವಿಸುತ್ತದೆ. ಒಂದುವೇಳೆ ಸತ್ತ ವ್ಯಕ್ತಿ ತುಂಬ ಶ್ರೀಮಂತನೇ ಆಗಿದ್ದನೆಂದುಕೊಳ್ಳಿ, ಆದರೂ ಈ ವೈಭವದ ತೆವಲು ಏತಕ್ಕಾಗಿ?

ಎಲ್ಲೆಲ್ಲಿ, ಹೇಗೆ ಹೇಗೆ ಐಶ್ವರ್ಯ ಹೆಚ್ಚುತ್ತಾ ಹೋಗುತ್ತದೊ, ಅದಕ್ಕೆ ತಕ್ಕಂತೆ ಈ ಬಗೆಯ ವಿಲಾಸ ವೈಭವಗಳ ಗೀಳು ಸಹ ಅತಿಯಾಗುತ್ತಾ ಹೋಗುತ್ತದೆ ಎನಿಸುತ್ತದೆ. ಹೊಸ ಹೊಸ ನೆಪಗಳನ್ನು ಸಿರಿವಂತರು ಕಂಡುಕೊಳ್ಳುತ್ತಾರೆ. ಹುಟ್ಟು, ಮದುವೆ, ಸಾವು ಇವುಗಳಿಗಾಗಿ ಅದೆಷ್ಟು ಖರ್ಚು, ಅದೆಂಥ ಆಡಂಬರ! ಮೃತಶರೀರಕ್ಕೆ ಚೆನ್ನಾಗಿ ಸ್ನಾನಾದಿಗಳನ್ನು ಮಾಡಿಸಿ, ಸಾಧ್ಯವಾದಷ್ಟೂ ಕಡಿಮೆ ಖರ್ಚಿನಲ್ಲಿ ಅಂತಿಮ ಸಂಸ್ಕಾರ ನಡೆಸುವೆಡೆಗೆ ಕೊಂಡೊಯ್ಯಬೇಕೆಂಬುದು ಹೃದಯವಂತಿಕೆಯ ಮಾತು. ಆದರೆ ಇದು ಸಾಧ್ಯವಾಗುತಿಲ್ಲವಲ್ಲ? ತರ್ಕದ ಜೊತೆಯಲ್ಲೇ ಬದುಕಿನಲ್ಲಿ ಭಾವನಾತ್ಮಕತೆಗೆ ಅಷ್ಟೇ ಅಥವಾ ಅದಕ್ಕಿಂತ ಹೆಚ್ಚು ಸ್ಥಾನವಿರುತ್ತದೆ. ಈ ಬಗೆಯ ಭಾವನಾತ್ಮಕತೆಗೆ ಕಡೆಯ ಗಳಿಗೆಯಲ್ಲಿ ಅವಕಾಶಮಾಡಿಕೊಡಬೇಕಾಗುತ್ತದೆ. ಅದು ಎಷ್ಟರ ಮಟ್ಟಿಗೆ ಮತ್ತು ಹೇಗೆ ಎಂಬುದು ಬೇರೆ ಪ್ರಶ್ನೆ. ಇದರೊಟ್ಟಿಗೆ ಅಂಟಿಕೊಂಡು ಬಂದಿರುವ ಅನವಶ್ಯಕ ರೀತಿನೀತಿಗಳನ್ನು, ಪದ್ಧತಿಗಳನ್ನು, ತೆವಲುಗಳನ್ನು ಬಿಡುಮನಸ್ಸಿನಿಂದ ದೂರಮಾಡುವುದು ಅತ್ಯಗತ್ಯ.

ಮೃತಶರೀರದ ಬಗೆಗೆ ಪ್ರಪಂಚದಲ್ಲಿ ಎಲ್ಲ ಕಡೆಯಲ್ಲೂ ಅವಹೇಳನಕಾರಿಯಾಗಿ ನಡೆದುಕೊಳ್ಳುತ್ತಾರೆ. ಭಾರತದಲ್ಲಂತೂ ಈ ಅವಹೇಳನದ ಪ್ರಮಾಣ ಸ್ವಲ್ಪ ಹೆಚ್ಚೇ. ಶವಯಾತ್ರೆಯ ವಾಹನದಲ್ಲೇ ಜನರೂ ಸಹ ಕುಳಿತುಕೊಂಡು ಹೊರಡುತ್ತಾರೆ, ಅದೂ ಚಪ್ಪಲಿ-ಬೂಟು ಹಾಕಿಕೊಂಡು. ಬೇರೆ ದೇಶಗಳಲ್ಲಿ ಶವಕ್ಕೆ ಇಷ್ಟೊಂದು

ಅವಮರ್ಯಾದೆಯಾಗುವುದಿಲ್ಲ. ಆದರೂ ಎಷ್ಟೊಂದು ಖರ್ಚು ಮತ್ತು ಆಡಂಬರ? ಪ್ರಾಚೀನ ಇತಿಹಾಸವನ್ನು ತೆಗೆದುನೋಡಿದರೆ, ಈಜಿಪ್ಟಿನ ರ್ಯಾಮ್ಸೆಸ್ ಮತ್ತು ಟುಟಾಂಕಮನ್‌ರಂಥ ದೊರೆಗಳು ಸತ್ತನಂತರ ನಡೆಯುವ ವೈಭವವನ್ನು ಜಾಹೀರು ಮಾಡಿ ಹೋಗಿದ್ದಾರೆ.

ಶರೀರಕ್ಕೆ ಅತ್ಯಂತ ಹೆಚ್ಚು ಮಹತ್ವ ಕೊಡಬೇಕೆಂಬ ಭಾವನೆಯೇ ಇವೆಲ್ಲಕ್ಕೆ ಕಾರಣವಿರಬಹುದು. ನಾಗರಿಕ ಬದುಕಿನ ಹಿನ್ನೆಲೆಯಲ್ಲಿ ರೂಪಿಸಲಾಗಿರುವ ಕಾನೂನುಗಳು ಈ ದೃಷ್ಟಿಯಿಂದ ಕೆಲಸಕ್ಕೆ ಬಾರದವು. ಸ್ವತಂತ್ರ ಭಾರತ ಪ್ರಾಯಃ ನಾಗರಿಕತೆಯ ಪರಿಭಾಷೆ ಹಾಗೂ ಕಾನೂನುಗಳಿಗೆ ಸಂಬಂಧಪಟ್ಟಂತೆ ಪ್ರಪಂಚಕ್ಕೆ ಒಂದು ಹೊಸ ದಿಕ್ಕು ತೋರಿಸುತ್ತದೆಂದು ನಿರೀಕ್ಷಿಸಲಾಗಿತ್ತು. ಆದರೆ ಭಾರತ ಕೂಡ ಬಿಳಿಯರ, ಯೂರೋಪಿಯನ್ನರ ಮತ್ತು ಅಮೆರಿಕನ್ನರ ಹಾದಿಯಲ್ಲೇ ಹೆಜ್ಜೆ ಹಾಕಿತು. ಭಾರತೀಯರೂ ಶರೀರಕ್ಕೆ ಮಹತ್ವಕೊಟ್ಟರು. ಎಲ್ಲಿ ಹುಟ್ಟಿದರು? ಯಾವಾಗ ಹುಟ್ಟಿದರು? ತಾವು ನಾಗರಿಕ ಸ್ಥಾನಮಾನಗಳನ್ನು ಕೋರುತ್ತಿರುವ ನಾಡಿನಲ್ಲಿ ಎಷ್ಟು ವರ್ಷಗಳಿಂದ ವಾಸಮಾಡುತ್ತಿದ್ದಾರೆ? ಇವೆಲ್ಲ ಶರೀರವನ್ನು ಕುರಿತ ಮಾತುಗಳು. ಈ ಮಾತುಗಳು ಮನಸ್ಸಿಗೆ ಇಲ್ಲವೆ ಆತ್ಮಕ್ಕೆ ಸಂಬಂಧಿಸಿದಂತೆ ಕಾಣುವುದಿಲ್ಲ. ಒಬ್ಬ ವ್ಯಕ್ತಿ ಮನಸಾರೆ ಯಾವ ದೇಶವನ್ನು, ಅದರ ಸಂಸ್ಕೃತಿಯನ್ನು ತನ್ನದೆಂದು ಕೊಳ್ಳುತ್ತಾನೋ ಅದರ ನಾಗರಿಕನಾದಂತೆಯೇ. ಈ ಸಿದ್ಧಾಂತಕ್ಕಿಂತ ಮಿಗಿಲಾಗಿ ಇನ್ನಾವ ಸಿದ್ಧಾಂತ ಇರಲು ಸಾಧ್ಯ? ಇದರಲ್ಲಿ ಖಂಡಿತವಾಗಿ ಅಡಚಣೆಗಳಿವೆ. ಇವತ್ತು ಸಂದೇಹ ಮತ್ತು ಭಯಗಳಿಂದ ಕೂಡಿದ ಅಂತಾರಾಷ್ಟ್ರೀಯ ಗಾಳಿಯಲ್ಲಿ ಹಾರಿ ಹೋಗದಂತೆ ಈ ಸಿದ್ಧಾಂತವನ್ನು ಉಳಿಸುವುದು ಯಾವುದಾದರೂ ಶಕ್ತಿಶಾಲಿ ರಾಷ್ಟ್ರಕ್ಕೆ ಮಾತ್ರ ಸಾಧ್ಯವಾಗುವ ಮಾತು.

ಮಾನವ ಅಧಿಕಾರಗಳ ಪಟ್ಟಿಗೆ ಒಂದು ಹೊಸ ಅಧಿಕಾರವನ್ನು ಸೇರಿಸುವುದು ಅವಶ್ಯಕ. ಈ ಅಧಿಕಾರ ಬೇರೆ ಯಾವ ಅಧಿಕಾರಕ್ಕಿಂತಲೂ ಕಡಿಮೆ ಮಹತ್ವದ್ದಲ್ಲ. ಇದು ಮಾನವೀಯ ಅಧಿಕಾರ: ಇಷ್ಟಬಂದೆಡೆಯಲ್ಲಿ ಸಾಯುವ ಅಧಿಕಾರವಿರಬೇಕು. ಇಂದು ಮನುಷ್ಯನ ಪಾಲಿಗೆ ಈ ಅಧಿಕಾರ ಇಲ್ಲ. ಬಡವರಾದ ಇಲ್ಲವೆ ಬೇರೆ ದಾರಿಯಿಲ್ಲದ ವಿದೇಶೀಯರನ್ನು ಕೂಡಲೇ ಬೇರೆಡೆಗೆ ಕೊಂಡೊಯ್ಯಲಾಗುತ್ತದೆ. ಬದುಕಿನ ಮಟ್ಟ ಇಳಿದುಹೋಗುತ್ತದ; ಆಸ್ಟ್ರೇಲಿಯಾದ, ರಷ್ಯಾದ, ಅಮೆರಿಕೆಯ, ಹಾಗೆಯೆ ಇನ್ನೂ ಅದೆಷ್ಟೋ ದೇಶಗಳ ಬದುಕಿನಲ್ಲಿ ಏರುಪೇರಾಗುತ್ತದೆ! ಭಾರತ, ಪಾಕಿಸ್ತಾನ, ಹಾಗೆಯೆ ಇನ್ನೂ ಎಷ್ಟೋ ದೇಶಗಳ ಭದ್ರತೆ ಗಂಡಾಂತರಕ್ಕೆ ಸಿಲುಕುತ್ತದೆ! ಬಡಪಾಯಿ ಮನುಷ್ಯ ಈ ಒರಳುಕಲ್ಲಿಗೇ ತಲೆಕೊಟ್ಟು ಚಚ್ಚಿಸಿಕೊಳ್ಳುತ್ತಿದ್ದಾನೆ.

ಇನ್ನು ಮುಖನೋಡುವ ಮಾತನ್ನೇ ತೆಗೆದುಕೊಳ್ಳಿ, ಪ್ರಸಿದ್ಧ ವ್ಯಕ್ತಿಗಳ ಅಥವಾ ಸಿರಿವಂತರ ಮುಖಗಳನ್ನು ಇಂದು ದೂರದರ್ಶನದ ಮೂಲಕ ಅಚ್ಚುಕಟ್ಟಾಗಿಯೆ ನೋಡಬಹುದಲ್ಲ?

ಈಗ ಮನುಷ್ಯನನ್ನು ಉಳಿಸಿ ಕಾಪಾಡುವುದು ತುಂಬಾ ಅಗತ್ಯವಾಗಿದೆ. ಅವನು ಇಂದು ತನ್ನ ನಾಡು ಹಾಗೂ ಜಾತಿಮತಗಳ ಕಗ್ಗಂಟಿನಲ್ಲಿ ಎಷ್ಟರಮಟ್ಟಿಗೆ ತೊಳಲಾಡುತ್ತಿದ್ದಾನೆಂದರೆ, ಹುಟ್ಟು, ಮದುವೆ, ಸಾವು ಇಂತಹ ವಿಷಯಗಳಲ್ಲೂ ಅವನು ಮನುಷ್ಯನಾಗಿಲ್ಲ. ಅವನದು ಅರ್ಧಕ್ಕರ್ಧ ಭಗ್ನಗೊಂಡಿರುವ ಜೀವ. ಈ ನಿಟ್ಟಿನಲ್ಲಿ ಏನಾದರೂ ಸ್ವಲ್ಪ ಸುಧಾರಣೆ ಆಗಿದೆಯೆಂದರೆ ಅದು ಯುದ್ಧ ಮತ್ತು ವಿಜಯದ ಫಲ. ಅದರಲ್ಲೂ ಪ್ರೀತಿ–ಸದ್ಭಾವನೆಗಳ, ಅದಕ್ಕಿಂತ ಮಿಗಿಲಾಗಿ ವಿಜಯದ ಫಲ. ಹೊಸ ಮನುಷ್ಯರ ನಡುವೆ ನಿಜಕ್ಕೂ ವರ್ಣಸಂಕರವಾದಾಗ, ಎರಡು ಸಂಸ್ಕೃತಿಗಳ ಸಂಗಮದಿಂದ ಮನುಷ್ಯ ಹುಟ್ಟಿದಾಗ ನಿಜವಾದ, ವಾಸ್ತವವಾದ ಪ್ರಪಂಚಕ್ಕೆ ಅಸ್ತಿಭಾರ ಹಾಕಿದಂತಾಗುತ್ತದೆ.

ಈ ಬಗೆಯ ಹೊಸ ಸಂತಾನಕ್ಕೆ ಸೇರಿದವರು ಕಾಲ ಉರುಳಿದಂತೆ ಪ್ರತಿಷ್ಠಿತರಾಗುತ್ತಾರೆ. ಹೊಸಬರ ಕಡೆ ಸ್ವಲ್ಪ ಅನುಮಾನದಿಂದ, ತೋರಿಕೆಯ ಹಮ್ಮಿನಿಂದ ಜನ ನೋಡುವುದುಂಟು. ಹೊಸಬಗೆಯ ವರ್ಣಸಂಕರಗಳ ಸಂಬಂಧಗಳಲ್ಲಿ ಸಹ ಕೆಲವಾರು ಲೋಪ ದೋಷಗಳು ಎದುರಾಗುವುದುಂಟು. ಯಾವುದೇ ಪ್ರಾಚೀನ ನಾಡು ನಮಗಿತ್ತಿರುವ ಶಾರೀರಿಕ ಫಲ ಮಾತ್ರವಷ್ಟೇ ಅಲ್ಲ ಇದು. ಅದರೊಟ್ಟಿಗೆ ಸಾಕಷ್ಟು ಮಟ್ಟಿಗೆ ಅದರ ವಿಶೇಷಾಧಿಕಾರಗಳನ್ನೂ ಅನುಭವಿಸಬೇಕಾಗಿಬರುತ್ತದೆ. ಆದರೂ ಇದು ಹೊಸಪ್ರಪಂಚ ಮೊಳಗಿಸುತ್ತಿರುವ ಕಹಳೆಯೇ ಸರಿ.

ಭಾರತದಲ್ಲಿ ಆಂಗ್ಲೋ-ಇಂಡಿಯನ್ ಎಂಬುದಾಗಿ ಕರೆಸಿಕೊಳ್ಳುವ ಮಂದಿ ಮಾನವ ಜಗತ್ತಿಗೆ ಹಾಗೂ ಭಾರತೀಯತೆಗೆ ಕೀಲರ್ ಬಂಧುಗಳ ಬಳುವಳಿಯನ್ನು ನೀಡಿದರು. ಪೈಲಟ್ ಆಗಿದ್ದ ಶೂರ ಕೀಲರ್ ಯಾವ ವೀರನಿಗೇನೂ ಕಡಿಮೆ ಇರಲಿಲ್ಲ. ಮೈಮನಸ್ಸುಗಳಿಂದ ಅವರು ಬೇರೆ ಯಾರಿಗೂ ಕಡಿಮೆಯಿಲ್ಲದ ರೀತಿಯಲ್ಲಿ ತಮ್ಮ ಭಾರತೀಯತೆಯ ಪರಿಚಯ ಮಾಡಿಕೊಟ್ಟರು.

ಆಂಗ್ಲೋಇಂಡಿಯನ್ನರಿಗೆ ನೀಡಲಾಗಿದ್ದ ವಿಶೇಷ ಸವಲತ್ತುಗಳನ್ನು ನಿಲ್ಲಿಸಬೇಕೆಂದು ಕೀಲರ್ ಬಂಧುಗಳು ಸಾಬೀತು ಮಾಡಿ ತೋರಿಸಿದರು. ಅವರ ವಿಶೇಷ ಗುಣಗಳ ಯಾವುದೇ ಪ್ರಯೋಜನ ಅವರ ದೇಶಕ್ಕೆ ದೊರಕಲಿ, ಅವರು

ಅದನ್ನು ಪಡೆದುಕೊಳ್ಳಲಿ. ಆದರೆ ಅವರನ್ನು ನಾಡಿನ ಬೇರೊಂದು ಜಾತಿಯನ್ನಾಗಿ ಮಾಡುವ, ಅದರಲ್ಲೂ ಆ ಜನರ ಪ್ರತಿನಿಧಿಯೊಬ್ಬ ನಾಮಕರಣಗೊಂಡು ಲೋಕಸಭೆಯಲ್ಲಿ ಕೂಡುವ ಹಾಗೆ ಮಾಡುವ ಜಾತಿಯನ್ನಾಗಿಸಿ, ಅದಕ್ಕೆ ನೀಡಲಾಗುವ ಸವಲತ್ತುಗಳಾದರೂ ಕಡೇ ಪಕ್ಷ ಇಲ್ಲವಾಗಬೇಕು. ಅವರನ್ನು ಲೋಕಸಭೆಗೆ ನಾಮಕರಣಮಾಡುತ್ತದೆ ಸರ್ಕಾರ. ಜನರಲ್ ತಿಮ್ಮಯ್ಯನವರನ್ನು ಸೈಪ್ರಸ್ಸಿನಿಂದ ಬೆಂಗಳೂರಿಗೆ ಹೊತ್ತುತರುವುದೂ ಅದೇ ಸರಕಾರ! ಬೇರೆ ಬೇರೆ ಕೋಮುಗಳು ಪರಸ್ಪರ ಹೊಡೆದಾಡುವಂತೆ ಮಾಡಿ ತನ್ನ ಸ್ವಾರ್ಥ ಸಾಧನೆ ಮಾಡಿಕೊಳ್ಳುವ ಸರಕಾರ. ಹೆದರಿಕೆ ಮತ್ತು ಅನುಮಾನಗಳ ದೆಸೆಯಿಂದಾಗಿ ಯಾವುದೇ ಹೊಸ ಹೆಜ್ಜೆಯನ್ನು ಹಾಕಲು ಹಿಂಜರಿಯುವುದೂ ಅದೇ ಸರಕಾರ.

ಆಂಗ್ಲೊ-ಇಂಡಿಯನ್ ಪ್ರತಿನಿಧಿಯು ಲೋಕಸಭೆಯಲ್ಲಿ ಕುಳಿತುಕೊಳ್ಳುವುದು ಅವಶ್ಯಕವೆಂದೆನಿಸಿದರೆ, ಕಡೇಪಕ್ಷ ಚುನಾವಣೆಯಲ್ಲಿ ಆಯ್ಕೆಗೊಂಡು ಬರುವ ಸದಸ್ಯನಾಗಬೇಕು; ಸರಕಾರದ ಕೃಪಾಕಟಾಕ್ಷದಿಂದಲ್ಲ. ಸರಕಾರ ಎಲ್ಲಿಯವರೆಗೆ ಅವನನ್ನು ನಾಮಕರಣಮಾಡುತ್ತಾ ಹೋಗುತ್ತದೊ, ಅಲ್ಲಿಯವರೆಗೆ ಅವನು ಇಂಗ್ಲಿಷ್ ಭಾಷೆಗೆ ಗುಲಾಮನಾಗಿರುತ್ತಾನೆ; ತನ್ನ ಮಾತೃಭಾಷೆಯ ಬಗ್ಗೆ ಅವನಿಗೆ ಒಲವಿರುವುದಿಲ್ಲ. ಅವನು ಪ್ರತ್ಯೇಕತೆಯ ವಿಚಾರ ಬಂದಾಗ ಸರಕಾರದ ವಿರುದ್ಧ ಮಾತೆತ್ತುತ್ತಾನೆ; ಉಳಿದೆಲ್ಲ ಮೂಲಭೂತ ವಿಚಾರಗಳ ಚರ್ಚೆ ಬಂದಾಗ ಸರಕಾರದ ಹಿಂಬಾಲಕನಾಗುತ್ತಾನೆ. ಯೇಸುಕ್ರಿಸ್ತ ಇಂಗ್ಲಿಷಿನಲ್ಲಿ ಮಾತನಾಡುತ್ತಿದ್ದ ಎಂಬ ತಪ್ಪು ಗ್ರಹಿಕೆಗೆ ಅವನು ತನ್ನನ್ನು ತಾನು ಈಡುಮಾಡಿಕೊಳ್ಳುವುದಲ್ಲದೆ, ತನ್ನ ಜನರನ್ನೂ ಈ ನಿಟ್ಟಿನಲ್ಲಿ ತಪ್ಪುದಾರಿಗೆಳೆಯುತ್ತಾನೆ. ಸ್ವಲ್ಪಮಟ್ಟಿಗೆ ಭಾರತೀಯ ಕ್ರೈಸ್ತರೂ ಈ ತಪ್ಪು ಗ್ರಹಿಕೆಗೆ ಗುರಿಯಾದವರೇ. ವಾಸ್ತವವಾಗಿ ಯೇಸುಕ್ರಿಸ್ತ ಮಾತನಾಡುತ್ತಿದ್ದುದು ಆರ್ಮೆಯಿಕ್ ಭಾಷೆಯಲ್ಲಿ. ಹೋಲಿಕೆಯಲ್ಲಿ ಈ ಭಾಷೆಯು ಇಂದಿನ ಇಂಗ್ಲಿಷಿಗಿಂತಲೂ ಈಗಿನ ನಮ್ಮ ಹಿಂದಿಗೆ ಹೆಚ್ಚು ಹತ್ತಿರವಿರುವ ಭಾಷೆಯಾಗಿದೆ.

ನಮ್ಮ ಮನಸ್ಸಿನಲ್ಲಿ ಕಸ ಸೇರಿಬಿಟ್ಟಿದೆ. ಇದನ್ನೆಲ್ಲ ಗುಡಿಸಿಹಾಕುವುದು ತುಂಬಾ ಕಷ್ಟವೆನಿಸುತ್ತದೆ. ದೋಷದಿಂದ ಕೂಡಿದ ದೃಷ್ಟಿಯುಳ್ಳವರು ಈ ಲೇಖನದಲ್ಲಿ ಭಾರತೀಯತೆ ಹಾಗೂ ಮನುಷ್ಯತ್ವಗಳ ನಡುವೆ ಹೊಂದಾಣಿಕೆಯಿಲ್ಲದಿರುವುದನ್ನು ನೋಡುತ್ತಾರೆ. ಏಕೆಂದರೆ ನೋಡುವ ಅವರ ದೃಷ್ಟಿಯಲ್ಲಿ ಹೊಂದಾಣಿಕೆಯಿರುವುದಿಲ್ಲ. ಭಾರತೀಯತೆ ಎಲ್ಲಿರಬೇಕೊ ಆ ಜಾಗದಲ್ಲಿ ಒಂದು ಸೋಗಿನ, ಉದಾರವಾದ, ಭಗ್ನಗೊಂಡ ಮನುಷ್ಯತ್ವವನ್ನು ತಂದು ಕೊಡಿಸುತ್ತಾರೆ. ಹಾಗೆಯೇ ಎಲ್ಲಿ ಮನುಷ್ಯತ್ವವಿರಬೇಕೊ ಅಲ್ಲಿ ಸಂಕೀರ್ಣವಾದ, ಉಸಿರುಗಟ್ಟಿಸುವ ಭಾರತೀ

ಯತೆಯನ್ನು ಆಸನದ ಮೇಲೆ ಕೂಡಿಸುತ್ತಾರೆ. ತಾವು ವಿಶ್ವಮಾನವರಾಗುತ್ತಿದ್ದೇವೆಂದು ತಿಳಿದುಕೊಂಡುಬಿಡುತ್ತಾರೆ. ಆದರೆ ಅವರಾಗುವುದು ಕೇವಲ ವಿಶ್ವಾಮಿತ್ರರಷ್ಟೆ. ಅವರು ಪ್ರಪಂಚವನ್ನೂ ಕಳೆದುಕೊಳ್ಳುತ್ತಾರೆ, ದೇಶವನ್ನೂ ಕಳೆದುಕೊಳ್ಳುತ್ತಾರೆ. ಸತ್ತ ಹೆಣಕ್ಕೆ ನಾಡನ್ನೇ ಕೊಡುತ್ತಾರೆ, ಆದರೆ ನಾಡಿಗೆ ಕೊಡುವುದು ಮಾತ್ರ ಸತ್ತ ಹೆಣವನ್ನೇ. ನಾಲಿಗೆಗೆ ಅವರು ಕೊಡುವುದು ತಮ್ಮ ಸ್ವಂತ ಭಾಷೆಯನ್ನಲ್ಲ, ಪ್ರಪಂಚದ ಭಾಷೆಯನ್ನೂ ಅಲ್ಲ, ಬದಲಾಗಿ ತಾವು ಗುಲಾಮರ ರೀತಿಯ ಸಂಬಂಧ ಇಟ್ಟುಕೊಂಡ ದೇಶದ ಭಾಷೆಯನ್ನು.

ಆದರೆ 'ಮಣ್ಣು ಮಾಡಲು ನನ್ನದೇ ತೋಟದಲ್ಲಿ ಎರಡುಗಜ ಕೂಡ ದೊರೆಯಲಿಲ್ಲ ಭೂಮಿ' ಎಂಬ ಭಾವವನ್ನು ಸೂಚಿಸುವ ಕವನದ ಸಾಲುಗಳನ್ನು ಮೆಲುಕುಹಾಕುವುದು ಯಾರಿಗೆ ತಾನೆ ಇಷ್ಟವಾಗಲಾರದು? ಈ ನನ್ನ ತೋಟ, ತಾಯಿನಾಡು ಇಂಥ ಮಾತುಗಳು ಮನುಷ್ಯನಲ್ಲಿ ಏನಾದರೊಂದು ರೀತಿಯ ಉನ್ಮಾದವನ್ನು ಉಂಟುಮಾಡುತ್ತಲೇ ಇರುತ್ತವೆ. ಆದರೆ ಎಷ್ಟರಮಟ್ಟಿಗೆ ಹಾಗೂ ಯಾವ ಸಂದರ್ಭಗಳಲ್ಲಿ? ಇಡೀ ದೇಶವೇ ಅವನ ಕೈಬಿಟ್ಟುಹೋಗಿರುವಾಗ, ಅವನು ಎರಡುಗಜ ಭೂಮಿಗಾಗಿ ಹಾತೊರೆಯುತ್ತಾನೆ. ಯಾವ ವ್ಯಕ್ತಿಗೆ ತನ್ನ ದೇಶ ಸಿಕ್ಕಿದೆಯೋ ಅವನು ಭೂಮಿಯ ಯಾವುದೇ ಎರಡುಗಜ ನೆಲವನ್ನಾದರೂ ತನ್ನ ನೆಲವೆಂದು ಒಪ್ಪಿಯಾನು. ದೇಶಭ್ರಷ್ಟರಾದ, ತಾಯ್ನಾಡಿನಿಂದ ಹೊರಕ್ಕೆ ನೂಕಲ್ಪಟ್ಟ, ತಾಯಿನಾಡಲ್ಲೇ ಇದ್ದರೂ ನಿತ್ಯವೂ ನೋವು ಅಪಮಾನಗಳನ್ನು ಸತತವಾಗಿ ಅನುಭವಿಸುತ್ತಲೇ ಇರುವ ಅಪಾರ ಸಂಖ್ಯೆಯ ಜನರಿರುತ್ತಾರೆ. ಯಾರೋ ಕೆಲವುಮಂದಿ ಅಪರಿಚಿತರು ಬಂದು ಇವರ ಮನೆಯೊಳಗೆ ಕುಳಿತಿರುತ್ತಾರೆ; ಈ ಜನ ಸ್ವದೇಶದವರೇ ಇರಬಹುದು, ಆದರೆ ಇವರು ಮಾತ್ರ ಮನೆಯ ಹೊರ ಬಾಗಿಲಲ್ಲಿ ಕೂಡುವಂತಹ ಪರಿಸ್ಥಿತಿಯಿರುತ್ತದೆ; ಸ್ವಲ್ಪಮಟ್ಟಿಗೆ ಉತ್ತಮಪಡಿಸಿಕೊಳ್ಳುವ ಸಲುವಾಗಿ ಕೇವಲ ಎರಡು ಗಜ ನೆಲಕ್ಕಾಗಿ ಈ ಬಂಧುಗಳು ಹಾತೊರೆಯುತ್ತಿರುತ್ತಾರೆ.

ಹಿಂದೂಸ್ತಾನಿ ಕಾವ್ಯದ ಉರ್ದು ಧಾರೆಯಲ್ಲಿ ಪ್ರಾಯಶಃ ಇನ್ನೆಲ್ಲೂ ಕಂಡುಬರದಷ್ಟು ಉದಾರವಾದಿ ಕವಿಗಳಾದ ಗಾಲಿಬ್ ಮತ್ತು ಮೀರ್ 1857ರ ಸರಿಸುಮಾರಿನಲ್ಲಿ ಇದ್ದವರು; ಆಗ ಅರಸೊತ್ತಿಗೆಗಳು ಛಿದ್ರವಾಗುತ್ತಿದ್ದವು. ಇಂಥ ಸಂದರ್ಭಗಳಲ್ಲಿ ಕವಿಗಳು ಹೇಳುವುದು ಏನೇ ಇರಲಿ, ಪ್ರೇಮ ತುಂಬಿದ ಮನಸ್ಸು ಇನ್ನೂ ಹೆಚ್ಚು ಸುಲಭವಾಗಿ, ತೀವ್ರವಾಗಿ ಒಡೆಯುತ್ತದೆ. ಆಗ ಮನಸ್ಸು ನಗುತ್ತಿರುತ್ತದೆ. ಆದರೂ ಅದರ ನಡುವೆಯೆ ನಿರ್ಲಿಪ್ತವಾದ, ಆದರೆ ಮುದವನ್ನು ಅನುಭವಿಸುವಂತಹ ಕೆಲವು ಕ್ಷಣಗಳು ಎದುರಾಗುತ್ತದೆ. ಈ ಸ್ಥಿತಿಯು ಹಾಗೇ ಸ್ವಲ್ಪಕಾಲ

ಚಾಲ್ತಿಯಲ್ಲಿರುವಂತಹದು. ಜಫರ್ ಕವಿಯ ಮನಸ್ಸು ಶಾಶ್ವತವಾಗಿ ಮುದುಡಿ ಹೋಗಿತ್ತು, ಉದಾಸಗೊಂಡಿತ್ತು; ಆದರೆ ಯಾರ ಪಾಲಿಗೆ ತಾಯಿನಾಡು ಎಂಬುದು ಇರುತ್ತದೆಯೊ, ಅಂತಹವರ ಉದಾಸಭಾವನೆಯು ಕೆಲವು ಕ್ಷಣ ಮಾತ್ರ ಇದ್ದು, ಅನಂತರ ಅವರ ಮನಸ್ಸು ತಂತಾನೇ ಪ್ರಫುಲ್ಲವಾಗುತ್ತದೆ.

●

(1966)

ಹಿಂದಿಯಿಂದ ಕನ್ನಡಕ್ಕೆ : ಲಕ್ಷ್ಮೀನಾರಾಯಣ ಅರೋರಾ

ದ್ರೌಪದಿಯೊ? ಸಾವಿತ್ರಿಯೊ?

ದ್ರೌಪದಿ ಮತ್ತು ಸಾವಿತ್ರಿ : ಈ ಇಬ್ಬರು ಮಹಿಳೆಯರೂ ಕಾಲ್ಪನಿಕವೇ ಆಗಿರಬಹುದಾದ ಸಾಧ್ಯತೆಗಳು ಹೆಚ್ಚಾಗಿವೆ; ಅಥವಾ ಯಾವುದೋ ಒಂದಲ್ಲ ಒಂದು ಸ್ವರೂಪದಲ್ಲಿ ಇವರು ಇದ್ದಿರಲೂಬಹುದು. ಆದರೆ ಕಾಲ ಉರುಳಿದಂತೆ ಅನೇಕ ಕತೆಗಳು ಅವರ ಸುತ್ತ ಹೆಣೆದುಕೊಂಡಿರಲೂ ಸಾಕು. ಅಥವಾ ನಾಲ್ಕಾರು ಹೆಂಗಸರ ಕತೆಗಳು ಒಟ್ಟಾಗಿ ಒಬ್ಬ ಹೆಂಗಸಿನ ಖಾತೆಗೆ ಸೇರಿರಬಹುದು. ದ್ರೌಪದಿ ಮಹಾಭಾರತದ ಅತಿ ಮಹತ್ತರವಾದ ಮಹಿಳೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಕೃಷ್ಣೆ ಎಂಬುದು ಈಕೆಯ ಇನ್ನೊಂದು ಹೆಸರು. ಈ ಹೆಸರು ಯಾಕಾಗಿ ಈಕೆಗೆ ಬಂತೆಂಬುದರ ಬಗೆಗೆ ಹೆಚ್ಚು ಚರ್ಚಿಸದೆ, ಈ ಸಂದರ್ಭದಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ಇವಳು ಬಹುಶಃ ನಸುಗಪ್ಪು ಬಣ್ಣದವಳಿದ್ದಿರಬೇಕು. ನಾಯಕನ ಹೆಸರು ಕೃಷ್ಣ. ಇದೇ ರೀತಿ ಮಹಾಭಾರತದ ನಾಯಕಿಯ ಹೆಸರು ಕೃಷ್ಣೆ. ಕೃಷ್ಣ – ಕೃಷ್ಣೆ !

ಕೃಷ್ಣ–ಕೃಷ್ಣೆ: ಇವರ ನಡುವಣ ಸಂಬಂಧಗಳ ಬಗೆಗೆ ಪ್ರತ್ಯೇಕವಾದ ಚರ್ಚೆ ಇದೆ. ಆದರೆ ಇಲ್ಲಿ ಕೃಷ್ಣೆ ಎಂಥ ಮಹತ್ತರ ವ್ಯಕ್ತಿತ್ವದವಳು ಎಂಬುದರತ್ತ ಮಾತ್ರ ತಮ್ಮ ಗಮನ ಸೆಳೆಯುತ್ತಿದ್ದೇನೆ. ವಿಷಾದದಿಂದ ಹೇಳಬೇಕಾದ ಸಂಗತಿಯೆಂದರೆ, ದ್ರೌಪದಿಗೆ ಐವರು ಗಂಡಂದಿರಿದ್ದರು ಎಂಬ ಮಾತನ್ನೇ ಮುಂದುಮಾಡಿ ಇವತ್ತಿನ ಭಾರತದ ಸ್ತ್ರೀ–ಪುರುಷರು ಈಕೆಯನ್ನು ನೆನಪಿನಲ್ಲಿಟ್ಟುಕೊಂಡಿದ್ದಾರೆ. ಈಕೆಗೆ ಐವರು ಗಂಡಂದಿರಿದ್ದರೋ, ಆರು ಜನ ಗಂಡಂದಿರಿದ್ದರೋ, ಆರೂವರೆ ಗಂಡಂದಿರಿದ್ದರೋ ಎಂಬುದರ ಬಗ್ಗೆ ಚರ್ಚಿಸುವುದು ವ್ಯರ್ಥ. ಹೀಗೆ ಯೋಚಿಸುವುದು ಇವತ್ತಿನ ಕೊಳೆತು ನಾರುತ್ತಿರುವ ಭಾರತೀಯ ಮನಸ್ಸಿನ ಕುರುಹಾಗಿದ್ದು, ಅದು ಇಂಥ ವಿಷಯಗಳತ್ತ ಬಹಳ ಬೇಗ ಹೊರಳುತ್ತದೆ ಮತ್ತು ಯಾವ ಹೆಂಗಸಿಗೆ ಎಷ್ಟು ಜನ ಗಂಡಂದಿರಿದ್ದಾರೆ, ಎಷ್ಟು ಮಂದಿ ಪ್ರಿಯಕರರಿದ್ದಾರೆ ಅಥವಾ ಅವಳ ಚಾರಿತ್ರ್ಯ ಯಾವ ಬಗೆಯದು ಎಂದು ಸದಾ ಯೋಚಿಸುತ್ತಿರುತ್ತದೆ; ಇದರ ಹೊರತಾಗಿ ಈ ಮನಸ್ಸು ಬೇರೆ ವಿಷಯಗಳತ್ತ ಹೊರಳುವುದೇ ಇಲ್ಲ.

ಇದಕ್ಕೆ ತದ್ವಿರುದ್ಧವಾಗಿ ಸಾವಿತ್ರಿಯ ಬಗೆಗೆ ಒಂದು ದಂತಕತೆ ಪ್ರಸಿದ್ಧವಾಗಿದೆ: ಆಕೆ, ತನ್ನ ಗಂಡನನ್ನು ಎಷ್ಟು ಗಾಢವಾಗಿ ಪ್ರೀತಿಸುತ್ತಿದ್ದಳೆಂದರೆ, ಎಂಥ ಪತಿವ್ರತೆಯಾಗಿದ್ದಳೆಂದರೆ-ಈ ಪತಿವ್ರತೆ ಶಬ್ದಕ್ಕೆ ಸಾವಿತ್ರಿ ಪ್ರತೀಕಳಾಗಿದ್ದಾಳೆ-ಆಕೆಯ ಗಂಡ ಸತ್ತಾಗ ಯಮನ ಬಳಿಗೇ ಹೋಗಿ ಆತನನ್ನು ಬಿಡಿಸಿಕೊಂಡು ಬಂದಳಂತೆ, ಅವನನ್ನು ಇನ್ನೊಮ್ಮೆ ಬದುಕಿಸಿಕೊಂಡಳಂತೆ. ಹಿಂದೂ ಮಹಿಳೆಯರ ಮತ್ತು ಪುರುಷರ ಹೃದಯಗಳು ಸಾವಿತ್ರಿಯ ಬಗೆಗೆ ಥಟ್ಟನೆ ಭಾವುಕವಾಗಿ ಬಿಡುತ್ತವೆ. ಈ ಭಾವುಕ ಹೃದಯಗಳು, ಅಬ್ಬಾ! ಎಂಥ ಅಚ್ಚರಿಯ ಹೆಣ್ಣು ಈಕೆ!! ಎಂದು ಉದ್ಗರಿಸುತ್ತವೆ. ಹೆಂಗಸರಂತೂ ಈ ಬಗ್ಗೆ ಭಾವನಾ ಪ್ರಪಂಚದಲ್ಲಿ ಮುಳುಗಿಬಿಡುತ್ತಾರೆ. ಹಿಂದೂ ದಂತಕತೆಗಳಲ್ಲಿ ಇಂಥ ಪತಿವ್ರತೆಯ, ಯಮನ ಕೈಗಳಿಂದ ಗಂಡನನ್ನು ಬಿಡಿಸಿಕೊಂಡು ಬಂದಂಥ ಹೆಣ್ಣಿನ ಕತೆ ಇರುವ ಹಾಗೆ-ತನ್ನ ಹೆಂಡತಿ ಸತ್ತಾಗ, ಆಕೆಯನ್ನು ಯಮನ ಕೈಯಿಂದ ಅನುರಾಗದಿಂದ ಬಿಡಿಸಿಕೊಂಡು ಬಂದ ಗಂಡನ ಒಂದು ಕತೆಯನ್ನಾದರೂ ಹೇಳಿ ಎಂದು ನಾನು ಅನೇಕರನ್ನು ಎಷ್ಟೋ ಸಾರಿ ಕೇಳಿದ್ದೇನೆ. ಹೀಗೆ ಹೆಂಡತಿಯನ್ನು ಬದುಕಿಸಿಕೊಂಡು ಬಂದ ಪತ್ನೀವ್ರತನ ಕತೆ ಕೇಳಲು ನಾನು ತುಂಬು ಆಸಕ್ತನಾಗಿದ್ದೇನೆ. ಇಂಥ ಕತೆಗಳು ಏಕಮುಖವಾಗಿರದೆ ಎರಡೂ ದಿಕ್ಕಿನಲ್ಲಿ ಕುಡಿಯೊಡೆದು ಪಲ್ಲವಿಸುವಂಥದಾಗಿದ್ದರೆ ಹೆಚ್ಚು ಆನಂದದಾಯಕವಾಗಿರುತ್ತಿತ್ತು. ಕೊನೆಯ ಪಕ್ಷ, ಸಮಾನತೆಯ ಆಧಾರದ ಮೇಲೆ ಪ್ರಪಂಚದಲ್ಲಿ ಏನಾದರೊಂದನ್ನು ಸೃಷ್ಟಿಸಬೇಕೆನ್ನುವವನ ಮುಂದೆ ಏಳುವ ಪ್ರಶ್ನೆಯೇನೆಂದರೆ, ಪತಿವ್ರತೆಗೆ ಗಟ್ಟಿಯಾದ ಪ್ರತೀಕವಾಗಿ ಸಾವಿತ್ರಿಯು ಹಿಂದೂಗಳಲ್ಲಿ ಅಥವಾ ಭಾರತದಲ್ಲಿ ಇರುವಂತೆ, ಪತ್ನೀವ್ರತನ ಪ್ರತೀಕವಾಗಿ ಯಾವನಾದರೂ ಒಬ್ಬ ಹೃದಯ ಸಂಪನ್ನನಾದ ಗಂಡು ಇರಲೇಬೇಕು. ಆದರೆ ಅಂಥವನಿಲ್ಲವಲ್ಲ ಅಂದಮೇಲೆ ಇದರಿಂದ ಅತ್ಯಂತ ಸ್ಪಷ್ಟವಾಗುವ ಅಂಶ ಇದು: ಯಾವತ್ತೋ ಒಂದು ದಿನ ಈ ಕತೆಗಳು ಥಟ್ಟನೆ ಹುಟ್ಟಿಕೊಂಡವುಗಳಲ್ಲ ಅಥವಾ ಇದ್ದವುಗಳಲ್ಲ- ಈ ಘಟನೆಗಳು ನಡೆದಿವೆ ಎಂದೇ ಒಂದು ಕ್ಷಣ ಇಟ್ಟುಕೊಳ್ಳಿ-ಅವತ್ತಿನಿಂದ ಇವತ್ತಿನವರೆಗೆ ಭಾರತೀಯ ಮನಸ್ಸಿನಲ್ಲಿ ತನ್ನ ಪತಿಯ ಶರೀರ, ಮನಸ್ಸು ಅಥವಾ ಆತ್ಮದೊಂದಿಗೆ ತಾದಾತ್ಮ್ಯಗೊಂಡಿರುವ, ಮತ್ತು ಆ ಪತಿವ್ರತೆ ಮತ್ತು ಪಾತಿವ್ರತ್ಯ ಧರ್ಮದ ಪ್ರತೀಕವಾಗಿರುವ ಆ ಮಹಿಳೆಯ ಬಗೆಗೆ ಎಂಥ ದೃಢವಾದ ಭಾವನೆಯಿದೆ ಎಂದು ಗೊತ್ತಾಗುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಹೆಣ್ಣಿನ ಬಗೆಗೆ ಗಂಡಸಿನ ಮನಸ್ಸಿನಲ್ಲಿ, ಅದೇ ಬಗೆಯ ಶ್ರದ್ಧೆ ಅಥವಾ ಪ್ರೀತ್ಯಾದರಗಳು ಇರುವ ಕತೆಯಾಗಲೀ ಅಥವಾ ಗಂಡಿನ ಮನಸ್ಸಿನಲ್ಲಿ ಎಂದೂ ಮುಕ್ಕಾಗದ, ಜನ್ಮ ಜನ್ಮಾಂತರಗಳಿಂದ ನಿರಂತರವಾಗಿ ಸಾಗಿ ಬಂದ ಪ್ರೇಮವನ್ನು ಒಳಗೊಂಡ ಒಂದು ಕತೆಯಾಗಲೀ ಸಿಗುವುದೇ ಇಲ್ಲ.

ಇಂಥ ಕತೆಗಳನ್ನು ನೀವೂ ಕೇಳಿರಬಹುದು : ಭಾರತೀಯ ಮಹಿಳೆಯ ಮನಃಸ್ಥಿತಿ ಯಾವ ರೀತಿಯದೆಂದರೆ–ಆಕೆ, 'ಈ ಜನ್ಮದಲ್ಲಿ ಈ ಗಂಡ ಸಿಕ್ಕಿಯೇ ಇದ್ದಾನೆ, ಸರಿ; ಆದರೆ ಮುಂದಿನ ಜನ್ಮದಲ್ಲೂ ಈ ಗಂಡನೇ ಸಿಗಲಿ' ಎಂದು ಹಾರೈಸುತ್ತಾಳೆ. ನಿಜವಾಗಿಯೂ ಅವಳು ಪತಿವ್ರತೆಯೇ ಇದ್ದಿರಬೇಕು. ಯಾವ ಜನ್ಮ ಇದೆ, ಯಾವುದಿಲ್ಲ ಎಂಬ ವಿಚಾರಗಳನ್ನು ಬಿಟ್ಟು ಬಿಡೋಣ. ಈ ಎಲ್ಲ ಕತೆಗಳನ್ನು ನಾನು ಬರೀ ಕತೆಗಳಂತೆ ಮಾತ್ರ ನೋಡುತ್ತೇನೆ. ಪುನರ್ಜನ್ಮ ಇತ್ಯಾದಿ ಇವೆ ಎಂದು ನಾನು ನಂಬುತ್ತೇನೆಂದು ತಿಳಿದುಕೊಳ್ಳಬೇಡಿ. ಪುನರ್ಜನ್ಮ ಇತ್ಯಾದಿಗಳಿಲ್ಲವೆಂದೇ ನನ್ನ ನಂಬಿಕೆ. ಇದೊಂದು ಅಡುಗೂಲಜ್ಜಿ ಕತೆ. ಆದರೆ, ಈ ಅಡುಗೂಲಜ್ಜಿ ಕತೆಗಳಲ್ಲೂ ಅಲ್ಲಲ್ಲಿ ಉತ್ತಮಾಂಶಗಳು ಆಶ್ಚರ್ಯಕರ ರೀತಿಯಲ್ಲಿ ಕಾಣಿಸಿಕೊಳ್ಳುತ್ತವೆ. ಸೃಷ್ಟಿಯ ಆರಂಭದಿಂದ, ಅಂದರೆ ಗಂಡು–ಹೆಣ್ಣುಗಳ ಸಂಬಂಧ ಉಂಟಾದಂದಿನಿಂದ ಹೆಂಗಸು ಪತಿವ್ರತೆಯಾಗಿದ್ದರೆ ಒಂದೇ ಗಂಡಿನೊಂದಿಗೆ ಬಾಳುತ್ತಿದ್ದಾಳೆ; ಮುಂದೆ ಪ್ರಳಯ ಆಗುವವರೆಗೂ ಅವನ ಜತೆಯೇ ಬಾಳುತ್ತಾಳೆ ಎಂಬ ವಿಚಾರವೇ ಹುರುಳಿಲ್ಲದ್ದಾದ್ದರಿಂದ, ಈ ಹಂತದವರೆಗೆ ಯಾವನೋ ಒಬ್ಬ ಗಂಡಸಿನ ಜೊತೆ ಒಂದು ಹೆಣ್ಣು ಆತ್ಮೀಯವಾಗಿರುವುದು ಒಳ್ಳೆಯದೋ, ಕೆಟ್ಟದ್ದೋ ಎಂಬ ಚರ್ಚೆಯನ್ನು ನಾನು ಇಲ್ಲಿ ಎತ್ತುವುದಿಲ್ಲ. ಆದರೆ, ಒಂದು ಪ್ರಶ್ನೆಯನ್ನು ಮಾತ್ರ ಕೇಳುತ್ತೇನೆ: ತಕ್ಕಡಿಯ ಎರಡೂ ತಟ್ಟೆಗಳನ್ನು ಸಮನಾಗಿ ಇಡಬೇಕಾದರೆ, ಸಮಾಜದ ನಿರ್ಮಾಣ ಸರಿಯಾದ ರೀತಿಯಲ್ಲಿ ಆಗಬೇಕಾದರೆ, ಯಾವ ರೀತಿ ಹೆಂಗಸು ಒಂದೇ ಗಂಡಿನ ಜತೆ ಜನ್ಮ ಜನ್ಮಾಂತರಗಳಿಂದಲೂ ಸಂಬಂಧವನ್ನಿಟ್ಟುಕೊಂಡಿದ್ದೇನೆಂದು ಹೆಮ್ಮೆಯಿಂದ ಹೇಳುತ್ತಾಳೋ, ಹಾಗೆಯೇ ಒಬ್ಬಳೇ ಹೆಂಗಸಿನೊಂದಿಗೆ ಒಂದು ಗಂಡಿನ ಸಂಬಂಧವೂ ಜನ್ಮ ಜನ್ಮಾಂತರಗಳಿಂದ ಕೂಡಿ ಕಟ್ಟೆರಕದಿಂದ ಬರಬೇಕಾದುದು ಆವಶ್ಯಕ ಎಂದು ನಾವು ಹೇಳಬೇಕಾಗುತ್ತದೆ ತಾನೆ ?

"ಈ ಬಗೆಯ ಯಾವುದೇ ಉದಾಹರಣೆಯಿಲ್ಲ ಎಂದು ನೀವು ಹೇಳಿಬಿಡುತ್ತೀರಿ. ಆದರೆ, ರಾಮನಿದ್ದಾನಲ್ಲ?" ಎಂದು ಜನ ನನ್ನನ್ನು ಅಲ್ಲಲ್ಲಿ ಕೇಳುವುದುಂಟು. ಆತ ತನ್ನ ಜೀವನ ಸಂಗಾತಿಯಲ್ಲಿ ಪರಮ ಅನುರಕ್ತನೆಂದು ಸಹ ಜನ ಹೇಳುತ್ತಿರುತ್ತಾರೆ. ಈ ದಂಪತಿಗಳಲ್ಲಿ ಬಹಳ ಅಂತರವಿದೆ. ರಾಮನ ಕತೆ ನಮ್ಮಲ್ಲಿ ತುಂಬಾ ಪ್ರಸಿದ್ಧವಾದುದು. ನಾನು ಇಲ್ಲಿ ಹೇಳುವುದಿಷ್ಟೆ, ರಾಮನಲ್ಲಿ ನನಗೆ ಮೂರು–ನಾಲ್ಕು ದೋಷಗಳು ಕಂಡುಬಂದಿವೆ. ಅವುಗಳಲ್ಲಿ ಮುಖ್ಯವಾದದ್ದು ಸೀತೆಗೆ ಸಂಬಂಧಿಸಿದ್ದಾಗಿದೆ. ಇದೊಂದು ಮಹತ್ತರವಾದ ದೋಷ. ಎಷ್ಟೋ ಸಾರಿ ಜನ ತಮ್ಮ ತಮ್ಮಲ್ಲಿ ಚರ್ಚೆಮಾಡುವಾಗ, ಅದರಲ್ಲೂ ವಿಶೇಷವಾಗಿ ನವಯುವಕರು, ಅವನಲ್ಲಿ ಪ್ರಜಾತಂತ್ರವನ್ನು ಅರಸುವ ಪ್ರಯತ್ನಮಾಡುತ್ತಾರೆ. ಒಬ್ಬ ಅಗಸ

ಹೇಳಿದ ಮಾತ್ರಕ್ಕೆ ಆತ ತನ್ನ ಹೆಂಡತಿಯನ್ನು ಮನೆಯಿಂದ ಹೊರಗಟ್ಟಿದ್ದು ಮತ್ತು ಅಗ್ನಿಪರೀಕ್ಷೆಗೆ ಒಳಗಾಗು ಎಂದು ಹೇಳಿದ್ದನ್ನು ಉಲ್ಲೇಖಿಸಿ, ರಾಮ ಎಷ್ಟು ದೊಡ್ಡ ಪ್ರಜಾಪ್ರಭುತ್ವವಾದಿ ಎಂದು ಹೇಳುತ್ತಿರುತ್ತಾರೆ. ಅಗಸ ಹೇಳಿದ್ದಕ್ಕೆ ಅವನು ಹೆಂಡತಿಯನ್ನು ಹೊರಗಟ್ಟಿದ ಎಂದು ಒಪ್ಪಿಕೊಂಡರೂ, ಅಗ್ನಿಪರೀಕ್ಷೆಗೆ ಯಾವ ಕಾರಣವಿತ್ತು? ಆಗ ಯಾರು ಯಾವ ಬೇಡಿಕೆಯನ್ನಿಟ್ಟಿದ್ದರು? ಯಾರೋ ಒಬ್ಬ ಪ್ರಜೆ ಈ ಬೇಡಿಕೆಯನ್ನಿಟ್ಟಿದ್ದ ಎಂದು ಒಂದು ಕ್ಷಣ ಒಪ್ಪಿಕೊಂಡರೂ, ಪ್ರಜಾತಂತ್ರದಲ್ಲಿ ಯಾರು ಏನು ಬೇಕಾದರೂ ಹೇಳಬಹುದು ಎಂದು ಅರ್ಥವೇನು? ಒಂದು ಪಕ್ಷ, ಪ್ರಜಾತಂತ್ರದ ಬಗೆಗೆ ಈ ಮಟ್ಟದ ಪ್ರೀತಿಯನ್ನಿಟ್ಟುಕೊಂಡಿದ್ದೇ ಆದರೆ, ರಾಮನ ಬಳಿ ಬೇರೆ ಮಾರ್ಗವೇ ಇರಲಿಲ್ಲವೇನು? ಈ ರಾಮ ಮನಸ್ಸುಮಾಡಿದ್ದರೆ ಸಿಂಹಾಸನವನ್ನೂ ತೊರೆದು, ಸೀತೆಯ ಜತೆಯಲ್ಲಿ ಮತ್ತೆ ವನವಾಸಕ್ಕೆ ಹೋಗಲು ಆಗುತ್ತಿರಲಿಲ್ಲವೇನು? ಇದೊಂದು ಕೊಳಕು ಪ್ರಸಂಗ : ಸೀತೆಯೊಡನೆ ರಾಮ ವ್ಯವಹರಿಸಿದ ಬಗೆಯನ್ನು ಕಂಡೂ, ಭಾರತೀಯ ನಾರಿಯರು ಆತನ ಬಗೆಗೆ ಇಟ್ಟುಕೊಂಡಿರುವ ಪ್ರೀತಿಯನ್ನು ನೋಡಿ ನನಗೆ ಎಷ್ಟೋ ಸಾರಿ ತುಂಬಾ ಆಶ್ಚರ್ಯವಾಗಿದೆ. ಇಷ್ಟಾದರೂ ರಾಜಕಾರಣಕ್ಕೆ ಸಂಬಂಧಪಟ್ಟಂತೆ ರಾಮನ ಮರ್ಯಾದಾ ಪುರುಷೋತ್ತಮನ ರೂಪವಿದೆಯಲ್ಲ, ಅದು ಎಷ್ಟು ಪ್ರಖರವಾಗಿದೆಯೆಂದರೆ-ರಾಮನ ವ್ಯಕ್ತಿತ್ವದಲ್ಲಿ ಕಾಣುವ ನಾಲ್ಕೈದು ದೋಷಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡು, ರಾಮನಲ್ಲಿರುವ ಆ ಮಹಾನ್‌ಗುಣದಿಂದ ಏನಾದರೂ ಕಲಿಯಲಿ ಎಂದು ನಾನಾದರೂ ಅಪೇಕ್ಷಿಸುತ್ತೇನೆ. ರಾಜಕೀಯದಲ್ಲಿ ಆತನಂಥ ವ್ಯಕ್ತಿ ಪ್ರಪಂಚದಲ್ಲಿ ಇನ್ನೊಬ್ಬ ಇಲ್ಲ. ಏಕೆಂದರೆ, ಆತ ರಾಜಕೀಯದ ಘನತೆಯನ್ನು ಎತ್ತಿಹಿಡಿದಿದ್ದಾನೆ. ನೀತಿ ನಿಯಮಗಳನ್ನು ಪಾಲಿಸಿದ, ತನ್ನನ್ನು ತಾನು ಸಂಯಮದಲ್ಲಿಟ್ಟುಕೊಂಡ. ಹೀಗಿದ್ದುಕೊಂಡು ರಾಜಕಾರಣದ ಚುಕ್ಕಾಣಿಹಿಡಿದ ಇನ್ನೊಂದು ಉದಾಹರಣೆ ಇಲ್ಲ.

ಸ್ನೇಹಕೆ, ಮಮತೆಗೆ ಭರತನ ಹೆಸರು; ರಾಮ-ಸೀತೆಯರು ಸಮತೆಗೆ ಹೆಸರು. ಸ್ನೇಹ-ಮಮತೆಗಳು ಭರತನಲ್ಲಿ ಸದಾ ಮನೆಮಾಡಿವೆ. ಇದೇ ರೀತಿ ಸಮತೆಯಿಂದ ನೋಡಿದರೆ, ರಾಮನ ಪಾತ್ರ ಎದ್ದು ಕಾಣುತ್ತದೆ; ಸುಖ- ದುಃಖ, ಸೋಲು-ಗೆಲುವು, ಆನಂದ-ನಿರಾಶೆ ಎಲ್ಲ ಬಗೆಯ ಸ್ಥಿತಿಗಳಲ್ಲೂ ಒಂದೇ ಬಗೆಯ ಸಮಚಿತ್ತವನ್ನೂ ಈತ ಮೆರೆದಿದ್ದಾನೆ. ರಾಗ ದ್ವೇಷಗಳಿಂದ ಹೊರಗಿದ್ದು ಸಮಚಿತ್ತವನ್ನು ಕಾಯ್ದುಕೊಳ್ಳುವುದಿದೆಯಲ್ಲ, ಈ ಗುಣ ಆತನ ವಿಷಯದಲ್ಲಿ ಸಂಪೂರ್ಣವಾಗಿ ಸರಿಯಿಲ್ಲದಿರಬಹುದು. ಅದನ್ನು ಎಷ್ಟು ಸಾಧ್ಯವೋ ಅಷ್ಟು ಕಾಪಾಡಿಕೊಂಡು ಬಂದಿರುವ ಈತ, ತನ್ನ ಬದುಕಿನ ಉದ್ದಕ್ಕೂ ಸಮಚಿತ್ತತೆಯನ್ನು

ಕಾಪಾಡಿಕೊಂಡಿದ್ದಾನೆ. ಇಷ್ಟಾಗಿಯೂ ಸೀತೆಯ ಬಗೆಗೆ ರಾಮ ನಡೆದುಕೊಂಡ ರೀತಿಯನ್ನು ಗಮನದಲ್ಲಿಟ್ಟುಕೊಂಡು, ಮನೆಗಳಲ್ಲಿ ಮಕ್ಕಳು ಹುಟ್ಟಿದಾಗ, ಅಥವಾ ಮದುವೆ ಮುಂತಾದ ಸಂದರ್ಭಗಳಲ್ಲಿ ರಾಮನನ್ನು ಪಾಪಿ ಎಂದು ಕರೆಯುವ ಕೋಟ್ಯಾಂತರ ಹೆಂಗಸರು ನಮ್ಮಲ್ಲಿದ್ದರು; ಈಗಲೂ ಇದ್ದಾರೆ ಎಂಬ ಮಾತನ್ನು ಕೇಳಿ ನಿಮಗೆ ಆಶ್ಚರ್ಯವಾಗಬಹುದು. ಪುಸ್ತಕ ಬರೆಯುವವರು ತುಂಬ ಸುಸಂಸ್ಕೃತರೂ, ಸಭ್ಯರೂ ಆಗಿರುತ್ತಾರೆ. ಆದರೆ, ಹೊಲ-ಗದ್ದೆಗಳಲ್ಲಿ ಗಾಣದೆತ್ತುಗಳಂತೆ ದುಡಿಯುವ, ಹುಲ್ಲು-ಸೊಪ್ಪು-ಸೆದೆ ಕೀಳುವ ನಮ್ಮ ಕೂಲಿಕಾರ ಹೆಂಗಸರ ಹೃದಯಗಳಿಗೆ ಕಿವಿಗೊಟ್ಟಲ್ಲಿ, ಅಲ್ಲಿ ಅವರ ಸಮಸ್ತ ನೋವೇ ಮಾತನಾಡಲಾರಂಭಿಸುತ್ತದೆ ಎಂಬ ಸಂಗತಿ ಹೆಚ್ಚಿನವರಿಗೆ ಗೊತ್ತಿಲ್ಲ. ಆ ವಸಿಷ್ಠ ಗುರುವಿಗೆ ರಾಮನ ಕತೆಯ ಸಂದರ್ಭದಲ್ಲಿ ಸೀತೆ ಅತೀವ ಸಿಟ್ಟಿನಿಂದ ಹೇಳುತ್ತಾಳೆ: ''ಗುರುಗಳೇ, ನೀವು ನನ್ನನ್ನು ಕರೆದುಕೊಂಡು ಹೋಗಬಯಸುತ್ತೀರಾ ? ಯಜ್ಞದ ಸಮಯದಲ್ಲಿ ರಾಮ ಸೀತೆಯ ಅವಶ್ಯಕತೆಯಿದೆ ಎಂದು ಭಾವಿಸುತ್ತಾನೆ. ನನ್ನನ್ನು ಕರೆತರಲು ಗುರು ವಸಿಷ್ಠರನ್ನು ಕಳಿಸುತ್ತಾನೆ. ನೀವು ಹೇಳಿದರೆ ನಿಮ್ಮೊಡನೆ ನಾನು ಒಂದು ಹೆಜ್ಜೆ ಹಾಕುತ್ತೇನೆ. ಆದರೆ, ನಾನು ಆ ಪಾಪಿಯ ಮುಖವನ್ನು ಪುನಃ ನೋಡುವುದಿಲ್ಲ.'' ಈ ಸಂದರ್ಭದಲ್ಲಿ 'ಪಾಪಿ' ಶಬ್ದ ಹೆಚ್ಚು ಕಠಿಣವಾಯಿತೇನೋ? ಆದರೆ ಬೆವರು ಹರಿಸಿ, ನಿರಂತರವಾಗಿ ಹೊಲಗದ್ದೆಗಳಲ್ಲಿ ದುಡಿಯುವ ಅಚ್ಚ ಗ್ರಾಮೀಣ ಮಹಿಳೆಯರು ಮಾತ್ರ ಹೀಗೆಲ್ಲ ಮಾತನಾಡುವ ಧೈರ್ಯ ಹೊಂದಿರುತ್ತಾರೆ. ಬೇರೆಯವರಿಂದ ಹೀಗೆ ಹೇಳಲು ಸಾಧ್ಯವಾಗುವುದಿಲ್ಲ. ಈ ಬಗೆಯ ವಿಚಾರಗಳು ಮೊದಲಿನ ರಾಮಾಯಣಗಳಲ್ಲಿವೆ; ನಂತರದ ದಿನಗಳಲ್ಲಿ ಇವು ಸಂಪೂರ್ಣವಾಗಿ ಮಾಯವಾಗಿಬಿಟ್ಟವು.

ಕಳೆದ ಎಷ್ಟೋ ಸಾವಿರ ವರ್ಷಗಳಲ್ಲಿ, ಭಾರತೀಯ ಇತಿಹಾಸದಲ್ಲಿ ಈ ರೀತಿಯ ದಂತಕಥೆ ಅಥವಾ ಅಡುಗೂಲಜ್ಜಿ ಕಥೆಗಳನ್ನು ಕಟ್ಟಲಾಗಿದೆ ಅಥವಾ ಇಂಥ ಘಟನೆಗಳು ಘಟಿಸಿರಲೂಬಹುದು. ಇವಕ್ಕೆಲ್ಲ ನಮ್ಮ ಕವಿಗಳು, ಲೇಖಕರು ತಮ್ಮ ಮುದ್ರೆಯನ್ನು ಒತ್ತಿದ್ದಾರೆ. ಇಲ್ಲೆಲ್ಲ ಹೆಣ್ಣು-ಗಂಡಿನ ಮಧ್ಯೆ ಒಂದು ವಿಚಿತ್ರ ಬಗೆಯ ಅಸಮಾನತೆಯಿದೆ. ಈ ಅಸಮಾನತೆಗಳ ಆಧಾರದ ಮೇಲೆ ಪಾತಿವ್ರತ್ಯ ಧರ್ಮವನ್ನು ನಿರೂಪಿಸುವ ಒಂದು ಸುಂದರ ಕಥೆಯನ್ನು ಸೃಷ್ಟಿಸಿದರು. ನಾನು ಇದಕ್ಕೆ ಅಪಮಾನ ಮಾಡುವುದಿಲ್ಲ. ಇದು ಸುಂದರ ರಚನೆಯೇ. ಅಂದಾಕ್ಷಣಕ್ಕೆ, ಒಬ್ಬನಿಗಿಂತ ಹೆಚ್ಚು ಜನರನ್ನು ಪ್ರೇಮಿಸುವ ಅಥವಾ ಒಟ್ಟಿಗೆ ಒಬ್ಬರಾದ ನಂತರ ಇನ್ನೊಬ್ಬರನ್ನು ಪ್ರೇಮಿಸುವ ಹೆಣ್ಣನ್ನು ನಾನು ಇಷ್ಟಪಡುತ್ತೇನೆ ಎಂದು ನೀವು ದಯವಿಟ್ಟು ಭಾವಿಸಬೇಡಿ. ಸಮಾನತೆ ನನಗೆ ಇಲ್ಲಿ ಮುಖ್ಯವಾಗಿರುವ ಅಂಶ. ಸುಂದರ

ಪ್ರಪಂಚವನ್ನು ಗಂಡು ಕಾಣಬಯಸುವುದಾದರೆ, ಒಬ್ಬಳಾದ ನಂತರ ಇನ್ನೊಬ್ಬಳನ್ನು ಪ್ರೇಮಿಸುವುದಕ್ಕೆ ಆತನಿಗೆ ಅವಕಾಶವಿರುವುದಾದರೆ, ಇದೇ ಅವಕಾಶ ಹೆಣ್ಣಿಗೂ ಇರಬೇಕಲ್ಲವೆ? ಅಸಮಾನತೆಯ ಆಧಾರದ ಮೇಲೆ ಆ ಸುಂದರ ಕತೆ ರಚನೆಯಾಗಿದೆ, ಇದು ಬುದ್ಧಿಗಷ್ಟೇ ಸೀಮಿತವಾಗಿದೆ. ಇದರಿಂದಾಗಿಯೇ ಸಮಾಜದಲ್ಲಿ ಅದರ ಯಾವೊಂದು ಪರಿಣಾಮವೂ ಆಗಿಲ್ಲ. ಹೆಣ್ಣು ಹೇಗೆ ಮಾಂಸದ ಮುದ್ದೆಯಾಗಷ್ಟೇ ಉಳಿದಿದ್ದಾಳೆ, ಹೇಗೆ ನಿರರ್ಥಕಳಾಗಿದ್ದಾಳೆ ಸಮಾಜಕ್ಕೆ ಒಂದಿಷ್ಟು ಉಪಕಾರಿಯಾಗಿರುವ ಅವಳು ಹೇಗೆ ತಾನು ನೋವಿನಿಂದ ಭಾರವಾಗಿದ್ದಾಳೆ ಎಂಬುದಕ್ಕೆ ಉದಾಹರಣೆಗಳನ್ನೇನೂ ನಾನು ಕೊಡಬೇಕಾಗಿಲ್ಲ. ಇದಲ್ಲದೆ ಪ್ರೇಮದ ಪರಿದಿಯಲ್ಲೂ ಹೃದಯದ ಸ್ನೇಹ, ಪ್ರೇಮ ಅಥವಾ ಭಾವುಕತೆಯಿದೆಯಲ್ಲ, ಅಲ್ಲೂ ಹಿಂದೂ ಹೆಂಗಸರು ಮತ್ತು ಗಂಡಸರು ತುಂಬ ಹಿಂದುಳಿದಿದ್ದಾರೆಂದೇ ನನ್ನ ಅನಿಸಿಕೆ. ನಾನು ಇಲ್ಲಿ ಎರಡು ಎರಡೂವರೆ ಸಾವಿರ, ಮೂರು ಸಾವಿರ ವರ್ಷಗಳಷ್ಟು ಹಿಂದಿನ ಹಿಂದೂ ಸ್ತ್ರೀ-ಪುರುಷರ ಅಥವಾ ಆಯ್ದ ಜನರ ಮಾತುಗಳನ್ನಾಡುತ್ತಿಲ್ಲ. ಒಮ್ಮೊಮ್ಮೆ ಒಂದೊಂದು ರೀತಿಯ ಉತ್ತಮ ಸ್ಥಿತಿ ಚರಿತ್ರೆಯಲ್ಲಿ ಬರುವುದು ಸರಿಯೇ. ಉದಾಹರಣೆಗೆ ಗುಪ್ತರ ಕಾಲದಲ್ಲಿ ಯಾವಾಗಲೋ ವಾತ್ಸಾಯನ ತನ್ನ ಗ್ರಂಥಗಳನ್ನು ಬರೆದಿರಬಹುದು. ಆದರೂ, ಹಿಂದೂ ಗಂಡು-ಹೆಣ್ಣುಗಳು ಪ್ರೇಮದ ಕ್ಷೇತ್ರದಲ್ಲೂ ಹಿಂದುಳಿಯುತ್ತಲೇ ಹೋಗಿದ್ದಾರೆ.

ಇಷ್ಟು ಸಾವಿತ್ರಿಯ ಬಗೆಗಾಯಿತು. ದ್ರೌಪದಿಯ ಬಗೆಗೆ ಮಾತನಾಡುವುದಾದರೆ ಆಕೆಗೆ ಎಷ್ಟು ಜನ ಗಂಡಂದಿರಿದ್ದರು ಎಂಬ ಮಾತನ್ನು ಕ್ಷಣಕಾಲ ಮರೆತುಬಿಡೋಣ. ನಿಮ್ಮ ಮನಸ್ಸಿನಲ್ಲಿ ಕೊಂಚ ಅನುಮಾನ ಹುಟ್ಟಿಸಲು ಒಂದು ಮಾತು ಹೇಳಲೆ? ದ್ರೌಪದಿಯು ಕರ್ಣನನ್ನು ನೋಡಿ ಆಗಾಗ ಖಂಡಿತವಾಗಿ ಸ್ವಲ್ಪ ವಿಚಲಿತಳಾಗುತ್ತಿದ್ದಳು ಎಂಬ ಅಂಶ ಮಹಾಭಾರತವನ್ನು ಓದುವುದರಿಂದ ಸ್ಪಷ್ಟವಾಗುತ್ತದೆ. ಇನ್ನು ಕೃಷ್ಣ-ಕೃಷ್ಣೆಯರ ಸಂಬಂಧವನ್ನು ಕುರಿತಂತೆ ಸಾಮಾನ್ಯವಾಗಿ ಹಿಂದೂಗಳು ಹೇಳುವಂತೆ, ಅದು ಅಣ್ಣ-ತಂಗಿಯ ಸಂಬಂಧ ಎನ್ನುವ ಅಂಶ ಮಹಾಭಾರತವನ್ನು ಗಮನವಿಟ್ಟು ಓದಿದಾಗ ಸರಿಯೆನ್ನಿಸುವುದಿಲ್ಲ. ಅವರದ್ದು ಸಖ-ಸಖಿ ಸಂಬಂಧ. (ಒಬ್ಬರು ಇದು 'ಗರ್ಲ್ ಫ್ರೆಂಡ್' ರೀತಿಯ ಸಂಬಂಧ ಎಂದರು. ಹೀಗೆಂದರೆ ಏನೋ ಗೊತ್ತಿಲ್ಲ?) ಸಖ-ಸಖಿಯಲ್ಲಿ (ಅಂದರೆ ಗೆಳೆಯ-ಗೆಳತಿ ಎನ್ನಬಹುದಾದ ಸಂಬಂಧದಲ್ಲಿ) ನಿಶ್ಚಿತವಾಗಿಯೂ ಸ್ನೇಹಭಾವವಿದ್ದೇ ಇರುತ್ತದೆ. ಇದನ್ನು ನೋಡಿಯೇ ಇಂಗ್ಲೀಷ್‌ನ 'ಗರ್ಲ್ ಫ್ರೆಂಡ್' ಶಬ್ದವನ್ನು ಯಾರೋ ಬಳಸಿರಬೇಕು. ಸಖ-ಸಖಿಯಲ್ಲಿ ಈ ಭಾವ ಇರಬೇಕೆಂದೇನೂ ಇಲ್ಲ; ಇದ್ದರೂ ಇರಬಹುದು. ಯಾರಿಗೆ ಗೊತ್ತು ? ಬಹಳಷ್ಟು ಮಟ್ಟಿಗೆ ಇರುವುದಿಲ್ಲ. ಕೃಷ್ಣ-ಕೃಷ್ಣೆಯರ ಸಂಬಂಧಗಳನ್ನು

ಕುರಿತಂತೆ ಹೇಳುವುದಾದರೆ, ಅವರ ಮಧ್ಯೆ ಗಂಡು-ಹೆಣ್ಣಿನ ಪ್ರೇಮವಿದ್ದರೂ ಆಶ್ಚರ್ಯವಿಲ್ಲ ಎಂಬುದಕ್ಕೆ ಮಹಾಭಾರತದ ಆಖ್ಯಾನಗಳನ್ನು ಅಥವಾ ಶ್ಲೋಕಗಳನ್ನು ಹಿಗ್ಗಿಸಿ, ಎಳೆದು ಸಮರ್ಥನೆಗಳನ್ನು ನೀಡಲೂಬಹುದು. ಹೀಗೆ ಮಾಡದಿದ್ದಾಗ ನನ್ನಂಥವನು, ಇವರದ್ದು ಸಖ-ಸಖಿಯ ಸಂಬಂಧವೆಂತಲೂ, ಅಲ್ಲಿ ದೈಹಿಕ ಪ್ರೇಮದ ಅಂಶ ಇರಲಿಲ್ಲವೆಂತಲೂ ಹೇಳಿಬಿಡುತ್ತಾನೆ. ದ್ರೌಪದಿ ವಿಚಿತ್ರ ಸ್ವಭಾವದ ಹೆಣ್ಣಾಗಿದ್ದಳು. ಯಾವುದಕ್ಕೂ ಹೆದರದ, ದಿಟ್ಟತನದ ಹೆಣ್ಣು ಈಕೆ. ಇಡೀ ಪ್ರಪಂಚದ ಇತಿಹಾಸದಲ್ಲಿ, ಸಾಹಿತ್ಯದಲ್ಲಿ, ವಾಙ್ಮಯದಲ್ಲಿ, ದಂತಕತೆಯಲ್ಲಿ ನಿಮಗೆ ಇಂಥ ಇನ್ನೊಂದು ಹೆಣ್ಣಿನ ಉದಾಹರಣೆ ಸಿಗುವುದಿಲ್ಲ; ಇಂಥ ಸಂಬಂಧ ಗಳನ್ನು ಹೊತ್ತಿರುವ ಹೆಣ್ಣು ಸಿಗುವುದಿಲ್ಲ. ಈ ಕುರಿತು ನನ್ನ ಮಿತ್ರರೊಬ್ಬರು ಸವಾಲನ್ನೇ ಒಡ್ಡಿದರು: ಈ ಬಗೆಯ ಇನ್ನೊಂದು ಜೋಡಿಯನ್ನು ಹೆಕ್ಕಿ ತೆಗೆಯಲು ನಾನು ಗಂಟೆಗಟ್ಟಲೆ ತಲೆ ಕೆಡಿಸಿಕೊಂಡು ಪ್ರಯತ್ನಪಟ್ಟೆ. ನಾನು ಯಾವ ಹೆಸರನ್ನೇ ಹೇಳಲಿ, ಅವಳಲ್ಲಿ ಒಂದಲ್ಲ ಒಂದು ದೋಷವನ್ನು ನನ್ನ ಗೆಳೆಯ ಎತ್ತಿ ತೋರಿ ಸುತ್ತಿದ್ದರು. ಅವರಿಗೂ ಚರ್ಚೆಯಲ್ಲಿ ಆಸಕ್ತಿಯಿತ್ತು. ಅವತ್ತು ಮನಸ್ಸು ಸೋಲನ್ನು ಒಪ್ಪಲಿಲ್ಲ. ಆದರೆ ಇನ್ನೊಂದು ದಿನ ನಾನು ಅವರಿಗೆ, ನೀವು ಈ ವಿಚಾರದಲ್ಲಿ ಸರಿಯಾಗಿಯೇ ಹೇಳುತ್ತಿದ್ದೀರಿ ಎಂದೆ. ಯಾವುದೇ ವಾಙ್ಮಯದಲ್ಲಿ, ಸಾಹಿತ್ಯದಲ್ಲಿ, ಕಾವ್ಯದಲ್ಲಿ ಕೃಷ್ಣ-ಕೃಷ್ಣೆಯರಂಥ ಜೋಡಿ ಪ್ರಪಂಚದಲ್ಲಿಯೇ ಇಲ್ಲ.

ಇದು ಸಖ-ಸಖಿಯ ಸಂಬಂಧ. ಇದರಲ್ಲಿ ಅಣ್ಣ-ತಂಗಿಯ ಸಂಬಂಧವೂ ಇದೆ; ಇಲ್ಲಿ ಪ್ರಿಯಕರ-ಪ್ರೇಯಸಿಯರಒಡನಾಟವೂ ಅಡಕವಾಗಿದೆ; ತಾಯಿ-ಮಗನ ಬಾಂಧವ್ಯವೂ ಇರಬಹುದಲ್ಲವೆ? ಕೊಂಚಮಟ್ಟಿಗೆ ತಂದೆ-ಮಗಳ ಸಂಬಂಧಾಂಶವಿದ್ದರೂ ಇರಬಹುದು. ಒಂದರ್ಥದಲ್ಲಿ, ಹೀಗೆ ಅದೆಷ್ಟು ಸಂಬಂಧ ಗಳಿವೆಯೋ, ಅವೆಲ್ಲ ಇದರಲ್ಲಿ ಸಮಾವೇಶಗೊಂಡಿವೆ ಎಂದು ಹೇಳಿದರೆ ಸರಿಯೆಂದು ಕಾಣುತ್ತದೆ. ಇನ್ನೊಂದು ಅರ್ಥದಲ್ಲಿ , ತಾಯಿ-ಮಗ, ಅಣ್ಣ-ತಂಗಿ, ಪ್ರೇಯಸಿ-ಪ್ರಿಯಕರ ಈ ಎಲ್ಲ ಸಂಬಂಧಗಳನ್ನು ಒಂದೆಡೆ ತಂದು ಜೋಡಿಸಿ, ಅವೆಲ್ಲದರ ಸಾರವನ್ನೂ ತೆಗೆದರೆ ಬಹುಶಃ ಸಖ-ಸಖಿಯರ ರೂಪವೇ ಬರುತ್ತದೆ. ಸಖ-ಸಖಿಯರ ಸಂಬಂಧ ಕಲ್ಪಿಸಿಕೊಳ್ಳಲು ತುಂಬಾ ಕಷ್ಟಕರವಾದದ್ದು. ಆದರೆ ಈ ಕತೆಯನ್ನು ಓದಿದ ಮೇಲೆ, ಇದೆಲ್ಲಾ ಆಹ್ಲಾದಕಾರಿಯಾಗಿರುವುದು ಮನವರಿಕೆ ಯಾಗುತ್ತದೆ. ಮನಸ್ಸುಗಳನ್ನು, ಸಮಾಜವನ್ನು ಮತ್ತು ಇಡೀ ಪ್ರಪಂಚವನ್ನು ಶಕ್ತಿ ಮೀರಿ ಒಂದುಗೂಡಿಸುವ ತೀರಾ ಅಪರೂಪದ ಸಂಬಂಧ ಇದಾಗಿದೆ.

ದ್ರೌಪದಿಯ ಬಗೆಗಿನ ಈ ರೂಪವನ್ನು ಕ್ಷಣಕಾಲ ನಿಮ್ಮ ಮನಸ್ಸಿನಿಂದ

ತೆಗೆದುಬಿಡಿ. ಈಗ ಅವಳ ಬೇರೆ ರೂಪವನ್ನು ನೋಡೋಣ. ಪ್ರಪಂಚದ ಯಾವುದೇ ದೇಶದ ಯಾವುದೇ ಕಾಲದ ಒಬ್ಬ ಮಹಿಳೆಯೂ ಅರಿವಿನಲ್ಲಿ, ತರ್ಕದಲ್ಲಿ, ಸೂಕ್ಷ್ಮದಲ್ಲಿ, ಮತ್ತು ಧೈರ್ಯದಲ್ಲಿ ದ್ರೌಪದಿಯ ಹಾಗೆ ಸಹಜ ಪ್ರತೀಕವೆನಿಸುವಂತೆ ಇರುವುದು ಕಂಡುಬರುವುದಿಲ್ಲ. ಈ ಗುಣಗಳು ಮಾಮೂಲಿ ಗುಣಗಳಲ್ಲ. ಇವಳಷ್ಟು ಜ್ಞಾನಸಂಪನ್ನಳಾದ ಇನ್ನೊಬ್ಬ ಹೆಂಗಸು ಇಲ್ಲ. ತನ್ನ ಕಾಲದ ಪ್ರತಿ ಗಂಡಸನ್ನೂ ದ್ರೌಪದಿ ಸೂಕ್ಷ್ಮವಾದ ಮಾತುಕತೆಯಲ್ಲಿ ಸೋಲಿಸಿದಳು. ಅವಳು ಅಂಥ ಜ್ಞಾನಿ. ಅವಳು ಎಷ್ಟು ತೀವ್ರ ಬುದ್ಧಿಮತ್ತೆಯವಳೆಂದರೆ, ಅವಳ ಮುಂದೆ ಆ ಕಾಲದ ಯಾವೊಬ್ಬ ಗಂಡಸು ಸಹ ನಿಲ್ಲಲಾಗುತ್ತಿರಲಿಲ್ಲ. ಒಬ್ಬ ಕೃಷ್ಣ ಮಾತ್ರ ಇದ್ದ. ಆದರೆ ಆತನೊಂದಿಗೆ ಮಾತಿಗಿಳಿಯುವ ಸಂದರ್ಭವಿರಲಿಲ್ಲ. ಕೃಷ್ಣ ಮತ್ತು ಕೃಷ್ಣೆಯರ ನಡುವೆ ಯಾವತ್ತೂ ಯಾವುದೇ ಬಗೆಯ ಪ್ರತಿಸ್ಪರ್ಧೆಯಿರಲಿಲ್ಲ. ಈ ಸಂಬಂಧದಲ್ಲಿ ದುರ್ಯೋಧನ ಅಥವಾ ದುಶ್ಶಾಸನ ಅವಳ ವಸ್ತ್ರಾಪಹರಣಕ್ಕೆ ಯತ್ನಿಸಿದಾಗ ದ್ರೌಪದಿಯ ಯಾತನೆ, ಚಿಂತನೆ ಹಾಗು ವಾದವಿವಾದದ ವಿವರಗಳು ನಮಗೆಲ್ಲ ಚಿರಪರಿಚಿತವೇ ಆಗಿದೆ.

ಭೀಷ್ಮ ಪಿತಾಮಹನ ಸಾವಿನ ಪ್ರಸಂಗದ ಒಂದು ಕತೆ ಬಹಳ ಕಡಿಮೆ ಜನರಿಗೆ ಗೊತ್ತಿದೆ. ಆ ಕತೆಯ ಯಥಾರ್ಥತೆಯನ್ನು ಸರಿಯಾದ ರೀತಿಯಲ್ಲಿ ನನ್ನಿಂದ ಅರ್ಥೈಸಲಾಗಿಲ್ಲ. ಎರಡು-ಮೂರು ವರ್ಷಗಳ ಹಿಂದೆ ಅದನ್ನು ಕೇಳಿದಾಗಿನಿಂದ ಒಂದು ಲಕ್ಷ ಶ್ಲೋಕಗಳಿರುವ ಮಹಾಭಾರತವನ್ನು ತೆಗೆದು ನೋಡಲಾಗಿಲ್ಲ. ಇದು ಎಷ್ಟರ ಮಟ್ಟಿಗೆ ಸರಿ ಎಂದು ಯಾರನ್ನಾದರೂ ಕೇಳುವ ಅವಕಾಶವೂ ಸಿಕ್ಕಿಲ್ಲ. ಒಂದು ಸಣ್ಣ ಪ್ರಶ್ನೆ-ಅದು ಮಹಾಭಾರತದಲ್ಲಿ ಇದೆಯೋ ಇಲ್ಲವೊ ಗೊತ್ತಿಲ್ಲ; ಆದರೆ, ತೀರಾ ಪ್ರಚಲಿತವಾಗಿದೆ. ಒಂದು ವೇಳೆ ಅದು ಹೆಚ್ಚು ಪ್ರಚಲಿತವಾಗಿರದಿದ್ದಲ್ಲಿ ನಾವೇ ಅದಕ್ಕೆ ಪ್ರಚಾರ ನೀಡುವುದು ಒಳ್ಳೆಯದು. ದ್ರೌಪದಿಯ ಪ್ರಖರರೂಪವನ್ನು, ಅವಳ ತೇಜಸ್ಸನ್ನು ಈ ಕತೆ ರೋಮಾಂಚನಗೊಳಿಸುವ ಹಾಗೆ ಹೇಳುತ್ತದೆ : ತಾತ ಭೀಷ್ಮಾಚಾರ್ಯರು ಸಾವಿನ ಮಡಿಲಲ್ಲಿದ್ದರು ; ರಾಜನೀತಿಯನ್ನು ಬರೆಸುತ್ತಿದ್ದರು. ಭಾರತದಲ್ಲಷ್ಟೇ ಅಲ್ಲ, ಒಂದರ್ಥದಲ್ಲಿ ಪ್ರಪಂಚದಲ್ಲಿಯೇ ಇದು ರಾಜನೀತಿ ಶಾಸ್ತ್ರವನ್ನು ಕುರಿತ ಮೊದಲ ಗ್ರಂಥವಾಗಿದೆ. ಮಹಾಭಾರತದ ಶಾಂತಿಪರ್ವದಲ್ಲಿ ಅವರು ತಿಳಿಸಿದ ರಾಜನೀತಿಯ ವಿವರಗಳು ದಾಖಲಾಗಿವೆ. ಅಲ್ಲಿದ್ದವರೆಲ್ಲ, ಬಹುಶಃ ಕೌರವ-ಪಾಂಡವರೆಲ್ಲ ಒಟ್ಟಾಗಿ ಅವರಿಂದ ಈ ನೀತಿಯನ್ನು ಕಲಿಯುತ್ತಿದ್ದರು. ಈ ಪ್ರಸಂಗದಲ್ಲಿ ದ್ರೌಪದಿ ಒಮ್ಮೆಲೆ ನಕ್ಕಳು. ನನಗನ್ನಿಸುವಂತೆ ಕೊಂಚ ಜೋರಾಗಿಯೇ ನಕ್ಕಿರಬಹುದು. ಆಕೆ ನಿರ್ಭೀತ ಹೆಂಗಸು ನೋಡಿ. ಇಡೀ

ಪ್ರಪಂಚದ ರಾಜನೀತಿಯನ್ನೆಲ್ಲ ವಿಶ್ಲೇಷಿಸಿ ಹೇಳುತ್ತಿರುವೆವೆಂದು, ಜ್ಞಾನದಾನ ಮಾಡುತ್ತಿದ್ದೇವೆ ಎಂದು ಅವರು ವ್ಯರ್ಥ ಪಾಂಡಿತ್ಯಪ್ರದರ್ಶನ ಮಾಡುತ್ತಿದ್ದರು. ಆಗ ದ್ರೌಪದಿ ನಕ್ಕಳು. ಆ ನಗುವನ್ನು ಕಂಡು ಅರ್ಜುನನಿಗೆ ಎಷ್ಟು ಕೋಪ ಬಂತೆಂದರೆ, ಅವಳನ್ನು ಬೆನ್ನಟ್ಟಿ ಅಟ್ಟಿಸಿಕೊಂಡು ಹೊಡೆಯಲು ಓಡಿದ. ಅನೇಕ ದೃಷ್ಟಿಯಿಂದ ಅರ್ಜುನ ಕಾಡುಮನುಷ್ಯ. ಅವನು ಓಡತೊಡಗಿದಾಗ ಕೃಷ್ಣ ತಡೆದ. ತಡೆದು "ತಾಳು, ಅರ್ಜುನ. ಈ ದ್ರೌಪದಿ ಯಾಕೆ ನಕ್ಕಳು ಅಂತ ಕೇಳು?" ಎಂದ. ದ್ರೌಪದಿಯನ್ನು ಆತ ಈ ಪ್ರಶ್ನೆ ಕೇಳಿದಾಗ ಆಕೆ ಉತ್ತರಿಸಿದಳು: "ಇಡೀ ಜೀವನ ಪರ್ಯಂತ ಈ ಜ್ಞಾನೋಪದೇಶದ ವಿರುದ್ಧ ಇವರು ನಡೆದಿದ್ದಾರೆ. ಈಗ ತಮ್ಮ ಬದುಕಿನ ಕೊನೆಯ ಕ್ಷಣಗಳಲ್ಲಿ ನೀತಿಬೋಧೆಗೆ ಇಳಿದಿದ್ದಾರೆ". ಇದಾದನಂತರ ಭೀಷ್ಮ ಕೊಟ್ಟ ಉತ್ತರವೂ ವಿಚಿತ್ರವಾಗಿದೆ: "ಸರಿ, ನಗಲು ದ್ರೌಪದಿಗೆ ಪೂರ್ಣ ಹಕ್ಕಿದೆ. ಕೇಳಿ, ಈ ನಗುವಿನ ಬಗೆಗೇ ನಾನೊಂದು ಪಾಠ ಹೇಳ ಬಯಸುತ್ತೇನೆ"ಎಂದು ಒಂದು ಕತೆ ಹೇಳಿದರು. ಯಾವನೇ ಒಬ್ಬ ಬುದ್ಧಿವಂತ ಮನುಷ್ಯನನ್ನು ಎಂದೂ ಆಡಳಿತ ನಡೆಸುವ ಮುಂಚೂಣಿ ಹುದ್ದೆಗಳಲ್ಲಿ ಕೂಡಿಸಬಾರದು ಎಂಬ ಅಂಶ ಈ ಕತೆಯ ಭಾಗವಾಗಿ ಯಾವಾಗ ಪ್ರಚಲಿತವಾಯಿತು ಎಂಬುದು ನನಗಿನ್ನೂ ಸ್ಪಷ್ಟವಾಗಿಲ್ಲ. ಒಂದುವೇಳೆ ಈಚಿನ ಒಬ್ಬ ಲೇಖಕ ಈ ವಾಕ್ಯವನ್ನು ಸೇರಿಸಿದ್ದಾನೆ ಎಂದಿಟ್ಟುಕೊಂಡರೂ ನಾನು ಇದನ್ನು ಬಹು ದೊಡ್ಡ ಮಾತು ಎಂದೇ ಹೇಳುತ್ತೇನೆ. ಭೀಷ್ಮ ಹೇಳಿದ್ದು ಇದು : "ಯಾವನೇ ಒಬ್ಬ ಅತಿ ಬುದ್ಧಿವಂತ ಸಿಂಹಾಸನದ ಮೇಲೆ ಕುಳಿತುಕೊಳ್ಳಕೂಡದು. ಏಕೆಂದರೆ ಅವನು ರಾಜಸಿಂಹಾಸನದ ಮೇಲೆ ಕುಳಿತುಕೊಂಡನೆಂದರೆ ಬುದ್ಧಿ ಮತ್ತು ಶಕ್ತಿ ಎರಡೂ ಸೇರಿಕೊಂಡು ಪ್ರಪಂಚವನ್ನು ನಾಶಮಾಡಿ ಬಿಡುತ್ತಾನೆ. ಈ ನಾಶದ ಪ್ರಮಾಣವನ್ನು ಕಲ್ಪಿಸುವುದೂ ಕಷ್ಟ. ಹೀಗಾಗಿ ನಾಶದ ಪ್ರಮಾಣವನ್ನು ಕಡಿಮೆ ಮಾಡಲು ಅತಿಬುದ್ಧಿವಂತನಲ್ಲದವನನ್ನೇ ರಾಜಸಿಂಹಾಸನದ ಮೇಲೆ ಕೂಡಿಸಬೇಕು." ಆ ಹಿರಿಯ ಸಾಯುವಾಗ ಈ ನೀತಿಯನ್ನು ಹೇಳಿ ಸತ್ತ.

ಇಂಥ ಎಷ್ಟು ನೀತಿಗಳಿವೆಯೋ ಅವೆಲ್ಲ ಏಕಮುಖಿಯಾಗಿವೆ. ನಮ್ಮ ಎಷ್ಟೆಲ್ಲ ಹಳೆಯ ಕಥೆಗಳನ್ನು ಓದಿದರೆ ಅಥವಾ ಕೇಳಿದರೆ, ಅವನ್ನು ಓದುವಾಗ ಮತ್ತು ಕೇಳುವಾಗ ಯಾವುದೇ ಒಂದು ಕತೆಯನ್ನು ಸರ್ವಾಂಗೀಣ ಸತ್ಯವೆಂದು ಭಾವಿಸಿಕೊಂಡು ನೀವು ಹೋದಿರಿ ಅಂದರೆ ದೊಡ್ಡ ತಪ್ಪಾಗುತ್ತದೆ. ಇವೆಲ್ಲ ಏಕಮುಖೀ ಸತ್ಯವನ್ನು ಹೇಳುವ ಕತೆಗಳು. ಮನುಷ್ಯನ ಬುದ್ಧಿಯು ಕೊಂಚ ವಿಕಸಿತವಾದಾಗ, ಕೊಂಚ ಪೂರ್ಣತ್ವ ಪಡೆದಾಗ ಈ ಕತೆಗಳಲ್ಲಿ ಖುಷಿ ಸಿಗುತ್ತದೆ. ಇಲ್ಲದೇ ಹೋದಲ್ಲಿ, ಈ

ಏಕಮುಖೀ ಕತೆಗಳನ್ನೇ ಸರ್ವಾಂಗೀಣ ಸತ್ಯವೆಂದು ಭಾವಿಸಿಕೊಂಡು, ಸಿಂಹಾಸನವನ್ನು ಮೂರ್ಖರಿಗೆ ನೀಡಬೇಕೆಂದು ತೀರ್ಮಾನಿಸಿದರೆ ಅದು ಸರಿಯೆನ್ನಿಸುವುದಿಲ್ಲ. ರಾಜಕೀಯದ ಒಂದು ಮಹತ್ವದ ಗುರಿಯೇ ಸಿಂಹಾಸನದ ಮೇಲೆ ಕೂಡಿಸುವುದು. ರಾಜಕೀಯ ಮಾಡಬಯಸುತ್ತಾನೆ, ಆದರೆ ಅಧಿಕಾರದ ಗದ್ದುಗೆಯ ಮೇಲೆ ಬೇಕಾದವರನ್ನು ಕೂಡಿಸಲು ಇಷ್ಟಪಡುವುದಿಲ್ಲ ಎಂದರೆ ಮೂರ್ಖತನವಾಗುತ್ತದೆ. ನೀತಿಯ ಈ ಎರಡು ವಾಕ್ಯಗಳನ್ನು ಜೊತೆಜೊತೆಯಾಗಿಯೇ ನಾವು ಕೊಂಡೊಯ್ಯ ಬೇಕಾಗುತ್ತದೆ.

ಹೀಗೆ ದ್ರೌಪದಿಯ ಬದುಕಿನಲ್ಲಿ ಅದೆಷ್ಟು ಘಟನೆಗಳು ನಡೆದವೋ! ಅವನ್ನೆಲ್ಲ ಇಲ್ಲಿ ನಿರೂಪಿಸುವ ಆವಶ್ಯಕತೆಯಿಲ್ಲ. ದ್ರೌಪದಿ ಓರ್ವ ಜ್ಞಾನಿಯಂತೆ ಒಂದು ಘಟನೆಯನ್ನು ಅರ್ಥಮಾಡಿಕೊಂಡಿದ್ದಾಳೆ, ಅದನ್ನು ಬಿಡಿಸಿದ್ದಾಳೆ. ಆಕೆ ಬರೀ ಜ್ಞಾನಿಯಾಗಷ್ಟೇ ಅಲ್ಲ, ಬಹಳ ಸ್ಪಷ್ಟವಾಗಿ, ಕೆಚ್ಚೆದೆಯಿಂದ ರಾಜಸಭೆಯಲ್ಲಿ ಪ್ರತ್ಯುತ್ತರ ನೀಡಬಲ್ಲವಳಾಗಿದ್ದಳು. ಇದು ಯಾವ ಪ್ರಸಂಗದಲ್ಲಿ ಆದದ್ದು ಎಂಬುದನ್ನು ನೀವು ನೆನಪಿಸಿಕೊಳ್ಳಿ. ಆಕೆಗೆ ರಾಜಸಭೆ, ಮೈದಾನ, ಕಾಡು ಎಲ್ಲವೂ ಒಂದೇ. ತನ್ನ ಚಿಕ್ಕವಯಸ್ಸಿನಲ್ಲಿನ ವನವಾಸದ ಸಮಯವಾಗಲಿ ಅಥವಾ ರಾಜ್ಯ ಆಳುತ್ತಿದ್ದ ಸಮಯವಾಗಲಿ, ಮಹಾಭಾರತ ಯುದ್ಧದ ಸಮಯದಲ್ಲಾಗಲಿ, ಕೊನೆಗೆ ಸ್ವರ್ಗಾರೋಹಣ ಯಾತ್ರೆಯ ಅವಧಿಯಲ್ಲಾಗಲಿ ಪ್ರತಿಯೊಂದು ಪ್ರಸಂಗದಲ್ಲೂ ಧೈರ್ಯದಿಂದ, ಕೆಚ್ಚೆದೆಯಿಂದ ವ್ಯವಹರಿಸಿದವಳು ಈ ಮಹಿಳೆ.

ದ್ರೌಪದಿಯ ಸಾವಿಗೆ ಸಂಬಂಧಿಸಿದಂತೆ ಮಹಾಭಾರತದ ಕೊನೆಯಲ್ಲಿ ಕತೆಯಿದೆಯಲ್ಲ, ಅದನ್ನು ಬರೆದವನು ಗಂಡಸೇ ಇರಬೇಕು ಎಂದು ನನಗನ್ನಿಸುತ್ತಿದೆ. ಎಲ್ಲರಿಗಿಂತಲೂ ಕೊನೆಯಲ್ಲಿ ಈಕೆ ಸಾವನ್ನಪ್ಪಬೇಕಿತ್ತು, ಮೊದಲಲ್ಲ. ಈ ಕತೆ ಹೇಳುವ ಪ್ರಕಾರ, ಎಲ್ಲರಿಗಿಂತ ಮೊದಲು ದ್ರೌಪದಿ ಸಾವನ್ನಪ್ಪಿದ್ದಾಳೆ. ಹೀಗೇಕಾಯಿತು? ಆಕೆಗೆ ಬಹಳಷ್ಟು ಜನ ಪ್ರೇಮಿಗಳಿದ್ದರೆಂದೆ? ಅಥವಾ ಆಕೆಗೆ ಬಹಳಷ್ಟು ಗಂಡಂದಿರಿದ್ದು ಅವರೆಲ್ಲರ ಜತೆ ಸಮವಾದ ಪ್ರೇಮವನ್ನಿರಿಸಿಕೊಂಡಿರದೆ, ಅರ್ಜುನನ ಬಗೆಗೆ ಮಾತ್ರ ಹೆಚ್ಚು ಪ್ರೇಮವನ್ನಿರಿಸಿಕೊಂಡಿದ್ದರಿಂದ ಆಕೆ ಮೊದಲು ಸಾವನ್ನಪ್ಪಿದಳೆ? ಈ ಕತೆಯನ್ನು ಯಾರೇ ಕಟ್ಟಿರಲಿ, ಅವನು ಮಾಡಿರುವ ಒಳ್ಳೆಯ ಕೆಲಸವೆಂದರೆ, ಆತ ದ್ರೌಪದಿಗಿದ್ದ ಅನೇಕ ಪ್ರೇಮಿಗಳ ಮತ್ತು ಗಂಡಂದಿರ ಸುದ್ದಿಯನ್ನೆತ್ತದೆ ಎಲ್ಲರಲ್ಲೂ ಆಕೆ ಸಮಭಾವ ತೋರಿದ್ದನ್ನು ಹೇಳಿದ್ದಾನೆ. ಈ ಸಮಭಾವವೇ ಅವಳ ಆದರ್ಶವಾಗಿತ್ತು. ಇದನ್ನೇ ಹಿಡಿದುಕೊಂಡು ಆಕೆಗೆ ಮೊದಲು

ಸಾವನ್ನಿತ್ತ. ನಿಜ ಹೇಳಬೇಕೆಂದರೆ ಎಲ್ಲಿಯ ಭೀಮ! ಎಲ್ಲಿಯ ಉಳಿದವರು! ಯುಧಿಷ್ಠಿರನಂತೂ ಸ್ವತಃ ಕಡಿಮೆ ಸುಳ್ಳುಗಳನ್ನು ಹೇಳಿದ. ಅಲ್ಲಿ ಇಲ್ಲಿ ಆತ ಗಲಿಬಿಲಿಯುಂಟು ಮಾಡಿದುದು ಕೂಡ ಕಡಿಮೆಯೆಂದೇ ಹೇಳಬೇಕು. ಪಗಡೆಯಾಟದ ಜೂಜಿನಲ್ಲಿ ದ್ರೌಪದಿಯನ್ನು ಪಣವಾಗಿಟ್ಟು ಧರ್ಮರಾಯನು ಸೋತ ಕತೆಯನ್ನು ಹಾಗೇ ನೆನಪಿಸಿಕೊಳ್ಳಿ. ರಾಜಸಭೆ ಸೇರಿದೆ. ರಾಜಸಭೆಯಲ್ಲಿ ತನ್ನನ್ನು ಪಣವನ್ನಾಗಿಟ್ಟು ಆಟವಾಡುವ ಯಾವ ಹಕ್ಕೂ ಯುಧಿಷ್ಠಿರನಿಗೆ ಇರಲಿಲ್ಲ ಎಂಬುದನ್ನು ಆಕೆ ಸಾಬೀತುಮಾಡಿದಳು. ಇದಕ್ಕೆ ಆಕೆ ಕೊಟ್ಟ ಕಾರಣ, ಆತ ಸ್ವತಃ ಸೋತು ಹೋಗಿದ್ದ. ಹೀಗೆ ಸೋತ ವ್ಯಕ್ತಿಗೆ ಬೇರೊಬ್ಬರನ್ನು ಪಣಕ್ಕೊಡ್ಡಿ ಜೂಜಾಡುವ ಅಧಿಕಾರ ಇಲ್ಲವೇ ಇಲ್ಲ. ಈ ಪ್ರಸಂಗ ಚರ್ಚೆಯ ರೀತಿಯಲ್ಲಿ ಬಂದಿದೆ. ಅಂದರೆ, ಸಂವಾದ ದಂತೆ; ಅವನು ಹೇಳುತ್ತಾನೆ, ಇವನು ಹೇಳುತ್ತಾನೆ ಎಂಬಂತೆ.

ಅಸಾಧಾರಣ ಜ್ಞಾನ, ವ್ಯವಹಾರಪ್ರಜ್ಞೆ, ಎಂದೂ ಎದೆಗುಂದದ ಧೈರ್ಯ, ಉತ್ತರಕ್ಕೆ ಖಚಿತ ಹಾಗೂ ನೇರ ಪ್ರತ್ಯುತ್ತರ ನೀಡುವ ಧೀಮಂತಿಕೆ–ಈ ಎಲ್ಲಾ ಗುಣಗಳೂ ದ್ರೌಪದಿಯ ವ್ಯಕ್ತಿತ್ವದಲ್ಲಿ ಒಟ್ಟಾಗಿ ಮೇಳೈಸಿವೆ. ಈಕೆಯ ಸದ್ಗುಣಗಳನ್ನು ಕಂಡೇ, ಭಾರತದಲ್ಲಿ ಮಾತ್ರವಲ್ಲ, ಇಡೀ ಪ್ರಪಂಚದಲ್ಲಿಯೇ ದ್ರೌಪದಿಯ ಸಮ ಸಮ ನಿಲ್ಲುವಂಥ ಹೆಂಗಸು – ಸಾವಿತ್ರಿಯೂ ಸೇರಿದಂತೆ–ಬೇರೆ ಯಾರೂ ಇಲ್ಲವೆಂದು ನಾನು ಭಾವಿಸುತ್ತೇನೆ. ದ್ರೌಪದಿ ನಿಜವಾದ ಅರ್ಥದಲ್ಲಿ ಭಾರತದ ಪ್ರತೀಕ. ಇಡೀ ಪ್ರಪಂಚದ ಪ್ರತೀಕ ಎಂದು ಹೇಳಿದರೆ ಬಹುಶಃ ಹೆಚ್ಚೆನಿಸಬಹುದು. ಆದರೆ ಭಾರತದ ಮಟ್ಟಿಗಂತೂ ದ್ರೌಪದಿಯಂತಹ ಉನ್ನತ ಮಹಿಳೆ ಖಂಡಿತವಾಗಿಯೂ ಇನ್ನೊಬ್ಬಳಿಲ್ಲ. ಕೇವಲ ಪತಿವ್ರತಾ ಧರ್ಮವನ್ನು ಅನುಸರಿಸಿದಳು ಎಂಬ ಒಂದೇ ಒಂದು ಕಾರಣಕ್ಕಾಗಿ ಸಾವಿತ್ರಿಯನ್ನು ತಲೆಯ ಮೇಲೆ ಕೂಡಿಸಿಕೊಂಡು ಓಡಾಡುವುದು ಸುಸಂಗತವಲ್ಲ. ನಮ್ಮ ಮನಸ್ಸು ಸಾಕ್ಷಾತ್ ಗೊಬ್ಬರದ ಗುಂಡಿಯಾಗಿರುವುದನ್ನು, ಮೌಢ್ಯದಿಂದ ಕೂಡಿರುವುದನ್ನು ಹಾಗೂ ಪುರುಷಪಕ್ಷಪಾತಿಯಾಗಿರುವುದನ್ನು ಇವೆಲ್ಲಾ ವಿವರಿಸುತ್ತವೆ. ಪಾತಿವ್ರತ್ಯ ಸಂಬಂಧದ ಒಂದೇ ಗುಣದಿಂದಾಗಿ ನಾವು ಈ ಸಾವಿತ್ರಿಯನ್ನು ತಲೆಯ ಮೇಲೆ ಕೂಡಿಸಿಕೊಂಡಿದ್ದೇವೆ. ಆದರೆ ದ್ರೌಪದಿಯು ಹಲವು ಸದ್ಗುಣಗಳ, ದಿಟ್ಟತನದ ಗಣಿಯಾಗಿದ್ದಾಳೆ. ಈ ಎಲ್ಲ ಗುಣಗಳಿಂದಾಗಿ ದ್ರೌಪದಿಯು ಶೋಭಾಯಮಾನಳಾಗಿದ್ದಾಳೆ; ಪ್ರತೀಕಶಕ್ತಿಯಾಗಿದ್ದಾಳೆ ಎಂದು ಹೇಳಿದರೆ ಅನೇಕರಿಗೆ ಕಸಿವಿಸಿಯಾಗುತ್ತದೆ; ರೋಚಕ ಅನ್ನಿಸುತ್ತದೆ, ಮನಸ್ಸು ಒಮ್ಮೆಲೆ ಮುದುಡುತ್ತದೆ. ಇದೆಂಥ ಮಾತನಾಡುತ್ತಿದ್ದಾರೆ ಎಂದು ಗೊಂದಲಕ್ಕೊಳಗಾಗುತ್ತಾರೆ. ಈ ನಿಲುವು ಗಳನ್ನು ಗಮನಿಸಿ, ಹಿಂದೂ ಮತ್ತು ಭಾರತದ ಕತೆಗಳ ಸಾರವನ್ನೂ ಗ್ರಹಿಸಿಕೊಂಡು,

ನಮ್ಮ ಮನಸ್ಸನ್ನು ಪುನರ್‌ರೂಪಿಸಿಕೊಳ್ಳುವ ಅವಶ್ಯಕತೆ ಹೆಚ್ಚಾಗಿದೆ. ನೂರಾರು ಅಥವಾ ಸಾವಿರಾರು ವರ್ಷಗಳಿಂದ ಹಿಂದೂ ಗಂಡಸರ ಮನಸ್ಸು ತಮ್ಮ ಹಿತವನ್ನು ಮಾತ್ರ ಗಮನದಲ್ಲಿರಿಸಿಕೊಂಡು, ಅಸಮಾನತೆಯ ಆಧಾರದ ಮೇಲೆ ರೂಪುಗೊಂಡಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ವಿಕಾರಗೊಂಡಿರುವ ಈ ಮನಸ್ಸನ್ನು ಆರೋಗ್ಯಕರ ಒರೆಗಲ್ಲಿಗೆ ಹಚ್ಚುತ್ತಲೇ, ಅದರ ಚಿಂತನ ಕ್ರಮವನ್ನು ಬದಲಿಸಿ, ಸರಿದಾರಿಗೆ ತರಬೇಕಾಗಿದೆ; ಗಂಡು-ಹೆಣ್ಣಿನ ನಡುವೆ ಸಮಾನತೆಯನ್ನು ಸ್ಥಾಪಿಸಬೇಕಿದೆ. ಈ ಮಾತನ್ನು ನಾನು ಹೇಳುತ್ತಿದ್ದರೆ, ಆಕೆಯು ಐವರು ಗಂಡಂದಿರನ್ನು ಹೊಂದಿದ್ದ ಕತೆ ನಿಮ್ಮ ಕಣ್ಣಿಗೆ ಕಟ್ಟುತ್ತದೆ. ಈ ಕತೆಯನ್ನು ಕ್ಷಣಕಾಲ ಮರೆತುಬಿಡಿ. ಆಕೆಗೆ ಸಂಬಂಧಿಸಿದ ಉಳಿದ ಕತೆಗಳು, ಉಳಿದ ಗುಣಗಳು ಬೇರೆ ಯಾವ ಹೆಂಗಸಿನಲ್ಲಿವೆ, ಹೇಳಿ?

ಈಗ ಗಂಡಸು ಮತ್ತು ಹೆಂಗಸಿಗೆ ಸಂಬಂಧಿಸಿದ ಪ್ರಶ್ನೆಯನ್ನು ತೆಗೆದುಕೊಳ್ಳೋಣ. ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ: ನಾನು ಯೋಚಿಸುವ ರೀತಿಯಲ್ಲಿ ಯಾವುದೇ ಹೆಂಗಸಿಗೆ ಒಬ್ಬರಿಗಿಂತ ಹೆಚ್ಚು ಜನ ಗಂಡಂದಿರು ಅಥವಾ ಪ್ರಿಯಕರರು, ಇಲ್ಲವೆ ಒಬ್ಬ ಗಂಡಸಿಗೆ ಒಬ್ಬಳಿಗಿಂತ ಹೆಚ್ಚು ಪತ್ನಿ ಅಥವಾ ಪ್ರೇಯಸಿ ಯರು ಇರಲೇಬೇಕೆಂದೇನೂ ಇಲ್ಲ. ಬಹುಶಃ ಒಬ್ಬೊಬ್ಬರಿಗೆ ಒಬ್ಬೊಬ್ಬರು ಇದ್ದರೆ ಈ ಪ್ರಪಂಚದ ವ್ಯವಸ್ಥೆ ಚೆನ್ನಿರುತ್ತದೆ. ಇಷ್ಟು ಹೇಳಿದ ನಂತರ ನಿಮಗೆ ಪ್ರಪಂಚದ ಸಂಘಟನೆಯ ಸ್ವರೂಪ ಅರ್ಥವಾಗುತ್ತದೆ.

ಒಂದೆಡೆ ಕುರುಡು ಸಂಪ್ರದಾಯವಾದಿಗಳು ಹಾಗೂ ಇನ್ನೊಂದೆಡೆ ಬಯಕೆ. ಈಗ ನಾನು ಬಯಕೆಯ ಬಗ್ಗೆ ಹೇಳಿದೆನಲ್ಲ, ಆ ಬಯಕೆಯನ್ನು ಮುಂದಿರಿಸಿಕೊಂಡು ಒಂದು ಕೊಳಕು ಸಮಾಜವನ್ನು ಕಟ್ಟಿಬಿಡುವುದು ಬೇಡ. ಇಂಥ ಅಸಮಾನತೆಗಳಿಗೆಲ್ಲ ಮೂಲ ಭೂತವಾಗಿ ಏನು ನೆಲೆಗಟ್ಟುಗಳುಂಟೋ, ಈ ಅನ್ಯಾಯಗಳ ಮೂಲದಲ್ಲಿರುವ ಹೆಬ್ಬಂಡೆಯೆಂದರೆ, ಗಂಡು-ಹೆಣ್ಣುಗಳ ನಡುವೆ ಕಂಡುಬರುವ ಅಸಮಾನತೆ.

ಇಲ್ಲಿ ಹೆಣ್ಣಿನ ಪ್ರಕೃತಿಯ ಬಗೆಗೂ ಹೇಳಬೇಕಾಗಿದೆ. ಹೆಣ್ಣು ಶಾರೀರಿಕವಾಗಿ ಕೊಂಚ ದುರ್ಬಲಳೇ. ಇವತ್ತಿನವರೆಗೂ ಪ್ರಪಂಚ ನೋಡಿರುವಂತೆ, ಹೆಂಗಸಿಗೆ ವಯಸ್ಸಾದಂತೆ-ಗಂಡಸಿಗೆ ಹೋಲಿಸಿದರೆ-ಕೊಂಚ ಬೇಗನೇ ವೃದ್ಧೆಯಾದಂತೆ ಕಾಣುತ್ತಾಳೆ, ಹಣ್ಣಾಗುತ್ತಾಳೆ. ಹೆಣ್ಣು ತನ್ನ ಬದುಕಿನಲ್ಲಿ ಹೆಚ್ಚು ತೊಂದರೆಗಳನ್ನೂ, ನೋವುಗಳನ್ನು ಅನುಭವಿಸುತ್ತಾಳೆ. ಹೀಗಾಗಿ ಸಮಾಜದಲ್ಲಿ ಹೆಂಗಸಿಗೆ ಸಿಗುವುದಕ್ಕಿಂತಲೂ ಹೆಚ್ಚು ಸೌಲಭ್ಯಗಳು ಗಂಡಸಿಗೆ ಸಾಮೂಹಿಕ ಒಡನಾಟದಲ್ಲಿ, ಬದುಕಿನಲ್ಲಿ ದೊರೆಯುತ್ತವೆ. ಸಂಘಟನೆ ಇತ್ಯಾದಿಗಳನ್ನು ನೋಡಿ. ಯಾರು

ಸಂಘಟನೆ ಮಾಡಬಲ್ಲರು? ಯಾರು ನಿರ್ವಹಿಸಬಲ್ಲರು? ಒಂದು ವೇಳೆ ಇದು ಸರಿಯಿರದಿದ್ದರೂ ಇರಬಹುದು. ಹೆಚ್ಚು ಶಕ್ತಿಸಾಮರ್ಥ್ಯದಿಂದ, ಕೊಂಚ ಆಕ್ರಮಣಶೀಲ ಪ್ರವೃತ್ತಿಯಿಂದ ಗಂಡಸು ಇದನ್ನೆಲ್ಲ ನಿರ್ವಹಿಸುತ್ತಾನೆ. ಎಲ್ಲರೂ ಆಕ್ರಮಣಶೀಲರಾಗಿರಬೇಕು ಎಂದು ಇದರ ಅರ್ಥವಲ್ಲ. ಆದರೆ ಈ ಮನೋಭಾವ ಗಂಡಸಿನಲ್ಲಿ ಹೆಚ್ಚಾಗಿದೆ. ರಾಜಕೀಯದಲ್ಲಿ ನೀವು ನೋಡುತ್ತಿರುತ್ತೀರಿ: ಯಾರು ಸಂಘಟನಾ ವಿರೋಧಿ ತತ್ವಗಳನ್ನು, ಅಂದರೆ, ಅನ್ಯಾಯ, ಅಸಮಾನತೆ, ಕೊಳಕುತನ, ಪುಂಡಾಟಿಕೆ ಮುಂತಾದವುಗಳನ್ನು ಬದುಕಿನಲ್ಲಿ ಮೈಗೂಡಿಸಿಕೊಂಡಿದ್ದಾನೋ, ಅವನು ಬೇಗನೆ ಮೇಲೇರುತ್ತಾನೆ. ಈ ಬಗೆಯ ಪ್ರವೃತ್ತಿಗಳು ಹೆಂಗಸಿಗೆ ಹೋಲಿಸಿದರೆ ಗಂಡಸಿನಲ್ಲಿ ಹೆಚ್ಚಾಗಿರುತ್ತವೆ. ಇದು ಒಂದು ರೀತಿಯಲ್ಲಿ ಪ್ರಕೃತಿಯ ಬಳುವಳಿಯಾಗಿದೆ.

ಇದರ ಪರಿಣಾಮವಾಗಿ ಹೆಂಗಸು ನಿರಂತರವಾಗಿ ತುಳಿತಕ್ಕೆ ಒಳಗಾಗಿದ್ದಾಳೆ. ತಾನು ಎಷ್ಟರಮಟ್ಟಿಗೆ ತುಳಿತಕ್ಕೆ ಒಳಗಾಗಿದ್ದೇನೆ ಎಂಬುದು ಆಕೆಗೇ ಗೊತ್ತಿಲ್ಲ. ಯುರೋಪ್, ಅದರಲ್ಲೂ ವಿಶೇಷವಾಗಿ ಅಮೇರಿಕಾದ ಹೆಂಗಸರು ತಾವು ಗಂಡಸರಷ್ಟೇ ಸಮ ಎಂದು ಭಾವಿಸುತ್ತಾರೆ. ಇದು ನಿಜವೂ ಹೌದು. ಅಮೇರಿಕಾದ ಶೇಕಡ ಐವತ್ತೈದರಷ್ಟು ಸಂಪತ್ತಿನ ಮಾಲೀಕರು–ಇದು ಒಮ್ಮೆ ಶೇ. ಅರವತ್ತಕ್ಕೂ ಏರಿತ್ತು; ಈಗ ಅದು ಕೊಂಚ ಕಡಿಮೆಯಾಗಿದೆ–ಹೆಂಗಸರೇ ಹೊರತು ಗಂಡಸರಲ್ಲ. ಒಂದು ಕಾಲ ಹೇಗಿತ್ತೆಂದರೆ, ತಂದೆಯು ಆಸ್ತಿಪಾಸ್ತಿ ಸಂಪತ್ತನ್ನು ಬಿಟ್ಟು ಮರಣಹೊಂದಿದಾಗ, ತಾನು ಬೇರೆಯವರು ಸಂಪಾದಿಸಿದ ಸಂಪತ್ತನ್ನು ಯಾಕೆ ತೆಗೆದುಕೊಳ್ಳಬೇಕೆಂದು ಮಗ ಯೋಚಿಸಿ ಅದನ್ನು ತನ್ನ ಅಕ್ಕ ತಂಗಿಯರ ಹೆಸರಿಗೆ ಬರೆದು ಬಿಡುತ್ತಿದ್ದ. ತಾನು ಸ್ವತಂತ್ರವಾಗಿ, ಹೊಸದಾಗಿ ಸಂಪಾದಿಸುವ ಕಾರ್ಯದಲ್ಲಿ ತೊಡಗುತ್ತಿದ್ದ. ಈಗ ಆ ಕಾಲ ಕೊಂಚ ಬದಲಾಗಿದೆ. ಮನೆಯಲ್ಲೂ ಅಷ್ಟೆ; ಗಂಡ, ಒಂದು ಲೋಟ ನೀರು ತರುವಂತೆ ಹೆಂಡತಿಗೆ ಹೇಳುವಂತಿಲ್ಲ. ಹೇಳಿದರೆ, ''ನಿನ್ನ ಕೈ ಬಿದ್ದು ಹೋಗಿದೆಯೇನು'' ಎಂಬ ನೇರ ಉತ್ತರವೇ ಸಿಗುತ್ತದೆ. ಒಂದು ವೇಳೆ ಸಹಜವಾಗಿ ಪ್ರೀತಿ ಉಕ್ಕಿ ಬಂದರೆ, ಆಕೆ ತಾನಾಗಿಯೇ ನೀರು ತಂದು ಕೊಡಬಹುದು, ಇದು ಬೇರೆ ವಿಚಾರ. ಆದರೆ ಸಾಮಾನ್ಯವಾಗಿ ಹೀಗಾಗುವುದಿಲ್ಲ. ಹೀಗಾಗಿ ಮನೆಗೆಲಸಗಳಲ್ಲೂ ಸಮಾನತೆ ಇರುತ್ತದೆ. ಒಬ್ಬರು ಅಡಿಗೆ ಮಾಡಿದರೆ , ಇನ್ನೊಬ್ಬರು ಪಾತ್ರೆ ಬೆಳಗಬೇಕಾಗುತ್ತದೆ. ಅವರು ಒಬ್ಬರಿಗೊಬ್ಬರು ಪೂರಕವಾಗಿಯೇ ಇರುತ್ತಾರೆ. ಇದನ್ನೆಲ್ಲ ನೋಡಿಯೇ ಅಮೇರಿಕಾದ ಹೆಂಗಸರು ತಾವು ಗಂಡಸರಿಗೆ ಸಮಾನರು ಎಂದು ಭಾವಿಸುತ್ತಾರೆ.

ನಾನು ಒಂದು ಸಮ್ಮೇಳನಕ್ಕೆ ಹೋಗಿದ್ದೆ. ಅಲ್ಲಿನ ಚರ್ಚೆಯಲ್ಲಿ ಭಾಗವಹಿಸುವ

ಮುಂದಾಳುಗಳಾಗಿ ಸುಮಾರು ಮೂವತ್ತು ಜನರಿದ್ದರು. ಆದರೆ ಅಷ್ಟು ಜನರಲ್ಲಿ ಒಬ್ಬ ಹೆಂಗಸೂ ಇರಲಿಲ್ಲ. ಒಂದೆರಡು ಸಾರಿ ಚರ್ಚೆಯಲ್ಲಿ ಅಥವಾ ಅನುವಾದ ಮಾಡುವಲ್ಲಿ ಒಬ್ಬಿಬ್ಬರು ಭಾಗವಹಿಸಿದ್ದರಷ್ಟೆ. ಅಲ್ಲಿ ಹೆಂಗಸರಿದ್ದರು, ಓದಿ-ಬರೆದ ಸುಶಿಕ್ಷಿತ ಹೆಂಗಸರಿದ್ದರು. ಪ್ರಸಿದ್ಧ ಕವಯತ್ರಿಯರು, ಕಾದಂಬರಿಕಾರ್ತಿಯರು, ಪ್ರಖ್ಯಾತ ವಿದ್ವಾಂಸರು ಇದ್ದರು. ನಾನು ಅಲ್ಲಿ ಈ ಪ್ರಶ್ನೆಯನ್ನೆತ್ತಿ, ನೀವು ಅನ್ಯಾಯ ಮತ್ತು ಅಸಮಾನತೆಯ ಬಗ್ಗೆ ಚಿಂತಿಸುತ್ತೀರಿ. ಅದು ಸರಿ, ಇದರ ಬಗ್ಗೆಯೂ ಯೋಚಿಸಿ ಅಂದೆ. ಏಕೆಂದರೆ ಅಮೇರಿಕೆಯ ಹೆಂಗಸು ನನ್ನ ಮಾತುಗಳನ್ನು ಅರ್ಥ ಮಾಡಿಕೊಳ್ಳಲಾರಳು, ಏಕೆಂದರೆ ಅವಳು ತನ್ನನ್ನು ಗಂಡಸಿಗೆ ಸಮಾನವಷ್ಟೇ ಅಲ್ಲ ಆತನನ್ನು ಮೀರಿಸಿ ಮುಂದು ಹೋಗಿದ್ದೇನೆ, ಅವನನ್ನು ಹಿಂದೆ ಹಾಕಿದ್ದೇನೆ ಎಂದೇ ಭಾವಿಸಿದ್ದಾಳೆ. ಇಂಥ ಸಂದರ್ಭದಲ್ಲಿ ನಾನು, ಈ ಗಂಡಸು ಹೆಂಗಸಿಗಿಂತ ಮುಂದೆ ಹೋಗಿದ್ದಾನೆ ಎಂದು ಹೇಳಿದರೆ ಇದು ಅವಳಿಗೆ ಪಥ್ಯವಾಗುವುದಿಲ್ಲ. ತಿಳುವಳಿಕೆಯಿಲ್ಲದೆ ಈ ಮಾತನ್ನು ನಾನು ಆಡುತ್ತಿದ್ದೇನೆ ಎಂದು ಭಾವಿಸುತ್ತಾಳೆ. ಇಲ್ಲಿಯ ಉದಾಹರಣೆಯನ್ನೇ ತೆಗೆದುಕೊಳ್ಳಿ-ಮೂವತ್ತು ಜನ ಚರ್ಚಿಸುವ ಈ ಸಮ್ಮೇಳನದಲ್ಲಿ ಒಬ್ಬಳಾದರೂ ಹೆಂಗಸಿಲ್ಲ. ಅಂದರೆ, ಬೌದ್ಧಿಕವಾಗಿ ಈಕೆ ಅಮೇರಿಕೆಯ ಹೆಂಗಸರಿಗಿಂತ ಬೇರೆಯಾಗಿಯೇ ಇದ್ದಾಳೆ. ಈ ಸಮ್ಮೇಳನವೇ ವಿಚಿತ್ರವಾಗಿದೆ. ಇಂಥ ಸಮ್ಮೇಳನ ಅಮೇರಿಕಾ ಮತ್ತು ಯುರೋಪ್‌ನಲ್ಲಿ ನಡೆಯುವುದು ಸಾಧ್ಯವಿಲ್ಲ. ಏಕೆಂದರೆ ಅಲ್ಲಿ ಸಮಾನ ಪಾಲುಗಾರಿಕೆ, ಭಾಗವಹಿಸುವಿಕೆ ಇರುತ್ತದೆ. ಇರುವ ದೊಡ್ಡ ಹುದ್ದೆಗಳೆಲ್ಲ ಸಾಮಾನ್ಯವಾಗಿ ಗಂಡಸರಿಗೆ ಸಿಗುತ್ತವೆ. ಇನ್ನು ಬೌದ್ಧಿಕ ಕೆಲಸಕಾರ್ಯಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಇಡೀ ಪ್ರಪಂಚದಲ್ಲಿ ಹೆಣ್ಣು-ಗಂಡಿಗೆ ಸರಿಸಮಾನವಾದ ಸ್ಥಾನ ಸಿಕ್ಕಿಲ್ಲ.

ಇದಲ್ಲದೆ ಬೇರೆ ಸಂಬಂಧಗಳೂ ಇರುವುದನ್ನು ನಾವು ಗಮನಿಸಬೇಕು. ಇವು ದೇಹದ ಪ್ರಕೃತಿಗೆ ಸಂಬಂಧ ಪಟ್ಟಂತಹವು. ಇವುಗಳಲ್ಲಿ ಸಮಾನತೆಯಿಲ್ಲ. ಇವೆಲ್ಲ ಎಷ್ಟು ಸಾಮಾಜಿಕ ಗುಣ-ಅವಗುಣಗಳು, ಎಷ್ಟು ಪ್ರಾಕೃತಿಕ ಗುಣ-ಅವಗುಣಗಳು ಎಂಬುದನ್ನು ನಾನು ಇಲ್ಲಿ ಹೇಳಲಾರೆ. ಒಂದು ಅಂಶವನ್ನು ಮಾತ್ರ ನಿಮ್ಮ ಮುಂದೆ ಇಡುತ್ತೇನೆ, ಇದನ್ನು ನೀವು ಚೆನ್ನಾಗಿ ಪರಿಶೀಲಿಸಿ. ಹೆಣ್ಣು ಸುಂದರವಾಗಿರ ಬೇಕು, ಬುದ್ಧಿವಂತಳಾಗಿರಬೇಕು, ಚುರುಕಾಗಿರಬೇಕು, ತೀಕ್ಷ್ಣಮತಿಯಾಗಿರಬೇಕು, ತನ್ನವಳಾಗಿರಬೇಕು, ತನ್ನ ಅಧೀನದಲ್ಲೇ ಇರಬೇಕು ಎಂದೇ ಗಂಡಸು ಸಾಮಾನ್ಯವಾಗಿ ಬಯಸುತ್ತಾನೆ. ಈ ಎರಡೂ ಭಾವನೆಗಳು ಪರಸ್ಪರ ವಿರೋಧವಾದುವುಗಳೇ. ಯಾರನ್ನು ನೀನು ನಿನ್ನವಳನ್ನಾಗಿ ಮಾಡಿಕೊಳ್ಳಬಲ್ಲೆ? ಯಾರನ್ನು ನೀನು ನಿನ್ನ

ನಿಯಂತ್ರಣದಲ್ಲಿಟ್ಟುಕೊಳ್ಳಬಲ್ಲೆ? ಮೇಜನ್ನು, ಒಂದು ಕೋಣೆಯನ್ನು, ಕೊಂಚಮಟ್ಟಿಗೆ ನಾಯಿಯನ್ನು ನಿನ್ನ ವಶದಲ್ಲಿ ಇಟ್ಟುಕೊಳ್ಳಬಹುದು. ಬೆಕ್ಕನ್ನು ಇಟ್ಟುಕೊಳ್ಳುವುದೂ ಕಷ್ಟ. ಅಂದರೆ ನಿರ್ಜೀವವಾದುದನ್ನೂ ಅಥವಾ ಸಜೀವವಾಗಿದ್ದು ಪೂರ್ಣ ರೀತಿ ಜೀವಂತಿಕೆಯಿಲ್ಲದಿರುವಂಥದನ್ನೂ ನೀನು ನಿನ್ನ ವಶದಲ್ಲಿಟ್ಟುಕೊಳ್ಳಲು ಸಾಧ್ಯ. ಆದರೆ ಜೀವಂತ ಚೈತನ್ಯ ಉಳ್ಳದ್ದನ್ನು, ಹೃದಯವಂತರನ್ನು, ತೀಕ್ಷ್ಣಮತಿ ಗಳಾದವರನ್ನು ಅಧೀನದಲ್ಲಿಟ್ಟುಕೊಳ್ಳಲಾಗುವುದಿಲ್ಲ. ಹೆಂಗಸರನ್ನು ಪರಾವಲಂಬಿ ಗಳನ್ನಾಗಿಸಿ ಅವರನ್ನು ಶ್ರೇಷ್ಠವ್ಯಕ್ತಿನ್ನಾಗಿಸುತ್ತೇನೆಂಬ ಆಲೋಚನೆಯನ್ನು ಬಿಟ್ಟು ನೀನು ಅವರನ್ನು ಸ್ವತಂತ್ರವಾಗಿ ಬಿಟ್ಟುಬಿಡು. ಆಗ ಅವರು ತಂತಾನೇ ಶ್ರೇಷ್ಠ ರಾಗುತ್ತಾರೆ. ಹೀಗೆ ಶ್ರೇಷ್ಠವಾಗುವ ಪ್ರಕ್ರಿಯೆಯಲ್ಲಿ ಘಟನೆಗಳೂ, ದುರ್ಘಟನೆ ಗಳಾಗುತ್ತವೆಯಲ್ಲ, ಅವನ್ನು ಎದುರಿಸು. ಅಲ್ಲಿ ಮುಖ ತಿರುಗಿಸುವುದು, ಹೆದರುವುದು ಸರಿಯಾಗುವುದಿಲ್ಲ. ಹೆದರುವುದು, ಸಮಸ್ಯೆಗಳಿಗೆ ಸಿಕ್ಕಿಕೊಳ್ಳುವುದು, ದುಃಖಿಯಾಗುವುದು, ಸಂಘರ್ಷಕ್ಕಿಳಿಯುವುದು ಗಂಡಸಿನ ಸ್ವಭಾವವಾಗಿರುವಂತೆ ಹೆಂಗಸಿನ ಸ್ವಭಾವವೂ ಹೌದು. ಮೊದಮೊದಲು ಪರಸ್ಪರರಲ್ಲಿ ಸಮಸ್ಯೆಗಳೂ, ನೀ ಹೆಚ್ಚೊ? ನಾ ಹೆಚ್ಚೊ? ಎಂಬ ಜಗಳಗಂಟಿ ಮನಸ್ಸುಗಳ ಇರಿಸುಮುರಿಸೂ ಇರುತ್ತವೆ. ಗಂಡು-ಹೆಣ್ಣಿನ ಸಂಬಂಧಗಳು ಮುರಿಯುತ್ತವೆ; ಘಾಸಿಗೊಳ್ಳುತ್ತವೆ. ಇವತ್ತಿನ ಆಧುನಿಕ ಗಂಡಸು ತನ್ನ ಮನಸ್ಸಿನಲ್ಲಿ ಈ ಎರಡು ಪರಸ್ಪರ ವಿರೋಧಿ ಭಾವನೆಗಳು ಬಾರದಂತೆ ನೋಡಿಕೊಳ್ಳುವ ಪ್ರಯತ್ನಮಾಡುತ್ತಾನೆ. ಅಂತೆಯೇ ತನ್ನ ಜೀವನ ಸಂಗಾತಿಯನ್ನು ನಿಜವಾಗಿಯೂ ಜೀವಂತಸೆಲೆಯಂತೆ, ತೇಜೋವಂತಳಂತೆ, ತೀಕ್ಷ್ಣಮತಿಯಂತೆ, ಜ್ಞಾನಿಯಂತೆ ನೋಡಲು ಇಷ್ಟಪಡುವುದರ ಜೊತೆಗೆ ಆಕೆಯನ್ನು ತನ್ನ ವಶದಲ್ಲೂ, ಅಧೀನದಲ್ಲೂ ಇಟ್ಟುಕೊಳ್ಳಲು ಇಷ್ಟಪಡುತ್ತಾನೆ. ಇದೇ ದ್ವಂದ್ವ ಭಾವ. ಈ ಎರಡೂ ಒಟ್ಟಿಗೆ ಇರಲು ಸಾಧ್ಯವಿಲ್ಲ. ಆದ್ದರಿಂದ ಒಬ್ಬರು ಇನ್ನೊಬ್ಬರನ್ನು ಗೌರವಪೂರ್ಣವಾಗಿ ಸ್ವೀಕರಿಸಬೇಕು. ಯಾವುದನ್ನು ನೀವು ಹೇಗೆ ಸ್ವೀಕರಿಸುತ್ತೀರಾ ಎಂಬುದು ನಿಮಗೆ ಬಿಟ್ಟ ವಿಚಾರ. ಆದರೆ ಆಕೆಯನ್ನು ಸದಾ ನಿಯಂತ್ರಣದಲ್ಲಿ, ಅಧೀನದಲ್ಲಿ ಇಟ್ಟುಕೊಳ್ಳಲು ಹಾತೊರೆಯುವ, ಜೀವಚ್ಛವದಂತೆ ನಡೆಸಿಕೊಳ್ಳುವ ವಿಚಾರ ಮಾತ್ರ ಯೋಗ್ಯವಾದುದಲ್ಲ.

ಭಾರತದಲ್ಲಿ ಗಂಡು-ಹೆಣ್ಣುಗಳನ್ನು ಕುರಿತಂತೆ ಸುಂದರ ಕಾವ್ಯಗಳು ಮತ್ತು ಕತೆಗಳು ರೂಪುಗೊಂಡಿವೆ. ಸಾವಿತ್ರಿಗೆ ಸಂಬಂಧಿಸಿದ ಕತೆಯನ್ನು ನಾನು ಕೆಟ್ಟ ಕತೆಯೆಂದು ಹೇಳುತ್ತಿಲ್ಲ ಅಥವಾ ಸಾವಿತ್ರಿಗೆ ನಾನು ಅಗೌರವವನ್ನೂ ಖಂಡಿತಾ ತೋರುತ್ತಿಲ್ಲ. ಅಷ್ಟೇಕೆ, ಒಂದು ಪ್ರಮುಖ ವಿಚಾರದಲ್ಲಿ ಸಾವಿತ್ರಿಯನ್ನು ನಾನು

ತುಂಬಾ ಗೌರವಿಸುತ್ತೇನೆ. ಆದರೆ ಹೆಣ್ಣಿಗೆ ಅದೊಂದೇ ಅಂಶ ಮಹತ್ವವಲ್ಲವಲ್ಲ ? ಆಕೆಗೆ ನಾನಾ ಮುಖಗಳಿರುತ್ತವೆ. ಆ ಅಂಶವೊಂದೇ ಮುಖ್ಯವಾದರೆ, ಉಳಿದ ಅಂಶಗಳು ಲುಪ್ತವಾದರೆ ಅಥವಾ ನಷ್ಟವಾದರೆ ಆಕೆಯನ್ನೂ ಒಂದು ಆದರ್ಶ ಚೇತನವನ್ನಾಗಿ ಸ್ವೀಕರಿಸುವುದು ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಸುಂದರವಾದ ಕತೆಗಳನ್ನು ಕಟ್ಟಿರುವುದು ಮತ್ತು ಒಳ್ಳೆಯ ಮಾತುಗಳನ್ನಾಡಿರುವುದು ನನ್ನ ದೃಷ್ಟಿಯಲ್ಲಿ ಆಧಾರಹೀನವಾದುದು. ಈಗ ನಾನು ಹೇಳುತ್ತಿರುವ ಮಾತಿಗೆ ಸಮರ್ಥನೆಯಾಗಿ ಒಂದು ಸುಂದರ ಕವಿತೆ ಇದೆ: ಇದು ಪಾರ್ವತಿಯ ಮದುವೆಯ ಸಂದರ್ಭದ ಕವಿತೆ: ಪಾರ್ವತಿಯ ಮದುವೆಯಾಗಿದೆ. ಮದುಮಗಳ ತಾಯಿಗೆ, ತನ್ನ ಅಳಿಯ ಸರ್ಪವನ್ನು ಕೊರಳಿಗೆ ಹಾಕಿಕೊಂಡದ್ದನ್ನು, ಬೂದಿ ಬಳಿದುಕೊಂಡದ್ದನ್ನು ನೋಡಿ ದುಃಖ ವಾಗುತ್ತದೆ. ಮದುವೆ ದಿಬ್ಬಣದಲ್ಲಿ ಕುಂಟರನ್ನು, ಹೆಳವರನ್ನು ನೋಡಿ ಕಳವಳಗೊಂಡಿದ್ದಾಳೆ. ದುಃಖಿತಳಾದ ಇವಳನ್ನು ಕಂಡು ಸುತ್ತಲಿನವರು ಸಮಾಧಾನ ಮಾಡಿದರು; ಸ್ವತಃ ಶಿವನೇ ಆಕೆಯನ್ನು ಸಮಾಧಾನಪಡಿಸಿದ. ಅಲ್ಲಿದ್ದವರೆಲ್ಲ ಮದುಮಗಳ ತಾಯಿಗೆ "ನೀನು ಯಾಕೆ ದುಃಖಿಯಾಗಿದ್ದೀ? ನಿನ್ನ ಪ್ರೀತಿಯ ಮಗಳು ತುಂಬ ಸುಖಿಯಾಗಿರುವಳು, ನೀನು ನೋಡುತ್ತಿರುವುದು ಅಳಿಯನ ಬಾಹ್ಯ ಪ್ರತೀಕಗಳಷ್ಟೇ. ಇವನ್ನು ನೋಡಿ ಗಾಬರಿಯಾಗಬೇಡ" ಎಂದು ಹೇಳಿದರು. ಆ ಬಡಪಾಯಿಗೆ ಎಲ್ಲ ಗೊತ್ತಿತ್ತು. ಏಕೆಂದರೆ ವಾಸ್ತವ ಬೇರೆಯಾಗಿತ್ತು. ಆಗ ಪಾರ್ವತಿಯ ತಾಯಿ ಹೇಳಿದಳು :

ಹೆಣ್ಣಿಗೇಕೆ ಜನ್ಮಕೊಟ್ಟ ಭೂಮಿಯಲ್ಲಿ ಬ್ರಹ್ಮನು ?
ಪರಾಧೀನ ಚೇತನಕ್ಕೆ ಇಲ್ಲ ಸ್ವಪ್ನದಲ್ಲು ನಲಿವು !

ಗಂಡು ಹೆಣ್ಣಿನ ಸಂಬಂಧದ ಬಗೆಗೆ ಕೊಳಕು ಪರಿಕಲ್ಪನೆಗಳ ಆಧಾರದ ಮೇಲೆ ಭಾರತೀಯ ವಾಙ್ಮಯ ಬಹಳ ಸುಂದರವಾದುದನ್ನೇ ರಚಿಸಿದೆಯಾದರೂ ಈ ಕವಿತೆಗಿಂತಲೂ ಸುಂದರವಾದ ಸಾಲುಗಳನ್ನು ನಾನು ಇನ್ನೆಲ್ಲೂ ಓದಿಲ್ಲ. ಹೇ ವಿಧಾತ, ಹೇ ಖುದಾ ಅಥವಾ ಪರಮಾತ್ಮನೆ, ನೀನು ಹೆಣ್ಣನ್ನು ಯಾಕೆ ನಿರ್ಮಿಸಿದೆ, ಅವಳನ್ನು ಸೃಷ್ಟಿಸಿದ್ದಾದರೂ ಯಾಕೆ ಎಂದು ಹೆಣ್ಣು ಕೇಳುತ್ತಿದ್ದಾಳೆ. ಪರಾಧೀನಳಾದವಳಿಗೆ ಕನಸಿನಲ್ಲೂಸುಖವೆಂಬುದಿಲ್ಲ ಅಲ್ಲವೆ ? ಒಂದು ಹಂತದ ತನಕ ಗಂಡಿನ ಅಧೀನಳಾಗಿರುವಂತೆ ಮಾಡಿಯೇ ಹೆಣ್ಣನ್ನು ಬ್ರಹ್ಮ ಸೃಷ್ಟಿಸಿದ್ದಾನೆ. ಇನ್ನೂ ವಿವರವಾಗಿ ಹೇಳುವ ಅವಶ್ಯಕತೆಯಿಲ್ಲ. ಹೆಣ್ಣಿನ ಕೆಲಸ ಮಕ್ಕಳಿಗೆ ಜನ್ಮಕೊಡುವುದು ಎಂದು ಸಮ್ಮೇಳನಗಳಲ್ಲಿ ಜನ ಹೇಳುತ್ತಾರೆ. ಅದೂ ಒಂದು ಕಾಯಕವೆಂದಾದರೆ, ಅದೂ ಪರಾಧೀನತೆಯ ಕಾರ್ಯವೇ. ತಾನು ಎಲ್ಲಿ ಊಟ

ಮಾಡಬೇಕು, ಊಟ ಮಾಡಿಸಬೇಕು, ಏನು ಮಾಡಬೇಕು, ಏನು ಮಾಡಬಾರದು ಎಂಬೆಲ್ಲ ವಿಚಾರಗಳಲ್ಲಿ ಆಕೆ ಪರಾಧೀನಳೇ. ಆದರೆ ಈಗ ಸಮಾಜ ಹೇಗೆ ರೂಪುಗೊಳ್ಳುತ್ತಿದೆಯೆಂದರೆ, ಆಕೆಯ ಪರಾಧೀನತೆಯನ್ನು ಕಡಿಮೆ ಮಾಡಲಾಗುತ್ತಿದೆ. ಇದೊಂದು ಪ್ರಾಕೃತಿಕ ನಿಯಮ. ಪಾಪ, ಆ ಬಡಪಾಯಿ ಕೊಂಚ ತಗ್ಗಿಬಗ್ಗಿಯೇ ನಡೆಯಬೇಕಾಗಿದೆ ಎಂದು ನನಗನ್ನಿಸುತ್ತಿದೆ.

''ಪರಾಧೀನ ಚೇತನಕ್ಕೆ ಇಲ್ಲ ಸ್ವಪ್ನದಲ್ಲೂ ನಲಿವು!'' ಎಂಬ ಪಂಕ್ತಿಯ ಬಗೆಗೆ ಒಂದು ಚಿಕ್ಕಕತೆ ಹೇಳುತ್ತೇನೆ: ಬಹಳ ದಿನಗಳವರೆಗೆ ಜನ ಈ ಕಾವ್ಯ ಪಂಕ್ತಿಯ ಅರ್ಥವನ್ನೇ ಮರೆಮಾಚಿಟ್ಟಿದ್ದರು ಹಾಗೂ ಇದರ ಸಂಬಂಧವನ್ನು ಪರಾಧೀನ ರಾಷ್ಟ್ರದೊಂದಿಗೆ ಬೆಸೆದಿದ್ದರು. ಕಾನ್ಪುರದಿಂದ 'ಪ್ರತಾಪ್' ಎಂಬ ಪತ್ರಿಕೆ ಪ್ರಕಟವಾಗುತ್ತಿತ್ತು. ಈ ಪತ್ರಿಕೆಯ ಮೇಲ್ಭಾಗದಲ್ಲಿ ''ಪರಾಧೀನ ಚೇತನಕ್ಕೆ ಇಲ್ಲ ಸ್ವಪ್ನದಲ್ಲೂ ನಲಿವು!'' ಎಂಬುದು ಯಾವಾಗಲೂ ಅಚ್ಚಾಗಿರುತ್ತಿತ್ತು. ಹೀಗೆ ಈ ಕಾವ್ಯಪಂಕ್ತಿಯ ಸಂಬಂಧವನ್ನು ಭಾರತದ ಪರಾಧೀನತೆಯೊಂದಿಗೆ ಸಮೀಕರಿಸಲಾಗಿತ್ತು. ಹಿಂದೂ ಅಥವಾ ಮುಸ್ಲಿಂ ಗಂಡಸಿನ ಮನಸ್ಸು ಎಷ್ಟು ಕೊಳೆತಿದೆ ಅಂದರೆ ಈ ಅದ್ಭುತವಾದ ಸುಂದರ ಕಾವ್ಯಾಂಶವನ್ನು ಹಾಳುಮಾಡಿ, ಮೊದಲ ಭಾಗವನ್ನು ಕಿತ್ತೆಸೆದು ''ಮನಸಿನಲ್ಲಿ ಯೋಚಿಸಿ ವಿಚಾರಮಾಡು, ಪರಾಧೀನ ಚೇತನಕ್ಕೆ ಇಲ್ಲ ಸ್ವಪ್ನದಲ್ಲೂ ನಲಿವು!'' ಎಂದು ಒಬ್ಬ ಅದನ್ನು ಬದಲಾಯಿಸಿದ. ಆ ಕಾವ್ಯ ಪಂಕ್ತಿಯನ್ನು ವಿಕೃತಗೊಳಿಸಲಾಯಿತು. ಆ ಕವಿ ''ಮನಸಿನಲ್ಲಿ ಯೋಚಿಸಿ ವಿಚಾರ ಮಾಡು'' ಎಂದು ಬರೆದಿರಲಾರ. ಅದರಲ್ಲೂ ತುಳಸೀದಾಸ ಈ ಅನಾವಶ್ಯಕವಾದ ಮಾತನ್ನು ಬರೆದಿರಲಾರ. ಆದರೆ ಈ ಪಂಕ್ತಿಯನ್ನು ತುಲಸೀದಾಸರ ತಲೆಗೆ ಕಟ್ಟಿದರು.

ಈ ಮಾತು ಕಿವಿಗೆ ಬಿದ್ದಾಗಲೆಲ್ಲ ನನ್ನ ಮನಸ್ಸಿಗೆ ಚುಚ್ಚುತ್ತದೆ. ಅದೆಷ್ಟೇ ಕಷ್ಟ ನಷ್ಟಗಳನ್ನು ಅನುಭವಿಸಿದರೂ ಸರಿ, ಈ ದಾರಿಯಲ್ಲಿ ಎಷ್ಟೆಲ್ಲ ಒಳ್ಳೆಯದು, ಕೆಟ್ಟದ್ದನ್ನು ಕಂಡರೂ ಕೂಡ, ನನಗೆ-ನಿಮಗೆ ಅನೇಕ ವಿಚಾರಗಳಲ್ಲಿ ಇಷ್ಟವಾಗ ದಿದ್ದರೂ ಸಹ, ನಾವು ನಿಜಕ್ಕೂ ಸಮಾನತೆಯ ಆದರ್ಶವನ್ನು ಒಪ್ಪಿಕೊಳ್ಳುವುದಾದರೆ ಮತ್ತು ಸಮಾಜದ ಪುನರ್ರಚನೆಯನ್ನು ಸಮಾನತೆಯ ಆಧಾರದ ಮೇಲೆ ಮಾಡಬೇಕೆಂದಿದ್ದರೆ ಹೆಣ್ಣು-ಗಂಡಿನ ವಿಚಾರದಲ್ಲಿ ಮನುಷ್ಯ ಒಂಟಿಯಾಗಿದ್ದಾಗ ಇಲ್ಲವೇ ಮಲಗಿದ್ದಾಗ, ನಿಂತಾಗ ಕುಂತಾಗ, ಆಲೋಚಿಸುವಾಗ ತನ್ನ ತಲೆಯಲ್ಲಿರುವ ಹಳೆಯ ಕೊಳಕನ್ನೆಲ್ಲ ಸಂಪೂರ್ಣವಾಗಿ ತೆಗೆದುಹಾಕುವುದು ಅತ್ಯವಶ್ಯವಾಗಿದೆ. ಇಡೀ ವಿಶ್ವವೇ ಈ ದಿಕ್ಕಿನಲ್ಲಿ ಮುನ್ನಡೆಯಬೇಕು.

ಗಂಡು ಹೆಣ್ಣಿನ ಸಮಾನತೆಯನ್ನು ಕುರಿತಂತೆ ಎಲ್ಲ ಅಂಶಗಳಿಂದಲೂ ಯೂರೋಪಿಯನ್ನರು ನಮಗಿಂತಲೂ ಉತ್ತಮರಾಗಿಬಿಟ್ಟಿದ್ದಾರೆ ಎಂದೇನೂ ನೀವು ಭಾವಿಸಬೇಕಿಲ್ಲ. ಇದರ ಬಗ್ಗೆ ನಾನು ಈಗ ತಾನೇ ಹೇಳಿದ್ದೇನೆ. ಅಂದ ಹಾಗೆ ಒಂದು ಮಾತು ಹೇಳುವುದನ್ನು ಮರೆತಿದ್ದೆ. ಒಮ್ಮೆ ನನ್ನ ಭಾಷಣ ಮುಗಿದ ಕೂಡಲೇ ಕೆಲವು ಮಹಿಳೆಯರು ನನ್ನ ಬಳಿ ಬಂದರು. ಕೊನೆಯ ಪಕ್ಷ ನಾಲ್ಕಾರು ಜನ ಮಹಿಳೆಯ ರಾದರೂ ಬಂದು ತಮ್ಮ ಸ್ನೇಹ ಮತ್ತು ಮಮತೆಯನ್ನು ತೋರಿದರಲ್ಲ ಎಂದು ಸಂತೋಷವಾಯಿತು. ಅವರಲ್ಲಿ ಒಬ್ಬರು, "ನಾನು ಹೇಳಬೇಕೆಂದಿದ್ದ ಮಾತನ್ನು ನೀವು ಹೇಳಿದಿರಿ, ಹೀಗೆ ಹೇಳುವ ಅವಶ್ಯಕತೆಯಿತ್ತು" ಎಂದರು. "ನಮಗೆ ಸಮಾಜದಲ್ಲಿ ಯಾವ ಸ್ಥಾನವಿದೆ ಎಂಬುದೆ ತಮಗೆ ಗೊತ್ತಿಲ್ಲ" ಎಂದು ಹೇಳುವ ಒಂದಿಬ್ಬರು ಮಹಿಳೆಯರೂ ಅಲ್ಲಿದ್ದರು. ಅವರ ಸ್ಥಾನ ಏನೆಂಬುದನ್ನು ನಾನು ಹೇಳಬೇಕಿತ್ತೇನು? "ನೀವು ಒಂದು ಲೋಟ ನೀರನ್ನು ಸಹ ತಂದು ಕೊಡುವುದಿಲ್ಲ, ನೀರು ತರಲು ಬೇರೆಯವರಿಗೆ ಹೇಳಿ ಬಿಡುತ್ತೀರಿ. ಇಷ್ಟರ ಹೊರತಾಗಿ ನಿಮ್ಮಲ್ಲಿ ಬೇರೆ ಸಮಾನತೆಯೇನೂ ಬಂದಿಲ್ಲ?" ಸರಿ, ಅಮೇರಿಕದ ನನ್ನ ಅತ್ಯಂತ ಪ್ರಿಯಸ್ನೇಹಿತ ಬಂದು, "ನಿನ್ನ ತಲೆಯಲ್ಲಿ ಈ ವಿಚಾರವೇ" ಅಂದ. "ಹೌದು, ಇದು ನನ್ನ ತಲೆಯಲ್ಲಿ ಭದ್ರವಾಗಿ ಕುಳಿತಿದೆ, ಇದನ್ನು ನೀನು ನೋಡುತ್ತಿಲ್ಲ" ಅಂದೆ. ಪ್ರಪಂಚದಲ್ಲಿ ಒಂದೇ ಸರ್ಕಾರವನ್ನು ಯಾವ ರೀತಿ ಸ್ಥಾಪಿಸಬೇಕು ಎಂಬ ಅಂಶ ಅವನ ತಲೆಯಲ್ಲಿ ಕುಳಿತಿದೆ. ಆದರೆ ಒಂದು ಸರ್ಕಾರ ಸ್ಥಾಪಿಸಲು ಹೋದಾಗ ಅಸಮಾನತೆಯ ಎಷ್ಟೆಲ್ಲ ಅಂಶಗಳಿವೆಯೋ ಅವನ್ನು ದೂರೀಕರಿಸುವೆ ತಾನೆ? ಕೆಲವು ಜನರ ಬುದ್ಧಿ ಏಕಮುಖಿಯಾಗಿರುತ್ತದೆ. ಯಾವುದಾದರೂ ಒಂದು ಮಾರ್ಗವನ್ನು ಅದು ಅನುಸರಿಸತೊಡಗಿತೆಂದರೆ, ಬೇರೆಲ್ಲ ಅಂಶಗಳ ಕಡೆ ಅದರ ಗಮನ ಹರಿಯುವುದೇ ಇಲ್ಲ. ನಾನು ಈಗ ಹೇಳುತ್ತಿರುವ ಮಿತ್ರನು ನಿಗಮಗಳ ಕುರಿತು ಮಾತನಾಡುತ್ತಾನೆ. ಅದು ವ್ಯಾಪಾರ-ವಹಿವಾಟಿನ ನಿಗಮವಾಗಿರಬಹುದು. ಕಾರ್ಖಾನೆಗಳ ನಿಗಮವಾಗಿರಬಹುದು. ಇಡೀ ಪ್ರಪಂಚದ ತುಂಬ ನಿಗಮಗಳನ್ನು ರಚಿಸಿ, ಆ ಮೂಲಕ ಅಸಮಾನತೆಗಳನ್ನು ದೂರಮಾಡಬಹುದು ಅನ್ನುತ್ತಾನೆ. ಹೀಗಾಗಿ ಆ ಮನುಷ್ಯನಿಗೆ ಈ ಸಮಸ್ಯೆ ತುಂಬ ಚಿಕ್ಕದು.

ಈ ವಿಷಯದಲ್ಲಿ ನಾವು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅದರಲ್ಲೂ, ಹೆಂಗಸರು ಆರ್ಥಿಕವಾಗಿ ಸ್ವತಂತ್ರರಾಗಬೇಕು, ಹೆಂಗಸರು ಮತ್ತು ಗಂಡಸರಿಗೆ ಸಮಾನ ವೇತನ ಕೊಡಬೇಕು ಎಂಬೆಲ್ಲ ಸಣ್ಣ-ದೊಡ್ಡ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು. ಕೆಲಸದಲ್ಲಿ ಸಮಾನತೆ ಇರುವಂತೆ ಕೂಲಿಯಲ್ಲೂ

ಸಮಾನತೆಯಿರಬೇಕು ಎಂಬೆಲ್ಲ ವಿಚಾರಗಳು ಉತ್ತಮ ಸಮಾಜವಾದಿ ಪಕ್ಷದ ಕಾರ್ಯಕ್ರಮದ ಅಂಶಗಳಾಗಬೇಕು ಎಂದೇ ನಾನು ಹೇಳುತ್ತೇನೆ. ಹೆಂಗಸರಿಗೆ ಸಮಾನವಾದ ವೇತನ ಅಥವಾ ಕೂಲಿ ಕೊಡುವ ವಿಚಾರದಲ್ಲಿ, ಗಂಡಸಿಗೆ ಸರಿಸಮಾನವಾಗಿ ಹೆಂಗಸನ್ನು ಸ್ವೀಕರಿಸುವ ವಿಚಾರದಲ್ಲಿ ಅಪಕ್ವ ಹಾಗೂ ಅರೆಬೆಂದ ಸಮಾಜವಾದಿಗಳು ಬಹುಶಃ ವಾದ ವಿವಾದ ಮಾಡಬಹುದು, ಅಷ್ಟೆ. ಅವರು ಒಂದು ವೇಳೆ ಹಳೇ ಸಂಪ್ರದಾಯವಾದಿಗಳಾದರೆ ನಾಚಿಕೆಯಿಂದ ವಾದ ವಿವಾದವನ್ನೇ ಮಾಡುವುದಿಲ್ಲ. ಏಕೆಂದರೆ ಅವರು ಶಾಸ್ತ್ರಗಳ ಆಧಾರಗಳನ್ನು ನೀಡಿ, ಸರಿಸಮಾನವಾದ ವೇತನ ಕೊಡಬೇಕು, ಸಮಾನ ಕೆಲಸಕ್ಕೆ ಸಮಾನ ಕೂಲಿ ಕೊಡಬೇಕು, ಸಮಾನವಾದ ಕಾನೂನುಗಳಿರಬೇಕು ಎಂದು ಹೇಳುತ್ತಾರೆ. ಆದರೆ ನಾನು ಹೇಳುತ್ತಿರುವ ಮಾತುಗಳು ಮೇಲಿನ ಮಾತುಗಳಿಗಿಂತಲೂ ಮುಂದೆ ಹೋಗುತ್ತವೆ. ನಾನು ನಮ್ಮ ಬೌದ್ಧಿಕ ಲೋಕದ ಪುನರ್ವಿಮರ್ಶೆಯಾಗಬೇಕೆಂದು ಹೇಳುತ್ತಿದ್ದೇನೆ.

ಈ ಬೌದ್ಧಿಕ ಪುನರ್ವಿಮರ್ಶೆಯಾಗಬೇಕೆಂದು ಹೇಳುತ್ತ, ಸಾವಿತ್ರಿ ಮತ್ತು ದ್ರೌಪದಿಯ ಕತೆಗಳನ್ನು ತೆಗೆದುಕೊಂಡು ಚರ್ಚೆಯನ್ನು ಆರಂಭಿಸಬಯಸುತ್ತೇನೆ. ಭಾರತದ ನಿಜವಾದ ಪ್ರತೀಕ ದ್ರೌಪದಿಯೇ ಹೊರತು ಸಾವಿತ್ರಿಯಲ್ಲ. ಪ್ರಾಚೀನ ಇತಿಹಾಸವನ್ನು ಚೆನ್ನಾಗಿ ಅರಿತಿರುವವರು ಈ ಬಗ್ಗೆ ರೋಚಕವಾಗಿ ಚರ್ಚೆಗೆ ಇಳಿಯಬಹುದು. ಆಗ ಮುಕ್ತ ಚರ್ಚೆ ನಡೆಸಲು ಸಾಧ್ಯ. ಆಗ ಈ ವಿಚಾರ ಬೆಂಕಿಯಂತೆ ಮನೆ ಮನೆಗೂ ಹರಡುತ್ತದೆ. ನನಗನ್ನಿಸುವಂತೆ ಭಾರತದಲ್ಲಿ ಇರುವ ಕೊರತೆ ಎಂದರೆ, ಅದೂ ದೊಡ್ಡ ಕೊರತೆಯೆಂದರೆ, ಇಲ್ಲಿ ಬುದ್ಧಿ ಸತ್ತು ಹೋಗಿದೆ; ಈ ಬುದ್ಧಿ ಪುನರ್ಜೀವ ಪಡೆದುಕೊಳ್ಳಬೇಕಾಗಿದೆ.

ನಮ್ಮ ಪುರಾಣದ ಸಾವಿತ್ರಿಯನ್ನು ಆರಾಧಿಸುವವರು ಎರಡು ಬಗೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಚರ್ಚೆ ಶುರುವಾಯಿತು ಅಂದರೆ ಸಾಕು, ಜನರಲ್ಲಿ ಉತ್ಸಾಹ ಮೂಡಿ, ಅವರೆಲ್ಲ ನಾಮುಂದು ತಾಮುಂದು ಎಂದು ಮಾತನಾಡಲು ಮುಂದೆ ಬರುತ್ತಾರೆ. ಹೀಗೆ ಜನರಲ್ಲಿ ಉತ್ಸಾಹ ಉಕ್ಕಿ ಅಸಂಬದ್ಧವಾಗಿ ಅಥವಾ ಪರವಾಗಿ ಅಥವಾ ವಿರೋಧವಾಗಿ ಮಾತನಾಡಲು ಆರಂಭಿಸಿದರೆಂದರೆ, ಅವರೆಲ್ಲ ಚಿಂತನೆ-ಮರುಚಿಂತನೆಯಲ್ಲಿ ಮುಳುಗಿದರೆಂದರೆ, ಅಷ್ಟು ಸಾಕು, ನಮ್ಮ ಪ್ರಯತ್ನ, ಉದ್ದೇಶಗಳು ಸಾರ್ಥಕ. ದೇಶವನ್ನು ಆವರಿಸಿರುವ ಬೌದ್ಧಿಕ ಅಧಃಪತನ ಕೊನೆಗೊಂಡರೆ ಸಾಕು. ಇಷ್ಟನ್ನು ಸಾಧಿಸಲು ನಾವು ಸಾಕಷ್ಟು ಶ್ರಮಿಸಬೇಕಾಗಿದೆ. ಸದ್ಯಕ್ಕೆ ಇಷ್ಟು ಸಾಕು.

ಇವತ್ತು ಭಾರತದ ಗಂಡಸರು ಮತ್ತು ಹೆಂಗಸರು ಇಬ್ಬರೂ ಅರೆಹೊಟ್ಟೆಯ ಜನರೇ ಆಗಿದ್ದಾರೆ. ಹೊಟ್ಟೆತುಂಬ ಉಣ್ಣುವ ಸವಲತ್ತುಳ್ಳವರು ಬಹುಶಃ ಹತ್ತರಲ್ಲಿ ಇಬ್ಬರಿರಬಹುದು; ಉಳಿದ ಎಂಟುಜನರು ನಿಜಕ್ಕೂ ಹಸಿವಿನಿಂದಿದ್ದಾರೆ. ಅವರ ಹೊಟ್ಟೆ ತುಂಬುವುದಿಲ್ಲ. ಗಂಡಸರಿಗೆ ಹೋಲಿಸಿದರೆ ಹೆಂಗಸರು ಇನ್ನೂ ಹೆಚ್ಚಿನ ಹಸಿವಿನಿಂದಿದ್ದಾರೆ. ಇದಕ್ಕೆ ಕಾರಣವೆಂದರೆ ಭಾರತದ ಬಹುಪಾಲು ಹೆಂಗಸರು ತಮ್ಮ ಮನೆಯ ಗಂಡಸರು ಉಂಡಮೇಲೆ ತಾವು ಉಣ್ಣುತ್ತಾರೆ. ಅವರು ಮೊದಲು ಹಿರಿಯ ಗಂಡಸರಿಗೆ, ಮಕ್ಕಳಿಗೆ, ಮನೆಗೆ ಬಂದ ಅಥಿಗಳಿಗೆ ಊಟಕ್ಕೆ ಬಡಿಸಿ, ಆನಂತರ ತಾವು ಉಣ್ಣುವ ಪರಿಪಾಠವನ್ನು ಇಟ್ಟುಕೊಂಡಿದ್ದಾರೆ. ಈ ಸ್ಥಿತಿಯಲ್ಲಿ ಅವರಿಗೆ ಕೊನೆಗೆ ಉಳಿದಿರುವುದಾದರೂ ಎಷ್ಟು? ಎಷ್ಟೋ ಕಡೆ ಈ ಹೆಂಗಸರು ನೀರು ಕುಡಿದು ಹೊಟ್ಟೆಗೆ ಬಟ್ಟೆ ಕಟ್ಟಿಕೊಂಡು ಮಲಗಿಬಿಡುತ್ತಾರೆ ಎಂದು ನಾನು ಕೇಳಿದ್ದೇನೆ. ಹೆಂಗಸರು ಎರಡು ಪಟ್ಟು ತಿನ್ನುತ್ತಾರೆ ಎಂಬ ನಮ್ಮ ಮಾಮೂಲಿನ ಲೋಕಾಭಿರಾಮದ ಮಾತನ್ನು ಕೊಂಚ ಎಚ್ಚರಿಕೆಯಿಂದಲೇ ನಾವು ಉಚ್ಚರಿಸಬೇಕಾಗಿದೆ.

ಭಾರತದಲ್ಲಿ ಹೆಂಗಸರನ್ನು ನಾವು ಬಹಳ ದುಃಖಿಗಳನ್ನಾಗಿ ಮಾಡಿದ್ದೇವೆ; ಹೆಣ್ಣುಕುಲವನ್ನೇ ಅಧೋಗತಿಗಿಳಿಸಿದ್ದೇವೆ. ಊಟದ ವಿಚಾರದಿಂದ ಮೊದಲುಗೊಂಡು ಎಲ್ಲದರಲ್ಲೂ ಅವಳನ್ನು ಹೀನಾಯದೃಷ್ಟಿಯಿಂದ ಕಂಡಿದ್ದೇವೆ. ಹೀಗೇಕೆ ಎಂದು ನಾನು ಅನೇಕ ಸಲ ಯೋಚಿಸಿದ್ದೇನೆ. ಸರಿಯಾದ ಉತ್ತರ ನನಗೆ ದೊರೆತಿಲ್ಲ. ಬಹುಪತ್ನಿತ್ವ ಪದ್ಧತಿ ಭಾರತದಲ್ಲಿ ಯಾಕಿತ್ತು? ಈಗ ಇಲ್ಲ ಬಿಡಿ. ಇದ್ದರೂ ಅದು ಕಾನೂನುಬಾಹಿರ ಚಟುವಟಿಕೆಯಾಗಿದೆ; ಅಲ್ಲಲ್ಲಿ ಇದ್ದರೂ ಇರಬಹುದು. ಯಾಕೆ ಇದೆ ಅಂದರೆ- ನಾವು ಅದರ ಬಗೆಗೆ ಜಾಗೃತರಾಗಿಲ್ಲ; ಅಂಥವರನ್ನು ಜೈಲಿಗೆ ಕಳುಹಿಸುವುದಿಲ್ಲವಲ್ಲ, ಅದಕ್ಕೆ. ಎರಡನೆಯದಾಗಿ ಈ ಬಗೆಯ ಗಂಡಸರು ಗಂಡಸರು ಚಾಲಾಕಿಗಳಾಗಿರುತ್ತಾರೆ. ಮೂರನೆಯದಾಗಿ, ಪಾಪ, ಹೆಂಗಸರು ತಗ್ಗಿಬಗ್ಗಿ ನಡೆಯುತ್ತಾರೆ, ಗಲಾಟೆಮಾಡುವುದಿಲ್ಲ. ಕಾನೂನಿನಂತೆ ಇದು ನಡೆಯಲು ಸಾಧ್ಯವಿಲ್ಲವಾದರೂ ಎಷ್ಟೋ ಸಾವಿರ ವರ್ಷಗಳಿಂದ ಈ ಪರಂಪರೆ ನಡೆದುಕೊಂಡು ಬಂದಿದೆಯಲ್ಲವೆ?

ಮುಸ್ಲಿಮರಲ್ಲಿ ಈ ಪದ್ಧತಿ ಇನ್ನೂ ಇದೆ. ನನಗೆ ಮುಸ್ಲಿಂ ಎಂದಾಗಲಿ ಹಿಂದೂ ಎಂದಾಗಲಿ ಭೇದಭಾವವಿಲ್ಲ. ಹೀಗಾಗಿ ಯಾರೊಬ್ಬರ ಬಗೆಗೇ ಆಗಲಿ ಮಾತನಾಡಲು ನನಗೆ ಸಂಕೋಚವಿಲ್ಲ. ಈ ಸಂಕೋಚ ಕಡೇ ಪಕ್ಷ ನಮ್ಮೊಳಗಿಂದ

ಮೊದಲು ಮಾಯವಾಗಬೇಕು. ಸಾಮಾನ್ಯ ಜನತೆಯೊಡನೆ ಮಾತನಾಡುವಾಗ ನಾವು ಶಬ್ದಗಳನ್ನು ಎಚ್ಚರಿಕೆಯಿಂದ ಬಳಸಬೇಕೆಂಬುದು ನಿಜವೇ. ಹಾಗೆ ನೋಡಿದರೆ ನಾನು ಮುಸ್ಲಿಮರ ಬಗೆಗೂ, ಜನಸಾಮಾನ್ಯರ ಬಗೆಗೂ ಎಷ್ಟೋ ಹೇಳುತ್ತಿರುತ್ತೇನೆ. ಅದನ್ನೆಲ್ಲ ಬೇರೆಯವರು ಹೇಳಿದರೆ ಗೊಂದಲವಾಗುವ ಸಾಧ್ಯತೆಯಿರುತ್ತದೆ. ಇದು ತಪ್ಪು ಎಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಮ್ಮ ಮುಸ್ಲಿಂ ಹೆಂಗಸರು ಬುರ್ಖಾ ಧರಿಸಿ ನಡೆಯುವುದನ್ನು ನೋಡಿದಾಗಲೆಲ್ಲ ಈ ಪದ್ಧತಿಯ ನಿವಾರಣೆಗೆ ಏನಾದರೂ ಮಾಡಬೇಕಲ್ಲ ಎಂದೆನ್ನಿಸುತ್ತದೆ. ಆದರೆ ಮರುಕ್ಷಣವೇ, ಈ ಸಂಬಂಧದಲ್ಲಿ ಏನಾದರೂ ಪ್ರಯತ್ನ ಮಾಡಲು ಹೊರಟರೆ, ಗೊಂದಲ-ಗಲಾಟೆಗಳು ಉಂಟಾಗುತ್ತವೆಂದು ಅನೇಕ ಸಲ ಸುಮ್ಮನಾಗುತ್ತೇನೆ.

ನಾವು ನಾಲ್ಕು ಹೆಂಗಸರನ್ನು ಮದುವೆ ಮಾಡಿಕೊಳ್ಳಬಹುದು ಹಾಗೂ ಈ ನಾಲ್ವರನ್ನು ಸರಿಸಮವಾಗಿ ನೋಡಿಕೊಳ್ಳಬೇಕು ಎಂದು ನಮ್ಮ ಧರ್ಮದಲ್ಲಿ ಹೇಳಿದೆ ಎಂದು ನಮ್ಮ ಮುಸ್ಲಿಮ್ ಬಂಧುಗಳು ಹೇಳುತ್ತಾರೆ. ಆಗ ದ್ರೌಪದಿಯ ನೆನಪಾಗುತ್ತದೆ. : ಸರ್ವಗುಣ ಸಂಪನ್ನೆಯಾದ ಆಕೆಯೇ ಸರಿಸಮಾನತೆಯಿಂದ ತನ್ನ ಗಂಡಂದಿರನ್ನು ಕಾಣಲಿಲ್ಲವೆಂದ ಮೇಲೆ ಉಳಿದವರ ಪಾಡೇನು? ಇದೆಲ್ಲ ಖಂಡಿತಾ ಅಸಂಭವ. ಕುರಾನ್‌ನಲ್ಲಿ ಏನು ಬರೆದಿದೆ, ಏನು ಬರೆದಿಲ್ಲ ಅನ್ನುವುದು ನನಗೆ ಬೇಕಾಗಿಲ್ಲ. ನಾನು ಹೇಳಬೇಕೆಂದಿರುವುದಿಷ್ಟೆ. ಹೆಂಗಸಿಗೂ ನಾಲ್ವರು ಗಂಡಂದಿರನ್ನು ಹೊಂದುವ ಅಧಿಕಾರವನ್ನು ಕೊಡದಿರುವ ಧರ್ಮ, ಅದು ಯಾವ ಧರ್ಮವೇ ಆಗಿರಲಿ, ಗಂಡಿಗೆ ನಾಲ್ವರು ಹೆಂಗಸರನ್ನು ಹೊಂದುವ ಅಧಿಕಾರ ನೀಡುವುದನ್ನು ನಾನು ಒಪ್ಪುವುದಿಲ್ಲ. ಇವತ್ತಿನ ಪ್ರಪಂಚದಲ್ಲಿ ನಾಲ್ಕು ಮಂದಿ ಹೆಂಡತಿಯರನ್ನು ಹೊಂದುವ ಗಂಡಸು ಕೊಳಕು ಮನಸ್ಸಿನವನಾಗಿರುತ್ತಾನೆ; ಆತನಿಗೆ ಈ ಹೊಸ ಜಗತ್ತಿನಲ್ಲಿ ಜಾಗ ಇರಬಾರದು. ಈ ದೃಷ್ಟಿಯಿಂದ ನಮ್ಮ ಮನಸ್ಸನ್ನು ನಾವು ಸದಾ ತಿಳಿಗೊಳಿಸಿಕೊಳ್ಳುತ್ತಿರಲೇಬೇಕು.

ಅನೇಕ ಹೆಂಗಸರೊಡನೆ ಒಟ್ಟಿಗೇ ಮದುವೆ ಮಾಡಿಕೊಳ್ಳಬಹುದಾದ ವ್ಯವಸ್ಥೆ ಭಾರತದಲ್ಲಿತ್ತು. ಈಗ ಕಾನೂನಿನ ಬಲದಿಂದ ಈ ವ್ಯವಸ್ಥೆಯನ್ನು ಕೊನೆಗಾಣಿಸಲಾಗಿದ್ದರೂ, ಪರಂಪರೆಯು ಅದೇ ರೀತಿಯಲ್ಲಿ ನಡೆದು ಬರುತ್ತಿದೆ. ಅದೇ ಹೊಲಸು ಮಿದುಳು ನಮ್ಮನ್ನು ನಿಗ್ರಹಿಸುತ್ತಿದೆ. ಯೂರೋಪಿನಲ್ಲಿ ಈ ಪರಂಪರೆಯಿರಲಿಲ್ಲವೆಂದು ನನ್ನ ಅಭಿಪ್ರಾಯವಾದರೂ ಹೆಚ್ಚು ಹೆಚ್ಚಿನ ಅಧ್ಯಯನ ಕೈಗೊಂಡಂತೆಲ್ಲ ಈ ಸಂಬಂಧದ ಒಂದೆರಡು ಕತೆಗಳು ನನಗೆ ಸಿಕ್ಕಿವೆ. ಶಾರ್ಲ್‌ಮನ್

ಅಥವಾ ಚಾರ್ಲ್ಸ್ ದಿ ಗ್ರೇಟ್ ಅಥವಾ ಕಾರ್ಲ್ ದಿ ಗ್ರೂಸೇ ಹೆಸರನ್ನು ನೀವು ಕೇಳಿರಬಹುದು. ಈ ಸಂಬಂಧದಲ್ಲಿ ಒಂದು ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಅದೆಂದರೆ ವಿದೇಶಿ ಹೆಸರುಗಳನ್ನು ಭಾರತೀಯರು ಇಂಗ್ಲಿಷೀಕರಣ ಮಾಡಿಬಿಡುತ್ತಾರೆ. ಹಾಗೂ ಈ ಇಂಗ್ಲಿಷ್ ಹೆಸರುಗಳನ್ನು ತಪ್ಪದೆ ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಇನ್ನು ನಮ್ಮ ಅಂತರ ರಾಷ್ಟ್ರೀಯತೆ ಹೇಗಿದೆಯೆಂದರೆ ಭಾರತದ ಹೊರಗೆ ಇರುವುದೆಲ್ಲದರ ಹೆಸರುಗಳು ಇಂಗ್ಲಿಷ್‌ನವೇ ಎಂದು ನಾವು ಭಾವಿಸುತ್ತೇವೆ. ಈ ದಡ್ಡತನವನ್ನು ನಾವು ಮೊದಲು ದೂರಮಾಡಬೇಕು. ಅದು ಇಂಗ್ಲಿಷ್ ಆಗಿರದೆ, ಜರ್ಮನ್ ಆಗಿರಬಹುದು, ಫ್ರೆಂಚ್ ಆಗಿರಬಹುದು. ಭಾರತದ ಮಹಾನ್ ಲೇಖಕರನ್ನು, ಮಹಾನ್‌ಕವಿಗಳನ್ನು, ದಾರ್ಶನಿಕರನ್ನೂ ನಾನು ನೋಡಿದ್ದೇನೆ. ಅದರಲ್ಲೂ ವಿಶೇಷವಾಗಿ ಹಿಂದೀವಾಲಾಗಳು ಇಂಗ್ಲಿಷೀಕರಣವನ್ನೂ ಹೆಚ್ಚು ಮಾಡುತ್ತಾರೆ. ಸರಿ, ಈತ ಯೂರೋಪ್ ಇತಿಹಾಸದಲ್ಲಿ ಬಹುದೊಡ್ಡ ರಾಜನಾಗಿದ್ದ. ಆತ ಫ್ರಾನ್ಸ್‌ನವನೋ ಜರ್ಮನ್‌ನವನೋ ಅಥವಾ ಎರಡೂ ಆಗಿದ್ದನೋ ಎಂಬುದರ ಬಗ್ಗೆ ಅನುಮಾನಗಳಿವೆ. ಚಾರ್ಲ್ಸ್ ದಿ ಗ್ರೇಟ್ ಇರಲೇ ಇಲ್ಲ; ಇಂಗ್ಲೀಷ್‌ನವರು ಮಾಡಿದ ನಾಮಕರಣ ಅದು. ಅವನು ಕಾರ್ಲ್ ದಿ ಗ್ರೂಸೇ ಎಂಬ ಜರ್ಮನ್ ಹೆಸರಿನವನಿರಬೇಕು, ಇಲ್ಲ, ಕಾರ್ಲಮನ್ ಎಂಬ ಫ್ರೆಂಚ್ ಹೆಸರಿನವರಿಬೇಕು. ಮ್ಯಾಗ್ನಕಾರ್ಟಾ ಎಂಬ ಹೆಸರನ್ನು ಕೇಳಿದ್ದೀರಾ? ಮ್ಯಾಗ್ನಾದ ಅರ್ಥ ದೊಡ್ಡವನು ಎಂದು. ಈ ಮ್ಯಾಗ್ನಾದ ಫ್ರೆಂಚ್ ಉಚ್ಚಾರಣೆ 'ಮನ್' ಎಂದು. ಫ್ರೆಂಚ್‌ನ ಶಾರ್ಲ್ ಶಬ್ದ ಇಂಗ್ಲೀಷ್‌ನಲ್ಲಿ ಚಾರ್ಲ್ಸ್ ಎಂದೂ, ಜರ್ಮನ್‌ನಲ್ಲಿ ಕರ್ಲ್ ಎಂದೂ ಆಗುತ್ತದೆ. ಶಾರ್ಲ್‌ಮನ್‌ಗೆ ಅನೇಕ ಜನ ಹೆಂಡಂದಿರಿದ್ದರೆಂಬ ಕತೆಗಳಿವೆ. ಇವನ ಹೊರತಾಗಿ ಯಾವನೇ ಒಬ್ಬ ಒಂದೇ ಬಾರಿಗೆ ಒಬ್ಬಳಿಗಿಂತ ಹೆಚ್ಚು ಜನ ಹೆಣ್ಣುಗಳನ್ನು ಮದುವೆಯಾದದ್ದರ ಬಗೆಗೆ ನನಗೆ ಯಾವ ಕತೆಯೂ ಸಿಕ್ಕಿಲ್ಲ. ಬಿಳಿಯರ ಪ್ರಪಂಚದಿಂದಲೂ ನನಗೆ ಈ ಬಗೆಯ ಒಂದು ಕತೆಯೂ ಸಿಕ್ಕಿಲ್ಲ. ಕಳೆದ ಮೂರು-ನಾಲ್ಕು ಸಾವಿರ ವರ್ಷಗಳ ಇತಿಹಾಸದಲ್ಲಿ ಯಾವನೇ ಒಬ್ಬ ಗಂಡಸು-ಅವನು ಸಾಮಾನ್ಯನಿರಬಹುದು, ಇಲ್ಲ, ರಾಜನಿರಬಹುದು, ಇಲ್ಲ, ತುಂಬ ದೊಡ್ಡ ಮನುಷ್ಯನಿರಬಹುದು- ಒಬ್ಬಳಿಗಿಂತ ಹೆಚ್ಚು ಜನ ಹೆಂಗಸರನ್ನು ಒಟ್ಟಿಗೆ ಮದುವೆ ಮಾಡಿಕೊಂಡಿದ್ದು ಕಂಡು ಬಂದಿಲ್ಲ.

ನಮ್ಮಲ್ಲಿ ವಿಚಿತ್ರವಾದ ಸಾಮಾಜಿಕ ವ್ಯವಸ್ಥೆ ಮತ್ತು ಸಮಾಜ ರಚನೆಯಿದೆ. ಈ ಕುರಿತು ಅಧ್ಯಯನ ಮಾಡಬೇಕು. ವಾಸ್ತವವಾಗಿ ಇದು ಪಿಎಚ್.ಡಿ. ಅಧ್ಯಯನದ ವಸ್ತು ಎಂದು ಎಷ್ಟೋ ಜನರಿಗೆ ನಾನು ಹೇಳಿದ್ದೇನೆ. ಭಾರತದಲ್ಲಿ ಗಂಡಸರಿಗೆ ಹೀಗೆ

ಹೆಚ್ಚು ಹೆಣ್ಣುಗಳನ್ನು ಮದುವೆಯಾಗುವ ಅಧಿಕಾರ ಸಿಕ್ಕಿದೆ. ಇದೇ ರೀತಿಯಲ್ಲಿ ಅರಬ್ಬೀಸ್ಥಾನ, ಚೈನಾದಲ್ಲೂ ಮದುವೆ ಮಾಡಿಕೊಳ್ಳುವ ಅಥವಾ ಇಟ್ಟುಕೊಳ್ಳುವ ಅಧಿಕಾರವಿದೆ. ಪ್ರೇಯಸಿಯರ ಮಾತು ಬೇರೆ. ಇಲ್ಲಿ ಪ್ರಸ್ತಾಪಿಸುತ್ತಿರುವುದು ಮದುವೆಯ ವಿಚಾರ ಮಾತ್ರ. ಹೀಗಿದ್ದಾಗ ಎಲ್ಲವೂ ಸಮಾನವಾಗಿವೆ ಎಂದು ಹೇಳಿದರೆ ತಪ್ಪಾಗುತ್ತದೆ.

ಇಷ್ಟಕ್ಕೂ ಮದುವೆ ಎಂಬುದು ಒಂದು ಸಾಮಾಜಿಕ ಘಟನೆ; ಬಲವಾದ ವ್ಯವಸ್ಥೆ. ನಾನು ಈ ಮೊದಲೇ ಹೇಳಿದ್ದೇನೆ: ಪ್ರಿಯತಮೆಯ ವಿಚಾರ ಬಿಡಿ. ಮೇಲೆ ಹೇಳಿದ ದೇಶಗಳಲ್ಲಿ ಪ್ರಿಯತಮೆಯನ್ನು ಹೊಂದುವ ಸ್ವಾತಂತ್ರ್ಯವಿತ್ತು. ಇಲ್ಲಿ ಆ ಸ್ವಾತಂತ್ರ್ಯಕ್ಕೇನು ಕೊರತೆಯಿತ್ತು? ಮದುವೆಯಾದವಳು ಮಾತ್ರ ಪ್ರಿಯತಮೆ ಎಂದು ನೀವು ಭಾವಿಸಿರಬಹುದು. ಮದುವೆಗಳನ್ನು ಆದವರು ಪ್ರಿಯತಮೆಯರ ನ್ನಿಟ್ಟುಕೊಳ್ಳುವ ವಿಚಾರದಲ್ಲಿ ಹೆಚ್ಚು ಶೂರರಾಗಿರುತ್ತಾರೆ. ಹೆಚ್ಚು ಮದುವೆಗಳನ್ನು ಮಾಡಿಕೊಂಡವರು ಪ್ರಿಯತಮೆಯರನ್ನು ಇಟ್ಟುಕೊಳ್ಳುವುದರಲ್ಲಿ ಹಿಂದೆ ಬಿದ್ದಿರುತ್ತಾರೆಂದು ಭಾವಿಸಿಬಿಟ್ಟೀರಿ. ಅವರೇನೂ ಈ ವಿಷಯದಲ್ಲಿ ಸಹ ಹಿಂದೆಬೀಳುವ ಪೈಕಿ ಅಲ್ಲ.

ಬಿಳಿಯರ ಪ್ರಪಂಚದಲ್ಲಿ ಇದು ಯಾಕಿಲ್ಲ ಎಂಬುದರ ಬಗ್ಗೆ ಪೂರ್ಣವಾಗಿ ನಾವು ಅಧ್ಯಯನ ಮಾಡಬೇಕಾಗಿದೆ. ಅವರ ಸಂಸ್ಕಾರಗಳು, ಅವರ ಜೀವನ ಕ್ರಮ, ಅವರ ಇತಿಹಾಸ ಹೇಗಿದೆಯೆಂದರೆ ಅವರಲ್ಲಿ ಈ ಕೊಳಕುತನ ಬಂದಿಲ್ಲ; ಆದರೆ ಬೇರೆ ರೀತಿಯ ಕೆಲವು ಕೊಳಕುಗಳನ್ನು ನಾವು ಬಿಳಿಯರಲ್ಲಿ ಕಾಣಬಹುದು. ಅಂದ ಹಾಗೆ ನಾನು, ಈ ಇಟ್ಟುಕೊಂಡವಳು ಅಥವಾ ಪ್ರಿಯತಮೆಯನ್ನು ಉಳ್ಳ ಸಾಮಾಜಿಕ ಸಂರಚನೆಯನ್ನು ಇಷ್ಟಪಡುತ್ತೇನೆ ಎಂದು ಭಾವಿಸಬಾರದು. ಮುಖ್ಯವಾಗಿ ನಾನು, ಈ ಬಗ್ಗೆ ಸಮಾನತೆಯಿರಬೇಕೆಂದಷ್ಟೇ ಬಯಸುವುದು. ಈ ಮುಖ್ಯ ಉದ್ದೇಶವನ್ನು ಸಾಧಿಸುವ ಹಾದಿಯಲ್ಲಿ ಈ ಎಲ್ಲ ಘಟನೆಗಳು, ದುರ್ಘಟನೆಗಳು ಸಂಭವಿಸಿದರೆ ಯಾರೇನು ಮಾಡಲು ಸಾಧ್ಯ? ಆಗ ನಾವು ಅಸಹಾಯಕರಷ್ಟೆ? ನೀವು ಸಮಾನತೆಯನ್ನು ಒಪ್ಪಿಕೊಂಡೇ ನಿಮ್ಮ ಮನಸ್ಸಿನ ಬಯಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಿದೆ. ಆದರೆ, ಇದು ತುಂಬಾ ಕಷ್ಟ ಅನಿಸುತ್ತದೆ; ಅಸಂಭವ ಅನ್ನಿಸುವುದಿಲ್ಲ. ಏಕೆಂದರೆ ಮನುಷ್ಯ ಈವರೆಗೆ ಏನೇನನ್ನು ಮಾಡಿಲ್ಲ ಹೇಳಿ? ನಿಜಹೇಳಬೇಕೆಂದರೆ, ಈತನಕದ ಮನುಷ್ಯನ ಚರಿತ್ರೆ ಎಷ್ಟೋ ಅರ್ಥದಲ್ಲಿ, ಎಷ್ಟೋ ಆಯಾಮಗಳಲ್ಲಿ ಬಹಳಷ್ಟು ಕೊಳಕಾಗಿಯೂ, ಅಸ್ಪಷ್ಟವಾಗಿಯೂ ಇದೆ. ಯಾವಕಡೆ ಹೋಗಬೇಕು ಎಂಬುದು

ಗೊತ್ತಾಗುತ್ತಿಲ್ಲ; ಹಾಗೆ ನೋಡಿದರೆ ಈಗಲೂ ಬಹಳಷ್ಟು ಸಮಸ್ಯೆಗಳು ಛಿದ್ರಗೊಂಡು ನಮ್ಮ ಮುಂದಿವೆ. ಇನ್ನೊಂದು ಕಡೆಯಿಂದ ನೋಡಿದರೆ, ಈಗ ತಾನೇ ನಾನು ಯೂರೋಪಿನ ಬಗೆಗೆ ಹೇಳಿದಂತೆ, ಗುಣ ಸ್ವಭಾವಗಳ ಬಗೆಗೆ ಅಧ್ಯಯನ ನಡೆಯಬೇಕಿದೆ. ಈ ಅಧ್ಯಯನ ಒಂದು ವಿಷಯಕ್ಕೆ ಮಾತ್ರ ಸೀಮಿತಗೊಂಡು ನಡೆಯಬೇಕೇ ಹೊರತು ಮುಕ್ತವಾಗಿ ಹೊರಟರೆ ಅಧ್ಯಯನ ಹೇಗೆ ಸಾಧ್ಯ? ಆಗ 'ಧ್ಯಾನಾವಸ್ಥಿತ ತದಗತೇತ ಮನಸಾ' ಎಂಬ ಉಕ್ತಿ ಯುಂಟಾಗುತ್ತದೆ. ಇಡೀ ಪ್ರಪಂಚ ಒಂದು. ಹೆಂಡತಿ ಒಬ್ಬಳು, ಇಟ್ಟುಕೊಂಡಿರುವವಳು ಇಬ್ಬಳು, ಪ್ರಿಯತಮೆ ಒಬ್ಬಳು, ಸ್ನೇಹಿತೆ ಒಬ್ಬಳು, ಸಖಿಯೂ ಒಬ್ಬಳು-ಎಲ್ಲರಿಗೂ ಒಬ್ಬಳೇ ಎಂದು ಹೇಳಿದ್ದಾದರೆ ವಿಚಾರ ಮಂಥನ ಮುಂದುವರೆಯುವುದಿಲ್ಲ. ಇದರಲ್ಲಿ ವಿವಾದ ನಡೆಯಬೇಕು. ಮತ್ತೆ ಬಿಳಿಯರ ಪ್ರಪಂಚದಲ್ಲಿ ಯಾವನೇ ಒಬ್ಬ ಗಂಡಸು ಒಬ್ಬಳಿಗಿಂತ ಹೆಚ್ಚು ಹೆಂಗಸರನ್ನು ಮದುವೆ ಮಾಡಿಕೊಂಡಿದ್ದಿಲ್ಲ. ಆದರೆ ನಮ್ಮ ಬಣ್ಣದ ಪ್ರಪಂಚದಲ್ಲಿ ಗಂಡಿಗೆ ಈ ಅಧಿಕಾರ ಪರಂಪರಾಗತವಾಗಿ ಬಂದಿದೆ. ಈ ವಿಷಯವನ್ನು ಕುರಿತಂತೆ ನಿಮ್ಮಲ್ಲಿ ಯಾರಾದರೂ, ಕಷ್ಟವಾದರೂ ಲೆಕ್ಕಿಸದೆ, 5-10 ವರ್ಷಗಳ ಕಾಲ ಅಧ್ಯಯನ ಮಾಡಿ ಒಂದು ಪುಸ್ತಕ ಬರೆದರೆ ಅದು ತುಂಬ ಮಹತ್ವದ ದಾಖಲೆಯಾಗುತ್ತದೆ.

ಸಾವಿತ್ರಿಯ ಬಣ್ಣ ಕಪ್ಪೊ ಅಥವಾ ಆಕೆ ಬೆಳ್ಳಗಿದ್ದಳೋ ಎಂಬುದನ್ನು ಕುರಿತು ನಾನು ಹೇಳಿಲ್ಲ. ಪತಿವ್ರತೆಯ ಗುಣದಿಂದಾಗಿ ಆಕೆ ಆದರ್ಶನಾರಿಯ ಪ್ರತೀಕವಾದಳು. ಹಿಂದೂ ಗಂಡಸಿನ ಹೃದಯ ಎಷ್ಟು ಚಿಕ್ಕದೆಂದರೆ, ಯಾವುದೇ ಒಂದು ಗುಣದ ಮಹತ್ವದಿಂದಾಗಿ ಆತ ಸ್ತುತಿಸಲಾರಂಭಿಸುತ್ತಾನೆ. ಸಾವಿತ್ರಿ ಬಿಳಿಯಳೊ ಕರಿಯಳೊ ಎಂಬುದರ ಬಗ್ಗೆ ಅವನು ಯೋಚಿಸಲಿಲ್ಲ: ಗಂಡಸರು ಕಪ್ಪು ಎಂಬುದು ನಿಜವೇ. ರಾಮ ಕಪ್ಪು , ಕೃಷ್ಣಕಪ್ಪು. ಭಾರತದ ಎಷ್ಟೊ ಮಹತ್ವದ ಹೆಣ್ಣುಗಳಿದ್ದಾರಲ್ಲ, ಅವರಲ್ಲಿ ಹೆಚ್ಚಿನವರು ಕಪ್ಪುಬಣ್ಣದವರೇ ಆಗಿದ್ದಾರೆ; ಹಾಂ! ಸೀತೆ, ಪಾರ್ವತಿಯನ್ನು ಗೌರವರ್ಣದವರೆಂದು ಹೇಳಲಾಗಿದೆ. ಬಹುಶಃ ಭಾರತದ ಮನಸ್ಸು ಅಥವಾ ಘಟನೆಗಳು ಅಥವಾ ಕತೆಗಳು ಅಥವಾ ಸಮಾಜದ ಸಂರಚನೆ ಹೇಗಿದೆಯೆಂದರೆ, ಇಲ್ಲಿನ ಹೆಂಗಸರು ನಸುಬಿಳುಪುಬಣ್ಣದವರು ಹಾಗೂ ಗಂಡಸರು ಎಣ್ಣೆಗೆಂಪು ಬಣ್ಣದವರಾಗಿದ್ದಾರೆ. ಈ ಭಾವನೆ ಕೆಲವೊಮ್ಮೆ ಸ್ವಲ್ಪ ಹೆಚ್ಚಾಗಿದೆಯಷ್ಟೆ. ಶಂಕರನ ಕೊರಳು ನೀಲವರ್ಣವಾಗಿರುವುದರಿಂದ ಆತ ಸಹ ಹೆಚ್ಚು ಕಡಿಮೆ ಕಪ್ಪುಬಣ್ಣದವನೇ ಆಗಿದ್ದಿರಬೇಕೆಂದು ಊಹಿಸಬಹುದು. ಏನೇ ಇರಲಿ, ಭಾರತದಲ್ಲಿ ಎಣ್ಣೆಗೆಂಪುಬಣ್ಣದ ಮಹಿಳೆಯರು ಎತ್ತರದ ಸ್ಥಾನದಲ್ಲಿದ್ದಾರೆ. ಅಂದಾಕ್ಷಣಕ್ಕೆ ಅವರನ್ನು ಸುಂದರಿಯರೆಂದು ಗೌರವಿಸುತ್ತಿಲ್ಲ ಎಂದು ಭಾವಿಸದಿರಿ. ಬಹುಶಃ ಎರಡು ಸಾವಿರ ವರ್ಷಗಳ

ಒಂದೆ ಈ ಎಣ್ಣೆಗೆಂಪು ಬಣ್ಣದ ಹೆಣ್ಣು ಮಕ್ಕಳು ಸೌಂದರ್ಯದ ಪ್ರತೀಕವಾಗಿದ್ದರು. ಈ ವಿಚಾರದಲ್ಲಿ ಅವರು ಬಿಳಿ ಬಣ್ಣದ ಹೆಂಗಸರನ್ನು ಹಿಂದೆ ಹಾಕಿದ್ದರು. ನಾನು ಮತ್ತೆ ಮತ್ತೆ ಹೇಳುತ್ತಿರುತ್ತೇನಲ್ಲ "ತನ್ವಿ ಶ್ಯಾಮಾಯ ಗರಿಮಾ". ನಸುಗಪ್ಪು ಬಣ್ಣದವರು ಅಂದರೆ ನವಯೌವನಾವಸ್ಥೆಯಲ್ಲಿರುವಂಥವರು ಮತ್ತು ಸುಂದರಿಯರು; ಕಪ್ಪು ಬಣ್ಣದವರು ನಿಸ್ಸಂದೇಹವಾಗಿ ಮಾನ್ಯರಾಗಿರುತ್ತಾರೆ.

ಇಲ್ಲಿ ನಾನೊಂದು ಮಾತನ್ನು ಪುನಃ ಹೇಳಬೇಕು. ನೀವೂ ನಾನೂ ಒಂದೇ ಮಾತನ್ನು ಹೇಳುತ್ತಿದ್ದೇವೆಯಾದರೂ, ನೀವು ಅದನ್ನು ನಿರ್ಗುಣ ಮಾಡಬಯಸುತ್ತೀರಿ; ನಾನು ಸಗುಣ ಮಾಡಬಯಸುತ್ತೇನೆ. ಈಗ ಬೌದ್ಧಿಕವಾಗಿ ಇನ್ನೂ ಒಂದು ಅಂತರ ಸ್ಪಷ್ಟವಾಗುತ್ತಿದೆ. ನೀವು ಚರ್ಚೆಯನ್ನು ಹೆಚ್ಚು ತೀಕ್ಷ್ಣವಾಗದ ಹಾದಿಯಲ್ಲಿ ತೆಗೆದುಕೊಂಡು ಹೋಗಬಯಸುತ್ತೀರಿ, ನಾನು ಆ ಚರ್ಚೆಯನ್ನು- ನಾವಿಬ್ಬರೂ ಮಾಡುತ್ತಿರುವುದು ಒಂದನ್ನೇ- ಕೊಂಚ ತೀಕ್ಷ್ಣವಾಗುವಂತೆ, ಆ ಮೂಲಕ ಅದು ಜನರಿಗೆ ಅರ್ಥವಾಗುವಂತೆ ಮಾಡಬಯಸುತ್ತಿದ್ದೇನೆ. ನೀವು ಆ ಚರ್ಚೆಯನ್ನು ನಿಮಗೆ ಅರಿವಿಲ್ಲದೆಯೇ ಅದು ಜನರಿಗೆ ಹೆಚ್ಚು ಅರ್ಥವಾಗದ ರೀತಿಯಲ್ಲಿ ನೋಡಿಕೊಳ್ಳುತ್ತಿದ್ದೀರಿ, ಆದರೆ ನಾನು ಅದು ಜನರಿಗೆ ಅರ್ಥವಾಗುವುದರ ಬಗೆಗೆ ಹೆಚ್ಚಿನ ಕಾಳಜಿ ವಹಿಸುತ್ತಿದ್ದೇನೆ. ಚರ್ಚೆಯು ಸಗುಣ-ನಿರ್ಗುಣದ ಮಟ್ಟಕ್ಕೆ ಬಂದಿರುವುದರಿಂದ ಜನತೆಯ ಮನೋಭಾವದಲ್ಲಿ ಪರಿವರ್ತನೆಯಾಗಬೇಕಾಗಿದೆ. ದ್ರೌಪದಿಯನ್ನೂ ಜನ ಪೂಜಿಸುತ್ತಿದ್ದ ಸಂಗತಿಗೆ ಬರೋಣ. ಹೀಗಂದದ್ದನ್ನು ತಪ್ಪು ತಿಳಿಯಬೇಕಿಲ್ಲ. ಪಂಚಕನ್ಯೆಯರಲ್ಲಿ ಆಕೆ ಒಬ್ಬಳೆಂದು ತಮಾಷೆಗೆ ಹೇಳುತ್ತಿದ್ದರು. ಒಮ್ಮೆ ಬಹು ದೊಡ್ಡ ವಿದ್ವಾಂಸರು ಕುಳಿತಿದ್ದರು. ಆಗ ತಮಾಷೆಗೆ ನಾನು ಒಂದು ಶ್ಲೋಕ ಹೇಳಿದೆ. ಆಗ ಅವರು ಇದ್ಯಾವ ಶ್ಲೋಕ? ಎಲ್ಲಿಂದ ಎತ್ತಿಕೊಂಡು ಬಂದಿರಿ? ಎಂದು ಕಿಡಿಕಿಡಿಯಾದರು. ಇದು ಶ್ಲೋಕವೇ? ಯಾವನೋ ಹಳ್ಳಿಗಮಾರ ಬರೆದಿರಬಹುದು. " ಪಂಚಕನ್ಯಾ ಸ್ಮರೇನ್ ನಿತ್ಯಮ್" ಎಂಬುದು ಸರಿಯಲ್ಲ, ಯಾವನೇ ಹಿಂದೂ ಇದನ್ನು ಇಷ್ಟಪಡುವುದಿಲ್ಲ ಅಂದರು. ಹಿಂದೂವಿನ ಮನಸ್ಸಿನಲ್ಲಿ 5-10 ನಿಮಿಷಗಳವರೆಗೆ ಅದು ಬಂತೆಂದರೆ ಪರಸ್ಪರ ವಿರೋಧಿಯಾದ ಐವತ್ತು ಅಂಶಗಳು ಬಂದು ಬಿಡುತ್ತವೆ. ಆತನು ಆಕೆಯ ಬದುಕಿನೊಂದಿಗೆ ಯಾವುದೇ ಸಂಬಂಧವನ್ನಿಟ್ಟುಕೊಳ್ಳಬಯಸುವುದಿಲ್ಲ. ಅವನು ತಾರಾ, ಮಂಡೋದರಿಯರನ್ನು ಗೌರವಿಸುತ್ತಾನೆ. ಸಾವಿತ್ರಿಯ ಬದುಕಿನೊಡನೆ ಆತ ಆತ್ಮೀಯ ಸಂಬಂಧವಿಟ್ಟುಕೊಳ್ಳ ಬಯಸುತ್ತಾನೆ. ಆತನ ಬದುಕಿನಲ್ಲಿ ಸಾವಿತ್ರಿಗೆ ಒಂದು ವಿಶೇಷವಾದ ಆದರದ ಸ್ಥಾನವಿದೆ. ಹಿಂದೂ ಗಂಡಸಿನ ಮನಸ್ಸು ಯಾವುದನ್ನು ಬಯಸುತ್ತದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಆತ ದ್ರೌಪದಿಯನ್ನು ಗೌರವಿಸುತ್ತಾನೋ, ಇಲ್ಲವೋ

ಎಂಬ ಪ್ರಶ್ನೆ ಇರಲಿ ಬಿಡಿ. ಇಲ್ಲಿ ಅವನ ಬದ್ಧತೆಯೇನು ಅಂದರೆ, ಸಾವಿತ್ರಿಯೇ ಇಲ್ಲಿನ ಬದ್ಧತೆ. ಈ ಬಗೆಯ ಬದ್ಧತೆಯನ್ನು ಕೊನೆಗಾಣಿಸುವುದು ಹೇಗೆ ಎಂಬುದೇ ಪ್ರಶ್ನೆ. ನೀವು ಕೇವಲ ಪಾತಿವ್ರತ್ಯಧರ್ಮವನ್ನು ಆಧಾರವಾಗಿಟ್ಟುಕೊಂಡು ಚರ್ಚೆಯನ್ನು ಮಾಡುವುದಾದರೆ ಈ ಬದ್ಧತೆ ಕೊನೆಗೊಳ್ಳುವುದಿಲ್ಲ. ನಾನು ಸಗುಣದ ವಿಚಾರವನ್ನೂ ಇಂಗ್ಲಿಷ್‌ನಲ್ಲಿ ಹೇಳುತ್ತಿದ್ದೇನೆ. ಇದನ್ನು ನೀವು 'ಆಸ್ಪೆಕ್ಟ್ಸ್ ಆಫ್ ಕಾಂಕ್ರೀಟ್' ಅನ್ನಬಹುದು. ನೀವು ಬೇಕಾದರೆ 'ಆಸ್ಪೆಕ್ಟ್ಸ್' ಮೇಲೆ ಚರ್ಚೆ ಮುಂದುವರಿಸಬಹುದು, ನಾನು 'ಕಾಂಕ್ರೀಟ್' ಕುರಿತು ಚರ್ಚಿಸಬಯಸುತ್ತೇನೆ. ಈಗ ಅಂತರವಿದೆ ತಾನೆ? ನಾವಿಬ್ಬರೂ ಹೇಳುತ್ತಿರುವುದು ಒಂದನ್ನೇ. ನಮ್ಮ ಜನರ ತಲೆಯಲ್ಲಿ ಕೆಲವು ಅವಗುಣಗಳಿವೆ. ನಾವು ಎಷ್ಟೇ ಚರ್ಚೆ ಮಾಡಿದರೂ, ಜನತೆಯ ತಲೆ ಎಷ್ಟು ಕೊಳಕಾಗಿರುತ್ತದೆಯೋ ಅಷ್ಟೇ ಕೊಳಕಾಗಿ ಉಳಿಯುತ್ತದೆ. ಕೊನೆಯಲ್ಲಿ ಕೈಗೆ ಏನೂ ದಕ್ಕುವುದಿಲ್ಲ ಎಂದು ಹೇಳಬಯಸುತ್ತೇನೆ. ಬದುಕಿನೊಡನೆ ಹೆಚ್ಚು ಸಂಬಂಧ ಇರದಂಥ ಸಂದರ್ಭದಲ್ಲಿ ಇದು ಸರಿಯೇ. ನನ್ನ ದೃಷ್ಟಿಯಿಂದ ಯೋಚನೆಮಾಡಿದಾಗ ನಿಮಗೆ ದುಃಖವಾಗುತ್ತದೆ. ಸಮಾಜವನ್ನು ನಿಜಕ್ಕೂ ಬದಲಿಸಲು ಇಚ್ಛಿಸುವುದಾದರೆ, ಮನಸ್ಸನ್ನು ಬದಲಿಸಬೇಕೆಂಬ ಇಚ್ಛೆಯಿದ್ದರೆ ಕೊಂಚಮಟ್ಟಿಗಾದರೂ ಗಟ್ಟಿಯಾಗಿ ಚಿಂತಿಸಬೇಕು. ಇದನ್ನು ಮಾಡದೆ ಪರಿವರ್ತನೆಯನ್ನು ತರಲು ಸಾಧ್ಯವಿಲ್ಲ.

ಈ ಪತಿವ್ರತೆಯ ಕತೆ ಅಥವಾ ಉಳಿದ ಪತಿವ್ರತೆಯರ ಕತೆಗಳಿರುವಂತೆ ಪತ್ನೀವ್ರತರ ಒಂದಾದರೂ ಕತೆಯಿದ್ದರೆ ತೋರಿಸಿ. ಆಗ ಎರಡು ಕೆಲಸ ಮಾಡಬೇಕಾಗುತ್ತದೆ: ಒಂದು ಪತ್ನೀವ್ರತನ ಕತೆಯನ್ನು ಹುಡುಕಬೇಕಾಗುತ್ತದೆ. ಹೀಗೆ ಹುಡುಕಲು ಎಷ್ಟು ಸಮಯ ವ್ಯಯವಾಗುತ್ತದೆಯೆಂದರೆ, ಇಷ್ಟು ಸಮಯ ವ್ಯಯಕ್ಕೆ ಈ ಕತೆ ಅರ್ಹವಾದುದಲ್ಲ. ಒಂದು ವೇಳೆ, ನೀವು ಅದನ್ನು ಹುಡುಕುವುದರಲ್ಲಿ ಯಶಸ್ವಿಯಾದಿರಿ ಎಂದೇ ಇಟ್ಟುಕೊಳ್ಳಿ, ಅದಕ್ಕೆ ಯಾವ ಅರ್ಥವೂ ಇರುವುದಿಲ್ಲ. ಏಕೆಂದರೆ ಇವತ್ತಿನ ಭಾರತದ ಬೌದ್ಧಿಕತೆಯಿದೆಯಲ್ಲ ಅದರಲ್ಲಿ ಈ ಕತೆಯನ್ನು ಸ್ವೀಕರಿಸುವಷ್ಟು ಸ್ಥಳವಿಲ್ಲ. ದ್ರೌಪದಿಯಲ್ಲಿ ಹತ್ತಾರು ಗುಣಗಳಿವೆ; ಆದರೆ ಸಾವಿತ್ರಿಯ ಕತೆ ಸಾಗುವುದು ಒಂದೇ ಒಂದು ಅಂಶದ ಆಧಾರದ ಮೇಲೆ. ಅಂದರೆ ಆಕೆಯ ಬದುಕಿನ ಘಟನೆಗಳ ಆಧಾರದ ಮೇಲೆ; ಅಲ್ಲಿನ ಸಂವಾದ, ವಾದ ವಿವಾದಗಳ ಆಧಾರದ ಮೇಲೆ, ಅಷ್ಟೆ. ದ್ರೌಪದಿಯ ಸಂವಾದಗಳಿವೆಯಲ್ಲ, ಅವು ಹೀಗೆ ಸೀಮಿತವಾಗಿಲ್ಲ: ನಲ್ವತ್ತು ಐವತ್ತು ಅಂಶಗಳನ್ನು ಕುರಿತು ಆಕೆಯ ವಾದವಿವಾದ, ಮಾತುಕತೆಯಿದೆ; ರಾಜಕೀಯ, ನ್ಯಾಯ, ಧರ್ಮದ ಮೇಲೆ ಈ ವಾದ ವಿವಾದಗಳು ಜರುಗುತ್ತವೆ. ಈ ಮೊದಲು ಹೇಳಿದ್ದೇನೆ. ಹೀಗೆ ಸಂವಾದ, ವಾದ ವಿವಾದ ಮಾಡಿರುವ ಹೆಂಗಸರು ಅಪರೂಪಕ್ಕೆ ಕೆಲವರು ಇನ್ನೂ ಸಿಕ್ಕಬಹುದು. ಆದರೆ

ದ್ರೌಪದಿಯಂತೆ ಇಷ್ಟೆಲ್ಲ ವಿಚಾರಗಳ ಮೇಲೆ ವಾದ ವಿವಾದ ಮಾಡಿರುವ ಮಹಿಳೆ ಇನ್ನೊಬ್ಬಳಿಲ್ಲ.

ರಾಮ, ಕೃಷ್ಣ, ಶಿವನಿಗಿಂತಲೂ ದ್ರೌಪದಿ ದೊಡ್ಡವಳು ಎಂದು ಯಾರಾದರೂ ಸಾಧಿಸಿದರೆ ಅಥವಾ ಸಾಧಿಸಲು ಪ್ರಯತ್ನಪಟ್ಟರೆ ತಪ್ಪಾಗುತ್ತದೆ. ದ್ರೌಪದಿಯಲ್ಲಿ ಅಥವಾ ಅವಳ ಕತೆಯಲ್ಲಿ ದೋಷಗಳೂ ಇವೆ. ನಿಮಗೆ ಗೊತ್ತಿರುವಂತೆ ಸ್ವಯಂವರದ ಸಂದರ್ಭದಲ್ಲಿ ಆಕೆ ಕರ್ಣನನ್ನು ಸಾರಥೀಪುತ್ರ ಎಂದು ಕರೆದಿದ್ದಳು. ನನಗನ್ನಿಸುವಂತೆ ಕತೆ ಹೇಗಿದೆಯೆಂದರೆ, ದ್ರೌಪದಿಯ ಮನಸ್ಸಿನ ಒಂದು ಮೂಲೆಯಲ್ಲಿ ಕರ್ಣನಿಗೂ ಸ್ಥಾನವಿತ್ತು. ದ್ರೌಪದಿಗೆ ಐದೂವರೆ ಮಂದಿ ಗಂಡಂದಿರೆಂದು ಎಲ್ಲೋ ಓದಿದ ನೆನಪು. ಈ ಅರ್ಧ ಯಾರೆಂದರೆ, ಕರ್ಣ. ಆ ಬಡಪಾಯಿ ದ್ರೌಪದಿ ಈ ತಪ್ಪಿಗೆ ದಂಡ ತೆತ್ತಿದ್ದಾಳೆ. ಈ ತಪ್ಪನ್ನು ಆಕೆ ಆಗ ಮಾಡಿದ್ದು. ಈಗ, ನಾನು ದ್ರೌಪದಿ ಮಾಡಿದ್ದರ ಔಚಿತ್ಯವನ್ನು ಸಮರ್ಥಿಸುತ್ತಿಲ್ಲ. ಈ ಕುರಿತು ನನ್ನ ಅಭಿಪ್ರಾಯವೇ ಬೇರೆಯಿದ್ದು, ಅದನ್ನು ಇಲ್ಲಿ ನಾನು ಹೇಳುತ್ತಿಲ್ಲ. ಹೀಗೆ ಹೇಳಿದರೆ ಇನ್ನೂ ಗಲಾಟೆ, ಗೊಂದಲವಾಗುತ್ತದೆ. ಐದೂವರೆ ಗಂಡಂದಿರ ಸಂಗತಿಯನ್ನು ಹಿಂದೂ ಮನಸ್ಸುಗಳು ಒಪ್ಪಿವೆ. ಅರ್ಧದ ವಿಷಯವನ್ನೂ ಜನ ಒಪ್ಪಿದ್ದಾರೆ. ಸಖ-ಸಖಿಯ ಸಂಬಂಧದ ಅನ್ವೇಷಣೆ ಮಾಡಬೇಕಿದೆ. ಇದು ತುಂಬ ರೋಚಕವಾಗಿರಬಹುದು. ದ್ರೌಪದಿಯಿಂದ ಯಾವನೋ ಭಿಕ್ಷುಕನಿಗೆ ಅಥವಾ ಸಾಧುವಿಗೆ ಉಣ್ಣಿಸಲಾಗಲಿಲ್ಲ, ಆಗ ಆಕೆ ಕೃಷ್ಣನನ್ನು ಕರೆದಳು. ದ್ರೌಪದಿಯ ಬಗೆಗೆ ಇರುವ ಕತೆಗಳೆಲ್ಲ ಸರಿಯಾಗಿವೆ ಎಂದು ಭಾವಿಸಬೇಡಿ. ಕೆಲವು ಅಂಶಗಳಲ್ಲಿ ದೋಷಗಳೂ ಇವೆ. ಗಮನದಲ್ಲಿರಿಸಿಕೊಳ್ಳಬೇಕಾದ ಅಂಶವೆಂದರೆ ನಮ್ಮ ಇತಿಹಾಸದಲ್ಲಿ ಅಥವಾ ದಂತಕತೆಗಳಲ್ಲಿ ಎಷ್ಟು ಜನ ಹೆಂಗಸರು ಇದ್ದಾರೆಯೋ, ಅವರಲ್ಲಿ ದ್ರೌಪದಿ ಎಲ್ಲರಿಗಿಂತ ದೊಡ್ಡವಳು ಮತ್ತು ಒಳ್ಳೆಯವಳು. ಮರ್ಯಾದಾ ಪುರುಷೋತ್ತಮ, ರಾಜನೀತಿ ವಿಶಾರದ ರಾಮನಲ್ಲೂ ದೋಷಗಳಿವೆಯಲ್ಲ? ನಾನು ದ್ರೌಪದಿಯ ಉಪಾಸಕ. ದೌಪದಿ ಎದುರಾದರೆ ನನಗೆಷ್ಟು ಸಂತೋಷವಾಗುತ್ತದೆ, ಗೊತ್ತೇನು? ಆದರೆ ಅವಳ ಪ್ರತಿ ಮಾತನ್ನೂ ನಾನು ಒಪ್ಪುವುದಿಲ್ಲ. ಮಹಾತ್ಮಾ ಗಾಂಧೀಜಿಯವರ ಕೆಲವು ಮಾತುಗಳೇ ಅಲ್ಲಲ್ಲಿ ಗೊಂದಲ ಉಂಟುಮಾಡುತ್ತವೆ. ಅಂದ ಮೇಲೆ ದ್ರೌಪದಿಯ ಬಗೆಗೆ ಏನು ಹೇಳುವುದಿದೆ? ಇಲ್ಲೂ ಅನೇಕ ಸಮಸ್ಯೆಗಳಿವೆ.

ಕರ್ಣನನ್ನು ಅವಳು ಸಾರಥೀ ಪುತ್ರ ಎಂದು ಕರೆದಾಗ ಅವಳ ವಯಸ್ಸೆಷ್ಟು? ಇದನ್ನು ಹುಡುಕಲೇಬೇಕೆಂದು ಹೊರಟಾಗ, ಒಂದು ಕಡೆ ಕೆಲವರು ಕುಳಿತು ತಿಂಡಿ-ಊಟದಲ್ಲಿ ಮಗ್ನರಾಗಿರುವಾಗ ದ್ರೌಪದಿಯ ವಯಸ್ಸೆಷ್ಟಾಗಿತ್ತು ಎಂದು ಕೇಳಿ.

ಕಡಿಮೆ ವಯಸ್ಸಿನ ಹುಡುಗಿಯಲ್ಲಿ ಆ ಮಟ್ಟದ ಜ್ಞಾನ ಮತ್ತು ವಿವೇಕವನ್ನು ನಿರೀಕ್ಷಿಸಬಹುದೇನು? ಇದೂ ಒಂದು ಪ್ರಶ್ನೆಯೇ. ಎರಡನೆಯದಾಗಿ, ಆ ಕಾಲದ ಸಾಮಾಜಿಕ ಸ್ವರೂಪ ಕೊಳಕಾಗಿತ್ತು. ಮೇಲು ಕೀಳು ಎಂಬ ಅಂತರವಿತ್ತು. ಆ ವ್ಯವಸ್ಥೆಯಲ್ಲಿ ಅವಳು ಬೆಳೆದಿದ್ದಳು. ಅದರ ನೋವನ್ನು ಅನುಭವಿಸಿದ್ದಳು. ಬಾಲ್ಯದ ತನ್ನ ಕೊರತೆಯನ್ನು, ನಂತರ ತನ್ನ ಅನುಭವ ಮತ್ತು ಜ್ಞಾನದಿಂದ ತುಂಬಿಕೊಂಡಳು ಎಂದು ಹೇಳುವುದರ ಮೂಲಕ, ಅವಳು ಮಾಡಿದ್ದು ಕ್ಷಮಾರ್ಹ ಎಂದು ತೋರಿಸಿದೆವು. ನನಗನ್ನಿಸುವಂತೆ, ದ್ರೌಪದಿಯ ಸ್ವಯಂವರವಾದಾಗ ಆಕೆಯ ವಯಸ್ಸು ಇಪ್ಪತ್ತನ್ನು ದಾಟಿರಲಾರದು. ಆ ಸಮಾಜ ವ್ಯವಸ್ಥೆಯನ್ನು ಗಮನಿಸಿ, ಆಕೆಯ 18 20ರ ವಯಸ್ಸನ್ನು ಗಮನಿಸಿ. ಇವತ್ತಿನ ನಮ್ಮ ದೃಷ್ಟಿಯಿಂದ ಈ ಆಖ್ಯಾನವನ್ನು ಗಮನಿಸಿದರೆ, ಆಕೆ ಸಾರಥೀ ಪುತ್ರ ಎಂದು ಕರೆದದ್ದು ತಪ್ಪು ಕೊಳಕುತನ ಎಂದನ್ನಿಸದೇ ಇರದು; ಮೇಲು-ಕೀಳುಗಳ ಸಮಾಜ ವ್ಯವಸ್ಥೆಯನ್ನು ಇದು ಬಿಂಬಿಸುತ್ತದೆ. ಮೇಲು ಜಾತಿಯ ಹೆಂಗಸು ಮರೆಯಲ್ಲಿ ಹೀಗೆ ವ್ಯವಹರಿಸ ಬಹುದೇ ಹೊರತಾಗಿ ಬಹಿರಂಗವಾಗಲ್ಲ. ಇದು ನನಗೆ ಆಶ್ಚರ್ಯ ತಂದಿದೆ. ಒಮ್ಮೆ ನಡೆದ ಸಂಗತಿಯನ್ನು ನಿಮಗೆ ಹೇಳುತ್ತೇನೆ: ದೊಡ್ಡ ದೊಡ್ಡ ವ್ಯಕ್ತಿಗಳೆಂದು ಕರೆಸಿಕೊಳ್ಳುವ ಜನರೊಂದಿಗೆ ದೊಡ್ಡ ದೊಡ್ಡ ಹೆಂಗಸರು ಒಂದು ಕಡೆ ಸೇರಿದ್ದರು; ಇವರೆಲ್ಲ ಆ ಪ್ರಾಂತದ ಬಹು ದೊಡ್ಡ ಅಧಿಕಾರಿಗಳು. ಆಕಸ್ಮಾತ್ತಾಗಿ ನಾನು ಅಲ್ಲಿಗೆ ಹೋದೆ. ಅವರೆಲ್ಲ ಕುಡಿದು ತಿಂದು ತೇಗುತ್ತಿದ್ದರು. ಮುಂಬಯಿಯಲ್ಲಿ ಸಿಲ್‌ವಿಯಾ ನಾನಾವತಿ ಘಟನೆ ನಡೆದಿತ್ತು. ನನಗೆ ಆ ಬಗ್ಗೆ ಹೆಚ್ಚು ಗೊತ್ತಿರಲಿಲ್ಲ. ಅಲ್ಲಿದ್ದ ಹೆಂಗಸರೆಲ್ಲ ಸಿಲ್‌ವಿಯಾಗೆ ವಿರುದ್ಧವಾಗಿದ್ದರು. ನನಗೆ ಗೊತ್ತಿದ್ದಂತೆ ಅಲ್ಲಿದ್ದವರಲ್ಲಿ ಒಳ್ಳೆಯವರೂ ಇದ್ದರು, ಕೊಳಕರೂ ಇದ್ದರು. ಅವರಲ್ಲಿ ಕೆಲವು ಮಹಿಳೆಯರು ಪಿಎಚ್.ಡಿ. ಮಾಡಿದ್ದರು; ಕೆಲವರು ವಿಜ್ಞಾನಿಗಳಿದ್ದರು. ನನ್ನಿಂದ ತಡೆಯಲಾಗದಿದ್ದಾಗ ಕೇಳಿದೆ : "ಅಂಥ ಹೆಂಗಸರ ಸಂಖ್ಯೆ ಜಾಸ್ತಿಯಾಗಿ, ಅವರು ನಿಮ್ಮ ಗಂಡಂದಿರನ್ನು ನಿಮ್ಮಿಂದ ಕಸಿದುಕೊಂಡಾರೆಂಬ ಭಯದಿಂದ, ಈ ಘಟನೆಯನ್ನು ಮುಚ್ಚಿ ಹಾಕುವ ಹಾಗೂ ತಮ್ಮ ತಮ್ಮ ಕೆಲಸಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವ ಹುನ್ನಾರವನ್ನು ನೀವು ನಡೆಸಿದ್ದಿರೇನು?" ಮೇಲು ಜಾತಿಯ ಅಥವ ಶ್ರೀಮಂತ ಮನೆತನದ ಹೆಂಗಸರು ಬಹಿರಂಗವಾಗಿ ಸಾಮಾಜಿಕ ವ್ಯವಸ್ಥೆಯನ್ನು ಗೌರವಿಸುತ್ತ, ಒಳಗೊಳಗೇ ತಾವು ದ್ರೌಪದಿಯರಾಗುತ್ತ, ಬದುಕಿನಲ್ಲಿ ಬೇಕಾದ್ದೆಲ್ಲ ಪಡೆದುಕೊಳ್ಳುತ್ತಿರುತ್ತಾರೆ. ಇದನ್ನೆಲ್ಲ ನೋಡಿ ನನಗೆ ಆಶ್ಚರ್ಯವಾಗುತ್ತದೆ. ಇಲ್ಲಿ ದ್ವಂದ್ವ ಇದೆ, ಸಾಮಾಜಿಕ ವ್ಯವಸ್ಥೆಯನ್ನು ಹಿಗ್ಗಾಮುಗ್ಗಾ ಎಳೆಯಲಾಗುತ್ತಿದೆ. ಈ ಸಾಮಾಜಿಕ ವ್ಯವಸ್ಥೆಯನ್ನು ಕುರಿತು ಚಿಂತಿಸುವ ರೀತಿ ಸ್ಪಷ್ಟವಾಗಬೇಕಿದೆ.

ಸಂತೋಷ ಮತ್ತು ಅಸಂತೋಷದ ಮಾತು ಒತ್ತಟ್ಟಿಗಿರಲಿ. ಸಂತೋಷ ಮತ್ತು ಅಸಂತೋಷದ ಸಂಗತಿ ಹೇಗಿದೆಯೆಂದರೆ ಇವನ್ನು ಬಲವಂತವಾಗಿ ನಾವು ಅನುಭವಿಸಬೇಕಿದೆ. ಸಾಮಾಜಿಕ ಪುನರ್‍ರಚನೆಯಲ್ಲಷ್ಟೇ ಅಲ್ಲ, ವ್ಯವಸಾಯ, ಕೈಗಾರಿಕೆಗಳಿಗೆ ಸಂಬಂಧಿಸಿದ ಆರ್ಥಿಕ ಕ್ಷೇತ್ರದಲ್ಲೂ ಗಂಡು-ಹೆಣ್ಣಿನ ಸಮಾನತೆಗೆ ಸಂಬಂಧಿಸಿದ ಕಾನೂನುಗಳಲ್ಲಿ ಏಳಿಗೆಯನ್ನು ಕಾಣಲು ನಾವು ಅಂತರಂಗದಿಂದ ತಯಾರಾಗಬೇಕು. ಇದೆಲ್ಲ ಇನ್ನೂ ಸಾಧ್ಯವಾಗುತ್ತಿಲ್ಲ. ಈ ದಿಕ್ಕಿನಲ್ಲಿ ನಮ್ಮಲ್ಲಿ ಇನ್ನೂ ಸಹ ಏನೂ ಆಗಿಲ್ಲ. ಇವತ್ತಿನ ಭಾರತವಂತೂ ನಿತ್ಯ ಕೊಳೆಯುವ ಗೊಬ್ಬರದ ಗುಂಡಿಯಾಗಿದೆ. ಮೂರು ನಾಲ್ಕು ಸಾವಿರ ವರ್ಷಗಳ ಹಿಂದಿನ ಭಾರತವನ್ನು ನೋಡಿ: ಜನರಿಗೆ ಮನಸ್ಸನ್ನು ತಿಳಿಗೊಳಿಸಿಟ್ಟುಕೊಂಡಿರುವಂತೆ, ಅದರ ಸೌಂದರ್ಯವನ್ನು ಉಳಿಸಿಟ್ಟುಕೊಳ್ಳುವಂತೆ, ಎಂಥ ಸ್ಥಿತಿಯಲ್ಲೂ ಸಮಾನ ಚಿತ್ತರಾಗಿರುವಂತೆ, ಮೋಹ ಇತ್ಯಾದಿಗಳನ್ನು ತೊರೆಯುವಂತೆ ಆ ಕಾಲದಲ್ಲಿ ಹೇಳಲಾಗಿದೆ. ನಿಜಕ್ಕೂ ಇದೊಂದು ದೊಡ್ಡ ಅದ್ಭುತ. ಇತ್ತೀಚೆಗೆ ಯೂರೋಪ್ ಮತ್ತು ಅಮೇರಿಕಾದವರು ತಮ್ಮ ತಮ್ಮ ಸಮಾಜದ ಪುನರ್‍ರಚನೆಯನ್ನು ಇಷ್ಟೇ ಸುಂದರಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಇಂಥ ಪ್ರಯತ್ನ ಪ್ರಪಂಚದಲ್ಲಿ ಹಿಂದೆಂದೂ ಆಗಿರಲಿಲ್ಲ. ನೀವು ಅಮೇರಿಕಾದಲ್ಲಿ ಗಂಡು-ಹೆಣ್ಣಿನ ನಡುವೆ ಸಮಾನತೆಯಿದೆ ಎಂದು ಹೇಳಿದರೆ, ಅದು ಹೊರಗಿನದು ಎಂದು ನಾನು ಹೇಳುತ್ತೇನೆ. ಈಗ ನಾನೊಂದಷ್ಟು ಪ್ರಸಂಗಗಳನ್ನು ಹೇಳಿದೆನಲ್ಲ, ಅವುಗಳಲ್ಲಿ-ಅಂದರೆ ಹಣಕಾಸಿನ ವಿಷಯದಲ್ಲಿ ಸಮಾನತೆ, ಸಂಪತ್ತಿನಲ್ಲಿ ಸಮಾನತೆ, ದೈನಂದಿನ ವ್ಯವಹಾರದಲ್ಲಿ ಸಮಾನತೆ, ಮನೆಯಲ್ಲಿ ಕೆಲಸಮಾಡುವುದರಲ್ಲಿ ಸಮಾನತೆ ಬಂದಿದೆ ನಿಜ. ಆದರೆ ನಾನು ಬೌದ್ಧಿಕ ಸಮಾನತೆ ಎಂದೆನಲ್ಲ- ಇದನ್ನು ನಾನು ಆಧ್ಯಾತ್ಮಿಕ ಸಮಾನತೆ ಎಂದು ಒಂದೆರಡು ಸಾರಿ ಕರೆದಿದ್ದೇನೆ- ಅದಿನ್ನೂ ನಮ್ಮಲ್ಲಿ ಬಂದಿಲ್ಲ. ಈ ಆಧ್ಯಾತ್ಮಿಕ ಸಮಾನತೆಬರಬೇಕು ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಸಂದರ್ಭದಲ್ಲಿ ಸಂಪೂರ್ಣ ಭಾರತವನ್ನು ಪ್ರತಿನಿಧಿಸುವ ಸಮಾಜ ಪ್ರತಿ ದಿಕ್ಕಿನಿಂದಲೂ ಬರಬೇಕು; ವ್ಯಾಪಾರ, ತರ್ಕ ಮುಂತಾದುವುಗಳಲ್ಲೂ ಹೆಣ್ಣು ಮುಂದೆಬರಬೇಕು. ದ್ರೌಪದಿಯನ್ನು ನೋಡಿ, ರಾಜಕೀಯದಲ್ಲಿದ್ದಾಳೆ; ಧರ್ಮ-ಶಾಸ್ತ್ರ ಕ್ಷೇತ್ರದಲ್ಲಿದ್ದಾಳೆ. ಆದರೆ ಆಕೆ ದಾರ್ಶನಿಕಳಲ್ಲ. ಇವತ್ತಿನ ಯುರೋಪ್-ಅಮೇರಿಕಾದಲ್ಲಿ ಮೇಡಂಕ್ಯೂರಿಯಂಥ ಹೆಂಗಸರು ಗಂಡಸರಿಗೆ ಸರಿಸಮನಾಗಿ ವೈಜ್ಞಾನಿಕ ಕ್ಷೇತ್ರದಲ್ಲಿ ಕೆಲಸಮಾಡುತ್ತಿದ್ದಾರೆ. ಈಗ ನಾನು ಹೇಳುವ ಮಾತಿಗೆ ಕೆಲವರ ಭಿನ್ನಾಭಿಪ್ರಾಯವಿರಬಹುದು. ನೀವು ಈ ದರ್ಶನ-ಗಿರ್ಶನ ಎಂಬ ಹಳೇ

ರಾಗವನ್ನು ಬಿಟ್ಟು ಬಿಡಿ; ವಿಜ್ಞಾನವೂ ದರ್ಶನವೇ ಎಂದು ಹೇಳಬಹುದು. ಪ್ರಪಂಚ ಮತ್ತು ಜೀವನದ ಎಲ್ಲ ಅಂಶಗಳನ್ನು ಸಮ್ಯಕ್ ದೃಷ್ಟಿಯಿಂದ ನೋಡುವ ಶಾಸ್ತ್ರವೇ ದರ್ಶನ ಶಾಸ್ತ್ರ. ಈ ದರ್ಶನ ಪ್ರಾಚೀನ ಭಾರತದ ಹೊರತಾಗಿ ಬೇರೆಲ್ಲೂ ದೊರೆಯುವುದಿಲ್ಲ. ಮೈತ್ರೇಯಿ, ಗಾರ್ಗಿ ಇವರಿಬ್ಬರೂ ಪ್ರಸಿದ್ಧರು. ಲೀಲಾವತಿ ಗಣಿತಶಾಸ್ತ್ರಕ್ಕೆ ಸಂಬಂಧಪಟ್ಟವಳು. ಒಟ್ಟಿನಲ್ಲಿ ಭಾರತ ದಾರ್ಶನಿಕ ಮಹಿಳೆಯರಿಗೆ-ಇದು ಕೇವಲ ಕತೆಗಳಲ್ಲೇ ಇರಬಹುದು-ಜನ್ಮ ನೀಡಿದೆ. ಪ್ರಪಂಚದ ಬೇರೆಲ್ಲೂ ಬಹುಶಃ ಇಂಥ ಮಹಿಳೆಯರಿಲ್ಲ. ಆ ದೃಷ್ಟಿಯಿಂದ, ಬೇರೆ ಕ್ಷೇತ್ರಗಳಲ್ಲಿದ್ದಂತೆ ಆಧ್ಯಾತ್ಮಿಕ ಸಮಾನತೆಯಲ್ಲಿ ಮುಂಚೂಣಿಯಲ್ಲಿರುವ ಮಹಾನ್ ಮಹಿಳೆಯೊಬ್ಬಳಿದ್ದಾಳೆ. ಈಕೆ ಕತೆಗಳಲ್ಲಿ ಬರುವ ಹೆಂಗಸಲ್ಲ; ಎಂಟುನೂರು ವರ್ಷಗಳ ಹಿಂದೆ ಕರ್ನಾಟಕದಲ್ಲಿದ್ದಳು; ನಗ್ನಳಾಗಿ ತಿರುಗುತ್ತಿದ್ದಳು; ಬಟ್ಟೆಯನ್ನು ಸರ್ವಥಾ ವರ್ಜಿಸಿದ್ದಳು. ಹರಿದ್ವಾರ ಮುಂತಾದ ಕಡೆ ನಾಗಾ ಸಾಧುಗಳಿರುವಂತೆ ಈ ಅಕ್ಕಹಾದೇವಿ ಕರ್ನಾಟಕದಲ್ಲಿದ್ದಳು. ನೀವು ಯಾವಾಗಲಾದರೂ ಲಿಂಗಾಯತ ಧರ್ಮದ ಬಗೆಗೆ ಓದಬೇಕು. ವೈರಾಗ್ಯ, ಸಾಧು ಸ್ವಭಾವ ಮತ್ತು ದರ್ಶನ ಇತ್ಯಾದಿಗಳಲ್ಲಿ ಗಂಡಸು ಕೊನೆಯ ಎತ್ತರದ ತನಕ ತಲುಪಿ ವಿರಕ್ತನಾಗುವಂತೆ, ಹೆಣ್ಣಾದ ತಾನೂ ಆ ಎತ್ತರಕ್ಕೆ ಯಾಕೆ ಏರಲು ಸಾಧ್ಯವಾಗುವುದಿಲ್ಲ ಎಂದು ಅಕ್ಕಮಹಾದೇವಿ ಪ್ರಶ್ನಿಸಿದಳು. ಬಯಲಾಗುವುದೆನ್ನಿ, ಅಥವಾ ಇನ್ನಾವ ಶಬ್ದವನ್ನಾದರೂ ಉಪಯೋಗಿಸಿ. ಗಂಡಸು ಅಷ್ಟು ವಿರಕ್ತನಾದ, ಅಷ್ಟು ಎತ್ತರಕ್ಕೆ ಏರಿದ, ಬಟ್ಟೆಬರೆಗಳನ್ನು ತ್ಯಜಿಸಿದ, ಅನಾಸಕ್ತನಾದ, ನಿರ್ವಿಕಾರನಾದ ಅಂದ ಮೇಲೆ ಹೆಂಗಸು ಯಾಕೆ ಆಗಲು ಸಾಧ್ಯವಿಲ್ಲ ಎಂದು ಅವಳು ಕೇಳಿದಳು. ಇಂಥ ಒಂದು ಶಕ್ತಿಯುತವಾದ ಚರಿತ್ರೆ ಭಾರತದಲ್ಲಿ ಸಂಭವಿಸಿದೆ. ಈಗ ನಾವಿರುವುದು ಕೊಳಕು ಕಾಲದಲ್ಲಿ. ಆದರೆ, ಮಧ್ಯಕಾಲೀನ ಯುಗದಲ್ಲಿ ಆ ಮಹಾನ್ ಚೇತನ ಬದುಕಿದ್ದಳು. ನಾನೂ ಬಟ್ಟೆ-ಬರೆಗಳನ್ನು ವರ್ಜಿಸುತ್ತೇನೆ ಅಂದಳು. ಆಕೆ ಸಾಮಾನ್ಯ ಹೆಂಗಸಾಗಿರಲಿಲ್ಲ; ಬಹುದೊಡ್ಡ ಜ್ಞಾನಿ, ಕವಯಿತ್ರಿ ಆಗಿದ್ದಳು. ಇಡೀ ಪ್ರದೇಶದಲ್ಲಿ ಬೆತ್ತಲೆ ಸಾಧುವಿನಂತೆ ತಿರುಗುತ್ತ, ಲಿಂಗಾಯತ ಧರ್ಮದ ಪ್ರಚಾರ ಮಾಡಿದಳು. ಆಕೆ ವಿವಸ್ತ್ರಗಳಾಗಿದ್ದಳು. ಬೆತ್ತಲೆ ಅಂದರೆ ಸರಿಹೋಗುವುದಿಲ್ಲ, ವಿವಸ್ತ್ರಳೆನ್ನುವುದೇ ಸರಿ.

●

(1963)

ಹಿಂದಿಯಿಂದ ಕನ್ನಡಕ್ಕೆ : ತಿಪ್ಪೇಸ್ವಾಮಿ

ಸೌಂದರ್ಯ ಮತ್ತು ಮೈಬಣ್ಣ

ಮನುಷ್ಯನ ಮೈಬಣ್ಣ ಸೌಂದರ್ಯಕ್ಕೆ ಒಂದು ಪ್ರಮಾಣವಲ್ಲ. ಅಥವಾ ಅದು ಮತ್ತಾವುದೇ ಬಗೆಯ ಶ್ರೇಷ್ಠತೆಯ ಪ್ರಮಾಣವೂ ಅಲ್ಲ. ಹಾಗಿದ್ದರೂ ಚಂದವಾದ ಮೈಬಣ್ಣ ಮತ್ತು ಸೌಂದರ್ಯ ಇವೆರಡೂ ಒಂದೇ ಎಂಬಂತೆ ನಾವು ತಿಳಿಯುತ್ತೇವೆ. ಯೂರೋಪಿನ ಬಿಳಿ ನೆಲದಲ್ಲಿ ಮಾತ್ರವಲ್ಲ, ಏಷ್ಯಾ ಅಥವಾ ಅಮೆರಿಕದ ಉಷ್ಣ ಹವೆಯಲ್ಲಿ ಕೂಡ ಇದೇ ಭಾವನೆ ಮತ್ತಷ್ಟು ಹೆಚ್ಚಾಗಿಯೇ ಇದೆ. ಸೌಂದರ್ಯ ಮೀಮಾಂಸೆಯ ಈ ಅಪಮಾರ್ಗ ವಿವರಣೆಗೆ ನಿಲುಕದಂಥದ್ದು.

ಕಪ್ಪು ಜನ ಯಾವಾಗಲೂ ಔದಾಸೀನ್ಯಕ್ಕೆ ಗುರಿಯಾಗಿದ್ದರು ಎನ್ನುವ ಹಾಗಿಲ್ಲ; ಕನಿಷ್ಠ ಭಾರತದ ಮಟ್ಟಿಗಂತೂ ಇದು ಸತ್ಯ. ಸಂಸ್ಕೃತ ಸಾಹಿತ್ಯದಲ್ಲಿ 'ಶ್ಯಾಮಾ' (ಕಪ್ಪಾಗಿ ಇರುವವಳು) ಎಂದರೆ ನಿಜವಾಗಿ ಚಂದವಾಗಿರುವವಳೇ. ಎಳೆಯವಳೂ ಚೆಲುವೆಯೂ (ಎಳೆತನ ಮತ್ತು ಚೆಲುವು ಎರಡೂ ಒಂದೇ ಎಂಬಂತೆ ಕಾಣುತ್ತವೆ ಅನೇಕ ಸಲ) ಆಗಿದ್ದರೆ ಸಾಕು, ಆಕೆ ವಾಸ್ತವವಾಗಿ ಕಪ್ಪು ಅಲ್ಲದಿದ್ದರೂ 'ಶ್ಯಾಮಾ' ಎನ್ನಿಸಿಕೊಳ್ಳುತ್ತಿದ್ದಳು. ಆಶ್ಚರ್ಯಮೂಕವಾದ ಮೇಘಕ್ಕೆ ತಾನು ಸಂದೇಶ ತಲುಪಿಸಬೇಕಾದ ಯಕ್ಷಸುಂದರಿಯನ್ನು ಗುರುತಿಸುವುದು ಹೇಗೆ ಎಂಬುದನ್ನು ಕಾಳಿದಾಸ ವರ್ಣಿಸುತ್ತಾನೆ- ತೆಳುಮೈ, ಕೆಂಪು ತುಂಬಿದ ತುಟಿಗಳು, ಚಕಿತ ಹರಿಣಿಯದೆನ್ನುವಂಥ ಕಣ್ಣುಗಳು, ನಿತಂಬಗಳ ಭಾರದಿಂದ ಮೆಲು ನಡೆ-ಇಂಥ ಸಲ್ಲಕ್ಷಣಗಳ 'ಶ್ಯಾಮಾ' ಆಕೆ ಎಂದು.

ಭಾರತೀಯ ಪುರಾಣದ ಮಹಾಸ್ತ್ರೀ ನೀಲವರ್ಣೆಯಾಗಿದ್ದಳು. ದ್ರೌಪದಿಗೆ ಕೃಷ್ಣೆಯೆಂದೂ ಹೆಸರಿತ್ತು. ಆಕೆಯ ಐವರು ಗಂಡಂದಿರು ಮತ್ತು ಇನ್ನೂ ಒಂದೆರಡು ರಹಸ್ಯಪ್ರೇಮದ ಸೂಚನೆ-ಇವು ಗಂಡು ಅಹಮ್ಮಿಗೆ ಮೆಚ್ಚೆನಿಸದಿದ್ದುದರಿಂದ ಪ್ರಾಯಶಃ ಆಕೆಯ ಬಗ್ಗೆ ಹೆಚ್ಚಿನ ಔದಾಸೀನ್ಯ ಬೆಳೆದುಬಿಟ್ಟಿದೆ. ಪತಿವ್ರತೆಯರೂ ಶ್ವೇತವರ್ಣೆಯರೂ ಆದ ಸೀತಾಸಾವಿತ್ರಿಯರು ಭಾರತೀಯ ಸ್ತ್ರೀತ್ವವನ್ನು ಪ್ರತಿನಿಧಿಸುತ್ತಾರೆ ಎಂಬ ಮಾತಿನಲ್ಲಿ ತಥ್ಯ ಇಲ್ಲದಿಲ್ಲ. ಆದರೆ ಇವರ ಕೂಡ ಹೀಗೆ

ಪ್ರತಿನಿಧಿಸುವವರು ಇನ್ನೂ ಕೆಲವರಿದ್ದಾರೆ ಎಂಬುದನ್ನು ನಿರ್ಲಕ್ಷಿಸುವಲ್ಲಿ ವಿವೇಕ ಕುಂಟಿತು ಎನ್ನಿಸುತ್ತದೆ. ಭಾರತೀಯ ಪುರಾಣಕಲ್ಪನೆಯಲ್ಲಿ ಪರಿಮಳ ಸೂಸುವಂಥ ತುಂಬ ಚೆಲುವಾದ ಎರಡು ಪುಷ್ಪಗಳು ಕೃಷ್ಣ ಮತ್ತು ಕೃಷ್ಣೆ; ಒಬ್ಬ ಗಂಡಸು, ಇನ್ನೊಬ್ಬಳು ಹೆಂಗಸು; ಇಬ್ಬರೂ ಕಪ್ಪು.

ಇಡೀ ಪ್ರಪಂಚದ ಪುರಾಣಗಳಲ್ಲಾಗಲಿ ಇತಿಹಾಸದಲ್ಲಾಗಲಿ ಸಮಕಾಲೀನ ಪುರುಷರೆಲ್ಲರಿಗಿಂತಲೂ ಬುದ್ಧಿವಂತಳೂ ಕುಶಲಳೂ ಆಗಿರುವ ಒಬ್ಬಳೇ ಹೆಣ್ಣು ಪ್ರಾಯಶಃ ದ್ರೌಪದಿ. ಆಕೆಯನ್ನು ಕೃಷ್ಣನೊಡನೆ ಹೋಲಿಸಿ ನೋಡುವ ಪ್ರಶ್ನೆ ಏಳುವುದಿಲ್ಲ. ಏಕೆಂದರೆ, ಸದಾ ಕುಶಲಳೂ, ತಲಸ್ಪರ್ಶಿಯಾದ ಜ್ಞಾನವುಳ್ಳವಳೂ ಆದ ಈಕೆ ಕೃಷ್ಣನಿಗೆ ಆತ್ಮೀಯಳಾಗಿದ್ದಳು, ಜೊತೆಗಾರ್ತಿಯಾಗಿದ್ದಳು. ಆತನ ಲೀಲಾ ಜೀವನದಲ್ಲಿ ರಾಧೆ ಇದ್ದ ಹಾಗೆ ಕರ್ಮಜೀವನದಲ್ಲಿ ದ್ರೌಪದಿ ನಾಯಕಿಯಾಗಿದ್ದಳು, ಪ್ರೇರಣೆಯಾಗಿದ್ದಳು. ಮಹಾಭಾರತದಲ್ಲಿ ಕೃಷ್ಣ – ಕೃಷ್ಣೆಯರು ಸಮಾನ ಯೋಗ್ಯತೆಯ ನಾಯಕದ್ವಯರು, ಘರ್ಷಣೆಯ ಛಾಯೆಯೂ ಕಾಣದ ಸಹವರ್ತಿಗಳು. ಇಂಥ ದ್ರೌಪದಿ ಕಪ್ಪು ಬಣ್ಣದವಳಾಗಿದ್ದಳು.

ಹಾಗಿದ್ದರೆ ಬಿಳಿ ಮೈಬಣ್ಣದವರು ಸುಂದರ ಅಲ್ಲ ಎನ್ನೋಣವೇ? ಹಾಗೆ ಹೇಳುವುದು ಕೂಡ ಮತ್ತೆ ಅಸತ್ಯವೇ ಆದೀತು. ಹೆಣ್ಣಿನ ಚೆಲುವನ್ನು ಹೊಗಳುವ ಒಂದು ಮನೋಹರ ಪದ್ಯ, ಕಪ್ಪು ಕೂದಲಿಂದ ಆವೃತವಾಗಿ ಸೊಗಸುವ ಆಕೆಯ ಹಣೆಯನ್ನು ಅಷ್ಟಮೀ ಚಂದ್ರನಿಗೆ ಹೋಲಿಸುತ್ತದೆ. ಅಂಥ ಹಣೆ ನಿಜವಾಗಿಯೂ ಚಂದದ್ದಿರಲೇಬೇಕು. ಮತ್ತು ಈ ಅತಿ ಕೋಮಲ ಪದ್ಯಸೂಕ್ತಿ ಕೂಡ ಸಂಸ್ಕೃತದ್ದೇ. ಪ್ರಾಚೀನ ಭಾರತ ಮೈಬಣ್ಣ ಮತ್ತು ಚೆಲುವುಗಳನ್ನು ತೊಡರಿಕೆಯಿಲ್ಲದೆ ಬೇರಾಗಿ ನೋಡಬಲ್ಲ ಎಚ್ಚರವನ್ನು ಪ್ರಾಯಶಃ ಸಾಧಿಸಿಕೊಂಡಿತ್ತು ; ಮತ್ತು ಎಂಥಲ್ಲೇ ಇದ್ದ ಚೆಲುವನ್ನೂ ಕಾಣಬಲ್ಲ ಶಕ್ತಿಯನ್ನು ಸಿದ್ಧಿಸಿಕೊಂಡಿತ್ತು. ಊಹಿಸಲು ಬರುವಂತೆ ಕೆಲವು ಕಾಲಗಳಲ್ಲಾದರೂ ಈ ದೇಶ, ಬಣ್ಣದ ಕಪ್ಪು ಬಿಳುಪುಗಳ ಬಗ್ಗೆ ಪೂರ್ವಗ್ರಹಬಿಟ್ಟು, ಅದರ ತೊಡಕಿಲ್ಲದೆ ಸೌಂದರ್ಯವನ್ನು ತೂಗಿನೋಡಬಲ್ಲ ಶಕ್ತಿ ಪಡೆದುಕೊಂಡಿತ್ತು. ಮುಂದಿನ ಪೀಳಿಗೆಗಳು ಸೌಂದರ್ಯಾನುಭವದ ಈ ವಿಶೇಷ ಪ್ರಬುದ್ಧತೆಯನ್ನು ಹೇಗೋ ಪೋಲುಮಾಡಿಕೊಂಡುಬಿಟ್ಟವು.

ಪ್ರಪಂಚದಲ್ಲಿ ಜಾಹೀರಾಗುವ ಸಮಾಚಾರಗಳಿಂದ ಊಹಿಸುವುದಾದರೆ, ಸೌಂದರ್ಯ ಸ್ಪರ್ಧೆಗಳಂಥ ವಿಧಿಗಳಲ್ಲಿ ಎದೆ-ಟೊಂಕ-ತೊಡೆಗಳ ಅಳತೆಗಳು ಮುಂತಾದವೇ ಸೌಂದರ್ಯ ನಿರ್ಣಾಯಕಗಳೆನ್ನಿಸಿಕೊಳ್ಳುತ್ತವೆ. ಆದರೆ ಕಪ್ಪು

ಚೆಲುವೆಯೊಬ್ಬಳು ಮಾತ್ರ ಈ ತನಕ ಆಯ್ಕೆಯಾಗಿದ್ದಿಲ್ಲ. ಸುಮಾರು ಅರ್ಧ ಶತಮಾನದಿಂದ ನಡೆದಿರಬಹುದಾದ ಈ ಸೌಂದರ್ಯಸ್ಪರ್ಧೆಗಳಲ್ಲಿ ಒಮ್ಮೆ ಮಾತ್ರ, ಅದೂ ಇತ್ತೀಚೆಗೆ, ಜಪಾನಿನ ಒಬ್ಬಳು 'ವಿಶ್ವ ಸುಂದರಿ'ಯ ಪದವಿಯಲ್ಲಿ ಕಾಲಿಡುವುದಕ್ಕಾಯಿತು. ವಿಶ್ವ ಸುಂದರಿಯ ಕಿರೀಟವನ್ನು ತಲೆಗಿಡುವುದಕ್ಕೆ ಮುಂಚೆ, ಅದಕ್ಕೆ ಹಿಂದೆಯೂ ಜಪಾನಿನ ಹೆಣ್ಣು ಮಕ್ಕಳು ಸುಂದರಿಯರಾಗಿದ್ದಿರಬೇಕು; ಈಗ ಒಮ್ಮೆಗೇ ಅವರು ಹಿಂದೆಂದಿಗಿಂತ ಚೆಲುವೆಯರಾಗಿಬಿಟ್ಟಿದ್ದಾರೆ ಎಂಬುದು ಸರಿ ಇರಲಾರದು. ಇಲ್ಲಿ ಅವರು ಬದಲಾದದ್ದಲ್ಲ, ಬದಲಾದದ್ದು ಕಾಲಿಫೋರ್ನಿಯಾದ ಸೌಂದರ್ಯ ವಿಮರ್ಶಕರ ನೋಡುವ ಕಣ್ಣು. ಆಫ್ರಿಕಾ ಏಷ್ಯಾಗಳ ಕಪ್ಪುಬಣ್ಣದ ಮೇಲೂ ಮುಂದೊಂದು ಕಾಲದಲ್ಲಿ ಇಂಥ ಸರದಿ ಸುಳಿಯಬಹುದು.

ಕೆಲವು ವಾರಗಳ ಮಾತಲ್ಲ, ಹತ್ತಿಪ್ಪತ್ತು ವರ್ಷಗಳೂ ಅಲ್ಲ, ಹತ್ತಾರು ಶತಮಾನಗಳಿಂದ ಈ ತನಕ ನೋಡುವವರ ಕಣ್ಣುಗಳು ಹೀಗೆ ಏಕಪ್ರಕಾರ ನಿಷ್ಠೆಯಿಂದ ಮೋಸಗೊಳಿಸುತ್ತ ಬಂದಿವೆ. ಏಕೆಂದರೆ ಕಣ್ಣುಗಳು ನೋಡುವುದು ಮನಸ್ಸು ಅವಕ್ಕೆ ನೋಡಲು ಏನನ್ನು ಕಲಿಸಿದೆಯೋ ಅದನ್ನು. ಹೆಣ್ಣಿನ ಮಾಂತ್ರಿಕತೆ ಮತ್ತು ಸೊಬಗಿನ ಕಥೆಗಳಿಗೆ ತವರು ನೆಲ ಅಸ್ಸಾಂ. ಹೊರಗಿಂದ ಅಲ್ಲಿಗೆ ಬರುವ ಹೊಸಬರೆಲ್ಲ ಅಲ್ಲಿನ ಹೆಣ್ಣುಗಳ ಚೆಲುವನ್ನು ಆಶ್ಚರ್ಯದಿಂದ ಹೊಗಳುತ್ತಾರೆ. ಅದರಲ್ಲಿ ಬಹಳ ಜನ ಲೋಕಾರೂಢಿ ಹೊಗಳುವವರು. ಏನು ಹೇಳುತ್ತಿದ್ದೇವೆ ಎಂಬುದನ್ನು ತಾವಾದರೂ ಅರ್ಥಮಾಡಿಕೊಳ್ಳುವ ಗೋಜಿಗೆ ಹೋಗದವರು. ಉಳಿದವರಲ್ಲೂ, ಮೃದುವಾಗಿ ಕರಗಿ ಇಳಿಯುವಂಥ ಬಿಳಿ ಬಣ್ಣದ ಚೆಲುವೆಯರ ಸೊಬಗನ್ನು ಹೊಗಳುವವರು ಎಷ್ಟು ಜನವೋ ಮತ್ತು ಕಣ್ಣು ಸೆರೆಗೈಯುವ ಕಪ್ಪು ಬಣ್ಣದ ಸೊಬಗಿಯರ ಲೋಕೋತ್ತರ ರೂಪಶಿಲ್ಪಗಳನ್ನು ಹೊಗಳುವವರೆಷ್ಟೋ? ಯಾರು ಸೌಂದರ್ಯವನ್ನು ಬಣ್ಣದೊಡನೆ ತಳುಕುಹಾಕಿ ಗೊಂದಲ ಗೊಳಿಸಿ ಕೊಳ್ಳುತ್ತಾರೋ ಅವರು ಅಸ್ಸಾಮಿನ ನಿಜವಾದ ಚೆಲುವನ್ನು ತಿಳಿಯಲಾರರು. ಅಸ್ಸಾಮಿನ ಟೀ ತೋಟದ ಹೆಣ್ಣುಗಳು, ಅವರಲ್ಲಿ ಕೆಲವರಂತೂ-ಮುಖ್ಯವಾಗಿ ಚತ್ತೀಸ್‌ಘರ್ ಮತ್ತು ಒರಿಯಾ ಕುಲದವರು-ಆಕಾರ ಸೌಷ್ಠವದಿಂದ ಮುಖದ ಕಾಂತಿಯಿಂದ ಕಣ್ಣನ್ನು ಸೆಳೆದು ಯಾವತ್ತಿಗೂ ಸೆರೆಹಿಡಿದಿಟ್ಟು ಬಿಡುತ್ತಾರೆ. ಮತ್ತು ಈ ಕೆಲಸಗಾರ ಹೆಣ್ಣುಗಳ ಮೈಬಣ್ಣ ಕಪ್ಪು. ಅನೇಕಾನೇಕರು ತಮ್ಮ ಬದುಕಿನುದ್ದಕ್ಕೂ, ಕಪ್ಪು ಬಿಳುಪುಗಳೆರಡರಲ್ಲೂ ಕಾಣಬಹುದಾದ ಚೆಲುವಿನ ಈ ಮರ್ಮವನ್ನು ಒಮ್ಮೆಯಾದರೂ ತಟಕ್ಕನೆ ಹಾಯದೆ ಉಳಿದುಬಿಡುತ್ತಾರೆ. ಕೆಲವರು ತಾರುಣ್ಯ ಕಳೆದು ಈ ಸತ್ಯವನ್ನು ತಿಳಿಯುತ್ತಾರೆ. ಪುರಾಣ ಕೂಡ ತರುಣ ಕೃಷ್ಣನಿಗೆ ಶ್ವೇತ ಶುಭ್ರೆಯಾದ ರಾಧೆಯನ್ನು ಸಂಗಾತಿಯಾಗಿ ಮಾಡಿ, ಅನಂತರದ ನಡುವಯಸ್ಸಿನ

ರಾಜಕಾರಣಪಟುವಿಗೆ ಕೃಷ್ಣೆಯಾದ ದ್ರೌಪದಿಯನ್ನು ಆತ್ಮೀಯಳನ್ನಾಗಿ ಮಾಡಿದೆ. ಯಾರೊಬ್ಬರೂ ವಯಸ್ಸು ಬೆಳೆದಂತೆ ಉತ್ತರಕ್ಕಿಂತ ದಕ್ಷಿಣವನ್ನೇ ಪ್ರೀತಿಸಲು ತೊಡಗುತ್ತಾರೆ, ಕಪ್ಪು ಬಣ್ಣದ ಕಡೆ ಆಕರ್ಷಿತರಾಗುತ್ತಾರೆ.

ನಾನು ಹೇಳುತ್ತಿರುವುದು ಗಂಡಿನ ದೃಷ್ಟಿಕೋನದಿಂದ ಕಂಡ ಹೆಣ್ಣಿನ ಚೆಲುವಿನ ಬಗ್ಗೆ. ಇದರಿಂದ, ಹೆಣ್ಣು ಚಂದದಗೊಂಬೆಯಲ್ಲದೆ ಬೇರೆಯಲ್ಲ ಎಂಬುದು ನನ್ನ ಅಭಿಪ್ರಾಯ ಎಂದು ಗ್ರಹಿಸಬಾರದು. ಒಮ್ಮೆ ಅದೇ ನನ್ನ ದೃಷ್ಟಿಕೋನವಾಗಿದ್ದರೆ, ದ್ರೌಪದಿಯ ಸೌಂದರ್ಯವನ್ನು-ಯಾವಳ ಅನುಪಮ ಜ್ಞಾನಶಕ್ತಿಯೇ ಆಕೆಯ ಸೌಂದರ್ಯದ ಮೂಲನಿಧಿಯೆಂಬಂತೆ ತೋರುತ್ತದೆಯೋ ಅಂಥ ಸೌಂದರ್ಯವನ್ನು-ಕಂಡುಕೊಳ್ಳುವುದು ನನಗೆ ಅಶಕ್ಯವಾಗುತ್ತಿತ್ತು. ಅಥವಾ, ಯಾರಲ್ಲಿ ದುಡಿಮೆ, ಸ್ವಾತಂತ್ರ್ಯ, ಚೆಲುವು ಇವುಗಳನ್ನು ಪ್ರತ್ಯೇಕ ಪ್ರತ್ಯೇಕ ಎಂದು ವಿಂಗಡಿಸಿ ಹೇಳುವುದು ಸಾಧ್ಯವಿಲ್ಲವೆಂದು ತೋರುವುದೋ ಅಂಥ ಅಸ್ಸಾಮಿನ ಟೀ ಹೆಣ್ಣುಗಳ ಚೆಲುವೂ ನನಗೆ ಕಾಣಸಿಗುತ್ತಿರಲಿಲ್ಲ. ನಾನು ಹೆಣ್ಣಾಗಿದ್ದರೂ ಪ್ರಾಯಶಃ ಗಂಡಿನ ಚೆಲುವನ್ನು ಬಹುತೇಕ ಇದೇ ದೃಷ್ಟಿಯಿಂದ ನೋಡುತ್ತಿದ್ದೆ. ಆದರೆ-ಮೊದಲನೆಯದಾಗಿ, ಗಂಡಸು ಮೈಬಣ್ಣದ ಕಾರಣ ಹೆಂಗಸಿನಂತೆ ಆ ಮೊತ್ತದ ಕೀಳುನೋಟಕ್ಕೆ ಗುರಿಯಾಗುವುದಿಲ್ಲ. ಎರಡನೆಯದಾಗಿ ಹೆಣ್ಣು ಗಂಡಿನ ಚೆಲುವನ್ನು ಹೇಗೆ ನೋಡುತ್ತಾಳೋ ಅಷ್ಟೇ ಮಟ್ಟಿಗೆ, ತನ್ನ ಚೆಲುವನ್ನೇ ಅಳೆದು ಅಂದಾಜು ಮಾಡಿಕೊಳ್ಳುವುದರಲ್ಲೂ ಅತ್ಯಾಸಕ್ತಿ ಹೊಂದಿಬಿಡುತ್ತಾಳೆ. ಇವೊತ್ತು ಚೆಲುವು ಎನ್ನುವುದು ಹೆಣ್ಣಿಗೆ ಒಂದು ಗುಣ ಎನ್ನುವಂತಿದೆ. ಒಂದು ವೇಳೆ ಗಂಡಿಗೂ ಇಷ್ಟೇಮಟ್ಟಿಗೆ ಚೆಲುವು ಅಗತ್ಯವೆನ್ನುವಂತಾದರೆ- ಆ ಕಾಲ ಬಂದೀತೆನ್ನುವುದು ನನಗೆ ಸಂದೇಹ-ಆಗಲೂ ಈ ತನಕ ಹೇಳಿದ್ದೆಲ್ಲ, ಹೆಚ್ಚಲ್ಲದಿದ್ದರೆ ಇಷ್ಟೇ ನಿಜವಾಗಿಯಾದರೂ, ಉಳಿಯುತ್ತದೆ.

ಮಧುರೆ ವಾಘೈ ನದಿ ದಂಡೆಯಲ್ಲಿನ ಮುಖ್ಯ ಪಟ್ಟಣ. ಒಂದು ಕಾಲದಲ್ಲಿ ಅದು ಪಾಂಡ್ಯರ ಮಹಾಸಾಮ್ರಾಜ್ಯವನ್ನು ಪೋಷಿಸಿತ್ತು, ಈ ಪಟ್ಟಣ 'ಮೀನಾಕ್ಷಿ'ಯ ಆವಾಸಸ್ಥಾನವಾಗಿದೆ. ಇಂಡಿಯಾದ ಮಹಾದೇವಾಲಯಗಳಲ್ಲಿ ಒಂದೆನ್ನಿಸಿದ ಇಲ್ಲಿನ ದೇವಾಲಯಕ್ಕೆ ತಾನೊಬ್ಬಳೇ ಅಧಿಷ್ಠಾತ್ರಿ ಎಂದುಕೊಳ್ಳುವ 'ಮೀನಾಕ್ಷಿ', ತಾನೊಬ್ಬಳೇ 'ಮೀನಾಕ್ಷಿ' (ಮೀನಿನಂತೆ ಕಣ್ಣಿದ್ದವಳು) ಎಂದು ಹೇಳಿಕೊಳ್ಳುವ ಹಾಗಿಲ್ಲ. ವಾಘೈ ತೀರದ ಹೆಣ್ಣುಗಳೆಲ್ಲ ಮೀನಾಕ್ಷಿಯರಾಗಿ ಈ ಚೆಲುವನ್ನು ಹಂಚಿಕೊಂಡಿದ್ದಾರೆ. ಮೀನಾಕ್ಷಿ ಮತ್ತು ಹರಿಣಾಕ್ಷಿಗಳ ನಡುವೆ ಇದೇ ಹೆಚ್ಚು ಸುಂದರ ಎಂದು ಎಲ್ಲಾ ಕಾಲದಲ್ಲೂ ತೀರ್ಪು ಹೇಳುವುದು ಕಷ್ಟ. ಮಧ್ಯಪ್ರಾಂತ್ಯಗಳ ಕಣ್ಣುಗಳು ಇಂದ್ರಿಯಗಳ ಕೂಡ ಮಾತಾಡುವುದೇ ಕೊಂಚ ಹೆಚ್ಚು; ದಕ್ಷಿಣವಾಹಿನಿಯ ಈ ಕಣ್ಣುಗಳು ಆ

ಕೊಂಚ ಹೆಚ್ಚನ್ನು ಜೀವದ ಕೂಡ ಆಡುತ್ತವೆ. ಮೀನಾಕ್ಷಿಗಳಲ್ಲಿ ಸಹಾನುಭೂತಿ ಕರುಣೆಗಳ ತುಳುಕು ತುಸು ಹೆಚ್ಚು ಎಂದು ಕಾಣುತ್ತದೆ. ವಾಘೈ ತೀರದ ಮೀನಾಕ್ಷಿಯರ ಮೈಬಣ್ಣ ಕಪ್ಪು; ಭಾರತದ ನಿಜದಕ್ಷಿಣವೆನ್ನಬಹುದಾದ ತಮಿಳುನಾಡಿನ ಹೆಣ್ಣುಗಳೂ ಕಪ್ಪು.

ತಮಿಳುನಾಡಿನಲ್ಲಿ ಹಿಂದಿ ಚಲನಚಿತ್ರಗಳು ಜನಪ್ರಿಯವಾಗಿರುವುದರ ಜೊತೆಗೆ ತಮಿಳು ಚಿತ್ರಗಳೂ ಸಾಕಷ್ಟು ತಯಾರಾಗುತ್ತವೆ. ಇಲ್ಲಿ ಒಂದು ಅಂಶ ತುಂಬ ಕುತೂಹಲದ್ದೆನ್ನಿಸುತ್ತದೆ: ಈ ತಮಿಳು ಚಿತ್ರಗಳಲ್ಲಿ ನಾಯಕರಾಗಿರುವ ನಟರು ಸಾಮಾನ್ಯವಾಗಿ ತಮಿಳರೇ. ಆದರೆ ನಾಯಕಿಯರಾಗುವ ನಟಿಯರು ಮಾತ್ರ ಅಷ್ಟೇ ಸಾಮಾನ್ಯವಾಗಿ ಆಂಧ್ರರು, ಮಲಯಾಳಿಗಳು ಮುಂತಾದವರು. ಇದಕ್ಕೆ ಕಾರಣ ಅನೇಕ ಇದ್ದಾವು. ನನಗೆ ಹೊಳೆದ ಒಂದು ಕಾರಣವನ್ನು ನಾನಿಲ್ಲಿ ಸೂಚಿಸ ಬೇಕೆನ್ನಿಸುತ್ತದೆ. ಒಮ್ಮೆ ಒಂದು ಚಿತ್ರದಲ್ಲಿ ನನಗೆ ತಮಿಳಿನವಳೇ ಆದ ತಾಂಬರಂ ಲಲಿತಳನ್ನು ನೋಡುವ ಅವಕಾಶ ಒದಗಿತು. ಚಿತ್ರದಲ್ಲಿ ಆಕೆ ಒಂದು ಸಣ್ಣ ಪಾತ್ರ ವಹಿಸಿದ್ದಳು. ತಮಿಳು ಚಿತ್ರಗಳಲ್ಲಿ ತಮಿಳೇತರ ನಟಿಯರಿರುವ ಕಾರಣ ಏನಿದ್ದೀತು ಎಂಬ ಬಗ್ಗೆ ಸುಳಿವು ಸಿಕ್ಕೀತೆಂದು ನಾನು ತುಂಬ ಎಚ್ಚರದಿಂದ ನೋಡಿದೆ. ದಪ್ಪ ಬಣ್ಣ ಮತ್ತು ಪೌಡರ್ ಮುಚ್ಚಿದ ಆಕೆಯ ಮುಖ, ತೆಳು ಬಣ್ಣದ ಹೊರಗೆ ತನ್ನ ನಿಜ ಬಣ್ಣ ತೋರಿಸುತ್ತಿದ್ದ ಆಕೆಯ ತೋಳುಗಳಿಂದ ಬೇರೆಯೇ ಆಗಿ ಕಾಣಿಸುತಿತ್ತು. ತಾಂತ್ರಿಕತೆಯ ಮಾತು ಬೇರೆ, ಇರಲಿ. ಆದರೂ ಒಬ್ಬ ಹೆಣ್ಣಿನ ಯಾವ ಯಾವ ಭಾಗ ಚಿತ್ರದಲ್ಲಿ ಹೊರಕಾಣುತ್ತದೋ ಅವೆಲ್ಲವನ್ನೂ ಬಣ್ಣ ಮೆತ್ತಿ ಊನ ಕಾಣದಂತೆ ಮುಚ್ಚಿಡಲು ಸಾಧ್ಯವೇ ಎಂದು ಆಶ್ಚರ್ಯಪಟ್ಟರೆ ತಪ್ಪಿಲ್ಲ.

ನನಗೆ ಕಂಡಂತೆ, ಆ ಚಿತ್ರದಲ್ಲಿ ಬಂದ ಯಾವುದೇ ಹೆಣ್ಣಿಗಿಂತ ಸುಂದರಿಯಲ್ಲ ಲಲಿತ. ವಾಸ್ತವವಾಗಿ ಆಕಾರಸೌಷ್ಠವ ಉಳ್ಳವಳೂ, ಮೀನಾಕ್ಷಿಯೂ ಆದ ನೀಲ ವರ್ಣೆಗೆ ಸಾಟಿಯೇ ಇಲ್ಲ. ಆದರೆ ಕಪ್ಪುಬಣ್ಣದ ತಮಿಳರು ಮಾತ್ರ ಹಾಗೆ ಭಾವಿಸುವುದಿಲ್ಲ, ಸಹಜವಾಗಿ. ತಮ್ಮ ಚಿತ್ರಗಳಲ್ಲಿ ತಮಗಿಂತ ತೆಳುಬಣ್ಣದ ಆಂಧ್ರರೋ ಮಲಯಾಳಿಗಳೋ ಬೇಕೆನ್ನುತ್ತಾರೆ. ಅಲ್ಲಿನ ಚಿತ್ರಪ್ರಪಂಚದ ಕಥೆ ಹೇಳಿ, ಈ ನನ್ನ ಅನಿಸಿಕೆಯನ್ನು ಮಿತ್ರನೊಬ್ಬ ಸಮರ್ಥಿಸಿದ. ಚಿತ್ರಪ್ರೇಕ್ಷಕರ ಸೌಂದರ್ಯವಿಮರ್ಶೆಗೆ ಗುರಿಯಾಗುವ ಮೊದಲು ಈ ಕಪ್ಪು ಹೆಣ್ಣುಗಳು ನಿರ್ಮಾಪಕನ ಅಥವಾ ನಿರ್ದೇಶಕನ ಕೈಯಲ್ಲಿ ಹಲವು ಬಗೆಯ ಪಾಡುಪಡ ಬೇಕಾಗುತ್ತದಂತೆ. ನಿಜ, ಪ್ರೇಕ್ಷಕರಿಗೇನೋ ಬಣ್ಣ ಸಾಲುತ್ತದೆ. ಆದರೆ ನಿರ್ಮಾಪಕ ತುಸು ಹತ್ತಿರದಿಂದಲೇ ನೋಡಬೇಕಲ್ಲ.

ಸೌಂದರ್ಯ ನಿರ್ಧಾರದ ಈ ಅಪಮಾರ್ಗಕ್ಕೆ ರಾಜಕಾರಣದ ಚೋದನೆಗಳೇ ಕಾರಣವೆನ್ನಬೇಕು. ಯೂರೋಪಿನ ಬಿಳಿಯಜನ ಸುಮಾರು ಮೂರು ಶತಮಾನಗಳಿಗಿಂತ ಹೆಚ್ಚು ಕಾಲದಿಂದ ಜಗತ್ತನ್ನೇ ಅಡಿಯಾಳಾಗಿಸಿಕೊಂಡಿದ್ದಾರೆ. ವರ್ಣೀಯರಿಗೆ ದೊರಕದೆ ಉಳಿದ ಸಂಪತ್ತು ಅಧಿಕಾರಗಳನ್ನು ತಾವು ದೊರಕಿಸಿ ಕೊಂಡಿದ್ದಾರೆ. ಯೂರೋಪಿನ ಈ ಬಿಳಿಯರಂತೆ ಆಫ್ರಿಕಾದ ನೀಗ್ರೊಗಳು ಜಗತ್ತನ್ನು ಆಳಿದ್ದರೆ ಹೆಣ್ಣಿನ ಸೌಂದರ್ಯದ ಲಕ್ಷಣಗಳೇ ಬೇರೆಯಾಗುತ್ತಿದ್ದವು, ನಿಸ್ಸಂದೇಹವಾಗಿ. ಆಗ ಕವಿಗಳೂ ಲೇಖಕರೂ ನೀಗ್ರೊ ಚರ್ಮದ ಮೃದುವಾದ ರೇಶಿಮೆ ನುಣುಪನ್ನೂ, ಸತ್ತ್ವೋದ್ರೇಕಗೊಳಿಸುವ ಅದರ ಸ್ಪರ್ಶವನ್ನೂ, ಕಣ್ತುಂಬುವ ಸೊಬಗನ್ನೂ ಆಡಿಕೊಳ್ಳುತ್ತಿದ್ದರು, ಹಾಡಿಕೊಳ್ಳುತ್ತಿದ್ದರು. ಅವರ ತುಟಿ ಮೂಗುಗಳಲ್ಲಿ ಮಾರ್ದವ ಕೋಮಲತೆಗಳನ್ನು ಕಾಣುವ ರಸಕಲ್ಪನೆಯ ಕಡೆಗೆ ಸೌಂದರ್ಯ ಪ್ರಜ್ಞೆ ಹೊರಳುತ್ತಿತ್ತು. ರಾಜಕಾರಣ ಸೌಂದರ್ಯಕಲ್ಪನೆಯನ್ನು ರೂಪಿಸಬಲ್ಲದು; ಅಧಿಕಾರ ಕೂಡ ಚಂದವಾಗಿಯೇ ಕಾಣಿಸುತ್ತದೆ, ಅದರಲ್ಲೂ ಎಣೆಯೇ ಇಲ್ಲದ ಅಧಿಕಾರ.

ಪ್ರಪಂಚವಿಸ್ತಾರದಲ್ಲೂ ಶ್ವೇತವರ್ಣಕ್ಕೇ ಯಥೇಚ್ಛ ಅಧಿಕಾರ ದೊರೆತಿರುವಾಗ ಇಂಡಿಯಾದಲ್ಲಿರುವ ಒಂದು ವಿಶಿಷ್ಟ ಸ್ಥಿತಿ ಅದಕ್ಕೆ ಒಳನೆಯ್ಗೆ ಕೊಟ್ಟು ಬಲಪಡಿಸಿದೆ. ಈ ದೇಶದಲ್ಲಿ ಬಿಳಿ ಮೈಬಣ್ಣದವರು ಅಥವಾ ಕಪ್ಪು ಕಡಿಮೆ ಇರುವವರು ಸಾಮಾನ್ಯವಾಗಿ ಮೇಲು ಜಾತಿಗೆ ಸೇರಿದವರಾಗಿದ್ದರು. ಜಾತಿ ಎಂಬುದಕ್ಕೆ ಹಿಂದುಸ್ತಾನಿಯಲ್ಲಿ 'ವರ್ಣ' ಎನ್ನುತ್ತಾರೆ. ಅದರ ಅರ್ಥ ಪ್ರಾಯಶಃ ಬಣ್ಣ. ಋಗ್ವೇದದಲ್ಲಿ ಶ್ವೇತವರ್ಣವನ್ನೇ ಆರ್ಯ ಎಂದು ಕರೆದಿದೆ. ಇಂಡಿಯಾದ ನಿಸರ್ಗ ಭೂಮಿ ಆಕಾಶಗಳು ಉಜ್ವಲ ವರ್ಣದವು. ಆ ಹಿನ್ನೆಲೆಯ ಎದುರು, ಗರಿಗರಿಯಾಗಿ ಒತ್ತಿಡದೆ ಅಲೆಅಲೆಯಾಗಿರುವ ಅಚ್ಚ ಬಿಳಿಯ ಉಡುಪು ನೋಡುವ ಕಣ್ಣುಗಳಿಗೆ ಹರ್ಷ ಕೊಡುತ್ತದೆ; ಧರಿಸಿದವನ ಚೆಲುವನ್ನು ಹೆಚ್ಚಿಸಿ ತೋರಿಸುತ್ತದೆ. ಆದರೆ ಅದಕ್ಕೂ ಮೈಬಣ್ಣಕ್ಕೂ ಯಾವ ಸಂಬಂಧವೂ ಇಲ್ಲ. ಹಾಗಿದ್ದರೂ, ಇಡೀ ಪ್ರಪಂಚದಲ್ಲೆ ಬಿಳಿಯರ ಮೇಲಾಟ ಪರಂಪರೆಯನ್ನೇ ಸೃಷ್ಟಿಸಿರುವ ಕಾರಣ, ಅದಕ್ಕೆ ಒತ್ತುಕೊಟ್ಟ ಇಂಡಿಯಾದ ಜಾತಿಪದ್ಧತಿಯ ವೈಶಿಷ್ಟ್ಯವೂ ಕಾರಣವಾಗಿ ಶ್ವೇತವರ್ಣಕ್ಕೆ ನಿರೋಧ ಕಾಣದ ಪ್ರತಿಷ್ಠೆ ದೊರಕಿಬಿಟ್ಟಿದೆ. ಚರ್ಮದ ಬಣ್ಣವೇ ಚೆಲುವಿಕೆಯೆನ್ನಿಸಿ ಕೊಂಡುಬಿಟ್ಟಿದೆ- ಇನ್ನಾವುದೇ ಸಹಗುಣಗಳನ್ನೂ ಬೇಡದೆ.

ಹಾಗಿದ್ದರೆ, ಮೈಬಣ್ಣ ಚೆಲುವಿನ ಅಂಶಗಳಲ್ಲಿ ಒಂದಲ್ಲವೆ? ಹೊಸತು ಹೊಸತಾಗಿ ನೋಡುವವನನ್ನು ಚಕಿತಗೊಳಿಸುತ್ತಿರುವಾಗ ಬಿಳಿ ಮೈಬಣ್ಣವೆಲ್ಲವೂ ಕಣ್ಣಿಗೆ ತಂಪೆರೆವ ಹಾಲುಗಲ್ಲಿನಂತೆ ಕಾಣಿಸುತ್ತದೆ. ಮತ್ತು, ಹಾಗೆಯೇ ಹೊಸತರಲ್ಲಿ ಎಲ್ಲ ಕಪ್ಪು ಮೈಬಣ್ಣಗಳೂ-ಕಂದಿರಲಿ, ಮಣ್ಣುಗಪ್ಪಿರಲಿ, ಗೋಧಿಗೆಂಪಿರಲಿ ಎಲ್ಲವೂ-

ಕರೆಯಿಲ್ಲದ ಬಾಳೆಯ ತುಂಬನ್ನು ನೆನಪಿಸುತ್ತವೆ. ಹೊಸತನ ಕಳೆದರೆ ಮಾತ್ರ ಬಿಳುಪು ಹೊರಪೆದ್ದಂತೆ ಕಾಣುತ್ತದೆ, ಕಪ್ಪು ಏಕರಾಗವೆನ್ನಿಸುತ್ತದೆ; ಎರಡೂ ಬೇಸರ ತರುತ್ತವೆ. ನಿಶ್ಚಯವಾಗಿಯೂ ಮೈಬಣ್ಣ ಸೌಂದರ್ಯದ ನಿರ್ಧಾರಕವಲ್ಲ. ಚರ್ಮದ ಯಾವುದೇ ಗುಣ ಸೌಂದರ್ಯವೆನಿಸಿಕೊಳ್ಳುವುದಿದ್ದರೆ ಅದು, ಅದರ ರಚನೆಯಲ್ಲಿದೆ-ಮೃದುವಾದ ಬಿರುಕಿಲ್ಲದ ಏಕರೀತಿಯ ರಚನೆಯಲ್ಲಿ. ಅಂಥ ಚರ್ಮದ ಸೊಬಗು, ಅದರ ಅತ್ಯುತ್ತಮ ಮಾದರಿಯಲ್ಲಿ ಎಷ್ಟೋ ಸಲ ಚೈನಾದಲ್ಲೂ, ಆಫ್ರಿಕಾ, ಇಂಡಿಯಾ ಮತ್ತು ಇಂಥದೇ ದೇಶಗಳ ಎಣ್ಣೆಗಪ್ಪು ಗೋಧಿಗೆಂಪಿನ ಹೆಣ್ಣುಗಳಲ್ಲಿಯೂ ಕಾಣಸಿಗುತ್ತದೆ. ಈ ಪ್ರಸಂಗದಲ್ಲಿ ನಾನು ಪ್ರಾಯಃ ಸಮಸ್ಥಿತಿಯ ಇನ್ನೊಂದು ದಿಕ್ಕಿಗೆ ಸ್ವಲ್ಪ ಹೆಚ್ಚು ವಾದಿಸಿದ್ದಿರಬಹುದು. ಏನು ಮಾಡುವುದು, ಅನೇಕ ಸಲ ಹಾಗಾಗುತ್ತದೆ, ಹಳೆಯ ವಾಲಿಕೆಯನ್ನು ಸರಿಪಡಿಸುವಾಗ. ಕಪ್ಪು ಮೈಬಣ್ಣದವರಲ್ಲಿರುವಂತೆ, ಸ್ವಲ್ಪ ವಿರಳವಾಗಿಯಾದರೂ, ರಕ್ತದಲ್ಲಿ ಹುಚ್ಚು ಭೋರ್ಗರೆಸುವ ಅಂಥ ಚರ್ಮದ ಸೊಂಪು ಬಿಳಿಯರಲ್ಲೂ ಕಾಣಸಿಗುತ್ತದೆ.

ಮೈಬಣ್ಣದ ಕಪ್ಪು ಬಿಳುಪುಗಳ ನಡುವೆ ಆಯ್ಕೆ ಮಾಡಹೊರಡುವುದರಲ್ಲಿ ಅರ್ಥವಿಲ್ಲ, ನಿಜ. ಆದರೂ ಕೆಲವು ಸ್ವಗತ ಮನೋಮುದ್ರೆಗಳನ್ನು ಇಲ್ಲಿ ಗುರುತಿಸಿಡ ಬಹುದು. ಸ್ತ್ರೀಯರೆಲ್ಲ ಚಂದವಾಗಿಯೇ ಇರುತ್ತಾರೆ. ಅದರಲ್ಲೂ ಕೆಲವರು ತುಂಬ ಚಂದವಾಗಿರುತ್ತಾರೆ. ತುಂಬ ಚಂದವಾಗಿರುವ ಬಿಳಿ ಮೈಬಣ್ಣದವರು ಬಿಚ್ಚುಮನಸ್ಸನ್ನೂ ಮುಗ್ಧತೆಯನ್ನೂ ಸೂಸುವಂತಿರುತ್ತಾರೆ. ಆಪ್ಯಾಯ ಮಾನವೆನ್ನಿಸುತ್ತಾರೆ. ಸ್ಫಟಿಕಜಲ ಅಲೆಯಾಡಿ ಜುಗುಳುವ ಹಳ್ಳದಂತೆ, ಅಥವಾ ಇನ್ನೂ ಸರಿಯಗಿ ಹೇಳುವುದಾದರೆ- ಪರ್ವತವಾಹಿನಿಯ ಪಾರದರ್ಶಕ ಆಳದಂತೆ, ಬೆಳುದಿಂಗಳಿನ ಲಘುರಾಶಿಯಂತೆ. ತುಂಬ ಚಂದವಾಗಿರುವ ಕಪ್ಪು ಮೈಬಣ್ಣದ ವರಾದರೋ ಜೀವನದ ಹಾಗೂ ಸೃಷ್ಟಿಯ ಗೂಢವನ್ನು ತೇಲಿಸಿದಂತಿರುತ್ತಾರೆ; ಮೀನುಗಳಿಗೆ ಕಣ್ಣು ಕೊಡುವ, ಹೆಣ್ಣಾನೆಗೆ ಮೆಲುನಡೆ ಕೊಡುವ, ಮುಸ್ಸಂಜೆಯ ರಹಸ್ಯಗರ್ಭಕ್ಕೆ ವಿಶ್ರಾಂತಿ ವಿಲಾಸ ಕೊಡುವ ಮರ್ಮವನ್ನು ಅರಳಿಸಿದಂತಿರುತ್ತಾರೆ; ಆಳ ಆಳವನ್ನು ಆಹ್ವಾನಿಸುವಂತಿರುತ್ತಾರೆ.

ಸೌಂದರ್ಯ ಮತ್ತು ಲೈಂಗಿಕತೆ ಒಂದಕ್ಕೊಂದು ಹತ್ತಿರ ಸಂಬಂಧಿಸಿದವು. ಕಪ್ಪು ಹೆಣ್ಣುಗಳು ವಾಸ್ತವವಾಗಿ ಯಜಮಾನಿಕೆ ಮೆರೆವ ಗಂಡುಗಳ ಲೈಂಗಿಕತೆಗೆ ಆಕರ್ಷಕವಾಗಿವೆ. ಆದರೆ ಇಂಥ ಆಕರ್ಷಣೆಯ ಕೇಂದ್ರಗಳು ನೈಟ್ ಕ್ಲಬ್‌ಗಳು ಇಲ್ಲವೆ ಮುಚ್ಚಿನ ಮರೆಗಳು. ಇಂಡಿಯಾದ ವಿಷಯಕ್ಕೆ ಬಂದರೆ ಇಲ್ಲಿ ಜಾತಿಪದ್ಧತಿ

ಮತ್ತೂ ಹೆಚ್ಚಿನ ಆತಂಕಗಳನ್ನು ನಿರ್ಮಿಸಿಬಿಟ್ಟಿದೆ. ಇಲ್ಲಿ ಮೇಲು ಜಾತಿ ಹಾಗೂ ಕೀಳು ಜಾತಿಯ ಗಂಡು ಹೆಣ್ಣುಗಳ ನಡುವೆ ಬದುಕಿನ, ಭಾಷೆಯ, ನಡವಳಿಕೆಯ ರೀತಿಗಳೇ ಬೇರೆಯಾಗಿವೆ. ಅಷ್ಟೇ ಅಲ್ಲ, ಈ ರೀತಿಗಳೆಲ್ಲ ಬೇರೆತನವನ್ನು ವಿಧಿಸುವುದಕ್ಕೇ ರೂಢಿಸಿಕೊಂಡವಾಗಿವೆ. ಕೆಳಜಾತಿಯ ಕಪ್ಪುಹೆಣ್ಣು ತನ್ನ ಪ್ರೇಮದಲ್ಲಿ ಎಷ್ಟೇ ಪ್ರಾಮಾಣಿಕವಾಗಿದ್ದರೂ ಪ್ರಾಯಶಃ ಮೇಲುಜಾತಿಯವರ ಪ್ರೇಮತಂತ್ರಗಳನ್ನು ಸವಿಯಲಾರಳು, ರೂಢಿಸಿಕೊಳ್ಳಲಾರಳು. ಏನೆಂದರೂ ಲೈಂಗಿಕತೆಯಿಲ್ಲದೆ ಪ್ರೇಮವಿಲ್ಲ, ಪ್ರೇಮವಿಲ್ಲದೆ ಸೌಂದರ್ಯವಿಲ್ಲ. ಪ್ರೇಮಿಸುತ್ತಿರುವ, ಪ್ರೇಮ ಕೊಳ್ಳು ತ್ತಿರುವ ಹೆಣ್ಣು ಕಪ್ಪಿರಲಿ, ಬಿಳುಪಿರಲಿ, ನಕ್ಷತ್ರ ತುಂಬಿ ಗೊಂಚಲು ಮಿನುಗುವ ಆಕಾಶದ ಚೆಲುವನ್ನು ಬೆಳಗುತ್ತಾಳೆ. ಯಾರು ಸೌಂದರ್ಯವನ್ನು ಕುರಿತು ಆಡುತ್ತಾರೋ ಹಾಡುತ್ತಾರೋ ಅಂಥವರೇ ಮುಖ್ಯವಾಗಿ, ಕಳೆದ ಕೆಲವು ಶತಮಾನಗಳಲ್ಲಿ, ಕಪ್ಪು ಹೆಣ್ಣುಗಳನ್ನು ಅಂಥ ಪ್ರೇಮದಿಂದ ವಂಚಿಸಿಟ್ಟಿದ್ದಾರೆ. ಬದುಕಿನ ರೀತಿ ವಿಧವಿಧ ವಾಗಿರುವುದು, ಇಡೀ ಜಗತ್ತಿನಲ್ಲೆ ಕಾಲಕ್ರಮದಲ್ಲಿ ಬೆಳೆದು ಬಂದ ಕಪ್ಪು ಬಿಳುಪುಗಳ ಏರುಪೇರು, ಇಂಡಿಯಾದಲ್ಲಿನ ಜಾತಿಪದ್ಧತಿಯ ಅನುಷ್ಠಾನ-ಇವೆಲ್ಲ ಶ್ವೇತರು-ವರ್ಣೀಯರುಗಳ ನಡುವೆ ಅಚಲ ಆತಂಕಗಳನ್ನು ಕಟ್ಟಿ ನಿಲ್ಲಿಸಿವೆ. ಈ ಆತಂಕಗಳೆಲ್ಲ ಕಳೆದ ಹೋಗಲು ಕಾಲ ಬೇಕಾದೀತು. ಆದರೆ ಈ ಆತಂಕಗಳಲ್ಲೆಲ್ಲ ತೀರ ಮಹತ್ತಾದ್ದು ಒಂದು ದೊಡ್ಡ ತಪ್ಪಿನ ಮೇಲೆ ನಿಂತಿದೆ, ಮೈಬಣ್ಣವನ್ನೇ ಚೆಲುವೆಂದು ಭ್ರಮಿಸುವ ತಪ್ಪಿನ ಮೇಲೆ.

ಜಗತ್ತಿನ ಮಹತ್ತರ ದಬ್ಬಾಳಿಕೆಗಳಲ್ಲಿ ವರ್ಣಹಿಂಸೆ ಒಂದಾಗಿದೆ. ಸಾಮಾನ್ಯ ವಾಗಿ ಹೆಣ್ಣುಜಾತಿಯೇ ದಬ್ಬಾಳಿಕೆಗೆ ತುತ್ತಾಗಿದೆ. ಸ್ತ್ರೀವರ್ಗದ ಪ್ರತಿಭೆ ಅಥವಾ ಜನ್ಮ ಶಕ್ತಿಗೆ ತಕ್ಕುದಾದ ಅಭಿವ್ಯಕ್ತಿ ದೊರಕಿಸಿಕೊಡದೆ ಮಾನವಕುಲ ಅಷ್ಟುಮಟ್ಟಿಗೆ ದರಿದ್ರವಾಗಿಯೇ ಉಳಿದಿದೆ. ಸಂಖ್ಯೆಯಲ್ಲಿ ಬಹಳ ಹೆಚ್ಚಾಗಿರುವ ವರ್ಣೀಯ ಸ್ತ್ರೀಯರಂತೂ ಇನ್ನೂ ಹೆಚ್ಚಿನ ದಬ್ಬಾಳಿಕೆಗೆ ಸಿಕ್ಕಿದ್ದಾರೆ. ಕಾತರ ಮತ್ತು ಕೀಳರಿಮೆಗಳನ್ನು ತಿನ್ನಿಸುತ್ತಲೇ ಅವರನ್ನು ಸಾಕುತ್ತಿದ್ದೇವೆ. ಒಬ್ಬ ಕಪ್ಪು ಹುಡುಗಿ-ಆಕೆ ಸಣ್ಣ ಮಗುವಾಗಿದ್ದರೂ ಕೂಡ, ತನ್ನ ಕುಟುಂಬದ ಬಿಳಿ ಹುಡುಗಿಯ ತಂಗಿಯೇ ಆಗಿದ್ದರೂ ಕೂಡ-ಔದಾಸೀನ್ಯಕ್ಕೆ, ಕೀಳುನೋಟಕ್ಕೆ, ಕೀಳ್ದರ್ಜೆಗೆ ಮೀಸಲಿಟ್ಟ ಅಪಮನ್ನಣೆಗಳಿಗೆ ತನ್ನನ್ನು ಸದಾ ಒಪ್ಪಿಸಿಕೊಳ್ಳಬೇಕು, ಅದಕ್ಕೇ ತನ್ನನ್ನು ರೂಢಿಸಿಕೊಳ್ಳಬೇಕು. ಯಾವುದೇ ಗಂಡುಮಗುವಿನೊಡನೆ ಮತ್ತಾವುದೇ ಹೆಣ್ಣು ಮಗುವನ್ನು ಹೋಲಿಸಿದರೂ ಕಾಣುತ್ತದೆ, ಗಂಡಿನಂತೆ ಹೆಣ್ಣು ತನ್ನ ಸಹಜ ಬೆಳವಣಿಗೆಗೆ ಬೇಕಾದ ಅವಕಾಶವನ್ನು ಪಡೆಯದೆ ಹೋಗುತ್ತದೆ ಎಂಬುದು. ಇದಕ್ಕೂ ಹೆಚ್ಚೆಂದರೆ, ಹುಡುಗಿ ಕಪ್ಪಾಗಿದ್ದರಂತೂ ಮತ್ತೂ ಹೆಚ್ಚಿನ ಅಪಮಾನಕ್ಕೆ

ಗುರಿಯಾಗುತ್ತಾಳೆ, ಕೀಳ್ತನದ ಭಾರಕ್ಕೆ ನಲುಗುತ್ತಾಳೆ. ಕಪ್ಪುಗಂಡಿಗೆ ಕೂಡ ಈ ಭಾರ ಇಲ್ಲವೆನ್ನುವಂತಿಲ್ಲ, ಹೆಣ್ಣಿನಷ್ಟಲ್ಲದಿದ್ದರೂ.

ಮೈಬಣ್ಣವನ್ನು ತಿಳಿಗೊಳಿಸುತ್ತವೆ ಎನ್ನುವಂಥ ಸೋಪುಗಳು, ಕ್ರೀಮುಗಳು ಲೋಷನ್ನುಗಳು, ಮತ್ತು ಈಚೆಗೆ ಇಂಜೆಕ್ಷನ್‌ಗಳು-ಇವೆಲ್ಲ ವರ್ಣೀಯ ಯುವಕ ಯುವತಿಯರ ಹೆಚ್ಚಿನ ಬೇಡಿಕೆಯನ್ನು ಸೆಳೆಯುತ್ತಿವೆ. ಅಧಿಕ ಸಂಖ್ಯೆಯ ಕಪ್ಪು ಜನ ಅಲ್ಪಸಂಖ್ಯಾತ ಬಿಳಿಯರೊಡನೆ, ಅವರ ಆಡಳಿತವನ್ನೇ ಹೊತ್ತು ಬದುಕುತ್ತಿರುವ ದಕ್ಷಿಣ ಅಮೆರಿಕದಂಥ ದೇಶದಲ್ಲಿ, ಸರ್ವಾನುಮತಿ ಪಡೆದು ಪ್ರಬಲಗೊಂಡ ವರ್ಣಹಿಂಸೆ ಉತ್ಕಟವಾಗಿ ಕಾಣಸಿಗುತ್ತದೆ. ಸಮಗ್ರ ಪ್ರಪಂಚವೇ ಈ ವರ್ಣಹಿಂಸೆಯನ್ನು ಅನುಭವಿಸುತ್ತಿದೆ. ಯಜಮಾನರಿಗಿಂತ ಗುಲಾಮರೇ ಮುಂದಾಗಿ, ಅವರಿಗಿಂತ ಹೆಚ್ಚು ನಿಷ್ಠೆ ತಾಳಿ, ರೂಢಿ ಮುಂದುವರಿಸುತ್ತಿರುವ ಕಾರಣ ಈ ಹಿಂಸೆ ಮತ್ತೂ ಅಸಹ್ಯವಾಗಿದೆ.

ಯಾವುದೋ ಮೌಲಿಕವಾದ ಒಂದು ತಪ್ಪನ್ನು ಆಧಾರ ಮಾಡಿಕೊಂಡು ಹೆಚ್ಚುಭಾಗ ಹಿಂಸೆಗಳು ಬೆಳೆದು ಹರಡಿಕೊಳ್ಳುತ್ತವೆ. ಎಲ್ಲಕ್ಕಿಂತ ದೊಡ್ಡದೂ ಹೆಚ್ಚು ವ್ಯಾಪಿಸಿದ್ದೂ ಆದ ಈ ವರ್ಣಹಿಂಸೆ ಕೂಡ ಹಾಗೆಯೇ. ಸಮೃದ್ಧ ಸಂಖ್ಯೆಯುಳ್ಳ ಈ ವರ್ಣೀಯ ಮನುಷ್ಯವರ್ಗ ಬಿಳಿಯ ವಿರಳರು ಹಾಕಿಕೊಟ್ಟ ಸೌಂದರ್ಯ ಸೂತ್ರಗಳನ್ನು ಹೇಗೆ ಆತುರಗೊಂಡು ಸ್ವಸಂತೋಷದಿಂದ ಒಪ್ಪಿ ಕುಳಿತುಬಿಟ್ಟಿತು ಎಂಬುದು ಪ್ರಾಯಶಃ ಎಲ್ಲದಕ್ಕಿಂತ ದೊಡ್ಡ ಆಶ್ಚರ್ಯ. ಇದನ್ನು ವಿಶ್ಲೇಷಿಸಿ ನೋಡಿದರೆ, ಈ ಹಿಂಸೆ ಮತ್ತು ಹಿಂಸೆಯ ಬೆಳವಣಿಗೆಗೆ ವಾತಾವರಣ ಹದಗೊಳ್ಳುವ ಬಗೆ- ಇವು ಶ್ರೀಮಂತರು ಬಡವರ ಮೇಲೆ, ಮೇಲುಜಾತಿ ಕೀಳುಜಾತಿಯ ಮೇಲೆ, ಪರಭಾಷೆಯಾಡುವ ಜನ ಸ್ವಭಾಷೆಯಾಡುವವರ ಮೇಲೆ ಯಜಮಾನಿಕೆ ಹೇರುವಾಗ ಕಾಣುವಂಥದೇ ಆಗಿದೆ. ಕಪ್ಪು ಬಿಳಿಯದರ ನಡುವಣ ಅಂತರದಲ್ಲಿ ಶ್ರೀಮಂತಿಕೆ ಮತ್ತು ಬಡತನಗಳ ನಡುವಣ ಅಂತರದಲ್ಲಿ ಹೇಗೊ ಹಾಗೆಯೇ ಅಸಂಖ್ಯಾತ ತರಗತಿಭೇದಗಳಿವೆ. ಕರಿಯಜನ ಎನ್ನುವವರಲ್ಲಿ ಇದ್ದಲಿನಂತೆ ಅಪ್ಪಟ ಕಪ್ಪು ಇರಬಹುದು, ಮುತ್ತಿನಂತೆ ತೆಳುಹಳದಿ ಇರಬಹುದು, ಮತ್ತು ಮಧ್ಯೆ ಗೋಧಿ ಗೆಂಪು, ಎಣ್ಣೆಗೆಂಪು, ಕಂದು, ಕೌಲು ಮುಂತಾಗಿ ಸಹಸ್ರಾರು ವರ್ಣಭೇದಗಳಿರಬಹುದು. ಇದರಿಂದ ಸೌಂದರ್ಯ ನಿರ್ಧಾರದ ಯಜಮಾನಿಕೆ ವಹಿಸುವ ಬಿಳಿಯರಿಗೆ ವರ್ಣೀಯರ ಗುಂಪಿನಿಂದಲೇ ಹೇರಳ ಅನುಯಾಯಿಗಳು ದೊರಕುತ್ತಾರೆ, ಸುಲಭವಾಗಿ. ಕರಿಯರು ಮತ್ತು ಬಿಳಿಯರ ನಡುವಣ ದೂರದಲ್ಲಿ, ಶ್ರೀಮಂತಿಕೆ ಹಾಗೂ ಬಡತನಗಳ ನಡುವಣ ದೂರದಲ್ಲಿರುವಂತೆಯೇ ಅಸಂಖ್ಯಾತ ಮೆಟ್ಟಲುಗಳಿವೆ. ಇದರಿಂದ, ಸೂಕ್ತವಾದ

ಒಂದು ಸೌಂದರ್ಯಮಟ್ಟವನ್ನು ಸ್ಥಾಪಿಸುವುದು ಅತಿ ಕಠಿಣವೆನ್ನಿಸಿದೆ, ಸೂಕ್ತವಾದ ಒಂದು ಆರ್ಥಿಕ ಮಟ್ಟವನ್ನೋ ನೈತಿಕ ಮಟ್ಟವನ್ನೋ ಸ್ಥಾಪಿಸುವುದು ಹೇಗೆ ಕಠಿಣವೋ ಹಾಗೆಯೇ.

ಹಾಗಿದ್ದರೆ ಕಪ್ಪು ಬಣ್ಣದ ಸುಂದರಸ್ತ್ರೀಯರು ತಮ್ಮ ಹೆಚ್ಚಳವನ್ನು ಅಥವಾ ಕನಿಷ್ಠ ತಮ್ಮ ಸಮಾನತೆಯ ಹಕ್ಕನ್ನು ಸ್ಥಾಪಿಸಿಕೊಳ್ಳುವುದು ಯಾವಾಗ? ಅಥವಾ ಪ್ರಾಯಶಃ, ಬೇರೆ ಕ್ಷೇತ್ರಗಳಲ್ಲಿ ಆಗುವಂತೆ ಇಲ್ಲಿಯೂ ಕ್ರಾಂತಿಯ ದಾರಿಯನ್ನು ಹಿಂಸಕರೇ ರೂಪಿಸಿಕೊಡುತ್ತಾರೋ ಏನೋ. ಸೌಂದರ್ಯವನ್ನು ಅಳೆಯುವಲ್ಲಿ ಮತ್ತು ಮೈಬಣ್ಣ ಹಾಗೂ ಸೌಂದರ್ಯಗಳ ಅಂತರವನ್ನು ಗುರುತಿಸುವಲ್ಲಿ ರಸಪ್ರಜ್ಞೆಯ ಒಂದು ಹೊಸ ಕ್ರಾಂತಿಯೇ ನಡೆಯಬೇಕು. ಅಂಥ ಕ್ರಾಂತಿ ಮಾತ್ರ ಇಡೀ ಪ್ರಪಂಚದ ಮೇಲೆ ಸ್ವಾತಂತ್ರ್ಯದ ಹೊಸ ಗಾಳಿಯನ್ನೇ ತೂರಿಬಿಡಬಲ್ಲದು, ಯಾವುದೇ ರಾಜಕೀಯ ಅಥವಾ ಆರ್ಥಿಕ ಕ್ರಾಂತಿಗೆ ಸರಿಸಾಟಿಯಾಗಿ.

(ಮಾರ್ಚ್ 1960)

ಇಂಗ್ಲಿಷಿನಿಂದ ಕನ್ನಡಕ್ಕೆ : ಕೆ. ವಿ. ಸುಬ್ಬಣ್ಣ

ರಾಮ, ಕೃಷ್ಣ, ಶಿವ

ಪ್ರಪಂಚದ ಇತರ ಎಲ್ಲ ದೇಶಗಳಿಗಿಂತ ಹೆಚ್ಚಿನ ಪುರಾಣಸಮೃದ್ಧಿ ಇಂಡಿಯಾದಲ್ಲಿದೆ. ಇಲ್ಲಿನ ಮಹಾಪುರಾಣಗಳು ಶತ ಶತಮಾನಗಳ ಕಾಲದಿಂದ ಜನರ ಮನಸ್ಸನ್ನು ಅಖಂಡವಾಗಿ ಆಳುತ್ತಾ ಬಂದಿದ್ದಾವೆ. ಬುದ್ಧ, ಅಶೋಕ ಈ ಮೊದಲಾದ ಇತಿಹಾಸದ ಮಹಾವ್ಯಕ್ತಿಗಳ ಹೆಸರು ನಮ್ಮ ಜನರಲ್ಲಿ ಕಾಲುಭಾಗಕ್ಕೆ ಮಿಕ್ಕು ತಿಳಿದಿಲ್ಲ; ಇನ್ನು, ಅವರು ಏನು ಮಾಡಿದ್ದರೆಂಬುದು ಹತ್ತರಲ್ಲಿ ಒಬ್ಬನಿಗೆ ಅಷ್ಟೋ ಇಷ್ಟೋ ಗೊತ್ತಿರಬಹುದು. ಮತ್ತು, ನೂರಕ್ಕೋ ಸಾವಿರಕ್ಕೋ ಒಬ್ಬ ಅವರ ಕೃತಿ ಹಾಗೂ ಆದರ್ಶಗಳನ್ನು ಕೊಂಚ ವಿವರವಾಗಿ ಹೇಳಬಲ್ಲನೆಂದರೆ ಅದೂ ಸ್ವಲ್ಪ ಆಶ್ಚರ್ಯದ ಮಾತೇ. ಆದರೆ, ರಾಮ-ಕೃಷ್ಣ- ಶಿವ ಈ ಮೂರು ಹೆಸರುಗಳು, ಮಹತ್ತಮವಾದ ನಮ್ಮ ಈ ಮೂರು ಪುರಾಣಕಲ್ಪನೆಗಳು, ಎಲ್ಲರಿಗೂ ಗೊತ್ತು; ಅವರು ಏನೇನು ಮಾಡಿದರೆಂಬುದು ಮಸುಕುಮಸುಕಾಗಿಯಾದರೂ ಸಾಮಾನ್ಯ ಎಲ್ಲರಿಗೆ, ಕನಿಷ್ಠ ಮೂವರಲ್ಲಿ ಇಬ್ಬರಿಗೆ, ಪರಿಚಿತವಾಗಿದೆ; ಮತ್ತು, ಹತ್ತಕ್ಕೆ ಒಬ್ಬನಾದರೂ ಅವರ ಕೃತಿ ಮತ್ತು ಆದರ್ಶಗಳ ವಿವರ ತಿಳಿದಿರುತ್ತಾನೆ- ಯಾವ ಹೊತ್ತಿನಲ್ಲಿ ಏನು ಮಾಡಿದರು, ಯಾವ ಸಂದರ್ಭದಲ್ಲಿ ಹೇಗೆ ನಡೆದುಕೊಂಡರು ಮುಂತಾಗಿ. ಇಂಡಿಯಾದ ಮಹಾಪುರಾಣಗಳ ಇಂಥ ನಾಯಕಮಣಿಗಳು ಎಂದಾದರೂ ವಾಸ್ತವವಾಗಿ ಇದ್ದುದುಂಟೆ ಅಥವಾ ಇಲ್ಲವೆ ಎಂಬ ಪ್ರಶ್ನೆ ದೇಶದ ಸಾಂಸ್ಕೃತಿಕ ಇತಿಹಾಸಕ್ಕೆ ತುಲನಾತ್ಮಕವಾಗಿ ಅಷ್ಟೇನೂ ಅಗತ್ಯವಾಗಿಲ್ಲದ ವಿವರ; ಭಾರತೀಯ ಅಂತಶ್ಚೇತನದ ಇತಿಹಾಸಕ್ಕೆ ಹಾಗೂ ಭಾರತೀಯ ಇತಿಹಾಸದ ಅಂತಶ್ಚೇತನಕ್ಕೆ ಈ ಪ್ರಶ್ನೆ ಅಸಂಬದ್ಧ, ನಿಶ್ಚಯವಾಗಿ.

ರಾಮ ಮತ್ತು ಕೃಷ್ಣ ಪ್ರಾಯಶಃ ಇತಿಹಾಸದ ವ್ಯಕ್ತಿಗಳೇ. ಶಿವ ಕೂಡ ಅಂಥ ದೊಡ್ಡ ಗಂಗಾನದಿಗೆ ಕಾಲುವೆಯನ್ನಗೆದ ಒಬ್ಬ ನಿರ್ಮಾಣತಜ್ಞನಿರಬಹುದು, ಮತ್ತು ಅದೇ ತರ್ಕದಂತೆ, ಅವನೊಬ್ಬ ದೊಡ್ಡ ಪಶುವೈದ್ಯನೋ ಮಹಾಪ್ರೇಮಿಯೋ ಅನುಪಮ ದಾನಶೀಲನೋ ಇದ್ದಿರಬಹುದು. ಇವರನ್ನೆಲ್ಲ ಇತಿಹಾಸದ ಪುಟಕ್ಕೆ

ಹರಿದು ಅಂಟಿಸಲೆತ್ನಿಸುವುದು- ವಾಸ್ತವಿಕವಾಗಿ ಹಾಗೆ ಮಾಡುವುದುಂಟು- ಹಾಸ್ಯಾಸ್ಪದ ಸಾಹಸವಾದೀತು. ಅವರ ಬದುಕಿನ ಕಥೆಗಳನ್ನು ಸಂಭಾವ್ಯತೆಯ ಸಾಮಾನ್ಯ ಮಟ್ಟಗಳಿಂದ ಅಳೆಯಬಾರದು. ಈ ಕಥೆ ದೇಶದಲ್ಲಿ ಮುಂದಿನ ಐವತ್ತು ಶತಮಾನಗಳ, ಏಕೆ ಬಹುಶಃ ನೂರು ಶತಮಾನಗಳ, ಪೀಳಿಗೆಗಳ ಮನಸ್ಸಿನ ಮೇಲೆ ಕೆತ್ತಿದಂತಿತ್ತು-ಎಂಬ ಸಂಗತಿಗಿಂತ ಹೆಚ್ಚಿನ ಸಂಭಾವ್ಯತೆ ಮತ್ತಾವುದಿದ್ದೀತು? ಈ ಕಥೆ ತೆರಪಿಲ್ಲದಂತೆ ಏಕ ಪ್ರಕಾರ ಪುನರುಕ್ತವಾಗುತ್ತಲೇ ಬಂದಿದೆ. ಹಾಗೆ ಪುನಶ್ಚರಣೆ ಮಾಡುವಲ್ಲಿ ದೊಡ್ಡ ದೊಡ್ಡ ಗಾಯಕರು, ಕವಿಗಳು ಅದನ್ನು ಮತ್ತೂ ನಯಗೊಳಿಸಲು, ಆಳವಾಗಿಸಲು ತಮ್ಮ ಪ್ರತಿಭೆಯನ್ನು ಬಳಸಿದರು. ಹಾಗೇ, ಅದಕ್ಕೂ ಹೆಚ್ಚಿನದಾಗಿ, ಅಸಂಖ್ಯವಾದ ಜನಕೋಟಿಯ ಅದಮ್ಯ ಒತ್ತಡಗಳು ತಮ್ಮದೇ ಆದ ಹರ್ಷ ಶೋಕಗಳನ್ನು ರೂಪಾಂತರಗೊಳಿಸಿ ಅವಕ್ಕೆ ಕೂಡಿಸಿಕೊಟ್ಟವು.

ಯಾವುದೇ ಜನರ ಪುರಾಣಕಥೆಗಳು ಅವರ ಕನಸು ಮತ್ತು ಕೋಟಲೆಗಳ ದಾಖಲೆಯಾಗಿರುತ್ತವೆ; ಅವರು ಅತ್ಯಂತ ಆಳದಲ್ಲಿ ಸವಿದ, ಅತ್ಯಮೂಲ್ಯವೆಂದು ತಿಳಿದ ಆಸೆಗಳು, ಹಂಬಲಗಳು, ಅಲ್ಲದೆ, ಬದುಕಿನ ಸರಕಾಗಿರುವ ಮತ್ತು ಬದುಕಿನ ಸ್ಥಳಿಕ ಹಾಗೂ ಲೌಕಿಕ ಇತಿಹಾಸದ ಸರಕಾಗಿರುವ, ವಿಮೋಚನೆಯೇ ಇಲ್ಲದ ವಿಷಾದ-ಇವುಗಳ ಅಳಿಸಲಾಗದಂಥ ದಾಖಲೆ ರಾಮ, ಕೃಷ್ಣ ಮತ್ತು ಶಿವ-ಇವು ಇಂಡಿಯಾದ ಮಹತ್ ಸ್ವಪ್ನಗಳು, ಮಹತ್ ದುಃಖಗಳು. ಅವರ ಕಥೆಗಳಲ್ಲಿ ಏಕಸೂತ್ರತೆಯನ್ನು ಹೊಂದಿಸುವುದಾಗಲಿ ಅಥವಾ ಅವರ ಜೀವನದೊಳಕ್ಕೆ ಊನವಿಲ್ಲದ ನೀತಿಮಾಲಿಕೆಯನ್ನು ಹೆಣೆಯುವುದಾಗಲಿ ಮತ್ತು ಅಲ್ಲಿ ಸುಳ್ಳೆಂಬು, ಅಸಂಭವವೆಂದು ತೋರುವುದನ್ನೆಲ್ಲ ಕಳಚಿ ಎಸೆಯುವುದಾಗಲಿ, ಜೀವನದಲ್ಲಿ ತರ್ಕವೊಂದನ್ನು ಬಿಟ್ಟು ಉಳಿದೆಲ್ಲವನ್ನು ದೋಚಿ ಹೊರನಿಲ್ಲಿಸಿದಂಥ ಯತ್ನವಾದೀತು. ರಾಮ, ಶಿವ ಮತ್ತು ಕೃಷ್ಣರು ಎಂದೂ ಬದುಕಿರಲಿಲ್ಲ ಎಂಬುದನ್ನು, ಅಥವಾ ಇದ್ದರೂ ಕಥೆಗಳಲ್ಲಿ ಕಾಣುವಂತೆ ಇರಲಿಲ್ಲ ಎಂಬುದನ್ನಾದರೂ ನಾವು ನೇರ ಒಪ್ಪಿಕೊಳ್ಳೋಣ. ಅವರ ಬದುಕಿನ ದಾಖಲೆಗಳು ಸುಳ್ಳು ಅಥವಾ ಅಸಂಭಾವ್ಯ ಮತ್ತು ಕೆಲವು ಸಂದರ್ಭಗಳಲ್ಲಿ ಅವು ತರ್ಕಶುದ್ಧ ಅರ್ಥವನ್ನೇ ಕೊಡದಷ್ಟು ಅಸಂಬದ್ಧವಾಗಿವೆ-ಒಪ್ಪಿಕೊಳ್ಳೋಣ. ಆದರೆ ಹೀಗೆ ಒಪ್ಪಿಕೊಳ್ಳುವುದಕ್ಕೂ ಆ ಕಲ್ಪನೆಗಳಿಗೂ ಯಾವ ಸಂಬಂಧವೂ ಇಲ್ಲ. ಭಾರತೀಯ ಸತ್ವದ ಇತಿಹಾಸಕ್ಕೆ ಈ ಮೂರು ಹೆಸರುಗಳು, ಅಂಥ ಹೆಸರುಗಳ ಕಿಕ್ಕಿರಿದ ಸಾಲು ಮೆರವಣಿಗೆಯಲ್ಲೂ, ಸತ್ಯವಾದ, ಮಹತ್ತಮವಾದ ಉಸಿರುಗಳಾಗಿವೆ. ಇತರ ಎಲ್ಲವುಗಳನ್ನೂ ಮಸುಳಿಸಿ ನಿಂತುಬಿಟ್ಟಿವೆ. ಸುಳ್ಳು ಅಥವಾ ಅಸಂಭವ ಎನ್ನಲು ಸಾಧ್ಯವೇ ಆಗದ ಹಾಗೆ ಇತಿಹಾಸವೆನ್ನುವುದು ಕಲ್ಲಿನ ಮೇಲೋ, ಲೋಹದ ಮೇಲೋ ಬೇಕೆಂದು

ಕೆತ್ತಿರುವಂಥದು. ಆದರೆ ಇವರ ಕಥೆ ಜನರ ಮನಸ್ಸಿನಲ್ಲಿ ಬೇಕೆನ್ನದೆಯೇ ಕೊರೆದುಕೊಂಡಿರುವಂಥದು.

ಇವೊತ್ತಿಗೂ ಇಂಡಿಯಾದ ಬೆಟ್ಟಗುಡ್ಡಗಳೆಲ್ಲ ದೇವಾನುದೇವತೆಗಳ ನಿವಾಸಗಳೇ ಆಗಿದ್ದಾವೆ. ಈ ದೇವವರ್ಗ ಒಮ್ಮೊಮ್ಮೆ ಮನುಷ್ಯ ಗಾತ್ರದಲ್ಲಿ ಅವತರಿಸಿ ಇಲ್ಲಿನ ಬಯಲುಗಳಲ್ಲಿ ಬದುಕಿದ್ದೂ ಉಂಟು, ಮಹಾನದಿಗಳಲ್ಲಿನ ಸರ್ಪಗಳನ್ನು ಕೊಲ್ಲುತ್ತಲೋ, ಪಳಗಿಸುತ್ತಲೋ. ಅಳಿಲುಗಳೂ ಭಕ್ತಿ ತುಂಬಿ ಸಮುದ್ರಕ್ಕೆ ಸೇತುವೆ ಕಟ್ಟಿದ್ದುಂಟು. ಜೂಡಿಸಂ, ಕ್ರಿಶ್ಚಿಯಾನಿಟಿ ಮತ್ತು ಇಸ್ಲಾಂ–ಈ ಮೊದಲಾದ ಮರುಭೂಮಿಯ 'ವಿಷಯಾತೀತ ದರ್ಶನ'ಗಳು ಎಲ್ಲಕ್ಕೂ ಆಚೆ, ಎಲ್ಲಕ್ಕೂ ಮೇಲೆ ಇರುವ ಏಕೈಕವೊಂದನ್ನು ಬಿಟ್ಟು ಉಳಿದೆಲ್ಲ ದೇವರುಗಳನ್ನೂ ನಾಶಪಡಿಸಿಬಿಟ್ಟಿವೆ; ಮತ್ತು ಅವರ ಬೆಟ್ಟಗುಡ್ಡಗಳೂ, ಬಯಲುಗಳೂ, ನದಿಗಳೂ ಪುರಾಣದ ಅಲಂಕರಣಗಳಿಲ್ಲದೆ ನಗ್ನವಾಗಿ ಉಳಿದಿವೆ. ಒಲಂಪಸ್ ಪರ್ವತದ ದೇವತೆಗಳ ಬಗ್ಗೆ ಪುರಾತತ್ವಜ್ಞರೋ ಇಲ್ಲವೆ ವಿಶ್ವವಿದ್ಯಾಲಯದಲ್ಲಿ ಕಲಿತ ಜನರೋ ಮಾತ್ರ ಬಲ್ಲರು. ಆದರೆ ಇಂಡಿಯಾದಲ್ಲಿ ಅರಣ್ಯಗಳ ಬಗ್ಗೆಯಾಗಲಿ, ಗಿಡಮರಗಳ ಮೇಲೆ, ಬೆಟ್ಟಗಳ ಮೇಲೆ, ನೀರಿನ ಮೇಲೆ, ನೆಲದ ಮೇಲೆ, ಸವಿಗರೆದು ನಾಚಿಕೆಯ ನವಿರೇಳಿಸುತ್ತ ತುದಿಯಿಲ್ಲದ ಆಟದಲ್ಲಿ ತೊಡಗಿದಂಥ ಚಂದ್ರನ ಬಗ್ಗೆಯಾಗಲಿ ಬೆಳೆದಿರುವ ನೈಸರ್ಗಿಕ ವಿಶ್ವಾಸ ದೇವರುಗಳನ್ನೂ, ಅವರ ಮಾನವೀಯ ಕಥೆಗಳನ್ನೂ ಜೀವಂತವಾಗಿಟ್ಟಿದೆ, ಶ್ರೀಮಂತಗೊಳಿಸುತ್ತ ಬಂದಿದೆ. ಪುರಾಣಗಳು ನೀತಿಕಥೆಗಳಲ್ಲ. ನೀತಿಕಥೆ ಗುರುವಾಗಿ ಉಪದೇಶ ಮಾಡುವಂಥದ್ದು. ಯಾವುದೇ ನೀತಿಕಥೆ ರಂಜನೆಯನ್ನು ಉಂಟುಮಾಡುವುದಿದ್ದಲ್ಲಿ ಅದು ಪ್ರಾಸಂಗಿಕ; ಸಂದರ್ಭವಶದಿಂದ ಅರಳಿಕೊಂಡ ಕುಸುರು ಅಷ್ಟೆ. ಅದರ ಮುಖ್ಯ ಉದ್ದೇಶ ಉಪದೇಶವೇ. ಪುರಾಣ ಪ್ರಾಸಂಗಿಕವಾಗಿ ಉಪದೇಶವನ್ನೂ ಮಾಡಬಹುದು, ಉಪಾಂಗವಾಗಿ ರಂಜನೆಯನ್ನೂ ಕೊಟ್ಟೀತು. ಆದರೆ ಅದರ ಮುಖ್ಯ ಉದ್ದೇಶ ನೀತಿಯೂ ಅಲ್ಲ, ರಂಜನೆಯೂ ಅಲ್ಲ. 'ಸಣ್ಣಕಥೆ'ಯನ್ನು ತೆಗೆದುಕೊಳ್ಳಿ, ಅದು ರಂಜನೆಯುಂಟುಮಾಡುತ್ತದೆ. ಬಾಲ್ಜಾಕ್, ಮೊಪಾಸಾ, ಒ ಹೆನ್ರಿ–ಇವರು ತಮ್ಮ ಸಣ್ಣ ಕಥೆಗಳಿಂದ ಅಷ್ಟು ಚೆನ್ನಾಗಿ ರಂಜನೆ ಮಾಡಿದ್ದಾರೆ. ಅವುಗಳಲ್ಲಿ ಕೆಲವು ಅವರ ಜನಗಳಲ್ಲಿ ಹತ್ತರಲ್ಲೊಬ್ಬನಿಗಾದರೂ ತಮ್ಮ ಶ್ರೀಮಂತ ವಿವರಗಳ ಸಮೇತ ನೆನಪಿನಲ್ಲುಳಿದಿವೆ. ಪರಿಣಾಮ, ಆ ಹತ್ತರಲ್ಲೊಬ್ಬನ ಬದುಕು ನಿಸ್ಸಂಶಯವಾಗಿ ಆಳ–ಹರಹುಗಳನ್ನು ಪಡೆದಿದೆ. ಅದಕ್ಕಿಂತ ದೊಡ್ಡದಾದ ಕಾದಂಬರಿ ಕೂಡ ರಂಜನೆಯುಂಟುಮಾಡುತ್ತದೆ. ಆದರೆ ಅದರ ಪರಿಣಾಮ ಮಾತ್ರ ಇಷ್ಟು ಸ್ಪಷ್ಟ ತಿಳಿಯುವಂಥದಲ್ಲ–ಬಹುಶಃ ಹೆಚ್ಚು ಆಳವಾದ್ದು ಎನಿಸಿದರೂ.

ಪುರಾಣವೆಂಬುದು ತುದಿಯೇ ಇಲ್ಲವೇನೋ ಎನ್ನುವಂಥ ಕಾದಂಬರಿ, ಚಕಚಕಿಸುವ ಅಸಂಖ್ಯ ಕಥೆಗಳನ್ನು ಖಚಿತಗೊಳಿಸಿ ಕಟ್ಟಿದ್ದು. ಅದು ಉಪದೇಶಿಸಿದರೆ ಅಥವಾ ರಂಜಿಸಿದರೆ ಉಪಾಂಗವಾಗಿ, ಅಷ್ಟೆ. ಹೆಚ್ಚಾಗಿ ಅದು ಸೂರ್ಯನ ಹಾಗೆ, ಬೆಟ್ಟಗಳ ಹಾಗೆ, ಫಲವೃಕ್ಷಗಳ ಹಾಗೆ-ನಮ್ಮ ಬದುಕಿನ ದೊಡ್ಡ ಭಾಗವೇ. ಮಾವು ಹಲಸುಗಳು ನಮ್ಮ ದೇಹಧಾತುವೇ ಆಗುತ್ತವೆ; ನಮ್ಮ ರಕ್ತಮಾಂಸಗಳಲ್ಲೆ ಬೆರೆತು ಕೊಳ್ಳುತ್ತವೆ. ಪುರಾಣ ಯಾವುದೇ ಜನಾಂಗದ ದೇಹಧಾತುವಿನ ಭಾಗ; ರಕ್ತಗತ ಮಾಂಸಗತವಾಗುವಂಥದು. ಪುರಾಣಕಲ್ಪನೆಗಳನ್ನು ಉದಾತ್ತೀಕರಣದ ಮಾದರಿಗಳಾದ ಮಹಾವ್ಯಕ್ತಿಗಳ ಜೀವನ ಎಂಬಂತೆ ಅಳೆಯ ಹೊರಡುವುದು ಹಾಸ್ಯಾಸ್ಪದವಾದ ಬೆಪ್ಪು ಆದೀತು. ರಾಮ-ಕೃಷ್ಣ-ಶಿವರನ್ನು ಸಚ್ಚಾರಿತ್ರ್ಯಕ್ಕೋ ಸಚ್ಚಿಂತನೆಗೋ ಮಾದರಿಗಳೆಂದು ಜನ ಪ್ರಯತ್ನಪೂರ್ವಕ ಪರಿವರ್ತಿಸಲೆತ್ನಿಸಿದರೆ ಅದರಿಂದ ಅವರನ್ನು ಕೆಳಮಟ್ಟಕ್ಕೇ ಎಳೆದಂತಾಗುತ್ತದೆ. ಅವರು ಇಡೀ ಇಂಡಿಯಾದ ದೇಹಧಾತು, ರಕ್ತ, ಮಾಂಸ. ಅವರ ಭಾಷಣ ಸಂಭಾಷಣಗಳು, ಅವರ ಕೃತಿಚಾರಿತ್ರ್ಯಗಳು, ಯಾವೊಂದು ಕಾರ್ಯವಸರದಲ್ಲಿ ಅವರ ಭ್ರೂವಿಕ್ಷೇಪಣದ ಅತಿನಿರ್ದಿಷ್ಟ ಶೈಲಿ-ಇವೆಲ್ಲ ಹೆಜ್ಜೆ ಹೆಜ್ಜೆಯಾಗಿ ಅತಿ ಸತ್ಯಸೂಕ್ಷ್ಮವಾಗಿ ವರ್ಣಿತವಾಗಿವೆ. ಮತ್ತು, ಅವರ ಈ ನಿರ್ದಿಷ್ಟ ವಿಭಾವಗಳು, ಯಾವೊಂದು ಸಂದರ್ಭದಲ್ಲಿ ಅವರು ಆಡಿದ ಅದೇ ಮಾತು-ಇವೆಲ್ಲ ಇಂಡಿಯಾದ ಬದುಕಿನ ಚಿರಪರಿಚಿತ ಭಾಗಗಳಾಗಿವೆ. ಅವು ಒಂದೊಂದೂ ವಾಸ್ತವವಾಗಿ ನಮ್ಮ ಜನಕ್ಕೆ ಆಧಾರಕೋಶವಾಗಿವೆ; ಅಳತೆಗೋಲಾಗಿವೆ. ಇದು ಎಚ್ಚರವಾದ ಮನಸ್ಸಿನ ಕ್ರಿಯೆ ಮಾತ್ರವಲ್ಲ; ರಕ್ತದಲ್ಲಿ ಕಾಣುವ ದ್ರವ್ಯಮಿಶ್ರಣ ಆ ದೇಹದ ಮುಂದಿನ ಆರೋಗ್ಯ ಅಥವಾ ಅನಾರೋಗ್ಯದ ವಿವಿಧ ಹಂತಗಳನ್ನು ಹೇಗೆ ನಿರ್ದೇಶಿಸುತ್ತದೋ, ಸುಮಾರಾಗಿ ಹಾಗೆ, ಇವು ನಮ್ಮ ಜೀವದ್ರವ್ಯಗಳೇ ಆಗಿ ಬದುಕನ್ನು ನಿರ್ದೇಶಿಸುತ್ತವೆ.

ಮಹಾಪುರಾಣವೆನ್ನುವುದು ಒಂದು ರೀತಿಯ ಸಂಕೀರ್ಣ ಸೃಷ್ಟಿ: ಮಹಾಕಾವ್ಯ ಮತ್ತು ನೀತಿಕಥೆ, ಕಥೆ ಮತ್ತು ಕಾದಂಬರಿ, ನಾಟಕ ಮತ್ತು ಕವಿತೆ-ಇವುಗಳೆಲ್ಲ ಕೂಡಿ ಸೃಷ್ಟಿಸುವಂಥದು; ತನ್ನ ಜನರಲ್ಲಿ ಪ್ರತಿಯೊಬ್ಬರ ಮನಸ್ಸನ್ನೂ ಹೊಕ್ಕು ಸ್ಥಾಪಿತವಾಗಬಲ್ಲ, ಅಂಥ ಶಕ್ತಿಯ, ಪರಮಾಣುಗಮನ ಉಳ್ಳದ್ದು. ಪುರಾಣಗಳು ಅನಕ್ಷರಸ್ಥರನ್ನೂ ಸಂಸ್ಕೃತಗೊಳಿಸಬಲ್ಲವು, ಮತ್ತು ಹಾಗೇ ಅನುಭವದ ರೂಪ ತೀವ್ರ ಬದಲಾಗುತ್ತಿರುವಾಗ, ಜನರ ಬದುಕು ನಿಂತ ನೀರಾಗಿ ನಾರುವಂತೆಯೂ ಮಾಡಿಬಿಡಬಲ್ಲವು. ಈ ಪುರಾಣಗಳು ವಿಶ್ವಕಥೆಯನ್ನು ಹೇಳುವಂಥವಾಗಿಯೂ ಸ್ಥಳದ ಬಣ್ಣಗಳನ್ನು ಸುತ್ತಿಕೊಂಡಿವೆ ಎಂಬುದು ಸ್ವಲ್ಪ ಶೋಚನೀಯವಾದ ವಿಚಾರವೇ.

ಇಡೀ ಮಾನವಕುಲವೆಲ್ಲ ಒಂದೇ ಕಾಲದಲ್ಲಿ, ಒಂದೇ ಸ್ಥಳದಲ್ಲಿ ಬದುಕಲಾರದಲ್ಲ ಎಂಬ ವಿಷಾದದಂಥದೇ ವಿಷಾದ ಇದು ಕೂಡ, ಸುಮಾರಾಗಿ. ಮಾನವಕುಲ ಬೇರೆಬೇರೆ ಕೇಂದ್ರಗಳಲ್ಲಿ ಹರಿಹಂಚಿ ಬದುಕಬೇಕಾಗಿದೆ ಮತ್ತು ಈ ವಿವಿಧ ಸ್ಥಳಗಳಲ್ಲಿ ಒಂದೊಂದಕ್ಕೂ ಅದರದ್ದೇ ಆದ ನದಿಗಳಿವೆ, ಬೆಟ್ಟಗಳಿವೆ, ಪಚ್ಚೆಯ ನೀಲದ ಕಡಲುಗಳಿವೆ. ವಿಶ್ವವು ಸ್ಥಳದ ಮುಖದಲ್ಲೆ ಮಾತಾಡಬೇಕಾಗಿದೆ. ಗಂಡುಹೆಣ್ಣುಗಳ, ಅವರ ಮಕ್ಕಳು-ಮರಿಗಳ ಶಿಕ್ಷಣದಲ್ಲಿ ಇದೊಂದು ಸತತ ಸಮಸ್ಯೆಯೇ ಆಗಿ ಉಳಿಯುತ್ತದೆ. ಅಲ್ಲಲ್ಲಿನ ಸ್ಥಲಿಕವರ್ಣಗಳನ್ನು ಸ್ವಚ್ಛಗೊಳಿಸಿ, ವಿಶ್ವಕವನ್ನು ಅನಾವೃತಗೊಳಿಸುವ ಕ್ರಿಯೆಯಲ್ಲಿ, ಆವಾಹಿತ ಭಾವದ್ರವ್ಯಗಳು ಮಾಯ ವಾಗಿಬಿಡುತ್ತವೆ; ರಕ್ತದ ಅರ್ಕಹೀರಿ ಅದರ ನೀರು ನೆಳಲನ್ನಷ್ಟೆ ಉಳಿಸಿದಂತಾಗುತ್ತದೆ.

ತಂದೆ ಎನ್ನಿಸಿಕೊಂಡ ರೈನ್, ತಾಯಿಯಾದ ಗಂಗಾ, ಭವ್ಯ ಅಮೆಝೂನ್-ಇವೆಲ್ಲ ಒಂದೇ ನೀರಿನ ಕವಲುಗಳಾದರೂ ಅವುಗಳ ಸುತ್ತ ಬೆಳೆದ ಕಥೆಗಳು ಅಷ್ಟೇ ಬೇರೆಬೇರೆಯಾಗಿವೆ. ಶಬ್ದಗಳು ಕೂಡ, ಅವು ಸೂಚಿಸಲು ಅಥವಾ ಹೆಸರಿಸಲು ನಿರ್ದಿಷ್ಟವಾಗಿರುವ ಅರ್ಥ ಯಾವುದುಂಟೋ ಅದನ್ನೇ ಅಲ್ಲದೆ ತಮ್ಮದೇ ಆದ ಧ್ವನ್ಯಾರ್ಥಗಳನ್ನು ಹೊಂದಿವೆ. ಆಯಾ ಸ್ಥಳದ ಹಾಗೂ ಅಲ್ಲಿನ ಇತಿಹಾಸದ ದೀರ್ಘ ಸಾಹಚರ್ಯದಿಂದ ಮಾತ್ರವೇ ಶಬ್ದಗಳ ಪೂರ್ಣಾರ್ಥವನ್ನು-ಅದರ ರಸಗಂಧ ಸೂಕ್ಷ್ಮ ಸಮೇತವಾಗಿ-ಅರಿಯಲು ಸಾಧ್ಯ. ಗಂಗಾ ಬೆಟ್ಟಕಣಿವೆಗಳನ್ನು ಹಾವಿನಂತೆ ಬಳಸಿ, ನವಿಲು ಗರಿಗಳಂತೆ ಅಲೆಯಾಡಿಸುತ್ತಾಳೆ. ಭಾರಾಲಸ ನಿತಂಬಿನಿಯಂಥ ಮೆಲುನಡಿಗೆ ಅವಳದ್ದು. ವೀಣೆ ಸ್ಪಂದಿಸಿದಂತೆ ಆಕೆಯ ದನಿ ರೇಶಿಮೆನುಣುಪು. ಆ ಹೆಸರಿನ ಅಕ್ಷರಗಳು ಕೂಡ ಸಂಗೀತವನ್ನೆ ಧ್ವನಿಸುತ್ತವೆ. ಗಾಂಧಾರವನ್ನು ನೆನಪಿಸಿ ಕೊಳ್ಳಿ. ಇಂಡಿಯಾದ ಶಿಲ್ಪಕಲೆಯಲ್ಲಿ ಮೊಸಳೆಯನ್ನೇರಿದ ಗಂಗಾ, ಆಮೆಯನ್ನೇರಿದ ಆಕೆಯ ತಂಗಿ ಯಮುನಾ-ಇವು ಸ್ಥಿರ ತಥ್ಯದ ಅವಳಿ ಚಿತ್ರಗಳಾಗಿವೆ. ಹೆಸರಿಲ್ಲದ ಕೆಲವನ್ನು ಬಿಟ್ಟು ಹೇಳುವುದಾದರೆ, ಇಂಡಿಯಾದ ಶಿಲಾಕನ್ಯೆಯರಲ್ಲಿ ಇವೇ ಅತ್ಯಂತ ಸುಂದರವಾದುವು, ನಿಸ್ಸಂದೇಹವಾಗಿ. ಯಾರೊಬ್ಬರೂ ಗಂಗೆ-ಯಮುನೆಯರ ನಡುವೆ ಅಚ್ಚರಿಗೊಂಡು ನಿಲ್ಲುವುದೇ ಸರಿ. ಇಬ್ಬರಲ್ಲೂ ಅಂಥ ಹೋಲಿಕೆ ಮತ್ತು ಕಿಂಚಿತ್ ಮಾತ್ರ ವಿಭಿನ್ನತೆ-ಎರಡರ ನಡುವೆ ಆಯ್ಕೆ ಬಗೆಹರಿಯದೆ ವಿಸ್ಮಯದಿಂದ ಅಂಟಿ ನಿಲ್ಲುವಂತಾಗುತ್ತದೆ. ವಿಶ್ವದ ಮುಖವಾಗಿ ಮಾತಾಡುವ ಸ್ಥಲಿಕ ಹಾಗಿರುತ್ತದೆ. ಸ್ಥಲಿಕವರ್ಣಗಳಲ್ಲಿ ವಿಶ್ವಕ ಮಿಲನಗೊಳ್ಳುವುದು ಕಾಣುವಂತೆ ಮಾಡಲು ಹಾದಿಯುಂಟು : ಅದು, ಈ ಭೂಮಿಯ ಎಲ್ಲ ಜನಗಳ ಮಹತ್ತಾದ ಪುರಾಣಗಳನ್ನೂ ಕಥೆಗಳನ್ನೂ ಒಟ್ಟುಹಾಕಿ ಎಲ್ಲರೂ ಹೇಳುವುದು, ಅವುಗಳಲ್ಲಿ ಅರ್ಥವನ್ನೋ ಪಾಠವನ್ನೋ ತುಂಬಲು ಪ್ರಯತ್ನಿಸಿ, ಇದ್ದುದಿದ್ದಂತೆ ಚಂದವಾಗಿ ಹೇಳುವುದು.

ಪ್ರಪಂಚ ಸುತ್ತುವವರು ಮಾನವಕುಲಕ್ಕೆ ಸಲ್ಲಿಸಬೇಕಾದ ಜವಾಬ್ದಾರಿ ಇದು-ಭೂಮಿಯ ತುಂಬ ಬದುಕಿ ಬೆಳಗುವ ಕಲ್ಪನಾದ್ಭುತಗಳನ್ನು ಜನಕ್ಕೆ ವರ್ಣಿಸಿ ಹೇಳುವುದು. ಉದಾಹರಣೆಗೆ, ಹವಾಯಿ ಮದಾಮ್ ಪೀಲೆ: ತನ್ನನ್ನು ನೋಡುವಷ್ಟರಿಂದಲೇ ಯಾವನೊಬ್ಬನನ್ನು ಎರಡು ಮೂರು ದಿನ ಪರ್ಯಂತ ಮತ್ತೇರುವಂತೆ ಮಾಡಿ, ಮುಟ್ಟಲು ಹೋದರೆ ಮೂಕವಾಗಿ ಬಿಡುವ ಮೋಹಿನಿ ಆಕೆ. ನಾವು ಸಿಗರೇಟು ಸೇದುವ ಹಾಗೆ, ತನ್ನ ಅಸಂಖ್ಯ ತೂತುಗಳಿಂದ ಹೊಗೆಯೆಳೆದು ಅನಂತರ ಶತವೇಗದಿಂದ ಗಂಧಕವನ್ನುಗುಳಿ ನಿಲ್ಲುತ್ತಾಳೆ.

ರಾಮ, ಕೃಷ್ಣ, ಶಿವ-ಈ ಮೂವರು ಇಂಡಿಯಾದ ಪೂರ್ಣತ್ವದ ಮೂರು ಮಹತ್ ಸ್ವಪ್ನಗಳು. ಮೂವರೂ ತಂತಮ್ಮದೇ ಹಾದಿಯುಳ್ಳವರು. ರಾಮನದ್ದು ಸೀಮಿತ ವ್ಯಕ್ತಿತ್ವದಲ್ಲಿ ಪೂರ್ಣತೆ, ಕೃಷ್ಣನದ್ದು ಸಮೃದ್ಧ ವ್ಯಕ್ತಿತ್ವದಲ್ಲಿ ಪೂರ್ಣತೆ; ಶಿವನದಾದರೋ ಪ್ರಮಾಣಾತೀತ-ಎಂದರೆ, ಉದ್ದಗಲ, ಎತ್ತರಗಳ ಗಾತ್ರಕಲ್ಪನೆಗೆ ಸಂಬಂಧವೇ ಇಲ್ಲದ, ಗಾತ್ರದ ಮಾನಕ್ಕೆ ಸಿಲುಕದ-ವ್ಯಕ್ತಿತ್ವದಲ್ಲಿ ಪೂರ್ಣತೆ. ಒಂದೊಂದೂ ಪೂರ್ಣವಾದ್ದೇ. ಇವುಗಳಲ್ಲಿ ಒಂದು ಇನ್ನೊಂದಕ್ಕಿಂತ ಹೆಚ್ಚು ಅಥವಾ ಕಮ್ಮಿ ಎಂಬ ಪ್ರಶ್ನೆಯೇ ಇಲ್ಲ. ಪೂರ್ಣಕ್ಕೆ ಹೆಚ್ಚು ಕಮ್ಮಿಯ ಮಾತೆಲ್ಲಿ? ಅದರಲ್ಲಿರುವುದು ಗುಣದ ಜಾತಿಭೇದ, ರೀತಿಭೇದಗಳು, ಅಷ್ಟೆ. ಇವುಗಳಲ್ಲಿ ಒಬ್ಬೊಬ್ಬನೂ ತಂತನ್ನ ರುಚಿಗೆ ಸಮನಾಗಿ ಆಯ್ದುಕೊಳ್ಳಬಹುದು. ಅದಕ್ಕೆ ಹೊಂದುವಂಥ ರೀತಿಯ ಪೂರ್ಣತೆಯನ್ನು ಆಯ್ದುಕೊಳ್ಳಬಹುದು; ಅಥವಾ ಒಬ್ಬೊಬ್ಬನೂ ತನ್ನ ಸ್ವಂತ ಬದುಕಿನ ನಿಶ್ಚಿತ ಮಜಲಿನಲ್ಲಿ, ಈ ಮೂರೂ ಬಗೆಯ ಪೂರ್ಣತೆಗಳನ್ನು ಒಡಗೂಡಿಕೊಂಡಿರುವುದು ಕೂಡ ಸಾಧ್ಯ: ಸೀಮಿತವ್ಯಕ್ತಿತ್ವ, ಸಮೃದ್ಧ ವ್ಯಕ್ತಿತ್ವ, ಗಾತ್ರಾತೀತ ವ್ಯಕ್ತಿತ್ವ-ಇವೆಲ್ಲ ಒಬ್ಬನಲ್ಲೆ ಒಗ್ಗೂಡಿ ಸಂಭವಿಸ ಬಹುದು. ವಾಸ್ತವವಾಗಿ, ಇಂಡಿಯಾದ ಮಹಾಮಹಾ ಸಂತರುಗಳೆಲ್ಲ ಅಂಥ ಸಮರಸದ ಸಂಭವಕ್ಕೇ ಯತ್ನಪಟ್ಟಿದ್ದಾರೆ; ಅವರು ರಾಮನಲ್ಲಿ ಶಿವನನ್ನೂ, ಶಿವನಲ್ಲಿ ಕೃಷ್ಣನನ್ನೂ ಕಂಡುಕೊಂಡಿದ್ದಾರೆ; ರಾಮನೂ ಯಮುನೆಯ ಮಳಲು ದಂಡೆಯಲ್ಲಿ ಹೋಳಿಯಾಡುವಂತೆ ಮಾಡಿದ್ದಾರೆ. ಜನರ ಪೂರ್ಣತ್ವದ ಕನಸಿನಲ್ಲಿ ಈ ಜಾತಿಭೇದಗಳಿದ್ದೂ ಆ ಭೇದಗಳು ಕೂಡ ಒಂದಕ್ಕೊಂದು ಸಂಬಂಧ ಬೆಸೆದುಕೊಂಡಿವೆ; ಸಂಬಂಧ ಬೆಸೆದಿದ್ದೂ ಕೂಡ ಒಂದೊಂದರ ಅತಿಸ್ಪಷ್ಟ ವೈಶಿಷ್ಟ್ಯ ಮಾಸದೆ ಉಳಿದಿದೆ. ರಾಮಕೃಷ್ಣರು ವಿಷ್ಣುವಿನ ಮನುಷ್ಯಾವತಾರಗಳು, ಭೂಮಿಯ ಮೇಲೆ ಗ್ಲಾನಿ ವೃದ್ಧಿಸಿ ಧರ್ಮ ಕ್ಷಯಿಸುತ್ತಿರುವಾಗ ಬಂದಂಥವರು. ರಾಮ ಭೂಮಿಗೆ ಬಂದದ್ದು ತ್ರೇತಾಯುಗದಲ್ಲಿ; ಆಗಿನ್ನೂ ಧರ್ಮ ಅಷ್ಟು ಕ್ಷಯಿಸಿರಲಿಲ್ಲ. ವಿಷ್ಣುವಿನ ಅಷ್ಟಾಂಶಗಳಿಂದ ಸಂಭೂತನಾದವನು ಅವನು. ಮತ್ತು ಅದಕ್ಕಾಗೇ ಅವನದು

ಸೀಮಿತ ವ್ಯಕ್ತಿತ್ವ. ಕೃಷ್ಣ ಬಂದದ್ದು ದ್ವಾಪರದಲ್ಲಿ, ಧರ್ಮಗ್ಲಾನಿ ತುಂಬ ಹೆಚ್ಚಿದಾಗ. ಆತ ವಿಷ್ಣುವಿನ ಷೋಡಶಾಂಶಗಳಿಂದ ಕೂಡಿದವನು. ಅಂತೆಯೇ ಅವನದು ಸಮುದ್ರಸಮವಾದ ತುಂಬು ವ್ಯಕ್ತಿತ್ವ, ಸಮೃದ್ಧ ವ್ಯಕ್ತಿತ್ವ. ವಿಷ್ಣು ಕೃಷ್ಣಾವತಾರ ತಾಳಿ ಭೂಮಿಗೆ ಬಂದಾಗ ದೇವಲೋಕದ ಅವನ ಪೂಜ್ಯಪೀಠ ಬರಿದಾಗಿತ್ತು. ಆದರೆ ರಾಮಾವತಾರದಲ್ಲಿ ವಿಷ್ಣುವಿನ ಅರ್ಧಾಂಶ ಭೂಮಿಯ ಮೇಲಿದ್ದರೆ, ಅರ್ಧಾಂಶ ದೇವಲೋಕದಲ್ಲೆ ಉಳಿದಿತ್ತು.

ಈ ಸೀಮಿತ ಹಾಗೂ ಸಮೃದ್ಧ ವ್ಯಕ್ತಿತ್ವಗಳ ಬಗ್ಗೆ ಎರಡು ಶ್ರೀಮಂತ ಕಥೆಗಳಿವೆ. ರಾಮ ಮೆಚ್ಚಿ ಮದುವೆಯಾದ್ದು ಒಬ್ಬಳೇ ಹೆಣ್ಣನ್ನು ಮತ್ತು ತನ್ನ ಜೀವನದುದ್ದಕ್ಕೂ ಆತ ಬೇರೊಂದು ಹೆಣ್ಣಿನ ಕಡೆ ಕಣ್ಣೆತ್ತಿ ಕೂಡ ನೋಡಲಿಲ್ಲ. ಸೀತೆಯ ಕಥೆ ಬಹ್ವಂಶಗಳಲ್ಲಿ ರಾಮನ ಕಥೆಯೇ. ಆಕೆಯ ವಿವಾಹ, ಅಪಹರಣ, ಬಂಧನ, ಬಿಡುಗಡೆ ಮತ್ತು ಕೊನೆಯಲ್ಲಿ ಆಕೆ ತನ್ನ ತಾಯಿಯಾದ ಭೂಮಿಯ ಗರ್ಭದೊಳಕ್ಕೆ ಅಂತರ್ಧಾನಳಾಗುವುದು-ಇವುಗಳ ಸುತ್ತ ರಾಮನ ಕೃತಿಗಳೆಲ್ಲ ಹೆಣೆದುಕೊಂಡಿವೆ. ಸೀತೆಯ ಅಪಹರಣವಾದಾಗ ರಾಮ ಶೋಕತಪ್ತನಾದ. ಆತ ಆಕ್ರಂದನ ಮಾಡಿದ, ಮರಗಳನ್ನೂ ಕಲ್ಲುಗಳನ್ನೂ ಯಾಚಿಸಿ ಕೇಳಿದ-ಸೀತೆಯನ್ನು ಕಂಡಿರ ಎಂದು. ಚಂದ್ರ ನಕ್ಕ. ಸಾವಿರ ಸಾವಿರ ವರ್ಷಗಳ ತನಕ ಚಂದ್ರನ ಆ ನಗುವನ್ನು ವಿಷ್ಣು ನೆನಪಿಸಿಕೊಳ್ಳುತ್ತಿದ್ದನೇನೋ. ಮುಂದೆ ಆತ ಕೃಷ್ಣನಾಗಿ ಮತ್ತೆ ಭೂಮಿಗೆ ಬಂದಾಗ ಆತನ ಪ್ರೇಯಸಿಯರು ಅಸಂಖ್ಯರಿದ್ದರು. ಅವನೊಮ್ಮೆ ನಡುರಾತ್ರಿಯಲ್ಲಿ ತನ್ನ ಪ್ರೇಯಸಿಯರಾದ ಬೃಂದಾವನದ ಹದಿನಾರು ಸಾವಿರ ಗೋಪಿಕಾಸ್ತ್ರೀಯರೊಡನೆ ರಾಸಕ್ರೀಡೆಯಾಡಿದ. ಅವರು ಅರುವತ್ತು ಇದ್ದಾರು ಆರುನೂರು ಇದ್ದಾರು-ಅದು ಮುಖ್ಯವಲ್ಲ; ಈ ರಾಸಲೀಲೆಯಲ್ಲಿ ಒಬ್ಬೊಬ್ಬ ಗೋಪಿಯೂ ತನ್ನವನೇ ಆದ ಕೃಷ್ಣನೊಂದಿಗೆ ಕುಣಿಯುತ್ತಿದ್ದಳು; ಕೃಷ್ಣ ಅನೇಕನಾಗಿದ್ದ. ಎಲ್ಲವನ್ನೂ ಚಲಿಸುವವನು ತಾನು ವಿಚಲಿತನಾಗಿದ್ದ. ಆನಂದ ಅಖಂಡವಾಗಿತ್ತು, ಏಕೈಕವಾಗಿತ್ತು; ಯಾಚನೆಯಿಲ್ಲದೆ ತಂತಾನೆ ಬೆಳಗಿದ ಆನಂದವಾಗಿತ್ತು. ಈಗ ನಗು ಎಂದು ಚಂದ್ರನನ್ನು ಆಹ್ವಾನಿಸಿದ ಕೃಷ್ಣ. ಚಂದ್ರ ಗಂಭೀರನಾಗಿದ್ದ. ಈ ಎರಡು ಮಹಾ ಆಖ್ಯಾನಗಳಲ್ಲಿ ಸೀಮಿತ ಹಾಗೂ ಸಮೃದ್ಧ ವ್ಯಕ್ತಿತ್ವಗಳು ಒಳತುಂಬಿ, ಹೊರತುಂಬಿ ಪೂರ್ಣ ಅರಳಿ ನಳನಳಿಸಿವೆ.

ಸೀತೆಯ ಅಪಹರಣವಷ್ಟನ್ನೇ ಹೇಳುವುದಾದರೂ ಅದು ಮಾನವಕುಲದ ಕಥಾರಾಶಿಯಲ್ಲಿ ಅತ್ಯಂತ ಮಹತ್ವದ ಘಟನೆಗಳಲ್ಲೊಂದು. ಎಲ್ಲ ವಿವರಗಳೊಂದಿಗೆ ಅದನ್ನು ದಾಖಲಿಸಲಾಗಿದೆ. ಇದು ಸೀಮಿತವಾದದ್ದರ, ಸಂಯಮಿತವಾದದ್ದರ

ಕಥೆ; ಘಟನಾಬದ್ಧ ಅಸ್ತಿತ್ವದ ಕಥೆ. ವನವಾಸದಲ್ಲಿ ಅಲೆಯುತ್ತಿದ್ದಾಗ ಒಮ್ಮೆ ಸೀತೆ ಒಬ್ಬಳೇ ಇರಬೇಕಾದಂಥ ಪ್ರಸಂಗ ಬಂತು. ಲಕ್ಷ್ಮಣ, ದಾಟಬಾರದ ಒಂದು ಗೆರೆ ಎಳೆದು ಹೋಗಿದ್ದ. ಆಗ ರಾಮನ ಮಹಾಶತ್ರುವಾದ ರಾವಣ ಹೊತ್ತು ನೋಡಿ, ಸನ್ಯಾಸಿಯ ವೇಷ ತಾಳಿ ಅಲ್ಲಿ ಬಂದ. ಆದರೆ ಭಿಕ್ಷೆಯ ನೆವ ಹೊಂಚಿ, ಅದಕ್ಕಾಗಿ ಸೀತೆ ಲಕ್ಷ್ಮಣ ರೇಖೆಯನ್ನು ದಾಟಿಬರುವ ತನಕ ಅವನೂ ನಿಸ್ಸಹಾಯನೇ ಆಗಿದ್ದ. ಸೀಮಿತವ್ಯಕ್ತಿತ್ವ ನಿಯಮಗಳ ವೃತ್ತದಲ್ಲೆ ತಿರುಗುತ್ತದೆ. ಸಮೃದ್ಧವ್ಯಕ್ತಿತ್ವ ಮಾತ್ರ ತನಗೆ ಇಚ್ಛೆಯಿರುವ ಪರ್ಯಂತ ನಿಯಮಗಳನ್ನೂ ಘಟನೆಗಳನ್ನೂ ಮನ್ನಿಸುತ್ತದೆ. ಅದು ತನಗೆ ಕಂಟಕವಾಯಿತಾದರೆ, ತಕ್ಷಣದಲ್ಲೆ ಅದನ್ನು ಧಿಕ್ಕರಿಸಿಬಿಡುತ್ತದೆ.

ರಾಮ ತನ್ನ ಅಧಿಕಾರದ ಸುತ್ತ ರೇಖಿತವಾಗಿದ್ದ ನಿಯಮ ಘಟನೆಗಳ ವೃತ್ತವನ್ನು ಎಂದೂ ಹೆಜ್ಜೆ ದಾಟಿದ್ದಿಲ್ಲ ಮತ್ತು, ಅಂಥ ಕಟ್ಟಳೆಯ ಗೆರೆಗಳಿಗೆ ಪ್ರಶ್ನೆಯಿಲ್ಲದೆ ಶರಣಾಗುತ್ತಿದ್ದುದೇ ಅವನ ಜೀವನದಲ್ಲಿನ ಮೂರು ನಾಲ್ಕು ಮಹತ್ ಕಲಂಕಗಳಿಗೆ ಕಾರಣವಾಯಿತು. ರಾಮನ ಇಂಥ ಸೀಮಿತ ವ್ಯಕ್ತಿತ್ವದ ಬಗ್ಗೆ ಇರುವ ಇನ್ನೊಂದು ಸಂಪನ್ನ ಕಥೆ ಸೀತಾಪರಿತ್ಯಾಗದ್ದು. ಸೀತೆಯ ಪಾವಿತ್ರ್ಯದ ಬಗ್ಗೆ ಒಬ್ಬ ಅಗಸ ದೋಷಾರೋಪಣೆ ಮಾಡಿದ. ಆರೋಪಿಸಿದಾತ ಒಬ್ಬನೇ, ಅದೂ ಅವನೊಬ್ಬ ಅಲ್ಪ. ಆರೋಪಣೆ ಹುಡುಗಾಟಿಕೆಯೆನ್ನಿಸುವಂಥದು, ಅಷ್ಟೇ ಕೀಳುಮಟ್ಟದ್ದು ಕೂಡ. ಆದರೆ ನಿಯಮಗಳ ಪ್ರಕಾರ ಪ್ರತಿಯೊಂದು ಆರೋಪವೂ ಯಾವುದೋ ಒಂದು ರೋಗದ ಅಭಿವ್ಯಕ್ತಿ. ಅದಕ್ಕೆ ತಕ್ಕ ಪರಿಹಾರವೋ, ಪ್ರಾಯಶ್ಚಿತ್ತವೋ ಆಗಲೇಬೇಕಾಗಿತ್ತು. ಈ ಸಂದರ್ಭದಲ್ಲಿ ಸೀತಾಪರಿತ್ಯಾಗವೊಂದೇ ಸಕ್ರಮವಾದ ಪರಿಹಾರವಾಗಿತ್ತು. ನಿಯಮ ಮೂರ್ಖತನದ್ದು, ಶಿಕ್ಷೆ ಕ್ರೂರವಾದ್ದು ಮತ್ತು ಈ ಇಡೀ ಘಟನೆ ರಾಮನಿಗೆ ಅಪಕೀರ್ತಿಯ ಕಲಂಕ ಹಚ್ಚಿತು; ಮುಂದೆ ಜೀವನದುದ್ದಕ್ಕೂ ಅವನನ್ನು ವ್ಯಾಕುಲದಲ್ಲಿ ಅದ್ದಿತು. ಆದರೂ ಅವನು ನಿಯಮಕ್ಕೆ ತಲೆ ಬಾಗಿದ. ಅದನ್ನು ಬದಲಿಸಲಿಲ್ಲ. ನಿಯಮ ಘಟನೆಗಳಿಂದ ಸಂಪೂರ್ಣ ಬದ್ಧನಾಗಿದ್ದ ಈತ ಸೀಮಿತವ್ಯಕ್ತಿತ್ವದ ಪರಿಪೂರ್ಣ ಮಾದರಿಯಾಗಿದ್ದಾನೆ. ಅದನ್ನೇ ಈ ಒಂದು ಘಟನೆಯ ಮೂಲಕ ತನ್ನ ಜೀವನದಲ್ಲಿ ಆಗಿ ತೋರಿಸಿದ್ದಾನೆ. ಹಾಗಲ್ಲದಿದ್ದರೆ ಈ ಘಟನೆ ರಾಮನ ಕಲಂಕಮಾತ್ರವೇ ಆಗಿಬಿಡುತ್ತಿತ್ತು.

ಸೀಮಿತ ವ್ಯಕ್ತಿತ್ವವಾಗಿದ್ದೂ ಪ್ರಾಯಶಃ, ಅವನಿಗೆ ಇದಲ್ಲದೆ ಇನ್ನೊಂದು ಹಾದಿಯಿತ್ತು: ಸೀತೆಯನ್ನು ತ್ಯಾಗಮಾಡುವುದರ ಜೊತೆಗೆ ತಾನೂ ಇನ್ನೊಮ್ಮೆ ದೇಶಭ್ರಷ್ಟನಾಗಿ ಹೋಗಬಹುದಿತ್ತು. ಬಹುಶಃ ರಾಮ ಹಾಗೆ ಸೂಚಿಸಿದ. ಆದರೆ ಅದಕ್ಕೆ ಅವನ ಪ್ರಜೆಗಳು ಒಪ್ಪಲಿಲ್ಲ. ಅದನ್ನೇ ಅವನು ಪಟ್ಟುಹಿಡಿಯಬಹುದಾಗಿತ್ತು.

ಆಗ ಅವರೇ ಆ ನಿಯಮವನ್ನು ರದ್ದುಗೊಳಿಸಲು ಅಥವಾ ಅದಕ್ಕೊಂದು ಅಪವಾದ ಕಲ್ಪಿಸಲು ಮುಂದಾಗುತ್ತಿದ್ದರೇನೋ. ಆದರೆ, ಯಾವುದೊಂದು ಒತ್ತಡದಲ್ಲಿ ಆಗುವ, ಯಾವುದೋ ಗಂಡವನ್ನು ದಾಟಿ ಹಾರಿಬಿಡುವ ಸಲುವಾಗಿ ಆಗುವ, ತಾನೇ ಕೊಂಚವಾದರೂ ಭಾಗಿಯೆನಿಸಬಹುದಾದ ನಿಯಮದ ಅಂಥ ರದ್ದತಿಯನ್ನು ಸೀಮಿತ ವ್ಯಕ್ತಿತ್ವ ಒಪ್ಪಲಾರದು. ಇತಿಹಾಸದಲ್ಲಿಯ ಹಾಗೇ ಪುರಾಣಗಳಲ್ಲೂ ಹೀಗಾಗ ಬಹುದಿತ್ತು ಎಂಬಂಥ ಊಹೆಗಳು ಉಪಯೋಗವಿಲ್ಲದ ಲಹರಿಗಳೇ ಸರಿ. ಸೀಮಿತ ವ್ಯಕ್ತಿತ್ವಕ್ಕೇ ಅಷ್ಟು ಅತಿವಿಶಿಷ್ಟವೆನ್ನಿಸುವ ನಿಯಮಗಳ ಎದುರಿನ ಇಂಥ ಘೋರ ಶರಣಾಗತಿಯ ಮುಂದೆ, ರಾಮ ಇನ್ನೇನು ಮಾಡಬಹುದಿತ್ತು ಅಥವಾ ಮಾಡದೆ ಇರಬಹುದಿತ್ತು ಎಂಬುದೆಲ್ಲ ಕೇವಲ ಅಲ್ಪವಾದ ಊಹೆ. ವೈಯಕ್ತಿಕ ನಾಯಕತ್ವ ಹಾಗೂ ಸಾಮೂಹಿಕ ನಾಯಕತ್ವ–ಈ ಎರಡು ಪಂಥಗಳ ನಡುವಣ ಸಮಕಾಲೀನ ಚರ್ಚೆ ನಮ್ಮಲ್ಲಿ ತುಂಬ ಆಸಕ್ತಿ ಹುಟ್ಟಿಸಿದೆ. ಆದರೆ ಈ ಚರ್ಚೆ ಮೇಲು ಮೇಲಿನದು. ನಾಯಕತ್ವ ವೈಯಕ್ತಿಕವಿರಲಿ, ಸಾಮೂಹಿಕವಿರಲಿ, ಎರಡೂ ಮೂಲತಃ ಸಮೃದ್ಧ ವ್ಯಕ್ತಿತ್ವದ ವರ್ಗಕ್ಕೇ–ನಿಯಮಗಳಿಗೆ, ಘಟನೆಗಳಿಗೆ ಶರಣಾಗದೆ ಸೆಣೆಸಿ ನಿಲ್ಲುವಂಥ ಪ್ರವೃತ್ತಿಯ ವರ್ಗಕ್ಕೇ–ಸೇರಿರಲು ಸಾಧ್ಯ. ಅಧಿಕಾರಸೀಮೆಯ ನಿಯಮರೇಖೆಯನ್ನು ಆಕ್ರಮಿಸುವುದು ಒಬ್ಬನೇ ಅಥವಾ ಐದೋ–ಹತ್ತೋ ಜನರ ಒಂದು ಕೂಟವೇ ಎಂಬುದಷ್ಟೇ ಇಲ್ಲಿನ ವ್ಯತ್ಯಾಸ. ಆದರೆ ಒಬ್ಬ ಅತಿಕ್ರಮಿಸುವುದಕ್ಕಿಂತ ಹತ್ತೂ ಜನ ನಿಯಮವನ್ನು ಅತಿಕ್ರಮಿಸುವುದು ಹೆಚ್ಚು ಕಷ್ಟದ್ದೇ ಸರಿ. ಏನಾದರೂ, ಸತತ ಪ್ರವಾಹವಾಗಿರುವ ಈ ಬದುಕು, ಹೋರಾಡುವ ದ್ವಂದ್ವಗಳ ಮಧ್ಯೆ, ಅನೇಕಾನೇಕ ಸೂಕ್ಷ್ಮ ವರ್ಣತಂತುಗಳು ನೆಯ್ಗೆಯಾಡಿ, ಬೆರೆಸುತ್ತಿರುವ ಸಂಧ್ಯಾ ಪ್ರಭೆಯಾಗಿದೆ.

ಜೀವನದ ಇಂಥ ಪ್ರವಾಹದಲ್ಲಿ, ದ್ವಂದ್ವಗಳ ಹೋರಾಟದ ವೈಯಕ್ತಿಕ ಸಮೃದ್ಧಿಗೂ, ಸಾಮೂಹಿಕ ಸಮೃದ್ಧಿಗೂ ನಡುವೆ ತೂಗಾಟ ಸತತವಾಗಿ ನಡೆದಿರುತ್ತದೆ –ಆಚೆಯಿಂದ ಈಚೆ, ಈಚೆಯಿಂದ ಆಚೆ ನಡೆವ ಗಡಿಯಾರದ ಲೋಲಕದ ಆಂದೋಲನದ ಹಾಗೆ. ಒಮ್ಮೆ ಸಮೃದ್ಧ ವೈಯಕ್ತಿಕ, ಸಮೃದ್ಧ ಸಾಮೂಹಿಕತೆಗೆ ಹಾದಿ ಮಾಡಿಕೊಡುತ್ತದೆ. ಮತ್ತು ಹಾಗೇ ಇನ್ನೊಮ್ಮೆ ಸಮೃದ್ಧ ಸಾಮೂಹಿಕತೆ, ಸಮೃದ್ಧ ವೈಯಕ್ತಿಕತೆಗೆ ಹಾದಿಮಾಡಿಕೊಡುತ್ತದೆ. ಇದು ಸಣ್ಣ ಚೌಕಟ್ಟಿನಲ್ಲೆ ನಡೆವ ಸಣ್ಣ ಪ್ರಮಾಣದ ತೂಗಾಟ. ಏಕೆಂದರೆ, ಇಲ್ಲಿ ವೈಯಕ್ತಿಕತೆ ಮತ್ತು ಸಾಮೂಹಿಕತೆ ಇವುಗಳ ನಡುವೆ ತೂಗಾಟ ನಡೆಯುತ್ತಿದ್ದರೂ, ಎರಡೂ ಸಮೃದ್ಧ ಪ್ರವೃತ್ತಿಗೇ ಸೇರಿದ್ದು. ಹೋಲಿಕೆಯಲ್ಲಿ ಇದಕ್ಕಿಂತ ದೀರ್ಘಚಾರಿಯಾದ ಇನ್ನೊಂದು ತುಯ್ದಾಟ ಕೂಡ ಇದರ ಜೊತೆಯಲ್ಲೆ ನಡೆದಿರುತ್ತದೆ. ಅದು ಸಮೃದ್ಧಿಗೂ, ಸೀಮಿತಕ್ಕೂ ನಡುವೆ ನಡೆವ ತುಯ್ದಾಟ. ಮೊದಲು ಹೇಳಿದ ಸಮೃದ್ಧ ಪ್ರವೃತ್ತಿಯಲ್ಲಿನ ಆಂದೋಲನ

ಕ್ರಿಯೆ ಇಡೀ ಇಲ್ಲಿ ಒಂದು ಬಿಂದುವಾಗುತ್ತದೆ. ಅದಕ್ಕೆ ಎದುರಾಗಿ ಸೀಮಿತಪ್ರವೃತ್ತಿಯ ಇನ್ನೊಂದು ಬಿಂದು-ಈ ಎರಡರ ನಡುವೆ ತೂಗಾಟ; ಸಮೃದ್ಧಪ್ರವೃತ್ತಿಗೂ ಸೀಮಿತಪ್ರವೃತ್ತಿಗೂ ನಡುವೆ ನಡೆವ ತೂಗಾಟ. ರಾಮನಲ್ಲಿ ಸೀಮಿತ ವ್ಯಕ್ತಿ ಕಾಣುವ ಹಾಗೆ ಘಟನಾಬದ್ಧ ಪ್ರಜಾಪ್ರಭುತ್ವದಲ್ಲಿ ಸೀಮಿತ ಸಮೂಹದ ಕ್ರಿಯೆ ಕಾಣಬಹುದು. ಎರಡೂ ಒಂದೇ ವರ್ಗದ್ದು. ಕೃಷ್ಣನಲ್ಲಿ ಸಮೃದ್ಧ ವೈಯಕ್ತಿಕತೆ ಕಾಣುವ ಹಾಗೆ, ಯಾವ ಕಟ್ಟುಪಾಡುಗಳಿಗೂ ಒಳಪಡದೆ, ತಮ್ಮ ವಿವೇಕವನ್ನೆ ನಂಬಿ ಆಳುವ ಉನ್ನತ ನಾಯಕರ ಸಮಿತಿಯೊಂದರಲ್ಲಿ ಸಮೃದ್ಧ ಸಾಮೂಹಿಕತೆ ಕಾಣಿಸುತ್ತದೆ. ಪುನಃ-ಈ ಎರಡೂ ಸಮೃದ್ಧಪ್ರವೃತ್ತಿಯ ಒಂದೇ ವರ್ಗದಲ್ಲಿ ಬರುತ್ತವೆ. ಅಧಿಕಾರ ಹಿಡಿದಿದ್ದು ವ್ಯಕ್ತಿಯೆ ಅಥವ ಸಮೂಹವೆ ಎಂಬುದು ಒಂದು ಪ್ರಶ್ನೆ; ಹಾಗೂ, ಆ ಅಧಿಕಾರ ಸೀಮಿತವೆ ಅಥವಾ ಸಮೃದ್ಧವೆ ಎಂಬುದು ಇನ್ನೊಂದು ಪ್ರಶ್ನೆ. ಈ ಎರಡು ಪ್ರಶ್ನೆಗಳಲ್ಲಿ ಎರಡನೆಯ ಪ್ರಶ್ನೆಯೇ ಎಲ್ಲ ರೀತಿಗಳಿಂದಲೂ ಅತಿ ಮಹತ್ವದ್ದು. ಅಧಿಕಾರ ಯಾವ ತರಹದ್ದು, ಅದು ಅತಿಕ್ರಮಿಸಲಾಗದಂಥ ನಿಯಮಗಳಿಗೂ, ಘಟನೆಗಳಿಗೂ ಬದ್ಧವಾಗಿದೆಯೆ ಎಂಬುದು ಮುಖ್ಯವಾದ ಪ್ರಶ್ನೆ. ಇದಕ್ಕೆ ಉತ್ತರ ಸಿಕ್ಕಿದ ಮೇಲೆ ಮಾತ್ರವೇ ಮುಂದಿನ ಪ್ರಶ್ನೆ-ಹೋಲಿಕೆಯಲ್ಲಿ ಮೊದಲಿನದರಷ್ಟು ಮುಖ್ಯವಲ್ಲದ ಪ್ರಶ್ನೆ-ಏಳುತ್ತದೆ. ಈ ಸೀಮಿತವಾದ (ಅಥವಾ ಅಲ್ಲದ) ಅಧಿಕಾರ ವ್ಯಕ್ತಿಯದೆ ಅಥವಾ ಸಮೂಹದ್ದೆ ಎಂಬುದೇ ಆ ಪ್ರಶ್ನೆ. ಅಧಿಕಾರ ಸೀಮಿತವಾದ ಸಮೂಹದ ಕೈಯಲ್ಲಿರುವ ಅಧಿಕಾರವೇ ನಿಸ್ಸಂದೇಹವಾಗಿ ಅತ್ಯುತ್ತಮವಾದದ್ದು.

ರಾಮ ಸೀಮಿತ ವ್ಯಕ್ತಿ, ಸರಿ. ಆದರೆ ಅವನು ಹಾಗಾದದ್ದು ಆ ಗುರಿಯನ್ನೆ ಎಚ್ಚರದಲ್ಲಿಟ್ಟುಕೊಂಡು, ಸಂಕಲ್ಪಪೂರ್ವಕ ಹಾಗೆ ತನ್ನನ್ನು ರೂಪಿಸಿಕೊಂಡಿದ್ದರಿಂದ. ನಿಯಮಗಳು ಮತ್ತು ಘಟನೆಗಳು ಇದ್ದವು, ನಿಜ. ಅವು ವಿಧೇಯತೆಯನ್ನು ಹೇರುವುದಕ್ಕೆ ಅಳತೆಗೋಲಾಗಿದ್ದವು. ಆದರೆ ಈ ಹೊರಗಿನ ಬಲವಂತ ನಿಷ್ಪ್ರಯೋಜಕ ವಾಗಿಬಿಡುತ್ತಿತ್ತು, ಅದಕ್ಕೆ ಸಮಸ್ಪಂದಿಯಾಗಿ ಒಳಗಿನ ಒತ್ತಡವೊಂದು ಕೂಡಿಕೊಂಡು ಬರದಿದ್ದರೆ. ನಿಯಮ ಘಟನೆಗಳ ಹೊರಗಿನ ಹತೋಟಿಯೂ, ಅಂತಃಪ್ರಜ್ಞೆಯ ಆಂತರಿಕ ನಿಯಂತ್ರಣವೂ ಒಂದನ್ನೊಂದು ಬಲಗೊಳಿಸುತ್ತವೆ. ಈ ಎರಡರಲ್ಲಿ ಮೊದಲಿಗೆ ಯಾವುದು ಎಂಬ ಚರ್ಚೆ ಅರ್ಥವಿಲ್ಲದ್ದು. ಸೀಮಿತವ್ಯಕ್ತಿತ್ವಕ್ಕೆ ನಿಯಮ-ಘಟನೆಗಳ ಹೊರಗಿನ ಹತೋಟಿ, ಅಂತಃಪ್ರಜ್ಞೆಯ ಒಳಗಿನ ಸ್ಫುರಣೆಗೇ ಮತ್ತೊಂದು ಹೆಸರಾಗಬಹುದು, ಅಷ್ಟೆ. ಬಾಹ್ಯದ ವಿಧಿ ಮತ್ತು ಆಂತರ್ಯದ ಸ್ಫೂರ್ತಿ- ಈ ಎರಡು ಶಕ್ತಿಗಳ ಅಸಾಮಾನ್ಯ ಹೊಂದಿಕೆ ಮತ್ತು ಸಹಯೋಗ ಸೀಮಿತ ವ್ಯಕ್ತಿತ್ವದ ಮುಖ್ಯ ಗುರುತು. ಎಲ್ಲೆಗಳು ಹೊರಗಿಂದ ಹತೋಟಿಗಾಗಿ ಕಲ್ಪಿತವಾಗಿದ್ದರೂ ಅವು ಒಳಗಿಂದ

ನಿರ್ಮಿತವಾದ ಸರಹದ್ದುಗಳನ್ನೇ ಕೂಡಿಕೊಂಡಿರುತ್ತವೆ; ಸೀಮಿತನಾಯಕತ್ವ, ತಹಬಂದಿ ವಿಧಿಸುವ ನಾಯಕತ್ವ ನಿಜ, ಆದರೂ ಅದು ಅಂತಶ್ಶ್ರೋತನದ ಪ್ರಾಂತಭೂಮಿಯನ್ನೆ ತಲುಪಿ ನಿಲ್ಲುತ್ತದೆ. ರಾಮ, ವಾಸ್ತವಿಕವಾಗಿ ಕಟ್ಟುನಿಟ್ಟಿಗೆ ಒಳಪಟ್ಟ ಶಿಸ್ತಿನ ವ್ಯಕ್ತಿ. ಆದರೆ ಅವನ ವರ್ಣನೆಯನ್ನು ಅಷ್ಟಕ್ಕೇ ನಿಲ್ಲಿಸಿದರೆ ತಪ್ಪಾದೀತು. ಏಕೆಂದರೆ, ಬಾಹ್ಯ ನಿಬಂಧನೆಗಳ ಜೊತೆಗೆ ಆತನ ಆಂತರಂಗಿಕ ಇಚ್ಛೆ ಒಂದಾಗಿ ಸಹಯೋಗ ಹೊಂದಿದಂಥ ಸೀಮಿತ ವ್ಯಕ್ತಿತ್ವ ಆತನದ್ದು.

ರಾವಣನ ಅಂತ್ಯಕಾಲದ ಕಥೆಯೊಂದಿದೆ. ರಾವಣ ಆ ಕಾಲದ ಮಹಾ ವಿದ್ವಾಂಸರಲ್ಲೊಬ್ಬ. ಆದರೆ ಅವನು ವಿದ್ಯೆಯನ್ನು ಅಪಮಾರ್ಗದಲ್ಲಿ ತೊಡಗಿಸಿದ್ದ. ಈ ವಿದ್ಯೆ ದುಷ್ಟ ಲಕ್ಷ್ಯಗಳಿಂದ ವಿಮುಕ್ತಗೊಂಡು, ಮಾನವಕುಲದ ಸತತ ಬಳಕೆಗಾಗಿ ಪರಂಪರೆಯಲ್ಲಿ ಸಂಗೋಪಿತವಾಗಬೇಕಿತ್ತು. ಅದಕ್ಕಾಗಿ ರಾಮ ಆತನ ಬಳಿಗೆ ಲಕ್ಷ್ಮಣನನ್ನೇ ಕಳಿಸಿದ, ಅವನಿಂದ ಕಲಿತು ಬರಲು. ರಾವಣ ಮಾತೇ ಆಡಲಿಲ್ಲ. ಲಕ್ಷ್ಮಣ ಮರಳಿ ಬಂದು ಅಣ್ಣನಿಗೆ ವರದಿ ಒಪ್ಪಿಸಿದ, ಆತನ ಅಹಂಕಾರ ಇನ್ನೂ ಕ್ಷಯಿಸಿಲ್ಲವೆಂದು. ಅಲ್ಲಿ ಏನು ನಡೆಯಿತೆಂಬುದರ ಸೂಕ್ಷ್ಮವಿವರಗಳನ್ನು ರಾಮ ಕೇಳಿಕೊಂಡ-ಲಕ್ಷ್ಮಣ ಹೋಗಿ ರಾವಣನ ತಲೆದೆಸೆಯಲ್ಲಿ ನಿಂತಿದ್ದನೆಂದು ತಿಳಿಯಿತು. ಅವನ ಕಾಲುಬುಡದಲ್ಲಿ ಹೋಗಿ ನಿಂತುಕೋ ಎಂದು ಲಕ್ಷ್ಮಣನನ್ನು ಮತ್ತೆ ಕಳಿಸಿಕೊಟ್ಟ. ರಾಜನೀತಿಯ ಪಾಠ ಕಲಿಸಿದ.

ಸದಾಚಾರವನ್ನು ಕುರಿತ ಇಂಥ ಚಂದದ ಕಥೆಗೆ ಹೋಲುವಂಥದ್ದು ಕಡಿಮೆ. ಇದನ್ನು ಮೀರಿದ್ದು ಇನ್ನೊಂದಿಲ್ಲ. ನೀತಿ ಎಷ್ಟು ಮುಖ್ಯವೋ ಆಚರಣೆಯೂ ಅಷ್ಟೇ ಮುಖ್ಯ, ನಿಶ್ಚಯವಾಗಿ. ಯಾವನೊಬ್ಬ ತಿನ್ನುವ, ನಡೆಯುವ, ಕೂಡುವ ಕಾಣಿಸಿಕೊಳ್ಳುವ, ಬಟ್ಟೆಯುಡುವ ರೀತಿ, ಅವನು ತನ್ನಂಥವರೊಂದಿಗೆ ಮಾತಾಡುವ ಬಗೆ ಅಥವಾ ಅವರ ಜೊತೆ ಕೂಡಿಕೊಂಡಿರುವಂಥ ಬಗೆ, ತನ್ನಿಂದ ಅವರಿಗೆ ಯಾವ ಗಳಿಗೆಯಲ್ಲಿ ಏನು ಅಪಚಾರವಾದೀತೋ, ತೊಂದರೆಯಾದೀತೋ ಎಂದು ಕಣ್ಣಾಗಿರುವ ಎಚ್ಚರ, ಪ್ರಾಣಸಮಸ್ತದೊಡನೆ ಅವನ ನಡತೆ-ಇವೆಲ್ಲ ಸದಾಚಾರಕ್ಕೆ ಸಂಬಂಧಿಸಿದವೇ. ಹಾಗೆಂದು ಇವೆಲ್ಲ ಉಳಿದವುಗಳಷ್ಟು ಮಹತ್ವದ್ದಲ್ಲ ಎನ್ನಲಾದೀತೆ? ಖಂಡಿತ ಇಲ್ಲ. ಕೃಷ್ಣನ ಸದಾಚಾರವೃತ್ತಿಯೂ ಗಮನಾರ್ಹವಾದದ್ದೇ. ಸೀಮಿತವ್ಯಕ್ತಿತ್ವ ಹಂಬಲಿಸಬಹುದಾದ ದರ್ಜೆಯ ಅತ್ಯುಚ್ಚ ಸದಾಚಾರಕ್ಕೆ ಸಮೃದ್ಧ ವ್ಯಕ್ತಿತ್ವದ ಕೃಷ್ಣನೂ ಅದ್ಭುತ ಮಾದರಿಯಾಗಿದ್ದಾನೆ. ಆತ ಸದಾಚಾರಿಯಾದವನ ಅರ್ಥಾತ್ ಸ್ಥಿತಪ್ರಜ್ಞನ ಸ್ಮರಣೀಯ ವರ್ಣನೆಯನ್ನೆ ಕೊಟ್ಟಿದ್ದಾನೆ, ವಿವರವಿವರವಾಗಿ. ಅಂಥ ಮನುಷ್ಯ ಆಮೆಯಂತೆ ತನ್ನೆಲ್ಲ ಅಂಗಗಳನ್ನೂ ಒಳಕ್ಕೆ ಸೆಳೆದಿಟ್ಟುಕೊಳ್ಳಬಲ್ಲ;

ಅಂಗಾಂಗಗಳ ಮೇಲೆ ಅಂಥ ಹತೋಟಿ ಅವನಿಗೆ. ಅದರಲ್ಲಿ ಯಾವದೊಂದೂ ಯಾವ ಕಾಲದಲ್ಲೂ ತಪ್ಪಿ ಚಲಿಸದು. ಸಮೃದ್ಧ ಹಾಗೂ ಸೀಮಿತ ವ್ಯಕ್ತಿತ್ವಗಳು ಬೇರೆ ವಿಷಯಗಳಲ್ಲಿ ವಿಭಿನ್ನವೆನ್ನಿಸಿದರೂ ಸದಾಚಾರದ ವಿಷಯದಲ್ಲಿ ಏಕರೂಪ. ಸಮೃದ್ಧ ವ್ಯಕ್ತಿತ್ವ ಸದಾಚಾರದ ಯಾವ ಪರಮೌನ್ನತ್ಯವನ್ನು ಸಾಧಿಸಬಲ್ಲುದೋ ಅದೇ ಸೀಮಿತಕ್ಕೆ ಕೂಡ ಅತ್ಯುಚ್ಚ ಗುರಿಯಾಗಿರುತ್ತದೆ. ಸಾಯಲು ಬಿದ್ದಿರುವ ವೈರಿಯ, ಮಹಾವಿದ್ವಾಂಸನ ವಿಷಯದಲ್ಲಿ ನಡೆದುಕೊಂಡ ರೀತಿಯಂಥ ಉದಾಹರಣೆಗಳಿಂದ ರಾಮ ಸದಾಚಾರದ ಉನ್ನತಕಥೆಯನ್ನೆ ರಚಿಸಿಕೊಟ್ಟಿದ್ದಾನೆ.

ರಾಮ ವಕ್ತಾರನಾಗಿದ್ದಕ್ಕಿಂತ ಶ್ರೋತಾರನಾಗಿದ್ದದ್ದೇ ಹೆಚ್ಚು. ಮಾತಾಡುವಾಗ ಎದುರಿನವನಿಗೆ ತಾಳ್ಮೆಯಿಂದ ಕಿವಿಗೊಡುವುದು ದೊಡ್ಡವರಿಗೆ ಸಹಜವೇ. ಅಷ್ಟಲ್ಲದೆ ಎಲ್ಲರ ಮಾತಿಗೂ ಕಿವಿಗೊಡುತ್ತಿದ್ದ ರಾಮ. ಒಮ್ಮೆ ಪರಶುರಾಮ ಈತನನ್ನು ನಿಂದಿಸಿದ್ದೂ ಉಂಟು-ತಮ್ಮ ಲಕ್ಷ್ಮಣ ಕೆರಳಿ ಮಾತಾಡುತ್ತಿದ್ದರೂ ಇವನು ಆತನನ್ನು ತಡೆಯದೆ ಹಿಂದಾಗಿ ಅವಕಾಶಕೊಟ್ಟನೆಂದು. ಹೀಗೆ ನಿಂದಿಸಿದ್ದು ಸಕಾರಣವೆಂದು ಒಪ್ಪಲೇಬೇಕು. ತನ್ನ ಕಡೆಯವರು ಮತ್ತು ಶತ್ರುಪಕ್ಷದವರು ಮಾತಿನ ಮಲ್ಲಯುದ್ಧ ಕ್ಕಿಳಿದಾಗ ರಾಮ ಆಸಕ್ತಿಯಿಂದ ಕೇಳುವವನಾಗಿ ನಿಲ್ಲುತ್ತಿದ್ದುದುಂಟು, ಎಷ್ಟೋಸಲ. ಉದಾಹರಣೆಗೆ-ಲಕ್ಷ್ಮಣ, ಶೂರ್ಪನಖಿಯರ ವಾಗ್ವಾದದ ಸಂದರ್ಭದಲ್ಲಿ ಹೀಗೇ ಆಯಿತು, ಮುಂದೆ ಪರಿಸ್ಥಿತಿ ಅಸಹ್ಯಕ್ಕಿಳಿಯಿತು. ಅಂಥ ಸಂದರ್ಭಗಳಲ್ಲಿ ರಾಮ ವೀರಮೌನಿಯಾಗಿ ಕಾಣುತ್ತಿದ್ದ, ಪಕ್ಷಾತೀತನಾಗಿ ಕಾಣುತ್ತಿದ್ದ-ತೀರ ಅಪರೂಪವಾಗಿ ತನ್ನವರ ಅತಿರೇಕವನ್ನು ತಡೆಯುತ್ತ, ಅಪರೂಪವಾಗಿ ಅವರಿಗೆ ಪ್ರೋತ್ಸಾಹದ ಒಂದು ಮಾತನ್ನೂ ಹೇಳುತ್ತ. ಇದು ಒಂದು ರೀತಿಯ ಚಾತುರ್ಯ ಎನ್ನಿಸ ಬಹುದಾದರೂ, ನಿಶ್ಚಯವಾಗಿ ಸೀಮಿತವ್ಯಕ್ತಿತ್ವದ ಒಂದು ಅಭಿವ್ಯಕ್ತಿಯೇ ಆಗಿದೆ. ಸೀಮಿತ ವ್ಯಕ್ತಿತ್ವ ಅವಕಾಶ ಬಳಸಿಕೊಂಡು ತಾನೇ ಮಾತಾಡುವ ಬದಲು, ಸಂದರ್ಭಕ್ಕೆ ಹೊಂದಿದ ಇತರರ ಮಾತುಗಳಿಗೆ ಹೆಚ್ಚು ಎಡೆಕೊಟ್ಟು ಮುದಗೊಳ್ಳುತ್ತದೆ. ಕೃಷ್ಣನಾದರೋ ಮಹಾ ಮಾತುಗಾರ. ಅವನು ಕೇಳುತ್ತಿದ್ದುದೂ ಉಂಟು, ಅದನ್ನೇ ನೆಮ್ಮಿ ಮುಂದೆ ಇನ್ನೂ ಚಂದವಾಗಿ ಮಾತನಾಡಲು ಬಂದೀತು ತನಗೆ ಎಂಬ ಕಾರಣಕ್ಕೆ. ಮಾಂತ್ರಿಕವಾದ ಅವನ ವಾಕ್ ಆ ಹಾದಿ ಹತ್ತಿದವರನ್ನು ಇಂದಿಗೂ ಮರುಳುಗೊಳಿಸುತ್ತದೆ. ರಾಮನಿಗೆ ಅನಿರ್ವಾಚ್ಯದ ಮಂತ್ರಶಕ್ತಿ ತಿಳಿದಿತ್ತು. ತಾನು ಮಾತಾಡಬೇಕಾದಂಥ ಅಥವಾ ಕೃತಿಗಿಳಿಯಬೇಕಾದಂಥ ಸಂದರ್ಭ ತೀರ ಅಗತ್ಯವಾಗಿ ಒದಗುವ ತನಕ ಆತ ಬೇರೆಯವರನ್ನೆ ಆಡಬಿಡುತ್ತಿದ್ದ. ರಾಮ ತನ್ನ ಮಾತಿಂದ ಎಷ್ಟೋ ಅಷ್ಟೇ ಶ್ರವಣ ಕುತೂಹಲದ ನೀರವದಿಂದಲೂ ನಮ್ಮ ಗಮನ ಸೆಳೆಯುತ್ತಾನೆ.

ರಾಮನ ಜೀವನ ಸ್ವಾಹಾಕಾರವಿಲ್ಲದೆ ವಿಸ್ತಾರಗೊಳ್ಳುವ ವ್ಯಕ್ತಿತ್ವಮಾರ್ಗಕ್ಕೆ ಒಂದು ಪ್ರಬಂಧವೇ ಆಗಿದೆ. ರಾಮನ ವನವಾಸ, ಶಕ್ತಿಯ ಎರಡು ಕೇಂದ್ರಗಳ ನಡುವೆ ಸೆಣಸಾಟ ನಡೆಯುತ್ತಿದ್ದ ರಾಷ್ಟ್ರವನ್ನು ಏಕಾಧಿಪತ್ಯದ ಕೆಳಗೆ ತರುವ ಒಂದು ಅವಕಾಶವೇ ಆಗಿತ್ತು. ಅಯೋಧ್ಯೆ ಮತ್ತು ಲಂಕೆ-ಇವೇ ಆ ಎರಡು ಕೇಂದ್ರಗಳು. ರಾಮನ ಅಲೆದಾಟ ಅಯೋಧ್ಯೆಯಿಂದ ದೂರವಾಗುತ್ತ ಲಂಕೆಯ ಕಡೆ ಸಾಗುವುದಾಗಿತ್ತು. ಹಾದಿಯಲ್ಲಿ ಅನೇಕಾನೇಕ ರಾಜ್ಯಗಳೂ ಪಾಳೆಯಗಳೂ ಇದ್ದವು, ಈ ಎರಡು ಕೇಂದ್ರಗಳಲ್ಲಿ ಒಂದಲ್ಲ ಒಂದಕ್ಕೆ ಸಾಮಂತವೆನ್ನಿಸಿಕೊಂಡು. ರಾವಣನ ಆಶ್ರಯ ಜಾಲದಲ್ಲಿದ್ದ ಮೊದಲ ಮಹಾರಾಜ್ಯವನ್ನು ಹೊಕ್ಕಾಗ ರಾಮನ ಸೀಮಿತ ವ್ಯಕ್ತಿತ್ವದ ರಾಜಕೀಯ ಸಾಮರ್ಥ್ಯಕ್ಕೆ ಅತ್ಯುತ್ತಮ ಅಭಿವ್ಯಕ್ತಿ ದೊರಕಿತು. ವಾಲಿ ಅಲ್ಲಿನ ಮುಖ್ಯ. ಅವನ ತಮ್ಮ ಸುಗ್ರೀವ ಮತ್ತು ಸೇನಾಮುಖ್ಯ ಹನುಮಾನ್ ಇಬ್ಬರೂ ಅಸಂತುಷ್ಟರಾಗಿದ್ದರು. ರಾವಣನ ಕೂಟದಿಂದ ಹೊರಬಂದು ರಾಮನ ಸ್ನೇಹ ಸೇವೆಗಳಿಗೆ ಹಾದಿ ಹುಡುಕುತ್ತಿದ್ದರು. ಹನುಮಾನ್ ಮುಂದೆ ರಾಮನ ನೆಚ್ಚಿನ ಬಂಟನೇ ಆದ; ಒಮ್ಮೆ ತನ್ನ ಎದೆಯನ್ನೆ ಸೀಳಿ ತೋರಿಸಿದ, ಅಲ್ಲಿ ರಾಮನಲ್ಲದೆ ಬೇರೆ ಇಲ್ಲವೆಂಬುದನ್ನು ಸ್ಪಷ್ಟಪಡಿಸಲು. ಈ ಮೊದಲ ಮಹತ್ ಭೇಟಿಯ ಸಂದರ್ಭವನ್ನು ರಾಮ ಕೌಶಲದಿಂದ ಬಳಸಿಕೊಂಡ, ತನ್ನ ಸೀಮಿತ ವ್ಯಕ್ತಿತ್ವಕ್ಕೆ ತೀರ ತಕ್ಕುದಾಗಿ. ರಾಜ್ಯವನ್ನು ಅಪಹರಿಸಲಿಲ್ಲ, ಅದು ಹಾಗೇ ಉಳಿಯಿತು. ಅಲ್ಲಿ ಪದವಿಗಳಿಗೆ, ಅದು ಕೆಳಗಿನದಿರಲಿ ಮೇಲಿನದಿರಲಿ, ಹೊರಗಿಂದ ಅಧಿಕಾರಿಗಳನ್ನು ತಂದು ತುಂಬಲಿಲ್ಲ. ವಾಲಿಯ ಜೊತೆಗಿನ ದ್ವಂದ್ವಯುದ್ಧದಲ್ಲಿ ಸತ್ತ ಸುಗ್ರೀವನಿಗೆ ಪಟ್ಟ ಕಟ್ಟಲಾಯಿತು- ಇಷ್ಟೇ ನಡೆದದ್ದು. ವಾಲಿಯ ಸಾವು ರಾಮನ ಕೆಲವೇ ಅಪಕೃತಿಗಳಲ್ಲಿ ಒಂದು: ಸ್ನೇಹ ಬೇಡಿದ ಸುಗ್ರೀವ ಅಣ್ಣನಿಂದ ಹೊರಗಾಗಿ ಬಂದ ವೇಳೆ, ರಾಮ ಮರದ ಹಿಂದೆ ಅಡಗಿ ನಿಂತು ಮರೆಯಿಂದ ವಾಲಿಗೆ ಬಾಣ ಬಿಟ್ಟ. ಇದು ನಿಯಮಕ್ಕೆ ವಿರುದ್ಧವಾಗಿತ್ತು. ಸಾಮಾನ್ಯ ಸಂಭಾವಿತನಾದ ಯಾವನೂ ಎಂದೂ ಇಂಥದ್ದು ಮಾಡುವುದಿಲ್ಲ; ಅದರಲ್ಲೂ ಸೀಮಿತ ವ್ಯಕ್ತಿತ್ವಕ್ಕಂತೂ ಇದು ತೀರ ಅಸಾಧ್ಯ. ಆದರೆ, ಅದಲ್ಲದೆ ಬೇರೆ ಮಾರ್ಗವಿರಲಿಲ್ಲ ಎನ್ನಬಹುದು ರಾಮ.

ಪ್ರಶ್ಯಾದ ಫ್ರೆಡ್‌ರಿಕ್ ಮಹಾಶಯ, ವ್ಯಕ್ತಿಯ ನೈತಿಕತೆ ಹಾಗೂ ರಾಜ್ಯದ ನೈತಿಕತೆಗಳ ನಡುವಣ ವ್ಯತ್ಯಾಸ ಕುರಿತು ಸಮರ್ಥವಾಗಿ ವಾದಿಸಿದ್ದಾನಷ್ಟೆ. ಈ ವ್ಯತ್ಯಾಸ ಕಾರಣವಾಗಿ, ಒಂದು ಸುಳ್ಳಿನ ಮೂಲಕವೋ, ಕೊಟ್ಟ ಮಾತನ್ನು ಮುರಿಯುವದರ ಮೂಲಕವೋ, ಸಾಮೂಹಿಕವಾದ ಕಗ್ಗೊಲೆಯನ್ನೋ ಗುಲಾಮೀಕರಣವನ್ನೋ ತಡೆಯುವುದಾದರೆ ಅದು ತಪ್ಪಲ್ಲ ಎಂದ ಅವನು. ಒಪ್ಪಂದಗಳಿಗೆ ಸದಾ ಬದ್ಧರಾಗಿದ್ದ ತನ್ನ ರಾಜಸಾಮಂತರು ಜೀವನದಲ್ಲಿ ಒಮ್ಮೆ

ಹೀಗೆ ತಪ್ಪಿದರೆ ಅಂಥವರನ್ನು ಮನ್ನಿಸಿದ. ರಾಮನೂ, ಅಂಥದೇ ವಾದ ಬಳಸಿಕೊಂಡು ಸಾಮೂಹಿಕ ನಾಶ ತಡೆವ ಸಲುವಾಗಿ ಒಬ್ಬ ವ್ಯಕ್ತಿಯ ಕೊಲೆಗೆ, ಅದೂ ಧಾರ್ಮಿಕವೆನ್ನಲಾಗದ ಕೊಲೆಗೆ ಕೈಹಾಕಬೇಕಾಯಿತು ಎನ್ನಬಹುದಿತ್ತು. ತಾನು ಅಂಥ ಕುಕಾರ್ಯ ಮಾಡಿದ್ದು ಜೀವನದಲ್ಲಿ ಒಮ್ಮೆ ಮಾತ್ರ. ಅದರಿಂದ ತೊಂದರೆಯಾದ್ದು ತನಗೇ, ಬೇರೆ ಯಾವುದೇ ಜನಕ್ಕೆ ಹಿಂಸೆಯಿಲ್ಲದೆ ಇಡೀ ರಾಜ್ಯವೊಂದನ್ನು ಸತ್ಪಥಕ್ಕೆ ಹಚ್ಚಿದೆ ಎಂದು ಹೇಳಿಕೊಳ್ಳಬಹುದಿತ್ತು. ಇದು ಮೊದಲಾಗಿ ಸುಗ್ರೀವ ಧರ್ಮಕೂಟದೊಳಕ್ಕೆ ಸೇರಿಕೊಂಡ, ರಾಮನಿಗೆ ಅಗತ್ಯವಾಗಿದ್ದ ಸೈನ್ಯದಲ್ಲಿ ಬಹುಭಾಗವನ್ನೊದಗಿಸಿದ, ಲಂಕೆಯ ಅಭೇದ್ಯ ಕೋಟೆಯನ್ನು ಒಡೆಸಿದ. ಇದೆಲ್ಲ ನಿಜವಾಗಿ ವಾಲಿಯೊಬ್ಬನ ಕೊಲೆಯಿಂದ ಸಾಧಿಸಿದ್ದು. ಮುಂದೆ ಕೂಡ ಆ ರಾಜ್ಯ ಸ್ವತಂತ್ರವಾಗಿಯೇ ಉಳಿಯಿತು; ಅದು ರಾಮರಾಜ್ಯದ ಮಿತ್ರಕೂಟದಲ್ಲಿ ಕೂಡಿಕೊಂಡಿದ್ದು ಕೂಡ ಅಲ್ಲಿನ ಪ್ರಜೆಗಳ ಇಚ್ಛೆಗನುಸಾರವಾಗಿಯೇ ಇದ್ದೀತು. ಹಾಗಿದ್ದರೂ, ರಾಮನಂಥ ಸೀಮಿತ ವ್ಯಕ್ತಿತ್ವ ಈ ಸಂದರ್ಭದಲ್ಲಿ ನಿಯಮ ಉಲ್ಲಂಘಿಸಿದ್ದು ಅನಪೇಕ್ಷಣೀಯವೇ. ನಿಯಮ ಅಲ್ಪದ್ದಿರಬಹುದು, ಮಹತ್ವದ್ದಿರಬಹುದು; ಉಲ್ಲಂಘನೆ ಜೀವಿತದಲ್ಲಿ ಒಮ್ಮೆ ಮಾತ್ರವೇ ಮಾಡಿದ್ದಿರ ಬಹುದು ಹಾಗೂ ಅದಕ್ಕಿಂತ ದೊಡ್ಡ ಇಲ್ಲವೇ ಉನ್ನತ ನಿಯಮವೊಂದರ ಸ್ಥಾಪನೆಗಾಗಿಯೇ ಇದ್ದಿರಬಹುದು, ಏನಾದರೂ ಇದು ಅನಪೇಕ್ಷಣೀಯ ಎಂದೇ ಎನ್ನಿಸುತ್ತದೆ.

ಅಪಹರಣವಿಲ್ಲದೆ ವಿಸ್ತರಣೆ, ಸಾಮ್ರಾಜ್ಯದಾಹವಿಲ್ಲದೆ ಏಕೀಕರಣಸಾಧನೆ-ಇದು ರಾಮಕಥೆ; ಸೀಮಿತ ವ್ಯಕ್ತಿತ್ವ ಕ್ರಿಯೋತ್ಸಾಹದ ರಾಜಕೀಯದಲ್ಲಿ ಮತ್ತು ರಾಷ್ಟ್ರಾಂತರ ಸಂಬಂಧಗಳಲ್ಲಿ ತನ್ನನ್ನು ತೊಡಗಿಸಿಕೊಂಡ ಕಥೆ. ಕಥಾನಾಯಕ ರಾಮ, ಉದ್ದಕ್ಕೂ, ಶತ್ರುಪಕ್ಷದಲ್ಲಿರುವ ಧಾರ್ಮಿಕರ ಸ್ನೇಹವನ್ನು ಹುಡುಕಿ ಎತ್ತಿಕೊಳ್ಳುವುದಕ್ಕೆ ಮುಂದಾಗುತ್ತಿದ್ದುದನ್ನು ಕಾಣಬಹುದು. ಲಂಕೆಯಲ್ಲೂ ಅವನು ಮರಳಿ ಹಾಗೇ ಮಾಡಿದ. ರಾವಣನ ತಮ್ಮ ವಿಭೀಷಣ ರಾಮನ ಆಶ್ರಯ ಪಡೆದುಕೊಂಡ. ಆದರೆ ಮುಂದೆ ಮಾತ್ರ ಕಿಷ್ಕಿಂಧೆಯ ಕಥೆಯನ್ನು ಅಲ್ಲೂ ಪುನರಾವರ್ತಿಸುವುದು ಸಾಧ್ಯವಾಗಲಿಲ್ಲ. ಲಂಕೆ ಕಿಷ್ಕಿಂಧೆಗಿಂತ ಕಠಿಣವಾಗಿತ್ತು; ಅಲ್ಲಿನ ದೌಷ್ಟ್ಯ ಹೆಚ್ಚು ಬಲಶಾಲಿಯಾಗಿತ್ತು, ಪ್ರೌಢವಾಗಿತ್ತು. ಘೋರ ಯುದ್ಧವೇ ನಡೆದು ಅಸಂಖ್ಯ ಜನರ ಕೊಲೆಯಾಗಬೇಕಾಯಿತು. ಮುಂದೆ ವಿಭೀಷಣ ಅಭಿಷಿಕ್ತನಾದ, ವಿಧವೆಯಾದ ಅಣ್ಣನ ಮಡದಿ ಮಂಡೋದರಿಯನ್ನು ಪತ್ನಿಯಾಗಿ ಸ್ವೀಕರಿಸಿದ. ಇಂದಿಗೆ ಕೂಡ ವಿಭೀಷಣನೆಂದರೆ, ಹೇಗೋ ಏನೋ, ಗೂಢಚಾರತನಕ್ಕೆ ಹಿಂದಿಂದ ಬಂದು ಕೊಲ್ಲುವುದಕ್ಕೆ, ಪಂಚಮದಳಕ್ಕೆ ಇನ್ನೊಂದು ಹೆಸರಾಗಿ

ಉಳಿದುಬಿಟ್ಟಿದ್ದಾನೆ-ಅದೂ ರಾಮನ ಮುಖ್ಯ ಕೇಂದ್ರಗಳಾಗಿದ್ದ ಅವಧ ಪ್ರಾಂತ್ಯದಲ್ಲಿ. ಅತ್ಯಾಶ್ಚರ್ಯವೂ, ಸೂಚಕ ಸ್ತಂಭವೂ ಆಗಿ ಸದಾ ಉಳಿಯುವ ಸಂಗತಿ ಎಂದರೆ ಯಾವ ಕವಿಗಾಯಕನಿಗೂ ವಿಭೀಷಣನ ಪಾಪವನ್ನು ತೊಳೆಯುವುದಾಗಿಲ್ಲ. ದೇವರ ಅವತಾರವಾದ ಸೀಮಿತವ್ಯಕ್ತಿ ರಾಮ ತನ್ನ ಮಿತ್ರವರ್ಗದ ಈತನನ್ನು ಜನ ಒಪ್ಪುವ ಸ್ಥಿತಿಗೆ ಎತ್ತಲು ಅಸಮರ್ಥನಾದ. ರಾಮನ ಸಹವಾಸದ ಸದವಕಾಶ ಸಿಕ್ಕಿದ್ದರೂ ಕೂಡ ವಿಭೀಷಣನ ಅಪಕೀರ್ತಿ ಚಿರಸ್ಥಾಯಿಯಾಗಿಬಿಟ್ಟಿತು. ತನ್ನ ಮಿತ್ರನನ್ನು ಪವಿತ್ರಗೊಳಿಸುವ ಪವಾಡ ಸೀಮಿತವ್ಯಕ್ತಿತ್ವಕ್ಕೆ ಅಸಾಧ್ಯವಾಯಿತು. ಅಥವಾ, ಸೀಮಿತ ವ್ಯಕ್ತಿತ್ವದ ಲಕ್ಷಣವೇ ಅದು ಎನ್ನಬಹುದೆ-ಸದ್ಗುಣಕ್ಕೆ ಜಯ ಸಿಕ್ಕರೂ, ಅದರ ಗೆಲುವಿಗೆ ಕಾರಣನಾದವನು ದ್ರೋಹಿಯೂ ಆಗಿದ್ದರಿಂದ, ಆತ ತನ್ನ ಹೆಸರಿನ ಮೇಲೆ ವಂಚಕತ್ವದ ಕಲಂಕವನ್ನು ಸದಾಕಾಲ ಹೊರಬೇಕಾದ್ದು ತಪ್ಪಲಿಲ್ಲ ಎನ್ನುವುದು?

ಕೃಷ್ಣ ತುಂಬು ಮನುಷ್ಯ. ಆನಂದ ಆಶ್ಚರ್ಯಗಳ ಮಂದಹಾಸ ಅವನ ಮುಖ ಬಿಟ್ಟಿದ್ದಿಲ್ಲ. ದುಷ್ಕಾಲದಲ್ಲಿ ಕೂಡ, ಮಹಾವಿಪತ್ತೇ ದಾರಿಕಾಯುವಾಗ ಕೂಡ ಅವನ ಕಣ್ಣುಗಳಲ್ಲಾದರೂ ಆ ಮಂದಹಾಸ ಬೆಳಗುತ್ತಿತ್ತು. ಪ್ರಬುದ್ಧನಾದ ಮೇಲೆ ಯಾವುದೇ ಪ್ರಾಮಾಣಿಕ ಮನುಷ್ಯ ಇಡೀ ಜೀವಿತದಲ್ಲಿ ಒಂದೆರಡು ಸಲಕ್ಕಿಂತ ಹೆಚ್ಚು ಅಳುವುದಿಲ್ಲ, ಬಹಿರಂಗವಾಗಿಯಂತೂ ಖಂಡಿತ ಇಲ್ಲ. ರಾಮ ತನ್ನ ಪ್ರಬುದ್ಧ ಜೀವಿತದಲ್ಲಿ ಅತ್ತದ್ದು ಪ್ರಾಯಶಃ ಎರಡು ಬಾರಿ ಅಥವಾ ಒಂದು ಸಲ ಮಾತ್ರ. ಆದರೆ ಸದಾ ಕಣ್ಣು ತುಂಬಿ ಯಾವ ಕಾಲದಲ್ಲೂ ಧಾರೆ ಹರಿದೀತು ಎಂಬಂತಿರುವ ಜನರೇ ರಾಮ ಕೃಷ್ಣರ ಈ ನೆಲವನ್ನು ಮುತ್ತಿಕೊಂಡಿದ್ದಾರೆ; ಮತ್ತು ವಿವಂಚಿತರಾದ ಹಿಂಡು ಹಿಂಡು ಜನ ಅಂಥವರನ್ನು ತೀವ್ರ ಅನುಭಾವಿಗಳೆಂದು ತಿಳಿದು ಭ್ರಾಂತಿಗೊಳ್ಳುತ್ತಾರೆ. ಇಂಥ ವಂಚಕತನ ಕೃಷ್ಣನಲ್ಲಿ ಭಾಗಶಃ ಆದರೂ ಇತ್ತು. ಅವನು ಅತ್ತದ್ದಿಲ್ಲ, ಆದರೆ ಲಕ್ಷೋಪಲಕ್ಷ ಜನ ಈವತ್ತಿಗೂ ಅಳುತ್ತಿರುವಂತೆ ಮಾಡಿದ್ದಾನೆ ಅವನು. ಅವನ ಜೀವಿತ ಕಾಲದಲ್ಲೆ ವೃಂದಾವನದ ಹಾಲುಹುಡುಗಿಯರು ಪ್ರಲಾಪಿಸುತ್ತಿದ್ದರು; "ಇಡೀ ಹಗಲು, ಇಡೀ ರಾತ್ರಿ ಕಣ್ಣುಗಳಿಂದ ವರ್ಷಧಾರೆ ಸುರಿಸುತ್ತಿರುವ, ಮೊಲೆಗಳ ಎಡೆಯಲ್ಲಿ ಕಣ್ಣೀರು ಹಳ್ಳ ಹರಿಯುತ್ತಿರುವ" ಅವರ ಬಗ್ಗೆ ಈವತ್ತು ಕೂಡ ಹಾಡುಗಳನ್ನು ಕೇಳುತ್ತೇವೆ. ಆ ಆಕ್ರಂದನದಲ್ಲಿ ಆಸೆಯ ಸೊಕ್ಕು ಮೇರೆವರಿದಿರುವಂತೆ ಭಾಸವಾಗುತ್ತದೆ; ತನ್ನತನದ ಕಿಂಚಿತ್ತೂ ಶೇಷ ಉಳಿಯದಂತೆ ಸಮರ್ಪಿಸಿಕೊಂಡ ಪೂರ್ಣತ್ವ ಹೊಳೆಯುತ್ತದೆ. ಅಂಥ ಸಮರ್ಪಣವನ್ನು, ಶರಣತೆಯನ್ನು ಅರಳಿಸಿದ ಮಹಾಪ್ರೇಮಿ ಕೃಷ್ಣ. ಮತ್ತು ಇಂದು ಕೂಡ ಲಕ್ಷೋಪಲಕ್ಷ ಸ್ತ್ರೀ ಪುರುಷರು, ಹೆಣ್ಣಿನಂತೆ ವೇಷವುಟ್ಟೋ ಅಥವಾ ಇನ್ನಿತರ ರೀತಿಗಳಿಂದಲೋ ಹೆಣ್ಣೇ ಆಗಿ ವರ್ತಿಸುತ್ತ ತಮ್ಮ ಪ್ರೇಮಿಯನ್ನು ಸಂತೃಪ್ತಗೊಳಿಸಲು

ಯತ್ನಿಸುವ ಗಂಡುಗಳು-ಕಣ್ಣೀರು ತುಂಬಿಯೂ, ಅದಿಲ್ಲದೆಯೂ ತಮ್ಮನ್ನು ಕೃಷ್ಣಾರ್ಪಣ ಮಾಡಿಕೊಳ್ಳಲು ವ್ಯರ್ಥಪ್ರಯತ್ನ ನಡೆಸುತ್ತಿದ್ದಾರೆ. ಈ ಅನುಭವ ಕೆಲವು ಸಲ ರಾಜಕೀಯಕ್ಕೆ ಮಗುಚಿಕೊಳ್ಳುತ್ತದೆ ಮತ್ತು ಷಂಡತನ, ವಂಚನೆಯ ಜೊತೆ ಕೈಗೂಡಿಸಿಕೊಳ್ಳುತ್ತದೆ.

ಹುಟ್ಟಿದ್ದು ಮೊದಲಾಗಿ ಸಾಯುವ ತನಕವೂ ಕೃಷ್ಣ ಅಸಾಮಾನ್ಯನಾಗಿಯೇ ಇದ್ದ, ಅಸಂಭವವೆನ್ನಿಸುವ ಹಾಗಿದ್ದ, ಏಕಮೇವನಾಗಿದ್ದ. ರಾಜನಾಗಿದ್ದ ಮಾವ, ಮಂತ್ರಿಯಾಗಿದ್ದ ತನ್ನ ತಂದೆಯನ್ನೂ ತಾಯಿಯನ್ನೂ ಯಾವ ಸೆರೆಗೆ ದೂಡಿದ್ದನೋ ಆ ಸೆರೆಮನೆಯಲ್ಲೆ ಆತ ಹುಟ್ಟಿದ. ಅವನಿಗೆ ಮುಂಚೆ ಹುಟ್ಟಿದ್ದ ಹೆಣ್ಣುಗಂಡುಗಳೆಲ್ಲ ಹುಟ್ಟುತ್ತಿದ್ದಂತೆಯೇ ಕೊಲೆಯಾಗುತ್ತಿದ್ದರು. ಇವನನ್ನು ಮಾತ್ರ ಬುಟ್ಟಿಯಲ್ಲಿಟ್ಟು ಮುಚ್ಚಿ ಸೆರೆಯಿಂದ ಹೊರತಂದರು; ಮುಂದೆ ನದಿಯನ್ನು ದಾಟಿ ಸುರಕ್ಷಿತ ಪ್ರದೇಶಕ್ಕೆ ಕೊಂಡೊಯ್ಯಬೇಕಾಗಿತ್ತು. ಯಮುನೆ ಉಕ್ಕೇರುತಿದ್ದಳು, ಆಳ ಆಳವನ್ನು ಆಹ್ವಾನಿಸಬಂದಿತೋ ಎನ್ನುವ ಹಾಗೆ. ವಸುದೇವ ಬುಟ್ಟಿ ಎತ್ತಿದಷ್ಟೂ ಯಮುನೆ ಮೇಲೇರಿ ಉಕ್ಕುತ್ತಿದ್ದಳು; ಕೊನೆಗೆ ಕೃಷ್ಣ ತನ್ನ ಗುಲಾಬಿ ಪಾದಗಳನ್ನು ಕೆಳಗಿಳಿಸಿ ನೀರು ಮುಟ್ಟಿದಾಗ ಆಕೆ ಶಾಂತಳಾದಳು. ಹುಟ್ಟು ಹೀಗೆ, ಸಾವು ಇನ್ನೊಂದು ಬಗೆ: ಅನೇಕ ವರ್ಷ ಕಳೆದಿದ್ದವು, ಅವನ ಕಾರ್ಯಭಾರಗಳೆಲ್ಲ ತೀರಿದ್ದವು; ಅವನ ಪರಿಚಯದವರೆಲ್ಲ ಕೊಲೆಯಾಗಿದ್ದರು ಇಲ್ಲವೆ ಚದುರಿದ್ದರು; ಕೆಲವರು ಹಿಮಾಲಯದ ಹಾದಿಯಲ್ಲಿದ್ದರೆ ಕೆಲವರು ಸ್ವರ್ಗದ ದಾರಿ ತುಳಿದಿದ್ದರು. ಅವನ ಕುಲದ ಹೆಣ್ಣುಗಳು ಕೂಡ ಪುಂಡು ದರೋಡೆಕಾರರ ಕೈಗೆ ಸಿಕ್ಕಿ ಅಪಹೃತರಾಗಿದ್ದರು. ಕೃಷ್ಣ ದ್ವಾರಕೆಯತ್ತ ತನ್ನ ಏಕಾಂತದ ದಾರಿ ಸವೆಸುತ್ತಿದ್ದ. ಒಂದು ಗಿಡದ ನೆರಳಲ್ಲಿ ಸ್ವಲ್ಪ ವಿಶ್ರಮಿಸಲು ಕೂತ. ಒಬ್ಬ ಬೇಡರವನಿಗೆ ಕೃಷ್ಣನ ತುದಿಗಾಲು ಜಿಂಕೆಯ ಕಾಲಿನಂತೆ ಕಂಡಿತು. ಬಿಲ್ಲು ನೇರ ಸೀಳಿ ಬಂತು, ಕೃಷ್ಣ ಮೃತಹೊಂದಿದ. ಈ ಹೊತ್ತಲ್ಲಿ ಕೃಷ್ಣ ಏನು ಮಾಡಿದ್ದಾನು? ಅವನ ಕೊನೆಯ ನೋಟವೂ, ಅದರ ಜೊತೆ ತಿಳಿದು ಬರುವ ಕಾರುಣ್ಯದ ಮಂದಹಾಸವೂ ಬೇಡನನ್ನು ಬೆಳಗಿತೆ? ಅಲ್ಲೆ ಇರಬಹುದಾದ ತನ್ನ ಕೊಳಲಿನತ್ತ ಕೈ ಚಾಚಿದನೆ, ಅದರಲ್ಲಿ ದಿವ್ಯವಾದ ಅಂತಿಮ ತಾನವನ್ನು ಬಾರಿಸಿದನೆ-ಅಥವಾ, ಕೊಳಲು ಹಿಡಿದು ಹೊರಚಾಚಿ ಬಿದ್ದಿದ್ದ ತನ್ನ ಕೈಯನ್ನು ಕಂಡು ಮೆಲು ನಕ್ಕು ತೃಪ್ತನಾದನೆ? ಅವನ ಮನಸ್ಸಲ್ಲಿ ಏನು ಹಾದಿರಬಹುದು? ಹರ್ಷ ಕೊಡುವ , ಹರಹು ಕೊಡುವ ಬದುಕಿನ ಆಟವೆ, ಎಲ್ಲ ಲೀಲಾಮಾತ್ರವೇ ಆಗಿರುವ ಈ ಭ್ರಮೆ ಸತ್ಯಗಳೆ? ಅಥವಾ, ಒಡೆಯ ಶ್ರೀವಿಷ್ಣು ಸ್ವರ್ಗದಲ್ಲಿಲ್ಲದೆ ಕೊರತೆ ಕಂಡು ಅಲ್ಲಿಂದ ಕೂಗಿ ಬೇಡುತ್ತಿರುವ ದೇವಾನುದೇವತೆಗಳ ಆರ್ತ ಕರೆಯೆ?

ಕೃಷ್ಣ ಕಳ್ಳನಾಗಿದ್ದ, ಸುಳ್ಳುಗಾರನಾಗಿದ್ದ, ವಂಚಕನಾಗಿದ್ದ, ಕೊಲೆಗಾರನಾಗಿದ್ದ; ಇವುಗಳನ್ನೂ ಇನ್ನಿತರ ಇಂಥ ಪಾತಕಗಳನ್ನೂ, ಕಿಂಚಿತ್ ಪಶ್ಚಾತ್ತಾಪವೂ ಇಲ್ಲದೆ ಮಾಡಿದ. ತನ್ನ ಸಾಕುತಾಯಿಯಲ್ಲಿ ಬೆಣ್ಣೆ ಕದಿಯುವುದರಿಂದ ಪ್ರಾರಂಭಿಸಿ ಮತ್ತೊಬ್ಬನ ಹೆಂಡತಿಯನ್ನು ಕದಿಯುವ ಹಂತಕ್ಕೆ ಏರಿದ. ಮಹಾಭಾರತದ ಕಾಲದಲ್ಲಿ ಎಂದೆಂದೂ ಸಟೆಯಾಡದಿದ್ದ ಏಕೈಕ ವ್ಯಕ್ತಿಯಿಂದ ಅರೆಸುಳ್ಳು ಹೇಳಿಸಿದ. ಅವನ ಸ್ವಂತದ ಸುಳ್ಳುಗಳಿಗಂತೂ ಲೆಕ್ಕವೇ ಇಲ್ಲ. ಸೂರ್ಯನನ್ನು ಮುಚ್ಚಿ ಸುಳ್ಳು ಅಸ್ತಮಯ ಕಲ್ಪಿಸಿ, ಅದೇ ಸುಳ್ಳು ಕತ್ತಲಲ್ಲಿ ಮಹಾವೈರಿಯೊಬ್ಬನನ್ನು ಕೊಲ್ಲಿಸಿ, ಪುನಃ ಸೂರ್ಯ ಬೆಳಗುವ ಹಾಗೆ ಮಾಡಿದ. ಯೋಧಕುಲತಿಲಕನ ಎದುರು ಶಿಖಂಡಿಯನ್ನು ತಂದು ನಿಲ್ಲಿಸಿದ ; ಅಂಥ ಅತ್ಯಪೂರ್ವ ಕವಚದ ಹಿನ್ನೆಲೆಗೆ ನಿಂತು ಶಸ್ತ್ರ ತ್ಯಾಗ ಮಾಡಿದ ಭೀಷ್ಮ ಪಿತಾಮಹನಿಗೆ ಬಾಣಪ್ರಯೋಗ ಮಾಡಿಸಿದ. ಮಿತ್ರನಿಗೆ ತನ್ನ ತಂಗಿಯನ್ನೇ ಓಡಿಸಿಕೊಂಡು ಹೋಗಲು ನೆರವಾದ.

ಕರ್ಣರಥದ ಕಥೆ ಪಾತಕಗಳಿಗೆ ಅಥವಾ ಅಧರ್ಮಯುದ್ಧಕ್ಕೆ ಹೇಳಿಕೊಳ್ಳಬಹುದಾದ ಮಾದರಿ. ಯಾವನು ತನ್ನ ಕಾಲದಲ್ಲೆ ಅದ್ವಿತೀಯನಾದ ತ್ಯಾಗ ಮೂರ್ತಿಯೋ, ಯುದ್ಧ ಕೌಶಲದಲ್ಲಿ, ಶೌರ್ಯದಲ್ಲಿ ಪ್ರಾಯಶಃ ಯಾವನು ಸಾಟಿಯಿಲ್ಲದವನಾಗಿದ್ದನೋ, ಅರ್ಜುನನೂ ತನ್ನಂತೆ ಅಸಹಾಯಕನಾಗಿದ್ದ ಪಕ್ಷದಲ್ಲಿ ಯಾವನು ಆತನನ್ನು ಶಕ್ತಿಗುಂದಿಸಿಬಿಡಬಲ್ಲವನಾಗಿದ್ದನೋ ಅಂಥ ಕರ್ಣನ ರಥ ಯುದ್ಧ ಮಧ್ಯದಲ್ಲಿ ಹೂತುಹೋದ ವೇಳೆ, ಅವನ ಮೇಲೆ ಆ ಕ್ಷಣದಲ್ಲೆ ಬಾಣಪ್ರಯೋಗ ಮಾಡಲು ಅರ್ಜುನನಿಗೆ ಆಜ್ಞೆ ಮಾಡಿದ, ಕೃಷ್ಣ. ಕರ್ಣ ಆ ಅಧರ್ಮವನ್ನು ದೂರಿದ. ಈ ಘಟ್ಟದಲ್ಲಿ, ಮಹಾಭಾರತ ಪ್ರಾಯಶಃ ಆತನಕ ಯಾವ ಭಾಗದಲ್ಲೂ ಇಲ್ಲದಂಥ ವಾಗ್ವೈಭವವನ್ನು ಸೂರೆಚೆಲ್ಲುತ್ತದೆ. ಕೃಷ್ಣ ರಾಶಿರಾಶಿ ಘಟನೆಗಳನ್ನು ಜ್ಞಾಪಿಸಿದ. ಒಂದೊಂದು ಘಟನೆಯನ್ನೂ ಕಾವ್ಯೋದ್ರೇಕದಿಂದ ವರ್ಣಿಸುತ್ತ ಕೊನೆಗೆ "ಆಗ ನಿನ್ನ ಧರ್ಮ ಎಲ್ಲಿ ಅಡಗಿ ಕೂತಿತ್ತು?" ಎಂಬ ಪ್ರಶ್ನಪಲ್ಲವಿ ಹಾಡಿ ಮುಗಿಸುತ್ತಿದ್ದ. ಧರ್ಮದ ಈ ಅಗ್ನಿವರ್ಷದಲ್ಲಿ, ಜ್ಯೋತಿಪ್ರವಾಹದಲ್ಲಿ ಪೂರ್ವ ತೀರ್ಮಾನಗಳು ಸೋತು ಕುಸಿಯುತ್ತವೆ. ಎಂಥ ವಿಮರ್ಶಾತ್ಮಕ ಬುದ್ಧಿಯೂ ತರಗೆಲೆಯಾಗಿ ತಿರಿದುಬಿಡುತ್ತದೆ-ತತ್ಕಾಲ ಮಾತ್ರವಾದರೂ. ದ್ರೌಪದಿಯ ಕಥೆ-ದುರ್ಯೋಧನನ ಸಭಾವೈಭವದ ಮಧ್ಯೆ ಎಳೆತಂದು ಸೀರೆ ಸುಲಿದದ್ದು-ನೆನಪಾಗುತ್ತದೆ. ಅಲ್ಲಿ ಕರ್ಣ ಕೂತಿದ್ದ, ಭೀಷ್ಮನಿದ್ದ, ಆದರೆ ಅವರು ದುರ್ಯೋಧನನ ಉಪ್ಪು ತಿಂದವರಾಗಿದ್ದರು. ತಿಂದ ಉಪ್ಪು ಮನುಷ್ಯನ ಮನಸ್ಸನ್ನು ತನ್ನಂತೆ ತಿದ್ದುತ್ತದೆ ಎನ್ನುತ್ತಾರೆ. ಮೇಲಾಗಿ, ಕೊಟ್ಟು ನಡೆಸಿದವನಿಗೆ ತಪ್ಪಬಾರದ ಜೋಳದ ಪಾಳಿಯೂ

ಇತ್ತು. ಆಗ ದ್ರೌಪದಿ ಕೃಷ್ಣನನ್ನು ಸ್ಮರಿಸಿದಳು. ಕೃಷ್ಣ ವಸ್ತ್ರವನ್ನು ಅಕ್ಷಯವಾಗಿಸಿದ್ದ. ಕೃಷ್ಣ-ದ್ರೌಪದಿಯರ ಬಗ್ಗೆ ನೋಡುವಾಗ ಅವರಲ್ಲಿ ಅನುಕ್ತಿಯೇ ಸೂಚಿಸುವಂಥ ಆಳವಾದ ಕೋಮಲ ಸಂಬಂಧ ಬೆಳೆದಿದ್ದಂತೆ ತೋರುತ್ತದೆ.

ಕೃಷ್ಣನ ಭಕ್ತರು ಅವನ ಒಂದೊಂದು ಕೃತಿಗೂ ಬೇರೆ ಬಗೆಯ ಅರ್ಥವನ್ನೇ ಹಚ್ಚಿ ಹೇಳಲು ಪ್ರಯತ್ನಿಸುತ್ತಾರೆ. ಅವನು ಬೆಣ್ಣೆ ಕದ್ದದ್ದು ತನ್ನ ಸ್ನೇಹಿತರಲ್ಲಿ ಹಂಚುವುದಕ್ಕಾಗಿ, ತನ್ನ ತಾಯಿಯ ಹೃದಯವನ್ನು ಕಳವಳಗೊಳಿಸಿ ಅನಂತರ ಹರ್ಷಗೊಳಿಸುವ ಸಲುವಾಗಿ, ಬಾಲ್ಯ ಹೇಗಿರಬೇಕೆಂಬುದನ್ನು ಆಡಿ ತೋರಿಸಲು, ಮುಂದಿನ ಪೀಳಿಗೆಗಳು ತನ್ನ ಬಾಲ್ಯದ ಮೂಲಕ ಬಾಲಕ್ರೀಡೆಯ ಆದರ್ಶಗಳನ್ನು ಕನಸುಕಟ್ಟಿಕೊಳ್ಳಲಿ ಎಂಬ ಬಗ್ಗೆ ಮುಂತಾಗಿ. ಆತ ಯಾರುಯಾರಿಗೆ ಏನೇನೆಲ್ಲ ಮಾಡಿದನೋ ಅವರೆಲ್ಲ ಆತನ ಭಾಗವೇ ಆಗಿದ್ದರು ಎಂಬುದನ್ನು ಬಿಟ್ಟರೆ, ಆತ ತನಗಾಗಿ ಎಂದೂ ಏನೂ ಮಾಡಿಕೊಂಡಿದ್ದಿಲ್ಲ. ಆತ ರಾಧೆಯನ್ನು ಅಪಹರಿಸಿದ್ದು ತನಗಾಗಿ ಅಲ್ಲ, ಆಕೆಗೆ ಮೋಕ್ಷವಾಗಲಿ ಎಂಬುದಕ್ಕೂ ಅಲ್ಲ, ಎಲ್ಲ ಪೀಳಿಗೆಗಳ ಅಸಂಖ್ಯ ಮಹಿಳೆಯರಿಗಾಗಿ ಸ್ತ್ರೀಕುಲಕ್ಕಾಗಿ-ಅವರೆಲ್ಲ ಶೃಂಖಲಿತವಾದ ತಮ್ಮ ಭೌತಗಾತ್ರಗಳ ಆಚೆ ಹೆಜ್ಜೆಯಿಟ್ಟು ವಿಶ್ವವನ್ನು ಅನುಸಂಧಾನ ಮಾಡಲಿ ಎಂಬ ಅಭಿಲಾಷೆಯಿಂದ. ಇಂಥ ವ್ಯಾಖ್ಯಾನ ವಿವರಣೆಗಳೆಲ್ಲವೂ ಅನಗತ್ಯ. ಭಗವದ್ಗೀತೆಯಂಥ ಜಗತ್ತಿನ ಮಹಾಗೀತವನ್ನೇ ಹಾಡಿದ ಕೃಷ್ಣ ಯಾರಿಗೆ ಅಪರಿಚಿತ? ತತ್ತ್ವವನ್ನು ಸಂಗೀತವಾಗಿಸಿದ, ಚಿಂತನವನ್ನು ಕಥೆ ಮಾಡದೆ, ಕಾವ್ಯ ಮಾಡದೆ, ನೇರ ಹಾಡಿದ ಜಗತ್ತಿನ ಏಕೈಕ ದೇಶ ಇದು. ಇಲ್ಲಿನ ಋಷಿಗಳು ತಮ್ಮ ಅನುಭವದಿಂದ ಅರ್ಕತೆಗೆದ ಚಿಂತನಗಳನ್ನು, ಸತ್ಯಗಳನ್ನು ಅನೇಕ ಉಪನಿಷತ್ತುಗಳು ಹಾಡಿದವು. ಕೃಷ್ಣ ಅವೆಲ್ಲವನ್ನೂ ರಸಪಾಕ ಮಾಡಿದ, ಮತ್ತೂ ಶುದ್ಧವಾದ ಸಾರವನ್ನು ಹಿಂಡಿದ. ಮುಂದಿನ ವಿದ್ವಾಂಸರು ಮಾತ್ರ ವಿವಿಧ ರುಚಿಗಳಲ್ಲಿ ಪಕ್ಷಪಾತ ತೋರಿಸಿದ್ದೂ ನಿಜ. ಗೀತೆಯ ಮೂಲಕ ತನ್ನ ಶುದ್ಧಚಿಂತನವನ್ನು ಹಾಡಿದ್ದಾನೆ, ಕೃಷ್ಣ.

ಆತ್ಮದ ಬಗ್ಗೆ ಅವನು ಹಾಡಿದ್ದು, ಅದರ ಅವಿನಾಶಿತ್ವ, ಅಗ್ನಿ ಸುಡದಂಥ, ನೀರು ನೆನೆಸದಂಥ, ಗಾಳಿ ಶೋಷಿಸದಂಥ ನಿತ್ಯತ್ವ, ತನಗೆ ಬೇಕೆಂಬಂತೆ ಧರಿಸುವ ಇಲ್ಲವೆ ತೆಗೆದು ಎಸೆಯುವ ಉಡುಪಿನಂತೆ ಅದು ಶರೀರಗಳನ್ನು ಬಳಸುವ ರೀತಿ ಇವೆಲ್ಲ-ಆ ಮಾಂತ್ರಿಕ ವಾಗ್ವೈಭವದಿಂದ ನಂಬದವರನ್ನೂ ಸೆಳೆದುಕೊಂಡು ಹೋಗಿಬಿಡುತ್ತದೆ. ಅವನು ಕರ್ಮವನ್ನು ಕುರಿತು ಹಾಡಿದ; ತಮ್ಮ ಕರ್ಮವನ್ನು ತಾವು ಮಾಡಲು, ಫಲಾಪೇಕ್ಷೆ ಬಿಟ್ಟು ಫಲಕ್ಕೆ ಕಾರಣಭೂತರೂ ಆಗದೆ ಕರ್ಮಬಂಧನವನ್ನೂ ತಪ್ಪಿಸಿಕೊಂಡು ಸಂತತವೂ ನಿಸ್ಸಂಗಕರ್ಮಿಗಳಾಗುವಂತೆ ಜನಕ್ಕೆ

ಉದ್ಘೋಷ ಮಾಡಿ ಹೇಳಿದ. ಸಮತ್ವದ ಬಗ್ಗೆ ಹಾಡಿದ. ಸುಖದುಃಖಗಳಲ್ಲಿ, ಜಯಾಪಜಯಗಳಲ್ಲಿ, ಶೀತೋಷ್ಣಗಳಲ್ಲಿ, ಲಾಭಾಲಾಭಗಳಲ್ಲಿ ಮತ್ತು ಜೀವನದ ಎಲ್ಲ ಇಂಥ ದ್ವಂದ್ವಗಳಲ್ಲಿ ಏಕೋದೃಢವಾಗಿ, ಅನುದ್ವಿಗ್ನವಾಗಿ ನಿಲ್ಲುವ ಸಮತ್ವ. ಇಂಡಿಯಾದ ಎಲ್ಲ ಭಾಷೆಗಳಿಗೂ ಸಾಮಾನ್ಯವಾಗಿರುವ ಪದ 'ಸಮತ್ವ' ಎಂಬುದು. ಅದೊಂದು ಪದದಿಂದ ಈ ಭಾಷೆಗಳೆಲ್ಲ ವಿಶಿಷ್ಟವಾಗಿವೆ. ಈ ಪದ 'ಸಮಾನತೆ'ಯ ಬಾಹ್ಯಸ್ಥಿತಿಯನ್ನೂ 'ಸಮತೆ'ಯ ಆಂತರಿಕ ಅವಸ್ಥೆಯನ್ನೂ ಏಕಸಂಕೇತದಲ್ಲಿ ಸೂಚಿಸುತ್ತದೆ. ಸಮಾನತೆ ಮತ್ತು ಸಮತೆ- ಒಂದೇ ನಾಣ್ಯದ ಈ ಎರಡು ಮುಖಗಳನ್ನು ಕುರಿತು ಕೃಷ್ಣ ಮತ್ತೂ ಸ್ಪಷ್ಟವಾಗಿ ಇನ್ನಷ್ಟು ಹಾಡಬಾರದಿತ್ತೇ ಎನ್ನಿಸುತ್ತದೆ. ಸಮಾನತೆ ಸಮಾಜದಲ್ಲಿನ ಸ್ಥಿತಿಯಾಗಿ, ಸಮತೆ ವ್ಯಕ್ತಿಯಲ್ಲಿನ ಅವಸ್ಥೆಯಾಗಿ ವಿಭಕ್ತಗಳ ಮಧ್ಯೆ ಅವಿಭಕ್ತವಿರುವುದನ್ನು ಕಾಣಬಲ್ಲಂಥ 'ಸಮತ್ವ'ದ ಬಗ್ಗೆ ಇನ್ನೂ ಹಾಡಬೇಕಿತ್ತೆನಿಸುತ್ತದೆ. ಇಂಡಿಯಾದಲ್ಲಿ, ಅಂಥ ಮಾಂತ್ರಿಕವೂ, ಚಿಂತನಪರವೂ ಆದ ಸಂಗೀತಲಹರಿಯ ನಡುವೆ ಬೆಳೆಯದಿರುವ ಮಗು ಯಾವುದು? ಈ ಮಕ್ಕಳಿಗೆ ಕೃಷ್ಣನನ್ನು ಸಮರ್ಥಿಸಿ ತೋರಿಸುವ ಯತ್ನವೆಂದರೆ, ಅದು ಅವರ ಇಡೀ ಬೆಳವಣಿಗೆಯ ಪ್ರಕ್ರಿಯೆಯನ್ನೆ ಅಲ್ಲಗಳೆದಂತೆ. ಆತ್ಯಂತಿಕವಾಗಿ ನೋಡಿದಾಗ,ಕೃಷ್ಣ ನಮ್ಮಲ್ಲಿ ವಿಷಾದವನ್ನೆ ಉಂಟುಮಾಡುತ್ತಾನೆ. ತನಗಲ್ಲದೆ ತನ್ನ ಇತರ ಅಂಗೋಪಾಂಗಗಳಿಗಾಗಿ ಸದಾ ಅನಂತವಾಗಿ, ಅವಿಶ್ರಾಂತವಾಗಿ ಟುಕುಗುಡುವ ಪಾಪದ ಹೃದಯದಂತಿದ್ದಾನೆ ಅವನು. ಅಂಗಾಂಗಗಳ ಬೇಡಿಕೆಗಾಗಿ ಯಾವತ್ಕಾಲವೂ ಟುಕುಗುಡುತ್ತಿರುವುದು, ಶಕ್ತಿ ಚಿಮ್ಮಿ ಭೋರ್ಗರೆಯತ್ತಿರುವುದು-ಯಾಕೆ ಬೇಕು ಈ ಹೃದಯಕ್ಕೆ? ಕೃಷ್ಣ ಹೃದಯದಂತಿದ್ದ, ಆದರೆ ಜನರ ಮುಂದಿನ ಎಲ್ಲ ಪೀಳಿಗೆಗೂ ತನ್ನಂತೇ ಇರಬೇಕೆನ್ನಿಸುವ ಆಸೆ ಕಲಿಸಿದ-ಅವರು ಎಂದೂ ಅವನಂತೆ ಆಗದಿದ್ದರೂ, ಹಾಗಾಗುವ ಉಮೇದಿನಲ್ಲಿ ಅವನ ಕೊಳೆ ವಂಚನೆಗಳನ್ನಷ್ಟೆ ರೂಢಿಸಿ ಕೊಂಡರೂ.

ರಾಮ ಮತ್ತು ಕೃಷ್ಣ ಈ ಇಬ್ಬರ ವ್ಯಕ್ತಿತ್ವದ ನಡುವೆ ಒಂದು ಕುತೂಹಲಕಾರಿಯಾದ ಅಂಶ ಎದ್ದು ಕಾಣುತ್ತದೆ. ಕೃಷ್ಣ ಕಣಕಣದಲ್ಲೂ ಪವಾಡಪುರುಷ; ಪ್ರವಾಹಗಳೂ, ಸೂರ್ಯಾಸ್ತಮಯಗಳೂ ಅವನ ಇಚ್ಛೆಯ ಬಂಟರಾಗಿದ್ದವು ಮತ್ತು ಅವನು ಸಂಭವ-ಅಸಂಭವಗಳ ನಡುವಣ ಗೆರೆಯನ್ನೆ ಅಳಿಸಿಬಿಟ್ಟ. ರಾಮ ಯಾವುದೇ ಪವಾಡ ಮೆರೆಯಲಿಲ್ಲ. ಇಂಡಿಯಾ ಮತ್ತು ಲಂಕಾದ ಮಧ್ಯೆ ಸೇತುವೆ ಕಟ್ಟಿದ್ದು ಕೂಡ ಒಂದೊಂದೇ ಕಲ್ಲು ಕೂಡಿಸಿ ಕೂಡಿಸಿ-ಮೊದಲಿನ ಸಮುದ್ರ ಪೂಜೆ ಅದರ ಕೋಪ, ಇಂಥ ಅತ್ಯಲ್ಪ ಬಿಟ್ಟರೆ. ಆದರೆ ಈ ಎರಡು ವ್ಯಕ್ತಿಗಳ ಆದ್ಯಂತ ಜೀವಿತವನ್ನು ಇಡೀ ನೋಡಿ ತಃಖ್ತೆ ಹಾಕಿದಾಗ, ರಾಮ ಅದ್ವಿತೀಯ ಪವಾಡಪುರುಷನಾಗಿ ನಿಂತು ಬಿಡುತ್ತಾನೆ, ಕೃಷ್ಣನ ಸಾಧನೆ

ಬಯಲೆನ್ನಿಸಿಬಿಡುತ್ತದೆ. ಅಣ್ಣತಮ್ಮಂದಿರಿಬ್ಬರು ಮತ್ತು ಒಬ್ಬ ಹೆಣ್ಣು-ಇಬ್ಬರು ಯೋಧರು ಮತ್ತು ಒಬ್ಬ ಅನ್ನಪೂರ್ಣೆ-ಹೀಗೆ ಹೊರಟಾಗ ಕೇವಲ ಮೂವರಾಗಿದ್ದವರು, ಅಯೋಧ್ಯೆಯಿಂದ ಲಂಕೆಗೆ ಎರಡು ಸಹಸ್ರ ಮೈಲು ಕ್ರಮಿಸಿ ಮರಳುವಾಗ ಇಡೀ ಚಕ್ರಾಧಿಪತ್ಯವನ್ನೆ ಪದಾಕ್ರಾಂತಗೊಳಿಸಿದ್ದರು. ಕೃಷ್ಣನೋ - ಇದ್ದ ಸಾಮ್ರಾಜ್ಯವನ್ನು ಇದ್ದಂತೇ ರಾಜವಂಶದ ಒಂದು ಶಾಖೆಯಿಂದ ಮತ್ತೊಂದಕ್ಕೆ ಹಸ್ತಾಂತರಗೊಳಿಸಿದ್ದಲ್ಲದೆ ಮತ್ತೇನೂ ಮಾಡಿರಲಿಲ್ಲ. ಇದೊಂದು ಒಗಟೇ. ಏನಿಲ್ಲೆಂದರೆ ರಾಜಕಾರಣದ ದೃಷ್ಟಿಯಿಂದಲಾದರೂ, ಸೀಮಿತ ವ್ಯಕ್ತಿತ್ವ ದೊಡ್ಡದೂ, ಅರ್ಥಪೂರ್ಣವೂ ಆಗಿ ಸಮೃದ್ಧ ವ್ಯಕ್ತಿತ್ವ ಅಲ್ಪವೂ, ಅರ್ಥರಹಿತವೂ ಆಗಿಬಿಡುವ ಈ ಒಗಟು, ಕಾಲದ ಒಗಟಿನಂತೆಯೇ ಬಿಡಿಸಲು ಬಾರದ್ದಾಗಿ ಕಾಣುತ್ತದೆ. ಮಹತ್ ಘಟನೆಗಳಿಲ್ಲದಿರುವ ಜೀವನದಲ್ಲಿ, ಒಂದೊಂದು ಕ್ಷಣವೂ ಭಾರವಾಗಿ ಅಸಹ್ಯ ದೀರ್ಘವಾಗಿ ತೋರಿದರೂ ಹತ್ತಿಪ್ಪತ್ತು ವರ್ಷಗಳ ಇಲ್ಲವೆ ಒಂದು ಜೀವಿತಾವಧಿಯ ಮೊತ್ತದಲ್ಲಿ ಅದು ಸುಲಭ ಕಳೆದದ್ದೆಂಬಂತೆ, ಶೀಘ್ರ ಹಾರಿದ್ದೆಂಬಂತೆ ಭಾಸವಾಗುತ್ತದೆ. ಅದೇ, ಅದ್ಭುತ ಜೀವನವೊಂದರಲ್ಲಿ ಒಂದೊಂದು ಕ್ಷಣವೂ ಆಗಿಹೋಯಿತೇ ಎಂದು ಜೀವ ಚಡಪಡಿಸುವ ರೀತಿಯಲ್ಲಿ ಅತ್ಯಂತ ಆಸ್ಥೆಯದಾಗಿದ್ದು, ಧಾವಂತದಲ್ಲಿರುವಂತೆ ಕಾಣುತ್ತದೆ: ಆದರೆ ಕಾಲ ಕಳೆದು ಒಂದೆರಡು ವರ್ಷಗಳ ಆಚೆ ನಿಂತು ಹಿಂದೆ ನೋಡಿದಾಗ ಮಾತ್ರ ಅದು ಅತಿದೀರ್ಘವೆಂಬಂತೆ, ಭಾರಾಲಸವಿದ್ದಂತೆ ತೋರುತ್ತದೆ. 'ಮರ್ಯಾದಾಪುರುಷೋತ್ತಮ' ಎನ್ನಿಸಿಕೊಂಡ, ಸೀಮಿತರಲ್ಲಿ ಶ್ರೇಷ್ಠನೆನ್ನಬೇಕಾದ, ವಿಷ್ಣುವಿನ ಅಂಶಾವತಾರಿಯಾದ ರಾಮ, ರಾಜಕಾರಣದಲ್ಲಿ ಪವಾಡವನ್ನೇ ಸಾಧಿಸಿದ. ಪೂರ್ಣಾವತಾರಿಯಾದ ಕೃಷ್ಣ, ತನ್ನ ಕೃತಿಗಳಿಂದ ವಿಶ್ವ ಕೋರೈಸುವ ಹಾಗೆ ಮಾಡಿದ; ಬೇರೊಬ್ಬರಿಲ್ಲ ಎನ್ನುವಂತೆ ಜೀವನಧರ್ಮವನ್ನು ಬೋಧಿಸಿದ, ಆದರೆ ಈ ಸಮೃದ್ಧ ವ್ಯಕ್ತಿತ್ವದ ರಾಜಕೀಯ ಸಾಧನೆ ನೀರಿಗಿಂತ ಹೆಚ್ಚು ನೊರೆಯಾಗಿಬಿಟ್ಟಿತು.

ರಾಮನ ಮೂಲದಿಂದಲೇ ಬಂದ ಮಹತ್ವದ ವ್ಯಕ್ತಿ, ಗಾಂಧಿ. ಅವರು ಸಾಯುವಾಗ ತುಟಿಯ ಮೇಲೆ ಇದ್ದದ್ದು ರಾಮಾಕ್ಷರಗಳು. ಅವರು ಬದುಕನ್ನು ರೂಪಿಸಿಕೊಂಡದ್ದು ಸೀಮಿತ ವ್ಯಕ್ತಿತ್ವದ ಆ ಅತ್ಯುಚ್ಚಮಾದರಿಯನ್ನೇ ಅನುಸರಿಸಿ. ಮತ್ತು, ಅವರು ದೇಶದ ಜನ ಹಾಗೇ ಆಗಲು ಕರೆಕೊಟ್ಟರು. ಆದರೆ ಗಾಂಧಿಯಲ್ಲಿ ಕೃಷ್ಣನ ವ್ಯಕ್ತಿತ್ವದ ಒಂದು ಎಳೆಯೂ-ಸರಿಯಾಗಿ ಹುರಿಗೊಂಡ ಗಟ್ಟಿ ಎಳೆಯೇ-ನೆಯ್ದುಕೊಂಡು ಬಿಟ್ಟಿತ್ತು ಎನಿಸುತ್ತದೆ. ಅವರ ಪತ್ರಗಳು, ಭಾಷಣಗಳು ಮತ್ತು ಇತರ ಲೇಖನಗಳು ದಿನಕ್ಕೆ, ವಾರವಾರಕ್ಕೆ ಪ್ರಕಟಗೊಳ್ಳುತ್ತಿದ್ದ ಹಾಗೆ, ಅವುಗಳಲ್ಲಿ ನಿಶ್ಚಲ ಸಾಂಗತ್ಯವಿದ್ದಂತೆ ಕಾಣಿಸುತ್ತಿತ್ತು. ಆದರೆ ಈಗ, ಅವರ ಅನಂತರದಲ್ಲಿ

ಓದುವಾಗ, ಬೇರೆ ಬೇರೆ ಸಂದರ್ಭಗಳಲ್ಲಿನ ಅವುಗಳ ಅರ್ಥದ ವ್ಯತ್ಯಾಸ ಮತ್ತು ಧೋರಣೆಯಲ್ಲಿ ವ್ಯತ್ಯಾಸ ಸ್ಪಷ್ಟ ಎನ್ನಿಸುತ್ತದೆ. ಈ ಬದಲಾವಣೆಗಳ ಹಿಂದಿರುವ ಕೌಶಲ ಮತ್ತು ಕಸುಬುಗಾರಿಕೆ ನನ್ನನ್ನು ಬೆರಗುಗೊಳಿಸುತ್ತದೆ. ದ್ವಾರಕೆ ಮಥುರಾಕ್ಕೆ ಮರುಪಯಣ ಹೋಗಿತ್ತು. ಸಾಗರಶಿಶುವನ್ನು ಕೊಂದು ಯಮುನೆಯ ದಂಡೆಯಲ್ಲಿ ಸುಡಲಾಯಿತು. ಕೆಲವು ಸಹಸ್ರ ವರ್ಷಗಳ ಹಿಂದೆ, ಯಮುನೆಯ ಶಿಶುವನ್ನು ದ್ವಾರಕೆಯ ಸಮುದ್ರ ತೀರದಲ್ಲಿ ಕೊಂದು ಸುಡಲಾಗಿತ್ತು. ಆದರೆ ಈ ದ್ವಾರಕೆಯ ಶಿಶುವಿನ ಕಣ್ಣುಗಳು ಮರ್ಯಾದಾಪುರುಷೋತ್ತಮನಲ್ಲಿಯೇ ನಟ್ಟಿದ್ದವು ಮತ್ತು ಆತ ತನ್ನ ಗೋತ್ರಮೂಲವನ್ನು ಅಯೋಧ್ಯೆಯ ಮಾದರಿಯಲ್ಲೆ ಪುನರ್ನಿರ್ಮಿಸಿ ಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದ. ಹೀಗಿದ್ದರೂ ಆತನಲ್ಲಿ ಒಂದು ವಿಲಕ್ಷಣ ಹಾಗೂ ವಿಶಿಷ್ಟ ಮಿಶ್ರಣವೇ ಇತ್ತು.

ರಾಮ ಮತ್ತು ಕೃಷ್ಣ ಮನುಷ್ಯಜೀವನವನ್ನೆ ಬದುಕಿದವರಾದರೆ ಶಿವ ಹುಟ್ಟಿಲ್ಲದವನು, ಸಾವೂ ಇಲ್ಲದವನು. ದೇವಸಹಜವೆನ್ನುವಂತೆ ಅವನು ಅನಂತ; ಆದರೆ, ದೇವತ್ವಕ್ಕೆ ವಿರುದ್ಧವಾಗಿ ಅವನ ಜೀವನ, ಕಾಲದ ಅವಧಿಯಲ್ಲೇ ಸಂಭವಿಸಿದಂಥ ಘಟನೆಗಳಿಂದ ತುಂಬಿಕೊಂಡಿದೆ, ಮೆಟ್ಟಿಲು ಮೆಟ್ಟಿಲು ತೋರುವ ಹಾಗಿದೆ. ಈ ಕಾರಣಕ್ಕೆ ಅವನನ್ನು ದೇವರು ಎನ್ನುವುದಕ್ಕಿಂತ ಗಾತ್ರಾತೀತ ಎನ್ನಬೇಕು. ಪ್ರಾಯಃ, ಮಾನವ ಕುಲಕ್ಕೆ ಗೊತ್ತಿರುವ ಇಂಥ ಗಾತ್ರಾತೀತತೆಯ ಕಥಾಕಲ್ಪನೆ ಅಥವಾ ಪುರಾಣ ನಿರ್ಮಿತಿ ಇವನೊಬ್ಬನದೇ ಸರಿ. ಈ ದೃಷ್ಟಿಯಿಂದ ಇವನ ಹತ್ತಿರಕ್ಕೆ ಬರಬಹುದಾದ ಕಲ್ಪನೆ ಇನ್ನೊಂದಿಲ್ಲ ಎಂಬುದಂತೂ ನಿಶ್ಚಿತ.

ಶಿವ ಹಣೆಗಣ್ಣು ತೆರೆದು, ಕಾಮನನ್ನು ಉರಿಸಿ, ಭಸ್ಮಕೇವಲ ಮಾಡಿದಾಗ, ಅವನ ಮನಃಪ್ರಿಯೆಯಾದ ರತಿ, ಕಣ್ಣುಗಳು ಅಶ್ರುಕಲುಷಿತವಾಗಿರಲು, ಶಿವನ ಹತ್ತಿರ ಬಂದು ತನ್ನ ಗಂಡನನ್ನು ಬದುಕಿಸುವಂತೆ ಬೇಡಿಕೊಂಡಳು. ಕಾಮನೇನೋ ನಿಸ್ಸಂದೇಹವಾಗಿ ಮಹಾಪರಾಧದ ದೋಷಕ್ಕೆ ಗುರಿಯಾಗಿದ್ದ. ಶಿವನನ್ನೆ ಕ್ಷೋಭೆಗೊಳಿಸಲು ಯತ್ನಿಸಿದ್ದ, ನಾಮಾಗಾತ್ರಗಳಿಲ್ಲದೆ ಧ್ಯಾನದಲ್ಲಿ ಲೀನವಾಗಿದ್ದ, ಸಮಾಧಿಮಗ್ನನಾಗಿದ್ದ ಆ ಮಹಾದೇವನನ್ನು ಆಸೆಗೆ ಎಳೆಯಲು ಯತ್ನಿಸಿದ; ತನ್ನ ನಿಲುಕಿಗಿಂತ ತುಂಬ ದೂರವಾದದ್ದರ ಮೇಲೆ ಗುರಿಯಿಟ್ಟಿದ್ದ; ಅದರಲ್ಲೆ ಸಾವನ್ನಪ್ಪಿದ. ಹರ್ಷೋಲ್ಲಾಸಗಳ ಚಿರಲಹರಿಯಾಗಿದ್ದ ರತಿ, ಮೊತ್ತ ಮೊದಲ ಸಲ ಶೋಕತಪ್ತಳಾಗಿದ್ದಳು, ಅದಕ್ಕೂ ಮುಖ್ಯವಾಗಿ ವಿಧವೆಯಾಗಿದ್ದಳು. ಇಡೀ ಜಗತ್ತು ದುರ್ವಿಧಿಯ ದರೆಯಂಚಿಗೆ ಬಂದು ನಿಂತಂತಾಗಿತ್ತು. ಇನ್ನು ಮುಂದೆ ರತಿಯಿಲ್ಲದೆಯೇ ರತಿಕ್ರೀಡೆ

ನಡೆಯಬೇಕಿತ್ತು. ಆದರೆ ಶಿವನಾದರೂ ಆಗಿದ್ದನ್ನು ಮನ್ನಿಸಿ, ಬದಲಿಸುವ ಹಾಗಿರಲಿಲ್ಲ. ಶಿಕ್ಷೆಯೇನೋ ಅಪರಾಧಕ್ಕೆ ತಕ್ಕದ್ದೇ ಆಗಿತ್ತು. ಆದರೆ ರತಿ ಪ್ರಲಾಪಿಸುತ್ತಿದ್ದಳು. ದುರ್ವಿಧಿಯ ಸುಳಿಗೆ ಸಿಕ್ಕ ಜಗತ್ತನ್ನು ಕಂಡೋ ಅಥವಾ ರತಿಯ ಶೋಕ ಕಂಡೋ, ಶಿವನಿಗೆ ಕರುಣೆಯುಕ್ಕಿತು. ಕಾಮನಿಗೆ ಜೀವ ಕೊಟ್ಟ. ಆದರೆ ಅನಂಗನಾಗಿರುವಂತೆ ವಿಧಿಸಿದ. ಅಲ್ಲಿಂದ ಕಾಮ ಅನಂಗನಾಗಿಯೇ ಇದ್ದಾನೆ. ಅನಂಗನಾಗಿರುವ ಕಾರಣ, ಅವನನ್ನು ತಡೆಯಬಲ್ಲ ಮೇರೆ ಮರ್ಯಾದೆಗಳಿಲ್ಲ; ಅವನು ಎಲ್ಲವನ್ನೂ ಮುಟ್ಟಬಲ್ಲ, ಎಲ್ಲವನ್ನೂ ಆವರಿಸಿ ವ್ಯಾಪಿಸಬಲ್ಲ, ಹೊಕ್ಕು ಬಳಸಬಲ್ಲ. ಪತ್ತೆಯಿಲ್ಲದೆ ಬಂದು ಒಳಗುಸೇರಿ ಕಿರಿಕಿರಿ ಹಚ್ಚಿ ಕಾಡಬಲ್ಲ. ಈ ನಾಟಕ ಶಿವನ ಅತ್ಯುನ್ನತ ಪರ್ವತ ನಿವಾಸದಲ್ಲಿ, ಕೈಲಾಸದಲ್ಲಿ, ನಡೆಯಿತೆಂದು ಭಾವಿಸಬೇಕೆನ್ನಿಸುತ್ತದೆ. ಒಂದು ಕಡೆ, ಹಂಸಗಳು ಮತ್ತು ಕುಟುಕುತ್ತಿರುವ ಮಹಾಸರೋವರ ಮಾನಸದ ಕಣ್ತಣಿಸುವ ಸ್ಫಟಿಕ ಜಲ ಅಂಚುಗಟ್ಟಿದೆ; ಇನ್ನೊಂದು ಕಡೆ, ಆಳ ನೀಲದ ದೂರ ನಿಲ್ಲಿಸುವ ಗಾಂಭೀರ್ಯದ ಅಂಥದೇ ಮಹಾಸರೋವರ ರಾಕ್ಷಸತಲ ಸೆರಗಾಗಿದೆ-ಇವುಗಳ ನಡುವಣ ಕೈಲಾಸ, ಸಾರ್ವಕಾಲಿಕ ಹಿಮಾಚ್ಛಾದನದಿಂದ, ಏಕಾಂತ ನೀರವದಿಂದ ಮತ್ತಾವುದೇ ಪರ್ವತಪ್ರದೇಶ ದಂತಲ್ಲದೆ ಅಕ್ಷತಭೂಮಿಯಾಗಿ, ಹಿಂದೂ ಪುರಾಣ ಹೇಳುವಂತೆ ವಿಶ್ವದ ಕೇಂದ್ರಸ್ಥಾನವಾಗಿದೆ, ಭೂಮಿಯಲ್ಲೆ ಅದ್ವಿತೀಯರಮ್ಯವಾಗಿದೆ.

ಧರ್ಮ ಮತ್ತು ರಾಜಕಾರಣ, ದೇವರು ಮತ್ತು ರಾಷ್ಟ್ರ (ಅಥವಾ ಜನಾಂಗ) ಒಂದಕ್ಕೊಂದು ಮಿಶ್ರವಾಗಿಬಿಡುವುದುಂಟು, ಎಲ್ಲ ಕಡೆಗೂ ಎಲ್ಲ ಕಾಲದಲ್ಲೂ. ಇಂಥದು ಉಳಿದೆಲ್ಲ ಕಡೆಗಳಿಗಿಂತ ಇಂಡಿಯಾದಲ್ಲಿ ಹೆಚ್ಚು. ಶಿವನ ಜೀವಿತದ ಮಹತ್ ಘಟನೆಗಳಲ್ಲಿ ಒಂದು, ಪಾರ್ವತಿಯ ಮರಣಾನಂತರದ ಆತನ ದೈತ್ಯಶೋಕ. ಪಾರ್ವತಿಯ ಕಳೇವರವನ್ನು ಬೆನ್ನಿಗೂ, ಹೆಗಲಿಗೂ ಚೆಲ್ಲಿಕೊಂಡು ಆತ ಇಡೀ ದೇಶದ ಒಳಗೂ, ಸುತ್ತಲೂ ಧಾವಂತ ಸುತ್ತಿದ. ಈ ಧಾವಂತದಲ್ಲಿ ಪಾರ್ವತಿಯ ದೇಹದ ಅಂಗಾಂಗಗಳು ಒಂದೊಂದೇ ಕಳಚಿ ಬೀಳುತ್ತಿದ್ದವು. ಕೊನೆಯ ಚೂರು ಉದುರುವ ತನಕವೂ ಶಿವ ನಿಲ್ಲಲಿಲ್ಲ. ತೀಕ್ಷ್ಣವೂ, ನಿಸ್ಸಂಕೋಚವೂ ಆದ ಮೈತ್ರಿಯ ಇಂಥ ಅವಧೂತ ಕಥೆಯನ್ನು ಯಾವ ಪ್ರೇಮಿಯೂ ಉಳಿಸಿಹೋಗಿಲ್ಲ-ದೇವಾನು ದೇವತೆಗಳಲ್ಲಾಗಲಿ, ದೈತ್ಯರಲ್ಲಾಗಲಿ, ಮನುಷ್ಯರಲ್ಲಾಗಲಿ. ಅದಷ್ಟೇ ಅಲ್ಲ, ಈ ಕಥೆ ಇಂಡಿಯಾದ ಕ್ಷಯವಿಲ್ಲದಂಥ ಅಂತಃಸ್ಫೂರ್ತವಾದ ಏಕತೆಯ ಕಥೆಯನ್ನೂ ಹೇಳುತ್ತದೆ. ಪಾರ್ವತಿಯ ಒಂದೊಂದು ಅಂಗ ಕೆಳಗೆ ಬಿದ್ದಲ್ಲೂ ಒಂದೊಂದು ಯಾತ್ರಾ ಸ್ಥಳ ಕಲ್ಪಿತವಾಗಿದೆ. ಮಾಣಿಕ್ಯ ಮುಡಿದ ಆಕೆಯ ಕಿವಿ ವಾರಣಾಸಿಯಲ್ಲಿ ಬಿತ್ತು, ಅದು ಮಣಿಕರ್ಣಿಕ ಎನ್ನಿಸಿಕೊಂಡಿತು. ಇವೊತ್ತಿಗೂ, ಸತ್ತವರನ್ನು ಅಲ್ಲಿ

ಸುಟ್ಟರೆ, ಅವರಿಗೆ ನಿಸ್ಸಂಶಯ ಮುಕ್ತಿ ದೊರೆಯುತ್ತದೆ ಎಂದು ತಿಳಿಯಲಾಗುತ್ತದೆ. ಭಾರತದ ಉತ್ತರದ ತುದಿಯಲ್ಲಿ ದೂರಕ್ಕಿರುವ ಕಾಮರೂಪದಲ್ಲಿ ಆಕೆಯ ಭಿನ್ನಮುಂಡ ಬಿದ್ದಿತಂತೆ. ನೂರಾರು ಪೀಳಿಗೆಗಳು ಕಳೆದು ಈಗಲೂ ಅದರ ಮಾಂತ್ರಿಕತೆ ಅಳಿದಿಲ್ಲ. ಈಗ ಕೂಡ ಮನೆಯೊಳಗಿನ ಅಜ್ಜಿಯರು ಕಾಮರೂಪದ ಸ್ತ್ರೀಯರ ಬಗೆಗೆ ಮಕ್ಕಳಿಗೆ ಎಚ್ಚರ ಹೇಳುತ್ತಾರೆ, ಅವರು ತಮ್ಮ ಗಂಡಸರನ್ನು ಪಳಗಿದ ಕೋಣವಾಗಿಸಿಬಿಡುತ್ತಾರೆ-ಎಂದು.

ಸೃಷ್ಟಿಕರ್ತನಾದ ಬ್ರಹ್ಮನೂ ಸ್ಥಿತಿಕಾರಕನಾದ ವಿಷ್ಣುವೂ ಒಮ್ಮೆ ತಮ್ಮಲ್ಲಿ ಕಾದಾಡಿಕೊಳ್ಳಲು ತೊಡಗಿದರಂತೆ, ತಮ್ಮಲ್ಲಿ ಯಾರು ಮೊದಲು ಮತ್ತು ಯಾರು ಹೆಚ್ಚು ಎಂಬ ಪ್ರಶ್ನೆಗಾಗಿ. ಆಮೇಲೆ ಅವರು ಅದರ ತೀರ್ಪಿಗಾಗಿ, ಸಂಹಾರಕನಾದ ಶಿವನ ಬಳಿಗೆ ಹೋದರು. ಶಿವ, ಅವರಲ್ಲಿ ಒಬ್ಬನನ್ನು ತನ್ನ ತಲೆದೆಸೆಗೂ ಇನ್ನೊಬ್ಬನನ್ನು ಕಾಲದೆಸೆಗೂ ಕಳಿಸಿದ, ತುದಿ ಮುಟ್ಟಿಬರುವಂತೆ ಹೇಳಿ. ಅದರಲ್ಲಿ ಯಾರು ಮೊದಲು ತುದಿ ಕಂಡು ಬರುತ್ತಾರೋ ಅವರು ವಾದದಲ್ಲಿ ಗೆದ್ದವರೆಂದು ತೀರ್ಪುಸಿಕ್ಕುತ್ತಿತ್ತು. ಇಬ್ಬರೂ ಹೋದರು, ಅನೇಕ ಯುಗಗಳು ಕಳೆದವು, ಕೊನೆಯಲ್ಲಿ ಇಬ್ಬರೂ ಸೋತು ಕೋಡುಮುರಿದಂತಾಗಿ ಹಿಂತಿರುಗಿದ್ದರು. ಶಿವ ಹೀಗೆ ಇಬ್ಬರಿಗೂ ಅಹಂ ಮುರಿದು ಎಚ್ಚರಿಸಿದ. ಉಳಿದ ಇಂಥ ಪ್ರಸಂಗಗಳಲ್ಲಿ ಹೇಗೋ ಹಾಗೇ, ಈ ಪ್ರಸಂಗ ಮುಗಿದ ಮೇಲೆ ತ್ರಿಮೂರ್ತಿಗಳು ಕೂಡಿ ನಕ್ಕಿರಬೇಕು. ಬೇರೆ ಅನೇಕ ಕಥೆಗಳಲ್ಲಿ ವಿಷ್ಣುವಿಗೂ ಅನಂತನಿದ್ರೆಯವನು, ಅಗಮ್ಯಗಾತ್ರನು ಮುಂತಾಗಿ ಹೇಳಿರುವುದು ಇಲ್ಲಿ ನೆನಪಾಗುತ್ತದೆ. ಇದೇ ರೀತಿ ಶಿವನ ಪ್ರಮಾಣಾತೀತ ಅಥವಾ ಗಾತ್ರಾತೀತ ವ್ಯಕ್ತಿತ್ವಕ್ಕೂ, ಅನಂತ ಅಥವಾ ಅಗಮ್ಯ ಎಂದು ಲಕ್ಷಣ ಹೇಳಿಬಿಡಬಹುದು. ಅದು ತಪ್ಪು. ಶಿವನು ಯಾವುದೇ ವಿಶೇಷಣ ಹಚ್ಚಿ ಹೇಳಲು ಬರುವ ಪ್ರಮಾಣದವನಲ್ಲ, ಪ್ರಮಾಣದ ಕಲ್ಪನೆಗೇ ಹೊರಗಾಗಿವವನು. ಹೆಚ್ಚು ಕಡಿಮೆ ಅಥವಾ ಅನಂತ ಎಂಬ ಗುಣದ ಉದ್ದಗಲಗಳಿಂದ ಅವನನ್ನು ಅಳೆಯುವುದಕ್ಕೆ ಸಾಧ್ಯವಿಲ್ಲ. ಇದನ್ನು ಸೂಚಿಸುವ ಸಲುವಾಗಿ ಮತ್ತೊಂದು ಕಥೆಯಿದೆ. ಒಬ್ಬ ಸುಂದರಿಯ ಪಾಣಿಗ್ರಹಣಕ್ಕಾಗಿ ಶಿವನ ಮಕ್ಕಳಿಬ್ಬರಲ್ಲಿ ನಡೆದ ಮೇಲಾಟದ ಕಥೆ ಅದು. ಇಬ್ಬರಲ್ಲಿ ಯಾರು ಈ ಜಗತ್ತನ್ನೆಲ್ಲ ಸುತ್ತಿ ಮೊದಲು ಹಿಂದಿರುಗಿ ಬರುತ್ತಾರೋ ಅವರಿಗೆ ಆ ಸುಂದರಿ ಕಾಣಿಕೆಯಾಗಿ ದೊರೆಯುತ್ತಾಳೆ ಎಂದ ಶಿವ. ದೃಢಕಾಯನೂ ಸುಂದರನೂ ಆಗಿದ್ದ ಕಾರ್ತಿಕೇಯ ಕ್ಷಣವೂ ತಡಮಾಡದೆ ಹೊರಟುಬಿಟ್ಟ. ಆನೆ ಮುಖದ ಗಣಪ ಯಾವಾಗಲೂ ಜೋಲು ಮೋರೆಯವನೇ. ಏನು ಮಾಡುವುದೆಂದು ಬೆರಗಾಗಿ ಯೋಚಿಸುತ್ತ, ಹಲವರಿಯುತ್ತ ಕೂತುಬಿಟ್ಟ. ಎಷ್ಟೋ ಹೊತ್ತು ಕಳೆದುಹೋಯಿತು. ಆಮೇಲೆ

ಇದ್ದಕ್ಕಿದ್ದಂತೆ ಅವನಿಗೆ ಹೊಳೆದ ಹಾಗಾಯಿತು, ತುಂಟ ಕಣ್ಣುಗಳು ಮಿನುಗಿದವು. ಸಾವಧಾನವಾಗಿ ಎದ್ದು ಒಮ್ಮೆ ತಂದೆಯ ಸುತ್ತ ಪ್ರದಕ್ಷಿಣೆ ಬಂದು ಕೂತ, ಆಯಿತು ಜಗತ್‌ಪ್ರದಕ್ಷಿಣೆ ಎನ್ನುತ್ತ. ಪಂಥದಲ್ಲಿ ಗೆದ್ದ. ಇದು ನೀತಿಕಥೆಯಾಗಿ, ವಿವೇಚನೆಯ ಪ್ರಯೋಜನವನ್ನೂ, ವಿವೇಕರಹಿತ ಆತುರದ ಎದುರು ಸಾವಧಾನಬುದ್ಧಿಯ ಹೆಚ್ಚಳವನ್ನೂ ಬೋಧಿಸಬಹುದು. ಆದರೆ ಇದು ಮುಖ್ಯವಾಗಿ ಶಿವನ ಕಥಾರಹಸ್ಯಕ್ಕೇ ಕೂಡಿದ್ದು. ಮೂಲತಃ ಅವನು ಅನಂತಗಾತ್ರನಾಗಿರುವ ಹಾಗೆ ಅದೇ ಕಾಲದಲ್ಲಿ ಏಳು ಹೆಜ್ಜೆ ಅಳೆಯಬಲ್ಲ ನಿಶ್ಚಿತಗಾತ್ರನೂ ಆಗಿದ್ದಾನೆ. ದೈಹಿಕವಾಗಿ ಹೇಳುವುದಾದರೂ ಶಿವನು ಪ್ರಮಾಣಾತೀತನೇ ಸರಿ.

ಆನೆ ಮುಖದ ಗಣೇಶನ ವ್ಯಕ್ತಿತ್ವವೂ ತೀರ ವಿಶಿಷ್ಟವಾದದ್ದೇ. ಒಂದು ರೀತಿಯಿಂದ ಅವನು ತನ್ನ ತಂದೆಯ ಕೈಚಳಕವೇ ಆಗಿದ್ದಾನೆ. ಇನ್ನೊಂದು ರೀತಿಯಿಂದ ತನ್ನ ಅನಾತುರದ ಆದರೆ ಆಳವಾದ ಬುದ್ಧಿಮತ್ತೆಯ ಸಾಕಾರನಾಗಿದ್ದಾನೆ. ಸಣ್ಣ ಹುಡುಗನಿದ್ದಾಗ ಒಮ್ಮೆ ಅವನ ತಾಯಿ ಸ್ನಾನಕ್ಕೆ ಹೋಗುವಾಗ ಹೊರಗೆ ಈತನನ್ನು ನಿಲ್ಲಿಸಿದಳು, ಯಾರನ್ನೂ ಒಳಕ್ಕೆ ಬಿಡದಿರುವಂತೆ ಹೇಳಿ. ಅದೇ ಹೊತ್ತಿನಲ್ಲಿ ಶಿವ ಅಲ್ಲಿಗೆ ಬಂದ. ಅವನೋ ಮೊದಲೇ ಶೀಘ್ರಕೋಪಿ, ಗಣೇಶನೋ ಅಚಲನಾದ ಬಂಟ. ಗಣೇಶ ಶಿವನನ್ನು ತಡೆದ, ಶಿವ ಮಗನ ಕುತ್ತಿಗೆ ತರಿದು ಹಾಕಿದ. ಮುಂದೆ ಪಾರ್ವತಿಯ ಶೋಕಕ್ಕೆ ಮೇರೆಯಿಲ್ಲವಾಯಿತು. ಅಷ್ಟರಲ್ಲಿ ಅಲ್ಲೇ ಒಂದು ಆನೆ ಹೋಗುತ್ತಿದುದು ಕಂಡಿತು. ಶಿವ, ಆ ಆನೆಯ ಕುತ್ತಿಗೆಯನ್ನೆ ಕತ್ತರಿಸಿ ಗಣೇಶನಿಗಿಟ್ಟ. ಆದು ವೊದಲಾಗಿ, ವುನುಷ್ಯ ಬುದ್ಧಿಯೂ ಆನೆಯ ವಿಧೇಯತೆಯೂ ಏಕತ್ರಹೊಂದಿಕೊಂಡು, ಜ್ಞಾನಸಾಗರನಾಗಿರುವ ಈ ಗಜದೇವತೆ ಎಲ್ಲ ಹಿಂದೂ ಮನೆಗಳಲ್ಲೂ ಯಾವುದೇ ಕಾರ್ಯದ ಬುಡಕ್ಕೂ ಪ್ರಥಮಪೂಜೆ ಕೊಳ್ಳುತ್ತಿದ್ದಾನೆ. ಅವನಿಗೆ ನಮಸ್ಕರಿಸಿ ಏನನ್ನೇ ತೊಡಗಿದರೂ ಜಯ ನಿಶ್ಚಿತ. ಈ ಸಂದರ್ಭದಲ್ಲಿ ಶಿವ ತನ್ನ ಸಹಜ ಚಾರಿತ್ರ್ಯಕ್ಕೆ ವಿರುದ್ಧ ನಡೆದುಕೊಳ್ಳಲಿಲ್ಲವೆ ಎಂದು ಎಷ್ಟೋ ಸಲ ಆಶ್ಚರ್ಯವಾಗಿದೆ ನನಗೆ. ಆವನ ಈ ಕೃತಿ ಸಮರ್ಥನೀಯವೆ? ಗಣೇಶನಿಗೆ ಜೀವ ಮರಳಿ, ಪಾರ್ವತಿಯ ದುಃಖ ತಣಿಯಿತು ನಿಜ, ಅದರೆ ಆ ಆನೆ, ಯಾವುದೋ ಮರಿಯ ತಾಯಿ, ಈ ಬಗ್ಗೆ ಜೀವ ಕಳೆದುಕೊಂಡಂತಾಗಲಿಲ್ಲವೆ? ಬಹುಶಃ ಈ ಪ್ರಶ್ನೆಯಲ್ಲೇ ಉತ್ತರವೂ ಹೊಳೆಯುವಂತಿದೆ. ಗಜಮುಖನ ಈ ನೂತನ ನಿರ್ಮಿತಿಯಲ್ಲಿ ಹಿಂದಿನ ಗಣೇಶನೂ ಈ ಆನೆಯೂ-ಎರಡೂ ಜೀವ ಪಡೆದುಕೊಂಡಂತಾಯಿತು. ಎರಡೂ ಜೀವ ಇಲ್ಲಿ ಮತ್ತೆ ತಮ್ಮ ಬದುಕನ್ನು ಮುಂದುವರಿಸಿದವು, ಯಾರೂ ಸಾಯಲಿಲ್ಲ. ಮತ್ತು ಮನುಷ್ಯ ಮತ್ತು ಆನೆಯ ಈ ಮೋಜಿನ ಮಿಶ್ರಣ ಎಂಥ ನಿತ್ಯಹರ್ಷದ, ನಿತ್ಯಜ್ಞಾನದ ನೂತನ ಸೃಷ್ಟಿಯಾಗಿತ್ತು!

ಶಿವನ ಇನ್ನೊಂದು ಕೃತಿ, ಸಮರ್ಥನೆಗೆ ಇದಕ್ಕಿಂತಲೂ ಕೊಂಚ ಹೆಚ್ಚು ಕಷ್ಟದ್ದು. ಅದು, ಒಮ್ಮೆ ಅವನು ಪಾರ್ವತಿಯ ಸಂಗಡ ಪಂಥ ಕಟ್ಟಿ ನರ್ತಿಸಿದ್ದು. ಹೆಜ್ಜೆಗೆ ಹೆಜ್ಜೆ ಕೊಟ್ಟು ಶಿವನನ್ನು ಮೀರಿಸಿದಳು ಪಾರ್ವತಿ. ಕುಣಿತದ ಗತಿ ತೀವ್ರಕ್ಕೆ ಏರುತ್ತಿತ್ತು. ಪಾರ್ವತಿಯನ್ನು ಸೋಲಿಸುವುದಕ್ಕೆ ಆಗದೆಂದು ಕಂಡು ಶಿವ ಕ್ಷಣದಲ್ಲಿ ನೃತ್ಯಚಾರಿಯನ್ನೇ ಬದಲಿಸಿದ, ಕಾಲನ್ನು ಅಷ್ಟೆತ್ತರಕ್ಕೆತ್ತಿದ. ಪಾರ್ವತಿ ಮೂಕ ವಿಸ್ಮಿತಳಾಗಿ ನಿಬ್ಬೆರಗಾಗಿ ನಿಂತುಬಿಟ್ಟಳು. ಹೆಣ್ಣಿನ ಮರ್ಯಾದೆಗೆ ತೀರ ಮೀರಿದಂಥ ಆ ಭಂಗಿಯನ್ನು ಅಭಿನಯಿಸಲು, ಅವಳಿಗೆ ಅಸಾಧ್ಯವಾಗಿತ್ತು. ತನ್ನ ಪತಿ ಇಂಥ ಅಸಾಧು ಮಾರ್ಗಕ್ಕೆ ಮೊರೆಹೊಕ್ಕದ್ದು ಕಂಡು ಆಕೆ ಅಪ್ರತಿಭಳಾದಳು. ಆದರೆ ಬದುಕಿನ ಕುಣಿತದಲ್ಲಿ ಅಂಥ ಹುಚ್ಚು ನೆಗೆತಗಳಿವೆ, ಯಾವುದನ್ನು ಲೋಕದ ಮಡಿಬುದ್ಧಿ ಅಶ್ಲೀಲವೆನ್ನುತ್ತದೋ ಮತ್ತು ಅಂಥದರಿಂದ ತನ್ನ ಹೆಣ್ಣುಗಳ ಮರ್ಯಾದೆಯನ್ನು ರಕ್ಷಿಸಲು ಹೆಣಗುತ್ತದೋ ಅಂಥ ನೆಗೆತಗಳು. ಶಿವ ಅಂಥ ವೀರ್ಯವತ್ತಾದ ಭಂಗಿಯನ್ನು ತೋರಿದ್ದು, ಪಂಥವೊಂದರಲ್ಲಿ ತಾನು ಸೋತು ಹೋಗಲಿದ್ದಾಗ, ಅದನ್ನು ಮೋಸದಿಂದ ಮರೆಸಿ ಹೇಗೋ ಗೆಲುವು ಪಡೆಯುವ ಸಲುವಾಗಿಯೇ? ಅಥವಾ–ಕನಿಷ್ಠ ಅದರಷ್ಟೇ ಮುಖ್ಯವಾಗಿ, ಹೆಜ್ಜೆಯಿಂದ ಹೆಜ್ಜೆಗೆ ಲಯ ಕಾವೇರುತ್ತ ಸಹಜ ತೀವ್ರಗೊಂಡು ವಿಜೃಂಭಿಸುವ ಬದುಕಿನ ಕುಣಿತದ ಅಂಗಮಾತ್ರವಾಗಿಯೇ?

ತನಗೆ ತಾನೇ ನ್ಯಾಯವೆಂದು ನಿಸ್ಸಂದೇಹ ಸಮರ್ಥಿಸಿಕೊಳ್ಳಲಾಗದಂಥ ಯಾವುದೇ ಕಾರ್ಯವನ್ನೂ ಮಾಡಿದವನಲ್ಲ ಶಿವ. ಈ ರೀತಿಯಲ್ಲಿ ಅವನು ಮನುಷ್ಯಕುಲ ಬಲ್ಲ ಏಕೈಕ ಸೃಷ್ಟಿ–ಯಾವನ ಸಮಸ್ತ ಕೃತಿಗಳೂ ತಮ್ಮಿಂದ ತಾವೇ ಸಮರ್ಥನೆ ಗೊಳ್ಳಬಲ್ಲವೋ ಅಂಥವನು. ಅವನ ಯಾವುದೇ ಕೃತಿಯನ್ನು ಸಮರ್ಥಿಸುವ ಸಲುವಾಗಿ, ಹಿಂದಿನ ಮತ್ತೊಂದರಲ್ಲಿ ಕಾರಣವನ್ನಾಗಲಿ, ಮುಂದಿನದ್ದೊಂದರ ಪರಿಣಾಮವನ್ನಾಗಲಿ ಹುಡುಕಬೇಕಾದ್ದಿಲ್ಲ. ಬದುಕು ಎನ್ನುವುದು ಕಾರ್ಯಕಾರಣಗಳ ಅತಿ ದೀರ್ಘ ಸರಪಳಿ. ಮನುಷ್ಯನೂ, ದೇವತೆಗಳೂ ಇಬ್ಬರೂ ತಮ್ಮ ಕಾರ್ಯಗಳ ಸಮರ್ಥನೆಗಾಗಿ ಈ ದೀರ್ಘದ ಮೊರೆ ಹೊಕ್ಕಿದ್ದಾರೆ. ಯಾವೊಂದು ಕಾರ್ಯದಮೇಲೂ ಅಂಥ ದೂರ ನಿಯಂತ್ರಣವಿದೆಯೆಂಬ ಕಲ್ಪನೆ ಸದಾ ದುರುಪಯೋಗಕ್ಕೆ ಗುರಿಯಾಗಿದೆ. ಸಂಪೂರ್ಣ ಅಸಮರ್ಥನೀಯ ಕಾರ್ಯಗಳನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ಚಾತುರ್ಯದ ಬುದ್ಧಿತಂತ್ರಗಳನ್ನು ಬಳಸಲಾಗುತ್ತದೆ. ಇಂಥ ಬುದ್ಧಿವಂತಿಕೆಯಲ್ಲಿ ಸುಳ್ಳು ಸತ್ಯವಾಗಬಹುದು, ಬಂಧನವೇ ಸ್ವಾತಂತ್ರ್ಯವೆನ್ನಿಸಿಕೊಳ್ಳಬಹುದು, ಕೊಲೆ ಬದುಕೆನ್ನಿಸಿಕೊಳ್ಳಬಹುದು. ಅಂಥ ಬುದ್ಧಿತಂತ್ರಕ್ಕೆ ವಿರುದ್ಧವಿದ್ದು ಅದನ್ನು

ನಿವಾರಿಸಬಲ್ಲ ಒಂದೇ ಒಂದು ಈ ಶಿವತತ್ತ್ವ. ಶಿವ ತಾತ್ಕ್ಷಣಿಕ ಸಿದ್ಧಾಂತಕ್ಕೆ ಸಾಕಾರನಾಗಿದ್ದಾನೆ. ಅವನ ಪ್ರತಿಯೊಂದು ಕೃತಿಯೂ ತತ್ಕ್ಷಣದಲ್ಲೆ ತನ್ನನ್ನು ಸಮರ್ಥಿಸಿಕೊಳ್ಳುವಂಥದು; ಅದಕ್ಕಾಗಿ ಹಿಂದಿನ ಅಥವಾ ಮುಂದಿನ ಕಾರ್ಯ ಕಾರಣಗಳನ್ನು ಕೆದಕಬೇಕಾಗಿಲ್ಲ.

ಗಾತ್ರಾತೀತವಾದ ಈ ವ್ಯಕ್ತಿತ್ವ, ತಾತ್ಕ್ಷಣಿಕತೆಯ ಈ ಮಹತ್ ಪುರಾಣ ತತ್ವ ಜಗತ್ತಿಗೆ ಮತ್ತೂ ಎರಡು ದರ್ಶನವೈಭವಗಳನ್ನು ಕೊಟ್ಟಿದೆ. ದೇವತೆಗಳು ಮತ್ತು ರಾಕ್ಷಸರು ಸಮುದ್ರಮಥನ ಮಾಡಿದಾಗ, ಅಮೃತ ಬರುವ ಮೊದಲೇ ವಿಷ ಹೊರಟಿತು. ಈ ವಿಷವನ್ನು ಯಾರಾದರೂ ಕುಡಿದು ಮುಗಿಸಬೇಕಾಗಿತ್ತು. ಆ ಹಿಂದೆ ನಡೆದ ದೇವರಾಕ್ಷಸ ಯುದ್ಧಗಳಲ್ಲಾಗಲಿ, ಸಮುದ್ರಮಥನದ ಸಾಹಸದಲ್ಲಾಗಲಿ ಶಿವ ಪಾಲುಗೊಂಡವನಲ್ಲ. ಹಾಗಿದ್ದೂ, ಅವನು ಹುಟ್ಟಿದ ವಿಷವನ್ನು ಹೀರಿ ಕಥೆ ಮುಂದುವರಿಯುವಂತೆ ಮಾಡಿದ. ಕುಡಿದ ವಿಷವನ್ನು ಗಂಟಲಲ್ಲೆ ನಿಲ್ಲಿಸಿಕೊಂಡು ಅಲ್ಲಿಂದ ಮುಂದೆ ನೀಲಕಂಠ ಎಂದು ಹೆಸರಾದ. ಶಿವತತ್ತ್ವದ ಇನ್ನೊಂದು ದರ್ಶನ ಎಲ್ಲ ಕಾಲಕ್ಕೂ, ಎಲ್ಲ ಹೊತ್ತಿನಲ್ಲೂ ಪೂಜಾರ್ಹವಾದದ್ದು. ಒಮ್ಮೆ ಯಾವನೋ ಭಕ್ತ ಶಿವನ ಜೊತೆಯಲ್ಲಿ ಪಾರ್ವತಿಗೂ ಪೂಜೆ ಸಲ್ಲಿಸಲು ನಿರಾಕರಿಸಿದಾಗ ಶಿವ ಅರ್ಧ ನಾರೀಶ್ವರನಾಗಿ ನಿಂತ; ದೇಹಾರ್ಧ ತಾನಾಗಿ ಮತ್ತೊಂದರ್ಧ ಪಾರ್ವತಿಯಾಗಿ ಪೂಜೆ ಕೊಂಡ. ಈ ಚಿತ್ರವನ್ನು ಮುಡಿಯಿಂದ ಅಡಿತನಕ ವಿವರ ವಿವರವಾಗಿ ಇಡೀ ಕಲ್ಪಿಸಿಕೊಳ್ಳಲು ಯತ್ನಿಸಿ ತುಂಬ ಕಷ್ಟವಾಗಿದೆ ನನಗೆ, ಅನೇಕ ಸಲ. ಆದರೆ ಈ ದರ್ಶನ ಮಾತ್ರ ತುಂಬ ಸುಂದರವಾದದ್ದು.

ಈ ಪುರಾಣಕಲ್ಪನೆಗಳು ಕಾಲಕಾಲಕ್ಕೆ ಕ್ರಮವಾಗಿ ದುಷ್ಪಾಕಗೊಳ್ಳುತ್ತ ಬಂದುದನ್ನೂ ಇಲ್ಲಿ ಗುರುತಿಸುವ ಇಚ್ಛೆಯಿಲ್ಲ ನನಗೆ. ಶತಮಾನ ಶತಮಾನಗಳಲ್ಲಿ ಹಾದುಬರುವಾಗ ಇವೆಲ್ಲ ಅಧಃಪಾತಕ್ಕೆ ಆಹಾರವಾಗಿವೆ. ಪೂರ್ಣತ್ವಕ್ಕೆ ನೆರೆದ ಬೀಜ, ಕೆಲವು ಸಲ ಕೊಳೆತು ಪಿಶಾಚಪೀಡೆಯಾಗಿ ನಾರಿದೆ. ರಾಮನ ಭಕ್ತರು ಮತ್ತೆ ಮತ್ತೆ ಪತ್ನೀ ಪರಿತ್ಯಾಗಪರಾಯಣರಾಗಿದ್ದಾರೆ, ಕೃಷ್ಣಭಕ್ತರು ಕಳ್ಳರಾಗಿದ್ದಾರೆ, ಶಿವಭಕ್ತರು ಹೊಲೆಗೊಳಕನ್ನೇ ಪ್ರೀತಿಸುವವರಾಗಿದ್ದಾರೆ. ಅಧಃಪತನಗೊಳ್ಳುತ್ತ ಹಾದಿ ತಪ್ಪುತ್ತ ಸೀಮಿತವ್ಯಕ್ತಿತ್ವ ಕೂಪಮಂಡೂಕವಾಗುತ್ತದೆ, ಸಮೃದ್ಧವ್ಯಕ್ತಿತ್ವ ಅನೈತಿಕವಾಗುತ್ತದೆ, ಗಾತ್ರತೀತ ವ್ಯಕ್ತಿತ್ವ ಆಕಾರವಿಲ್ಲದ ಹೊಗೆಯಾಗುತ್ತದೆ, ಛಿನ್ನಾಭ್ರವಾಗುತ್ತದೆ, ಕಥೆಗಷ್ಟೆ ಅನ್ನವಾಗುತ್ತದೆ. ಕುಲಮರಳಿದ ರಾಮ ಅಲ್ಪವ್ಯಕ್ತಿತ್ವದ ಪರಿಣತಿಯೂ, ಕುಲಮರಳಿದ ಕೃಷ್ಣ ಅನೈತಿಕತೆಯ ಪರಿಣತಿಯೂ, ಕುಲಮರಳಿದ

ಶಿವ ಪ್ರೇತತ್ವದ ಪರಿಣತಿಯೂ ಆಗುತ್ತದೆ. ರಾಮ ಸೀಮಿತನೂ ಆಗಿ ಅಲ್ಪನೂ ಆಗಿ, ಕೃಷ್ಣ ಸಮೃದ್ಧನೂ ಆಗಿ ಕಾಮುಕನೂ ಆಗಿ, ಶಿವ ಗಾತ್ರಾತೀತನೂ ಆಗಿ ಕಾಲ್ಪನಿಕನೂ ಆಗಿ ಇಬ್ಬಂದಿ ಬದುಕು ಬಾಳುತ್ತಾರೆ. ಇದಕ್ಕೆ ಒಂದು ಪರಿಹಾರ ಸೂಚಿಸುವ ಮೂರ್ಖತನಕ್ಕೆ ಹೋಗದೆ ಇಷ್ಟೇ ಪ್ರಾರ್ಥಿಸುತ್ತೇನೆ: ತಾಯಿ ಭಾರತಿ, ನಮಗೆ ಶಿವನ ಮನಸ್ಸನ್ನೂ ಕೃಷ್ಣನ ಹೃದಯವನ್ನೂ ರಾಮನ ಕಾರ್ಯಪ್ರಪಂಚವನ್ನೂ ಕೊಡು; ಪ್ರಮಾಣಾತೀತವಾದ ಮನಸ್ಸು, ಸಮೃದ್ಧ ಹೃದಯ, ಆದರೆ ಸೀಮಿತವಾದ ಬದುಕು-ಇವುಗಳಿಂದ ನಮ್ಮನ್ನು ನಿರ್ಮಿಸು.

●

(ಜುಲೈ 1956)

ಇಂಗ್ಲಿಷ್‌ನಿಂದ ಕನ್ನಡಕ್ಕೆ : ಕೆ. ವಿ. ಸುಬ್ಬಣ್ಣ

ಜಾತಿ, ಲಿಂಗ ಕುರಿತ ಪ್ರತ್ಯೇಕತೆ

ಇಡೀ ಜಗತ್ತಿನಲ್ಲೇ ಭಾರತೀಯರು ಕಡು ದುಃಖಿಗಳು. ಅವರು ಕಡುಬಡವರಾಗಿರುವುದರ ಜೊತೆಗೆ ಅತ್ಯಂತ ರೋಗಪೀಡಿತರಾಗಿರುವುದು ಕೂಡ ಇದಕ್ಕೆ ಕಾರಣ. ಇದಕ್ಕೆ ಇನ್ನೊಂದು ಮಹತ್ವದ ಕಾರಣವೂ ಇದೆ. ಅದೆಂದರೆ, ಇತ್ತೀಚಿನ ಚರಿತ್ರೆಯಲ್ಲಿ ಅವರ ಚೇತನ ಪಡೆದುಕೊಂಡ ವಿಚಿತ್ರವಾದ ಒಂದು ತಿರುವು. ಅವರ ಬಾಯಿಂದ ನಿರ್ಲಿಪ್ತತೆಯ ತತ್ವದ ಮಾತೇನೋ ಬರುತ್ತದೆ. ಆದರೆ ಅವರು ಬದುಕುವ ಕ್ರಮದಲ್ಲಿ ಮಾತ್ರ ತೀರಾ ಕೀಳೆನ್ನಬಹುದಾದ ವ್ಯಾಮೋಹವೇ ಅತಿಯಾಗಿರುವುದು ಎದ್ದು ಕಾಣುತ್ತದೆ. ಭಾರತೀಯರು ಬದುಕಿಗೆ ಹೇಗೆ ಜೋತು ಬಿದ್ದಿದ್ದಾರೆಂದರೆ, ಅವರು ಕಡುದುಃಖದ ಮಡುವಿನಲ್ಲೇ ನರಳಿ ಹೇಗೋ ಬದುಕು ನೂಕಬಯಸುವವರೇ ವಿನಃ ಏನಾದರೊಂದು ಮಹತ್ವದ ಪ್ರಯತ್ನಮಾಡುವ ಸಾಹಸಕ್ಕಿಳಿದವರಲ್ಲ. ಆದರೆ, ಹಣ ಹಾಗೂ ಅಧಿಕಾರ ಕುರಿತ ದುರಾಸೆಯಲ್ಲಿ ಮಾತ್ರ ಜಗತ್ತಿನ ಯಾವ ಜನಾಂಗವೂ ಅವರನ್ನು ಮೀರಿಸಲಾರದು.

ಜಾತಿ ಹಾಗೂ ಸ್ತ್ರೀಯರನ್ನು ಕುರಿತ ಪ್ರತ್ಯೇಕತಾವಾದೀ ಮನೋಭಾವವೇ ಭಾರತೀಯ ಚೇತನದ ಈ ಅಧೋಗತಿಗೆ ಮೂಲಕಾರಣ ಎಂಬುದು ನನ್ನ ದೃಢ ನಂಬಿಕೆ. ಸಾಹಸವನ್ನೂ, ಆನಂದವನ್ನೂ ಸೃಷ್ಟಿಸುವ ಸಾಮರ್ಥ್ಯವನ್ನೇ ಕೊಲ್ಲಬಲ್ಲ ಶಕ್ತಿ ಈ ಪ್ರತ್ಯೇಕತಾವಾದಿ ಮನಸ್ಥಿತಿಗಿದೆ.

ಆಧುನಿಕ ಆರ್ಥಿಕ ಯೋಜನೆಗಳ ಮೂಲಕ ಬಡತನವನ್ನು ಹೊಡೆದೋಡಿಸಿದರೆ, ಈ ಎರಡೂ ಬಗೆಯ ಪ್ರತ್ಯೇಕತೆಗಳು ತಂತಾನೇ ಮಾಯವಾಗುತ್ತವೆಂದು ತಿಳಿಯುವವರು ದೊಡ್ಡ ತಪ್ಪುಮಾಡುತ್ತಾರೆ. ಬಡತನ ಹಾಗೂ ಈ ಎರಡು ಬಗೆಯ ಪ್ರತ್ಯೇಕತೆಗಳು ಒಂದನ್ನೊಂದು ಪೋಷಿಸುತ್ತವೆ. ಈ ಎರಡೂ ಬಗೆಯ ಪ್ರತ್ಯೇಕತೆಗಳ ವಿರುದ್ಧ ಏಕಕಾಲಕ್ಕೆ ಪ್ರಜ್ಞಾಪೂರ್ವಕವಾದ ಹಾಗೂ ನಿರಂತರವಾದ ಹೋರಾಟ ನಡೆಸದಿದ್ದರೆ ಬಡತನದ ವಿರುದ್ಧ ನಾವು ಮಾಡುವ ಹೋರಾಟಗಳೆಲ್ಲ ಬರಿ ಬೊಗಳೆಯಾಗಿಬಿಡುತ್ತವೆ, ಅಷ್ಟೇ.

ಕಾಶಿಪುಣ್ಯ ಕ್ಷೇತ್ರದಲ್ಲಿ ಭಾರತೀಯ ಗಣರಾಜ್ಯದ ಅಧ್ಯಕ್ಷರು ಸಾರ್ವಜನಿಕವಾಗಿ ಇನ್ನೂರು ಜನ ಬ್ರಾಹ್ಮಣರ ಕಾಲು ತೊಳೆದರು. ಹೀಗೆ ಸಾರ್ವಜನಿಕವಾಗಿ ಒಬ್ಬ ಇನ್ನೊಬ್ಬನ ಕಾಲು ತೊಳೆಯುವುದು ಅಸಹ್ಯವಾದದ್ದು. ಈ ಅಸಹ್ಯಕರ ಸವಲತ್ತನ್ನು ಬ್ರಾಹ್ಮಣ ಜಾತಿಗೆ ನೀಡಿರುವುದಂತೂ ಶಿಕ್ಷಾರ್ಹ ಅಪರಾಧವಾಗಬೇಕು. ವಿದ್ಯೆ, ಗುಣ ಒಂದೂ ಇಲ್ಲದ ಅನೇಕರಿಗೆ ಕೇವಲ ಬ್ರಾಹ್ಮಣರೆಂಬ ಆಧಾರದ ಮೇಲೆ ಈ ಸವಲತ್ತನ್ನು ನೀಡುವುದಂತೂ ತರತಮ ಪ್ರಜ್ಞೆ ಸಂಪೂರ್ಣ ಮಾಯವಾಗಿರುವುದರ ಸೂಚನೆ. ಸಹಜವಾಗಿಯೇ ಇವೆಲ್ಲ ಜಾತಿಪದ್ಧತಿ ಹಾಗೂ ತಿಕ್ಕಲುತನಗಳ ಜೊತೆಗೇ ಇರುತ್ತವೆ.

ರಾಷ್ಟ್ರಪತಿಗಳು ಇಂಥ ಅಸಹ್ಯಕರ ಪ್ರದರ್ಶನದಲ್ಲಿ ತೊಡಗುವುದೆಂದರೆ ನನ್ನಂಥವರನ್ನು ಕ್ರೂರವಾಗಿ ಅವಮಾನಿಸಿದಂತೆ. ಕಾರಣ, ಷಂಡ ಸಿಟ್ಟಿನಿಂದ ಉರಿದು ಬೀಳುವುದನ್ನು ಬಿಟ್ಟು ನಾವಿನ್ನೇನೂ ಮಾಡಲಾರೆವು.

ಈ ಅಪರಾಧದಲ್ಲಿ ಪಾಲ್ಗೊಂಡ, ಉತ್ತರ ಪ್ರದೇಶದ ಅಧಿಕಾರ ಕೇಂದ್ರ ಗಳಲ್ಲಿರುವ, ಇನ್ನಿಬ್ಬರನ್ನು ಕುರಿತು ನಾನು ಇಲ್ಲಿ ಎತ್ತಿ ಆಡುವುದಿಲ್ಲ. ಅವರಲ್ಲೊಬ್ಬ ಇಡೀ ಕಾಶಿ ತನ್ನನ್ನು ಬ್ರಾಹ್ಮಣನೆಂದು ಗುರುತಿಸಲಿ ಎಂಬ ಬಾಲಿಶ ಕಾತುರ ವ್ಯಕ್ತಪಡಿಸುತ್ತಿದ್ದ. ಆದರೆ, ಇನ್ನೊಬ್ಬ ಪ್ರಾಯಶಃ ಸೋಲೊಪ್ಪಿಕೊಂಡು ಇದೀಗ ಹಿಂದೂಧರ್ಮದ ಅತ್ಯಂತ ಕೆಳನೆಲೆಗಳನ್ನೇ ಅದರ ಚಿಂತನೆ ಹಾಗೂ ಸಂಸ್ಕೃತಿಯ ಉನ್ನತ ಶಿಖರಗಳೆನ್ನುತ್ತಾ ಗೊಂದಲವೆಬ್ಬಿಸಿದ್ದಾನೆ.

ಈಚಿನ ವರ್ಷಗಳಲ್ಲಿ ಕಾಶಿ ಪಟ್ಟಣ ಒಂದು ಕೆಟ್ಟ ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದೆ. ದ್ವಿಜರ ಇತರೆ ಗುಂಪುಗಳಿಗೆ ಬ್ರಾಹ್ಮಣನ ಸ್ಥಾನಮಾನ ನೀಡುವ ತನ್ನ ಪ್ರಯತ್ನದಲ್ಲಿ ಅದು 'ಕಾಯಕದ ಮೂಲಕ ಬ್ರಾಹ್ಮಣನಾದವನನ್ನು' ಮೇಲೆಂದು ತೋರಿಸುವ ಸಲುವಾಗಿ 'ಹುಟ್ಟು ಬ್ರಾಹ್ಮಣ' ಎಂದು ಕರೆಯಲ್ಪಡು ವವನನ್ನು ಗೇಲಿ ಮಾಡುತ್ತದೆ. ಈ ಕೆಟ್ಟ ಸಂಪ್ರದಾಯಕ್ಕೆ ಕಟ್ಟುಬಿದ್ದವರು ಒಂದೋ ಬ್ರಾಹ್ಮಣರನ್ನು ಪೂಜಿಸುತ್ತಾರೆ; ಇಲ್ಲವೇ ತೆಗಳುತ್ತಾರೆ. ಈ ವ್ಯಸನಕ್ಕೆ ತುತ್ತಾದ ಬನಿಯಾಗಳು ಹಾಗೂ ಕಾಯಸ್ಥರಿಗೆ ಹುಟ್ಟುಬ್ರಾಹ್ಮಣರ ಜೊತೆ ಸಮಾನತೆಯ ಸಂಬಂಧವನ್ನಿರಿಸಿಕೊಳ್ಳುವುದೇ ಅಸಾಧ್ಯವಾಗುತ್ತದೆ.

ರಾಷ್ಟ್ರಪತಿಗಳ ಆ ನಾಚಿಕೆಗೇಡಿನ ವರ್ತನೆಯ ಕತೆಯನ್ನು ನಾನು ಕೇಳಿದ್ದು ಕೂಡ ಒಬ್ಬ ಬ್ರಾಹ್ಮಣನಿಂದಲೇ ಎಂಬುದನ್ನು ಇಲ್ಲಿ ದಾಖಲಿಸಬೇಕು. ಭಾರತದ ರಾಷ್ಟ್ರಪತಿಯಿಂದ ಕಾಲು ತೊಳೆಸಿಕೊಳ್ಳಲು ಕರೆಸಲಾದ ಇನ್ನೂರು ಜನರಲ್ಲಿ

ಇವನೂ ಒಬ್ಬನಾಗಿದ್ದ. ಆದರೆ ಆ ಹೀನ ಆಚರಣೆ ಶುರುವಾಗುವ ಮುನ್ನ, ತನ್ನ ದೇಶದ ರಾಷ್ಟ್ರಪತಿಯಿಂದ ಕಾಲು ತೊಳೆಸಿಕೊಳ್ಳುವ ಪಾಪ ಹೊರಬೇಕಾಗುತ್ತದೆ ಎಂಬ ಭಯದಿಂದ ನಡುಗಿಹೋದ ಏಕೈಕ ವ್ಯಕ್ತಿ ಈತ. ನಂತರ ಈತನ ಬದಲಿಗೆ ಇನ್ನೊಬ್ಬನನ್ನು ತರಲಾಯಿತು.

ಆ ಅನಾಗರಿಕ ರಾಕ್ಷಸ ಪಂದ್ಯದಲ್ಲಿ ಮನುಷ್ಯನಂತೆ ವರ್ತಿಸಿದ ಏಕೈಕ ವ್ಯಕ್ತಿ ಈತ. ಈ ಬಡ ಸಂಸ್ಕೃತ ಮೇಷ್ಟರನ್ನು ನಾನು ಎಂದೆಂದಿಗೂ ಗೌರವದಿಂದ ಕಾಣುತ್ತೇನೆ. ಹುಟ್ಟಿನಿಂದ ಬಾಹ್ಮಣರಾದರೂ ಇಂಥವರೇ ಇಂದು ದಕ್ಷಿಣಭಾರತದ ವಿಕೃತ ಬ್ರಾಹ್ಮಣ ವಿರೋಧವು ಇಡೀ ದೇಶವನ್ನು ನುಂಗದಂತೆ ತಡೆಯುತ್ತಿದ್ದಾರೆ.

ಭಾರತೀಯ ಗಣರಾಜ್ಯ ಹಾಗೂ ಮಾನವ ಚೇತನ ಹೀಗೆ ಅಧೋಗತಿ ಗಿಳಿಯುತ್ತಿರುವುದನ್ನು ಸುಮ್ಮನೆ ಕಣ್ಣುಬಿಟ್ಟುಕೊಂಡು ನೋಡುತ್ತಿರುವ ಕಾಶಿ ಹಾಗೂ ಭಾರತದ ಇತರ ಭಾಗದ ಬ್ರಾಹ್ಮಣರಿಗೆ ಒಂದು ಮಾತು ನೆನಪಿರಲಿ: ದುರುಳ ವರ್ತನೆಗಳೂ ಅದರಿಂದ ಹುಟ್ಟುವ ಖುಷಿಯೂ ಒಂದಲ್ಲ ಒಂದು ದಿನ ಅವರಿಗೇ ಮುಳುವಾಗುತ್ತವೆ.

ವ್ಯಕ್ತಿಯೊಬ್ಬ ಬ್ರಾಹ್ಮಣನೆನ್ನುವ ಒಂದೇ ಆಧಾರದ ಮೇಲೆ ಇನ್ನೊಬ್ಬ ಅವನ ಕಾಲು ತೊಳೆಯುವುದೆಂದರೆ ಜಾತಿಪದ್ಧತಿ, ಬಡತನ ಹಾಗೂ ದುಃಖಗಳು ನಿರಾತಂಕವಾಗಿ ಮುಂದುವರೆಯಲು ಅನುವುಮಾಡಿಕೊಡುವುದೆಂದೇ ಅರ್ಥ. ಇದರ ಜೊತೆಗೇ ನೇಪಾಳಿ ಬಾಬಾ, ಗಂಗಾಜಲದ ಮೇಲೆ ಆಣೆಯಿಡಿಸಿ ಓಟು ಕೇಳುವುದು ಇತ್ಯಾದಿಗಳು ಕೂಡ ಸರಪಳಿಯಂತೆ ಮುಂದುವರೆಯುತ್ತವೆ.

ಇಂಥ ಹೀನಕೃತ್ಯಗಳನ್ನು ಪ್ರೇರೇಪಿಸುವ ಮನಸ್ಸು ದೇಶದ ಕಲ್ಯಾಣ ಕುರಿತಾಗಲೀ, ಹೊಸ ಹೊಸ ಸಾಹಸಗಳನ್ನು ಕುರಿತಾಗಲೀ ಉತ್ಸಾಹದಿಂದ ಯೋಜನೆಗಳನ್ನು ರೂಪಿಸಲಾರದು. ಇಂಥ ಮನಸ್ಸು ಕೋಟ್ಯಾಂತರ ಜನಸಮೂಹವನ್ನು ಕೆಳಗೆ ತುಳಿಯುತ್ತಲೇ ಇರುತ್ತದೆ. ಅವರಿಗೆ ಆಧ್ಯಾತ್ಮಿಕ ಸಮಾನತೆಯನ್ನು ಕೊಡಲು ನಿರಾಕರಿಸಿದಂತೆ, ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯಿಂದಲೂ ಅವರನ್ನು ವಂಚಿಸುತ್ತಿರುತ್ತದೆ.

ಇಂಥ ಮನಸ್ಸು ದೇಶದ ಕೃಷಿಯನ್ನಾಗಲೀ, ಕೈಗಾರಿಕೆಯನ್ನಾಗಲೀ ಸುಧಾರಿಸ ಲಾರದು. ಕಾರಣ, ಈ ಬಗೆಯ ಮನಸ್ಸು ತಿಗಣೆ ಹಾಗೂ ಸೊಳ್ಳೆಗಳನ್ನು ಹುಟ್ಟು ಹಾಕುವ ತಿಪ್ಪೆ, ಕೊಳಚೆಗಳ ತವರೂರು. ಹೀಗಿರುವಾಗ ಕೇವಲ ಮೇಲುಜಾತಿಯ

ಶ್ರೀಮಂತರ ಮನೆಯ ಸುತ್ತ ಡಿ.ಡಿ.ಟಿ. ಸಿಂಪಡಿಸಿದರೇನು ಪ್ರಯೋಜನ? ತಿಗಣೆ, ಸೊಳ್ಳೆ, ಬರಗಾಲ ಹಾಗೂ ಸಾರ್ವಜನಿಕವಾಗಿ ಬ್ರಾಹ್ಮಣರ ಕಾಲು ತೊಳೆಯುವುದು ಇವೆಲ್ಲ ಒಂದಕ್ಕೊಂದು ಪೂರಕವಾಗಿವೆ. ಜೊತೆಗೇ ಅವು ಮಾನಸಿಕ ಹಾದರವನ್ನೂ, ಆಲೋಚನೆಗಳಲ್ಲಿ ಕೂಪಮಂಡೂಕತ್ವವನ್ನೂ ನೀರೆರೆದು ಪೋಷಿಸುತ್ತವೆ. ಕಾರಣ, ವಿಭಿನ್ನ ಉದ್ಯೋಗಗಳಲ್ಲಿ ತೊಡಗಿದ, ವಿಭಿನ್ನ ಸಾಮಾಜಿಕ ಶ್ರೇಣಿಗಳಲ್ಲಿ ಹುಟ್ಟಿದ ಜನರ ಮನಸ್ಸುಗಳ ನಡುವಣ ಸಂವಾದದ ಸಾಧ್ಯತೆಯೇ ಇಲ್ಲಿ ಸತ್ತು ಹೋಗಿರುತ್ತದೆ.

ಕರಾಳ ನಿರಾಶೆ ಎಲ್ಲೆಡೆ ಕವಿದಿದೆ. ಎತ್ತ ನೋಡಿದರೂ ಹೊಸತನವಿಲ್ಲ. ಬ್ರಾಹ್ಮಣರ ಕಾಲು ತೊಳೆಯುವ ರಾಷ್ಟ್ರಪತಿಯಿರುವ ದೇಶದಲ್ಲಿ ಅರ್ಚಕಿ ಹಾಗೂ ಚಮ್ಮಾರನ ನಡುವೆ, ಶಿಕ್ಷಕ ಹಾಗೂ ಅಗಸಗಿತ್ತಿಯ ನಡುವೆ ಮುಕ್ತ ಮಾತುಕತೆಯ ಸಾಧ್ಯತೆಯೇ ಇರುವುದಿಲ್ಲ.

ರಾಷ್ಟ್ರಪತಿಯೊಬ್ಬನ ಬಗ್ಗೆ ನಮಗೆ ಭಿನ್ನಾಭಿಪ್ರಾಯಗಳಿರಬಹುದು, ಅವನ ನಡುವಳಿಕೆಗಳು ನಮಗೆ ವಿಚಿತ್ರವೆನಿಸಬಹುದು. ಆದರೂ ಅವನನ್ನು ನಾವು ಗೌರವಿಸಬಯಸುತ್ತೇವೆ. ಆದರೆ ಅಂಥ ಗೌರವಕ್ಕೆ ಅರ್ಹನಾಗಬೇಕಾದರೆ ರಾಷ್ಟ್ರಪತಿ ಕೂಡ ನಾಗರಿಕ ನಡವಳಿಕೆಯ ಕೆಲವು ಮೂಲಭೂತ ನಿಯಮಗಳನ್ನು ಉಲ್ಲಂಘಿಸಕೂಡದು.

ಗಂಡು-ಹೆಣ್ಣುಗಳ ನಡುವಣ ಸಾಮಾಜಿಕ ಸಂಬಂಧ ಕುರಿತು ರಾಷ್ಟ್ರಪತಿಗಳು ವ್ಯಕ್ತಪಡಿಸಿದ ಅಭಿಪ್ರಾಯ ಕುರಿತು ಪ್ರತಿಕ್ರಿಯೆ-ಅದು ಪ್ರಕಟವಾಗಲಿಲ್ಲ-ನೀಡುವ ಸಂದರ್ಭ ಹಿಂದೊಮ್ಮೆ ನನಗೆ ಬಂದಿತ್ತು. ಆದರೆ ಆಗಿನ್ನೂ ಅವರ ಬಗೆಗೆ ನಾನು ಪೂರಾ ಗೌರವ ಕಳೆದುಕೊಂಡಿರಲಿಲ್ಲ. ಈಗ ಮಾತ್ರ ಅವರು ನನ್ನ ಗೌರವವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ. ಸೋದರನನ್ನು ಸೋದರನೇ ಕೊಲ್ಲುವ ಈ ಅಪರಿಹಾರ್ಯ ಕೃತ್ಯದಿಂದಾಗಿ ಅವರು ನನ್ನ ಗೌರವವನ್ನು ಪೂರ್ತಿ ಕಳೆದು ಕೊಂಡಿದ್ದಾರೆ. ಕಾರಣ, ಬ್ರಾಹ್ಮಣರ ಕಾಲುಗಳನ್ನು ಸಾರ್ವಜನಿಕವಾಗಿ ತೊಳೆಯುವ ಕೈಗಳು ಶೂದ್ರರನ್ನೂ, ದಲಿತರನ್ನೂ ಒದೆಯಬಲ್ಲ ಕಾಲುಗಳ ಜೊತೆಗೇ ಇರುತ್ತವೆ.

ಡಾ. ರಾಜೇಂದ್ರ ಪ್ರಸಾದರು ನನ್ನಂಥವರ ಗೌರವ ಕುರಿತು ಅಷ್ಟೇನೂ ತಲೆ ಕೆಡಿಸಿಕೊಳ್ಳಲಾರರು. ಕಾರಣ ಸಮಾಜವಾದ-ಅಷ್ಟೇ ಏಕೆ, ಪ್ರಜಾಪ್ರಭುತ್ವ ಕೂಡ- ಇವತ್ತು ಭಾರತದಲ್ಲಿರುವಷ್ಟು ನಿರ್ವೀರ್ಯವಾಗಿರದಿದ್ದರೆ ಕಾಶಿಯ ಯುವಕರು ತೀವ್ರವಾಗಿ ದಿಗ್ಭ್ರಮೆಗೊಂಡಿರುತ್ತಿದ್ದರು; ನೂರಾರು ಜನರು ಪ್ರತಿಭಟನಾ ಪ್ರದರ್ಶನ

ನಡೆಸಿ ಈ ಅಸಹ್ಯಕರ ಪ್ರದರ್ಶನ ಸಾಧ್ಯವಾಗದಂತೆ ತಡೆಯುತ್ತಿದ್ದರು. ಆದರೆ ಹಾಗಾಗಲಿಲ್ಲ.

ರಾಷ್ಟ್ರಪತಿ ಹಾಗೂ ಕಾಶಿಯ ಈ ಘಟನೆಯಲ್ಲಿ ಅವರ ಜೊತೆಗಿದ್ದ ಉತ್ತರ ಪ್ರದೇಶದ ಇತರರ ಅಪರಾಧದ ವ್ಯಾಪ್ತಿಯನ್ನು ತೋರಿಸಿಕೊಡಲು ಬೇರೆ ಬೇರೆ ವಿಧಾನಗಳಿರಬಹುದು. ಆದರೆ, ತಕ್ಷಣಕ್ಕೆ ಅವರು ನನ್ನ ಹಾಗೂ ನನ್ನಂಥ ಲಕ್ಷಾಂತರ ಜನರ ಗೌರವ ಕಳೆದುಕೊಂಡಿದ್ದಾರೆಂದು ಮತ್ತೆ ಮತ್ತೆ ಹೇಳಲೇಬೇಕಾಗಿದೆ.

ಭಾರತೀಯ ಗಣರಾಜ್ಯದ ಅಧ್ಯಕ್ಷರು ಹೀಗೆ ಸಾರ್ವಜನಿಕವಾಗಿ ತಮ್ಮ ಘನತೆಯನ್ನು ತಾವೇ ಕಳೆದುಕೊಳ್ಳಲು ಅವಕಾಶ ನೀಡಿದ್ದಕ್ಕಾಗಿ ಪ್ರಧಾನಿಯನ್ನಾಗಲೀ ಸರ್ಕಾರವನ್ನಾಗಲೀ ನಾನು ದೂಷಿಸುವುದಿಲ್ಲ. ಅವರ ವಿರುದ್ಧ ನನ್ನ ಆಪಾದನೆ ಮತ್ತಷ್ಟು ಗಂಭೀರವಾದದ್ದು. ಜಾತಿಪದ್ಧತಿಗೆ ಸಂಬಂಧಿಸಿದ ಈ ಸಮಸ್ಯೆಯಲ್ಲಿ ತನ್ನ ಪಾತ್ರವೇನೆಂಬುದನ್ನು ಯಾರಿಗೂ ಗೊತ್ತಾಗದಂತೆ ಕಿಲಾಡಿತನದಿಂದ ಮುಚ್ಚಿಡಬಲ್ಲ ಮನುಷ್ಯನೊಬ್ಬ ಅತ್ಯಂತ ಕಿಡಿಗೇಡಿಯೇ ಸರಿ.

ನೆಹರೂ ಒಮ್ಮೆ ಬ್ರಾಹ್ಮಣರ ಸೇವಾ ಮನೋಭಾವ (Brahminic spirit of service) ಎಂಬ ವಿಶೇಷಣಗಳನ್ನು ಬಳಸಿ ಬ್ರಾಹ್ಮಣರನ್ನು ಹೊಗಳಿದ ಮಾತುಗಳು ಈ ಹಿಂದೆಯೇ ಪ್ರಕಟವಾಗಿವೆ. ಅಂದರೆ, ಡಾ. ರಾಜೇಂದ್ರ ಪ್ರಸಾದರಂಥವರು ಏನನ್ನು ಬಹಿರಂಗವಾಗಿ ಮಾಡಿಬಿಡುತ್ತಾರೋ ಅಂಥದ್ದನ್ನು ನೆಹರೂ ಪ್ರತ್ಯಕ್ಷವಾಗಿ ಮಾಡದಿದ್ದರೂ ಪರೋಕ್ಷವಾಗಿ ಮಾಡಿಬಿಟ್ಟಿರುತ್ತಾರೆ.

ಜಾತಿಪದ್ಧತಿಯ ವಿರುದ್ಧ ಸರ್ವೇಸಾಮಾನ್ಯವಾದ ಬೊಗಳೆ ಭಾಷಣಗಳನ್ನು ಮಾಡಿರುವುದನ್ನು ಬಿಟ್ಟರೆ, ಜಾತಿಪದ್ಧತಿಯನ್ನು ಹೊಡೆದೋಡಿಸಿ ಸರ್ವಸಮಾನತೆ ತರಲು ಪ್ರಧಾನಮಂತ್ರಿ ಏನು ಮಾಡಿದ್ದಾರೆ ಎಂದು ತಿಳಿಯಲು ನಾನು ಕಾತುರನಾಗಿದ್ದೇನೆ.

ಈ ದಿಸೆಯಲ್ಲಿ ಒಂದು ಸಣ್ಣ ಪ್ರಯೋಗವನ್ನೇ ಮಾಡಬಹುದು. ಆಡಳಿತಾತ್ಮಕ ಸೇವೆ ಹಾಗೂ ಸೇನೆಗೆ ಸಿಬ್ಬಂದಿಯನ್ನು ನೇಮಿಸುವಾಗ ಅಭ್ಯರ್ಥಿಗೆ ಇರಬೇಕಾದ ಎಲ್ಲ ಅರ್ಹತೆಗಳ ಜೊತೆಗೆ ಶೂದ್ರ ಮತ್ತು ಬ್ರಾಹ್ಮಣರ ನಡುವಣ ಅಂತರ್ಜಾತೀಯ ವಿವಾಹ ಕೂಡ ಒಂದು ಅರ್ಹತೆಯೆಂದು ಪರಿಗಣಿತವಾಗಬೇಕು. ಹಾಗೆಯೇ ಜಾತಿಜಾತಿಗಳ ನಡುವಣ ಸಹಭೋಜನವನ್ನು ಒಲ್ಲೆ ಎನ್ನುವುದು ಸರ್ಕಾರಿ ನೌಕರಿಗೆ ಸೇರಲು ಅನರ್ಹತೆಯಾಗಬೇಕು. ಆಗ ಮಾತ್ರ ಜಾತಿಪದ್ಧತಿಯ ವಿರುದ್ಧ

ಪ್ರಾಮಾಣಿಕವಾದ ಯುದ್ಧ ಆರಂಭವಾಗುತ್ತದೆ. ಆದರೆ ಅಂಥ ದಿನ ಮಾತ್ರ ಇನ್ನೂ ಬರಬೇಕಾಗಿದೆ.

ಈಗ ನಾನು ಪ್ರತಿಪಾದಿಸುತ್ತಿರುವ ಬ್ರಾಹ್ಮಣ-ಶೂದ್ರರ ನಡುವಣ ವಿವಾಹವನ್ನು ಬನಿಯಾ ಹಾಗೂ ಬ್ರಾಹ್ಮಣರ ನಡುವಿನ ವಿವಾಹ ಹಾಗೂ ಅಂಥ ಇನ್ನಿತರ ವಿವಾಹಗಳ ಜೊತೆಗೆ ಸೇರಿಸಿ ಗೊಂದಲ ಮಾಡಿಕೊಳ್ಳಬಾರದು. ಕಾರಣ ಬನಿಯಾ ಮತ್ತು ಬ್ರಾಹ್ಮಣರ ನಡುವಣ ವಿವಾಹಗಳು ಕೊಂಚ ಸುಲಭ ಹಾಗೂ ಅವು ಒಂದು ಚೌಕಟ್ಟಿನಲ್ಲೇ ನಡೆಯುವಂಥವು.

ನಾನು ಹೇಳುತ್ತಿರುವ ಮಾದರಿಯ ವಿವಾಹಗಳನ್ನು ಇಷ್ಟಪಡದ ಮಡಿವಂತರು ಇದು ನಾಗರಿಕ ಹಕ್ಕುಗಳ ಉಲ್ಲಂಘನೆ ಎಂದು ಹುಯಿಲೆಬ್ಬಿಸಬಹುದು. ಹಾಗಾದರೆ ಕೆಲವು ಅನುವಂಶಿಕ ಗುಂಪುಗಳಿಗೆ ಮಾನವ ಆಯ್ಕೆಗಳನ್ನು ಸೀಮಿತಗೊಳಿಸುವ ಕೆಟ್ಟ ಸಂಪ್ರದಾಯದಿಂದ ನಾಗರಿಕ ಹಕ್ಕುಗಳ ಉಲ್ಲಂಘನೆಯಾಗಿಲ್ಲವೆ? ಸರ್ಕಾರಿ ನೌಕರಿಗೆ ಆಯ್ಕೆಮಾಡುವಾಗ ಅಂತರ್ಜಾತೀಯ ವಿವಾಹವನ್ನು ಒಂದು ಅರ್ಹತೆಯನ್ನಾಗಿ ಪರಿಗಣಿಸುವುದನ್ನು ಕುರಿತು ಕೆಲವರು ನಗೆಯಾಡಬಹುದು. ಆದರೆ ಪ್ರತಿಯೊಂದು ರಾಷ್ಟ್ರಪ್ರಭುತ್ವಕ್ಕೂ ತನ್ನ ಭದ್ರತೆ ಹಾಗೂ ಐಕ್ಯತೆಗಾಗಿ ಹೋರಾಡುವ ಹಕ್ಕಿರುವಂತೆಯೇ, ಎಲ್ಲ ಬಗೆಯ ಹೊಸತನವೂ ಇಲ್ಲಿಂದ ಪಲಾಯನ ಮಾಡುವಂತೆ ಮಾಡಿರುವ ಈ ಕರಾಳ ನಿರಾಶೆಯನ್ನು ಹೊಡೆದೋಡಿಸುವ ಹಕ್ಕಿದೆ.

ಈ ಮಾತುಗಳನ್ನಾಡುವಾಗ ನನಗೆ ಮತ್ತೆ ಗಂಡು-ಹೆಣ್ಣುಗಳ ನಡುವಣ ಭೇದ ನೆನಪಾಗುತ್ತಿದೆ. ಜಾತ್ಯಾಧಾರಿತ ಪ್ರತ್ಯೇಕತೆಗೂ, ಲಿಂಗಾಧಾರಿತ ಪ್ರತ್ಯೇಕತೆಗೂ ಪರಸ್ಪರ ಸಂಬಂಧವಿದೆ. ಅವು ಒಂದನ್ನೊಂದು ಪೋಷಿಸುತ್ತಾ ಹೋಗುತ್ತವೆ. ಫಲವಾಗಿ, ನಮ್ಮ ಬದುಕಿನಲ್ಲಿ, ಪರಸ್ಪರ ಮಾತುಕತೆಗಳಲ್ಲಿ ಹೊಳಪೇ ಇಲ್ಲದಂತಾಗುತ್ತದೆ; ಜೀವನದಿಗಳು ಸರಾಗವಾಗಿ ಹರಿಯುವುದು ನಿಂತು ಹೋಗುತ್ತದೆ.

ಒಮ್ಮೆ ಕಾಫಿಹೌಸೊಂದರಲ್ಲಿ ಕೂತು ಹರಟುತ್ತಿದ್ದವರ ಜೊತೆಗೆ ಮಾತಾಡುತ್ತಿದ್ದೆ. ಇಂಥ ಕಾಫಿ ಟೇಬಲ್ ಮಾತುಕತೆಗಳೇ ಫ್ರೆಂಚ್ ಕ್ರಾಂತಿಯನ್ನು ಬೆಳೆಸಿದವೆಂದು ಅವರಲ್ಲೊಬ್ಬ ಹೇಳಿದ. ನನಗೆ ಸಿಟ್ಟಿನಿಂದ ಮೈ ಉರಿಯತೊಡಗಿತು. ಅಲ್ಲಿ ನೋಡಿದರೆ ನಮ್ಮ ಜೊತೆ ಒಬ್ಬ ಶೂದ್ರನಾಗಲೀ, ಹೆಣ್ಣುಮಗಳಾಗಲೀ ಇರಲಿಲ್ಲ. ಇಂಥ ನಿರ್ಜೀವ ಗುಂಪಿನಲ್ಲಿದ್ದ ನಮ್ಮಂಥ ಗೊಡ್ಡು ಜನರೆಲ್ಲ ನಿನ್ನೆಯ ಮೇವನ್ನು ಸುಮ್ಮನೆ ಮೆಲುಕು ಹಾಕುತ್ತಿರುವ ದನಗಳಂತಿದ್ದೆವು.

ಈ ದೇಶದಲ್ಲಿ ಕಮ್ಯುನಿಸ್ಟ್, ಕಾಂಗ್ರೆಸ್ ಹಾಗೂ ಸಮಾಜವಾದಿ ರಾಜಕಾರಣದಿಂದ ಹಿಡಿದು ಎಲ್ಲ ಬಗೆಯ ರಾಜಕಾರಣದಲ್ಲೂ ಉದ್ದೇಶ ಪೂರ್ವಕವಾಗಿಯೋ ಅಥವಾ ರೂಢಿಗತವಾಗಿಯೋ ಒಂದು ವಿಷಯ ಕುರಿತು ಮಾತ್ರ ರಾಷ್ಟ್ರೀಯ ಸಹಮತವಿದೆ. ಅದೆಂದರೆ, ಇಡೀ ಜನಸಂಖ್ಯೆಯ ಮುಕ್ಕಾಲು ಭಾಗದಷ್ಟಿರುವ ಶೂದ್ರರನ್ನೂ, ಸ್ತ್ರೀಯರನ್ನೂ ತುಳಿಯುವುದು ಹಾಗೂ ಅವರ ಮತದಾನದ ಹಕ್ಕನ್ನು ಕಸಿದುಕೊಳ್ಳುವುದು.

ಭಾರತೀಯ ಹೆಣ್ಣಿನ ಸ್ಥಿತಿಯಂತೂ ಅತ್ಯಂತ ಶೋಚನೀಯವಾಗಿದೆ. ಅವಳ ಅಡಿಗೆಮನೆಯ ಗುಲಾಮಗಿರಿಯ ಜೊತೆಗೆ, ಅವಳು ಬಳಸುವ ಒಲೆಯ ಉಸಿರು ಕಟ್ಟಿಸುವ ಹೊಗೆಯೂ ಸೇರಿಕೊಂಡು ಪರಿಸ್ಥಿತಿ ಇನ್ನಷ್ಟು ಕರುಣಾಜನಕವಾಗಿಬಿಟ್ಟಿದೆ. ಅವಳಿಗೂ ಅಡಿಗೆ, ಊಟಕ್ಕೆ ನಿಗದಿಯಾದ ವೇಳಾಪಟ್ಟಿಯೊಂದಿರಬೇಕು. ಅಡಿಗೆಮನೆಯಲ್ಲಿ ಹೊಗೆ ಸಲೀಸಾಗಿ ಹೋಗುವ ಚಿಮಣಿಯಿರಬೇಕು. ಅರೆ ಹೊಟ್ಟೆ, ನಿರುದ್ಯೋಗ ಹಾಗೂ ಅನ್ಯಾಯಗಳ ವಿರುದ್ಧದ ಹೋರಾಟದಲ್ಲಿ ಅವಳೂ ಪಾಲ್ಗೊಳ್ಳಬೇಕು.

ಭಾರತೀಯ ಸ್ತ್ರೀಯರನ್ನು ಕುರಿತು ಸೊಗಸಾದ ಲೇಖನಗಳನ್ನು ಬರೆಯುತ್ತಿರುವ ಶಕುಂತಲಾ ಶ್ರೀವಾಸ್ತವ ಅವರು ಮಾಮೂಲಿ ಸ್ತ್ರೀವಾದಿಗಳಂತೆ ಎಲ್ಲ ತಪ್ಪನ್ನೂ ಗಂಡಿನ ಮೇಲೆ ಹೇರುವ ಆವೇಶದಿಂದ ಮುಕ್ತರಾಗಿದ್ದಾರೆ ಎಂಬುದನ್ನು ಕಂಡು ನನಗೆ ಖುಷಿ. ಅಷ್ಟೇ ಅಲ್ಲ, ಗಂಡು ಹೆಣ್ಣುಗಳಿಬ್ಬರಲ್ಲೂ ಕೆಲವು ತಪ್ಪುಗಳಿವೆ-ಆದರೆ ಅವುಗಳ ಮಟ್ಟ ಬೇರೆಯಿರಬಹುದು-ಎಂಬುದನ್ನು ಅವರು ಗುರುತಿಸಲು ತಯಾರಿದ್ದಾರೆ. ಆದರೂ ಅವರು ಕ್ರಮಿಸಬೇಕಾದ ಹಾದಿ ಇನ್ನೂ ದೂರವಿದೆ.

ಮಹತ್ವದ ಸಮ್ಮೇಳನವೊಂದರಲ್ಲಿ ಶಕುಂತಲಾ ಶ್ರೀವಾಸ್ತವ ಅವರು ವೇದಿಕೆಗೆ ಬರಬೇಕೆಂದು ಕೇಳಿಕೊಂಡಾಗ, ಆಕೆ ಪ್ರೇಕ್ಷಕರ ಗ್ಯಾಲರಿಯಿಂದ ಅಲುಗಾಡಲೂ ಒಲ್ಲೆನೆಂದದ್ದು ನನಗೆ ನೆನಪಿದೆ. ಅದಕ್ಕೇನು ಮಾಡಬೇಕೆಂದು ನನಗೆ ಗೊತ್ತಿತ್ತು. ರಟ್ಟೆ ಹಿಡಿದು ಎಳೆದುಕೊಂಡು ಹೋಗುತ್ತೇನೆ ಎಂದು ನಾನು ಬೆದರಿಕೆ ಹಾಕಿದ ಮೇಲೆಯೇ ಆಕೆ ಕೊಂಚ ಮೆದುವಾಗಿದ್ದು ಹಾಗೂ ಗ್ಯಾಲರಿಯಿಂದ ವೇದಿಕೆಗೆ ಬಂದದ್ದು.

ಯಾವುದು ಸನ್ನಡತೆ ಹಾಗೂ ಯಾವುದು ಪಾಪ ಎಂಬ ಪ್ರಶ್ನೆಯನ್ನು ಇನ್ನು ಹೆಚ್ಚು ಕಾಲ ಕಡೆಗಣಿಸಲಾಗದು. ಆಧ್ಯಾತ್ಮಿಕತೆ ಅಖಂಡವಾದದ್ದು. ಆದರೆ ನೈತಿಕತೆ

ಸಾಪೇಕ್ಷವಾದದ್ದು; ಹೀಗಾಗಿ ಪ್ರತಿಯೊಂದು ಯುಗ ಹಾಗೂ ಪ್ರತಿಯೊಬ್ಬ ವ್ಯಕ್ತಿ ತನ್ನದೇ ಆದ ನಿರ್ದಿಷ್ಟ ನೈತಿಕತೆಯನ್ನು ಹುಡುಕಿಕೊಳ್ಳಬೇಕು ಎಂಬುದು ನನ್ನ ನಂಬಿಕೆ.

ಉದಾಹರಣೆಗೆ ಇಬ್ಬರು ಸ್ತ್ರೀಯರನ್ನು ತೆಗೆದುಕೊಳ್ಳೋಣ. ಒಬ್ಬಳು ತನ್ನ ಇಡೀ ಜೀವಮಾನದಲ್ಲಿ ಒಂದೇ ಒಂದು ಮಗುವಿಗೆ ಜನ್ಮಕೊಟ್ಟಿದ್ದಾಳೆ. ಆ ಮಗು ವೈವಾಹಿಕ ಚೌಕಟ್ಟಿನಾಚೆಗೆ ಜನಿಸಿದ್ದಾಗಿರಬಹುದು. ಇನ್ನೊಬ್ಬಳಿದ್ದಾಳೆ. ಆಕೆ ನೈತಿಕವಾಗಿಯೇ ಅರ್ಧ ಡಜನ್ ತಂಟೆಕೋರರಿಗೆ ಜನ್ಮಕೊಟ್ಟಿದ್ದಾಳೆಂದಿಟ್ಟುಕೊಳ್ಳಿ. ಇವರಿಬ್ಬರಲ್ಲಿ ಯಾರು ಹೆಚ್ಚು ಸಜ್ಜನರು ಹಾಗೂ ಯಾರು ಹೆಚ್ಚು ನೈತಿಕತೆಯುಳ್ಳವರು? ಮೂವರು ಗಂಡಂದಿರಿಗೆ ವಿಚ್ಛೇದನ ನೀಡಿ ನಾಲ್ಕನೆಯ ಮದುವೆಯಾದ ಹೆಂಗಸು ಹಾಗೂ ತನ್ನ ಮೊದಲ ಮೂವರು ಹೆಂಡತಿಯರು ಒಬ್ಬರ ಹಿಂದೊಬ್ಬರು ತೀರಿಕೊಂಡಿದ್ದರಿಂದ ನಾಲ್ಕನೆಯ ಮದುವೆಯಾದ ಗಂಡಸು ಈ ಇಬ್ಬರ ನಡುವೆ ಯಾರು ಹೆಚ್ಚು ಸಭ್ಯರು ಹಾಗೂ ಹೆಚ್ಚು ನೈತಿಕತೆಯುಳ್ಳವರು?

ವಿವಾಹ ವಿಚ್ಛೇದನ ಹಾಗೂ ಅನೈತಿಕ ಸಂಬಂಧಗಳು ಒಂದರ್ಥದಲ್ಲಿ ಸೋತಿವೆ ಎಂಬುದನ್ನು ನಾನು ಅಲ್ಲಗಳೆಯಲಾರೆ. ಗಂಡು-ಹೆಣ್ಣುಗಳ ನಡುವಣ ಸಂಬಂಧದಲ್ಲಿ ಪ್ರಾಯಶಃ ನಾವು ಸಾಧಿಸಬೇಕಾದ ಆದರ್ಶಗಳೆಂದರೆ, ಏಕಪತ್ನಿ ನಿಷ್ಠೆ ಅಥವಾ ಏಕಪತಿನಿಷ್ಠೆ, ಹಾಗೂ ಯಾರ ಒತ್ತಾಯವೂ ಇಲ್ಲದೆ ತಂತಾನೇ ಹುಟ್ಟಿದ ನಿಷ್ಠೆ ಎಂದು ಕಾಣುತ್ತದೆ. ಆದರೆ ಮಾನವ ಬದುಕಿನ ಇತರ ವಲಯಗಳಲ್ಲಾಗುವಂತೆ, ಇಲ್ಲೂ ಕೂಡ ಗಂಡು ಅಥವಾ ಹೆಣ್ಣು ಪರಿಪೂರ್ಣತೆ ಸಾಧಿಸಲು ಹೆಣಗಾಡಿದಾಗ ಅನೇಕ ಸಲ ಆ ಮಟ್ಟ ತಲುಪುವುದು ಅಸಾಧ್ಯವಾಗಬಹುದು.

ಹಾಗಾದರೆ ನಾವು ಮಾಡಬೇಕಾದ್ದೇನು? ವಿವಾಹದ ಚೌಕಟ್ಟಿನೊಳಗೇ ಹುಟ್ಟಿದ ಅರ್ಧ ಡಜನ್ ತಂಟೆಕೋರ ಮಕ್ಕಳಿಗಿಂತ ವಿವಾಹದ ಚೌಕಟ್ಟಿನಾಚೆಗೆ ಹುಟ್ಟಿದ ಒಂದು ಮಗು ಎಷ್ಟೋ ಪಾಲು ಸಭ್ಯವಾಗಿರುತ್ತದೆನ್ನುವುದರಲ್ಲಿ ನನಗಂತೂ ಅನುಮಾನವಿಲ್ಲ. ಹಾಗೆಯೇ ಈ ಹಿಂದೆ ಉಲ್ಲೇಖಿಸಿದ ಮೂವರು ಗಂಡಂದಿರು ಅಥವಾ ಹೆಂಡತಿಯರ ಸಾವು ಕೇವಲ ಆಕಸ್ಮಿಕವಾಗಿರಲಾರದು ಎಂಬುದು ಕೂಡ ಗ್ಯಾರಂಟಿ. ನಿರ್ಲಕ್ಷ್ಯ ಹಾಗೂ ಬಡತನ ಕೂಡ ಈ ಸಾವುಗಳಿಗೆ ಕಾರಣವಾಗಿರಬಹುದು. ಮೂರು ನಾಲ್ಕು ವಿಚ್ಛೇದನಗಳಿಗೆ ಕಾರಣವಾದ ಘರ್ಷಣೆಗಳಿಗಿಂತ ಈ ಬಗೆಯ ನಿರ್ಲಕ್ಷ್ಯ ಹೆಚ್ಚು ಅನಾಗರಿಕವಾದದ್ದು.

ಇಂದು ಈ ಬಗೆಯ ತೀರ್ಮಾನಗಳಿಗೆ ಹೆಚ್ಚಿನ ಮಹತ್ವ ಬಂದಿದೆ. ಅವಕ್ಕೆ

ಇಂದು ಸಾರ್ವತ್ರಿಕ ಮಹತ್ವವೂ ಬಂದಿದೆ. ಕಾರಣ, ಇವತ್ತು ಯಾವುದನ್ನಾದರೂ ಪಾಪ ಎಂದು ಕರೆಯುವುದಿದ್ದರೆ, ವಿವಾಹ ಹಾಗೂ ವಿವಾಹಾನಂತರದ ಬದುಕಿಗೆ ಸಂಬಂಧಿಸಿದ ಸ್ಥಿತಿಗಳನ್ನು ಹಾಗೆ ಕರೆಯಬಹುದು. ಇವತ್ತು ವರದಕ್ಷಿಣೆಯಿಲ್ಲದ ಹುಡುಗಿಯೆಂದರೆ ಗೊಡ್ಡು ಹಸುವಿನಂತೆ ಯಾವ ಕೆಲಸಕ್ಕೂ ಬಾರದವಳು ಎಂಬಂತಾಗಿಬಿಟ್ಟಿದೆ.

ವರದಕ್ಷಿಣೆಯ ಮೊತ್ತವನ್ನು ಪೂರ್ತಿ ಕೊಡದೇ ಹೋದದ್ದರಿಂದ, ತಮ್ಮ ಹೆಣ್ಣುಮಕ್ಕಳನ್ನು ಅದೆಷ್ಟು ಹಿಂಸಿಸಲಾಗುತ್ತದೆ, ಎಷ್ಟೋ ಸಲ ಸಾವಿಗೂ ದೂಡಲಾಗುತ್ತದೆ ಎಂಬುದನ್ನು ಕುರಿತ ಕತೆಗಳನ್ನು ಎಷ್ಟೋ ಜನ ತಂದೆತಾಯಿಯರು ನನ್ನೊಡನೆ ಹೇಳುತ್ತಾ ಕಣ್ಣೀರಿಟ್ಟಿದ್ದಾರೆ. ವ್ಯವಸಾಯ ಕ್ಷೇತ್ರದಲ್ಲಾಗುವಂತೆ ಇಲ್ಲೂ ಆಗಿಬಿಟ್ಟಿದೆ. ಅಂದರೆ, ದುಡಿಯುವುದಕ್ಕಿಂತ ಜಮೀನನ್ನು ಬಾಡಿಗೆಗೆ ಕೊಟ್ಟರೆ ಹೆಚ್ಚು ಗಳಿಸುವ ರೈತನಂತೆ, ಇಲ್ಲಿ ಕೂಡ ಹೆಚ್ಚು ಓದದ ಹುಡುಗಿ ಓದಿದ ಹುಡುಗಿಗಿಂತ ಮೇಲೆನಿಸಿಬಿಟ್ಟಿದ್ದಾಳೆ. ಅದಕ್ಕೆ ಮುಖ್ಯ ಕಾರಣವೆಂದರೆ ಓದದ ಹುಡುಗಿ ಕೊಡಬೇಕಾದ ವರದಕ್ಷಿಣೆಯ ಮೊತ್ತವೂ ಕಡಿಮೆ ಎನ್ನುವುದು.

ಇಂದು ಭಾರತ ವಿಕೃತಗೊಂಡಿದೆ. ಕಾಮಕ್ಕೆ ಸಂಬಂಧಿಸಿದಂತೆ ಭಾರತೀಯರು ಎಷ್ಟೆಲ್ಲ ಪಾವಿತ್ರ್ಯದ ಮಾತಾಡಿದರೂ ಮದುವೆ ಹಾಗೂ ಕಾಮ ಕುರಿತ ವಿಚಾರಗಳಲ್ಲಿ ಮಾತ್ರ ಅವರು ಅತ್ಯಂತ ಕೊಳಕರಾಗಿಯೇ ಉಳಿದಿದ್ದಾರೆ.

ವರದಕ್ಷಿಣೆ ಕೊಡುವುದು ಹಾಗೂ ತೆಗೆದುಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಬೇಕು. ಆದರೆ ಅದರ ಜೊತೆಗೆ ಭಾರತೀಯ ಮನಸ್ಸು ಹಾಗೂ ಮೌಲ್ಯಗಳು ಕೂಡ ಬದಲಾಗಬೇಕು. ಒಂದು ಫೋಟೋ ನೋಡಿಯೋ, ಅಥವಾ ತಲೆತುಂಬ ಸೆರಗುಹೊದ್ದ ಹುಡುಗಿಯೊಬ್ಬಳು ನಡುಗುತ್ತಾ ಚಹ ಕೊಡುವ ಭಯಮಿಶ್ರಿತ ವಾತಾವರಣದಲ್ಲೋ ನಿರ್ಧರಿಸಲಾದ ಇವತ್ತಿನ ಮದುವೆಗಳು ಹಿಂದಿನ ಕಾಲದಲ್ಲಿ ಕ್ಷೌರಿಕ ಅಥವಾ ಬ್ರಾಹ್ಮಣ ನಡೆಸಿಕೊಡುತ್ತಿದ್ದ ಮದುವೆಗಳಿಗಿಂತ ಹೆಚ್ಚು ಹಾಸ್ಯಾಸ್ಪದವಾಗಿವೆ. ಕೊಳ್ಳುವವನೆದುರು ಕುದುರೆಯನ್ನು ತಂದು ನಿಲ್ಲಿಸಿದರೂ ಅದರ ಗೊರಸುಗಳನ್ನು ಮುಟ್ಟಿನೋಡದೆ ಅಥವಾ ಅದರ ಹಲ್ಲುಗಳನ್ನು ಪರೀಕ್ಷಿಸದೇ ಕೊಂಡ ಹಾಗೆ- ಈ ಮದುವೆಗಳು ಕೂಡ.

ಹೀಗಾಗಿ ಇವತ್ತು ನಡುದಾರಿಯ ತಂಗುದಾಣಗಳಿಲ್ಲ. ಭಾರತ ತನ್ನ ಪ್ರಾಚೀನ ಕಸುವನ್ನು ಮರಳಿ ಗಳಿಸಲೇಬೇಕಾಗಿದೆ. ಅದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಭಾರತ ಆಧುನಿಕವಾಗಲೇಬೇಕಾಗಿದೆ.

ತಮ್ಮ ಮಗಳನ್ನು ಮದುವೆಮಾಡಿಕೊಡುವುದು ತಂದೆ ತಾಯಿಗಳ ಹೊಣೆಯೇನಲ್ಲ. ಅವಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ, ಸಾಕಷ್ಟು ಆರೋಗ್ಯವಾಗಿರುವಂತೆ ನೋಡಿಕೊಳ್ಳುವುದಷ್ಟೆ ಅವರ ಹೊಣೆ. ಒಂದು ವೇಳೆ ಹುಡುಗಿಯೊಬ್ಬಳು ತನ್ನ ಇಷ್ಟದಂತೆ ನಡೆದುಕೊಂಡರೆ, ಇಷ್ಟ ಬಂದವನ ಜೊತೆ ಓಡಿಹೋದರೆ, ಅಥವಾ ಅನೈತಿಕ ಸಂಬಂಧ ಹೊಂದಿದರೆ, ಅದು ಗಂಡು-ಹೆಣ್ಣಿನ ನಡುವಣ ಸಹಜ ಸಂಬಂಧವನ್ನು ಸ್ಥಾಪಿಸುವ ಒಂದು ಬಗೆಯೇ ಹೊರತು ದೋಷವಲ್ಲ.

ಆದರೆ ಸಮಾಜ ಕ್ರೂರವಾಗಿದೆ. ಸ್ತ್ರೀಯರಂತೂ ಇನ್ನಷ್ಟು ಕ್ರೂರಿಗಳಾಗಬಲ್ಲರು. ಪರಪುರುಷರೊಂದಿಗೆ ಓಡಾಡುವ ಹೆಣ್ಣುಮಕ್ಕಳ ಬಗ್ಗೆ-ಅದರಲ್ಲೂ ಅವಿವಾಹಿತ ಹೆಣ್ಣುಮಕ್ಕಳ ಬಗ್ಗೆ-ವಿವಾಹಿತ ಸ್ತ್ರೀಯರು ಎಷ್ಟು ಕೆಟ್ಟದಾಗಿ ಮಾತಾಡಿಕೊಳ್ಳುತ್ತಾರೆ ಹಾಗೂ ಕ್ಷುದ್ರವಾಗಿ ವರ್ತಿಸುತ್ತಾರೆ ಎಂಬುದನ್ನು ನೋಡಿದರೆ ದುಗುಡವಾಗುತ್ತದೆ. ಇಂಥ ಕ್ರೂರ ಮನಸ್ಸುಗಳಿರುವವರೆಗೆ ಗಂಡು-ಹೆಣ್ಣುಗಳ ನಡುವೆ ಭೇದಭಾವ ಮಾಡುವ ಪರಿಪಾಠ ಕೊನೆಗೊಳ್ಳಲಾರದು.

ಸಂತಾನ ನಿಯಂತ್ರಣ, ಜಾತಿಪದ್ಧತಿ ಕುರಿತ ಅಥವಾ ಜಾತಿ ಪದ್ಧತಿಯ ಒತ್ತಡದಿಂದ ಹುಟ್ಟಿದ ವಿಚಾರಗಳನ್ನು ಕುರಿತ ಅಪವಿತ್ರ ಆಲೋಚನೆಗಳಿಂದಾಗಿ ಶ್ರೀ ವಿನೋಬಾ ಭಾವೆ ತಮ್ಮ ಮಹತ್ವದ ಭೂದಾನ ಚಳುವಳಿಯನ್ನೇ ಕಲುಷಿತಗೊಳಿಸುವ ಪ್ರಚೋದನೆಗೊಳಗಾಗಿಬಿಟ್ಟಿದ್ದಾರೆ.

ಮೂರು ಮಕ್ಕಳನ್ನು ಹೆತ್ತ ಪ್ರತಿ ತಂದೆ ತಾಯಿಗಳು ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲೇಬೇಕು. ಸಂತಾನಹರಣ ಮಾಡಿಸಿಕೊಳ್ಳುವ ಅಥವಾ ಸಂತಾನವನ್ನು ತಡೆಗಟ್ಟುವ ಸಲಕರಣೆಗಳು ಪ್ರತಿಯೊಬ್ಬ ಗಂಡು ಹೆಣ್ಣಿಗೂ ದೊರಕುವಂತಿರಬೇಕು. ಅವರು ವಿವಾಹಿತರಿರಲಿ, ಅವಿವಾಹಿತರಿರಲಿ, ಗರ್ಭಧಾರಣೆಯ ತಾಪತ್ರಯ ಬೇಡವೆಂದು ಅವರಿಗನಿಸಿದರೆ ಅಂಥವರಿಗೆ ಈ ಸಾಧನಗಳು ದಕ್ಕುವಂತಿರಬೇಕು.

ಸಾಮಾನ್ಯವಾಗಿ ಬ್ರಹ್ಮಚರ್ಯವೆಂದರೆ ಒಂದು ಸೆರೆಮನೆಯೇ. ತಮ್ಮ ಬ್ರಹ್ಮಚರ್ಯ ಹಾಗೂ ಕನ್ಯತ್ವಗಳ ಸಂಕೋಲೆಗಳಲ್ಲಿ ಸಿಕ್ಕಿಹಾಕಿಕೊಂಡು ತಮ್ಮ ವಿಮೋಚಕನಿಗಾಗಿ ಕಾಯುತ್ತಿರುವ ಇಂಥ ಸೆರೆಮನೆವಾಸಿಗಳನ್ನು ಯಾರು ತಾನೆ ಕಂಡಿಲ್ಲ?

ಇಂಥ ಸೆರೆಮನೆಯಲ್ಲಿ ಸಿಕ್ಕಿಕೊಂಡ ಅಸ್ಖಲಿತ ಬ್ರಹ್ಮಚಾರಿ ಜೆ. ಸಿ. ಕುಮಾರಪ್ಪನವರ ಈಚಿನ ಮಾತುಗಳಲ್ಲಿ ಅವರ ಮನಸ್ಥಿತಿ ವ್ಯಕ್ತವಾಗಿರುವ ಬಗೆ ಗಮನಿಸಿ. ರಷ್ಯನ್ ಹುಡುಗ-ಹುಡುಗಿಯರು ಪ್ರತ್ಯೇಕ ಗುಂಪುಗಳಲ್ಲಿ ಅಡ್ಡಾಡು

ತ್ತಿದ್ದರೆಂದು ಹೊಗಳಿದ ಕುಮಾರಪ್ಪನವರಿಗೆ ಪ್ರಾಯಶಃ ಅವರು ಸಾಮೂಹಿಕ ಪ್ರೇಮದಲ್ಲಿ ತೊಡಗಿದ್ದಿರಬಹುದೆಂಬುದು ಅರಿವಿಗೆ ಬರಲೇ ಇಲ್ಲವೇನೊ? ಆದರೆ ಕುಮಾರಪ್ಪ ತಮ್ಮ ಈ ಮಾತುಗಳ ಮೂಲಕ ತಾವೊಬ್ಬ ಆತ್ಮವಿಮೋಚಕನಿಗಾಗಿ ಕಾಯುತ್ತಿರುವುದನ್ನು ಅಪ್ರಜ್ಞಾಪೂರ್ವಕವಾಗಿ ಸೂಚಿಸುತ್ತಿದ್ದಾರಲ್ಲವೆ?

ಲೈಂಗಿಕ ಮೌಲ್ಯಗಳನ್ನು ಕುರಿತ ಇಂಥ ಕ್ಷುದ್ರ ಸಂಗತಿಗಳ ವಿರುದ್ಧ ತರುಣ ತರುಣಿಯರು ಬಂಡೇಳಲು ಇದು ಸಕಾಲ. ಲೈಂಗಿಕ ನೀತಿ ಸಂಹಿತೆಯಲ್ಲಿ ಎರಡೇ ಎರಡು ಅಕ್ಷಮ್ಯ ಅಪರಾಧಗಳಿವೆ ಎಂಬುದು ಮಾತ್ರ ಅವರಿಗೆ ನೆನಪಿರಲಿ: ಒಂದು, ಅತ್ಯಾಚಾರ. ಎರಡು, ಸುಳ್ಳು ಹೇಳುವುದು ಅಥವಾ ಕೊಟ್ಟ ಮಾತಿಗೆ ತಪ್ಪುವುದು. ಮೂರನೆಯ ಅಪರಾಧವೂ ಒಂದಿದೆ. ಅದೆಂದರೆ ಇನ್ನೊಬ್ಬರಿಗೆ ನೋವುಂಟು ಮಾಡುವುದು. ಈ ಕುರಿತು ಸಾಧ್ಯವಾದಷ್ಟು ಅವರು ಎಚ್ಚರವಹಿಸಬೇಕು.

ಬದುಕು ಎಷ್ಟೊಂದು ಅಸಹನೀಯವಾಗಿಬಿಟ್ಟಿದೆಯೆಂದರೆ, ಇವತ್ತು ಸಮಾಜದ ಮುಂಚೂಣಿಯಲ್ಲಿರುವವರು ಬರೀ ಲಗ್ನಪತ್ರಿಕೆಗಾಗಿ ಐವತ್ತು ಸಾವಿರ ಖರ್ಚು ಮಾಡುತ್ತಾರೆ. ಮದುವೆಯಾಗಲಿರುವ ಎರಡು ಜೀವಗಳು ಸಾಧಿಸಬೇಕಾದ ಆತ್ಮಗಳ ಮಿಲನದಲ್ಲಿ ವ್ಯಕ್ತವಾಗಬೇಕಾದ ಒಂದು ವಿವಾಹದ ಘನತೆ ಹಾಗೂ ವೈಭವ ಇಪ್ಪತ್ತು ಲಕ್ಷ ರೂಪಾಯಿಗಳ ನೆಕ್‌ಲೇಸಿನಲ್ಲೋ, ಐವತ್ತು ಸಾವಿರದ ಸೀರೆಗಳಲ್ಲೋ ವ್ಯಕ್ತವಾಗುತ್ತಿದೆ.

ಒಂದು ಚಹಾಕೂಟದಲ್ಲಿ ಇಂಥ ಲಕ್ಷಾಧೀಶನೊಬ್ಬ ಆಕಸ್ಮಿಕವಾಗಿ ನನಗೆ ಎದುರಾಗಿ, 'ಅಂಥ ಸೀರೆಗಳೇ ಇರುವುದಿಲ್ಲವಲ್ಲ', ಎಂದು ಹೆಮ್ಮೆಯಿಂದ ಹೇಳಿದ. ಅವನನ್ನು ಯಾವುದಾದರೂ ಶಿಶುವಿಹಾರಕ್ಕೆ ಕಳಿಸಬೇಕೆನಿಸಿತು. ಈ ವ್ಯಕ್ತಿಯನ್ನು ಹಿಂದೆ ನಾನು ಭೇಟಿಮಾಡಿದ್ದು ಒಂದೇ ಒಂದು ಸಲ. ಅದಾದದ್ದು ಕೆಲವರ್ಷಗಳ ಹಿಂದೆ. ಅವತ್ತು ಈ ವ್ಯಕ್ತಿ ಎರಡು ಗಂಟೆಗಳ ಕಾಲ ನನ್ನನ್ನು ಹೊಗಳಿ ಉಬ್ಬಿಸಲು ಪ್ರಯತ್ನಿಸಿದ್ದ. ಕಾರಣ, ತುಂಟನೊಬ್ಬ ಇವನಿಗೆ ಫೋನ್ ಮಾಡಿ ಕಾಳದಂಧೆಗಳನ್ನು ನಡೆಸುತ್ತಿರುವ ಇವನ ಫ್ಯಾಕ್ಟರಿಯನ್ನು ನಮ್ಮ ಪಾರ್ಟಿಯ ಸದಸ್ಯರು ಸುಟ್ಟು ಹಾಕುತ್ತಾರೆಂದು ಹೇಳಿದ್ದನಂತೆ. ಈ ಹಿನ್ನೆಲೆಯಲ್ಲಿ ನನ್ನನ್ನು ಪ್ರಸನ್ನಗೊಳಿಸಲೆತ್ನಿಸುತ್ತ ಪಾರ್ಟಿ ಫಂಡಿಗೆ ಅಷ್ಟಿಷ್ಟು ಕೊಡಬಲ್ಲೆನೆಂದು ಹೇಳುವ ಧಾರ್ಷ್ಟ್ಯವನ್ನೂ ಅವನು ತೋರಿದ.ಆದರೆ ನಾನು ಅವನ ಅವ್ಯವಹಾರಗಳನ್ನು ಮುಚ್ಚಿ ಹಾಕಲು ಹಣ ತೆಗೆದುಕೊಳ್ಳುವಷ್ಟು ದುರುಳನಾಗಿರದಿದ್ದರಿಂದ ಮತ್ತೆ ಅವನೆಂದೂ ತನ್ನ ಉದಾರ ಬುದ್ಧಿಯನ್ನು ಪ್ರದರ್ಶಿಸಲಿಲ್ಲ.

ಇಂಥ ಸಂದರ್ಭಗಳಲ್ಲೇ ಬಾಂಬ್ ಅಥವಾ ಆಸಿಡ್ ಬಲ್ಬ್ ಬಳಸುವ ಕುರುಡು ಪ್ರಚೋದನೆ ಹುಟ್ಟುವುದು ಎಂದು ಕಾಣುತ್ತದೆ.

ಸಂಸ್ಕೃತಿಯ ಹೆಸರಿನಲ್ಲಿ ನಡೆಯುವ ಕೊಳಕು ಕೆಲಸಗಳನ್ನೆಲ್ಲ ಕಾಯ್ದುಕೊಂಡು ಹೋಗಲು ರಾಜಕಾರಣ, ಧರ್ಮ, ವ್ಯಾಪಾರ ಹಾಗೂ ಪ್ರಚಾರಗಳು ಸಂಚು ಮಾಡುತ್ತಲೇ ಇರುತ್ತವೆ. ಅಪಕೀರ್ತಿ ಹಾಗೂ ಸಾವು ಎರಡನ್ನೂ ತರಬಲ್ಲ ಭಯಾನಕ ಶಕ್ತಿ ಈ ಯಥಾಸ್ಥಿತಿವಾದಿ ಸಂಚುಗಳಿಗಿದೆ. ನಾನು ಹೀಗೆಲ್ಲ ಬರೆದ್ದಕ್ಕಾಗಿ ನೇರವಾದ ಅಥವಾ ತಕ್ಷಣದ ಪ್ರತಿಕ್ರಿಯೆ ಬಾರದಿರಬಹುದು. ಆದರೆ ಎಂದಾದರೊಮ್ಮೆ ನಾನು ಉಗ್ರವಾದ ಪ್ರತೀಕಾರ ಎದುರಿಸಬೇಕಾಗುತ್ತದೆ ಎಂಬುದು ಖಚಿತವಾಗಿ ಗೊತ್ತು.

ತರುಣ, ತರುಣಿಯರು ತಮ್ಮ ಪ್ರಾಮಾಣಿಕತೆಯ ಕಾರಣದಿಂದಾಗಿಯೇ ಅಪಖ್ಯಾತಿಗೊಳಗಾದಾಗ ಒಂದು ಮಾತನ್ನು ನೆನಪಿನಲ್ಲಿಡಬೇಕು: ಕೆಸರು ರಾಡಿಯನ್ನೆಲ್ಲ ತೆಗೆದು, ಮತ್ತೆ ನೀರು ಸರಾಗವಾಗಿ ಹರಿಯುವಂತೆ ಮಾಡಲು ಅವರು ಅನಿವಾರ್ಯವಾಗಿ ತೆರಬೇಕಾದ ಬೆಲೆ ಇದು.

ಜಾತಿ ಹಾಗೂ ಲಿಂಗಗಳನ್ನು ಕುರಿತಂತೆ ಇರುವ ಅಸಹ್ಯಕರವಾದ ಪ್ರತ್ಯೇಕತೆಗಳನ್ನು ನಿರ್ನಾಮಗೊಳಿಸುವುದಕ್ಕಿಂತ ಮಿಗಿಲಾದ ಸತ್ಕಾರ್ಯ ಇವತ್ತು ಯಾವುದೂ ಇಲ್ಲ. ಈ ದಿಸೆಯಲ್ಲಿ ತೀರಾ ಒರಟಾಗಿರಬಾರದು ಹಾಗೂ ಇತರಿಗೆ ನೋವುಂಟು ಮಾಡಬಾರದು ಎಂಬ ಎಚ್ಚರ ಮಾತ್ರ ಸದಾ ಇರಲಿ. ಕಾರಣ, ಗಂಡು-ಹೆಣ್ಣುಗಳ ನಡುವಣ ಸಂಬಂಧದಲ್ಲಿ ಅತಿಸೂಕ್ಷ್ಮವಾದ ಎಳೆಗಳಿವೆ. ಆ ಬಗೆಯ ಎಚ್ಚರವನ್ನು ಸದಾ ಕಾಯ್ದುಕೊಳ್ಳುವುದು ಸಾಧ್ಯವಾಗದಿರಬಹುದು. ಆದರೆ ಪ್ರಯತ್ನ ಮಾತ್ರ ಎಂದೆಂದಿಗೂ ನಿಲ್ಲದಿರಲಿ. ಅದಕ್ಕಿಂತ ಮಿಗಿಲಾಗಿ ಈ ದಟ್ಟ ನಿರಾಶೆಯನ್ನು ಚದುರಿಸಿ, ಸಂತಸದ ಗಳಿಗೆಗಳನ್ನು ಸೃಷ್ಟಿಸುವ ಸಾಹ 'ಸಕ್ಕೆ ಎಲ್ಲರೂ ಧುಮುಕಲಿ.

●

(1953, ಜನವರಿ)

(ಲೋಹಿಯಾ ಅವರ 'ದಿ ಕಾಸ್ಟ್ ಸಿಸ್ಟಮ್' ಪುಸ್ತಕದ ಮೊದಲನೆಯ ಅಧ್ಯಾಯ)

ಇಂಗ್ಲಿಷಿನಿಂದ ಕನ್ನಡಕ್ಕೆ : ನಟರಾಜ್ ಹುಳಿಯಾರ್

ವಸಿಷ್ಠರು ಮತ್ತು ವಾಲ್ಮೀಕಿಗಳು

ಬಂದೀಖಾನೆ ಸಚಿವರು
ಉತ್ತರ ಪ್ರದೇಶ ಸರಕಾರ
ಲಖ್ನೋ

ಜಿಲ್ಲಾ ಬಂದೀಖಾನೆ
ಲಖ್ನೋ, ಡಿಸೆಂಬರ್ 10,1957

ಮಾನ್ಯ ಬಂದೀಖಾನೆ ಸಚಿವರೆ,

ನೀವು ವಿಧಾನಸಭೆಯಲ್ಲಿ ನೀಡಿರುವ ಉತ್ತರಗಳ ಬಗ್ಗೆಯಾಗಲಿ ಇಲ್ಲವೆ ನೀವು ಬಂದೀಖಾನೆಯನ್ನು ಒಂದು ಹುತ್ತದ ಸ್ಥಿತಿಗೆ ತಂದಿರುವಿರೆಂದು ಸಾಬೀತು ಮಾಡುವಂತಹ ಆ ಕೆಲವು ಘಟನೆಗಳ ಬಗ್ಗೆಯಾಗಲಿ ಪತ್ರ ಬರೆಯುತ್ತಿದ್ದೇನೆಂದು ಗಾಬರಿಯಾಗಬೇಡಿ. ಜೈಲಿನಲ್ಲಿ ಅನೇಕ ಬಗೆಯ ಖೈದಿಗಳು ಬಂಧನದಲ್ಲಿದ್ದಾರೆ. ಇವರ ಪೈಕಿ ದೀರ್ಘಕಾಲದ ಶಿಕ್ಷೆ ಅನುಭವಿಸುತ್ತಿರುವ ಖೈದಿಗಳ ಮನಸ್ಸು ಸುಲಭವಾಗಿ ಹದಗೆಡಬಲ್ಲದು. ಅದರಲ್ಲೂ ಗೂಂಡಾಗಿರಿಯನ್ನೇ ಬದುಕನ್ನಾಗಿ ಮಾಡಿಕೊಂಡಿರುವ ಖೈದಿಗಳು ಮತ್ತಷ್ಟು ಸುಲಭವಾಗಿ ಉದ್ರೇಕಕ್ಕೆ ಒಳಗಾಗಬಲ್ಲರು. ಜೈಲಿನ ಅಧಿಕಾರಿಗಳು ಮತ್ತು ಪೋಲೀಸರು ಇಂಥ ಹತ್ತಿಪ್ಪತ್ತು ಉದ್ರಿಕ್ತ ಖೈದಿಗಳಿಗೆ ಕುಮ್ಮಕ್ಕು ಕೊಟ್ಟು ನಮ್ಮ ಮೇಲೆ ಛೂಬಿಟ್ಟರು. ಜೈಲಿನಲ್ಲಿ ನಾಲ್ಕು ಗೋಡೆಗಳ ನಡುವೆ ಇರುವ ಖೈದಿಯೊಬ್ಬ ತಾನು ಬಯಸಿದರೂ ಎಲ್ಲಿಗೂ ಓಡಿಹೋಗಲಾರ, ಎಲ್ಲೂ ಅಡಗಿಕುಳಿತು ತಲೆಮರೆಸಿಕೊಳ್ಳಲಾರ. ಬೇರೆ ಖೈದಿಗಳನ್ನು ಛೂಬಿಟ್ಟು ಅವನನ್ನು ಹೊಡೆಸುವುದೆಂದರೆ, ಅವನ ಮೇಲೆ ಬುಸುಗುಟ್ಟುವ ಸರ್ಪಗಳನ್ನು ಬಿಟ್ಟಂತೆಯೇ ಸರಿ. ಜೀವಂತವಾಗಿರುವ ಹಾವುಗಳ ಪಂಜರದಲ್ಲಿ ಮೊದಲು ಮನುಷ್ಯನನ್ನು ಕೂಡಿಹಾಕುತ್ತೀರಿ; ಹೊರಗಡೆಯಿಂದ ಬೀಗ ಜಡಿದು, ಆಮೇಲೆ ಯಾವಾಗೆಂದರೆ ಆಗ, ಎಲ್ಲಿಂದ ಬೇಕೆಂದರೆ ಅಲ್ಲಿಂದ, ಮನಸ್ಸು ಬಂದ ಹಾಗೆ ಅವನ ಮೇಲೆ ಹಾವುಗಳನ್ನು ಬಿಡುತ್ತೀರಿ- ನಮ್ಮ ಜೊತೆಯಲ್ಲಿ ನೀವು ಆಡುತ್ತಿರುವ ಚೆಲ್ಲಾಟವಾಗಿದೆ.

ನನ್ನ ಆರೋಗ್ಯದ ವಿಚಾರವಾಗಿ ನಿಮ್ಮ ಹೇಳಿಕೆ ಏನೇ ಇರಲಿ, ಆ ಬಗ್ಗೆ ನಾನು

ಬರೆದು ತಿಳಿಸುವುದು ಏನೂ ಇಲ್ಲ. ಮನುಷ್ಯತ್ವದ ಬಗ್ಗೆ ಕೂಡ ಅಷ್ಟೆ. ಇಂಥ ಮಾತುಕತೆ ಒಂದು ಮಟ್ಟಕ್ಕಿಂತ ಮುಂದೆ ಸಾಗುವುದಿಲ್ಲ. ನಿಮ್ಮೊಡನೆ, ನಿಮ್ಮ ಸರ್ಕಾರದೊಡನೆ ನಾನು ಕೇಳಬೇಕೆಂದಿರುವುದು ಇಷ್ಟೇ : ನೀವು ಕಾನೂನಿಗೆ ಅನುಸಾರವಾಗಿ ನಡೆಯುತ್ತಿದ್ದಿರಾ ಹೇಗೆ? ನೀವೇ ವಿವರಿಸಿರುವಂತಹ ಕಾನೂನಿಗೆ ಅನುಗುಣವಾಗಿ ನಿಮ್ಮ ನಡೆವಳಿಕೆ ಇದೆಯೆ? ಹತ್ತಿಪ್ಪತ್ತು ಜನ ನನ್ನನ್ನು ಸುತ್ತುವರಿಯುವಂತೆ ಮಾಡಿ ಒತ್ತಾಯಪೂವಕವಾಗಿ ನಾನು ಮ್ಯಾಜಿಸ್ಟ್ರೇಟರ ಎದುರಿಗೆ ಕೂಡುವಂತೆ ಬಲವಂತಮಾಡಿದಿರಲ್ಲ, ಅದು ಯಾವ ಕಾನೂನಿನ ಪ್ರಕಾರ ಎಂಬುದನ್ನು ಮೊದಲು ನನಗೆ ಹೇಳಿ? ಸರ್ಕಾರಕ್ಕೆ ಒತ್ತಾಯಪೂರ್ವಕವಾಗಿ ಯಾರ ಮೇಲಾದರೂ ಅಧಿಕಾರ ಚಲಾಯಿಸುವಂತೆ ಕಾನೂನು ಅವಕಾಶ ನೀಡುತ್ತದೆಯೆ?ಅದರಲ್ಲೂ ತಾನು ಮೊದಲೇ ಬಂದೀಖಾನೆಯಲ್ಲಿ ಇದ್ದೆನೆಂದೂ ತನಗೂ ಮುಂದಿರುವ ಮೊಕದ್ದಮೆಗಳಿಗೂ ಯಾವ ಸಂಬಂಧವೂ ಇಲ್ಲವೆಂದೂ ಜಿಲ್ಲಾ ನ್ಯಾಯಾಧೀಶರಿಗೆ ಬರವಣಿಗೆ ಮೂಲಕ ತಿಳಿಸಿರುವಂತಹ ವ್ಯಕ್ತಿಯೊಬ್ಬನ ಮೇಲೆ ಇದಾವ ಬಗೆಯ ದಬ್ಬಾಳಿಕೆ? ಹಾಗೆಯೆ ಮ್ಯಾಜಿಸ್ಟ್ರೇಟರು ಮೂರು ಮಂದಿಯ ಪಶುಬಲದ ನೆರವು ಪಡೆದು ಬಲವಂತವಾಗಿ ನನ್ನ ಹೆಬ್ಬೆಟ್ಟು ಒತ್ತಿಸುತ್ತಾರಲ್ಲಾ, ಅದು ಯಾವ ಕಾನೂನಿನಡಿ, ಸ್ವಲ್ಪ ಹೇಳಿ? ಇವೆರಡೂ ಕಾನೂನುಗಳು ಯಾವುದೆಂದು ನೀವು ಹೇಳಲು ಆಗದಿದ್ದರೆ, ಅನೇಕರ ಕೊಲೆ ಪ್ರಯತ್ನ ಮಾಡಿದ ತಪ್ಪಿತಸ್ಥರಾಗುತ್ತೀರಿ. ಸರಿ, ಅದೆಲ್ಲ ಆಯಿತಲ್ಲ? ನಾನು ಇಲ್ಲಿ ನಿಮಗೆ ಹೇಳಬೇಕೆಂದಿರುವುದು ಬೇರೆ ಕೆಲವು ವಿಚಾರಗಳ ಬಗೆಗೆ, ಬೇರೆ ಕೆಲವು ಕಾನೂನುಗಳ ಬಗೆಗೆ.

ನೀವು ಸೆರೆಯಾಳುಗಳಿಗೆ ಹೊರಗಿನಿಂದ ಬರುವ ಪುಸ್ತಕಗಳನ್ನು ಯಾವ ಕಾನೂನು ಅನುಸರಿಸಿ ಕೊಡುತ್ತೀರಿ? ನನ್ನ ಹೆಸರಿಗೆ ಶ್ರೀ ವರೇರ್‌ಕರ್ ಅವರ 'ಭೂಮಿಕನ್ಯಾ ಸೀತಾ' ಎಂಬ ಒಂದು ಮರಾಠಿ ನಾಟಕ ಬಂದಿತ್ತು. ಇದು ನನ್ನ ಕೈಸೇರಿದ್ದು ನವಂಬರ್ ಮುವ್ವತ್ತರಂದು. ಇದರ ಮೊದಲ ಹಾಳೆಯನ್ನು ಹರಿದು ಹಾಕಲಾಗಿತ್ತು. ಪ್ರಾಯಶಃ ಅದನ್ನು ಕಳಿಸಿದವರು ಮೊದಲಪುಟದಲ್ಲಿ ಏನೋ ಬರೆದಿದ್ದರು ಅನ್ನಿಸುತ್ತದೆ. ಈ ಕೃತಿಯನ್ನು ಕಳಿಸಿದವರ ಕಾಗದ ನನಗೆ ನವಂಬರ್ ಆರು ಅಥವಾ ಏಳರ ಹೊತ್ತಿಗೆ ಸಿಕ್ಕಿತ್ತು. ಅಂದಮೇಲೆ, ನೀವು ಅಥವಾ ನಿಮ್ಮ ಜನ ಇಪ್ಪತ್ತು ಇಪ್ಪತ್ತೈದು ದಿನಗಳವರೆಗೆ ಆ ಪುಸ್ತಕವನ್ನು ತಡೆಹಿಡಿದಿದ್ದಿರಿ ಎಂದು ನನ್ನ ಅನುಮಾನ. ಇದು ಭಾರತದ ಜೈಲುಗಳ ಸ್ವಭಾವಕ್ಕೆ ತಕ್ಕಂತೆಯೇ ಇದೆ. ಅಂದರೆ ಯಾವುದು ಅರ್ಥವಾಗುವುದಿಲ್ಲವೊ ಅದನ್ನು ತಡೆಹಿಡಿಯುವುದು, ಇಲ್ಲಾ ಹರಿದುಬಿಸಾಡುವುದು. ಇದೇ ರೀತಿ ಇನ್ನೂ ಅದೆಷ್ಟು ಪುಸ್ತಕಗಳನ್ನು, ಪತ್ರಿಕೆಗಳನ್ನು ನೀವುಗಳು ತಡೆಹಿಡಿದಿದ್ದೀರೊ ಕಾಣೆ. 'ಚೌಖಂಭಾ'ವಾರ ಪತ್ರಿಕೆ ಹಾಗೂ 'ಮ್ಯಾನ್‌ಕೈಂಡ್' ಮಾಸಪತ್ರಿಕೆಯ ಸಂಚಿಕೆಗಳನ್ನು ನೀವು ಹೀಗೆಯೇ ಹಿಡಿದಿಟ್ಟಿರಬಹುದೆಂಬುದು ನನ್ನ

ಅನುಮಾನ. ಪುಸ್ತಕಗಳಿಗೆ ಸಂಬಂಧಪಟ್ಟಂತೆ ನಿಮ್ಮ ಕಾನೂನುಗಳು ಹೀಗೇ ಇದ್ದಲ್ಲಿ, ಅವು ತುಂಬಾ ಕೆಟ್ಟ ಕಾನೂನುಗಳೇ ಸರಿ. ನೀವು ಮಾಡಿದ ಈ ಕಾರ್ಯ ಕೆಟ್ಟದಾದರೂ ಅದರ ಪರಿಣಾಮ ಮಾತ್ರ ಒಳ್ಳೆಯದೇ ಆಯಿತು, ಬಿಡಿ. ನವಂಬರ್ ಮುವ್ವತ್ತರ ಆ ಪ್ರಕ್ಷುಬ್ಧ ರಾತ್ರಿಯಿಡೀ ಹಾಗೂ ಡಿಸೆಂಬರ್ ಒಂದರ ಹಗಲು ಪೂರ್ತಿ ನಾನು ಆ ನಾಟಕವನ್ನು ಆನಂದದಿಂದ ಓದುವುದರಲ್ಲಿ ತಲ್ಲೀನನಾಗಿದ್ದೆ. ಇಡೀ ಭಾರತಕ್ಕೆ ಈ ರಾಮ ಹಾಗೂ ಜಗನ್ಮಾತೆ ಸೀತೆಯಿಂದ ತುಂಬು ಉಲ್ಲಾಸ ದೊರೆಯುತ್ತದೆ. ನನ್ನ ತಾಯಿ ಮಿಥಿಲೆಯವಳು, ತಂದೆ ಅವಧ ಪ್ರದೇಶದವರು. ಅಂದಮೇಲೆ ಕೇಳಬೇಕೆ? ಬಹುಶಃ ಮಣ್ಣಿನ ಗುಣ ಅಲ್ಲಿನ ಮಕ್ಕಳ ರಕ್ತದಲ್ಲಿ ಬೆರೆತಿರುತ್ತದೆ. ಸೀತೆಯ ಕಥೆ ನಡೆದದ್ದೊ, ಅಲ್ಲವೊ ಈ ಪ್ರಶ್ನೆ ತೀರಾ ಅಪ್ರಸ್ತುತ. ಆದರೆ ಈ ಕಥೆಯಂತೂ ನಿಸ್ಸಂದೇಹವಾಗಿ ಭಾರತದ ಜನರ ಮನಸ್ಸಿನಲ್ಲಿ ಆಳವಾಗಿ ಅಚ್ಚೊತ್ತಿಬಿಟ್ಟಿದೆ.

ಮರಾಠಿ ಭಾಷೆ ಇಷ್ಟೊಂದು ಮಧುರವಾಗಿರುತ್ತದೆಂದು ನನಗೆ ಗೊತ್ತಿರಲಿಲ್ಲ. ಮರಾಠಿ ಕರ್ಕಶ ಭಾಷೆಯೆಂದು ಚಿಕ್ಕಂದಿನಿಂದ ನಾನು ತಳೆದಿದ್ದ ಭಾವನೆಯನ್ನು ಈ ಪುಸ್ತಕ ಕಳುಹಿಸಿರುವ ಆ ಕೊಂಕಣಿ ಹುಡುಗಿ ಶಾಂತಿ ನಾಯಕ್ ತುಂಬಾ ಮೊದಲೇ ಅಳಿಸಿಹಾಕಿದ್ದಳು. ಈ ನಾಟಕ ಆ ಭಾಷೆಯ ಮಾಧುರ್ಯವನ್ನು ಮತ್ತಷ್ಟು ದೃಢಪಡಿಸಿದೆ. ವರೇರ್‌ಕರ್ ಅವರು ಕೂಡ ಕೊಂಕಣಿಯವರಿರಬಹುದೇನೊ? ಏನೇ ಇರಲಿ, ಮರಾಠಿ ಸಹ ಅನುಸ್ವಾರದತ್ತ ಇಷ್ಟೊಂದು ಒಲವು ತೋರುವ ಭಾಷೆ ಎಂಬ ವಿಚಾರ ನನಗೆ ಮೊದಲು ಗೊತ್ತಿರಲಿಲ್ಲ. ಭಾರತದ ಇನ್ನಾವುದೇ ಭಾಷೆಯಲ್ಲಿ ಇಷ್ಟೊಂದು ಅನುಸ್ವಾರ ಪ್ರಿಯತೆಯನ್ನು ನಾನು ಕಂಡರಿಯೆ. ಸೀತೆ ಆಡುವ "ಆಣಿ ಹೇ° ಲೋಕಾಂಚ° ಮ್ಹಣಣಂ° ಶ್ರೀರಾಮಾ°ನಾ ಪಟಲಂ !...ಮ್ಹಣೂನಚ ಮಲಾ ಇಥ° ಯಾವ°ಸಂ ವಾಟಲಂ. ಕಸ° ಉಣ° ಉಣ° ವಾಟಂತ್ಯ ತ್ಯಾಂಚ್ಯಾವಾಂಚೂನ" (ಮೇಲ್ಭಾಗದಲ್ಲಿ ಹಾಕಿರುವ '°' ಚಿಹ್ನೆ ಧ್ವನಿಯ ಅನುಸ್ವಾರೀಯತೆಯನ್ನು ಸೂಚಿಸುತ್ತದೆ)-ಎಂಬಂತಹ ಮಾತುಗಳನ್ನು ಕೇಳಿದರೆ, ಜಗತ್ತಿನ ಯಾವ ಸುಂದರ ಅಭಿನೇತ್ರಿ ತಾನೆ ಈ ಮಾತುಗಳನ್ನು ಆಡಲು ಬಯಸದೆ ಹೋದಾಳು ಎಂದು ನನಗೆನಿಸುತ್ತದೆ. ಈ ಅನುಸ್ವಾರಪ್ರಿಯತೆ ಏನೆಂದು ನಿಮಗೆ ಅರ್ಥವಾಗದಿರಬಹುದು. ನಿಮಗೆ ಅದನ್ನು ಅರ್ಥಮಾಡಿಕೊಳ್ಳುವ ಅಗತ್ಯವೂ ಇಲ್ಲ ಬಿಡಿ. ಪುಸ್ತಕಗಳು ನಿಮ್ಮ ವ್ಯಾಪ್ತಿಗೆ ಹೊರತಾದವು. ನೀವು ಇಷ್ಟು ತಿಳಿದರೆ ಸಾಕು; ದಯವಿಟ್ಟು ಇವುಗಳನ್ನು ನೀವು ತಡೆಯಬೇಡಿ, ಅಷ್ಟೆ. ಸೆರೆಯಾಳುಗಳಿಗೆ ನೀಡುವ ರೊಟ್ಟಿಯಲ್ಲಿ ಎಷ್ಟು ಹಣ ಉಳಿಸಬಹುದು ಇಲ್ಲಾ ಕಬಳಿಸಬಹುದು ಎಂಬ ಆಲೋಚನೆಯಲ್ಲೇ ನಿಮ್ಮ ಹಾಗೂ ನಿಮ್ಮ ಜೈಲು ಆಡಳಿತದ ಜನರ ಸಾಕಷ್ಟು ಸಮಯ ಕಳೆದುಹೋಗುತ್ತದೆ. ಖೈದಿಗಳಿಗೆ ಬರುವ ಪುಸ್ತಕಗಳನ್ನು ನೀವು ಓದದೆ ಅವರಿಗೆ ನೇರವಾಗಿ ತಲಪಿಸುವ

ಅಭ್ಯಾಸಮಾಡಿಕೊಳ್ಳಿ. ಒಟ್ಟಿನಲ್ಲಿ, ಸದ್ಯ,ಈ ಪುಸ್ತಕ ನನ್ನ ಕೈಸೇರಿತಲ್ಲ,ಅದೇ ಸಮಾಧಾನದ ವಿಷಯ.

ಇಂಗ್ಲಿಷ್ ಭಾಷೆ ನೆನ್ನೆ ಮೊನ್ನೆಯಷ್ಟೆ ಕಣ್ಣು ತೆರೆದ ಕಿಶೋರಿ; ಎಷ್ಟೇ ಹೆಚ್ಚೆಂದರೂ ಸುಮಾರು ಒಂದೂವರೆ ಸಾವಿರ ವರ್ಷಗಳ ಹಿಂದಿನದು, ಅಷ್ಟೆ. ಮರಾಠಿ, ಬಂಗಾಳಿ, ತಮಿಳು ಮುಂತಾದ ಭಾಷೆಗಳು ಹಿಂದಿಯಂತೆಯೇ-ಈ ಹಿಂದಿಯಲ್ಲಿಉರ್ದುಸಹ ಸೇರಿದೆ-ಅನೇಕ ಸಾವಿರ ವರ್ಷಗಳಷ್ಟು ಹಳೆಯವು. ಸುಮಾರು ಆರು ಏಳು ಸಾವಿರ ವರ್ಷಗಳಷ್ಟು ಹಿಂದಿನದು ಎಂಬುದು ಆ ಭಾಷೆಗಳ ತಾಯಂದಿರಾದ ಸಂಸ್ಕೃತ, ಪ್ರಾಕೃತ ಇಲ್ಲವೆ ತಮಿಳು ಭಾಷೆಗಳ ಮೂಲಕ ಹೊಳೆಯುತ್ತದೆ. ಆಧುನಿಕ ಯುಗಕ್ಕೆ ಸಂಬಂಧಿಸಿದ ವಿಚಾರಗಳು ಸ್ವಲ್ಪ ಹೆಚ್ಚು ಪ್ರಮಾಣದಲ್ಲಿ ಇಂಗ್ಲಿಷಿನಲ್ಲಿ ಬಂದಿವೆ ನಿಜ. ಇನ್ನು ಕೆಲವು ವಿಚಾರಗಳು ಜರ್ಮನ್ ಭಾಷೆಯಲ್ಲಿ ಹೆಚ್ಚಾಗಿ ಬಂದಿವೆ; ಹಾಗೆ ನೋಡಿದರೆ ಸ್ವಲ್ಪ ಕಾಲ ಕಳೆದ ಮೇಲೆ ಇಂಗ್ಲಿಷ್ ಹಾಗೂ ಜರ್ಮನ್ ಭಾಷೆಗಳು ಈ ವಿಷಯದಲ್ಲಿ ರಷ್ಯನ್ ಭಾಷೆಯ ಜೊತೆ ಕಷ್ಟಪಟ್ಟು ಪೈಪೋಟಿ ನಡೆಸುವ ಸಂದರ್ಭ ಬರಬಹುದು. ಹಿಂದಿ ಇನ್ನೂ ಪ್ರೌಢವಾದ ಭಾಷೆಯೆನಿಸಿಲ್ಲ ಎಂಬ ನೆಪಮಾಡಿಕೊಂಡು ಇಂಗ್ಲಿಷಿಗೆ ಜೋತುಬಿದ್ದಿರುವ ಈ ಗುಲಾಮ ಕಾಂಗ್ರೆಸ್ಸಿಗರು ಅವಕಾಶ ಪಡೆದುಕೊಂಡು ಒಂದುವೇಳೆ ರಷ್ಯನ್ ಭಾಷೆಗೆ ಅಂಟಿಕೊಂಡಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು. ಏಕೆ, ಹಿಂದಿ ಅಥವಾ ಮರಾಠಿ ಪಕ್ವವಾದ ಭಾಷೆಗಳಲ್ಲವೆ? ಕುಣಿಯಲಾರದ ಹೆಣ್ಣು ನೆಲಡೊಂಕು ಅಂದಳಂತೆ. ಯಾವನಾದರೊಬ್ಬ ಮರಾಠಿ ಮನುಷ್ಯ ಹಿಂದಿಯನ್ನು ವಿರೋಧಿಸಬಲ್ಲನಾದರೂ ಹೇಗೆ ಎಂಬುದು ನನಗೆ ಅರ್ಥವಾಗದ ವಿಷಯ. ಹೇಗೆಂದರೆ, ಊರ್ಮಿಳೆ ಸೀತೆಯನ್ನು ವಿರೋಧಿಸಿದಂತಾಗುತ್ತದೆ.

ಭಾರತದ ಸಮಕಾಲೀನ ನಾಟಕಕಾರರಲ್ಲಿ ವರೇರ್‌ಕರ್ ಅವರು ಅತ್ಯಂತ ಶ್ರೇಷ್ಠರು ಎಂದು ನಾನು ಎಲ್ಲೋ ಕೇಳಿದ್ದೆ. "ಭೂಮಿಕನ್ಯಾ ಸೀತಾ" ಓದಿದಮೇಲೆ ಈ ಮಾತು ನಿಜ ಅನ್ನಿಸುತ್ತದೆ. ಭೂಮಿತಾಯಿಯ ಮಗಳಾದ ಸೀತೆ ಹಾಗೂ ಭೂಮಿತಾಯಿಯ ಮಗನಾದ ಶಂಬೂಕ ಇವರನ್ನು ಕೇಂದ್ರವಾಗಿಟ್ಟುಕೊಂಡು ಈ ನಾಟಕ ಸುತ್ತುತ್ತದೆ. ಮಹಿಳೆ ಮತ್ತು ಶೂದ್ರ ಎಂಬ ಕಡಾಣಿಯ ಮೇಲೆ ಈ ಚಕ್ರ ತಿರುಗುತ್ತದೆ. ಈ ನಾಟಕದ ನೆಲಗಟ್ಟು ಬಹಳ ಶಕ್ತವಾಗಿದೆ, ರಸಮಯವಾಗಿದೆ. ಅದರಲ್ಲೂ ಭಾರತೀಯನೊಬ್ಬನ ಪಾಲಿಗೆ ತುಂಬ ನೋವಿನಿಂದ ಕೂಡಿದೆ. ಅದು ಸಾವಿರಾರು ವರ್ಷಗಳಿಂದ ಬೆಳೆದುಬಂದ ನೋವು, ಈಗಲೂ ಅನುಭವಿಸುತ್ತಿರುವ ನೋವು. ನಾಟಕದ ಸ್ತ್ರೀ ಪಾತ್ರಗಳೆಲ್ಲ ಜೀವಂತಿಕೆಯಿಂದ ಕೂಡಿವೆ-ಸೀತೆ, ಊರ್ಮಿಳೆ, ವಾಸಂತಿ, ಕುಶಿಕಾ ಎಲ್ಲರೂ. ಶಂಬೂಕನ ಪಾತ್ರ ಮಾತ್ರ ದುರ್ಬಲವಾಗಿದೆ,

ಕೃತ್ರಿಮವಾಗಿದೆ. ಅವನ ನಾಲಗೆಯ ಮೇಲೆ ಹೆಚ್ಚಾಗಿ ಕೃತಕ ಸಿಹಿ ಹಚ್ಚಿದಂತಿದೆ. ಇಷ್ಟು ಶಕ್ತನಾದ ಶೂದ್ರನ ಪಾತ್ರ ಚಿತ್ರಣ ತಮ್ಮ ಕೈಯಲ್ಲಿ ಅದು ಹೇಗೆ ಇಷ್ಟೊಂದು ಕಳೆಗುಂದಿತು ಎಂಬುದು ಸ್ವತ: ವರೇರ್‌ಕರ್ ಅವರೇ ಬಿಡುವಾಗಿ ಕೂತು ಒಮ್ಮೆ ಯೋಚಿಸಬೇಕಾದ ವಿಷಯ. ರಾಮನ ನಡವಳಿಕೆ ಸಹ ಅತಿ ಎಂಬಂತಾಗಿದೆ. ಮರ್ಯಾದಾ ಪುರುಷೋತ್ತಮನೆಂದು ಕರೆಸಿಕೊಳ್ಳುವ ರಾಮನ ಮಾತಿನಲ್ಲಿ ಅತಿ ಎಂಬುದು ಇರತಕ್ಕದ್ದಲ್ಲ. ಅವನು ದೃಢವಾದ ಮಾತುಗಳನ್ನು ಒಮ್ಮೆ ಮಾತ್ರ ಆಡುವವನೇ ಹೊರತು ಪದೇಪದೇ ಅಲ್ಲ. ಆದರೆ ನಾನಿಲ್ಲಿ "ಭೂಮಿಕನ್ಯಾ ಸೀತಾ" ಕೃತಿಯ ವಿಮರ್ಶೆ ಮಾಡಲು ಹೊರಟಿಲ್ಲ. ಈಗ ನನಗೆ ಇಲ್ಲಿ ಮುಖ್ಯವಾದ ಆಸಕ್ತಿಯಿರುವುದು ಈ ನಾಟಕದ ಕೇಂದ್ರಬಿಂದುವಿನಲ್ಲಿರುವ ವಸಿಷ್ಠ ಮತ್ತು ವಾಲ್ಮೀಕಿ ಪರಂಪರೆಗಳ ನಡುವೆ ಇರುವ ನಿರಂತರ ಘರ್ಷಣೆ ಹಾಗೂ ಹೋರಾಟಗಳ ಬಗೆಗೆ.

ನನಗೆ ಆಶ್ಚರ್ಯವುಂಟುಮಾಡುವ ಸಂಗತಿಯೆಂದರೆ, ಇದೆಲ್ಲದರ ಅರಿವಿದ್ದರೂ ವರೇರ್‌ಕರ್ ಅವರಂಥ ಜನ ಕೂಡ ಹಾಲಿ ಇರುವ ವಸಿಷ್ಠ ಸ್ವಭಾವದ ಸರ್ಕಾರದಿಂದ ಸಣ್ಣಪುಟ್ಟ ಕೊಡುಗೆಗಳನ್ನು ಸ್ವೀಕರಿಸುತ್ತಾರೆ ಏಕೆ? ಈಚೀಚೆಗೆ ಭಾರತದ ಕಲಾವಿದರು ಹೆಚ್ಚಾಗಿ ಒಳ್ಳೆಯ ನಡವಳಿಕೆಯಿಂದ ದೂರವಾಗುತ್ತಿದ್ದಾರೆ. ಇರಲಿ ಬಿಡಿ, ಇದೇನು ಅಂಥ ಮಹತ್ವದ ವಿಚಾರವಲ್ಲ. ವಾಸ್ತವವಾದ ಸಂಗತಿಯೆಂದರೆ "ಭೂಮಿಕನ್ಯಾ ಸೀತಾ" ನಾಟಕದಲ್ಲಿ ವಸಿಷ್ಠನ ನಾಲಗೆಯ ಮೇಲೆ ಶಿರಚ್ಛೇದನ, ಗಡೀಪಾರು ಇಂಥ ಮಾತುಗಳೇ ವಿಜೃಂಭಿಸುತ್ತಿರುತ್ತವೆ. ರಾಮ ಅವಶ್ಯವಾಗಿ ಹಾಂ, ಹೂಂ, ಎಂದು ಗೋಣುಹಾಕುತ್ತ ಸಮ್ಮತಿಸುವ ಹೌದಪ್ಪನಾಗಿದ್ದಾನೆ. ನಡೆಯುವುದೆಲ್ಲ ಮೂಲಭೂತವಾಗಿ ವಸಿಷ್ಠನ ಮಾತಿನಂತೆಯೇ ನಡೆಯುತ್ತದೆ. ಅಂತೆಯೇ ಎಲ್ಲೆಕಟ್ಟು ಮೀರಿ ಹೋಗುವ ನಡೆವಳಿಕೆಯೂ ಕಂಡುಬರುತ್ತದೆ. ಇವತ್ತಾದರೋ ಭಾರತ ಸರ್ಕಾರ ಹೇಗಾಗಿದೆಯೆಂದರೆ, ಇಲ್ಲಿ ರಾಜಗುರು ಹಾಗೂ ರಾಜ ಒಂದೇ ವ್ಯಕ್ತಿ. ಈ ರಾಜನ ನಾಲಿಗೆಯ ಮೇಲೂ ಶಿರಚ್ಛೇದನ, ಗಡೀಪಾರು ಎಂಬಂತಹ ಮಾತುಗಳು ರಾರಾಜಿಸುತ್ತಿರುತ್ತಿವೆ. ವಸಿಷ್ಠನು ಸ್ವಾರ್ಥ, ರೂಢಿಬದ್ಧತೆ, ಸಂಪ್ರದಾಯಗಳಿಗೆ ಜೋತುಬಿದ್ದು ಅಸಹಿಷ್ಣು ಆದ ರೀತಿಯಲ್ಲೇ ಇವತ್ತಿನ ರಾಜನೂ ಭಿನ್ನಮತವನ್ನು ಸಹಿಸದವನಾಗಿದ್ದಾನೆ.

ಭಾರತದ ಪ್ರಧಾನಮಂತ್ರಿ ಸಮತೋಲನ ಕಳೆದುಕೊಂಡಿದ್ದಾರೆ. ಏಕೆಂದರೆ, ದ್ರಾವಿಡಕಳಗಂನವರು ಸಂವಿಧಾನದ ಪ್ರತಿ ಮತ್ತು ರಾಷ್ಟ್ರಧ್ವಜವನ್ನು ಸುಟ್ಟು ಹಾಕುತ್ತಿದ್ದಾರೆ. ಇನ್ನೊಂದು ಕಾರಣವೂ ಇದೆ : ಆ ಜನ ಬ್ರಾಹ್ಮಣರು ಸ್ನಾನ ಮಾಡುತ್ತಿದ್ದಾಗ ಅವರ ಜನಿವಾರವನ್ನು ಹರಿದು ಹಾಕಿ, ಜುಟ್ಟು ಕತ್ತರಿಸಿದ್ದಾರೆ. ಪ್ರಾಯಶ: ಇವೆರಡೂ ವಿಷಯಗಳು ಒಟ್ಟಿಗೆ ಪ್ರಧಾನಿಯ ತಲೆಯಲ್ಲಿ ಹೊಕ್ಕು

ಗುರ್ಯ್‌ಗುಟ್ಟುತ್ತಿರಬಹುದು. ಸಂವಿಧಾನ ಪರಂಪರೆ ಹಾಗು ಬ್ರಾಹ್ಮಣಸ್ವಾರ್ಥ ಹೀಗೆ ಎಲ್ಲವೂ ಒಟ್ಟಾಗಿ ಸೇರಿ, ಪರಸ್ಪರ ತಳುಕುಹಾಕಿಕೊಂಡು ಈ ಪ್ರಧಾನಿಯನ್ನು ವಸಿಷ್ಠರ ಪೂರ್ಣಾವತಾರವನ್ನಾಗಿಸಿಬಿಟ್ಟಿವೆ. ದ್ರಾವಿಡ ಕಳಗಂ ಉದ್ರೇಕದ ಸ್ಥಿತಿಯಲ್ಲಿ ಮಾಡುತ್ತಿರಬಹುದಾದ ಈ ಕಾರ್ಯ ತಪ್ಪಾದುದು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಸಂವಿಧಾನ ಮತ್ತು ರಾಷ್ಟ್ರಧ್ವಜವನ್ನು ಸುಟ್ಟುಹಾಕುವುದು ಹೀನವಾದುದು, ಖಂಡನೀಯವಾದುದು. ಒಬ್ಬನ ಜನಿವಾರವನ್ನು ಬಲವಂತವಾಗಿ ಕತ್ತರಿಸುವುದು ಸಹ ತಪ್ಪೇ ಆಗುತ್ತದೆ. ಆದರೆ ಜುಟ್ಟು-ಜನಿವಾರಗಳಂತಹ ಜಾತಿಸೂಚಕ ಸಂಕೇತಗಳನ್ನು ನಾಶಮಾಡುವುದು ಶ್ಲಾಘನೀಯವಾದುದು. ಒಂದು ವೇಳೆ ನನಗೆ ರಾಮಸ್ವಾಮಿ ನಾಯಕರ್ ಅವರ ಜೊತೆಯಲ್ಲಿ ಮಾತನಾಡುವ ಅವಕಾಶ ಸಿಕ್ಕರೆ, ಅವರ ಮನಸ್ಸಿನಲ್ಲಿರುವ ನೋವಿನ ಭಾವನೆಗಳನ್ನು ನಾನು ಮೆಚ್ಚುತ್ತೇನೆ; ಆದರೆ, ಅವರ ಒಳ್ಳೆಯ ಉದ್ದೇಶದ ಮನಸ್ಸು ಹೆಚ್ಚು ಕಹಿಯಾಗಿ, ಅಪಚಾರದ ಕೃತಿಗಳಿಗೆ ಇಳಿಯದಂತೆ ಬದಲಾಯಿಸುವ ಪ್ರಯತ್ನಗಳನ್ನು ನಡೆಸುತ್ತೇನೆ. ಆದರೆ ಈ ರಾಜ ಏನು ಮಾಡುತ್ತಿದ್ದಾನೆ? ಒಬ್ಬ ಛಲವಂತನಾದ ಶಂಬೂಕನಿಗೆ ಹಠಮಾರಿಯಾದ ವಸಿಷ್ಠನ ಧಾಟಿಯಲ್ಲಿ ಉತ್ತರಿಸುತ್ತಿದ್ದಾನೆ. ಒಂದು ಸಲ ಭಾರತವನ್ನು ಬಿಟ್ಟು ಹೊರಡಿ, ಎನ್ನುತ್ತಾನೆ. ಇನ್ನೊಂದುಸಲ ಚೆನ್ನಾಗಿ ಮಟ್ಟಹಾಕಿಬಿಡುವ ಅಥವಾ ಸೆರಮನೆಗೊ, ಹುಚ್ಚಾಸ್ಪತ್ರೆಗೊ, ನೂಕುವ ಮಾತಾಡುತ್ತಾನೆ. ಅದೇ ದೇಶಭ್ರಷ್ಟತೆಯ, ಶಿರಚ್ಛೇದನದ ಸೊಕ್ಕಿನ ಮಾತುಗಳು !

ಇದು ಭಾರತ ಆಡುವಂತಹ ಮಾತಲ್ಲ. ಅದೂ ನಿಜವಾದ ಭಾರತದ ಮಾತಂತೂ ಖಂಡಿತಾ ಅಲ್ಲ. ನಿಜವಾದ ಭಾರತ ಹಾಗು ನಿಜವಾದ ಚೀನಾದ ಮಾತುಗಳು ಬೇರೆಯವೇ ಆಗಿವೆ. ಇಲ್ಲಿನ ಪ್ರಾಚೀನ ಧರ್ಮಗಳು ತಮ್ಮ ಮೇಲಿನ ದೂಷಣೆ, ಟೀಕೆ, ಅವಹೇಳನ ಮತ್ತು ಖಂಡನೆಯನ್ನು ಕೂಡ ಸಹಿಸಿಕೊಳ್ಳುತ್ತವೆ; ಮೆಲುನಗು ನಗುತ್ತವೆ. ಅವಶ್ಯಕತೆ ಕಂಡಾಗ ಮಾತ್ರ ಕಠಿಣವಾಗುತ್ತವೆ. ಅದೇ ಹೊಸ ಧರ್ಮಪಂಥಗಳು, ಅದರಲ್ಲೂ ಮುಖ್ಯವಾಗಿ ಪಶ್ಚಿಮದ ಹಾಗೂ ಮಧ್ಯ ಏಶಿಯಾದ ಧರ್ಮಗಳು ತಮ್ಮ ಖಂಡನೆ, ಅವಹೇಳನವನ್ನು ಸಹಿಸಿಕೊಳ್ಳಲಾರವು; ಅವೆಲ್ಲ ಮೂಲಸ್ವಭಾವದಲ್ಲೇ ಹಾಗಿವೆ. ಹಿಂದೂಧರ್ಮದ ತಿರುಳನ್ನೇ ಅರಿಯದ ಕೆಲವು ಹಿಂದೂಗಳು ಇಂದು ರಾಮ ಮತ್ತು ಕೃಷ್ಣರನ್ನು ಟೀಕಿಸುವ ಪುಸ್ತಕಗಳನ್ನು ಸುಡಲು ಆರಂಭಿಸಿದ್ದಾರೆ, ಅಲ್ಲವೆ? ಇಂಥ ಜನರೇ ಈ ಬೃಹತ್‌ರಾಷ್ಟ್ರವನ್ನು ಖಂಡಿತವಾಗಿಯೂ ಒಡೆದುಹಾಕುವರು. ರಾಮಾಯಣವನ್ನು ಸುಟ್ಟುಹಾಕುವುದು ಹೀನವಾದ ಕೆಲಸ, ಆದರೆ ಅದಕ್ಕಿಂತಲೂ ಹೆಚ್ಚು ಹೀನಾಯವೂ, ನಿಂದನೀಯವೂ ಆದ ಕೆಲಸವೆಂದರೆ ರಾಮನನ್ನು ಟೀಕಿಸುವ ಕೃತಿಗಳನ್ನು ಸುಡುವುದು ಅಥವಾ ಹಾಗೆ ಟೀಕಿಸಿದ ಜನರ ಶಿರಚ್ಛೇದನಮಾಡುವುದು.

ಶ್ರೀಮತಿ ಆಂಗ್‌ಸಾನ್ ಅವರ ಮಾತು ಸದಾ ನನ್ನ ನೆನಪಿನಲ್ಲಿದೆ. ನಾನು ಒಮ್ಮೆ ಅವರ ಸಹೋದರಿಯ ಬಗ್ಗೆ ಕೇಳಿದೆ. ಆ ಸಹೋದರಿ ಆ ಹೊತ್ತಿಗೆ ಬಂಡಾಯಗಾರಳಾಗಿದ್ದಳು, ಬಹುಶಃ ಈಗಲೂ ಇರಬಹುದು. ಶ್ರೀಮತಿ ಆಂಗ್‌ಸಾನ್ ಮನಸ್ಸಿನಲ್ಲಿ ಅನೇಕ ಬಗೆಯ ನೋವುಗಳು ಯಾವಾಗಲೂ ತುಂಬಿರುತ್ತಿದ್ದವೆಂದು ನಾನು ಭಾವಿಸುತ್ತೇನೆ. ಆದರೂ ಆಕೆ ಉತ್ತರಕೊಟ್ಟರು –"ನಾನು ಬರ್ಮಾದೇಶದವಳು. ನನ್ನ ಎಲ್ಲ ಮಕ್ಕಳಿಗೂ ನಾನು ತಾಯಿಯೇ ಆಗಿದ್ದೇನೆ- ಅವರು ವಿಧೇಯರಾಗಿದ್ದರೂ ಸರಿಯೆ, ಬಂಡಾಯಗಾರರಾಗಿದ್ದರೂ ಸರಿಯೆ; ಬಂಡುಕೋರ ಮಕ್ಕಳಿಗೆ ಶಿಕ್ಷೆ ಕೊಡುತ್ತೇನೆ. ಆದರೆ, ಅವೆಲ್ಲ ನನ್ನ ಮಕ್ಕಳೇ ಅಲ್ಲವೆ?" ಭಾರತಮಾತೆ ಸಹ ತನ್ನೆಲ್ಲ ಮಕ್ಕಳಿಗೂ ತಾಯಿಯೆ, ಬಂಡಾಯಗಾರ ಮಕ್ಕಳಿಗೆ ಕೂಡ. ಪ್ರಧಾನಮಂತ್ರಿಗಳು ನಾಗಾಸಮಸ್ಯೆಯನ್ನು ಗೊಂದಲಮಯಗೊಳಿಸಿದ್ದಾರೆ. ಈಗ ದ್ರಾವಿಡ ಸಮಸ್ಯೆಯನ್ನು ಹೊಲೆಗೆಡಿಸಲು ಆರಂಭಿಸಿದ್ದಾರೆ. ಏಕೆಂದರೆ ತಾಯಿ ಭಾರತಿಯು ತನ್ನ ಬಂಡುಕೋರ ಮಕ್ಕಳಿಗೆ ಶಿಕ್ಷೆ ಕೊಟ್ಟರೂ ಸಹ ಅವರನ್ನು ಅತೀವ ಪ್ರೀತಿಯಿಂದ ಕಾಣುತ್ತಾಳೆ ಎಂಬುದು ಈ ಪ್ರಧಾನಿಗೆ ಗೊತ್ತಿಲ್ಲ.

ಒಂದು ಸಲ, 1937ರ ಸಮಯದಲ್ಲಿ ಈ ಪ್ರಧಾನಮಂತ್ರಿ ಮುಸ್ಲಿಂಲೀಗಿನ ಪ್ರದರ್ಶನಕಾರರಿಗೆ ಸಂಬಂಧಪಟ್ಟಂತೆ ನನ್ನೊಡನೆ ವಿಚಿತ್ರವಾಗಿ ಮಾತಾಡಿದರು. ಈ ಲೀಗಿನ ಜನರು ಉತ್ತರ ಪ್ರದೇಶ ವಿಧಾನಸಭೆಯೊಳಗೆ ಬಲವಂತವಾಗಿ ನುಗ್ಗಿ, ಕಾಂಗ್ರೆಸ್ಸಿನವರನ್ನು ಅಟ್ಟಿಸಿಕೊಂಡು ಹೋಗಿದ್ದರು. ನಿಸ್ಸಂದೇಹವಾಗಿ ಅವರು ಮಾಡಿದ ಕೆಲಸ ಕೆಟ್ಟದ್ದು. ಆದರೆ ಪ್ರಧಾನಮಂತ್ರಿಗಳು ಈ ಬಗ್ಗೆ ಆಡಿದ ಮಾತು ಕೇಳಿ ನಾನು ದಂಗಾಗಿ ಹೋದೆ. ಅಲ್ಲಿ ನಮ್ಮಿಬ್ಬರ ಹೊರತು ಬೇರೆ ಯಾರೂ ಇರಲಿಲ್ಲ. "ಈ ಪಂತ್ ಕೈಲಾಗದ ಮನುಷ್ಯ, ಒಂದು ವೇಳೆ ನಾನು ಅವರ ಜಾಗದಲ್ಲಿದ್ದಿದ್ದರೆ ಮಷೀನ್‌ಗನ್‌ಗಳಿಂದ ಉತ್ತರ ಕೊಡುತ್ತಿದ್ದೆ" ಎಂದರು. ಆವರೆಗೆ ಪ್ರಧಾನ ಮಂತ್ರಿಯನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಲು ನನಗೆ ಸಾಧ್ಯವಾಗಿರಲಿಲ್ಲ. ಆದರೂ ನಾನು ಅವರನ್ನು ವಿರೋಧಿಸಿದೆ: "ಪ್ರಜಾಪ್ರಭುತ್ವ ಮತ್ತು ಅಹಿಂಸೆಯಲ್ಲಿ ನಂಬಿಕೆಯಿಟ್ಟಿದ್ದ ನೀವು ಇಂಥ ಮಾತುಗಳನ್ನು ಆಡುವುದಾದರೂ ಹೇಗೆ?" ಎಂದು ಪ್ರಶ್ನಿಸಿದೆ. ತಕ್ಷಣ ಅವರು ಜಾರಿಕೊಂಡರು: "ಮಷೀನ್‌ಗನ್‌ಗಳಿಂದ ಹಾಗೆಲ್ಲ ನಿಜವಾಗಿ ಗುಂಡಿಕ್ಕಲು ಸಾಧ್ಯವೆ? ಮಾತಿನ ಲಹರಿಯಲ್ಲಿ ಸುಮ್ಮನೆ ನಾನು ಹೇಳಿದೆ" ಎಂದರು.

ಪ್ರಧಾನ ಮಂತ್ರಿಯ ಮನಸ್ಸು ಯಾವಾಗಲೂ ವಸಿಷ್ಠ ಬ್ರಾಹ್ಮಣನ ತಾಮಸ ಆವೇಶದಲ್ಲಿ ತಲ್ಲೀನವಾಗಿರುತ್ತದೆಯೇ ಹೊರತು ರಾಜಸ ಪ್ರಕೃತಿಯ ರೋಷದಲ್ಲಲ್ಲ. ನೋಖಾಲಿಯ ಆ ಗದ್ದಲದ ದಿನಗಳಲ್ಲಿ ಕೂಡ ಪೂರ್ವ ಬಂಗಾಳದ ಕೆಸರು, ನೀರು,

ಒತ್ತಾದ ಮರ ಗಿಡ ಬಳ್ಳಿಗಳೆಲ್ಲ ಗಾಂಧೀಜಿಯವರ ಮನಸ್ಸನ್ನು ತುಂಬಾ ಚಿಂತೆಗೀಡುಮಾಡಿದ್ದವು. ಆದರೆ ವಾಸ್ತವವಾದ ಕಾರಣ ಬೇರೆಯಾಗಿತ್ತು. ಭಾರತದ ಭೂಪಟದಿಂದಲೇ ಅದು ಬೇರೆಯಾಗುವುದನ್ನು ನೋಡಲು ಈ ಪ್ರಧಾನಿ ಬಯಸುತ್ತಿದ್ದರು. ಕೋಪದ ಭರದಲ್ಲಿ ಅವರು ಕೊನೆಗೆ ಹಿಂದೂ ಹಿಂದುವೇ ಹಾಗೂ ಮುಸಲ್ಮಾನ ಮುಸಲ್ಮಾನನೇ ಎಂದು ಹೇಳುವ ಮಟ್ಟಿಗೆ ಹೋದರು. ನಾನು ಥಟ್ಟನೆ ಹೇಳಿದ್ದೆ: "ಅದಂತೂ ನನಗೆ ಗೊತ್ತಿಲ್ಲ, ಆದರೆ ಬ್ರಾಹ್ಮಣ ಯಾವಾಗಲೂ ಬ್ರಾಹ್ಮಣನೇ ಎಂಬುದನ್ನು ಬಲ್ಲೆ". ಪ್ರಧಾನಮಂತ್ರಿಗೆ ಉಕ್ಕಿಬರುವ ಸಿಟ್ಟನ್ನು ನುಂಗಿ ಕೊಳ್ಳುವುದು ಹೇಗೆಂದು ಚೆನ್ನಾಗಿಗೊತ್ತು. ಅವರು ಸುಮ್ಮನಾಗಿ ಬಿಟ್ಟರು. ಆಮೇಲೆ ಮಾತು ಬದಲಾಯಿಸಿಬಿಟ್ಟರು. ಇತ್ತೀಚೆಗೆ ರಾಮ್‌ಲಖಿನ್ ಚಂದಾಪುರಿಯವರು ನನಗೆ ಒಂದು ಸ್ವಾರಸ್ಯಕರವಾದ ವಿಷಯ ಹೇಳಿದರು. ಸ್ವಲ್ಪ ಕಾಲದ ಹಿಂದೆ, ಚಂದಾಪುರಿಯವರು ಸಮಾಜವಾದಿ ಪಕ್ಷವನ್ನು ಸೇರುವುದಕ್ಕೆ ಮೊದಲು ಚಂದಾಪುರಿಯವರು "ಕಾಂಗ್ರೆಸ್ ಮಂತ್ರಿಮಂಡಲ ಹಾಗೂ ಇತರ ಪದವಿಗಳಿಗೆ ಶೂದ್ರರನ್ನು ಹೆಚ್ಚು ಸಂಖ್ಯೆಯಲ್ಲಿ ನೀವು ತೆಗೆದುಕೊಳ್ಳ ಬೇಕು" ಎಂದು ಪ್ರಧಾನಮಂತ್ರಿಗಳಿಗೆ ಆಗ್ರಹಪಡಿಸಿದ್ದರು. ಪ್ರಧಾನಮಂತ್ರಿ ಒಪ್ಪಿದ್ದರು. ಆದರೆ ಅದಕ್ಕೆ ಪ್ರತ್ಯುತ್ತರವಾಗಿ, "ತಮಿಳುನಾಡಿನಂಥ ಮಂತ್ರಿಮಂಡಲದಲ್ಲೂ ಬ್ರಾಹ್ಮಣರಿಗೆ ಅವಕಾಶ ನೀಡುವುದು ಆವಶ್ಯಕ" ಎಂದು ಹೇಳಿದರು. ಆ ಸಮಯದಲ್ಲಿ ತಮಿಳು ನಾಡಿನ ಮಂತ್ರಿಮಂಡಲದಲ್ಲಿ ಒಬ್ಬ ಬ್ರಾಹ್ಮಣನೂ ಇರಲಿಲ್ಲ. ಇಲ್ಲಿ ನೆನಪಿನಲ್ಲಿಡಬೇಕಾದ ಒಂದು ಮಾತೇನೆಂದರೆ ತಮಿಳುನಾಡಿನ ಜನಸಂಖ್ಯೆಯಲ್ಲಿ ಬ್ರಾಹ್ಮಣರು ಇರುವುದು ಕೇವಲ ನೂರಕ್ಕೆ ನಾಲ್ಕರಷ್ಟು ಮಾತ್ರ. ಜೊತೆಗೆ ಎಲ್ಲ ರೀತಿಗಳಿಂದಲೂ ಅವರು ಸಾಕಷ್ಟು ಗಟ್ಟಿಗರಾಗಿಯೇ ಇದ್ದಾರೆ. ಒಂದುವೇಳೆ ಯಾರಾದರೂ ಒಬ್ಬ ತಮಿಳು ಬ್ರಾಹ್ಮಣ ಈ ದೇಶದಲ್ಲಿ ಕ್ರಾಂತಿ ಉಂಟುಮಾಡಿ, ಈ ಸಮಾಜದ ಪುನರುಜ್ಜೀವನದಲ್ಲಿ ಬೇರೆಯವರಿಗಿಂತ ಹೆಚ್ಚು ಸಹಾಯಕನಾಗ ಬಲ್ಲನಾದರೆ ಮಾತ್ರ ಆತ ಮಂತ್ರಿಮಂಡಲದಲ್ಲಿ ಇರಬೇಕೆಂಬುದು ನನ್ನ ಅಪೇಕ್ಷೆಯೇ ಹೊರತು, ಬ್ರಾಹ್ಮಣರ ಹಿತರಕ್ಷಣೆಮಾಡಲು ಇಲ್ಲವೇ ಆ ಜನರನ್ನು ಪ್ರತಿನಿಧಿಸಲು ಖಂಡಿತಾ ಅಲ್ಲ. ಶಕ್ತಿವಂತನಿಗೇ ಇನ್ನೂ ಹೆಚ್ಚು ಶಕ್ತಿಯೇ?

ಸಂಪ್ರದಾಯ, ಸ್ವಾರ್ಥ ಹಾಗೂ ತನ್ನ ಗುಂಪಿನ ಸ್ವಾರ್ಥಗಳಲ್ಲಿ ವಸಿಷ್ಠ ಬ್ರಾಹ್ಮಣನ ಮನಸ್ಸು ಯಾವಾಗಲೂ ಮುಳುಗಿರುತ್ತದೆ. ಸಂಪ್ರದಾಯದ ಸಲುವಾಗಿ ಈತ ಯಾರನ್ನಾದರೂ ಕೊಲ್ಲಬಲ್ಲ, ಸಾಯಲೂಬಲ್ಲ. ತನ್ನ ಗುಂಪಿನ ಸ್ವಾರ್ಥಕ್ಕಾಗಿ ಆತ ಏನನ್ನೂ ತ್ಯಾಗಮಾಡಲು ಸಿದ್ಧ. ಅದರ ಬೆನ್ನಲ್ಲೇ ತನ್ನ ಹಾಗೂ ತನ್ನ ಕುಟುಂಬದ ಲೌಕಿಕ ಹಾಗೂ ವ್ಯಾವಹಾರಿಕ ಲಾಭವೇ ಈತನ ಜೀವನದ

ಪರಮಗುರಿಯಾಗಿರುತ್ತದೆ. ಈತನ ಸಂಪ್ರದಾಯ ಸಹ ದೇಶೀಯವಾಗಿರುತ್ತದೆ, ವಿದೇಶೀ ಸಂಪ್ರದಾಯಗಳಲ್ಲಿ ಕೂಡ ತನಗೆ ಬೇಕಾದ್ದನ್ನು ಈತ ಆಯ್ಕೆಮಾಡಿ ಕೊಳ್ಳುತ್ತಾನೆ. ಈ ವಸಿಷ್ಠ ಬ್ರಾಹ್ಮಣನ ನಂಬಿಕೆ, ಹಿತಾಸಕ್ತಿಗಳಿಗೆ ಏನಾದರೂ ಧಕ್ಕೆಯುಂಟಾದರೆ ಮಾತ್ರ ಹಾವಿನಂತೆ ಹೆಡೆ ಬಿಚ್ಚಿ ಮೇಲೆರಗಲು ಸನ್ನದ್ಧನಾಗುತ್ತಾನೆ.

ಬಹುಶಃ ನೀವು ನನ್ನನ್ನು ತಪ್ಪಾಗಿ ಅರ್ಥಮಾಡಿಕೊಳ್ಳಲೂ ಸಾಧ್ಯವಿದೆ. ಹುಟ್ಟಿನಿಂದ ಮತ್ತು ನನ್ನ ಕುಲ ಸಂಪ್ರದಾಯಗಳ ಲೆಕ್ಕದಲ್ಲಿ ನಾನು ವಸಿಷ್ಠಬ್ರಾಹ್ಮಣನಿಗೆ ಖಾಸಾಗೆಳೆಯನೇ ಆಗಿದ್ದೇನೆ. ವ್ಯಾಪಾರ, ಅದರಲ್ಲೂ ಸಗಟು ವ್ಯಾಪಾರ ಮಾಡುತ್ತಾ ಬಂದು ಜಾತಿಪದ್ಧತಿಯ ಕ್ರಮದಲ್ಲಿ ಬಹಳಷ್ಟು ಮೇಲೆ ತಲುಪಿರುವ ಜನ, ಅನೇಕ ಸಾವಿರ ವರ್ಷಗಳಿಂದಲೂ ಬ್ರಾಹ್ಮಣರ ಜೊತೆಯಲ್ಲಿ ಉತ್ತಮ ಸಂಬಂಧವನ್ನು ಇಟ್ಟುಕೊಂಡು ಬಂದಿರುವುದು ಚಾರಿತ್ರಿಕ ಸಂಗತಿಯಾಗಿದೆ. ಬನಿಯಾ ಸ್ತ್ರೀಯರು ಬ್ರಾಹ್ಮಣ ಪುರುಷರ ಜೊತೆ ಹಾಗೂ ಬನಿಯಾ ಗಂಡಸರು ಬ್ರಾಹ್ಮಣ ಮಹಿಳೆಯರ ಜೊತೆ ಮಧುರತಮವಾದ ಪ್ರಣಯ ಸಂಬಂಧಗಳನ್ನು ಅನೇಕ ತಲೆಮಾರುಗಳಿಂದ ಹೊಂದಿರುವುದನ್ನು ಗಮನಿಸಿದರೆ, ಈ ಬನಿಯಾಬ್ರಾಹ್ಮಣ ಒಪ್ಪಂದದ ಹೊಂದಾಣಿಕೆ ನಮಗೆ ಮನವರಿಕೆಯಾಗುತ್ತದೆ. ಇವರಿಬ್ಬರ ಈ ಸಂಯೋಗ ಭಾರತದ ಚರಿತ್ರೆಯ ರಥಚಕ್ರದಲ್ಲಿ ಒಂದು ಕಡಾಣಿಯಂತಿದೆ. ದೇಶದ ಜೇಬಿಗೆ ಮಾಲೀಕ ವ್ಯಾಪಾರಿ ಯಾದರೆ, ಮನಸ್ಸಿನ ಒಡೆಯ ಬ್ರಾಹ್ಮಣ. ಈ ಇಬ್ಬರೂ ನಾಡಿಗೆ ಯಾವಾಗ ಎಷ್ಟು ಪ್ರಯೋಜನ ಉಂಟುಮಾಡಿದರು, ಎಂಥ ಸ್ಥಿರತೆಯನ್ನು ತಂದುಕೊಟ್ಟರು ಎಂಬುದರ ಲೆಕ್ಕಾಚಾರಕ್ಕೆ ನಾನು ಈಗ ಇಳಿಯುವುದಿಲ್ಲ. ಒಂದು ವೇಳೆ ಈ ರಾಷ್ಟ್ರ ಸಮೃದ್ಧವಾಗಬೇಕಾದರೆ ಅದರ ಎಲ್ಲ ನಲವತ್ತು ಕೋಟಿಮಂದಿಯ ಏಳಿಗೆಯಾಗ ಬೇಕಾದರೆ ಜನತೆಯ ಹೊಟ್ಟೆ ಮತ್ತು ಮನಸ್ಸಿನ ಮೇಲೆ ಆಕ್ರಮಣ ಮಾಡುವ ಏಕಾಧಿಪತ್ಯ ನಾಶವಾಗಲೇಬೇಕು.

ಬಿರ್ಲಾ ಮತ್ತು ನೆಹರೂ ನಡುವಣ ಸಂಘಟನೆ ಹಾಗೂ ಏಕಾಧಿಪತ್ಯ ನಾಶವಾಗಬೇಕೆಂಬುದೇ ನನ್ನ ಇಚ್ಛೆ ಎಂಬುದನ್ನು ನೀವು ಈ ಹೊತ್ತಿಗೆ ಅರ್ಥ ಮಾಡಿಕೊಂಡಿದ್ದೀರಿ? ಇದರಲ್ಲಿ ನೀವು ಆಶ್ಚರ್ಯಪಡುವಂತಾದ್ದೇನೂ ಇಲ್ಲ. ಹಣವಂತರ ಮತ್ತು ಆಧ್ಯಾತ್ಮವಾದಿಗಳ, ವ್ಯಾಪಾರಿಗಳ ಮತ್ತು ಮಠಗಳ, ಬಿರ್ಲಾ ಮತ್ತು ನೆಹರೂಗಳ ಪರಸ್ಪರ ಹಿತ ಸದಾ ಜೊತೆಗೂಡಿಯೇ ಇರುತ್ತದೆ. ಎಲ್ಲೋ ಒಮ್ಮೊಮ್ಮೆ ಮಾತ್ರ ಭಿನ್ನಾಭಿಪ್ರಾಯಗಳು ಕಂಡು ಬಂದರೂ ಅದರಿಂದ ಅಂಥ ದೊಡ್ಡ ಸಮಸ್ಯೆಯೇನೂ ಉದ್ಭವವಾಗುವುದಿಲ್ಲ, ಬಿಡಿ. ಪ್ರೇಮಿಗಳು ಕೂಡ ಆಗಾಗ್ಗೆ ಪರಸ್ಪರ ಮುನಿಸಿಕೊಳ್ಳುವುದಿಲ್ಲವೇ? ಅದರಲ್ಲೂ ಈ ಕಾಲದಲ್ಲಿ ವಸಿಷ್ಠ ಪರಂಪರೆಯ ಬಿರ್ಲಾರಂತಹ ವ್ಯಾಪಾರಿಗಳನ್ನು ಸೃಷ್ಟಿಮಾಡುತ್ತಿಲ್ಲವೆ? ನೆಹರೂರಂಥ ವಸಿಷ್ಠ

ಬ್ರಾಹ್ಮಣ ಅಹಂಕಾರದಿಂದ ಚೂರಾಗುತ್ತಿಲ್ಲವೆ? ಈ ಮೇಲಿನ ಹೊಯ್ದಾಟಗಳ ಕಾರಣದಿಂದ, ಇವರಿಬ್ಬರ ನೈಜವಾದ ಹಿತಾಸಕ್ತಿಗಳ ಹೊಂದಾಣಿಕೆಯನ್ನು ಮುಚ್ಚಿಡಲಾಗುವುದೆ? ಒಬ್ಬರು ಇನ್ನೊಬ್ಬರ ನಿರಂತರವಾದ ಸಮುದಾಯ ಲಾಭವನ್ನು ಹಿತಾಸಕ್ತಿಗಳನ್ನು ರಕ್ಷಿಸುವುದನ್ನು ಈ ಹೊಟ್ಟೆಯ ಪ್ರಭುಗಳು-ಅಂದರೆ ಆರ್ಥಿಕ ಸ್ಥಿತಿಗತಿಗಳನ್ನು ನಿಯಂತ್ರಿಸುವ ಹಾಗೂ ಮನಸ್ಸಿನ ಪ್ರಭುಗಳು ಹೇಗೆತಾನೆ ಕೈಬಿಡಲು ಸಾಧ್ಯ? ಇವರಿಬ್ಬರೂ ತಮತಮಗೆ ಬೇಕಾದ ರೀತಿಯಲ್ಲಿ ಬೆಳೆದು ಹೆಮ್ಮರವಾಗುವುದು ಒಟ್ಟೊಟ್ಟಿಗೇ! ಒಂದು ಮಾತನ್ನು ನಾನು ಇಲ್ಲಿ ಇನ್ನಷ್ಟು ಸ್ಪಷ್ಟವಾಗಿ ಹೇಳುತ್ತೇನೆ: ಬನಿಯಾ-ಬ್ರಾಹ್ಮಣಮಹಿಳೆಯರ ಹಾಗೂ ಬ್ರಾಹ್ಮಣ-ಬನಿಯಾ ಮಹಿಳೆಯರ ಪರಸ್ಪರ ಸಂಬಂಧಗಳನ್ನು ಕುರಿತಂತೆ ನನಗೆ ತಿರಸ್ಕಾರವೇನೂ ಇಲ್ಲ. ನಾನು ಬಯಸುವುದು ಇಂಥ ಸ್ಥಿತಿ ಇನ್ನೂ ವಿಸ್ತರಿಸುತ್ತಲೇ ಇರಬೇಕು ಎಂಬುದಷ್ಟನ್ನೇ. ಬ್ರಾಹ್ಮಣ-ಜಲಗಾರ, ಸೇಠ್-ಚಮ್ಮಾರ, ಅಹೀರ್ (ಗೊಲ್ಲ)-ಪಾಸೀ (ಹಕ್ಕಿ ಬೇಟೆಗಾರ) ಕಹಾರ್ (ಬೋವಿ)-ಬ್ರಾಹ್ಮಣ, ಅಗಸ-ಸೇಠ್ ಇಂಥ ವಿವಿಧ ಹಿನ್ನೆಲೆಯ ಗಂಡುಹೆಣ್ಣುಗಳ ನಡುವೆ ಸಹ ವ್ಯಾಪಕವಾಗಿ ಕೊಡುಕೊಳ್ಳುವ ಸಂಬಂಧ ಏರ್ಪಡಬೇಕು. ಈ ಕನಸು ನನಸಾಗಬೇಕಾದರೆ ಸಾಕಷ್ಟುಕಾಲ ಹಿಡಿಯುತ್ತದೆಂಬುದು ನನಗೆ ಗೊತ್ತು. ಸುಂದರ ಕನಸಿನ ಹಂದರದ ಮೇಲೆಯೇ ಭಾರತ ಇನ್ನೂ ಹೆಚ್ಚು ಬಲಿಷ್ಠ ರಾಷ್ಟ್ರವಾಗಬಲ್ಲದು ಎಂಬುದನ್ನು ಸಹ ನಾನು ಬಲ್ಲೆ.

ನಾನು ಎಲ್ಲ ಬ್ರಾಹ್ಮಣರ ಹಾಗೂ ಬನಿಯಾಗಳ (ಅಂದರೆ ವ್ಯಾಪಾರಿಗಳ) ಬಗೆಗೆ ಬರೆಯಲು ಹೋಗಿಲ್ಲ. ಕೇವಲ ವಸಿಷ್ಠ ಪಂಗಡದವರ ವಿಚಾರವಾಗಿ ಮಾತ್ರ ಬರೆದಿದ್ದೇನೆ. ರಾಜನಾರಾಯಣ ಸಿಂಹ, ಮಧು ಲಿಮಯೆ, ಬಾಲೇಶ್ವರ ದಯಾಳ್ ಮುಂತಾದ ಗೆಳೆಯರು ಹುಟ್ಟಿನಿಂದ ಬ್ರಾಹ್ಮಣರೇ ಆಗಿದ್ದಾರೆ. ನಾನು ಅಂದುಕೊಂಡಿರುವ ಮಟ್ಟಿಗೆ, ಇವರಿಗಿಂತ ಒಳ್ಳೆಯ ಜನ ಸಮಾಜವಾದಿ ಪಕ್ಷದಲ್ಲಿ ಮಾತ್ರವೇ ಅಲ್ಲ, ಭಾರತದ ಬೇರೆ ಯಾವ ರಾಜಕೀಯ ಪಕ್ಷದಲ್ಲೂ ಇಲ್ಲ. ಅವರು ಬ್ರಾಹ್ಮಣ ಸಮುದಾಯದಲ್ಲಿ ಹುಟ್ಟಿದವರೆಂದು ನಾನು ಇಲ್ಲಿ ಪ್ರಸ್ತಾಪಿಸಿರುವುದು ಕೂಡ ಪ್ರಾಯಶಃ ಅವರಿಗೆ ಇಷ್ಟವಾಗಲಾರದೇನೊ? ವಾಲ್ಮೀಕಿಯ ಪರಂಪರೆಗೆ ಸೇರಿದ ಜನರಿಗೆ ಈ ಪ್ರಸ್ತುತ ಕಾಲವೇ ಜಾತಿಮತದ ಕಟ್ಟುಪಾಡುಗಳನ್ನು ಹೊಂದಿರುವ ಕೊನೆಯ ಕಾಲಘಟ್ಟವೆನಿಸುತ್ತದೆ. ಜಾತಿಜಾತಿಗಳ ನಡುವೆ ಭೇದವನ್ನು ಉಳಿಸಿಕೊಂಡೇ ಸಮಾನತೆಯನ್ನು ಉಂಟುಮಾಡುವ ದಿಕ್ಕಿನಲ್ಲಿ ಆಡುವ ಮಾತುಗಳು ನಿರರ್ಥಕವಾದವುಗಳು. ಜಾತಿಗಳು ನಾಶವಾಗಬೇಕು; ಅವುಗಳ ನಾಮಾವಶೇಷಗಳೂ ಉಳಿಯಕೂಡದು. ಶೂದ್ರ, ಅಸ್ಪೃಶ್ಯ, ಕೆಳವರ್ಗದ ಮುಸಲ್ಮಾನ, ಮಹಿಳೆಯರು-ಇವರುಗಳು ಯೋಗ್ಯರಾಗಿರಲಿ ಬಿಡಲಿ, ಇವರನ್ನು ದೊಡ್ಡ ಹುದ್ದೆಗಳಲ್ಲಿ ತಕ್ಷಣವೇ

ಕೂಡಿಸಬೇಕು. ವಸಿಷ್ಠ ಬ್ರಾಹ್ಮಣರಿಗೆ ಇದೆಲ್ಲ ಹೇಗೆ ತಾನೆ ಅಪ್ಯಾಯಮಾನವಾಗಲು ಸಾಧ್ಯ? ಮಾತೃಹಂತಕ ಪರಶುರಾಮನಿಂದ ಮೊದಲುಗೊಂಡು ರಾಷ್ಟ್ರಹಂತಕ ನೆಹರೂ ತನಕ ಈ ಕೊಳಕು ಸಂಪ್ರದಾಯನಿಷ್ಠೆಯ ವಸಿಷ್ಠ ಪರಂಪರೆಯೇ ಉದ್ದಕ್ಕೂ ಬೆಳೆದುನಿಂತಿದೆ. ಹಾಗೆಯೇ ವಿಶ್ವಾಮಿತ್ರನಿಂದ ಹಿಡಿದು ವಿಶ್ವೇಶ್ವರಯ್ಯನವರ ತನಕ ಉದಾರ ಮನಸ್ಸಿನ ವಾಲ್ಮೀಕಿ ಪರಂಪರೆಯೂ ಉಳಿದು ಬಂದಿದೆ.

ವಸಿಷ್ಠ ಪ್ರಾಯಶಃ ವಿದೇಶೀಯ. ಇವತ್ತಿನ ಪ್ರಧಾನಮಂತ್ರಿ ಖಂಡಿತವಾಗಿ ವಿದೇಶೀಯ. ನಾನು ಹೇಳುತ್ತಿರುವುದರ ಆಶಯ ಕೇವಲ ಮುಖಚರ್ಯೆಯಿಂದ ಮಾತ್ರ ಅಲ್ಲ. ಹಾಗೆ ನೋಡಿದರೆ, ನಾನು ಸುಮಾರು ಹತ್ತು ವರ್ಷಗಳಿಂದ ಅವರ ಮುಖವನ್ನೇ ನೋಡಿಲ್ಲ. ಕೇವಲ ಒಂದು ಬಾರಿ, ಆತ ಖ್ರುಶ್ಚೇವರೊಡನೆ ಇದ್ದಾಗ ನೋಡಿದ್ದೆನೇನೊ? ಅದೂ ತುಂಬ ದೂರದಿಂದ. ಆದರೂ ಈ ವ್ಯಕ್ತಿಯ ವಸಿಷ್ಠಗುಣಗಳು ಎಷ್ಟುದಟ್ಟವಾಗಿ ಕಂಗೊಳಿಸುತ್ತವೆಯೆಂದರೆ ಆ ಮುಖ ಬೇಡಬೇಡವೆಂದರೂ ಕಣ್ಣಿಗೆ ಕಟ್ಟುತ್ತದೆ; ಆಗ ಆರ್ಮೇನಿಯ ಜನರ ಮುಖಗಳು ನೆನಪಿಗೆ ಬರುತ್ತವೆ. ನಿಕೋಸಿಯಾದಲ್ಲಿ ನಾನು ಈ ಮುಖಗಳನ್ನು ನೋಡಿದ್ದೇನೆ. ಹಾಗೆಯೇ ಕೈರೋದ ಗ್ರೀಕ್-ಆರ್ಮೇನಿಯನ್ ಪ್ರದೇಶಗಳಲ್ಲೂ ಈ ಮುಖಗಳು ನನಗೆ ಕಂಡಿವೆ. ಆದರೆ ಮುಖಚಹರೆಯಿಂದ ಸಿಗುವುದಾದರೂ ಏನು? ನಿಜವಾಗಿ ಗಮನಿಸಬೇಕಾದ ಅಂಶವೆಂದರೆ, ಮನಸ್ಸು ಅಲ್ಲವೆ? ಪ್ರಧಾನ ಮಂತ್ರಿಗಳ ಮನಸ್ಸು ಕೂಡ ಮಧ್ಯ ಮತ್ತು ಪಶ್ಚಿಮ ಏಷ್ಯಾಕ್ಕೆ ಸೇರಿದ್ದು. ಅದು ಪುರೋಹಿತಶಾಹಿ ಬುದ್ಧಿ, ಪವಿತ್ರಗ್ರಂಥಗಳಿಗೆ ಜೋತುಬಿದ್ದ ಮನಸ್ಸು; ಇದು ಕೇವಲ ಕೆಟ್ಟತನವನ್ನಷ್ಟೇ ವಿರೋಧಿಸುವುದಿಲ್ಲ, ಕೆಟ್ಟತನ ಮಾಡುವವನನ್ನು ಕೂಡ ದ್ವೇಷಿಸುತ್ತದೆ. ಇಂಥ, ಭಾರತೀಯ ಬುದ್ಧಿಮತ್ತೆ ನಿಷ್ಕ್ರಿಯವಾಗಿರುತ್ತದೆ; ಹಾಗಿಲ್ಲದಿದ್ದಾಗಲೂ ತನ್ನ ಸಕ್ರಿಯಸ್ಥಿತಿಯಲ್ಲೂ ಕೇವಲ ಕೆಟ್ಟತನದೊಂದಿಗೆ ಮಾತ್ರ ಶತ್ರುವಿನಂತೆ ವರ್ತಿಸುತ್ತದೆ. ದುಷ್ಟರ ಜೊತೆಗೆ ಹಗೆತನ ಬೆಳೆಸಿಕೊಳ್ಳುವ ಜನರು ಕ್ರಮೇಣ ದುಷ್ಟತನದ ಜೊತೆಯಲ್ಲಿ ಸ್ನೇಹವನ್ನೂ ಬೆಳೆಸಿಕೊಳ್ಳಬೇಕಾಗಿ ಬರುತ್ತದೆ.

ದೇಶೀಯ ಯಾರು? ವಿದೇಶೀಯ ಯಾರು? ಸೆಲ್ಯೂಕಸ್ ವಿದೇಶಿಯಾದರೆ ಕಾನಿಷ್ಕ ದೇಶೀಯ; ಗಜನಿ ಹೊರದೇಶದವನಾದರೆ ಶೇರ್‌ಶಾಹ್ ಸ್ವದೇಶಿ, ಹೂಣರು ಹೊರದೇಶದವರಾದರೆ ರಾಣಾಸಾಂಗಾ ಸ್ವದೇಶಿ, ಬಾಬರ್ ವಿದೇಶೀಯನಾದರೆ ಬಹಾದುರ್ ಶಾಹ್ ಸ್ವದೇಶಿ-ಈ ಬಗೆಯ ಸಹಜ ಆಪ್ತತೆಯಲ್ಲಿ ಭಾರತದ ಇತಿಹಾಸವನ್ನು ಓದಬೇಕಾಗುತ್ತದೆ. ಆದರೆ ಈ ಸ್ವದೇಶಿಯರ ಸ್ಥಿತಿ ಚಿಂತಾಜನಕ ವಾಗಿದೆ: ಸೋಲುವುದರಲ್ಲಿ ಇವರಿಗೆ ಕೆಲಮಟ್ಟಿಗೆ ತೃಪ್ತಿ ದೊರೆಯುತ್ತದೆ; ಈ ಜನ

ಸೋಲುವುದರಲ್ಲಿಯೆ ತಮ್ಮ ಶೌರ್ಯವನ್ನು ಪ್ರದರ್ಶಿಸುತ್ತಾರೆ. ಇವರ ಮಕ್ಕಳು ಮೊಮ್ಮಕ್ಕಳು ಕೂಡ ಸೋಲಿನ ಗಾಯಗಳ ಕತೆಗಳನ್ನು ಕೇಳಿ ಸಂತೋಷದಿಂದ ಉಬ್ಬುತ್ತಾರೆ. ಭಾರತೀಯ ಮನಸ್ಸಿಗೆ ಅಂಟಿರುವ ಈ ಜಾಡ್ಯವನ್ನು ಹೋಗಲಾಡಿಸುವುದು ಹೇಗೆ? ನಮ್ಮ ತೆರೆದ ಮನಸ್ಸಿನ ವಾಲ್ಮೀಕಿಯ ಪರಂಪರೆಯನ್ನು ಈ ರಾಷ್ಟ್ರದಲ್ಲಿ ಗಟ್ಟಿಗೊಳಿಸುವುದು ಹೇಗೆ? ಸಂಪ್ರದಾಯವು ಹೇಗೋ ಹಿಂದಿನಿಂದಲೂ ಸೋಲನ್ನು ಸಹ ತನ್ನಲ್ಲಿ ರಕ್ತಗತಮಾಡಿಕೊಂಡಿರುವ ವಿಚಿತ್ರಸ್ಥಿತಿಯೇ ಇಲ್ಲಿ ಕಂಡು ಬರುತ್ತದೆ. ನಾನು ಇಷ್ಟು ದೀರ್ಘವಾದ ಪತ್ರವನ್ನು ನಿಮಗೆ ಏಕೆ ಬರೆಯುತ್ತಿದ್ದೇನೆಂದರೆ ಈ ವಸಿಷ್ಠಸಂಪ್ರದಾಯದ ಹಾವಿನ ಹುತ್ತಕ್ಕೆ ನೀವೇ ಮಂತ್ರಿಗಳು. ವಸಿಷ್ಠರ ಒಂದು ಏಟು ನಿಷ್ಪ್ರಯೋಜಕವಾಯಿತು. ಬಹುಶಃ ಬೇರೆ ಯಾವುದಾದರೂ ಏಟು ಗುರಿ ಮುಟ್ಟಬಲ್ಲದೋ ಏನೋ? ಆದ್ದರಿಂದಲೇ ಈ ವಸಿಷ್ಠನೀತಿಯನ್ನು ಬುಡಸಮೇತ ಕಿತ್ತು ಬಿಸಾಡಬೇಕೆಂದು ಭಾರತದ ಜನತೆಯನ್ನು ಕೇಳಿಕೊಳ್ಳುತ್ತೇನೆ. ಇಷ್ಟೇ ಅಲ್ಲ, ಈಗ ನಿಮ್ಮ ಒಡೆಯರಾಗಿರುವವರು, ಮುಂದೆಯೂ ನಿಮ್ಮ ಯಜಮಾನರೆನಿಸಿಕೊಳ್ಳುವವರು, ಒಂದು ಕಾಲಕ್ಕೆ ನನ್ನ ಗುರುವೂ ಆಗಿದ್ದರು. ಆದರೆ ಈಗ ಅಲ್ಲ. ನನ್ನ ಈ ಪತ್ರವನ್ನು ಪೂರ್ತಿಯಾಗಿ ನಿಮ್ಮ ಆ ಧಣಿಗೆ ತಲುಪಿಸಲು ಸಾಧ್ಯವಾಗದಿದ್ದರೆ, ಈ ಮಾತನ್ನಾದರೂ ತಪ್ಪದೆ ತಿಳಿಸಿ- ''ನೋಡು, ಹಠಮಾರಿಯಾದ ಧರ್ಮಾಂಧ ಬ್ರಾಹ್ಮಣ, ಉದಾರ ಮನಸ್ಸಿನವನಾಗು, ನ್ಯಾಯಪ್ರಿಯನಾಗು, ಇನ್ನೂ ಬೇಕೆಂದರೆ ಕಠೋರನಾಗು, ಆದರೆ ಧರ್ಮಾಂಧತೆ ಬಿಟ್ಟುಬಿಡು.'' ಯಾರಿಗೆ ಗೊತ್ತು, ಬಹುಶಃ ಪ್ರಧಾನಮಂತ್ರಿ ಈ ನನ್ನ ಮಾತುಗಳನ್ನು ಒಪ್ಪಿದರೂ ಒಪ್ಪಬಹುದು. ನಿಜವಾಗಿ ಬೇಕಾಗಿರುವುದೇನೆಂದರೆ ಈ ದೇಶ ಒಪ್ಪಬೇಕು. ಭಾರತೀಯರ ರಕ್ತವು ಔದಾರ್ಯ ಮತ್ತು ದೃಢತೆಗಳಿಗೆ ಹೆಸರಾಗಿದೆ; ಧರ್ಮಾಂಧತೆ ಇಲ್ಲಿನ ದೌರ್ಬಲ್ಯದ ಹೆಗ್ಗುರುತು, ಅಷ್ಟೆ.

ಹಾಲಿ ಪ್ರಧಾನ ಮಂತ್ರಿಯನ್ನು ಧರ್ಮಾಂಧ ಬ್ರಾಹ್ಮಣನೆಂದು ನಾನು ಕರೆದಿರುವುದನ್ನು ನೋಡಿ ನೀವಷ್ಟೇ ಅಲ್ಲ, ಬಹಳ ಮಂದಿ ಹುಬ್ಬೇರಿಸಬಹುದು. ಹಲವಾರು ವರ್ಷಗಳ ಹಿಂದಾಗಿದ್ದರೆ ನಾನು ಚಕಿತನಾಗುತ್ತಿದೆ. ಬಟ್ಟೆಬರೆಗಳಿಗೆ, ಊಟತಿಂಡಿಗಳಿಗೆ ಸಂಬಂಧಪಟ್ಟಂತೆ ಎಲ್ಲರಿಗೂ ಒಪ್ಪಿಗೆಯಾಗುವ ಮನುಷ್ಯ, ಇಷ್ಟೊಂದು ಉದಾರ ಮನಸ್ಸಿನ ಸರ್ವಗ್ರಾಹಿ ವ್ಯಕ್ತಿತ್ವದ ಮನುಷ್ಯ, ಎಲ್ಲರೊಡನೆ ಅದರಲ್ಲೂ ಅಲ್ಪಸಂಖ್ಯಾತರೊಡನೆ, ದಲಿತರೊಡನೆ, ದುರ್ಬಲರೊಡನೆ ಪ್ರೀತಿಯಿಂದ ಬೆರೆಯುವ ಮನುಷ್ಯ ಅದು ಹೇಗೆತಾನೆ ಧರ್ಮಾಂಧ ಬ್ರಾಹ್ಮಣನೆನಿಸಿಕೊಳ್ಳಬಲ್ಲ? ನಿಜವಾಗಿ ನನ್ನ ಆಲೋಚನಾ ಸರಣಿಯಲ್ಲೇ ಎಲ್ಲೋ ಏನೋ ತಪ್ಪಾಗಿದೆ ಎಂದು ಬಹಳ ಜನ ಯೋಚಿಸಿಯಾರು! ನಾನು ಹೇಳುವುದಿಷ್ಟೇ, ಸ್ವಲ್ಪ ನಿಧಾನವಾಗಿ

ಆಲೋಚಿಸಿ: ಊಟ-ತಿಂಡಿ, ಬಟ್ಟೆಬರೆ ಇವುಗಳ ವಿಚಾರ ಎದ್ದುಕಾಣುವಂತೆಯೆ ಇದೆ, ಅನುಮಾನವೇನಿಲ್ಲ. ವಾಲ್ಮೀಕಿ ವಲ್ಕಲಧಾರಿಯಾಗಬಲ್ಲ, ನಾರುಮಡಿ ಉಡಬಲ್ಲ, ಮೊಣಕಾಲಿನ ವರೆಗೆ ಮುಟ್ಟಬಲ್ಲಷ್ಟಾದರೂ ಬಟ್ಟೆ ಹಾಕಿಕೊಳ್ಳಬಲ್ಲ, ಕಡೇಪಕ್ಷ ಸಾಧಾರಣ ಬಟ್ಟೆಯಾದರೂ ಸರಿ. ಆದರೆ, ಈ ವಸಿಷ್ಠ ರಾಜಗುರು ರಾಜಮರ್ಯಾದೆಯಿಂದಲೇ, ರಾಜವೈಭವದಿಂದಲೇ ಇರುತ್ತಾನೆ. ಇಷ್ಟರಮೇಲೆ ಸ್ವತಃರಾಜನೂ ಆಗಿಬಿಟ್ಟ ಅಂದಮೇಲೆ ಕೇಳಬೇಕೆ? ನಾನು ಮೊದಲೇ ಹೇಳಿದ್ದೇನೆ, ಪರಂಪರೆ ಯಾವುದು ಬೇಕಾದರೂ ಆಗಬಹುದು; ದೇಶಿ ಇರಬಹುದು; ವಿದೇಶಿ ಇರಬಹುದು, ಯಾವ ಕಾಲಕ್ಕೆ ಬೇಕಾದರೂ ಸೇರಿದ್ದಾಗಿರಬಹುದು. ಚೂಡಿದಾರ್ ಹಾಕಬಹುದು, ಪೈಜಾಮಾ ಹಾಕಬಹುದು, ಜೋಧ್‌ಪುರಿ ರೀತಿಯ ಬಟ್ಟೆ ಧರಿಸಬಹುದು, ಯಾವುದೇ ಆಗಲಿ, ಒಟ್ಟಿನಲ್ಲಿ ರಾಜ ಪರಂಪರೆಗೆ ಯೋಗ್ಯವಾದ ಉಡುಪು ಧರಿಸಬೇಕು. ತೀರ ಕಡಿಮೆ ಬಟ್ಟೆ ಧರಿಸುವ ರಾಜಪರಂಪರೆಗಳು ಎಷ್ಟು ಹಳೆಯವು ಎಂದರೆ, ಜನ ಅವುಗಳನ್ನು ಮರೆತುಬಿಟ್ಟಿದ್ದಾರೆ. ನನಗೆ ಅನ್ನಿಸುವಂತೆ ವಸಿಷ್ಠ ತುಂಬಾ ರುಚಿಕರನಾದ, ಪುಷ್ಟಿಕರವಾದ ಭೋಜನ ಮಾಡುತ್ತಿದ್ದಿರಬೇಕು. ಅವನ ಊಟ ಪ್ರಾಯಶಃ ವಾಲ್ಮೀಕಿಯ ಊಟದಂತಿರಲಿಲ್ಲ. ರುಚಿಯಾದ ಭೋಜನವನ್ನೇ ಮಾಡುವ ಆಸೆ ಅಥವಾ ನಾಲಗೆಯ ಚಪಲ ಅವನಿಗೆ ಇದ್ದಿರಬಹುದು; ಅವನು ನಿಶ್ಚಯವಾಗಿಯೂ ಮಾಂಸತಿನ್ನುವವನೇ ಆಗಿದ್ದಿರಬಹುದು.

ಇಷ್ಟಾದರೂ ಮುಸಲ್ಮಾನರ ಬಗ್ಗೆ, ಮಹಿಳೆಯರ ಬಗ್ಗೆ ಉದಾರ ಮನೋಭಾವನೆಯನ್ನು ಇಟ್ಟುಕೊಂಡಿರುವ ಈ ಆಧುನಿಕ ವಸಿಷ್ಠನಿಗೆ, ಧರ್ಮಾಂಧ ಬ್ರಾಹ್ಮಣ ಎಂಬ ಬಿರುದನ್ನು ಕೊಡಬಹುದೆ ? ಎಂಬ ಪ್ರಶ್ನೆ ಇದ್ದೇ ಇದೆ. ನಾನು ಈ ವಿಷಯವಾಗಿ ಸಾಕಷ್ಟು ಯೋಚನೆ ಮಾಡಿದ್ದೇನೆ, ತುಂಬ ಸಹಾನುಭೂತಿಯಿಂದಲೇ ಆಲೋಚಿಸಿದ್ದೇನೆ. ಈ ಬಗ್ಗೆ ತಳಮಟ್ಟದವರೆಗೆ ಸೂಕ್ಷ್ಮವಾಗಿ ಗಮನಿಸಿದರೆ, ಇದರಲ್ಲಿ ಧರ್ಮಾಂಧತೆಯ ಲಕ್ಷಣಗಳು ತಲೆದೋರುತ್ತವೆ; ಈ ಉದಾರತೆ ಎಂಬುದೆಲ್ಲ ಸೋಗು ಎಂದು ಚೆನ್ನಾಗಿ ಅರ್ಥವಾಗುತ್ತದೆ. ಮಹಿಳೆಯರ ವಿವಾಹ ಮತ್ತು ಆಸ್ತಿಹಕ್ಕಿಗೆ ಸಂಬಂಧಪಟ್ಟ ಕಾನೂನುಗಳ ವಿಚಾರದಲ್ಲಿ ಪ್ರಧಾನಮಂತ್ರಿ ಸ್ವಲ್ಪಮಟ್ಟಿಗೆ ಹಟದ ನಿಲುವನ್ನು ತಳೆದಿದ್ದರು. ಮೇಲೆ ನೋಡುವುದಕ್ಕೆ ಈ ಹಟ ಉದಾರವಾಗಿ, ಮೆದುವಾಗಿ ಕಂಡು ಬರುತ್ತಿತ್ತು. ಆದರೆ, ವಾಸ್ತವವಾಗಿ ಈ ಹಟದ ಹಿಂದೆ ನೂರಾರು ವರ್ಷಗಳಷ್ಟು ಹಿಂದಿನ ಪಾಶ್ಚಾತ್ಯ ಪರಂಪರೆ ದಟ್ಟವಾಗಿ ಕೆಲಸ ಮಾಡುತ್ತಿತ್ತು. ಇದನ್ನೇ ಆಧುನಿಕ ಪರಂಪರೆ ಎಂದು ಕೂಡ ಕರೆಯುವುದುಂಟು. ಇದು ಕೆಟ್ಟದಾಗಿತ್ತೆಂಬುದು ನನ್ನ ಅಭಿಪ್ರಾಯವಲ್ಲ. ಹೆಂಗಸರಿಗೆ ಗಂಡಸರಿಗಿರುವಷ್ಟೇ

ಸಮಾನವಾಗಿ ಹಕ್ಕುಗಳು ಸವಲತ್ತುಗಳು ದೊರೆಯಲೇಬೇಕು. ನಿಜ ಹೇಳಬೇಕೆಂದರೆ ಇನ್ನೂ ಹೆಚ್ಚಾಗಿಯೇ ದೊರೆಯಬೇಕು. ಆಗ ಮಾತ್ರ ನಿಜವಾದ ಸಮಾನತೆ ಮೂಡುವುದು ಸಾಧ್ಯ. ಆದರೆ ಹೆಣ್ಣು-ಗಂಡುಗಳ ಸಮಾನತೆಯ ದಿಕ್ಕಿನಲ್ಲಿ ಈ ಪ್ರಧಾನಮಂತ್ರಿಯವರು ಯಾವುದೇ ದೊಡ್ಡ ಹಾಗೂ ಉದಾರವಾದ ಹೆಜ್ಜೆಯನ್ನು ಮುಂದಿಟ್ಟಿಲ್ಲ.

ಭಾರತದ ಶೇಕಡ ಎಂಬತ್ತರಷ್ಟು ಮಂದಿ ಮಹಿಳೆಯರಿಗೆ ಈ ಕಾನೂನುಗಳಿಂದ ಆಗುವ ಪ್ರಯೋಜನವಾದರೂ ಏನು? ಇಂದಿನ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಚೌಕಟ್ಟಿನಲ್ಲಿ ಎಷ್ಟರಮಟ್ಟಿಗೆ ಇದು ಸಾಧ್ಯವಾಗಬಲ್ಲದೋ ಅಲ್ಲಿಯವರೆಗೆ ಈ ಸವಲತ್ತುಗಳು ಅವರಿಗೆ ಇರುವಂಥವೇ. ಇದರ ಪ್ರಯೋಜನ ಉಂಟಾಗುವುದು- ಬ್ರಾಹ್ಮಣ, ಬನಿಯಾ ಮತ್ತು ಠಾಕೂರ್‌ಸಮುದಾಯಗಳ ಹೆಂಗಸರಿಗೆ. ಪುನಃ ಅದೇ ಗುಂಪುಗುಳಿತನದ ಸ್ವಾರ್ಥ ಮನೋಭಾವ. ಅದೇ ಆಧುನಿಕತೆಯ ಹೆಸರಿನಲ್ಲಿ ಮತ್ತೆ ಮತ್ತೆ ಡಂಗುರ ಹೊಡೆಯುವ ಒಣಚಪಲ. ಆದರೂ ಈ ಸಂಬಂಧದ ಉದ್ದೇಶ ಒಳ್ಳೆಯದಾಗಿತ್ತೆಂದು ನಾನು ಮತ್ತೆ ಹೇಳುತ್ತೇನೆ. ಧರ್ಮ ಮತ್ತು ಸಂಪ್ರದಾಯದ ಹಿನ್ನೆಲೆಯ ಬ್ರಾಹ್ಮಣ ಎಂದೂ ಒಳ್ಳೆಯ ಕೆಲಸವನ್ನೇ ಮಾಡುವುದಿಲ್ಲ ಎಂದು ಕೂಡ ನಾನು ಹೇಳುತ್ತಿಲ್ಲ. ಎಷ್ಟೇ ಚಿಕ್ಕ ಗುಂಪು ಇಲ್ಲವೆ ಸಮುದಾಯವಾಗಿರಲಿ, ಅದಕ್ಕೆ ದೊರೆತಂತಹ ಸ್ವಾತಂತ್ರ್ಯದ ಪ್ರಮಾಣ ಎಷ್ಟೇ ಚಿಕ್ಕದಾಗಿರಲಿ, ಅದನ್ನು ಯಾವಾಗಲೂ ಗೌರವದಿಂದ ನೋಡುವುದು ಅಗತ್ಯ. ಆದರೆ, ಇಲ್ಲಿನ ಮಿತಿಗಳನ್ನು ಅರ್ಥಮಾಡಿ ಕೊಂಡು ಇದನ್ನೆಲ್ಲ ಗೌರವಿಸಬೇಕು. ಸಣ್ಣ ಸಮುದಾಯಕ್ಕೆ ಅಲ್ಪ ಸ್ವಾತಂತ್ರ್ಯ ಕೊಟ್ಟ ಕೆಲಸವೇನೊ ಚೆನ್ನಾಗಿತ್ತು, ಆದರೆ ಅದೆಲ್ಲ ಅರ್ಥಮರ್ಥವಾಗಿ ಉಳಿಯಿತು; ದ್ವಿಜಸ್ವಾರ್ಥದ ಕಾರ್ಯ ಎನ್ನಿಸಿಕೊಂಡಿತು. ಅದೇ ವಾಲ್ಮೀಕಿಯಾಗಿದ್ದರೆ ಶೇಕಡ ಎಂಬತ್ತರಷ್ಟು ಮಹಿಳೆಯರ ಬಗ್ಗೆ ಕೂಡ ಯೋಚನೆಮಾಡುತ್ತಿದ್ದ. ಉದಾರ ಮನಸ್ಸಿನಿಂದ ಈ ಬಹುಪಾಲು ಹೆಂಗಸರ ಎಲ್ಲ ಬಗೆಯ ಬವಣೆಗಳ ಬಗೆಗೆ ಗಾಢವಾಗಿ ಚಿಂತಿಸಿ ಏನಾದರೂ ಪರಿಹಾರ ಕಂಡುಹಿಡಿಯುತ್ತಿದ್ದ. ಅದರಲ್ಲೂ ಕುಡಿಯುವ ನೀರು ಮತ್ತು ಕಕ್ಕಸ್ಸಿನ ಸಮಸ್ಯೆ. ಭಾರತದ ಮಹಿಳೆಯರ ಒಂದು ಬಹುದೊಡ್ಡ ಗೋಳು ಏನೆಂದರೆ ಸೂರ್ಯಹುಟ್ಟುವುದಕ್ಕಿಂತ ಮುಂಚೆ ಇಲ್ಲವೆ ಸೂರ್ಯ ಮುಳುಗಿದ ಮೇಲೆ ಪಾಯಖಾನೆಗೆ ಹೋಗಬೇಕು. ನೀರನ್ನು ದೂರದಿಂದ ಹೊತ್ತು ತರಬೇಕು. ಅದೂ ಕೊಳಕು ನೀರನ್ನೋ, ಪಾಚಿಕಟ್ಟಿದ ನೀರನ್ನೋ ತುಂಬ ಶ್ರಮಪಟ್ಟು ದೂರದಿಂದ ಹೊತ್ತುತರಬೇಕು. ಪಾಯಖಾನೆ ಮತ್ತು ನೀರಿನ ನರಕದ ಕಲ್ಪನೆಯೇ ಪ್ರಾಯಶಃ ವಸಿಷ್ಠರಿಗೆ ಇದ್ದಿರಲಾರದು. ಒಂದು ವೇಳೆ ಇದ್ದರೂ ಅದರ ಬಗ್ಗೆ ಯೋಚಿಸುತ್ತಿರಲಿಲ್ಲ. ಯೋಚಿಸಿದ್ದರೂ ಸಹ, ಅದೆಲ್ಲ ಉಂಡುಟ್ಟು ತೀರಾ

ವಿರಾಮವಾಗಿ ಕೂತು ತಂಬಾಕಿನ ಉಂಗುರ ಉಂಗುರ ಹೊಗೆಯ ನಡುವೆ ಮಾತ್ರ ಸಾಧ್ಯ.

ಆತನ ಆಲೋಚನೆ ಏನಿದ್ದರೂ ಸೀತೆ ಮತ್ತು ಊರ್ಮಿಳೆಯರ ಬಗೆಗೆ ಇರುತ್ತದೆ. ಐದು ಸಾವಿರ ವರ್ಷಗಳ ಹಿಂದಿನ ವಸಿಷ್ಠ, ಸೀತೆಯನ್ನು ಎಷ್ಟು ಕಟ್ಟುಪಾಡಿನಲ್ಲಿ ಇಡಬಯಸುತ್ತಿದ್ದನೆಂದರೆ- ಆ ಬಡಪಾಯಿ ಮಹಿಳೆ ಯಾವಾಗಂದರೆ ಆವಾಗ ಅಗ್ನಿಪರೀಕ್ಷೆಗೆ ಸಿದ್ಧವಾಗಿರಬೇಕಾಗಿತ್ತು. ಆದರೆ, ಇವತ್ತಿನ ವಸಿಷ್ಠ ಸೀತೆಯನ್ನು ಸ್ವಚ್ಛಂದವಾಗಿ ಬಿಟ್ಟುಬಿಡಬಯಸುತ್ತಾನೆ. ಆದರೆ ವಾಸಂತಿ ಮತ್ತು ಕುಶಿಕೆಯರ ಸ್ಥಿತಿಮಾತ್ರ ಹಿಂದಿನದೇ ಆಗಿರುತ್ತದೆ: ಇವರೆಲ್ಲ ಕೇವಲ ವಸಿಷ್ಠನ ಭೋಗಸಾಮಗ್ರಿಗಳಾಗಿ ಮಾತ್ರ ಇವತ್ತಿಗೂ ಇರಬೇಕಾಗಿದೆ. ಔದಾರ್ಯ ಮತ್ತು ಸಮಾನತೆಯ ಆದರ್ಶಗಳು ಈ ಬಡಪಾಯಿಗಳ ತನಕ ತಲುಪುವ ಸಂಭವವೇ ಇಲ್ಲವಾಗಿದೆ.

ನಮ್ಮ ನಡುವಣ ಮುಸ್ಲಿಂ ಬಂಧುಗಳ ಕಥೆಯೂ ಇದೇ ಆಗಿದೆ : ನನಗೆ ಅನ್ನಿಸುವ ಮಟ್ಟಿಗೆ ವಸಿಷ್ಠನ ಮನಸ್ಸಿನಲ್ಲಿ ಮುಸಲ್ಮಾನರ ಬಗ್ಗೆ ಯಾವುದೇ ಪ್ರೀತಿ ಅಥವಾ ಗೌರವ ನಿಜಕ್ಕೂ ಇಲ್ಲವಾಗಿದೆ. ಯಾರ ಬಗ್ಗೆಯೂ ಪ್ರೀತಿಯನ್ನು ಈತ ಇಟ್ಟಿಲ್ಲದಿರುವಾಗ ಅವರ; ಬಗೆಗೆ ಮಾತ್ರವೇನು ವಿಶೇಷ? ಮುಸಲ್ಮಾನ ಕೂಡ ವಸಿಷ್ಠನ ಪಾಲಿಗೆ ಒಂದು ಸರಕಿದ್ದಂತೆ. ರಾಜ್ಯ ಸಂಘಟನೆ ಮಾಡಬೇಕೆನಿಸಿದಾಗ ಮತ್ತು ಪರಂಪರೆಗೆ ಸೇರಿದ ವಿಚಾರಗಳ ಬಗ್ಗೆ ಮಾತಾಡಬೇಕಾದಾಗ, ಸ್ವಾರ್ಥಸಾಧನೆ ಮಾಡಿಕೊಳ್ಳಲೇ ಬೇಕಾದಾಗ ಬಳಸುವ ಏಕಮಾತ್ರ ಉಪಯುಕ್ತ ಸರಕು. ತಮಾಷೆಯ ವಿಷಯವೆಂದರೆ, ಪಟೇಲ್ ಅಥವಾ ಟಂಡನ್ ಜೊತೆ ಸೆಣಸಾಟಕ್ಕೆ ಇಳಿಯುವ ಸಂದರ್ಭದಲ್ಲಿ ಮಾತ್ರ ಈ ಪ್ರಧಾನಮಂತ್ರಿ ಮುಸಲ್ಮಾನರ ಬಗ್ಗೆ ಕಾಳಜಿ ವಹಿಸುತ್ತಾರೆ; ಆ ಜನರ ಸಮಸ್ಯೆಯ ಬಗೆಗೆ ಮಾತಾಡುತ್ತಾರೆ. ತಮ್ಮ ಸಿಂಹಾಸನವನ್ನು ಭದ್ರಪಡಿಸಿಕೊಳ್ಳುವ ಸಲುವಾಗಿ ಮುಸಲ್ಮಾನರನ್ನು ಬಳಸಿಕೊಳ್ಳುತ್ತಾರೆ. ಸಿಂಹಾಸನವನ್ನು ಹಿಡಿದು ಅಲ್ಲಾಡಿಸುವವರು ಯಾರೂ ಇಲ್ಲದಿದ್ದಾಗ ಮುಸಲ್ಮಾನರ ಯೋಚನೆ ಮನಸ್ಸಿನಲ್ಲಿ ಸುಳಿಯುವುದೇ ಇಲ್ಲ. ಕಳೆದ ಕೋಮುಗಲಭೆಗಳ ಕಾಲದಲ್ಲಿ ಈ ವಿಚಾರ ನನಗೆ ಸ್ಪಷ್ಟವಾಯಿತು. ಮೊದಲು ಮುಸಲ್ಮಾನರು ಉದ್ರಿಕ್ತವಾಗುವಂತೆ ಮಾಡಿ ಅವರನ್ನು ಛೂಬಿಡಲಾಯಿತು. ಮಹಮ್ಮದರ ನಿಂದೆಗಾಗಿ ಯಾರಾದರೂ ಒಬ್ಬ ಮಕ್ಕಾ ನಿವಾಸಿ ಅಥವಾ ಕಟ್ಟಾಧರ್ಮಾನುಯಾಯಿ ಸಿಡಿದೇಳುವ ರೀತಿಯಲ್ಲಿ ಪ್ರಧಾನಿ ಭುಗಿಲೆದ್ದರು. ಅದೇ ಮುಸಲ್ಮಾನರು ಉದ್ರಿಕ್ತರಾದಾಗ ಅವರನ್ನು ಪಾಕಿಸ್ತಾನದ ಏಜಂಟರೆಂದು ಕೂಡಲೇ ಹೆಸರಿಸಿ ನಿರುತ್ಸಾಹಗೊಳಿಸಿದರು. ಆ ಬಡಪಾಯಿಗಳು ಏನೂ ಮಾಡಲಾಗದೆ ತೆಪ್ಪಗಾದರು. ಭಾರತೀಯ ಮನಸ್ಸು

ಹೇಗಿರುತ್ತದೆಂದರೆ, ರಾಮನಿಂದೆಯನ್ನಾಗಲಿ, ಮಹಮ್ಮದ್ ನಿಂದೆಯನ್ನಾಗಲಿ ಧೈರ್ಯದಿಂದ ಕೇಳಬಲ್ಲದು. ಕಡೇ ಪಕ್ಷ ಕೇಳಿಸಿಕೊಂಡರೂ ರಕ್ತ ಹರಿಸಲಾಗದ, ಪುಸ್ತಕಗಳನ್ನು ಸುಟ್ಟುಹಾಕಲಾರದ ಮನಸ್ಸು ಇದು. ಹಾಗೆಯೇ ಭಾರತೀಯ ಮನಸ್ಸು ಹಾದಿತಪ್ಪಿದ ಪ್ರತಿಯೊಬ್ಬ ಸ್ವದೇಶಿಯನ್ನು ದೇಶದ್ರೋಹಿ, ಇಲ್ಲವೆ ಪಾಕೀಸ್ತಾನಿ ಎಂದು ಹೆಸರಿಟ್ಟು ಕರೆದು ನಿಂದಿಸುತ್ತದೆ : ಅಷ್ಟಲ್ಲದೆ ''ಗಡೀಪಾರು ಮಾಡು'', ''ತಲೆ ಕತ್ತರಿಸು'' ಮೊದಲಾದ ಅದೇ ಅಸಹನೆ ತುಂಬಿದ ವಸಿಷ್ಠನ ಮಾತುಗಳು.

ಮುಸಲ್ಮಾನರ ವಿಚಾರದಲ್ಲಿ ಪ್ರಧಾನಿಗೆ ಯಾವ ಕಾಳಜಿಯೂ ಇಲ್ಲ. ಒಂದುವೇಳೆ ಇದ್ದಿದ್ದರೆ, ಹಿಂದೂ ಮತ್ತು ಮುಸಲ್ಮಾನರ ನಡುವಣ ವೈಮನಸ್ಯದ ಕಾರಣಗಳನ್ನು ಮೂಲದಲ್ಲಿಯೇ ಕಂಡುಹಿಡಿದು ಅವನ್ನೆಲ್ಲ ಬುಡಸಹಿತ ಕಿತ್ತೊಗೆಯುವ ಪ್ರಾಮಾಣಿಕ ಪ್ರಯತ್ನವನ್ನು ಅವರು ನಿತ್ಯವೂ ಮಾಡುತ್ತಿದ್ದರು. ಕೇವಲ ಹಿಂದೂಗಳನ್ನು ಮಾತ್ರ, ಇಲ್ಲವೇ ಕೇವಲ ಮುಸಲ್ಮಾರನ್ನು ಮಾತ್ರವೇ ಖುಷಿಪಡಿಸುವ ಪ್ರಯತ್ನಗಳ ಈ ವಿಷಮ ಸನ್ನಿವೇಶ ನಮ್ಮ ಮುಂದೆ ಖಂಡಿತಾ ಇರುತ್ತಿರಲಿಲ್ಲ. ನ್ಯಾಯ ಔದಾರ್ಯಗಳಿಂದ ಮತ್ತು ಅಗತ್ಯಬಿದ್ದಾಗ ದೃಢಮನಸ್ಸಿನಿಂದ ಕಾರ್ಯಸಾಧನೆ ಮಾಡಬಹುದಿತ್ತೆ ವಿನಾ ಈ ಬಗೆಯ ಕಠೋರತೆ ಹಾಗೂ ಸಂಪ್ರದಾಯ ನಿಷ್ಠತೆಗಳಿಂದಲ್ಲ. ಬಹುಶಃ ಈ ಹೊತ್ತಿಗೆ ಗುರಿಸಾಧನೆಯೂ ಆಗುತ್ತಿತ್ತೊ ಏನೋ? ಭಾರತದಲ್ಲಿರುವ ಮುಸಲ್ಮಾನರು ಎಂದಿನಿಂದ ನಿಜವಾದ ಮನಸ್ಸಿನಿಂದ ಈ ನಾಡಿನ ಆರಾಧಕರಾಗುತ್ತಾರೋ, ಅಂದಿನಿಂದ ಪಾಕೀಸ್ತಾನದ ಅಡಿಪಾಯ ಅಲ್ಲಾಡಲು ಪ್ರಾರಂಭವಾಗುತ್ತದೆ. ಇವರು ಈ ರೀತಿ ಆರಾಧಕರಾಗಬೇಕಾದರೆ, ಹಿಂದೂ-ಮುಸಲ್ಮಾನರಿಬ್ಬರ ಮನಸ್ಸುಗಳನ್ನೂ ಬದಲಾಯಿಸಬೇಕಾಗುತ್ತದೆ. ಅವರ ಲೌಕಿಕ ಏಳಿಗೆಗಾಗಿ ಕೆಲವಾರು ಕಲ್ಯಾಣಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಈ ಜನರ ಹೊಟ್ಟೆ ಬಟ್ಟೆಯ ಸ್ಥಿತಿಗಳು ಚಿಂತಾಜನಕವಾಗಿವೆ. ಗ್ರಾಮೋದ್ಯೋಗಗಳು, ಕುಶಲಕೈಗಾರಿಕೆಗಳು ದುಸ್ಥಿತಿಯಲ್ಲಿವೆ; ಬೇಸಾಯ ಹೀನಗತಿಯಲ್ಲಿದೆ. ಹೆಚ್ಚುಮಂದಿ ಮುಸಲ್ಮಾನರು ಅವಲಂಬಿಸಿರುವುದು ಈ ಎರಡು ಜೀವನೋಪಾಯಗಳನ್ನೇ. ಹೆಂಗಸರಪಾಲಿಗೆ ಹೇಗೆ ನೀರು, ಪಾಯಖಾನೆಗಳ ಸರಿಯಾದ ವ್ಯವಸ್ಥೆಯಿಲ್ಲವೋ, ಹಾಗೆಯೇ ಸಣ್ಣಕೈಗಾರಿಕೆ ಹಾಗೂ ಸಣ್ಣ ಪ್ರಮಾಣದ ಬೇಸಾಯದ ಕಡೆ ಗಮನಹರಿಸುವವರು ಯಾರೂ ಇಲ್ಲ. ದೊಡ್ಡ ದೊಡ್ಡ ಅತ್ಯಾಧುನಿಕ ಕಟ್ಟಡಗಳನ್ನು ಕಟ್ಟುವ, ಕಾರ್ಖಾನೆಗಳನ್ನು ನಡೆಸುವ ಆಸಕ್ತಿ ಈ ಜನಕ್ಕೆ ಅಗಾಧವಾಗಿದೆ. ಆದರೆ ಇವುಗಳ ಶೇಕಡ ತೊಂಬತ್ತರಷ್ಟು ಪ್ರಯೋಜನ ದೊರಕುವುದು ದ್ವಿಜರಿಗೆ. ಈ ದ್ವಿಜರಲ್ಲೂ ಶೇಕಡ ತೊಂಬತ್ತಕ್ಕಿಂತ ಹೆಚ್ಚುಮಂದಿ ಕರಾಳ ಬಡತನದ ದವಡೆಗೆ

ಸಿಕ್ಕಿರುವವರು. ಅಂದಮೇಲೆ ಈ ಆಧುನಿಕತೆಯ ಪ್ರಯೋಜನ ಪಡೆಯುವವರು ಅದರಲ್ಲೂ ಉಳಿದ ಶೇಕಡ ಹತ್ತು ಮಂದಿ ಮಾತ್ರ. ಇವರೆಲ್ಲ ಅದೇ ಪೈಜಾಮಾ ಅಥವಾ ಚೂಡೀದಾರ್ ಇಲ್ಲವೆ ಇಂಥದೇ ಇನ್ನೊಂದನ್ನು ಧರಿಸಿರುವವರು; ಹೇಗೂ ಈ ಜನ ಸಂಪ್ರದಾಯನಿಷ್ಠ ವಸಿಷ್ಠರೇ ತಾನೇ.

ವಸಿಷ್ಠ ಗುಣವಂತ; ಅವನ ಗುಣಗಳ ಬಗೆಗೆ ನನಗೆ ಗೊತ್ತಿಲ್ಲವೆಂದು ತಿಳಿಯಬೇಡಿ. ಪ್ರಧಾನಮಂತ್ರಿ ಮಾತಿನ ರಾಜ; ಅದರಲ್ಲೂ ಈಗ ಚಲಾವಣೆಯಲ್ಲಿರುವ ಮಾತುಗಳ ರಾಜ; ಐತಿಹಾಸಿಕ ಮಾತುಗಳ ಒಡೆಯನಲ್ಲ. ಸಮಯಕ್ಕೆ ತಕ್ಕಂತೆ ಮಾತುಗಳ ಬಳಕೆ ಮಾಡದೆಹೋದರೆ ರಾಜಕೀಯದಲ್ಲಿ ಯಶಸ್ಸು ದೊರೆಯಲು ಸಾಧ್ಯವೇ ಇಲ್ಲ. ಆದರೆ, ಆ ಯಶಸ್ಸು ಕ್ಷಣಿಕವಾದುದು. ನೆನಪಿಡಿ : ದೇಶ ಅದನ್ನೆಲ್ಲ ಬೇಗ ಮರೆತುಬಿಡುತ್ತದೆ. ಅದೂ ಹೇಗೆ ಮರೆತು ಬಿಡುತ್ತದೆಂದರೆ- ನೆನ್ನೆ ಚಿನ್ನದ ಪಾತ್ರೆಯೆಂದು ಎಲ್ಲರೂ ತಿಳಿದುಕೊಂಡಿದ್ದು ಇಂದು ಮಣ್ಣಿನ ಪಾತ್ರೆಯೆಂದು ತಿಳಿದಾಗ, ತಿರಸ್ಕಾರದಿಂದ ಅದನ್ನು ಒಡೆದು ದೂರಕ್ಕೆ ಬಿಸಾಡುವಂತೆ ರೊಯ್ಯನೆ ಎಸೆಯುತ್ತಾರೆ. ಐತಿಹಾಸಿಕ ಶಬ್ದಗಳ ವಿಚಾರಮಾತ್ರ ಬೇರೊಂದು ರೀತಿಯದು: ಅದರಿಂದ ಒಂದು ನಾಡಿನ ಇಲ್ಲವೆ ಒಬ್ಬ ಹೊಸ ವ್ಯಕ್ತಿಯ ನಿರ್ಮಾಣ ಆಗುತ್ತದೆ. ಆದರೆ ಇದು ತುಂಬಾ ನಿಧಾನಕ್ಕೆ ಆಗುವಂಥದ್ದು. ಇದಕ್ಕೆ ಕೆಲವೊಮ್ಮೆ ಹತ್ತಾರು ವರ್ಷಗಳು, ಐವತ್ತು ವರ್ಷಗಳು ಕೂಡ ಹಿಡಿಯುತ್ತವೆ. ಚಾರಿತ್ರಿಕ ಮಹತ್ವದ ಮಾತುಗಳು ಮತ್ತು ಸಮಕಾಲೀನ ಮಹತ್ವದ ಮಾತುಗಳು ಒಂದೆಡೆ ಸೇರುವ ಸಂದರ್ಭಗಳು ದೊರೆಯುವುದಾದರೂ ಎಲ್ಲಿ? ಗಾಂಧೀಜಿಯಂಥವರೊಬ್ಬರು ಇದ್ದರೆ ತಾನೆ!

ವಸಿಷ್ಠನ ಮನಸ್ಸು ತನ್ನೆ ಸಣ್ಣ ವರ್ತುಲದಲ್ಲಿ ತನ್ನವರಿಗಾಗಿ ಮಾತ್ರ ಸಾಕಷ್ಟು ರಸಮಯವಾಗಿರುತ್ತದೆ, ಮಿಡಿಯುವಂತಿರುತ್ತದೆ. ಒಂದು ಸಲ ಹೀಗಾಯಿತು- ಪ್ರಧಾನಮಂತ್ರಿಗಳಿಗೆ ಆರೋಗ್ಯ ಸ್ವಲ್ಪ ಚೆನ್ನಾಗಿರಲಿಲ್ಲ. ಆ ವೇಳೆಗೆ ನಾನು ಅಕಸ್ಮಾತ್ತಾಗಿ ನಗರದಲ್ಲಿದ್ದೆ. ಅವರನ್ನು ನೋಡಲುಹೋದೆ. ಅವರು ಸ್ವಲ್ಪ ಕಳವಳದಿಂದ ಕೂಡಿದ್ದರು. ಅವರ ಮಗಳು ಮಾರನೆಯ ದಿನ ಬೆಳಿಗ್ಗೆ ಹೊರದೇಶದಿಂದ ಹಿಂದಿರುಗಿ ಬರುವವಳಿದ್ದಳು. ವಿಮಾನ ನಿಲ್ದಾಣಕ್ಕೆ ಹೋಗಲು ತಮಗೆ ಸಾಧ್ಯವಾಗುವುದಿಲ್ಲವೇನೋ ಅಂತ ಅವರಿಗೆ ಅನ್ನಿಸುತ್ತಿತ್ತು. ಇದರಲ್ಲಿ ಕಳವಳ ಏಕೆ? ವಿಮಾನನಿಲ್ದಾಣದಲ್ಲಿ ಬೇಕಾದವರು ಅನೇಕಮಂದಿ ಇರುತ್ತಾರೆ, ಆಕೆಯ ಸೋದರತ್ತೆ ಇರುತ್ತಾಳೆ, ಯೋಚನೆಮಾಡಬೇಡಿ ಅಂತ ನಾನು ಅನೇಕ ಬಗೆಯಲ್ಲಿ ಅವರಿಗೆ ಹೇಳಿದೆ. ಆದರೆ, ಮಗಳು ವಿಮಾನ ನಿಲ್ದಾಣದಲ್ಲಿ ತಮ್ಮನ್ನು

ನೋಡದೆಹೋದಾಗ ಏನೆಂದುಕೊಂಡಾಳು? ಗಾಬರಿಗೊಂಡಾಳು ಎಂಬುದು ಅವರ ಚಿಂತೆ. ಯೋಚಿಸಬೇಡಿ, ಅಲ್ಲಿಗೆ ಹೋಗಿರುವ ಜನ ನಿಮಗೆ ಸ್ವಲ್ಪ ಜ್ವರ ಬಂದಿದೆ ಎಂದು ಆಕೆಗೆ ಹೇಳುತ್ತಾರೆ-ಅಂತ ಹೇಳಿದೆ. ಆದರೆ, ಆಗ ಆ ವಸಿಷ್ಠ ಹೇಳಿದ್ದೇನೆಂದರೆ -ಆಕೆ ವಿಮಾನ ಇಳಿದು ತಮ್ಮ ಬಗ್ಗೆ ಆತಂಕಗೊಂಡು ಯಾರನ್ನಾದರೂ ವಿಚಾರಿಸುವಲ್ಲಿ ಒಂದೆರಡು ನಿಮಿಷಗಳು ಉರುಳಿಹೋಗಿರುತ್ತೆ, ಆ ಒಂದೆರಡು ನಿಮಿಷಗಳಲ್ಲಿ ಆಕೆ ಕಳವಳಗೊಂಡು ಏನೆಲ್ಲ ಯೋಚಿಸಿಯಾಳು? ವಸಿಷ್ಠನ ಮನಸ್ಸು ತನ್ನವರಿಗಾಗಿ ಈಗಲೂ ಅದೇ ರೀತಿ ಮಿಡಿಯುತ್ತಿರಬಹುದು. ನಾನೇನೂ ಈ ಬಗ್ಗೆ ಹೇಳಲಾರೆ. ಅವರ ವಸಿಷ್ಠ ಮನಸ್ಸಿನ ನಿಷ್ಠುರತೆ ತನ್ನವರ ಮತ್ತು ಬೇರೆಯವರ ನಡುವಣ ವ್ಯತ್ಯಾಸವನ್ನು ಎಲ್ಲಿಯವರೆಗೆ ತಾನೆ ಕಾಪಾಡಿಕೊಂಡು ಬರಬಲ್ಲದು?

ದೃಢತೆ ಮತ್ತು ಸಂಪ್ರದಾಯನಿಷ್ಠೆ ಇವೆರಡರ ನಡುವೆ ಬಹಳ ವ್ಯತ್ಯಾಸವಿದೆ. ನಿಜವಾಗಿಯೂ ಮನುಷ್ಯನೆಂದೆನಿಸಿಕೊಳ್ಳುವವನು ನಾಲಗೆಯಿಂದ, ಕ್ರಿಯೆಯಿಂದ ದೃಢವಾಗಿರುವುದರಲ್ಲಿ ಸಂದೇಹವಿಲ್ಲ. ಯಾವುದೇ ನಾಡು, ಸರ್ಕಾರ ದೃಢವಾಗಿರಬೇಕಾದ್ದು ಆವಶ್ಯಕ. ಆದ್ದರಿಂದಲೇ ಎಲ್ಲಿಯವರೆಗೆ ಸರ್ಕಾರ, ಆಡಳಿತ ಅಂತೆಲ್ಲ ಇರುತ್ತದೆಯೋ ಅಲ್ಲಿಯವರೆಗೆ ಪ್ರಾಯಶಃ ದಂಡನೆ ಇಲ್ಲವೆ ಶಿಕ್ಷೆಯ ವ್ಯವಸ್ಥೆಯ ಅಗತ್ಯ ಕಂಡುಬರುತ್ತದೆ. ಮನುಷ್ಯ ಒಂದಲ್ಲ ಒಂದು ದಿನ ಯಾವುದೇ ಶಿಕ್ಷೆಯ ವ್ಯವಸ್ಥೆಯಿಲ್ಲದೆ ತನ್ನ ಸಾಮೂಹಿಕ ಬದುಕನ್ನು ಸಾಗಿಸಬಲ್ಲ ಎಂಬ ವಿಷಯವಾಗಿ ನಾವು ಅವಶ್ಯವಾಗಿ ಕನಸುಕಾಣುತ್ತಿರಬೇಕು. ಆದರೆ, ಈ ಕನಸು ನನಸಾಗುವವರೆಗಾದರೂ ಶಿಕ್ಷೆಯ ವ್ಯವಸ್ಥೆ ಇರಲೇಬೇಕಲ್ಲ? ಕಳ್ಳನಿಗೂ ಶಿಕ್ಷೆ, ನನ್ನಂತಹ ಮನುಷ್ಯರಿಗೂ ಶಿಕ್ಷೆ . ಏಕೆಂದರೆ, ನನ್ನಂತಹ ಜನ ಯಾವಾಗಲೂ ಇದ್ದೇ ಇರುತ್ತಾರೆ, ಅಷ್ಟೇಅಲ್ಲ, ಇರಲೇಬೇಕು. ಇಲ್ಲದಿದ್ದರೆ ನಾಡಿನ ವ್ಯವಸ್ಥೆ, ಹರಿಯುವ ಗಂಗಾನದಿಯಂತೆ ಇರುವುದಕ್ಕೆ ಬದಲಾಗಿ ಕೊಳೆತುನಾರುವ ಕೊಚ್ಚೆಗುಂಡಿ ಯಂತಾಗುತ್ತದೆ. ಶಿಕ್ಷೆಯ ಸ್ವರೂಪ ಹಾಗೂ ಪ್ರಮಾಣ ಎಷ್ಟಿರಬೇಕು ಎಂಬುದಷ್ಟೇ ಇಲ್ಲಿರುವ ಪ್ರಶ್ನೆ. ಶಿಕ್ಷೆ, ಯಾವಾಗಲೂ ವಿಧಿ ವಿಧಾನಗಳಿಗೆ ಅನುಸಾರವಾಗಿ, ಕಾನೂನಿಗನುಗುಣವಾಗಿ ಇರಬೇಕೇ ಹೊರತು, ಸರ್ಕಾರದಲ್ಲಿ ಆ ಹೊತ್ತು ಅಧಿಕಾರ ಚಲಾಯಿಸುತ್ತಿರುವವರ ಸಿಟ್ಟಿಗೆ ಅನುಗುಣವಾಗಿ ಅಲ್ಲ. ಅರಸನ ತೋಟದಲ್ಲಿ ಒಂದು ಹೂವನ್ನು ಕಿತ್ತದ್ದಕ್ಕೆ ಮರಣದಂಡನೆ ಶಿಕ್ಷೆ ವಿಧಿಸಿದರೆ ಹೇಗೆ? ಅಥವಾ ಹೂವನ್ನೂ ಕಿತ್ತಿಲ್ಲವೆನ್ನಿ, ಕೇವಲ ಹೂಗಿಡಗಳನ್ನು ಹೇಗೆ ಬೆಳೆಸಬೇಕೆಂಬ ದಾರಿಯನ್ನು ಮಾಲಿಗಳಿಗೆ ಹೇಳಿಕೊಟ್ಟದ್ದಕ್ಕೇ ಈ ಬಗೆಯ ಶಿಕ್ಷೆ ಜಾರಿಮಾಡಿದರೆ ಹೇಗೆ? ಶಿಕ್ಷೆಗೂ ಹಗೆತನಕ್ಕೂ ತುಂಬ ವ್ಯತ್ಯಾಸವಿದೆ. ಆಡಳಿತದ ಚುಕ್ಕಾಣಿ ಯಾರ ಕೈಯಲ್ಲಿರುತ್ತದೆಯೋ

ಅಂತಹವರು ತುಂಬ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು. ವಸಿಷ್ಠಪರಂಪರೆ ಹಗೆತನ ಸಾಧಿಸುವಂತಹದು, ಶಿಕ್ಷೆನೀಡುವುದಕ್ಕೆ ಬದ್ಧವಾದುದಲ್ಲ. ಇದೇ ಆದರ ಸ್ವಭಾವ.

ಹಗೆತನವಿರುವೆಡೆಯಲ್ಲಿ ದೃಢತೆ ಇರುವುದಿಲ್ಲ; ಸಂಪ್ರದಾಯಬದ್ಧತೆಯಿರುತ್ತದೆ, ಔದಾರ್ಯದಿಂದ ಕೂಡಿದ ನ್ಯಾಯಪ್ರಿಯತೆ ಇರುವುದಿಲ್ಲ. ಅಂಥ ಕಡೆಗಳಲ್ಲಿ ಸಿದ್ಧಾಂತಗಳ ಬಗೆಗೆ ಆಷಾಢಭೂತಿತನ ಇರುತ್ತದೆ; ಕಪಟ ವಂಚನೆಗಳು ಮನೆಮಾಡುತ್ತವೆ. ತೀರಾ ಸಾಮಾನ್ಯ ಜನರಿಗೆ ಬಡತನದ ದೆಸೆಯಿಂದಾಗಿ ಹಾಲುದೊರೆಯದೆ ಹೋದಾಗ ಅವರು ಕಂಗಾಲಾಗುತ್ತಾರೆ. ಆಗ ವಸಿಷ್ಠ ತನ್ನ ವೀರಘೋಷಣೆಯ ಮೂಲಕ ತಾನೂ ಹಾಲು ಕುಡಿಯುವುದಿಲ್ಲವೆಂದು ಪ್ರಕಟಿಸುತ್ತಾನೆ. ಹಾಲಿಗೆ ಬದಲಾಗಿ ಅವನು ಎಷ್ಟು ಹೆಚ್ಚಿನ ಮಾಂಸ ಮುಂತಾದ ಪೌಷ್ಟಿಕ ಆಹಾರವನ್ನು ತಿಂದು ಮುಗಿಸುತ್ತಾನೆ? ಇದರ ಲೆಕ್ಕ ಎಲ್ಲೂ ಹೊರಬರುವುದಿಲ್ಲ. ಒಂದು ವೇಳೆ ಅವನು ಮಾಂಸಾಹಾರಿಯಲ್ಲದ ವಸಿಷ್ಠನಾದರೆ, ಬೇರೆ ಬೇರೆ ರೂಪದಲ್ಲಿ ಪ್ರತಿದಿನ ಎಷ್ಟು ಸೇರು ಹಾಲನ್ನು ಸೇವಿಸುತ್ತಾನೋ, ಅದರ ಲೆಕ್ಕವನ್ನು ಮುಚ್ಚಿಟ್ಟು ತನ್ನ ಊಟದಲ್ಲಿ ಅರ್ಧ ಚಟಾಕು ಅಕ್ಕಿಯನ್ನೋ ಗೋಧಿಯನ್ನೋ ಕಡಿಮೆ ಮಾಡಿರುತ್ತೇನೆಂದು ಡಂಗುರ ಹೊಡೆಯುತ್ತಾನೆ. ವಸಿಷ್ಠ ತನ್ನ ಧಾರ್ಮಿಕ ಆಡಂಬರದ ಕಪಟ ವಲಯವನ್ನು ಸುತ್ತಲೂ ವಿಸ್ತರಿಸುತ್ತಾನೆ. ಯಾವುದೇ ಒಬ್ಬ ಮನುಷ್ಯನ ನೀತಿನಿಯಮಗಳನ್ನು, ಸಿದ್ಧಾಂತಗಳನ್ನು ಮೊದಲಿಗೆ ಯುದ್ಧತಂತ್ರವೆಂದು ನಿರಂತರವಾಗಿ ಜರಿಯುತ್ತ ಬಂದಿದ್ದರೂ, ವಸಿಷ್ಠ ತನಗೆ ಆಗತ್ಯಬಿದ್ದಾಗ ಅಂತಹ ವ್ಯಕ್ತಿಯನ್ನು ಬುದ್ಧನ ಅವತಾರವಾಗಿ ಮಾಡಿಬಿಡುತ್ತಾನೆ. ತನಗಿಂತ ಹೆಚ್ಚು ಶಕ್ತಿಯುಳ್ಳವರೊಡನೆ ಮಾನವ ಅಧಿಕಾರ, ಪ್ರಜಾತಂತ್ರ, ಸಹಬಾಳ್ವೆ ಮುಂತಾದ ವಿಷಯಗಳ ಬಗ್ಗೆ ದೊಡ್ಡದಾಗಿ ಚರ್ಚಿಸುವ ಈತ, ಅದೇವೇಳೆಗೆ ತನಗಿಂತ ದುರ್ಬಲರಾದವರನ್ನು ನ್ಯಾಯಾಲಯದ ಕಟಕಟೆಗೆ ಎಳೆದುತಂದು, ಹಿಂಸಿಸಿ ಖುಷಿಪಡುತ್ತಾನೆ! ನ್ಯಾಯಾಲಯವನ್ನು ಸಹ ಹಿಂಸಾಲಯವನ್ನಾಗಿ ಪರಿವರ್ತಿಸಬಲ್ಲವನಾಗಿದ್ದಾನೆ.

ಸಿದ್ಧಾಂತಗಳು ಸ್ವಾರ್ಥ ಇಲ್ಲವೆ ತನ್ನ ಗುಂಪಿನ ಸ್ವಾರ್ಥದ ಸಾಮಗ್ರಿಗಳೆನಿಸಿಬಿಟ್ಟಾಗ, ಅವುಗಳಿಗೆ ಹಾಗೂ ಸತ್ಯಕ್ಕೆ ಯಾವ ನಿಚ್ಚಳವಾದ, ವ್ಯಾಪಕವಾದ ಸ್ಥಾಯಿಯೆನಿಸಬಹುದಾದ ರೂಪವೂ ಇರುವುದಿಲ್ಲ. ಬೂಟಾಟಿಕೆತನ ಪ್ರಾರಂಭವಾಗುವುದು ಅಲ್ಲಿಂದಲೇ. ಭಾರತದಂತಹ ವಿಭಿನ್ನ ವೃತ್ತಿಗಳನ್ನು ಹೊಂದಿರುವ ಪ್ರಾಚೀನ ದೇಶವು ಸತ್ಯ ಹಾಗೂ ಖಚಿತವಾದ ಸಿದ್ಧಾಂತಗಳ ನೆಲೆಗಟ್ಟಿನ ಮೇಲೆ ಭದ್ರವಾಗಿ ನಿಲ್ಲಬಲ್ಲದು. ಬೂಟಾಟಿಕೆ ಹಾಗೂ ಸಂಪ್ರದಾಯ ನಿಷ್ಠತೆಗಳು ಈ

ನೆಲೆಗಟ್ಟನ್ನು ಇನ್ನೂ ಹಾಳುಗೆಡವುತ್ತವೆ. ಜಿನ್ನಾ ತಮ್ಮ ಹಟಮಾರಿತನದಿಂದ ಭಾರತವನ್ನು ಒಡೆದರು ಎಂಬುದು ನಿಸ್ಸಂದೇಹವಾದ ವಿಚಾರ. ಅದರೊಟ್ಟಿಗೆ ನೆಹರೂರವರ ಸಮಯಸಾಧಕತನ ಹಾಗೂ ಬೂಟಾಟಿಕೆಗಳು ಈ ಹಟಮಾರಿತನವನ್ನು ಈಡೇರಿಸಿಕೊಳ್ಳುವಲ್ಲಿ ನೆರವಾದವು; ಮುಸ್ಲಿಂ ಲೀಗಿನ ಖಲೀಕುಜ್ಜಮಾನ್ ಅವರಿಗೆ ಮಾತುಕೊಟ್ಟರು. ಅವರೊಡನೆ ಹೊಂದಾಣಿಕೆ ಮಾಡಿಕೊಂಡು 1936ರ ಚುನಾವಣೆಯ ಕಣದಲ್ಲಿ ಸ್ಪರ್ಧೆಗಿಳಿದರು. ಆದರೆ ಗೆಲುವು ಖಡಾಖಂಡಿತ ಎನಿಸಿದ ಕೂಡಲೇ ತಮ್ಮ ವಾಗ್ದಾನವನ್ನು ಮಣ್ಣುಪಾಲುಮಾಡಿದರು, ಗೆಳೆಯನನ್ನು ದೂರತಳ್ಳಿದರು. ಈಗಲೂ ಅದೇ ಸಿದ್ಧಾಂತ ಹೀನತೆ, ಸಮಯಸಾಧಕತನ, ಬೂಟಾಟಿಕೆಗಳದ್ದೇ ಮೇಲುಗೈ ಆಗಿದೆ. ವಸಿಷ್ಠ ತನ್ನ ಸ್ವಾರ್ಥ ಹಾಗೂ ಪರಂಪರೆಗಳ ತೆಕ್ಕೆಗೆ ಬಿದ್ದೇ ಮುಂದುವರಿಯುತ್ತಿದ್ದಾನೆ. ಆದರೆ ಪಂಜಾಬು, ಮಹಾರಾಷ್ಟ್ರ ಮತ್ತು ತಮಿಳುನಾಡುಗಳಿಗೆ ಆಗುತ್ತಿರುವುದೇನು? ಹಾಗೆಯೇ ಇನ್ನೂ ಎಲ್ಲೆಲ್ಲಿ ಏನೇನು ಆಗಬೇಕಾಗಿದೆಯೊ? ಖಾನ್ ಅಬ್ದುಲ್ ಗಫಾರ್ ಖಾನ್ ಅವರ ಬಗ್ಗೆ ನೆನಪಿರ ಬೇಕಲ್ಲವೆ? ಗಾಂಧೀಜಿಯವರ ನಿಜವಾದ ವಾಲ್ಮೀಕಿ ಪರಂಪರೆಯ ಅನುಯಾಯಿ ಅವರು. ಸಿಂಹಾಸನ ಎದುರಿಗೆ ಕಂಡಕೂಡಲೇ ಅದು ಮುರಿದು ಹಾಳಾಗಿದ್ದರೇನಂತೆ, ವಸಿಷ್ಠ ಅದರತ್ತ ಮುಖಮಾಡಿ ಧಾವಿಸಿದ. ಓಟದಲ್ಲಿ ತನಗೆ ಹೆಗಲೆಣೆಯಾಗಲು ಯಾರಿಗೆ ಸಾಧ್ಯವಾಗಲಿಲ್ಲವೋ, ಅವರು ಎಂತಹ ಗೆಳೆಯರಾದರೇನಂತೆ? ಅವರತ್ತ ಒಮ್ಮೆಯೂ ತಿರುಗಿ ಕೂಡ ನೋಡಲಿಲ್ಲ. ರಾಜಕೀಯದಲ್ಲಿ ವೈಯಕ್ತಿಕ ಸ್ನೇಹಕ್ಕೆ ಅವಕಾಶವಿರಬೇಕೆಂದು ನಾನು ಹೇಳುತ್ತಿಲ್ಲ. ಅದು ಗೆಳೆಯರ ಅಖಾಡವಲ್ಲ. ಮನುಷ್ಯನ ಸಲುವಾಗಿ ಹಾಗೂ ನಾಡಿನ ಸಲುವಾಗಿ ಅದೆಷ್ಟು ಸ್ನೇಹಸಂಬಂಧಗಳು ಆಗುತ್ತಿರುತ್ತವೆಯೋ, ಕಡಿಯುತ್ತಿರುವವೊ ಬಲ್ಲವರಾರು? ಆದರೆ, ಸ್ವಾರ್ಥ ಸಾಧನೆಗಾಗಿ ಸ್ನೇಹ ಒಡೆದರೆ ಹೇಗೆ? ಅದೂ ನಿರಂತರವಾಗಿ ಸ್ನೇಹ ಒಡೆದರೆ ಹೇಗೆ, ಬೇಗಬೇಗನೆ, ಒಳ್ಳೆಯವರ ಜೊತೆ ಸ್ನೇಹ ಇನ್ನಿಲ್ಲವಾಗುತ್ತಾ ಹೋದರೆ ಹೇಗೆ?

ಭಾರತ ತುಂಬ ಕ್ರೂರಿಯಾಗಿ ಹೋಗಿದೆ. ಅಹಿಂಸೆ ಮತ್ತು ದಯೆಗಳ ಇನ್ನೊಂದು ಹೆಸರಾಗಿದ್ದ ಈ ದೇಶ, ಪ್ರಾಯಶಃ ಪ್ರಪಂಚದಲ್ಲೇ ಅತ್ಯಂತ ಕ್ರೂರವಾದ ನಾಡಾಗಿದೆ. ನಾನು ಈ ಸಲ ಇಲ್ಲಿ ಬಂಧಿಯಾಗುವುದಕ್ಕಿಂತ ಮುಂಚೆ ನನ್ನ ಒಬ್ಬಳು ಗೆಳತಿ ತನ್ನ ಪತಿಯೊಡನೆ ನನ್ನನ್ನು ಕಲ್ಕತ್ತೆಯ ಮೃಗಾಲಯವನ್ನು ನೋಡಲು ಕರೆದುಕೊಂಡುಹೋದರು. ಅಲ್ಲಿ ಎರಡು ಜಪಾನಿ ಕರಡಿಗಳು ಬಂದಿವೆ. ಅವಕ್ಕೆ ಐಸ್‌ಕ್ರೀಂ ಕಂಡರೆ ಬಹಳ ಇಷ್ಟ. ಚೆನ್ನಾಗಿ ಚಪ್ಪರಿಸಿ ಐಸ್‌ಕ್ರೀಂ ತಿನ್ನುತ್ತಿದ್ದವು. ಏಕೋ ಏನೋ, ಇದ್ದಕ್ಕಿದ್ದ ಹಾಗೇ ಕೆಲವು ಕ್ಷಣಗಳ ಕಾಲ ಅವು ಒಂದರ ಮೇಲೊಂದು ಮುನಿಸಿಕೊಂಡವು. ಜಗಳವಾಡಿದವು. ಪರಚಿ ರಕ್ತಬರುವಂತೆ ಕೂಡ ಮಾಡಿಕೊಂಡವು.

ಹೆಚ್ಚು ಗುರುಗುಟ್ಟುತ್ತಿದ್ದುದು ಗಂಡುಕರಡಿ, ಪರಚಿ ಗಾಯಮಾಡಿದ್ದು ಹೆಣ್ಣುಕರಡಿ. ನನಗೆ ಸರಿಯಾಗಿ ಗುರುತಿಸಲು ಸಾಧ್ಯವಾಗದ್ದಿರಬಹುದು. ಅವು ಅಣ್ಣತಮ್ಮಂದಿರೇ ಇದ್ದಿರಬಹುದು. ಆದರೆ ಜಗಳವಾಡಿದ್ದು ಕೆಲವು ಕ್ಷಣಗಳು ಮಾತ್ರ. ಹಂಸಗಳು ಕೂಡ ಸೊಗಸಾಗಿವೆ, ಅದೆಷ್ಟು ಠೀವಿಯಿಂದ ಈಜುತ್ತಾ ಹೋಗುತ್ತವೆ! ನಾಲ್ಕೂ ಕಡೆಗಳಿಗೆ ಕತ್ತನ್ನು ಬೇರೆ ಬೇರೆ ರೀತಿಯಲ್ಲಿ ಕೊಂಕಿಸುತ್ತಾ ಸಾಗುತ್ತವೆ. ನಿಜವಾಗಿಯೂ ಹಂಸನೃತ್ಯವನ್ನು ನೋಡಿದ ಸೊಗಸಾದ ಅನುಭವ. ಭಾರತದ ಎಲ್ಲ ಮಂತ್ರಿಗಳೂ ಆಗಾಗ್ಗೆ ಮೃಗಾಲಯಕ್ಕೆ ಭೇಟಿಕೊಡುವುದು ಒಳ್ಳೆಯದು. ಹಾಗೆ ಮಾಡಿದರೆ ಇನ್ನೆಂದೂ ಕ್ರೌರ್ಯದಿಂದ ವರ್ತಿಸುವುದಿಲ್ಲವೇನೊ? ನಿಜವಾದ ಸಂಗತಿಯೆಂದರೆ, ಆ ದಿನ ಅರುಣಾ ನನಗೆ ಧರ್ಮಯುದ್ಧ ಸಾರುವಂತೆ ಹೇಳಿದಳು, ಪ್ರಾಣಿಗಳ ಮೇಲೆ ಮನುಷ್ಯ ನಡೆಸುತ್ತಿರುವ ಕೌರ್ಯದ ವಿರುದ್ಧವಾಗಿ.

ಆ ಹೊತ್ತು ನಾನು ಆ ಮಾತಿನ ಕಡೆ ಹೆಚ್ಚು ಗಮನ ಹರಿಸಲಿಲ್ಲ. ಈ ಮಾಂಸತಿನ್ನುವ ಹೆಂಗಸು, ಅದರಲ್ಲೂ ನನಗೆ, ಪ್ರಾಣಿಗಳ ಬಗ್ಗೆ ಅನುಕಂಪದ ಮಾತಾಡುತ್ತಿದ್ದಾಳೆ. ಬಹುಕಾಲದಿಂದ ನನಗೆ ಚೆನ್ನಾಗಿ ಗೊತ್ತಿರುವ ಒಂದು ವಿಷಯವೇನೆಂದರೆ, ಬಹಳಷ್ಟುಮಂದಿ ಶಾಕಾಹಾರಿಗಳು ತಮ್ಮ ದನಕರುಗಳ ವಿಚಾರದಲ್ಲಿ ಎಷ್ಟು ಕೆಟ್ಟದಾಗಿ ನಡೆದುಕೊಳ್ಳುತ್ತಿರುತ್ತಾರೆಂದರೆ, ಮಾಂಸಾಹಾರಿಗಳು ಕೂಡ ಅವುಗಳ ಬಗ್ಗೆ ಅಷ್ಟು ಕೆಟ್ಟದಾಗಿ ನಡೆದುಕೊಳ್ಳುವುದಿಲ್ಲ. ಆದರೂ ನಾನು ಅರುಣಾಗೆ ಹೇಳಿದೆ–ನೀನು ಮಾಂಸ ತಿನ್ನುವುದನ್ನು ಏಕೆ ಬಿಟ್ಟುಬಿಡಬಾರದು? ಆಕೆ ಬಾಯಿರುಚಿ, ಅಭ್ಯಾಸ ಹಾಗೂ ಹುಟ್ಟಿನಿಂದ ಬಂದ ಆಹಾರ ಪದ್ಧತಿ ಮುಂತಾದ ವಿಚಾರಗಳ ಬಗ್ಗೆ ಹೇಳಿದಳು. ಆಕೆ ಒತ್ತಿಹೇಳಿದ ಇನ್ನೊಂದು ಮಾತೆಂದರೆ, ಜನ ಬಾಯಿರುಚಿಗಾಗಿ ಮಾಂಸ ತಿನ್ನುವ ಅಭ್ಯಾಸವನ್ನು ಎಲ್ಲಿಯವರೆಗೆ ಬಿಡಲೊಲ್ಲರೊ, ಅಲ್ಲಿಯವರೆಗೆ ಪ್ರಾಣಿಗಳನ್ನು ಆಹಾರಕ್ಕಾಗಿ ವಧಿಸುವ ರೀತಿಯಲ್ಲಿ ಸಾಧ್ಯವಾದಷ್ಟೂ ಕ್ರೌರ್ಯವನ್ನು ಕಡಿಮೆಮಾಡಬೇಕು. ಬಡಪಾಯಿ ಪ್ರಾಣಿಗಳನ್ನು ಜನ ಅದೆಷ್ಟು ನಿರ್ದಯವಾಗಿ ಕೊಲ್ಲುತ್ತಾರೆ? ಒಂದು ವಿಚಾರ ಕೇಳಿ ನಾನು ಸ್ತಂಭೀಭೂತನಾದೆ. ಕಲ್ಕತ್ತೆಯ ಮಾರುಕಟ್ಟೆಗಳಲ್ಲಿ, ಜೀವಂತವಾಗಿರುವ ಆಮೆಯ ಶರೀರದ ಭಾಗಗಳನ್ನು ಕಡಿಕಡಿದು ಮಾರಾಟಮಾಡುತ್ತಾರಂತೆ. ಒಂದೊಂದು ಅಂಗವನ್ನು ಕತ್ತರಿಸಿದಾಗಲೂ ಅದು ಒದ್ದಾಡುತ್ತಿರುವ ದೃಶ್ಯವನ್ನು ಕಲ್ಪಿಸಿಕೊಳ್ಳಿ ? ಇಂಥ ಆಮೆಗಳನ್ನು ಮಾರುವವರು ಯಾರು? ಕತ್ತರಿಸುವವರು ಯಾರು? ಹಾಗೆಯೇ ಕೊಂಡು ತಿನ್ನುವವರು ಎಂಥ ಜನ! ಕುರಿ ಆಡುಗಳಂತಹ ಪ್ರಾಣಿಗಳನ್ನು ಕತ್ತರಿಸುವುದು ಇಷ್ಟು ಭಯಂಕರ ವಲ್ಲದಿದ್ದರೂ ಹೆಚ್ಚು ಕ್ರೂರವಾಗಿರುತ್ತದೆ. ಇವತ್ತಿನ ಭಾರತೀಯರ ಮನಸ್ಸು ತುಂಬ ಕ್ರೂರವಾಗಿದೆ, ಸ್ವೇಚ್ಛಾಚಾರದಿಂದ ಕೂಡಿದೆ. ಏನೂ ಅರಿಯದ ಪ್ರಾಣಿಗಳ

ವಿಚಾರದಲ್ಲಿ ಅಷ್ಟು ಕ್ರೌರ್ಯದಿಂದ ಕೂಡಿರಬಹುದಾದರೆ , ನನ್ನಂತಹ ಮನುಷ್ಯರ ಮೇಲೆ ಪ್ರಹಾರ ನಡೆಯುವುದರಲ್ಲಿ ಅಚ್ಚರಿಯೇನಿದೆ? ನಾನು ಮೊದಲಿನಿಂದಲೂ ಮೂಕಪ್ರಾಣಿಗಳ ಗೆಳೆಯ. ಪಶುಪಕ್ಷಿಗಳ ಬಗ್ಗೆ ಪ್ರೀತಿಯುಳ್ಳವನು; ಈಗಂತೂ ಈ ಪ್ರೀತಿ ಇನ್ನೂ ಹೆಚ್ಚಾಗಿದೆ.

ಕೈಲಾಗದ ಮನುಷ್ಯ ಹೆಚ್ಚು ಕ್ರೂರಿಯಾಗಿರುತ್ತಾನೆ. ಒಣಶೌರ್ಯ ಪ್ರದರ್ಶಿಸಿ ತಾನು ದುರ್ಬಲನಲ್ಲವೆಂದು ತೋರ್ಪಡಿಸಿಕೊಳ್ಳಬಯಸುತ್ತಾನೆ. ಲಖ್ನೋ, ದೆಹಲಿಗಳಲ್ಲಿರುವ ಮಂತ್ರಿಗಳದೂ ಇದೇ ಗತಿ. ತಮ್ಮ ಸ್ವಾರ್ಥ ಮತ್ತು ಹುಚ್ಚು ಅಧಿಕಾರ ವ್ಯಾಮೋಹಕ್ಕಾಗಿ ಅವರು ಏನೆಲ್ಲವನ್ನೂ ಮಾಡಲು ಸಿದ್ಧ. ಬದುಕಿನಲ್ಲಿ ವ್ಯಾಪಿಸಿರುವ ಕ್ರೌರ್ಯವೇ ಅವರ ಪಾಲಿಗೆ ಆಸರೆಯೆನಿಸಿದೆ. ಅವರು ಹಿಡಿತಕ್ಕೆ ಸಿಕ್ಕುವವರೂ ಅಲ್ಲ. ಹೆಚ್ಚುಕಡಿಮೆ ಎಲ್ಲರೂ ಕ್ರೂರಿಗಳಾಗಿರುವಾಗ ಹಾಗೂ ಒಣಪ್ರತಿಷ್ಠೆಯ ತೆಕ್ಕೆಗೆ ಬಿದ್ದಿರುವಾಗ, ಅಂತೆಡೆಗಳಲ್ಲಿ ಮಂತ್ರಿಗಳೆನಿಸಿಕೊಂಡವರು ಇನ್ನೂ ನಾಲ್ಕು ಹೆಜ್ಜೆ ಮುಂದೆಹೋಗುವುದರಿಂದ ಆಗುವುದಾದರೂ ಏನು? ಮನುಷ್ಯನ ಬಾಯನ್ನು ಮುಚ್ಚಿ, ಆವನನ್ನು ಬಲವಂತವಾಗಿ ನ್ಯಾಯಾಲಯಕ್ಕೆ ಎಳೆದುತರುವುದು ನಿರರ್ಥಕವಾದ ಕ್ರೌರ್ಯ ಹಾಗೂ ಹುಚ್ಚು ಅಧಿಕಾರದ, ಪ್ರತಿಷ್ಠೆಯ ಸಾಕ್ಷಾತ್ ಪ್ರದರ್ಶನ ಎಂಬುದನ್ನು ಯೋಚಿಸುವವರು ಯಾರು? ಹೀಗೆ ಮಾಡುವುದಕ್ಕಿಂತಲೂ ಆ ಮನುಷ್ಯನ ಫೋಟೋ ಅಥವಾ ಪ್ರತಿಮೆಯನ್ನು ಅಲ್ಲಿ ಕೂಡಿಸಿಬಿಡಿ. ನ್ಯಾಯಾಲಯದಲ್ಲಿ ಉಪಯೋಗಕ್ಕೆ ಬರುವ ಒಂದೇ ಒಂದು ಅಸ್ತ್ರವೆಂದರೆ ಮಾತು, ಅದೂ ಪ್ರಯೋಜನಕ್ಕೆ ಬರುವ ಮಾತೇ ಹೊರತು ಕಣ್ಣು ಮುಚ್ಚಾಲೆಯೂ ಅಲ್ಲ, ದೊಣ್ಣೆಯೂ ಅಲ್ಲ. ನವೆಂಬರ್ ಹದಿನೆಂಟಕ್ಕಿಂತ ಮುಂಚೆ ನ್ಯಾಯಾಲಯಗಳು ನನ್ನೊಂದಿಗೆ ಕಣ್ಣುಮುಚ್ಚಾಲೆಯಾಡಿದವು; ನವಂಬರ್ ಹದಿನೆಂಟರ ಅನಂತರ ದೊಣ್ಣೆ ಪ್ರಯೋಗ. ಇದೆಲ್ಲದರ ಅಗತ್ಯವೇನಿತ್ತು? ನಾನೇ ಮಾತನಾಡುವ ಸವಲತ್ತನ್ನು ಸಂತೋಷದಿಂದಲೇ ಬಿಟ್ಟುಕೊಟ್ಟಿದ್ದೆ. ತನ್ನ ಮಾತಿನ ಹಕ್ಕನ್ನು ಬಿಟ್ಟುಕೊಟ್ಟವನನ್ನು ಬಲವಂತವಾಗಿ ನ್ಯಾಯಾಲಯಕ್ಕೆ ಎಳೆದುತರುವ ಅವಕಾಶ ನೀಡುವ ಆ ಕಾನೂನನ್ನು ಪ್ರಶ್ನೆಮಾಡುವವರು ಯಾರು? ಇದು ಯಾವುದೇ ಅರ್ಥವಿಲ್ಲದ ಕ್ರೌರ್ಯ. ಹುಚ್ಚು ಅಧಿಕಾರ ವ್ಯಾಮೋಹ. ನ್ಯಾಯಾಲಯದಲ್ಲಿ ಆರೋಪಿ ಹಾಜರಿರಬೇಕಾದ್ದು ಅಗತ್ಯವೆಂದು ಕೆಲವರು ಹೇಳುತ್ತಾರೆ. ಆದರೆ ಒಬ್ಬ ಮನುಷ್ಯ ಇಚ್ಛಾಪೂರ್ವಕವಾಗಿ ಅಲ್ಲಿ ಹಾಜರಿರಲು ಬಯಸದೆಹೋದಾಗ, ಆ ಬಗ್ಗೆ ಬರವಣಿಗೆಯ ಮೂಲಕ ಬರೆದುಕೊಟ್ಟಿರುವಾಗ ಕಾನೂನು ಏನು ಹೇಳುತ್ತದೆ? ಇಂಥ ಮನುಷ್ಯನ ಮೇಲೆ ಒತ್ತಾಯ ತರುವುದಕ್ಕೆ ನ್ಯಾಯಾಲಯ ಅಥವಾ ಸರ್ಕಾರಕ್ಕೆ ಅವಕಾಶ ಮಾಡಿಕೊಡುವ ಕಾನೂನು ಯಾವುದಾದರೂ ಇದೆಯೆ? ರಸ್ತೆಯ ಮೇಲೆ

ಕಸಕಡ್ಡಿ ಎಸೆಯಬಾರದು ಎಂಬುದಾಗಿ ಒಂದು ಕಾನೂನು ಇದೆ ಅಂತ ಭಾವಿಸಿಕೊಳ್ಳಿ. ಕೋರ್ಟಿನಲ್ಲಿ ಹಾಜರಿರಬೇಕು ಎಂಬ ಕಾನೂನು ಇದೆಯಲ್ಲ; ಅದೇ ರೀತಿಯದು ಅಂದುಕೊಳ್ಳಿ. ಆದರೆ ಇಷ್ಟರಿಂದಲೇ ಕೆಲಸವಾಗುವುದಿಲ್ಲ. ರಸ್ತೆಯ ಮೇಲೆ ಕಸ ಎಸೆಯುವವರಿಗೆ ಇಂಥ ಶಿಕ್ಷೆ ವಿಧಿಸಲಾಗುತ್ತದೆ ಎಂಬ ಕಾನೂನಿದೆ ಎಂದು ಇಟ್ಟುಕೊಳ್ಳೋಣ. ಹಾಗೆಯೇ ಶಿಕ್ಷೆ ಅನುಭವಿಸಲು ಸಿದ್ಧನಾಗಿರುವ ಮನುಷ್ಯನಿಗೆ ಶಿಕ್ಷೆ ವಿಧಿಸುವ ವ್ಯವಸ್ಥೆ ಇರಬೇಕೆ ವಿನಾ ಇಷ್ಟವಿಲ್ಲದ ಅವನನ್ನು ಒತ್ತಾಯದಿಂದ ನ್ಯಾಯಾಲಯಕ್ಕೆ ಎಳೆದು ತರಬಾರದು. ಕ್ರೌರ್ಯ, ಪ್ರಯೋಜನಕ್ಕೆ ಬಾರದ ಕ್ರೌರ್ಯ, ಕಾನೂನಿಗೆ ಹೊರತಾದ ಕ್ರೌರ್ಯ–ಇದೆಲ್ಲಾ ಷಂಡರ ಅಧಿಕಾರಪ್ರತಿಷ್ಠೆಯ ಪ್ರದರ್ಶನದ ಕ್ರೌರ್ಯ .

ವಸಿಷ್ಠ ಸ್ವಭಾವದ ಈ ದ್ವಿಜನ ರಾಜಕೀಯ, ಸಂಪ್ರದಾಯನಿಷ್ಠೆ ಹಾಗೂ ಹುಚ್ಚು ಅಧಿಕಾರ, ಪ್ರತಿಷ್ಠೆ, ವ್ಯಾಮೋಹಗಳ ನೆಲೆಗಟ್ಟಿನಲ್ಲಿ ಭಾರತದ ಪುನರುಜ್ಜೀವನ ಸಾಧ್ಯವಾಗದು. ನನ್ನ ಖಚಿತವಾದ ಅಭಿಪ್ರಾಯ ಏನೆಂದರೆ–ಇಂದಿನ ಪರಿಸ್ಥಿತಿಯಲ್ಲಿ ಯಾವ ಪಕ್ಷದಲ್ಲಿ ಮಹಿಳೆಯರು, ಶೂದ್ರರು, ಅಸ್ಪೃಶ್ಯರು ಹಾಗೂ ಮುಸಲ್ಮಾನರು ಹೆಚ್ಚು ಸಂಖ್ಯೆಯಲ್ಲಿ ಇರುತ್ತಾರೋ ಆ ಪಕ್ಷವೇ ದೇಶವನ್ನು ಶಕ್ತವಾಗಿಸಬಲ್ಲದು, ಅಂಥ ಪಕ್ಷದಿಂದಲೇ ನಾಡು ಸುಖಸಮೃದ್ಧಿಯಿಂದ ಕೂಡಿದ್ದು ಸತ್ಯಮಾರ್ಗದಲ್ಲಿ ನಡೆಯಬಲ್ಲದು. ಸೀತೆ ಹಾಗೂ ಶಂಬೂಕರ ಕೇಂದ್ರಬಿಂದುವನ್ನು ಇನ್ನೂ ಸ್ವಲ್ಪ ಬಲಯುತವಾಗಿ ಮಾಡಬೇಕು. ನಿಸ್ಸಂಶಯವಾಗಿ ಬ್ರಾಹ್ಮಣರು ಕೂಡ ಇಂಥ ಪಕ್ಷದಲ್ಲಿ ಇದ್ದೇ ಇರುತ್ತಾರೆ, ಇರಬೇಕಾದದ್ದೆ. ಐದು ಸಾವಿರ ವರ್ಷಗಳಿಂದ ಆಡಳಿತದ ಚುಕ್ಕಾಣಿ ಹಿಡಿದ ಅವರ ಪೈಕಿ ಹೊಸಬದುಕಿನ ಕಿರಣಗಳನ್ನು ಕಾಣುವ ಹಂಬಲದ, ಅಂತಹ ಭವಿಷ್ಯದ ಆಕರ್ಷಣೆಗೆ ಒಳಗಾಗುವ ಕೆಲಮಂದಿಯಾದರೂ ಸಿಕ್ಕಬಹುದು. ನಾನು ಮೊದಲಿಗೆ ಇವರನ್ನು ಅಡುಗೆಯಲ್ಲಿರುವ ಉಪ್ಪು ಎಂದು ಕರೆಯುತ್ತಿದ್ದೆ. ಏಕೆಂದರೆ, ಈ ಮಂದಿ ತಮ್ಮ ಅಸ್ತಿತ್ವವನ್ನು ಇಲ್ಲವಾಗಿಸಿಕೊಂಡು ಬಹುಸಂಖ್ಯಾತರ ಗುಂಪಿನಲ್ಲಿ ಒಂದಾಗಿ ಸೇರಿಕೊಳ್ಳಬೇಕು. ಈ ರೀತಿ ಹೋಲಿಕೆ ಮಾಡುವುದರಲ್ಲಿ ನನಗೆ ಒಂದು ಅಪಾಯ ಕಾಣುತ್ತಿದೆ. ಎಲ್ಲಾದರೂ ಉಪ್ಪು ಎಷ್ಟೇ ಕಡಿಮೆ ಪ್ರಮಾಣದಲ್ಲಿದ್ದರೇನು? ತನ್ನ ಬಗ್ಗೆ ತಾನು ಅಹಂಕಾರ ತಳೆದು ಕೂಡಬಾರದು. ಹಾಗಾಗಿ, ನಾನು ಈಗ ಇವರನ್ನು ಹೊಲಕ್ಕೆ ಹಾಕುವ ಗೋಡುಗೊಬ್ಬರಕ್ಕೆ ಹೋಲಿಸುತ್ತೇನೆ. ಸಾಧ್ಯವಾದಷ್ಟುಮಟ್ಟಿಗೆ ಬಿತ್ತನೆಯ ಬೀಜವು ಮಹಿಳೆ, ಅಸ್ಪೃಶ್ಯ, ಶೂದ್ರ ಹಾಗೂ ಮುಸಲ್ಮಾನ ಮೂಲದ್ದಾಗಿರಬೇಕು. ಇಂಥವರನ್ನು ಮುಖಂಡರ ಸ್ಥಾನದಲ್ಲಿ ಕೂಡಿಸಬೇಕು. ಬೀಜದಿಂದ ಒಳ್ಳೆಯ ಬೆಳೆಯುಂಟುಮಾಡುವ ಗೊಬ್ಬರ ದ್ವಿಜನಾಗಿರಬೇಕು. ಈ ಬಗೆಯ ಹೊಸಪಕ್ಷವನ್ನು ಕಟ್ಟುವುದು ನನ್ನ ಹಂಬಲವಾಗಿದೆ.

ಹೆಂಗಸರ ವಿಚಾರದಲ್ಲಿ ಕೂಡ ನೀವುಗಳು ತುಂಬ ಕ್ರೂರಿಗಳು, ಕಾನೂನು ಪಕ್ಕಕ್ಕಿಟ್ಟು ಕೆಲಸಮಾಡುವವರು. ನಾನು ಬಂಧನಕ್ಕೊಳಗಾಗುವ ಮುಂಚೆ ನನಗೆ ಮೂರು ಪತ್ರಗಳು ಬಂದಿದ್ದವು. ಕೆಲವು ಕಷ್ಟಕಾರ್ಪಣ್ಯಗಳನ್ನು ಕುರಿತಂತೆ, ತೊಂದರೆಗಳಿಗೆ ಸಂಬಂಧಪಟ್ಟಂತೆ ಅವುಗಳಲ್ಲಿ ವಿವರಣೆ ಇತ್ತು. ಆ ಕಾಗದಗಳಿಗೆ ಉತ್ತರ ದೊರೆತರೆ ಅವರಿಗೆ ಸ್ವಲ್ಪ ಸಮಾಧಾನವಾಗುತ್ತಿತ್ತು. ನಾನು ನವಂಬರ್ ಎಂಟರಂದು ಅಂತಹ ಮೂರು ಕಾಗದಗಳನ್ನು ಬರೆದು ಕಳಿಸಿದೆ. ಆ ಪೈಕಿ ಯಾವ ಕಾಗದದಲ್ಲೂ ರಾಜಕೀಯಕ್ಕೆ ಸಂಬಂಧಿಸಿದ ವಿಚಾರ ಇರಲಿಲ್ಲ. ಕೇವಲ ಒಂದು ಕಾಗದದಲ್ಲಿ ರಾಜನೀತಿಗೆ ಸಂಬಂಧಪಟ್ಟಿರಬಹುದೇನೂ ಅನಿಸುವಂತಹ ಎರಡು ಮೂರು, ಸಾಲುಗಳು ಇದ್ದವೇನೊ? ಸರ್ಕಾರ ಆ ಮಾತುಗಳನ್ನು ಸೆನ್ಸಾರ್ ಮಾಡಿ ಕಳುಹಿಸಬಹುದಿತ್ತು. ಪ್ರೊಫೆಸರ್ ರಮಾಮಿತ್ರ ಅವರಿಗೆ ಬರೆದ ಕಾಗದ ನವಂಬರ್ ಇಪ್ಪತ್ತೇಳರ ಹೊತ್ತಿಗೆ ತಲಪಿತೆಂದು ಅವರಿಂದಲೇ ನನಗೆ ಗೊತ್ತಾಯಿತು. ಇದರಿಂದ ನನಗೆ ಅನ್ನಿಸುವುದೇನೆಂದರೆ, ಶಾಂತಿನಾಯಕ್ ಮತ್ತು ಮಾರ್ಗೋ ಸ್ಕಿನರ್ ಅವರಿಗೆ ಬರೆದ ಪತ್ರಗಳು ಕೂಡ ಅವರಿಗೆ ಸರಿಯಾಗಿ ತಲುಪಿರಲು ಸಾಧ್ಯವಿಲ್ಲ. ಪಾಪ, ಆ ಬಡಪಾಯಿ ಮಹಿಳೆ ಮಾರ್ಗೋ ಭಾರತಕ್ಕೆ ಬಂದು ನಮ್ಮ ಪತ್ರಿಕೆಯಲ್ಲಿ ಕೆಲಸಮಾಡಲು ಇಷ್ಟಪಟ್ಟಿದ್ದಳು. ಇವರೆಲ್ಲಾ ಮನುಷ್ಯರಿಗಾಗಿ, ಮನುಷ್ಯತ್ವಕ್ಕಾಗಿ ಕೈಲಾದಮಟ್ಟಿಗೆ ದುಡಿದವರು. ಇವರಲ್ಲಿ ಒಬ್ಬಾಕೆ ದೇಶಿ ಮತ್ತು ವಿದೇಶಿ ಎರಡೂ ಆಡಳಿತ ಕಾಲಗಳಲ್ಲಿ ಜೈಲಿಗೆ ಹೋಗಿದ್ದಾಳೆ; ಇನ್ನೊಬ್ಬಾಕೆ 1942 ಮುಂತಾದ ಚಳವಳಿಗಳ ಕಾಲದಲ್ಲಿ ತನ್ನ ಕೊಠಡಿಯಲ್ಲಿ ಎಂಥ ಅಪಾಯಕಾರಿ ವಸ್ತುಗಳನ್ನು ಸುರಕ್ಷಿತವಾಗಿ ಇಟ್ಟುಕೊಂಡಿದ್ದಳೆಂದರೆ, ಅದನ್ನು ಕೇಳಿದರೇ ನೀವು ಬೆಚ್ಚಬೇಕಾಗುತ್ತದೆ. ಮಗದೊಬ್ಬ ಮಹಿಳೆ ಸತ್ಯದ ಸಲುವಾಗಿ ತಿಂಗಳಿಗೆ ಎರಡೂವರೆ ಸಾವಿರ ರೂಪಾಯಿಗಳು ಬರುವಂತಿದ್ದ ಉದ್ಯೋಗಕ್ಕೆ ತಿಲಾಂಜಲಿಯಿತ್ತಳು. ಇಂಥ ಮಹಿಳೆಯರ ಮನಸ್ಸಿಗೆ ಸ್ವಲ್ಪವಾದರೂ ನೆಮ್ಮದಿ ಸಿಗುವಂತಹ ನನ್ನ ಕಾಗದಗಳು ತಲುಪುವಂತಾಗಿದ್ದರೆ ನಿಮ್ಮ ಗಂಟೇನು ಹೋಗುತ್ತಿತ್ತು?

ಪುಸ್ತಕಗಳು ಮತ್ತು ಪತ್ರಗಳಿಗೆ ಸಂಬಂಧಪಟ್ಟ ಕಾನೂನುಗಳು ಸಂಪೂರ್ಣವಾಗಿ ಚೊಕ್ಕವಾಗಿರಬೇಕು. ಹಾಗೆ ನೋಡಿದರೆ, ಅದಕ್ಕೂ ಕಾನೂನುಗಳನ್ನು ಬದಲಾಯಿಸಬೇಕಾದೀತು. ಇಂಗ್ಲಿಷರು ಹೊರಟುಹೋದರು. ಆದರೂ ಜೈಲೆಂಬ ಈ ನರಕ ಮುಂಚೆ ಹೇಗಿತ್ತೋ ಈಗಲೂ ಹಾಗೆಯೆ ಇದೆ. ನೀವು ಯಾವಾಗಲೂ ಕಾಯ್ದೆ ಕಾನೂನುಗಳ ವಿಚಾರವಾಗಿ ಮಾತು ನಾಡುತ್ತೀರಿ. ಸರಿ, ಅವೇ ಕಾಯ್ದೆ ಕಾನೂನುಗಳ ಬಗ್ಗೆ ಮಾತಾಡೋಣ: ಆ ಹಳಸಿ ನಾರುತ್ತಿರುವ ಕಾನೂನುಗಳನ್ನು ರೂಪಿಸಿದ್ದು ಇಂಗ್ಲಿಷ್ ಸಾಮ್ರಾಜ್ಯಶಾಹಿ ಜನರು. ಆದರೆ ಅವುಗಳಲ್ಲಿ ಕೂಡ ಇರುವ

ಸ್ವಲ್ಪ ಮಾನವೀಯತೆಯಿಂದ ಕೂಡಿರುವ ಕಾನೂನುಗಳನ್ನು ಏಕೆ ನಿರ್ಲಕ್ಷಿಸುತ್ತೀರಿ? ಜೈಲುಗಳನ್ನು ವರ್ಗೀಕರಣ ಮಾಡುವ ವಿಚಾರವಾಗಿ ಕೂಡ ಇಂಗ್ಲಿಷಿನವರು ಒಂದು ಕಾಯ್ದೆಯನ್ನು ಮಾಡಿದ್ದರು. ಆದರೆ ಅದು ಈವರೆಗೆ ಕೇವಲ ಕಾಗದದ ಮೇಲಿದೆ. ಸೆರೆಯಾಳುಗಳ ವರ್ಗೀಕರಣ ಅವರವರ ಆದಾಯ, ಶಿಕ್ಷಣ, ಇಲ್ಲವೆ ಅಪರಾಧದ ಉದ್ದೇಶ ಇಂಥವುಗಳನ್ನು ಆಧರಿಸಿ ಮಾಡಬೇಕಾದ್ದು ನ್ಯಾಯ. ಅಪರಾಧದ ಉದ್ದೇಶವು ಪೂರ್ತಿಯಾಗಿ ಸ್ಪಷ್ಟವಾಗಿದೆ. ನಾಗರಿಕ ಪ್ರತಿಭಟನೆಯಲ್ಲಿ ಅಪರಾಧದ ಉದ್ದೇಶ ನಿಸ್ವಾರ್ಥದಿಂದ ಕೂಡಿದೆ. ಈ ಕಾಯ್ದೆಗೆ ಅನುಸಾರವಾಗಿ ನಮ್ಮೆಲ್ಲ ಖೈದಿಗಳನ್ನು ಮೇಲ್ವರ್ಗದವರೆಂದು ಪರಿಗಣಿಸಬೇಕಾಗಿತ್ತು. ನೀವುಗಳು ಅದೆಂತಹ ಪಾಪಿಗಳು! ನಿಮ್ಮ ಕಾಯ್ದೆ ಕಾನೂನುಗಳನ್ನು ಎಡೆಬಿಡದೆ ಮುರಿಯುತ್ತಲೇ ಇರುತ್ತೀರಿ: ಹಗಲೂ ರಾತ್ರಿ ಕಾನೂನಿಗೆ ಅನುಗುಣವಾಗಿಯೇ ನಡೆಯುವ ಮಾತಾಡುತ್ತಿರುತ್ತೀರಿ.

ಒಂದು ಬಾರಿ ನಿಮ್ಮ ಸರ್ಕಾರ ನನ್ನನ್ನು ಒಂದು ಅರಮನೆಯಲ್ಲಿ ಬಂಧನದಲ್ಲಿಟ್ಟಿತು. ಅದು ಯಾವ ಕಾನೂನಿಗನುಗುಣವಾಗಿ? ಇದನ್ನು ಪ್ರತಿಭಟಿಸಿ ನಾನು ಅಲ್ಲಿಯ ಉಚ್ಚನ್ಯಾಯಾಲಯಕ್ಕೆ ಬರೆದೆ, ನಿಜ. ನನಗೆ ಅರಮನೆ ಇಷ್ಟವಾಗಲಿಲ್ಲ ಎಂಬ ಕಾರಣದಿಂದ ಅಲ್ಲ. ಕಾರಣ ಏನಿತ್ತೆಂದರೆ, ನನ್ನ ಕೊಠಡಿಯಲ್ಲೇ ನನ್ನ ಮೇಲೆ ನಿಗಾ ಇಡಲು ಒಬ್ಬ ಪೋಲೀಸ್ ಸೂಪರಿಂಟೆಂಡೆಂಟನ್ನು ನೇಮಕ ಮಾಡಿದ್ದರು. ಕೊಠಡಿಯ ಹೊರಗಡೆ ಎಷ್ಟು ಮಂದಿ ಪೋಲೀಸರನ್ನಾದರೂ ಪಹರೆ ಮೇಲೆ ಬಿಡಿ, ಆದರೆ ಕೊಠಡಿಯ ಒಳಗೆ ಇದು ಸಲ್ಲದು. ಸ್ವತಂತ್ರ ಭಾರತದಲ್ಲಿ ನಾನು ಮೊದಲಿಗೆ ದೆಹಲಿ ಜೈಲಿನಲ್ಲಿದ್ದಾಗ ಸರದಾರ್ ಪಟೇಲ್ ನನ್ನೊಡನೆ ಮಾಡಲಾದ ಎಲ್ಲ ಭೇಟಿಗಳೂ ಬ್ಯಾರೆಕ್‌ನ ಒಳಗೇ ನಡೆಯುವಂತೆ ಅವಕಾಶ ಮಾಡಿಕೊಟ್ಟರು. ಪ್ರತಿದಿನ, ಎಷ್ಟುಬಾರಿ ಬೇಕಾದರೂ ಭೇಟಿಮಾಡಲು ಅವಕಾಶವೀಯಲಾಯಿತು. ಇನ್ನೊಂದು ಸಂದರ್ಭದಲ್ಲಿ ನಾನು ನೈನಿ ಜೈಲಿನಲ್ಲಿದ್ದಾಗ, ನಿಮ್ಮ ರಾಜ್ಯ ಸರ್ಕಾರ ಕೂಡ ಇದೇ ರೀತಿ ನಡೆದುಕೊಂಡಿತು. ಪ್ರಾಯಶಃ ಸರ್ದಾರ್ ಪಟೇಲ್ ಈ ಮಟ್ಟದ ವಸಿಷ್ಠರಾಗದೆ ಹೋಗಿದ್ದಿರಬಹುದು; ಸ್ವಲ್ಪ ಕಟ್ಟುನಿಟ್ಟಿನ ವ್ಯಕ್ತಿಯಾಗಿದ್ದಿರಬಹುದು, ನಿಜ. ಕಾಲ ಕಳೆಯುತ್ತ ಹೋದಂತೆಲ್ಲ ಸಂಪ್ರದಾಯನಿಷ್ಠ ವಸಿಷ್ಠರ ಹಗೆತನದ ಭಾವನೆ ಹೆಚ್ಚಾಗುತ್ತಾ ಹೋಗುತ್ತದೇನೊ? ಇಷ್ಟೆಲ್ಲಾ ಹುಳುಕುಗಳನ್ನುಳ್ಳ ನೀವು ಕಾಯ್ದೆ ಕಾನೂನುಗಳ ಬಗ್ಗೆ ದೊಡ್ಡಗಂಟಲಿನಲ್ಲಿ ಏಕೆ ಮಾತಾಡುತ್ತೀರಿ?

ಸರ್ದಾರ್ ಪಟೇಲರು ಶೂದ್ರರಾಗಿದ್ದರು. ನನಗೆ ಅನಿಸುವಂತೆ ವಸಿಷ್ಠ ಬ್ರಾಹ್ಮಣನಿಗಿಂತ ವಸಿಷ್ಠಶೂದ್ರ ಹೆಚ್ಚು ಒಳ್ಳೆಯವನು. ಮುಂಬಯಿಯ ಸಂಪ್ರದಾಯ ನಿಷ್ಠ ವಸಿಷ್ಠ ಬ್ರಾಹ್ಮಣ ಮುರಾರ್ಜಿ ದೇಸಾಯಿ ಮಹಾರಾಷ್ಟ್ರದ ಮುಖ್ಯಮಂತ್ರಿ

ಪದವಿಯನ್ನು ಬಿಟ್ಟುಕೊಡಬೇಕಾಗಿ ಬಂದಾಗ, ಇಡೀ ದ್ವಿಜಸಮೂಹ ಅದೆಷ್ಟು ಚಿಂತಾಕ್ರಾಂತವಾಗಿತ್ತು? ಅವರ ಸಂಘಟನಾ ಕೌಶಲ, ಆಡಳಿತ ವ್ಯವಸ್ಥೆ, ಕಠೋರವಾಗಿ ಶಿಕ್ಷಿಸುವ ಪದ್ಧತಿ, ಭದ್ರತಾ ಪ್ರಜ್ಞೆ ಮುಂತಾದ ವಿಷಯಗಳ ಬಗ್ಗೆ ಕೆಲವು ಮಂದಿ ಅದೆಷ್ಟು ಪ್ರಶಂಸೆ ಮಾಡುತ್ತಿದ್ದರು. ಅದೇ ಶೂದ್ರನಾದ ಚವಾಣ್ ವಸಿಷ್ಠ ಪರಂಪರೆಗೇ ಸೇರಿದವರಾದರೇನಂತೆ, ಅವರಿಗಿಂತ ಚೆನ್ನಾಗಿಯೇ ಆಡಳಿತ ನಡೆಸಿದರು. ಹಾಗಾಗಿ ನಾನು ಒಮ್ಮೊಮ್ಮೆ ಯೋಚಿಸುತ್ತೇನೆ-ಶೂದ್ರ ಕಾಮರಾಜನಾಡಾರ್ ದ್ವಿಜ ನೆಹರೂಗಿಂತ ಉತ್ತಮ ವ್ಯಕ್ತಿಯೆನಿಸಿಕೊಳ್ಳಬಲ್ಲರು, ಏಕೆಂದರೆ ಈ ನಾಡಿನ ಮಣ್ಣು ಮತ್ತು ಜನತೆಗೆ ಅವರು ಹೆಚ್ಚು ಹತ್ತಿರದವರು. ಇವರ ಗುಂಪಿನ ಸ್ವಾರ್ಥ ಹಾಗೂ ಪರಂಪರೆ ಸ್ವಲ್ಪ ಬೇರೆ ರೀತಿಯದ್ದೆ ಆಗಿರಬಹುದು. ಆದರೆ ಇವರು ಕೂಡ ವಸಿಷ್ಠರೇ ಹೌದು. ಹಾಗಾಗಿ ನಾಡು ಇವರಿಂದ ಸಹ ಮರುಹುಟ್ಟು ಪಡೆಯಲಾರದು. ನಾನು ಹೇಳಬಯಸುತ್ತಿದ್ದದ್ದು ಏನೆಂದರೆ, ವಸಿಷ್ಠ ಬ್ರಾಹ್ಮಣನಿಗಿಂತ ವಸಿಷ್ಠ ಶೂದ್ರ ಸ್ವಲ್ಪ ಹೆಚ್ಚು ಉತ್ತಮ ಎಂಬುದಷ್ಟನ್ನೇ. ಆದರೆ ಇಬ್ಬರೂ ಕೆಟ್ಟವರೇ. ಸಣ್ಣಸಣ್ಣ ಹುದ್ದೆಗಳಲ್ಲಿ ಕೆಲಸಮಾಡುವ ಅಸ್ಪೃಶ್ಯರು, ಶೂದ್ರರು ಮೊದಮೊದಲಲ್ಲಿ ಸಾಕಷ್ಟು ಕೆಟ್ಟವರಾಗಿರುತ್ತಾರೆ, ಕ್ರೂರಿಗಳಾಗಿರುತ್ತಾರೆ ಎಂಬ ಮಾತು ಅಲ್ಲಲ್ಲಿ ನಿಜ. ಜೈಲಿನಲ್ಲಿ ಯಾರಾದರೂ ಚಮ್ಮಾರ, ಪಾಸೀ (ಹಕ್ಕಿಬೇಟೆಗಾರ), ಈಡಿಗ, ಗೌಳಿಗ ಇಂಥವರು ಜೈಲು ವಾರ್ಡರುಗಳಾಗಿಬಿಟ್ಟರೆ-ಅವರ ಬೈಗಳ, ಹೊಡೆತಗಳ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ. ಇದೇ ರೀತಿಯಲ್ಲಿ ಶೂದ್ರ ಅಧಿಕಾರಿಗಳು ಯಾವಾಗಲೂ ಒಂದು ಬಗೆಯ ಅಸ್ಥಿರತೆಯಲ್ಲಿ, ಗೊಂದಲದಲ್ಲಿ ಇರುತ್ತಾರೆ. ಬ್ರಾಹ್ಮಣ ಅಧಿಕಾರಿಗಿಂತ ತಾನು ಯಾವುದೇ ರೀತಿಯಲ್ಲಿ ಕಡಿಮೆಯಿಲ್ಲ ಎಂಬುದನ್ನು ಸಾಧಿಸಿ ತೋರಿಸಲು ಅವರು ಯಾವಾಗಲೂ ಪ್ರಯತ್ನ ಮಾಡುತ್ತಿರುತ್ತಾರೆ; ಅದೇ ಹುಚ್ಚು ಅಧಿಕಾರ ವ್ಯಾಮೋಹ, ಒಣ ಪ್ರತಿಷ್ಠೆ. ಆದರೇನು ಮಾಡುವುದು, ಈ ಮೊದಲ ಹೆಜ್ಜೆಗಳು ಹೀಗೆಯೇ ಇರುತ್ತವೆ; ಇದು ಒಂದು ರೀತಿಯಲ್ಲಿ ಅನಿವಾರ್ಯ.

ಮೆಟ್ಟಲು ಹತ್ತುವುದಕ್ಕೆ ನಿಮಗೆ ಹೇಳುವವರಾರು. ನೆಲದ ಮೇಲೆ ಕೂಡ ನೇರವಾಗಿ ಮುಂದೆ ಹೋಗಲು ನಿಮ್ಮಿಂದ ಆಗದು. ಜೈಲು ಆಡಳಿತಕ್ಕೆ ಸಂಬಂಧಿಸಿದಂತೆ ಕಳೆದ ಹತ್ತು ವರ್ಷಗಳಲ್ಲಿ ಏನೇನು ಬದಲಾವಣೆ ಮಾಡಿದ್ದೀರಿ? ಬೈಯುವುದನ್ನು, ಬಡಿಯುವುದನ್ನು ಏನಾದರೂ ಕಡಿಮೆ ಮಾಡಿದ್ದೀರಾ? ಸೆರೆಯಾಳುಗಳಲ್ಲಿ ಆತ್ಮಗೌರವ ಹೆಚ್ಚುವ ನಿಟ್ಟಿನಲ್ಲಿ ನೀವೇನು ಮಾಡಿದ್ದೀರಿ? ಖೈದಿಗಳನ್ನು ಬೇರೆ ಬೇರೆ ದೃಷ್ಟಿಗಳಿಂದ ನೋಡುತ್ತ, ಅವರ ಮೇಲೆ ಗೂಢಚರ್ಯೆ ನಡೆಸುತ್ತ, ಸುಳ್ಳುಚಾಡಿ ಹೇಳಿಕೊಂಡು ಒಬ್ಬರ ಮೇಲೆ ಇನ್ನೊಬ್ಬರನ್ನು ಎತ್ತಿಕಟ್ಟುತ್ತಾ ಬಂದಿಲ್ಲವೆ ನೀವು? ಕೆಲವು ಖೈದಿಗಳನ್ನು

ಅಟ್ಟಹತ್ತಿಸಿ, ಪುಸಲಾಯಿಸಿ ಬೇರೆಯವರ ಮೇಲೆ ಬಿಡುತ್ತಿಲ್ಲವೆ ನೀವು? ಇಂಗ್ಲಿಷರ ಕಾಲಕ್ಕಿಂತ ಉತ್ತಮವಾಗುವುದರ ಬದಲಾಗಿ ಕೆಲವು ವಿಷಯಗಳಲ್ಲಿ ಪರಿಸ್ಥಿತಿ ಇನ್ನೂ ಹದಗೆಟ್ಟಿದೆ, ಸೆರೆಮನೆಯ ಕೋಣೆಗಳಲ್ಲಿ ಇಡಲು ಸಾಧ್ಯವಾಗುವುದಕ್ಕಿಂತ ಎರಡುಪಟ್ಟು ಖೈದಿಗಳನ್ನು ನೀವು ತುಂಬಿದ್ದೀರಿ. ಇದರಿಂದ ಅವರ ವರ್ತನೆ, ನೈತಿಕತೆ ಸುಧಾರಿಸುತ್ತದೆಯೊ ಹಾಳಾಗುತ್ತದೆಯೊ? ಜೈಲು, ಬಟ್ಟೆಗಳ ವಿಷಯದಲ್ಲಿಯೂ ಎಲ್ಲ ಹಾಳಾಗಿದೆ. ಊಟ ಸ್ವಲ್ಪ ಪರವಾಗಿಲ್ಲ ವೆನ್ನಬಹುದಾದರೂ ತಿನ್ನಲು ಯೋಗ್ಯವಲ್ಲ. ಕೆಲವಂತೂ ಕೇವಲ ತೋರಿಕೆಯ, ಮೇಲ್ಮಟ್ಟದ ಸುಧಾರಣೆಗಳು ಅಷ್ಟೆ. ಉದಾಹರಣೆಗೆ ದೀರ್ಘಾವಧಿ ಶಿಕ್ಷೆ ಅನುಭವಿಸುತ್ತಿರುವವರಿಗೆ ಪರೋಲ್ ಮೇಲೆ ಬಿಡುತ್ತಿದ್ದೀರಿ. ಆದರೆ ಇಂತಹ ಸುಧಾರಣೆಗಳಿಂದ ಜೈಲು ಆಡಳಿತದಲ್ಲಿ ಏನೂ ವ್ಯತ್ಯಾಸವಾಗುವುದಿಲ್ಲ. ಕಾನೂನುಗಳಿಗೆ ಅನುಸಾರವಾಗಿ ಯಾವಾಗ ಇರುವುದಕ್ಕೆ ಜಾಗ, ಊಟ ಮತ್ತು ಬಟ್ಟೆಸಿಗುತ್ತವೆಯೊ, ಖೈದಿಗಳಲ್ಲಿ ಕೆಲವರನ್ನು ಹೆಚ್ಚು ಕೆಲವರನ್ನು ಕಡಿಮೆ ಎಂಬ ದೃಷ್ಟಿಗಳಿಂದ ನೋಡುವುದು ತಪ್ಪುತ್ತದೆಯೊ, ಮನಸ್ಸಿಗೆ ಸ್ವಲ್ಪ ನೆಮ್ಮದಿ ಸಿಗುವಂತೆ ಓದಲು ಬರೆಯಲು ಅವಕಾಶ ಸಿಗುವಂತೆ ಜೈಲಿನ ಕೆಲಸಕಾರ್ಯಗಳ ರೀತಿನೀತಿಗಳು ಬದಲಾಗುತ್ತವೆಯೊ ಆಗ ಮಾತ್ರ ಸ್ವಲ್ಪಮಟ್ಟಿಗೆ ಜೈಲು ಸುಧಾರಣೆ ಸಾಧ್ಯವೆನಿಸುತ್ತದೆ. ನಾಲ್ಕು ತಿಂಗಳಿಗೆ, ಆರುತಿಂಗಳಿಗೆ ಯಾವಾಗಲೋ ಒಮ್ಮೆ ಎಂಥದೋ ಮನ ರಂಜನೆಯನ್ನು ಒದಗಿಸುವುದರಿಂದ ಏನು ಪ್ರಯೋಜನ?

ನಿಮ್ಮ ಕೆಲಸಗಳೆಲ್ಲ ಕೇವಲ ತೋರಿಕೆಯವಷ್ಟೆ. ಖೈದಿಗಳ ಸಮ್ಮೇಳನ ಏಕೆ ಮಾಡಿದಿರಿ? ಈ ಪ್ರಾಂತದ ಐವತ್ತು ಅರವತ್ತು ಸಾವಿರ ಖೈದಿಗಳ ಪೈಕಿ ಕೇವಲ ಮೂವತ್ತು ನಲವತ್ತು ಮಂದಿಯನ್ನು ಆಯ್ಕೆಮಾಡಿ, ಅವರಿಗೆ ಶುಭ್ರವಾದ ಬಿಳಿ ಬಟ್ಟೆ ತೊಡಿಸಿ-ನೀವು ಅಥವಾ ನಿಮ್ಮ ಒಡೆಯರು ಕೂಡ ಅಷ್ಟು ಬಿಳಿ ಬಟ್ಟೆ ಹಾಕಲಾರಿರೇನೊ-ಸಮ್ಮೇಳನ ನಡೆಸಿದಿರಿ. ಒಂದು ವೇಳೆ ನೀವು ಪ್ರತಿನಿತ್ಯ ಈ ರೀತಿ ಶುಚಿಯಾದ ಬಟ್ಟೆ ಒದಗಿಸಿದರೆ ನನಗೆ ಸಂತೋಷವೇ, ಆದರೆ ಇದೆಲ್ಲ ಕೇವಲ ಸಮ್ಮೇಳನದ ಸಮಯಕ್ಕೆ ಮಾತ್ರ ಅಷ್ಟೆ. ಎಂಥ ಮೋಸ, ಆಷಾಢಭೂತಿತನ! ಹಾಗೆಯೇಅಲ್ಲಿ ಮಾತನಾಡುವವರಾದರೂ ಯಾರು? ಅಲ್ಲಿ ಮಾತನಾಡುವವರೆಲ್ಲ ಭಾಷಣಕ್ಕೆ ಮೊದಲೇ ಹೇಳಿಕೊಟ್ಟ ನಾಲ್ಕು ಮಾತುಗಳನ್ನು ಗಿಣಿಪಾಠದಂತೆ ಒಪ್ಪಿಸುವ ಮಂದಿ. ಈ ಗಿಣಿಗಳ ಮನಸ್ಸಿನಲ್ಲಿ ಏನಿತ್ತೋ, ಅದು ನಾಲಗೆಯ ಮೇಲೆ ಬರಲು ಯಾರಾದರೂ ಅವಕಾಶ ಮಾಡಿಕೊಟ್ಟರಾ? ಯಾರಿಗೆ ನಿಜವಾಗಿ ಮಾತಾಡುವ ಸಾಮರ್ಥ್ಯವಿತ್ತೋ, ಅಂಥವರನ್ನು ಅಲ್ಲಿಗೆ ಹೋಗಲು ಬಿಡಲೇ ಇಲ್ಲ. ನಾವುಗಳು ಆ ಸಂದರ್ಭದಲ್ಲಿ ಸೆರೆಮನೆಯಲ್ಲಿ ಇರಲಿಲ್ಲವೇನು? ನಾಲಿಗೆ ಇರುವ

ಸೆರೆಯಾಳುಗಳನ್ನು ಕರೆತರದ ಆ ಖೈದಿಗಳ ಸಮ್ಮೇಳನ ಅದೆಂಥದು ಅಂತ ಒಂದೇ ಒಂದು ಪತ್ರಿಕೆಯಾದರೂ, ನಮ್ಮ 'ಚೌಖಂಬಾ' ಸಹ ಸೇರಿದಂತೆ, ಟೀಕೆಮಾಡಲಿಲ್ಲ. ಭಾರತದ ರಾಜನೀತಿ ಎಷ್ಟು ಖೋಟಾ ಆಗಿದೆಯೆಂದರೆ, ಎಷ್ಟು ಕಳೆಗುಂದಿದೆಯೆಂದರೆ, ಒಳ್ಳೆಯ ಆದರ್ಶವಿಟ್ಟುಕೊಂಡಿರುವ ಮಂದಿಗೂ ಸರಿಯಾದ ಪ್ರಜ್ಞೆ, ಚೈತನ್ಯ ಇಲ್ಲ. ಅವರ ಜೀವನಾಡಿಗಳೂ ಸಡಿಲಗೊಂಡುಬಿಟ್ಟಿವೆ.

ನೈನಿ ಜೈಲಿನಲ್ಲಿದ್ದ ವ್ರಜಮೋಹನಗೋಯಲ್‌ರಿಗೆ ಆ ಸಮ್ಮೆಳನಕ್ಕೆ ಹೋಗಲು ಹೇಗೆ ಅವಕಾಶ ಸಿಕ್ಕಿತೋ ಎಂದು ಆಶ್ಚರ್ಯವಾಗುತ್ತದೆ. ಅಲಹಾಬಾದಿನವರಾಗಿದ್ದು ದೆಹಲಿ ಹಾಗೂ ಲಖ್ನೋಗಳಲ್ಲಿ ಮಂತ್ರಿಗಳಾಗಿ ಸೇವೆಸಲ್ಲಿಸುತ್ತಿರುವ ಜನರೆಲ್ಲ ಗೋಯಲರಿಗೆ ಚೆನ್ನಾಗಿ ಗೊತ್ತು. ನಿಮಗೆ ಕೂಡ ಅವರ ಪರಿಚಯವಿರಬಹುದಲ್ಲ? ಅವರು ಬರೆದ 'ಧರ್ಮಯುದ್ಧ' ಎಂಬ ಹೆಸರಿನ ಪುಸ್ತಕವನ್ನು ನೀವು ನೋಡಿರಬಹುದಲ್ಲವೆ? ಸಾರ್ವಜನಿಕ ಆಡಳಿತ, ಜೈಲು ಆಡಳಿತ, ಅಲಹಾಬಾದಿನ ಮೂಲದವರಾದ ಮಂತ್ರಿಗಳ ನಡೆನುಡಿಗಳು-ಹೀಗೆ ಬೇಕಾದಷ್ಟು ವಿಚಾರ ಕುರಿತು ಅವರು ಆ ಪುಸ್ತಕದಲ್ಲಿ ಬಿಸಿಮುಟ್ಟಿಸಿದ್ದಾರೆ. ಆ ಪುಸ್ತಕದಿಂದಲೇ ಶುರುವಾದದ್ದು ತಾಪತ್ರಯ. ಅವರು ತಮ್ಮ ಭಾಷಣಕ್ಕೆ ಮೊದಲೇ ಸಮ್ಮೇಳನಕ್ಕೆ ಬಂದವರಿಗೆ ಪುಸ್ತಕ ಹಂಚಲು ಶುರುಮಾಡಿದರು. ಅವರು ಎಷ್ಟೆಂದರೂ ಸೆರೆಯಾಳು. ಅವರನ್ನು ಸದ್ದಿಲ್ಲದೆ ಅಲ್ಲೆ ಸೆರೆಮನೆಗೆ ಕಳುಹಿಸಬಹುದಿತ್ತು. ತೀರಾ ತರಾತುರಿಯಲ್ಲಿ ಆ ಖೈದಿಗಳ ಸಮ್ಮೇಳನದಿಂದ ಅವರನ್ನು ಮತ್ತೆ ನೈನಿ ಜೈಲಿಗೇ ರವಾನಿಸಿದರು. ಈ ತುರ್ತು ಏಕೆ? ಯಾರಿಗೂ ಸ್ವಲ್ಪ ಕೂಡ ಇದರ ಸುಳಿವು ಸಿಕ್ಕಲಿಲ್ಲ. ಈ ದೇಶದ ಜನ ಹಾಗೂ ಪತ್ರಕರ್ತರು ಅದೆಂಥ ಮಂದಿಯೊ? ಯಾವುದಾದರೂ ಮುಚ್ಚಿಟ್ಟ, ರಹಸ್ಯವಾದ ಸುದ್ದಿ ಹುಡುಕುವ ಗೋಜಿಗೇ ಹೋಗುವುದಿಲ್ಲ. ಇನ್ನೂ ಒಂದು ಮನಸ್ಸು ಮುರಿಯುವಂತಹ ಘಟನೆ ನಡೆಯಿತು. ಖೈದಿಗಳ ಸಮ್ಮೇಳನದ ಸಂದರ್ಭದಲ್ಲಿ ನಿಮ್ಮ ಮುಖ್ಯಮಂತ್ರಿಯವರು ನವಂಬರ್ ಹನ್ನೆರಡು ಹದಿಮೂರರಂದು ಒಂದು ಘೋಷಣೆ ಮಾಡಿ ಖೈದಿಗಳ ಶಿಕ್ಷೆಯ ಅವಧಿಯಲ್ಲಿ ಒಂದು ತಿಂಗಳಷ್ಟು ಕಡಿತ ಮಾಡುತ್ತೇವೆಂದು ಹೇಳಿಕೊಂಡರು. ಸಾವಿರಾರು ಮಂದಿ ಖೈದಿಗಳ ಮನಸ್ಸಿನಲ್ಲಿ ಹೊಸ ಆಸೆ ಚಿಗುರಿತು. ಆದರೆ ಏನೂ ನಡೆಯಲಿಲ್ಲ. ಜನ ಕಾಯುತ್ತಲೇ ಇದ್ದರು. ಇಂತಹ ಕಡಿತದ ಆಜ್ಞೆ ಹೊರಬಿದ್ದದ್ದು ಡಿಸೆಂಬರ್ ಹದಿನೇಳರಂದು. ಆದರೆ ಏನೂ ಆಗಲಿಲ್ಲ. ಜೈಲಿನಲ್ಲಿ ಬಂಧಿಯಾಗಿರುವ ಖೈದಿಗಳ ಜೊತೆಯಲ್ಲಿ ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣಸಂಕಟ ಎಂಬ ರೀತಿಯಲ್ಲಿ ನಡೆದುಕೊಳ್ಳುವುದು ತರವಲ್ಲ.

ಸುಧಾರಣೆಯಾಗುವುದಾದರೂ ಹೇಗೆ? ಇಡೀ ಕಟ್ಟಡ ನಿಂತಿರುವುದು ಸುಳ್ಳಿನ ಸರಮಾಲೆಯ ಮೇಲೆ. ಇಲ್ಲಿ ಭಾರಿ ಸಂಖ್ಯೆಯಲ್ಲಿ ಸೆರೆಯಾಳಾಗಿರುವ ಖೈದಿಗಳಲ್ಲಿ ಬಹುಪಾಲು ಮಂದಿ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 109ರ ಅಡಿಯಲ್ಲಿದ್ದವರು ಎಂಬುದು ನನಗೆ ಗೊತ್ತಿರಲಿಲ್ಲ. ಅದೊಂದು ಎಡಬಿಡಂಗಿ ಸೆಕ್ಷನ್. ಕೆಲವೊಮ್ಮೆ ಇಂಗ್ಲಿಷರು ನಮ್ಮಂಥ ಜನರ ಮೇಲೆ ಈ ಅಸ್ತ್ರವನ್ನು ಪ್ರಯೋಗಿಸುತ್ತಿದ್ದರು. ಇದು ಶುದ್ಧ ಅರಣ್ಯನ್ಯಾಯದ ಕಾನೂನಿನಂತೆ ಇದೆ. ಆ ಕಾಲಕ್ಕೆ ಇದರ ಬಗ್ಗೆ ನೀವು ಕೂಡ ಹೀಗೆಯೆ ಹೇಳುತ್ತಿದ್ದಿರಿ. ನನಗೆ ತಿಳಿದ ಮಟ್ಟಿಗೆ ಈ ಕಾನೂನು ಭಾರತದ ಸಂವಿಧಾನಕ್ಕೆ ವಿರೋಧವಾಗಿದೆ. ಪಾಪ, ನಮ್ಮ ಆ ಬಡಪಾಯಿ ಸಂವಿಧಾನ ಎಲ್ಲೆಲ್ಲಿ ಎಷ್ಟೆಷ್ಟು ಧಕ್ಕೆಗೊಳಗಾಗುತ್ತಿದೆಯೊ ಏನೋ? ನನ್ನ ಸಂದರ್ಭಕ್ಕೆ ಅನ್ವಯಿಸಿಯಷ್ಟೆ ಹೇಳುವುದಾದರೆ, ಕನಿಷ್ಠ ಇದರ ಐದು ಮೂಳೆಗಳು ಮುರಿದಿವೆ. ದ್ರಾವಿಡ ಕಳಗಂ ಕೇವಲ ಇದರ ಪ್ರತಿ ಇಲ್ಲವೇ ಆಕೃತಿಗಳನ್ನು ಸುಟ್ಟು ಹಾಕುತ್ತಿದೆಯಾದರೆ, ನೀವು ಹಾಗೂ ನಿಮ್ಮ ಒಡೆಯರು ಇದರ ಮೂಳೆಗಳನ್ನೇ ಮುರಿಯುತ್ತಿದ್ದೀರಿ; ಕೊಡಲಿ ಪೆಟ್ಟು ಹಾಕುತ್ತಿದ್ದೀರಿ. ಯಾರು ಹೆಚ್ಚು ದೇಶದ್ರೋಹಿಗಳು? ಸೆಕ್ಷನ್ 109 ಅನ್ನುವುದನ್ನು ಇನ್ನೂ ಏಕೆ ಉಳಿಸಿಕೊಂಡು ಬಂದಿದ್ದೀರಿ? ಇದರ ಹಸಿ ಸುಳ್ಳಿನ ಬಗ್ಗೆ ನಿಮಗೆ ಗೊತ್ತಿಲ್ಲವೆ? ಒಂದು ಕಬ್ಬಿಣದ ಸರಳು, ಮೇಣದ ಬತ್ತಿ, ಒಂದು ಬೆಂಕಿಕಡ್ಡಿ–ಈ ಮೂರು ಪದಾರ್ಥಗಳನ್ನು ಪೋಲೀಸರು ನ್ಯಾಯಾಲಯದಲ್ಲಿ ಹಾಜರುಮಾಡಿ ಇಂಥ ಆಸಾಮಿಯ ಹತ್ತಿರ ಇವು ಸಿಕ್ಕಿದವು, ಅದೂ ಅರ್ಧರಾತ್ರಿಯಲ್ಲಿ ಅಂತ ಹೇಳಿದರೆ ಸಾಕು, ಒಂದು ವರ್ಷದ ಶಿಕ್ಷೆ ಖಾತರಿಯಾಯಿತು ಅಂತಲೇ ಲೆಕ್ಕ. ನನಗೆ ಅನ್ನಿಸುವ ಮಟ್ಟಿಗೆ ರಾಜ್ಯಾದ್ಯಂತ ಈ 109 ನೇ ಸೆಕ್ಷನ್ ಅನ್ವಯ ಕಡೇ ಪಕ್ಷ ಮೂರು ನಾಲ್ಕು ಸಾವಿರ ಸೆರೆಯಾಳುಗಳಾದರೂ ಇರಬೇಕು. ಆ ಲೆಕ್ಕದಲ್ಲಿ ನೋಡಿದರೆ ದೇಶದಲ್ಲಿ ಸುಮಾರು ಹದಿನೈದು ಇಪ್ಪತ್ತು ಸಾವಿರ ಮಂದಿಯಾದರೂ ಜೈಲಿನಲ್ಲಿ ಕೊಳೆಯುತ್ತಿರಬೇಕು. ಇವರಲ್ಲಿ ಸುಮಾರು ಅರ್ಧದಷ್ಟು ಕಳ್ಳತನದ ದೆಸೆಯಿಂದ ಸೆರೆಯಲ್ಲಿರಬಹುದು. ಆದರೆ ಉಳಿದ ಅರ್ಧಮಂದಿ ಪೋಲೀಸರು, ನ್ಯಾಯಾಧೀಶರುಗಳು ಹಾಗೂ ಜೈಲು ವ್ಯವಸ್ಥೆ ಇವುಗಳಿಂದ ಕಳ್ಳರೆಂದೆನಿಸಿಕೊಂಡು ಬಿಟ್ಟಿದ್ದಾರೆ.

ನಾನು ವಾಸ್ತವವಾಗಿ ಹೇಳಲು ಹೊರಟಿರುವ ವಿಷಯ ಬೇರೆಯದೇ ಆಗಿದೆ: ಕಳ್ಳರನ್ನಾಗಿ ಮಾಡುವ ನ್ಯಾಯಾಲಯ ಹಾಗೂ ನ್ಯಾಯಾಧೀಶರ ಬಗೆಗೆ ಹೇಳಬೇಕಾಗಿದೆ. ಒಂದೇ ಒಂದು ಕಬ್ಬಿಣದ ಸಣ್ಣ ಸರಳಿನಿಂದ ನೂರಾರು ಜನಕ್ಕೆ ಶಿಕ್ಷೆ ಜಾರಿ ಮಾಡಬಲ್ಲರೆಂದು ನನಗೆ ಈಗ ಅರ್ಥಮಾಡಿಕೊಳ್ಳಲು ಸಾಧ್ಯವಾಗಿದೆ. ಶಿಕ್ಷೆ ನೀಡತಕ್ಕದ್ದೆಂದು ವಾದಿಸುವವರು, ಶಿಕ್ಷೆಗೆ ಒಳಗಾಗುವವರು, ಶಿಕ್ಷೆ ನೀಡುವವರು

ಎಲ್ಲರೂ ಈ ನ್ಯಾಯ ಎಂಬುದು ಸುಳ್ಳಿನ ಗೋಪುರದ ಮೇಲೆ ನಿಂತಿದೆ ಎಂಬುದನ್ನು ಬಲ್ಲರು. ಶಿಕ್ಷೆಗೆ ಒಳಪಡುವವರು ನಿಜವಾಗಿಯೂ ಕಳ್ಳರು, ಖದೀಮರು ಆಗಿದ್ದಾರೆಂದು ಒಂದು ಪಕ್ಷ ಭಾವಿಸಿದರೂ ಅವರು ಅಪರಾಧಿಗಳೆಂದು ಸಾಬೀತುಪಡಿಸುವ ನಿಟ್ಟಿನಲ್ಲಿ ಸರ್ಕಾರದವರು, ಮ್ಯಾಜಿಸ್ಟ್ರೇಟರು ಅದೆಷ್ಟು ದೊಡ್ಡ ಕಳ್ಳರಾಗಿ ಹೋಗುತ್ತಿದ್ದಾರೆ? ಹಾಗೆಯೇ ಸುಳ್ಳು ಹೇಳುವುದು, ಕದಿಯುವುದು ಅಭ್ಯಾಸವಾಗಿ ಬಿಡುತ್ತದೆ. ಮೊದಲಿಗೆ ಸರ್ಕಾರಕ್ಕೆ ಹಾಗೂ ಮ್ಯಾಜಿಸ್ಟ್ರೇಟರಿಗೆ ಕಳ್ಳಖದೀಮರ ಜೊತೆ ವ್ಯವಹರಿಸಿ ಸುಳ್ಳು ಹೇಳುವ, ಕಳ್ಳತನ, ಮಾಡುವ ಚಾಳಿ ಬಂದುಬಿಡುತ್ತದೆ. ಆಮೇಲೆ ನನ್ನಂತಹ ಮನುಷ್ಯರ ಮೇಲೆ ಅದೇ ಕಳ್ಳತನ ಸುಳ್ಳುಗಾರಿಕೆಯ ಅಸ್ತ್ರ ಪ್ರಯೋಗಿಸುತ್ತಾರೆ. ಹೇಗೂ ಅಭ್ಯಾಸ ಆಗಿಹೋಗಿರುತ್ತದಲ್ಲ? ಈ ಕಾರಣದಿಂದಾಗಿ ಸರ್ಕಾರಿ ನೌಕರರುಹಾಗೂ ನ್ಯಾಯಾಲಯಗಳು ದುರಭ್ಯಾಸಗಳಿಗೆ ಬೀಳುವುದಕ್ಕೆ ಅವಕಾಶ ಕೊಡಬಾರದು. ಮೊದಲು ನನಗೆ ಈ ವಿಚಾರ ಗೊತ್ತಿರಲಿಲ್ಲ. ಈಗ ಚೆನ್ನಾಗಿ ಗೊತ್ತಾಗಿದೆ. ತೀರ ಅಪರಾಧಿ ಎಂದೆನಿಸಿಕೊಳ್ಳುವ ವ್ಯಕ್ತಿಗಳಿಗೂ ಸತ್ಯ, ನ್ಯಾಯ ಕಾನೂನುಗಳಿಗನುಗುಣವಾಗಿ ಶಿಕ್ಷೆ ಜಾರಿಯಾಗಬೇಕು. ಇಲ್ಲದಿದ್ದರೆ, ಅದೆಷ್ಟು ಮಂದಿ ನಿರಪರಾಧಿಗಳನ್ನು ಒಳಗೆ ಹಾಕುತ್ತಾ ಹೋಗುತ್ತೀರೋ? ಇಲ್ಲೇ ನನಗೆ ಗೊತ್ತಿರುವಂತೆ ಸೆಕ್ಷನ್ 109ರ ಅಡಿಯಲ್ಲಿ ಒಬ್ಬ ಖೈದಿ ಹತ್ತು ಹನ್ನೆರಡು ವರ್ಷಗಳಿಂದ ಸೆರೆಯಲ್ಲಿದ್ದಾನೆ. ಅವನ ಒಡಹುಟ್ಟಿದ ಸಹೋದರನಿಂದ ಬೇರೆಯಾಗಿ ಜೈಲಿನಲ್ಲಿ ಕೊಳೆಯುತ್ತಿದ್ದಾನೆ. ಅವನು ಎಲ್ಲಿದ್ದಾನೆ ಎಂಬುದು ಇವನಿಗೆ ಗೊತ್ತಿಲ್ಲ, ಇವನು ಇಲ್ಲಿದ್ದಾನೆ ಅಂತ ಅವನಿಗೆ ಗೊತ್ತಿಲ್ಲ.

ಈ ಬಾರಿ ನನಗೆ ದುಃಖ ಎಂದರೇನು, ದುಃಖದಲ್ಲಿ ತೊಳಲಾಡುತ್ತಿರುವವರ ಸ್ಥಿತಿಗತಿಗಳೇನು-ಎಂಬ ವಿಚಾರದಲ್ಲಿ ಸ್ವಲ್ಪ ಹೆಚ್ಚಿನ ತಿಳಿವಳಿಕೆ ದೊರೆಯಿತು. ಪ್ರಾಯಶಃ ಪ್ರತಿಯೊಂದು ಪಟ್ಟಣದಲ್ಲೂ ದುಃಖದ ಇಷ್ಟೊಂದು ದೊಡ್ಡ ಮಡುಗಳು ಇದ್ದೇ ಇರುತ್ತವೆಂದು ನನಗೆ ಈ ಮಟ್ಟಿಗೆ ಅರ್ಥವಾಗಿರಲಿಲ್ಲ. ಇದೇ ಲಖ್ನೋ ಪಟ್ಟಣದಲ್ಲಿ ಹಾಗೂ ಇತರ ಊರುಗಳಲ್ಲಿ ಇನ್ನೂ ದೊಡ್ಡ ಹಾಗೂ ಚಿಕ್ಕ ಜೈಲುಗಳು, ದುಃಖದ ಗೂಡುಗಳು- ಎಷ್ಟು ಇವೆಯೊ ಸರಿಯಾಗಿ ಗೊತ್ತಿಲ್ಲ. ಜೈಲು ಎಂಬ ಹೆಸರಿನಿಂದ ಅವುಗಳನ್ನು ಕರೆಯದೆ ಇರಬಹುದು. ಹಾಗೆಯೇ ಈ ಜೈಲುಗಳಿಂದ ಹೊರಗೆ ಇರುವವರ ನೋವೇನು ಕಡಿಮೆಯೆ? ಗುಂಟಹೀ ಎಂಬೆಡೆಗೆ ಸೇರಿದ ಟೇಂಗರಿ ಹರಿಜನ್ ನವಂಬರ್ ಏಳರಂದು. ಹಸಿವಿನಿಂದ ಸತ್ತರು. ಏಳುದಿನಗಳ ನಂತರ ಅವರ ಮಗ ಹರಿಶರಣ್ ತಿನ್ನಲು ಏನೂ ದೊರೆಯದೆ, ಹೊಟ್ಟೆ ಹಸಿವಿನಿಂದ ಸಾವಿಗೆ ಶರಣಾದ. ನಾನು ಈ ಸುದ್ದಿ ಓದಿದಾಗ ಟೇಂಗರಿಯ ವಿಧವೆ ಹೆಂಡತಿ ಹಾಗೂ ಮೂರುಮಂದಿ ಮಕ್ಕಳು ಸಾವಿನ ತೆಕ್ಕೆಗೆ ಬೀಳುವ ಅಂಚಿನಲ್ಲಿದ್ದರು. ಹೀಗೆ

ತಿನ್ನುವುದಕ್ಕೆ ಏನೂ ಗತಿಯಿಲ್ಲದೆ ಸಾವಿರಾರು ಮಂದಿ ಸಾವಿಗೆ ಶರಣಾಗುತ್ತಿದ್ದಾರೆ. ಹೊಟ್ಟೆಯ ಬೆಂಕಿ ಹಗಲು ರಾತ್ರಿಯೆನ್ನದೆ, ಕೋಟ್ಯಾಂತರ ಮಂದಿಯನ್ನು ಸುಡುತ್ತಾ ಹೋಗುತ್ತಿದೆ. ಯಾವಳೋ ತಾಯಿ ತನ್ನ ಮಗುವಿಗೆ ಸರಿಯಾಗಿ ಬಟ್ಟೆ ತೊಡಿಸಲು ಸಾಧ್ಯವಾಗದೆ ಒಂದೆಡೆ ಕಣ್ಣೀರು ಹರಿಸುತ್ತಿದ್ದರೆ, ಇನ್ನಾವನೋ ತಂದೆ ಇನ್ನೆಲ್ಲೋ ತನ್ನ ಮಗುವಿಗೆ ಬೇಕಾದ ಔಷಧ ಕೊಂಡುತರಲಾಗದೆ, ಇಲ್ಲವೆ ಮಗುವನ್ನು ಸರಿಯಾಗಿ ಓದಿಸಲಾಗದೆ, ಹಣೆ ಹಣೆ ಚಚ್ಚಿಕೊಳ್ಳುತ್ತಿದ್ದಾನೆ. ಈ ಜನ ತಮ್ಮ ದುಃಖವನ್ನು ತಾವೇ ನುಂಗಿಕೊಂಡು ಬದುಕುತ್ತಿದ್ದಾರೆ. ಅವರೂ ನೋವುಂಡವರು, ನಾನೂ ನೋವುಂಡವನು. ನಾನು ಈಗ ಅವರ ಅಳಲನ್ನು, ನೋವನ್ನು ಇನ್ನೂ ಆಳವಾಗಿ ಅರ್ಥಮಾಡಿಕೊಳ್ಳಬಲ್ಲೆ. ನಮ್ಮಿಬ್ಬರ ನೋವಿಗೆ ಕಾರಣ ಕೂಡ ಬಹುಮಟ್ಟಿಗೆ ಒಂದೇ ವಿಧವಾದುದು. ಇವರಲ್ಲಿ ಬಹಳ ಮಂದಿ ನಿಮ್ಮಂಥವರಿಗೆ ಶಾಪಹಾಕುತ್ತಿರಬಹುದು. ಶಾಪ ಹಾಕುವುದು ಹೇಗೆಂದು ನನಗೆ ಗೊತ್ತಿಲ್ಲ; ಹಾಗೆ ಮಾಡಲು ಬಯಸುವುದೂ ಇಲ್ಲ. ಶಾಪಹಾಕುವುದು ದುರ್ಬಲರ ಅಸ್ತ್ರ, ಅಲ್ಲದೆ ಕೊನೆಗೆ ಅದು ಈ ದೌರ್ಬಲ್ಯವನ್ನು ಬದುಕಿನ ಒಂದು ಭಾಗವಾಗಿ ಮಾಡಿಬಿಡುತ್ತದೆ. ದುಃಖದಲ್ಲಿ ಮುಳುಗಿರುವ ಈ ಮಂದಿ ಶಕ್ತರಾಗಬೇಕು, ಸಂತುಷ್ಟರಾಗಬೇಕು. ಆ ದಿನವನ್ನು ನಾನು ಕಣ್ಣಾರೆ ನೋಡಬಯಸುತ್ತೇನೆ.

ನೀವು ಈ ಪತ್ರವನ್ನು ಓದಲೇಬೇಕಾದ ಅಗತ್ಯವಿಲ್ಲ. ಬಂದಿಖಾನೆ ಸಚಿವರಾಗಿರುವ ಕಾರಣ ಮಾತ್ರದಿಂದ ಇದನ್ನು ನಿಮ್ಮ ಹೆಸರಿಗೆ ಬರೆದು ಕಳಿಸಿದ್ದೇನೆ. ಒಂದು ವೇಳೆ ಕಾಗದ ಓದಿ, ಕೆಲವೆಡೆಗಳಲ್ಲಿ ಕೆಟ್ಟದ್ದೆನಿಸಿದರೆ, ನನಗೆ ಉತ್ತರ ಬರೆಯುತ್ತಾ ಕೂರುವ ಅಗತ್ಯವೂ ಇಲ್ಲ ಎಂದು ತಿಳಿಸಬಯಸುತ್ತೇನೆ.

ನಿಮ್ಮ,

ರಾಮಮನೋಹರ ಲೋಹಿಯಾ

(1957)

ಹಿಂದಿಯಿಂದ ಕನ್ನಡಕ್ಕೆ : ಲಕ್ಷ್ಮೀನಾರಾಯಣ ಅರೋರಾ

ವಿ.ಸೂ. : ಈ ದಿನ, 21ನೇ ತಾರೀಕಿನ ಬೆಳಗ್ಗೆ, ನನಗೊಂದು ಪತ್ರ ಬಂದಿದೆ. ನಾನು ನವಂಬರ್ ಎಂಟರಂದು ಬರೆದ ಪತ್ರ ಇಲ್ಲಿಂದ ಮುವ್ವತ್ತನೇ ತಾರೀಕು ರವಾನೆಯಾಯಿತೆಂದು ಅದರಿಂದ ತಿಳಿದುಬರುತ್ತದೆ.

ಯಜಮಾನಿಕೆಯ ಭಾಷೆ ಹಾಗೂ ಜನಭಾಷೆಗಳ ಮುಖಾಮುಖಿ

ಭಾಷೆಯ ಬಗೆಗಿನ ನನ್ನ ವಿಚಾರಗಳನ್ನು ಸಾಧ್ಯವಿದ್ದಷ್ಟು ಅಡಕವಾಗಿ ನಿರೂಪಿಸುತ್ತಿದ್ದೇನೆ. ಇಷ್ಟಾಗಿಯೂ ನನ್ನ ವಿಚಾರಗಳು ಟೀಕೆ ಅಥವಾ ಲೇವಡಿ ಮಾತಿನ ಮಹಾಪೂರವನ್ನು ಎದುರಿಸಬೇಕಾಗಿ ಬಂದರೆ, ಅಂಥ ಟೀಕೆ ಟಿಪ್ಪಣಿಗಳಿಗೆ ಭದ್ರ ಬುನಾದಿ ಸಿಗಲಿ ಎನ್ನುವುದು ನನ್ನ ಉದ್ದೇಶ.

ಇಂಗ್ಲಿಷ್ ಭಾಷೆಯು ಭಾರತಕ್ಕೆ ಅಪಾಯ ಮಾಡುತ್ತಿರುವುದಕ್ಕೆ, ಅದು ವಿದೇಶಿ ಭಾಷೆ ಎನ್ನುವುದಕ್ಕಿಂತ ಹೆಚ್ಚಾಗಿ ಭಾರತದ ಸಂದರ್ಭದಲ್ಲಿ ಅದು ಯಜಮಾನಿಕೆಯ ಭಾಷೆಯಾಗಿರುವುದೇ ಪ್ರಮುಖ ಕಾರಣ. ಜನಸಂಖ್ಯೆಯ ಶೇಕಡಾ ಒಂದರಷ್ಟು ಮಾತ್ರ ಇರುವ ಅಲ್ಪಸಂಖ್ಯಾತ ವರ್ಗವು ಲಾಭ ಹಾಗೂ ಅಧಿಕಾರ ಗಿಟ್ಟಿಸಲು ಬೇಕಾಗುವಷ್ಟು ನೈಪುಣ್ಯವನ್ನು ಈ ಭಾಷೆಯಲ್ಲಿ ಪಡೆಯಬಲ್ಲದು. ಈ ಅಲ್ಪಸಂಖ್ಯಾತ ವರ್ಗಕ್ಕೆ ಇಂಗ್ಲಿಷ್ ಭಾಷೆಯು ಜನಸಮೂಹದ ಮೇಲೆ ಆಧಿಪತ್ಯ ನಡೆಸಲು ಹಾಗೂ ಅವರನ್ನು ಶೋಷಿಸಲು ಒಂದು ಸಾಧನವಾಗಿದೆ.

ಇಂಗ್ಲಿಷ್ ಒಂದೇ ಜಾಗತಿಕ ಭಾಷೆಯಲ್ಲ; ಫ್ರೆಂಚ್ ಹಾಗೂ ಸ್ಪ್ಯಾನಿಷ್ ಈಗಾಗಲೇ ಆ ಮಟ್ಟದ ಭಾಷೆಗಳಾಗಿದ್ದು, ರಷ್ಯನ್ ಭಾಷೆ ಆ ಸ್ಥಾನಕ್ಕೆ ಏರತೊಡಗಿದೆ. ಜಗತ್ತಿನ ಒಟ್ಟು 300 ಕೋಟಿ ಜನಸಂಖ್ಯೆಯ ಪೈಕಿ ಹೆಚ್ಚೆಂದರೆ 30 ರಿಂದ 35 ಕೋಟಿ ಜನ-ಅಂದರೆ ಹತ್ತರಲ್ಲೊಬ್ಬ-ಈ ಭಾಷೆಯನ್ನು ಸುಮಾರಾಗಿ ಬಲ್ಲವರಾಗಿದ್ದಾರೆ. ಸಂಸ್ಕೃತ, ಪಾಲಿ, ಅರೇಬಿಕ್, ಗ್ರೀಕ್ ಹಾಗೂ ಲ್ಯಾಟಿನ್ ಭಾಷೆಗಳು ತಮ್ಮ ತಮ್ಮ ಕಾಲದಲ್ಲಿ ಜಾಗತಿಕ ಭಾಷೆಗಳಾಗಿ ಬೆಳೆಯುತ್ತಿರುವಂತೆ ಕಂಡರೂ ಅದು ಸಾಧ್ಯವಾಗಲಿಲ್ಲ. ಇದೀಗ ಇಂಗ್ಲಿಷ್ ಭಾಷೆ- ವಿಶೇಷವಾಗಿ ರಷ್ಯನ್ ಭಾಷೆಯ ಪ್ರಸಾರದ ಹಿನ್ನೆಲೆಯಲ್ಲಿ - ಪತನದ ಹಾದಿ ಹಿಡಿದಿದೆ. ಎಂದಾದರೂ ಒಂದು ಜಾಗತಿಕ ಭಾಷೆ ಅಸ್ತಿತ್ವದಲ್ಲಿ ಬಂದರೆ, ಅದು ಇಂದು ಇರುವ ಯಾವ ಭಾಷೆಯೂ ಆಗಿರಲಾರದು.

ಇಂಗ್ಲಿಷ್ ತನ್ನ ಮಿತಿಗಳೊಳಗೆ ಒಂದು ಕೋಮಲ ಭಾಷೆಯಾಗಿದೆ; ಅದು ಫ್ರೆಂಚ್ ಭಾಷೆಯಷ್ಟು ರಸವತ್ತಾಗಿಲ್ಲ. ಜರ್ಮನ್ ಭಾಷೆಯಷ್ಟು ಆಳವನ್ನು ಹೊಂದಿಲ್ಲ. ಆದರೂ ಹೆಚ್ಚು ಸಮರ್ಥವಾಗಿದೆ, ಮುಕ್ತವಾಗಿದೆ ಹಾಗೂ ಉದಾರಿಯಾಗಿದೆ. ''ಇಂಗ್ಲಿಷ್ ತೊಲಗಿಸಿ'' ಎಂದು ನಾವು ಘೋಷಣೆ ಕೂಗಿದ ಮಾತ್ರಕ್ಕೆ ಅದನ್ನು ಇಂಗ್ಲೆಂಡಿನಿಂದಾಗಲೀ ಅಮೆರಿಕೆಯಿಂದಾಗಲೀ ತೊಲಗಿಸುವುದು ನಮ್ಮ ಉದ್ದೇಶವಲ್ಲ. ಈ ಭಾಷೆ ಒಂದು ಐಚ್ಛಿಕ ವಿಷಯವಾದರೆ, ನಾವು ಅದನ್ನು ಭಾರತದ ಕಾಲೇಜುಗಳಿಂದಲೂ ತೊಲಗಿಸಬಯಸುವುದಿಲ್ಲ.

ಅಳಿದು ಹೋಗಲು ಸಿದ್ಧವಿರದ ಬದುಕಿನ ಶೈಲಿಯೊಂದಿಗೆ ಬದುಕುತ್ತಾ ನಮ್ಮನ್ನು ನಾವೇ ನಾಗರಿಕರೆಂದು ಭಾವಿಸಿದವರು ನಾವು. ಒಟ್ಟು ಜನಸಂಖ್ಯೆಯ ಶೇಕಡಾ 99 ಜನರಿಗೆ ಅರ್ಥವಾಗದ ಭಾಷೆಯಲ್ಲಿ ಶಾಸನ ಸಭೆ, ನ್ಯಾಯಾಲಯ, ಪ್ರಯೋಗಾಲಯ, ಕಾರ್ಖಾನೆ, ತಂತಿ, ರೈಲು ಮೊದಲುಗೊಂಡು ಸರಕಾರೀ ಹಾಗೂ ಸಾರ್ವಜನಿಕ ಚಟುವಟಿಕೆಗಳನ್ನು ನಿರ್ವಹಿಸುವ ಜಗತ್ತಿನ ಏಕೈಕ ನಾಗರಿಕ ದೇಶವೆಂದರೆ ಭಾರತವೇ. ಜಗತ್ತಿನ ಬೇರೆ ಯಾವುದೇ ನಾಗರಿಕ ಅಥವಾ ಅನಾಗರಿಕ ದೇಶ ಹೀಗೆ ಮಾಡುತ್ತಿಲ್ಲ. ಒಂದು ದೇಶದ ಭಾಷೆಗಳೆಲ್ಲ ಅಳಿದು ಹೋದಾಗ, ಇಲ್ಲವೆ ಇಂಗ್ಲಿಷನ್ನು ಆದರ ಯಾವುದೇ ಮಿಶ್ರರೂಪದಲ್ಲಿ ಜನರು ಬಳಸತೊಡಗಿದಾಗ ಮಾತ್ರ, ಆ ದೇಶ ತನ್ನ ಸಾರ್ವಜನಿಕ ಚಟುವಟಿಕೆಗಳಿಗಾಗಿ ಈ ಭಾಷೆಯನ್ನು ಉಪಯೋಗಿಸಿದೆ . ''ಇಂಗ್ಲಿಷ್ ತೊಲಗಿಸಿ'' ಆಂದೋಲನವು ನಮ್ಮ ದೇಶದಲ್ಲಿ ಸಾರ್ವಜನಿಕ ಹಾಗೂ ಸಾಮುದಾಯಿಕ ಜೀವನದಲ್ಲಿ ಇಂಗ್ಲಿಷ್ ಬಳಕೆಯನ್ನು ತಡೆಯಬಯಸುತ್ತದೆ; ಅಭಿವ್ಯಕ್ತಿ ಮಾಧ್ಯಮವಾಗಿ ಆ ಪರಭಾಷೆಯು ಉಳಿಯಲೇಬಾರದು. ಹೆಚ್ಚಿನ ತಿಳಿವಳಿಕೆಗಾಗಿ ಅದನ್ನು ಐಚ್ಛಿಕ ವಿಷಯವನ್ನಾಗಿ ಉಳಿಸಿಕೊಳ್ಳಬಹುದು. ಎಲ್ಲರಿಗೂ ಗೊತ್ತಿರುವಂತೆ ಫ್ರೆಂಚ್ ಹಾಗೂ ಜರ್ಮನ್ ಭಾಷೆಗಳಲ್ಲಿ ಷೇಕ್ಸ್‌ಪಿಯರ್ ಕೃತಿಗಳ ಉತ್ಕೃಷ್ಟ ವಿಮರ್ಶಕರಿದ್ದಾರೆ. ಇವರೆಲ್ಲರೂ ಷೇಕ್ಸ್‌ಪಿಯರ್‌ನ ಕೃತಿಗಳನ್ನು ಮೂಲದಲ್ಲೇ ಓದಿದರೂ, ವಿಮರ್ಶೆಯನ್ನು ತಮ್ಮ ತಮ್ಮ ಭಾಷೆಯಲ್ಲೇ ಬರೆದರು. ಭಾರತದಲ್ಲಿ ಅವರಿಗಿಂತ ಸಾವಿರ ಪಟ್ಟು ಹೆಚ್ಚು ಷೇಕ್ಸ್‌ಪಿಯರ್ ಸಾಹಿತ್ಯದ ವಿದ್ವಾಂಸರಿದ್ದರೂ ಒಬ್ಬ ಮಹತ್ವದ ವಿಮರ್ಶಕನೂ ಇಲ್ಲ. ಅದಕ್ಕೆ ಕಾರಣ ನಾವು ಇಂಗ್ಲಿಷನ್ನು ಗ್ರಹಿಕೆಯ ಮಾಧ್ಯಮವನ್ನಾಗಿ ಅಷ್ಟೇ ಅಲ್ಲ, ಅಭಿವ್ಯಕ್ತಿ ಮಾಧ್ಯಮ ವನ್ನಾಗಿಯೂ ಬಳಸುತ್ತಿರುವುದೇ ಆಗಿದೆ.

ಭಾರತದಲ್ಲಿ ಸ್ವತಂತ್ರ ಚಿಂತನೆ ಸಾವಿರ ವರ್ಷಗಳ ಹಿಂದೆಯೇ ಸತ್ತು ಹೋಯಿತು; ಅದಕ್ಕೆ ಮತ್ತೆ ಚಾಲನೆ ನೀಡಲಾಗಿಲ್ಲ. ಹೀಗಾಗಲು ಇಂಗ್ಲಿಷಿನ

ಕಪಿಮುಷ್ಠಿಯೇ ಮುಖ್ಯ ಕಾರಣವಾಗಿದೆ. ಇತ್ತೀಚಿನ ಕೆಲವು ದಶಕಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ಪ್ರಥಮ ದರ್ಜೆಯ ವಿಜ್ಞಾನಿಗಳು–ಅದೂ ಸರ್ವಶ್ರೇಷ್ಠರಲ್ಲ– ಪ್ರವರ್ಧಮಾನಕ್ಕೆ ಬರಲು ಕಾರಣ, ಅವರು ಸಂಖ್ಯೆ ಸಂಕೇತಗಳ ಜೊತೆಗೆ ವ್ಯವಹರಿಸುವರೇ ಹೊರತು ಭಾಷೆಯ ಸಂಗಡ ಅಲ್ಲವೆನ್ನುವುದಾಗಿದೆ. ಸಾಮಾಜಿಕ ವಿಜ್ಞಾನ ಹಾಗೂ ತತ್ವಶಾಸ್ತ್ರಗಳಲ್ಲಂತೂ ನಮ್ಮ ಸಾಧನೆ ಶೂನ್ಯ. ನಾನು ಹೇಳುತ್ತಿರುವುದು ಈ ಶಾಸ್ತ್ರಗಳ ಮೂಲತತ್ವಗಳ ಬಗ್ಗೆಯೇ ವಿನಾ ವಿವರಣಾತ್ಮಕ ಕೃತಿಗಳನ್ನು ಕುರಿತಲ್ಲ. ಭಾರತದ ವಿದ್ವಾಂಸರು ಚಿಂತನೆಯ ಆಳ ಹಾಗೂ ಸುಸಂಬದ್ಧತೆಗಾಗಿ ಕಳೆಯುವ ಕಾಲಕ್ಕಿಂತಲೂ ಹೆಚ್ಚಿನ ವೇಳೆಯನ್ನು ಉಚ್ಚಾರ, ಪದಬಳಕೆ ಹಾಗೂ ನುಡಿಗಟ್ಟಿಗಾಗಿ ವ್ಯಯಿಸುತ್ತಿರುವುದೇ ಈ ಶೂನ್ಯ ಸಂಪಾದನೆಗೆ ಕಾರಣ. ಶಾಲಾ ವಿದ್ಯಾರ್ಥಿಗಳಿಂದ ಹಿಡಿದು ವೇದಿಕೆಯ ಮೇಲೆ ಮಿಂಚುವ ವಿದ್ವಾಂಸರವರೆಗೆ ಎಲ್ಲೆಲ್ಲೂ ಜ್ಞಾನ ಶಾಪಗ್ರಸ್ತವಾಗಿದೆ. ವಿಷಯದ ಪರಿಜ್ಞಾನದ ಬದಲಾಗಿ ಪದಪ್ರಯೋಗ ಹಾಗೂ ಆಡಂಬರದ ಶೈಲಿಯೇ ಭಾರತೀಯ ಚಿಂತನದ ಧ್ರುವತಾರೆಯಾಗಿದೆ.

ಕೈಗಾರಿಕೀಕರಣ ಸಾಧಿಸಲು ಭಾರತಕ್ಕೆ ಹತ್ತು ಲಕ್ಷ ಎಂಜಿನಿಯರ್‌ಗಳು, ವಿಜ್ಞಾನಿಗಳು ಹಾಗೂ ಒಂದು ಕೋಟಿ ಫೋರ್‌ಮನ್ ಅಥವಾ ಮೇಸ್ತ್ರಿಗಳ ಒಂದು ಬೃಹತ್ ಪಡೆಯ ಅವಶ್ಯಕತೆ ಇದೆ. ಇಂಗ್ಲಿಷ್ ಮಾಧ್ಯಮದ ಮೂಲಕ ಇಂಥ ಪಡೆಯನ್ನು ಕಟ್ಟಬಹುದೆಂದು ಯೋಚಿಸುವವನು ಧೂರ್ತ ಅಥವಾ ಮೂರ್ಖನೇ ಸರಿ. ಕೈಗಾರಿಕಾ ಕ್ಷೇತ್ರದಲ್ಲಿ ಜಪಾನ್, ಚೀನಾ ಇಲ್ಲವೆ ರುಮೇನಿಯಾ ಸಾಧಿಸಿರುವ ಪ್ರಗತಿಗೆ ಆ ದೇಶಗಳ ಉತ್ತಮ ಆರ್ಥಿಕವ್ಯವಸ್ಥೆ ಎಷ್ಟರ ಮಟ್ಟಿಗೆ ಕಾರಣವಾಗಿದೆಯೋ ಅಷ್ಟೇ ಆ ದೇಶಗಳು ತಮ್ಮ ಜನತೆಯ ಭಾಷೆಯ ಮೂಲಕ ಕಾರ್ಯ ನಿರ್ವಹಿಸಿದ್ದೂ ಕಾರಣವಾಗಿದೆ. ಮನಸ್ಸು ಹಾಗೂ ಉದರದ ಪರಸ್ಪರ ಪ್ರಭಾವ ವ್ಯಕ್ತಿಯ ಮೇಲಷ್ಟೇ ಅಲ್ಲ, ಸಮಾಜದ ಮೇಲೂ ಆಗುತ್ತದೆ. ಕರಿಯರ ದೇಶಗಳಲ್ಲಿ– ಅದರಲ್ಲೂ ವಿಶೇಷವಾಗಿ ಭಾರತೀಯರ ವಿಚಾರಧಾರೆಯಲ್ಲಿ ಮನಸ್ಸು ಮತ್ತು ಉದರವನ್ನು ಪ್ರತ್ಯೇಕಿಸಿರುವುದು ನಮ್ಮ ಕಾಲದ ದುರಂತಗಳಲ್ಲೊಂದು. ಯಾವುದೇ ದೇಶದ ಮನಸ್ಸಿಗೆ ಚಿಕಿತ್ಸೆ ನೀಡದೆಯೇ ಹಸಿವು ಅಥವಾ ಅರ್ಥವ್ಯವಸ್ಥೆಯನ್ನು ಸರಿಪಡಿಸಲಾಗದು.

ಹಿಂದಿ ಅಥವಾ ಬೇರೆ ಯಾವುದೇ ಭಾರತೀಯ ಭಾಷೆಯ ಸಾಮರ್ಥ್ಯದ ಪ್ರಶ್ನೆಯೇ ಏಳಕೂಡದು. ಈ ಭಾಷೆಗಳು ಅಸಮರ್ಪಕವಾಗಿದ್ದರೆ ಅವುಗಳನ್ನು ಸದಾ

ಬಳಸುವುದರ ಮೂಲಕವೇ ಸಮರ್ಥವಾಗಿ ಮಾಡುವುದು ಸಾಧ್ಯ. ಪಾರಿಭಾಷಿಕ ಪದಗಳನ್ನು ನಿರ್ಧರಿಸುವ ಮೂಲಕ ಅಥವಾ ಅರ್ಥಕೋಶ ಹಾಗೂ ಪಠ್ಯಪುಸ್ತಕ ಸಿದ್ಧಪಡಿಸುವ ಸಮಿತಿಗಳ ಮೂಲಕ ಯಾವುದೇ ಭಾಷೆ ಸಮರ್ಥವಾಗಲಾರದು. ಪ್ರಯೋಗಶಾಲೆ, ನ್ಯಾಯಾಲಯ, ಶಾಲೆಯಂಥ ಸ್ಥಳಗಳಲ್ಲಿ ಬಳಕೆಯಾದರೆ ಮಾತ್ರ ಭಾಷೆ ಸಶಕ್ತವಾಗುತ್ತದೆ. ಆರಂಭದಲ್ಲಿ ಗೊಂದಲವುಂಟಾದರೂ ಯಜಮಾನಿಕೆಯ ಭಾಷೆಯಿಂದ ಉಂಟಾಗುವ ಸಮಸ್ಯೆಗಿಂತ ಹೆಚ್ಚಿನ ಸಮಸ್ಯೆ ಉದ್ಭವಿಸಲಾರದು. ಮೊದಲು ಭಾಷೆಯ ಪ್ರತಿಷ್ಠಾಪನೆಯಾಗುತ್ತದೆ; ಅನಂತರ ಆ ಭಾಷೆಗೆ ಪರಿಪಕ್ವತೆ ಬರುತ್ತದೆ. ಈ ಪ್ರಕ್ರಿಯೆಯನ್ನು ತಿರುವು-ಮುರುವು ಮಾಡಿದ್ದರಿಂದ ಭಾರತ ತಿಳಿಗೇಡಿಯಾಗಿದೆ. ತಿರುವು-ಮುರುವಾದ ಈ ಪ್ರಕ್ರಿಯೆಯಿಂದಾಗಿ ಭಾರತೀಯ ಭಾಷೆಗಳಿಗೆ ಇಂಗ್ಲಿಷಿನಷ್ಟು ಪಕ್ವತೆ ಬರುವುದು ಸಾಧ್ಯವಾಗಿಲ್ಲ. ಹೀಗಾಗಿ ಈ ಭಾಷೆಗಳನ್ನು ಪ್ರತಿಷ್ಠಾಪಿಸುವ ಪ್ರಶ್ನೆ ಯಾರನ್ನೂ ಕಾಡುವುದಿಲ್ಲ. ಮೂಲಭೂತ ಪರಿಹಾರ ಕಂಡುಹಿಡಿಯದಿದ್ದರೆ ಒಂದೆಡೆ ಬಂಗಾಳಿ, ತಮಿಳು ಅಥವಾ ಹಿಂದಿ ಇನ್ನೊಂದೆಡೆ ಇಂಗ್ಲಿಷ್ ಇವುಗಳ ವಿಕಾಸದಲ್ಲಿ ಅಂತರ ಉಳಿದೇ ಇರುತ್ತದೆ. ಭಾರತೀಯ ಭಾಷೆಗಳನ್ನು ಪ್ರತಿಷ್ಠಾಪಿಸುವುದರ ಮೂಲಕ ಈ ಅಂತರ ಇಲ್ಲವಾಗಬಹುದು. ಈ ಭಾಷೆಗಳು ಅದೆಷ್ಟು ಬೆಳೆಯಬಲ್ಲವೆಂದರೆ ಇಂದಿನ ಜಗತ್ತಿನ ಅತ್ಯಾಧುನಿಕ ಹಾಗೂ ಅತ್ಯುತ್ಕೃಷ್ಟ ಭಾಷೆಗೆ ಸರಿಸಾಟಿಯಾಗಿ ನಿಲ್ಲಬಲ್ಲವು. ಅಷ್ಟೇ ಅಲ್ಲ ಒಂದು ಹೆಜ್ಜೆ ಮುಂದೆ ಇಡಬಲ್ಲವು.

ಹಿಂದೂಸ್ತಾನಿಯ ವಿರೋಧಿಗಳು ವಾಸ್ತವವಾಗಿ ಬಂಗಾಳಿ, ತಮಿಳು ಅಥವಾ ಮರಾಠಿಯ ವಿರೋಧಿಗಳೇ. ತಮ್ಮ ವರ್ಚಸ್ಸು ಹಾಗೂ ಶೋಷಣೆಯನ್ನು ಮುಂದುವರೆಸಲು ಹೆಣಗಾಡುವ ಮೇಲ್ವರ್ಗದವರ ಕಳವಳವನ್ನು ಕಂಡವರಿಗೆ ಈ ಮಾತು ಕಳೆದ ಒಂದು ದಶಕದಿಂದ ಸ್ಪಷ್ಟವಾಗಿದೆ. ಪ್ರಾದೇಶಿಕತೆಯ ಅಸ್ಪಷ್ಟವಾದ-ಆದರೆ, ಅಪಾಯಕಾರಿಯಾದ ಘೋಷಣೆ ಕೂಗುವವರೇ ಬಂಗಾಳದ ಕಾಲೇಜುಗಳಲ್ಲಿ ಬಂಗಾಳಿಯನ್ನು ಶಿಕ್ಷಣದ ಮಾಧ್ಯಮವನ್ನಾಗಿಸುವ ಪ್ರಯತ್ನದ ಮೇಲೆ ಕೂಡ ಹಲ್ಲೆ ಮಾಡುತ್ತಾರೆ. ಇಂಗ್ಲಿಷನ್ನು ತೊಲಗಿಸುವುದೆಂದರೆ ಹಿಂದಿಯನ್ನು ಆ ಸ್ಥಾನಕ್ಕೆ ತರುವುದಲ್ಲವೆಂದು ನಾನು ಸ್ಪಷ್ಟವಾಗಿ ಸೂಚಿಸಿದ್ದೇನೆ. ಇಂಗ್ಲಿಷನ್ನು ತೊಲಗಿಸುವುದೆಂದರೆ ತಮಿಳು, ತೆಲುಗು, ಬಂಗಾಳಿ, ಕನ್ನಡವೇ ಮುಂತಾದ ನಮ್ಮವೇ ಭಾಷೆಗಳನ್ನು ಅಧಿಕಾರದ ಗದ್ದುಗೆಗೆ ಏರಿಸುವುದೇ ಆಗಿದೆ.

ವಾಸ್ತವದಲ್ಲಿ ಇಲ್ಲದ ಉತ್ತರ ಮತ್ತು ದಕ್ಷಿಣದ ನಡುವಣ ವೈರುಧ್ಯವು ನಿರಂತರವೂ ಅಭಿವ್ಯಕ್ತಿ ಪಡೆಯುತ್ತಿದೆ. ಈ ಒಂದು ಮಾತಿನಿಂದ ಭಾಷಾ ಸಮಸ್ಯೆ

ಬಗ್ಗೆ ಅದೆಷ್ಟು ಕಡಿಮೆ ಗಮನ ನೀಡಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ವಿರೋಧವೆನ್ನುವುದಿದ್ದರೆ ವಾಸ್ತವವಾಗಿ ಅದು ಒಳನಾಡು ಹಾಗೂ ಕರಾವಳಿ ರಾಜ್ಯಗಳ ನಡುವೆ ಇದೆ. ನಮ್ಮ ದೇಶದ ಕರಾವಳಿ ರಾಜ್ಯಗಳಲ್ಲಿ ಹಿಂದಿಯಲ್ಲದ ಬೆಲೆ ಭಾಷೆಗಳನ್ನು ಆಡುತ್ತಾರೆ; ಒಳ ರಾಜ್ಯಗಳಲ್ಲಿ ಹಿಂದಿ ಮಾತನಾಡುವವರಿದ್ದಾರೆ. ಈ ಸಂದರ್ಭದಲ್ಲಿ ನಾನು ಸ್ಪಷ್ಟಪಡಿಸಬಯಸುವುದೇನೆಂದರೆ, ಉತ್ತರ ಭಾರತದ ಶಾಲೆಗಳಲ್ಲಿ ತಮಿಳನ್ನು ಕಡ್ಡಾಯವಾಗಿ ಕಲಿಸಬೇಕೆನ್ನುವ ಪ್ರಯತ್ನ ನಡೆದಿದ್ದು, ಈ ತೀಗೇಡಿಗಳು ಪರಿಸ್ಥಿತಿಯನ್ನು ಹದಗೆಡಿಸುತ್ತಿದ್ದಾರೆ. ತಮ್ಮ ಭಾಷೆಗಳನ್ನೂ ಏಕೆ ಕಲಿಸಬಾರದೆಂದು ಬಂಗಾಳಿ ಹಾಗೂ ಮರಾಠಿಗರು ಈಗಾಗಲೇ ಗೊಣಗ ತೊಡಗಿದ್ದಾರೆ. ಬಂಗಾಳಿ, ಒರಿಯಾ, ತೆಲುಗು, ತಮಿಳು, ಮಲಯಾಳಂ, ಕನ್ನಡ, ಮರಾಠಿ ಹಾಗೂ ಗುಜರಾತಿ ಕರಾವಳಿಯ ಭಾಷೆಗಳಾಗಿವೆ. ಒಳರಾಜ್ಯಗಳ ಭಾಷೆ, ಹಿಂದುಸ್ತಾನಿ ಹಾಗೂ ಕರಾವಳಿಯೇತರ ಈಶಾನ್ಯ ರಾಜ್ಯಗಳ ಭಾಷೆ ಅಸ್ಸಾಮೀ ಜನತೆಯ ಹಿತವನ್ನು ಲಕ್ಷ್ಯದಲ್ಲಿರಿಸಿಕೊಂಡರೆ, ಕರಾವಳಿ ಹಾಗೂ ಒಳರಾಜ್ಯಗಳ ನಡುವಣ ವಿವಾದಕ್ಕೆ ಅರ್ಥವೇ ಇಲ್ಲ. ಸದ್ಯದ ವಿವಾದ ಕೃತಕವಾದದ್ದು. ವಾಸ್ತವವಾಗಿ ಈ ವಿವಾದವನ್ನು ಹುಟ್ಟುಹಾಕಲು ಕಾರಣ ಕರಾವಳಿ ಹಾಗೂ ಒಳರಾಜ್ಯಗಳಲ್ಲಿನ ಮೇಲ್ವರ್ಗದವರ ಸ್ವಾರ್ಥ. ಈ ಸ್ವಾರ್ಥದಿಂದಾಗಿಯೇ ಎರಡೂ ಪ್ರದೇಶದ ಮೇಲ್ವರ್ಗದವರು ಇಂಗ್ಲಿಷನ್ನು ಶಾಶ್ವತಗೊಳಿಸುವ ಬೇಡಿಕೆಯನ್ನು ಮುಂದಿಡುತ್ತಾರೆ. ಇದೇ ರೀತಿ ಬಹುಸಂಖ್ಯಾತ ಸಮುದಾಯದ ಹಿತಾಸಕ್ತಿಗಳು ಇಂಗ್ಲಿಷನ್ನು ತೊಲಗಿಸುವ ಬೇಡಿಕೆಯನ್ನು ಮುಂದಿಡಬೇಕು. ಆದರೆ, ಈ ಜನರಿಗೆ ದನಿ ಇಲ್ಲ; ಅದೆಷ್ಟೋ ಸಲ ಇವರನ್ನು ದಾರಿ ತಪ್ಪಿಸಲಾಗುತ್ತದೆ.

ಭಾರತದ ಜನತೆ ಕತ್ತರಿಯ ಹಿಡಿತದಲ್ಲಿ ಸಿಕ್ಕಿ ಬಿದ್ದಿದೆ. ಕರಾವಳಿ ರಾಜ್ಯಗಳಲ್ಲಿ ಹಿಂದಿ ಹೇರುವ ಹುನ್ನಾರದ ಸಾಮ್ರಾಜ್ಯವಾದದ ಘೋಷಣೆ ಈ ಕತ್ತರಿಯ ಒಂದು ಅಲಗು. ಒಳರಾಜ್ಯಗಳ 'ದೇಶದ ವಿಘಟನೆ ಆಗುತ್ತದೆ' ಎಂಬ ಘೋಷಣೆ ಅದರ ಇನ್ನೊಂದು ಅಲಗು. ನೆಹರೂ ಹಾಗೂ ರಾಜಗೋಪಾಲಾಚಾರಿ ಸೇರಿಕೊಂಡು ಈ ಸೂತ್ರ ಕಂಡು ಹಿಡಿದಿದ್ದಾರೆ ಎಂದು ನಾನೇನೂ ಹೇಳುವುದಿಲ್ಲ. ಆದರೆ, ವಸ್ತುನಿಷ್ಠವಾಗಿ ನೋಡಿದರೆ ಆದದ್ದು ಹೀಗೆಯೇ. ಎರಡೂ ಪ್ರದೇಶಗಳ ಮೇಲುವರ್ಗದ ಜನರು ಇಂಗ್ಲಿಷನ್ನು ಉಳಿಸಿಕೊಳ್ಳಬಯಸುತ್ತಾರೆ. ಹಿಂದಿ ಸಾಮ್ರಾಜ್ಯವಾದದ ಘೋಷಣೆ ಕೂಗಿ, ಕರಾವಳಿಯ ಮೇಲ್ವರ್ಗ ಅಲ್ಲಿಯ ಜನತೆಗೆ ಮೋಸ ಮಾಡುತ್ತಿದೆ. ''ರಾಷ್ಟ್ರ ವಿಘಟನೆಯ ಘೋಷಣೆ'' ಮೂಲಕ ಒಳರಾಜ್ಯಗಳ ಮೇಲ್ವರ್ಗ ತನ್ನ ಜನತೆಗೆ ಮೋಸ ಮಾಡುತ್ತಿದೆ. ನನಗನ್ನಿಸುವಂತೆ ಒಳರಾಜ್ಯಗಳೇ ಹಿಂದೂಸ್ತಾನಿಯ ಕಡು

ವಿರೋಧಿಗಳು. ಏಕೆಂದರೆ ರಾಜಗೋಪಾಲಾಚಾರಿ ಇಂಗ್ಲಿಷ್ ಸಮರ್ಥಕರೆಂಬುದು ಎಲ್ಲರಿಗೂ ಗೊತ್ತು. ಆದರೆ ನೆಹರೂ ಅವರ ತಂತ್ರವನ್ನು ಬಲ್ಲವರು ಕಡಿಮೆ.

ಬ್ರಿಟಿಷ್ ಆಡಳಿತದಲ್ಲಿದ್ದಂತೆಯೇ ಈಗ ಕೂಡ ಭಾರತದ ಮೇಲ್ವರ್ಗದವರು ಸರ್ವತ್ರ ಒಂದೇ ಥರದವರು. ಹೆಚ್ಚೂ ಕಡಿಮೆ ಈ ಸಂಗತಿಯಲ್ಲೇ ಭಾರತೀಯ ಕ್ರಾಂತಿಯ ಘೋರ ಸೋಲಿನ, ಅಷ್ಟೇ ಏಕೆ ಕಳೆದ ಸಾವಿರ ವರ್ಷಗಳಲ್ಲಿ ಸಂಭವಿಸಿದ ಎಲ್ಲ ರಾಜಕೀಯ ಬಂಡಾಯಗಳ ಸೋಲಿನ ಕಾರಣಗಳನ್ನು ಅರಸಬಹುದು. ರಾಜ ಹಾಗೂ ವೈಸ್‌ರಾಯ್ ಹೋದರೂ ಮೇಲ್ವರ್ಗಗಳು ಉಳಿದೇ ಬಿಡುತ್ತವೆ. ಎಲ್ಲರಿಗೂ ಗೊತ್ತಿರುವಂತೆ ಜನತೆಯ, ಅದರಲ್ಲೂ ವಿಶೇಷವಾಗಿ ಕೆಳವರ್ಗ ಹಾಗೂ ರೈತರ ಸುದೀರ್ಘ ಹೋರಾಟದ ಮೂಲಕ ಸ್ವಾತಂತ್ರ್ಯ ಸಿಕ್ಕಿತು; ಅವರು ತಮ್ಮ ರಾಷ್ಟ್ರೀಯ ವಿಷಯಗಳಲ್ಲಿ ಹಿಂದಿಯನ್ನು ಹಾಗೂ ಪ್ರಾಂತೀಯ ವಿಷಯಗಳಲ್ಲಿ 'ತಂತಮ್ಮ ಕರಾವಳಿ ಭಾಷೆಗಳನ್ನು ಬಳಸಿದ್ದರು. 1919-20ರಲ್ಲಿ ಮಹಾತ್ಮಾ ಗಾಂಧಿ ಈ ಪರಿವರ್ತನೆ ತಂದಿದ್ದರು. ದೇಶವನ್ನು ಸ್ವತಂತ್ರಗೊಳಿಸಿದ್ದು ಇಂಗ್ಲಿಷ್ ಭಾಷೆ ಎನ್ನುವುದು ತುಂಬ ಕಪಟದ ಮಾತಾದೀತು; ಹೀಗೆನ್ನುವವರು ಇಂಗ್ಲಿಷ್ ಆಡಳಿತದ ಸಮರ್ಥಕರು. ಈ ಜನರು ಒಂದು ವೇಳೆ ಇಂಗ್ಲಿಷನ್ನು ವಿರೋಧ ಮಾಡಿದ್ದರೂ 1920ಕ್ಕೂ ಮೊದಲು ಅವರು ಬ್ರಿಟಿಷರ ಹಿತೈಷಿಗಳಾಗಿಯೇ ಉಳಿದಿದ್ದರು. ಅವರೆಷ್ಟು ಧೂರ್ತರೆಂದರೆ ಭಾಷೆಯನ್ನೊಳಗೊಂಡಂತೆ ತಮ್ಮ ವಿಶೇಷಾಧಿಕಾರಗಳನ್ನು ಸ್ವಾತಂತ್ರ್ಯಾನಂತರವೂ ಉಳಿಸಿಕೊಂಡಿದ್ದಾರೆ. ಅವರಿಗೆ ತಮ್ಮ ಧೂರ್ತತನ ಅಷ್ಟೊಂದು ಕೆಲಸಕ್ಕೆ ಬರಲಿಲ್ಲವೇನೋ? ರಾಷ್ಟ್ರೀಯ ಆಂದೋಳನದ ನಾಯಕತ್ವವನ್ನು ಅದೇ ವರ್ಗ ವಹಿಸಿಕೊಂಡಿತ್ತು ಎಂಬುದು ಮಹತ್ವದ ಸಂಗತಿ. ಸ್ವಾತಂತ್ರ್ಯ ಹೋರಾಟವನ್ನು ನಿರ್ವಹಿಸಿದ ದೇಶ ಭಾಷೆಗಳು ಪಾಳೇಗಾರ ಪ್ರಭುಗಳ ಭಾಷೆಯ ಎದುರು ಮಂಡಿಯೂರಿ ಕುಳಿತಿವೆ.

ವಾಸ್ತವದಲ್ಲಿ ನಮ್ಮ ದೇಶದ ಮೇಲ್ವರ್ಗದವರು ಪ್ರಭುತ್ವ, ಪ್ರತಿಷ್ಠೆ ಅಥವಾ ವಿಲಾಸವನ್ನು ಅಷ್ಟಾಗಿ ಅನುಭವಿಸುತ್ತಿಲ್ಲ. ಜನಸಾಮಾನ್ಯರಿಗೆ ಹೋಲಿಸಿದರೆ ಮಾತ್ರ ಅವರು ಸುಖಜೀವಿಗಳಾಗುತ್ತಾರೆ. ಯೂರೋಪಿನ ಮೇಲ್ವರ್ಗದವರಿಗೆ ಅಥವಾ ಅಲ್ಲಿನ ಜನಸಾಮಾನ್ಯರಿಗೆ ಹೋಲಿಸಿದರೆ ನಮ್ಮ ಮೇಲ್ವರ್ಗದವರ ಜೀವನ ಶೈಲಿ ಕಡಿಮೆ ಮಟ್ಟದ್ದಾಗಿದೆ. ಸುಮಾರು ಒಂದು ಸಾವಿರ ವರ್ಷಗಳಿಂದ ಇವರನ್ನು ಒಂದು ಚಿಂತೆ ಕೊರೆಯುತ್ತಿದೆ. ಅವರು ತಮ್ಮ ಜನತೆಗೇ ಹೆದರುತ್ತಾರೆ ಇಲ್ಲಾ ಅವರನ್ನು ಕೀಳೆಂದು ಪರಿಗಣಿಸುತ್ತಾರೆ. ಹೀಗಾಗಿ ಅವರ ಮನೋಧರ್ಮ ಸಂಕುಚಿತಗೊಂಡಿದೆ. ನಮ್ಮ ನೆರೆಹೊರೆಯವರೊಂದಿಗೆ ಸರಿಸಮನಾಗಿ ಬದುಕಬೇಕಾದರೆ ಆರ್ಥಿಕ

ಹಾಗೂ ಜ್ಞಾನದ ಕ್ಷೇತ್ರಗಳನ್ನೊಳಗೊಂಡಂತೆ ಎಲ್ಲ ಕ್ಷೇತ್ರಗಳಲ್ಲೂ ನಾವು ಪ್ರಗತಿ ಸಾಧಿಸಬೇಕು. ಆದರೆ, ಮೇಲ್ವರ್ಗದವರು ಇಂತಹ ಅನಿರ್ದಿಷ್ಟ, ಸರ್ವಾಂಗೀಣ ಪ್ರಗತಿಯಿಂದಾಗಿ ಗಾಬರಿಗೊಳ್ಳುತ್ತಾರೆ. ಅತ್ಯಂತ ಕಡಿಮೆ ಪ್ರಮಾಣದ ರಾಷ್ಟ್ರೀಯ ಉತ್ಪಾದನೆಯಲ್ಲಿನ ತಮ್ಮ ಸ್ವಂತದ ಪಾಲನ್ನು ಉಳಿಸಿಕೊಳ್ಳುವುದು ಇಲ್ಲವೆ ಹೆಚ್ಚಿಸಿಕೊಳ್ಳುವುದನ್ನು ಕುರಿತು ಮಾತ್ರ ಅವರು ತಲೆ ಕೆಡಿಸಿಕೊಳ್ಳುತ್ತಾರೆ. ಮೇಲ್ವರ್ಗ ಇಡಿಯಾಗಿ ತನ್ನ ಮನೋಧರ್ಮವನ್ನು ತ್ಯಜಿಸುವುದೆಂದು ನನಗೆ ಅನಿಸುತ್ತಿಲ್ಲ. ಈ ಸಂಕುಚಿತ ಸ್ವಾರ್ಥವು ಉಚ್ಚ ವರ್ಗ ಹಾಗೂ ರಾಷ್ಟ್ರವನ್ನು ಅಧೋಗತಿಗೆ ತಳ್ಳುತ್ತಿದೆ. ಆ ವರ್ಗದ ಯುವಕರು, ಅವರಲ್ಲಿನ ಒಂದು ಪುಟ್ಟ ಸಮೂಹವಾದರೂ ಈ ಸ್ಥಿತಿಯನ್ನು ಮೆಟ್ಟಿ ನಿಲ್ಲಬೇಕು.

ಜನರು ಇಂಗ್ಲಿಷ್ ಬಗೆಗಿನ ವ್ಯಾಮೋಹವನ್ನು ತೊರೆಯುವಂತೆ ಮಾಡಬೇಕೆಂಬ ಹಿತವಚನವನ್ನು ನಾವು ಆಗಾಗ ಕೇಳುತ್ತೇವೆ. ಸರಕಾರದ ಧೋರಣೆಯಲ್ಲಿ ಪರಿವರ್ತನೆ ತರುವುದಕ್ಕೆ ಬದಲಾಗಿ ಜನತೆಯ ಮನೋಧರ್ಮ ಬದಲಾಗಬೇಕೆಂದು ಸಲಹೆ ನೀಡಲಾಗುತ್ತದೆ. ಈ ಸಲಹೆ ಹಾಸ್ಯಾಸ್ಪದವಾಗಿದೆ. ಎಲ್ಲಿಯವರೆಗೆ ಇಂಗ್ಲಿಷನ್ನು ಪ್ರತಿಷ್ಠೆ, ಅಧಿಕಾರ ಹಾಗೂ ಹಣ ಹಿಂಬಾಲಿಸುತ್ತವೆಯೊ ಅಲ್ಲಿಯವರೆಗೆ ನಮ್ಮ ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣ ಕೊಡಿಸುವುದು ಬೇಡವೆನ್ನುವುದು ಮೂರ್ಖತನವಾದೀತು. ಇದೇ ಸಂದರ್ಭದಲ್ಲಿ ನಾನು ಸ್ವಾತಂತ್ರ್ಯಾನಂತರದ ಮೊದಲ ದಶಕದ ದ್ವಿಮುಖ ಶಿಕ್ಷಣದಲ್ಲಿದ್ದ ಧೋರಣೆಯತ್ತ ಗಮನ ಸೆಳೆಯಬಯಸುತ್ತೇನೆ. ಖಾಸಗಿ ಹಾಗೂ ಮಿಷನರಿ ಶಾಲೆಗಳಲ್ಲಿ ಬೋಧನೆಯ ಆರಂಭದಿಂದ ಇಂಗ್ಲಿಷನ್ನು ಕಲಿಸಲು ಇಲ್ಲಾ ಇಂಗ್ಲಿಷ್ ಮಾಧ್ಯಮದಲ್ಲೇ ಕಲಿಸಲು ಅನುಮತಿ ನೀಡಲಾಗುತ್ತಿತ್ತು. ಆದರೆ ಮುನಸಿಪಲ್ ಅಥವಾ ಸರ್ಕಾರಿ ಶಾಲೆಗಳಿಗೆ ನಿರ್ದಿಷ್ಟ ಕಟ್ಟಳೆಗಳಿದ್ದವು. ಅನುಕೂಲಸ್ಥರ ಹಾಗೂ ಅಧಿಕಾರಸ್ಥರ ಮಕ್ಕಳು ವೈಭವದ ಶಾಲೆಗಳಿಗೇ ಹೋಗುವಂತಾಗಿತ್ತು. ಕನಿಷ್ಟ ಪಕ್ಷ ಪ್ರಾಥಮಿಕ ಹಂತದಲ್ಲಾದರೂ ಒಂದೇ ತೆರನಾದ ಶಾಲೆಗಳಿರಬೇಕು.

ಶಾಸನ ವ್ಯವಸ್ಥೆಯ ಮೂಲಕ ಇಂಗ್ಲಿಷಿನ ಸಾರ್ವಜನಿಕ ಬಳಕೆಯನ್ನು ನಿಲ್ಲಿಸಲಾಗದು. ಇದು ಜನತೆಯ ಕ್ರಿಯಾಶೀಲತೆಯಿಂದ ಮಾತ್ರ ಸಾಧ್ಯ. ಏಕೆಂದರೆ ಅವರ ಮನೋಧರ್ಮದಲ್ಲಿ ಹಟಮಾರಿತನ ಕಾಣಿಸಿಕೊಂಡಿದೆ. ಜನಾಂದೋಲನಕ್ಕೆ ಸಂಬಂಧಿಸಿದಂತೆ ಕರಾವಳಿ ಹಾಗೂ ಒಳರಾಜ್ಯಗಳ ನಡುವಣ ಅಂತರ ಅತ್ಯಂತ ಮಹತ್ವದ್ದಾಗುತ್ತದೆ. ಕರಾವಳಿ ರಾಜ್ಯಗಳ ಮೇಲ್ವರ್ಗದವರು ಅಲ್ಲಿನ ಜನ ಸಾಮಾನ್ಯರನ್ನು ಮೋಸಗೊಳಿಸಬಲ್ಲರು. ಒಳರಾಜ್ಯಗಳ ಮೇಲ್ವರ್ಗದವರು ಖುಲ್ಲಂ ಖುಲ್ಲಾ ಹೀಗೆ ಮಾಡಲಾರರು. ಅದಕ್ಕಾಗಿಯೇ ನಾವು ಹೋರಾಟವನ್ನು ಇಲ್ಲಿಂದಲೇ

ಆರಂಭಿಸಬೇಕು. ಒಳನಾಡ ಜನತೆ ರಾಜ್ಯ ಮಟ್ಟದಲ್ಲಷ್ಟೆ ಅಲ್ಲ, ತಮ್ಮ ರಾಜ್ಯಗಳಿಗೆ ಸಂಬಂಧಿಸಿದಂತೆ ಸೈನ್ಯ, ರೈಲ್ವೆ, ತಂತಿ ಮುಂತಾದ ಕೇಂದ್ರ ಸರ್ಕಾರದ ಇಲಾಖೆಗಳಿಂದಲೂ ಇಂಗ್ಲಿಷನ್ನು ತೊಲಗಿಸಲು ಹೋರಾಟ ಮಾಡಬೇಕಾಗಿದೆ. ಕೇಂದ್ರದೊಂದಿಗಿನ ಕಾರ್ಯ ಕಲಾಪಗಳಲ್ಲಿ ಹಿಂದಿ ಹಾಗೂ ಇಂಗ್ಲಿಷ್ ಎಂದು ಎರಡು ವಿಭಾಗಗಳನ್ನು ತೆರೆಯಬಹುದು. ಯಾವುದಾದರೂ ಕರಾವಳಿ ರಾಜ್ಯ ತನಗೆ ಬೇಕೆನಿಸಿದರೆ ದಿಲ್ಲಿಯ ಇಂಗ್ಲಿಷ್ ವಿಭಾಗದೊಂದಿಗೆ ಸಂಬಂಧವಿರಿಸಿಕೊಳ್ಳಬಹುದು. ಒಳರಾಜ್ಯಗಳು ಹಿಂದಿ ವಿಭಾಗದ ಮೂಲಕ ಕಾರ್ಯನಿರ್ವಹಿಸಬಹುದು. ಗುಜರಾತ್, ಮಹಾರಾಷ್ಟ್ರ ಅಥವಾ ಬೇರೆ ಯಾವುದೇ ರಾಜ್ಯ ಹಿಂದೂಸ್ತಾನಿ ವಿಭಾಗದ ಮೂಲಕ ವ್ಯವಹಾರ ನಡೆಸಬಯಸಿದರೆ – ಅವರ ಇಚ್ಛೆಯ ಮೇರೆಗೆ ಅವರಿಗೆ ಸರಕಾರಿ ಕೆಲಸ ಮುಂತಾದವುಗಳಲ್ಲಿ ಮೀಸಲಾತಿ ನೀಡಿ, ಆದರಪೂರ್ವಕ ಸ್ವಾಗತಿಸಬೇಕು.

ಎಲ್ಲಿಯವರೆಗೆ ಕರಾವಳಿ ರಾಜ್ಯಗಳು ಬೇರೆ ಸೂತ್ರಗಳನ್ನು ಒಪ್ಪಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ದಿಲ್ಲಿಯ ವ್ಯವಹಾರಗಳನ್ನು ಹಿಂದಿ ಹಾಗೂ ಇಂಗ್ಲಿಷ್ ವಿಭಾಗಗಳಾಗಿ ವಿಂಗಡಿಸುವುದೊಂದೇ ಪರಿಹಾರ. ಅದು ಈಗಿಂದೀಗ ಮಾಡಬೇಕಾದದ್ದು. ಕಳೆದ ಐದು ವರ್ಷ ಅಥವಾ ಅದಕ್ಕೂ ಹೆಚ್ಚು ಕಾಲದಿಂದ ಕರಾವಳಿ ರಾಜ್ಯಗಳಿಗೆ ಪರ್ಯಾಯ ಸೌಲಭ್ಯವನ್ನು ಒದಗಿಸಿ ಹಿಂದಿಯನ್ನು ಎಲ್ಲ ಕ್ಷೇತ್ರಗಳಲ್ಲೂ ತಕ್ಷಣ ಜಾರಿಗೆ ತರಬೇಕು. ಕರಾವಳಿ ಪ್ರದೇಶಗಳವರಿಗೆ 10 ವರ್ಷಗಳವರೆಗೆ ಗೆಜೆಟೆಡ್ ನೌಕರಿಗಳಲ್ಲಿ ಮೀಸಲಾತಿ ನೀಡಬೇಕು. ಇಲ್ಲವೆಂದರೆ ಜನಸಂಖ್ಯೆ ಆಧಾರದ ಮೇಲೆ ಶಾಶ್ವತ ಮೀಸಲಾತಿ ನೀಡಬಹುದು. ಈ ಪೈಕಿ ಯಾವ ಸಲಹೆಯೂ ಸ್ವೀಕಾರಾರ್ಹವಾಗದಿದ್ದರೆ, ಬಹು ಭಾಷಾ ಕೇಂದ್ರ ವ್ಯವಸ್ಥೆಯ ಸಲಹೆ ಕೂಡ ಮಾಡಲಾಗಿದೆ. ಭಾರತದ ಸಂಸತ್ತಿನಲ್ಲಿ ಬಂಗಾಳಿ ಅಥವಾ ತಮಿಳಿನಲ್ಲಿ ಮಾತನಾಡುವ ಅವಕಾಶ ನೀಡಿ, ಕಿವಿ ಫೋನ್ ಮೂಲಕ ಹಿಂದಿಗೆ ಅನುವಾದ ಮಾಡುವ ಸೌಕರ್ಯ ಒದಗಿಸಿರಲಿಲ್ಲವೆಂದು ನನಗೆ ಆಶ್ಚರ್ಯವಾಗುತ್ತದೆ. ಕರಾವಳಿಯಲ್ಲಿ ರಾಜ್ಯಮಟ್ಟದಲ್ಲಿ ಇಂಗ್ಲಿಷನ್ನು ತೊಲಗಿಸುವುದನ್ನುಳಿದಂತೆ ಅಲ್ಲಿ ಏನಾಗುತ್ತಿದೆಯೆಂದು ಒಳರಾಜ್ಯಗಳು ತಲೆ ಕೆಡಿಸಿಕೊಳ್ಳಬಾರದು. ಇದು ನನ್ನ ಕಿವಿ ಮಾತು. ಕರಾವಳಿ ರಾಜ್ಯಗಳ ಜನರು ಹಿಂದಿಯನ್ನು ಒಪ್ಪಿಕೊಳ್ಳುವಂತೆ ಮಾಡುವ ಪ್ರಯತ್ನ ನಿಲ್ಲಬೇಕು. ಏಕೆಂದರೆ ಇದರಿಂದಾಗಿ ಆಕ್ರೋಶ ಹಾಗೂ ಮನಸ್ತಾಪ ಹೆಚ್ಚುತ್ತದೆ. ಉಚ್ಚ ನ್ಯಾಯಾಲಯ, ವಿಶ್ವವಿದ್ಯಾಲಯ, ಸಚಿವಾಲಯ ಮುಂತಾದ ಸಾರ್ವಜನಿಕ ಸಂಸ್ಥೆಗಳಿಂದ ರಾಜ್ಯಮಟ್ಟದಲ್ಲಿ ಕರಾವಳಿ ರಾಜ್ಯಗಳು ಇಂಗ್ಲಿಷನ್ನು ಉಚ್ಚಾಟಿಸಿದ ಮೇಲೆ ದಿಲ್ಲಿಯಲ್ಲಿ ಹಿಂದಿ ವಿಭಾಗದಲ್ಲಿ ಪ್ರವೇಶ ಕೋರಿ ಅರ್ಜಿ ಸಲ್ಲಿಸಲು ಹೆಚ್ಚು ಕಾಲ ಬೇಕಾಗಿಲ್ಲ.

ಒಮ್ಮೆ ಇಂಗ್ಲಿಷನ್ನು ಸಂಪರ್ಕ ಮಾಧ್ಯಮವನ್ನಾಗಿ ಕೈ ಬಿಟ್ಟರೆ ಒಳ ರಾಜ್ಯಗಳಲ್ಲಿ ಕೈಗಾರಿಕೆ ಹಾಗೂ ಜ್ಞಾನದ ಕ್ಷೇತ್ರದಲ್ಲಿ ಶೀಘ್ರ ಪ್ರಗತಿಯಾಗುತ್ತದೆಂದು ನನಗೆ ವಿಶ್ವಾಸವಿದೆ. ಈ ಶೀಘ್ರ ಪ್ರಗತಿ ಕರಾವಳಿ ರಾಜ್ಯಗಳು ತಮ್ಮ ನಿಲುವನ್ನು ಪುನರ್ ಪರಿಶೀಲಿಸಲು ಪ್ರೇರೇಪಿಸಬಲ್ಲದು.

ಇಂಗ್ಲಿಷನ್ನು ಕೈ ಬಿಡಲು ಒಂದು ಕಾಲಮಿತಿ ಹಾಕಿಕೊಳ್ಳಲಾಗಿತ್ತು. ಇದೊಂದು ಶೋಚನೀಯ ಪ್ರಸಂಗವಾಗಿ ಪರಿಣಮಿಸಿದೆ. ಅದು ಪ್ರಾಮಾಣಿಕತೆಯ ಸೆಲೆಗಳಲ್ಲೆ ವಿಷ ಬೆರೆಸಿತು. ಇಂಗ್ಲಿಷನ್ನು ಕೈ ಬಿಡುವ ವಿಷಯದಲ್ಲಿ ಸಂವಿಧಾನ ಸ್ಪಷ್ಟವಿದೆ. ಹಲವಾರು ಆಡಳಿತಾತ್ಮಕ ಹಾಗೂ ಶೈಕ್ಷಣಿಕ ತೊಂದರೆಗಳಿಂದಾಗಿ ಉಚ್ಚ ನ್ಯಾಯಾಲಯಗಳಿಗೆ 1965 ಅಥವಾ ಅದಕ್ಕೂ ಮೊದಲಿನ ಕಾಲಮಿತಿಯನ್ನು ನಿರ್ಧರಿಸಲಾಗಲಿಲ್ಲವೆಂದು ವಾದ ಮಾಡುವುದು ಸರಿಯಲ್ಲವಾದರೂ, ಹಾಗೆ ವಾದಿಸುವ ಸಾಧ್ಯತೆ ಇದೆ. ಆದಾಗ್ಯೂ ವ್ಯಕ್ತಿಯ ಮಟ್ಟದಲ್ಲಿ ಹಿಂದಿ ಕಲಿಯುವುದು ಏಕೆ ಸಾಧ್ಯವಾಗಲಿಲ್ಲವೆಂದು ನನಗೆ ಆಶ್ಚರ್ಯವಾಗುತ್ತದೆ. ರಾಷ್ಟ್ರಪತಿ, ಉಪರಾಷ್ಟ್ರಪತಿ, ಮಂತ್ರಿ, ಸಂಸತ್ ಸದಸ್ಯ ಮುಂತಾಗಿ ಎಲ್ಲರೂ ಸಂವಿಧಾನಕ್ಕೆ ನಿಷ್ಠರಾಗಿರುವುದಾಗಿ ಪ್ರಮಾಣವಚನ ಸ್ವೀಕರಿಸುತ್ತಾರೆ. ಕೊಟ್ಟ ಮಾತನ್ನು ನಡೆಸಿಕೊಡಲೆಂದೇ ಸರಕಾರ ಹಣ ನೀಡುತ್ತದೆ. ಇಂಗ್ಲಿಷ್ ಬದಲಾಗಿ ಹಿಂದಿಯನ್ನು ಜಾರಿಗೆ ತರುವುದಾಗಿ ಮಾಡಿದ ಪ್ರಮಾಣಕ್ಕೆ ಅವರು ಬಾಧ್ಯರು. ಈ ಪೈಕಿ ಒಬ್ಬೊಬ್ಬನೂ ಆರು ತಿಂಗಳಲ್ಲಿ ಅಲ್ಲದಿದ್ದರೂ ಹೆಚ್ಚೆಂದರೆ ಒಂದು ವರ್ಷದಲ್ಲಿ ಹಿಂದಿ ಕಲಿಯಬಹುದಿತ್ತು. ಸಂವಿಧಾನಕ್ಕೆ ನಿಷ್ಠರಾಗಿರುವುದಾಗಿ ತಾವು ಮಾಡಿದ ಪ್ರಮಾಣವಚನವನ್ನು ಅವರು ನಿರ್ಲಜ್ಜರಾಗಿ ಮುರಿದಿದ್ದಾರೆ. ಈ ಥರದ ವಚನಭ್ರಷ್ಟತೆ ಮುಂದೆ ನಡೆಯದಂತೆ ನೋಡಿಕೊಳ್ಳಬೇಕು. ಕಾಲಮಿತಿ ಹಾಕದಿದ್ದರೆ ಅದು ಅಸಾಧ್ಯ.

1965ರ ನಂತರ ಇಂಗ್ಲಿಷ್ ಉಳಿಯಬಾರದು ಎಂಬ ಆಂದೋಲನವೊಂದು ರೂಪುಗೊಳ್ಳುತ್ತಿದೆ. ಈ ಆಂದೋಳನ ಸರಿಯೇ. ಆದರೆ ಅದರಲ್ಲೂ ಅಪಾಯವಿದೆ. ಒಂದರ್ಥದಲ್ಲಿ ಇದು ಆದ ತಪ್ಪಿನ ಪುನರಾವರ್ತನೆಯೇ ಸರಿ. ಕಾಲಮಿತಿಯನ್ನು ಹಾಕುವುದೆಂದರೆ ಭಾರತೀಯ ಭಾಷೆಗಳು ಅಸಮರ್ಥವಾಗಿವೆ ಹಾಗೂ ಪರಿಸ್ಥಿತಿ ಜಟಿಲವಾಗಿದೆ ಎಂಬ ಅಭಿಪ್ರಾಯವನ್ನು ಒಪ್ಪಿಕೊಂಡಂತೆ. ಈ ಥರದ ರಿಯಾಯತಿ ಗಳನ್ನು ನೀಡಿದರೆ, ಹಾಕಿದ ಕಾಲಮಿತಿಯನ್ನು ಅನಿರ್ದಿಷ್ಟವಾಗಿ ಮುಂದುವರೆಸುತ್ತಾ ಹೋದಂತೆ. ಮತ್ತೊಮ್ಮೆ ಜನತೆ ಕಾಲಮಿತಿ ಹಾಕಬೇಕೋ ಅಥವಾ ಬೇಡವೊ ಎಂಬುದನ್ನು ನಿರ್ಧರಿಸುವ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಇದು ಮಾನಸಿಕ ಧೋರಣೆಗಳ ಮಾತು. ಇಂಗ್ಲಿಷನ್ನು ಈಗಿಂದೀಗಲೇ ಕೈ ಬಿಡಬೇಕೆನ್ನುವವರಿಗೆ,

ತಮಗೆ ಬೇಡಿಕೆಯನ್ನು ಈಡೇರಿಸಿಕೊಳ್ಳುವ ಶಕ್ತಿ ಇದ್ದರೆ ಮಾತ್ರ ಅದನ್ನು ಮುಂದಿಡಬೇಕೆಂಬುದರ ಅರಿವಿರುತ್ತದೆ. ಈಗಿಂದೀಗಲೇ ಕ್ರಾಂತಿ ಎನ್ನುವ ಮನೋಧರ್ಮವನ್ನು ಒಪ್ಪಿಕೊಳ್ಳುವವರು ಕಾಲಮಿತಿಯೊಂದಿಗೆ ವಿಕಾಸವಾಗ ಲೆನ್ನುವವರಿಗಿಂತ ಭಿನ್ನವಾಗುತ್ತಾರೆ. ಮೊದಲಿನ ಬಣದ ಜನರು ಪ್ರತಿಷ್ಠಿತ ಶಕ್ತಿಗಳ ವಕ್ತಾರರಾದರೆ ಎರಡನೇ ಬಣದವರು ವಿಕಾಸದ ವಕ್ತಾರರಾಗುತ್ತಾರೆ. ಕಾಲಮಿತಿ ಮುಂದುವರೆಸುವ ಆಂದೋಲನಗಳು ಹಿಂದೆ ನಿಂತು ಕಾರ್ಯಾಚರಣೆ ಮಾಡುವ ಪಡೆಗಳಂತೆ ಕೆಲಸ ಮಾಡುತ್ತವೆ. ಅವು ಎದುರಾಳಿಗೆ ಸದಾ ಶರಣಾಗುತ್ತಾ ಹೋಗಬೇಕಾಗುತ್ತದೆ. ಕಾಲಮಿತಿಯನ್ನು ಅನಿರ್ದಿಷ್ಟವಾಗಿ ಮುಂದುವರೆಸುವ ಕಾನೂನೊಂದನ್ನು ಸಂಸತ್ತು ಪಾಸು ಮಾಡಿದರೆ ಕಾಲಮಿತಿಯ ಆಂದೋಲನಗಳು ಮುಂದೇನು ಮಾಡುವುವೊ? ಜನಭಾಷೆಗಳ ಪ್ರೇಮಿಗಳು ಮರೆಯಲ್ಲಿ ನಿಂತು ಹೋರಾಡುವುದಕ್ಕೆ ಬದಲಾಗಿ ಮುಂಚೂಣಿಯಲ್ಲಿ ನಿಲ್ಲಬೇಕಾದ ಕಾಲ ಬಂದಿದೆ. ಆದಾಗ್ಯೂ ಈಗಿಂದೀಗ ಇಂಗ್ಲಿಷ್ ತೊಲಗಿಸಬೇಕೆನ್ನುವ ಆಂದೋಲನಕಾರರು ಕಾಲಮಿತಿಯ ಆಂದೋಲನಕಾರರ ಸಭೆಗಳಲ್ಲಿ ಹಾಗೂ ಮತ ಪ್ರದರ್ಶನಗಳಲ್ಲಿ ಸಹಕರಿಸಿದರೆ ಒಳ್ಳೆಯದು. ಅಷ್ಟಕ್ಕೂ ಇವರೆಲ್ಲ ಒಂದೇ ದಿಕ್ಕಿನಲ್ಲಿ ಸಾಗುವವರಲ್ಲವೆ? ಕೆಲವರು ಗುರಿ ತಲುಪುವ ಮುನ್ನವೇ ನಿಂತು ಬಿಡುತ್ತಾರೆ; ಮತ್ತೆ ಕೆಲವರಿಗೆ ಮುಂದೆ ಎತ್ತ ಹೋಗುವುದೆಂದು ತೋಚದಾಗುತ್ತದೆ.

ಹಿಂದಿ ಪ್ರಚಾರಕರು ಹಾಗೂ ಬಹುತೇಕ ಬರಹಗಾರರ ಕತೆಯೇ ಬೇರೆ. ಅವರು ಸರಕಾರದ ನೀತಿಗೆ ಅದೆಷ್ಟು ನಿಷ್ಠರಾಗಿರುತ್ತಾರೆಂದರೆ ಅವರು ಅದರ ವಕ್ತಾರರಾಗಿಬಿಡುತ್ತಾರೆ. ನೋಡಲಂತೂ ಹೀಗೇ ಅನಿಸುತ್ತದೆ. ಇವರಲ್ಲಿ ಬಹುತೇಕ ಜನರಿಗೆ ಸರಕಾರ ಅಥವಾ ಅರೆಸರಕಾರಿ ಸಂಸ್ಥೆಗಳಿಂದ ಹಣ ಸಿಗುತ್ತದೆ. ಇನ್ನು ಹೆಚ್ಚು ಸಂವೇದನಶೀಲರು ಮೌನವಾಗಿರುತ್ತಾರೆ. ಹಿಂದಿ ಪ್ರಚಾರಕರು ಹಾಗೂ ಲೇಖಕರ ಪೈಕಿ ಬಹುತೇಕ ಜನ ಹಿಂದಿಗೆ ನಾಮ ಕೆ ವಾಸ್ತೆ ಸೇವೆ ಸಲ್ಲಿಸಿ ಮೂರು ವಿಧದಲ್ಲಿ ಅಪಾಯವುಂಟು ಮಾಡುತ್ತಾರೆ. ಅವರು ಹೋರಾಟದ ಮೂಲಕ ಇಂಗ್ಲಿಷನ್ನು ಉಚ್ಚಾಟಿಸುವ ಆಂದೋಳನಕ್ಕೆ ಬದಲಾಗಿ ರಚನಾತ್ಮಕ ಕೆಲಸಕ್ಕಾಗಿ ಕರೆ ನೀಡುತ್ತಾರೆ; ಕ್ರಮೇಣ ಬದಲಾವಣೆಯಾಗುವುದೆಂಬ ನಿರೀಕ್ಷೆಯಲ್ಲಿ ಹಿಂದಿಯನ್ನು ಇಂಗ್ಲಿಷಿನೊಂದಿಗೆ ಉಳಿಸಿಕೊಳ್ಳುವುದರಿಂದ ಅವರು ಸಂತೃಪ್ತರಾಗುತ್ತಾರೆ. 'ಇಂಗ್ಲಿಷ್ ತೊಲಗಿಸಿ' ನಿಷೇಧಾತ್ಮಕವೆಂದು ಅವರು ಟೀಕಿಸುತ್ತಾರೆ. ಇಂಗ್ಲಿಷ್ ಬಹಳ ಕಾಲದಿಂದ ಸಾಮ್ರಾಜ್ಯವಾದಿ ಭಾಷೆಯಾಗಿಬಿಟ್ಟಿದೆ. ಹಿಂದಿಯನ್ನು ಅದರೊಂದಿಗೆ ಉಳಿಸಿಕೊಳ್ಳುವುದೆಂದರೆ ಹಿಂದಿಯೇತರ ಜನತೆಯ ಎದುರು ಅದಕ್ಕೆ ಸಾಮ್ರಾಜ್ಯವಾದಿ ಸ್ವರೂಪ ಬಂದಂತಾಗುತ್ತದೆ. ಸ್ವಾತಂತ್ರ್ಯಾನಂತರದ ಕಾಲಾವಧಿಯಲ್ಲಿ ಇಂಗ್ಲಿಷ್

ಬಳಕೆ ಕಡಿಮೆಯಾಗಿದೆ ಎಂಬುದಂತೂ ಸುಳ್ಳು. ಅದರ ಪ್ರಸಾರ ಅದ್ಭುತ ರೀತಿಯಲ್ಲಿ ಆಗಿಬಿಟ್ಟಿದೆ. ಸ್ವಾತಂತ್ರ್ಯಪೂರ್ವದ ಮೂರು ವರ್ಷಗಳಲ್ಲಿ ಮೂರು ಲಕ್ಷಕ್ಕೂ ಕಡಿಮೆ ವಿದ್ಯಾರ್ಥಿಗಳು ಮೆಟ್ರಿಕ್ ಪರೀಕ್ಷೆಗೆ ಕುಳಿತಿದ್ದು ಅವರಿಗೆ ಇಂಗ್ಲಿಷ್ ಕಡ್ಡಾಯ ವಿಷಯವಾಗಿತ್ತು. ಈ ಸಲ 15 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು ಅವರ ಸಂಖ್ಯೆ ಕ್ರಮೇಣ ಏರುತ್ತಲೇ ಇದೆ. ಜ್ಞಾನಾರ್ಜನೆಗೆಂದಾಗಲೀ, ಇಲ್ಲಾ ಹೆಚ್ಚಿನ ಹುದ್ದೆ ಅಥವಾ ಹಣ ಸಂಪಾದನೆಗಾಗಲೀ ಇಂಗ್ಲಿಷಿನ ಕಡ್ಡಾಯ ಜ್ಞಾನ ತೀರ ಅನವಶ್ಯಕ. ಇಂಗ್ಲಿಷ್ ಬಲ್ಲವರಲ್ಲಿ ಕೆಲವು ವಿಕೃತಿಗಳನ್ನು ಹುಟ್ಟು ಹಾಕುವುದಗಲ್ಲಿ ಅದು ಸಾಕಾಗಬಲ್ಲದು. ಇಂಗ್ಲಿಷ್ ಅರಿಯದ ತಮ್ಮ ಸಂಬಂಧಿಕರನ್ನು ಹಾಗೂ ಇತರರನ್ನು ಇವರು ಹಳ್ಳಿ ಗಮಾರರೆಂದೂ, ಕೀಳೆಂದೂ ಭಾವಿಸುತ್ತಾರೆ. ಎಷ್ಟೇ ಕಡಿಮೆ ಸಂಬಳದ ಕೆಲಸವಾಗಿರಲಿ ಇಂಥವರಿಗೆ ಒಂದು ಕೆಲಸ ಸಿಗುತ್ತದೆ. ತಮ್ಮ ಭಾಷೆಗಳ ಬಗೆಗಿನ ಅವರ ಅಭಿಮಾನ ಮಾಯವಾಗುತ್ತದೆ. ಅದರಲ್ಲೂ ಹಿಂದೂಸ್ತಾನಿ ಬಗೆಗಂತೂ ಅವರಿಗೆ ಅಭಿಮಾನವಿರುವುದು ಅಷ್ಟಕಷ್ಟೇ.

ಇದರ ಸಾರಾಂಶವಿಷ್ಟೇ : ಮೇಲ್ವರ್ಗದವರು ಇಂಗ್ಲಿಷ್ ಉಳಿಸುವ ತಮ್ಮ ಪ್ರಯತ್ನದಲ್ಲಿ, ಬೆಳೆಯುತ್ತಿರುವ ಮೆಟ್ರಿಕ್ ಪಾಸಾದವರ ದಂಡನ್ನು ಅಗ್ಗದ ಬಾಡಿಗೆ ಬಂಟರನ್ನಾಗಿ ಬಳಸುತ್ತಾರೆ. ಇಂಗ್ಲಿಷಿನ ಇಂತಹ ನಿರಂತರ ಪ್ರಸಾರದ ವಿರುದ್ಧ ಕರಾವಳಿ ರಾಜ್ಯಗಳ ಹಿಂದಿ ಪ್ರಚಾರಕರ ರಚನಾತ್ಮಕ ಕೆಲಸ ಗಾಳಿ ಗುದ್ದಿ ಮೈ ನೋಯಿಸಿಕೊಂಡಂತಾಗುತ್ತದೆ. ಅವರು ಈ ರಾಕ್ಷಸರ ಆರಾಧಕರಾಗಿರದಿದ್ದರೆ ಅವರ ಗೌಣವಾದ ಕೆಲಸವನ್ನು ನಾನು ಮೆಚ್ಚಿಕೊಳ್ಳುತ್ತಿದ್ದೆ. ''ಇಂಗ್ಲಿಷ್ ತೊಲಗಿಸಿ'' ಆಂದೋಲನ ನಕಾರಾತ್ಮಕ ಎನ್ನುವುದಾದರೆ ಹಾಗೂ ಭಾರತೀಯ ಭಾಷೆಗಳನ್ನು ಬೆಳೆಸುವ ಕೆಲಸ ಸಕಾರಾತ್ಮಕ ಎನ್ನುವುದಾದರೆ ಇದು ಪಾಪಕೃತ್ಯಗಳನ್ನು ಅಪ್ರತ್ಯಕ್ಷವಾಗಿ ಬೆಂಬಲಿಸುವ ಪುರಾತನರ ವಾದವೇ ಸರಿ. ''ಬಂಗಾಳಿ ಅಥವಾ ಹಿಂದಿ ಪ್ರಸಾರ ಮಾಡಿರಿ'' ಎಂಬ ಆಂದೋಲನವು ಕೇಡಿನ ಗಡಿರೇಖೆಯನ್ನು ಎಳೆಯುವಂಥದಲ್ಲ. ಈ ಪ್ರಯತ್ನದಲ್ಲಿ ಎಲ್ಲರಿಗೂ ಸ್ವಾಗತವಿದೆ. ''ಇಂಗ್ಲಿಷ್ ತೊಲಗಿಸಿ'' ಆಂದೋಲನ ಒಳ್ಳೆಯದು ಮತ್ತು ಕೆಟ್ಟದ್ದು. ಅದು ಪಾಳೆಗಾರ ಮತ್ತು ಜನಭಾಷೆಗಳ ನಡುವೆ ಗಡಿ ರೇಖೆಯನ್ನೆಳೆಯುತ್ತದೆ. ವಿದೇಶೀ ಬಟ್ಟೆಗಳನ್ನು ಬೆಂಕಿಗಾಹುತಿ ಮಾಡುವುದರಿಂದ ಹಿಡಿದು ''ಭಾರತ ಬಿಟ್ಟು ತೊಲಗಿ'' ಆಂದೋಳನಗಳವರೆಗಿನ ಗಾಂಧೀಜಿಯವರ ಬಹುತೇಕ ಎಲ್ಲ ಆಂದೋಲನಗಳು ಅದೇಕೆ ನಕಾರಾತ್ಮಕವಾಗಿದ್ದವೆಂದು ಈ ಜನ ಕೇಳುವ ಗೊಡವೆಗೆ ಹೋಗಲಾರರು.

ಹಿಂದಿ ಹಾಗೂ ಹಿಂದೂಸ್ತಾನಿ ಪದಗಳನ್ನು ನಾನು ಪರ್ಯಾಯವಾಗಿ

ಬಳಸುತ್ತಿದ್ದೇನೆ. ಉರ್ದು ಕುರಿತಂತೆಯೂ ನಾನು ಹೀಗೇ ಮಾತಾಡಬಯಸುತ್ತೇನೆ. ಇವೆಲ್ಲ ಒಂದೇ ಭಾಷೆಯ ವಿಭಿನ್ನ ಶೈಲಿಗಳು. ವಾಸ್ತವದಲ್ಲಿ ಎರಡೇ ಶೈಲಿಗಳು. ಮುಂದಿನ ಇಪ್ಪತ್ತು ಮೂವತ್ತು ವರ್ಷಗಳಲ್ಲಿ ಇವು ಒಂದಾಗಿ ಬಿಡುತ್ತವೆಂಬ ವಿಶ್ವಾಸ ನನಗಿದೆ. ಮಡಿವಂತರು ಹಾಗೂ ಉದಾರವಾದಿಗಳು ಬೇಕಾದರೆ ಪರಸ್ಪರ ಹೊಡೆದಾಡಲಿ. ಆದರೆ ಈ ಎರಡೂ ಬಣದವರು "ಇಂಗ್ಲಿಷ್ ತೊಲಗಿಸಿ" ಆಂದೋಲನದ ಅಂಗವಾಗಬೇಕು. ಇಂಗ್ಲಿಷ್ ಉಳಿಸುವ ಒಂದು ದೊಡ್ಡ ಪಿತೂರಿ ನಡೆಯುತ್ತಿದ್ದು, ನಾವು ತುಂಬ ಜಾಗರೂಕರಾಗಿರಬೇಕು. ಈ ಪಿತೂರಿಯೇ ಎಲ್ಲ ಥರದ ವಿವಾದಗಳನ್ನು ಹುಟ್ಟು ಹಾಕುತ್ತದೆ. ನಮ್ಮ ಆಂದೋಲನಕ್ಕೆ ಮೂರೂ ಶೈಲಿಗಳ ಜನರನ್ನು ಸ್ವಾಗತಿಸಬೇಕು. ಏಕೆಂದರೆ ಒಂದಿಲ್ಲೊಂದು ಪರಿಹಾರ ಸಿಕ್ಕೇ ಸಿಗುತ್ತದೆ. ಇಂಗ್ಲಿಷ್ ತೊಲಗಿಸಬೇಕೆನ್ನುವವರಲ್ಲಿ ಕೆಲವರಿಗೆ ಹಳೆಯ ಸಂಗತಿಗಳು ಹಳವಂಡವಾಗಿ ಕಾಡುತ್ತಿರಬಹುದು. ಹೀಗಾಗಿ ಪುನರುತ್ಥಾನವಾದ ತಲೆ ಹಾಕುತ್ತಿದೆಯೇನೋ ಎಂದು ಅನಿಸಬಹುದು. ಇದರಿಂದಾಗಿ ನಾವು ಧೃತಿಗೆಡಬಾರದು. ಏಕೆಂದರೆ ಸ್ವಲ್ಪ ಸಮಯದಲ್ಲೇ ಅವರು ತಮ್ಮ ಹಿಂದಿ, ಮರಾಠಿ ಮತ್ತು ತಮಿಳು ಭಾಷೆಗಳು ಕೂಡ ಉದಾರಿಯೂ ತೀಕ್ಷ್ಣವೂ ಆಗಬೇಕೆಂಬುದನ್ನು ಮನಗಾಣುತ್ತಾರೆ. ಪ್ರತಿಯೊಂದು ಭಾಷೆ ಪಾತಿವ್ರತ್ಯದ ಜೊತೆಗೆ ರಸಿಕತೆಯನ್ನು ವ್ಯಕ್ತಗೊಳಿಸಲು ಸಮರ್ಥವಾಗಬೇಕೆಂಬುದನ್ನು ಅವರು ಮನಗಾಣುತ್ತಾರೆ. ತಮ್ಮ ಭಾಷೆ ಸತ್ಯವನ್ನು ಅರಸುವುದರ ಜೊತೆಗೆ ಚಂದ್ರಲೋಕದ ಯಾನವನ್ನು ಬಣ್ಣಿಸುವ ಸಾಮರ್ಥ್ಯ ಪಡೆಯಬೇಕೆಂಬುದನ್ನು ಅವರು ಮನಗಾಣುತ್ತಾರೆ. ಒಟ್ಟಿನಲ್ಲಿ ಪ್ರತಿಯೊಂದು ಭಾಷೆ ಸಾಧ್ಯವಾದಷ್ಟು ವಿಶಾಲ ಹರಹು ಹಾಗೂ ಸತ್ಯದೊಂದಿಗೆ ಸಂವಾದಕ್ಕಿಳಿಯಬಲ್ಲ ಸೂಕ್ಷ್ಮತೆಯನ್ನು ಪಡೆಯಬೇಕೆಂಬುದನ್ನು ಅವರು ಮನಗಾಣುತ್ತಾರೆ.

ಹಿಂದುಸ್ತಾನಿ ಆರರಿಂದ ಏಳು ಲಕ್ಷ ಪದಗಳನ್ನು ಹೊಂದಿದ್ದರೆ, ಇಂಗ್ಲಿಷ್ ಅದರ ಅರ್ಧದಷ್ಟು ಪದಗಳನ್ನು ಹೊಂದಿದೆ. ಇಂಗ್ಲಿಷ್ ಪದಪುಂಜಗಳನ್ನು ಸೃಷ್ಟಿಸುವ ಶಕ್ತಿ ಕಳೆದುಕೊಂಡಿದೆ. ಆದರೆ ಹಿಂದಿ ಹಾಗೂ ಇತರ ಭಾರತೀಯ ಭಾಷೆಗಳಿಗೆ ಇಂತಹ ದುರವಸ್ಥೆ ಒದಗಿಲ್ಲ. ಭಾರತೀಯ ಭಾಷೆಗಳು ಅಪಾರ ಶಬ್ದ ಸಂಪತ್ತನ್ನು ಹೊಂದಿದ ಭಾಷೆಗಳಾಗಿವೆ. ಈ ಭಾಷೆಗಳು ಅಸಮರ್ಥವಾಗಿವೆ ಎಂದು ಯಾವತ್ತೂ ಬಡಬಡಿಸುವುದು ವ್ಯರ್ಥಾಲಾಪವಷ್ಟೇ. ಜಗತ್ತು ದಿನೇ ದಿನೇ ಸಂಕೀರ್ಣವಾಗುತ್ತಿದೆ. ಇಂಥ ಜಗತ್ತಿನಲ್ಲಿ ದೀರ್ಘ ಕಾಲದಿಂದ ಬಳಕೆಗೆ ಬಾರದಿರುವ ಈ ಭಾಷೆಗಳ ಶಬ್ದಗಳು ಅರ್ಥದಲ್ಲಿ ಸ್ವಲ್ಪ ಬಡವಾಗಿವೆ. ಅಂಥ ಶಬ್ದಗಳು ಹಾಗೂ ಹೊಸ ವಿದ್ಯಮಾನಗಳ ನಡುವೆ ಶೀಘ್ರವೇ ಸಂಬಂಧ ಏರ್ಪಡಬೇಕು. ಯಾವುದೇ ಕಾರಣಕ್ಕಾಗಿ ತಡವಾದಲ್ಲಿ ತುಂಬ ನಷ್ಟವಾದೀತು. ಪಠ್ಯಪುಸ್ತಕ ಹಾಗೂ ಅನುವಾದಗಳ ಕೊರತೆ

ಇವೆ ಎಂಬುದು ಹುರುಳಿಲ್ಲದ ವಾದವಾಗುತ್ತದೆ. ಹೀಗೆನ್ನುವುದು ಸರಿಯಲ್ಲವೇ ಅಲ್ಲ. ಸುಮಾರು ಒಂದು ಲಕ್ಷದಷ್ಟಿರುವ ಕಾಲೇಜು ಅಧ್ಯಾಪಕರುಗಳ ದೊಡ್ಡ ದಂಡು ಇದ್ದೇ ಇದೆ. ಅನುವಾದದ ಕೆಲಸ ಮಾಡಬೇಕು; ಇಲ್ಲವೇ ಕೆಲಸಕ್ಕೆ ರಾಜೀನಾಮೆ ಕೊಡಬೇಕೆಂದು ಈ ಅಧ್ಯಾಪಕರಿಗೆ ಎಚ್ಚರಿಕೆ ನೀಡಬೇಕು. ಸಾಧ್ಯತೆಗಳು ಸಾಕಷ್ಟಿವೆ. ಆದರೆ ಇಚ್ಛಾಶಕ್ತಿ ಇಲ್ಲ. ಭಾರತೀಯ ಭಾಷೆಗಳು ದುರ್ಬಲವಾಗಿವೆ, ಜಡವಾಗಿವೆ ಎಂಬ ಕಾರಣಕ್ಕಾಗಿ ಇಂಗ್ಲಿಷನ್ನು ತೊಲಗಿಸಲಾಗುತ್ತಿಲ್ಲವೆಂದೇನಲ್ಲ. ಇಂಗ್ಲಿಷನ್ನು ತೊಲಗಿಸದಿರಲು ಕಾರಣ ಅದನ್ನು ಕೈ ಬಿಡುವ ಮನಸ್ಸಿಲ್ಲದಿರುವುದು.

ಮೇಲ್ವರ್ಗದವರ ನಿಲ್ಲದ ಅಬ್ಬರಕ್ಕೆ ತದ್ವಿರುದ್ಧವಾಗಿ ಇಂಗ್ಲಿಷ್ ಭಾಷೆ ದೇಶವನ್ನು ವಿಚ್ಛಿದ್ರಗೊಳಿಸುತ್ತಿದೆ. ಬೇರೆ ಎಲ್ಲೋ ಬೇರುಗಳಿರುವ ಈ ಭಾಷೆ ಮುಂದಾಗಿಯೇ ಭಾರತಕ್ಕೆ ಕೇವಲ ರಾಜ್ಯಗಳ ಹಾಗೂ ಪ್ರಪಂಚದ ಪರಿಚಯವಿದ್ದರೂ ಇವೆರಡರ ನಡುವಣ ಕೊಂಡಿಯಂತಿರುವ ರಾಷ್ಟ್ರದ ಕಲ್ಪನೆ ನುಚ್ಚು ನೂರಾಗಿದೆ. ದೆಹಲಿ ಈ ದೇಶದ ಆಡಳಿತಾತ್ಮಕ ರಾಜಧಾನಿ ಮಾತ್ರ. ಮುಂಬೈ, ಕಲಕತ್ತಾ, ಮದ್ರಾಸ್ ಅಥವಾ ಬೇರೆ ಯಾವುದೇ ನಗರ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಕೇಂದ್ರವಾಗಿಲ್ಲ. ಅದರ ಕೇಂದ್ರ ಇನ್ನೆಲ್ಲೋ ಇದೆ. ಲಂಡನ್ ಬಹುತೇಕ ಜನರಿಗೆ ಬೌದ್ಧಿಕ ಪ್ರೇರಣೆಯ ಸೆಲೆಯಾಗಿದ್ದರೆ, ಹೆಚ್ಚು ಸಭ್ಯರಿಗೆ ನ್ಯೂಯಾರ್ಕ್ ಇಲ್ಲಾ ಆಂಗ್ಲರ ಪ್ರಭಾವವಿರುವ ಪ್ಯಾರಿಸ್, ಸ್ಫೂರ್ತಿಯ ಸೆಲೆಯಾಗಿವೆ. ಕಲಕತ್ತಾದಿಂದ ಮದ್ರಾಸ್ ಇಲ್ಲಾ ದೇಶದ ಯಾವುದೇ ಮೂಲೆಗೆ ಬೌದ್ಧಿಕ ಸಂಚಾರಕ್ಕಾಗಿ ಇರುವ ದಾರಿ ಲಂಡನ್ ಮೂಲಕ ಸಾಗುತ್ತದೆ. ಯಾರು ಯಾರೊಂದಿಗೆ ಒಂದಾಗುತ್ತಿದ್ದಾರೆ? ಭಾರತದ ಪ್ರತಿಯೊಂದು ಪ್ರಾಂತ ಜಗತ್ತಿನ ಒಂದು ಕೇಂದ್ರದೊಂದಿಗೆ ನೇರವಾಗಿ ಹಾಗೂ ಪ್ರತ್ಯೇಕವಾಗಿ ಸೇರಿಕೊಳ್ಳುತ್ತಿದೆ. ಪ್ರಪಂಚದ ಹಲವಾರು ಕೇಂದ್ರಗಳಲ್ಲಿ ಅದೊಂದು ಸೀಮಿತ ಕೇಂದ್ರ ಎಂದು ನಾನು ಸೂಚಿಸುತ್ತೇನೆ. ಸಾಂಸ್ಕೃತಿಕವಾಗಿ ಅಥವಾ ಬೌದ್ಧಿಕವಾಗಿ ಭಾರತಕ್ಕೆ ಒಂದು ಕೇಂದ್ರ ಇಲ್ಲವೇ ಇಲ್ಲ. ಎಲ್ಲ ಭಾರತೀಯ ಭಾಷೆಗಳು ಅಳಿದು ಹೋಗಿ ನಾವು ಇಂಗ್ಲಿಷಿನ ಎಂಥದೋ ಒಂದು ರೂಪವನ್ನು ನಮ್ಮ ಮಾತೃಭಾಷೆ ಎಂದು ಅಂಗೀಕರಿಸಿದ್ದರೆ ದಿಲ್ಲಿ ಭಾರತದ ಆಡಳಿತಾತ್ಮಕ ಹಾಗೂ ಸಾಂಸ್ಕೃತಿಕ ರಾಜಧಾನಿಯಾಗಲು ಹೆಣಗಾಡಬಹುದಿತ್ತು. ಹೀಗೆ ಆಗಲು ಸಾಧ್ಯವಾಗಲಿಲ್ಲ. ಬ್ರಿಟಿಷ್ ಸಂಸತ್ ಹಾಗೂ ಅಮೆರಿಕನ್ನರಿಂದಾಗಿ ಬ್ರಿಟಿಷರ ಪಿತೂರಿ ಸೋಲನ್ನಪ್ಪಿಕೊಂಡಿತು.

ಇಂಗ್ಲಿಷಿನಲ್ಲಿ 'ಮ್ಯಾನ್‌ಕೈಂಡ್' ಪತ್ರಿಕೆಯನ್ನು ಹೊರಡಿಸಿ ನಾನು ನನಗರಿವಿಲ್ಲದಂತೆ ನನ್ನ ತತ್ವಗಳಿಗೆ ವಿರುದ್ಧವಾಗಿ ವರ್ತಿಸುತ್ತಿದ್ದೇನೆ ಎಂಬ ಆರೋಪ

ಇದೆ. ತನ್ನ ದೇಶದ ಜನತೆಗಾಗಿ ಯಾವ ಸಭ್ಯ ದೇಶವೂ ವಿದೇಶಿ ಭಾಷೆಯಲ್ಲಿ ದಿನಪತ್ರಿಕೆಯನ್ನು ಹೊರಡಿಸಲಾರದು. ವೈಚಾರಿಕತೆ, ವಿಜ್ಞಾನ ಹಾಗೂ ತತ್ವಜ್ಞಾನದ ಪತ್ರಿಕೆಗಳನ್ನು ಅಷ್ಟೇ ಅಲ್ಲ ಪುಸ್ತಕಗಳನ್ನು ಕೂಡ ಸಾಧ್ಯವಿದ್ದಷ್ಟು ಬೇರೆ ಬೇರೆ ವಿದೇಶೀ ಭಾಷೆಗಳಲ್ಲಿ ಹೊರಡಿಸಬಹುದು. 'ಮ್ಯಾನ್‌ಕೈಂಡ್' ಅನ್ನು ನಿಯತವಾಗಿ ಹಾಗೂ ಇನ್ನೂ ಉತ್ತಮ ರೀತಿಯಲ್ಲಿ ಪ್ರಕಟಿಸಲು ಹಾಗೂ ಅದರೊಂದಿಗೆ ಹಿಂದಿಯಲ್ಲಿ ತಿಂಗಳ ಪತ್ರಿಕೆ 'ಜನ' ಹಾಗೂ ವಾರಪತ್ರಿಕೆ 'ಚೌಖಂಬಾ'ಗಳನ್ನೂ ಪ್ರಕಟಿಸಲು ನಮ್ಮ ಬಳಿ ಹಣವಿದ್ದಿದ್ದರೆ ಭಾರತದ ನಿಜವಾದ ಧ್ವನಿಯನ್ನು, ಸಮಾನತೆ ಹಾಗೂ ಅಹಿಂಸೆಯ ಹೊಸಲೋಕದ ನೈಜ ಧ್ವನಿಯನ್ನು ಸಮಸ್ತ ಜಗತ್ತಿಗೆ ಸಾಧ್ಯವಾದಷ್ಟು ಕೇಳಿಸಬಹುದಿತ್ತು. ವಿದೇಶಿ ಭಾಷೆಯಲ್ಲಿ ದಿನಪತ್ರಿಕೆಗಳನ್ನು ಹೊರಡಿಸುವುದು ತರ್ಕಸಮ್ಮತವಲ್ಲ, ದೇಶಪ್ರೇಮಿ ಸರಕಾರವೊಂದು ಅಸ್ತಿತ್ವಕ್ಕೆ ಬರುತ್ತಲೇ ತಂತಿ ಮತ್ತು ವೈರಲೆಸ್‌ಗಳಲ್ಲಿ ಇಂಗ್ಲಿಷ್ ಬಳಕೆ ನಿಲ್ಲಿಸಿದ ಮೇಲೆ ಇಂಗ್ಲಿಷಿನಲ್ಲಿ ಹೊರಡುವ ದಿನಪತ್ರಿಕೆಗಳೆಂಬ ಕಣ್ಣು ಬೇನೆ ತಕ್ಷಣ ಮಾಯವಾಗುತ್ತದೆ. ಭಾರತೀಯ ಭಾಷೆಗಳ ಸುದ್ದಿಪತ್ರಿಕೆಗಳು ಬಹಳ ಕಷ್ಟಪಟ್ಟು ಕೆಲಸ ನಿರ್ವಹಿಸಬೇಕಾಗಿದೆ. ಏಕೆಂದರೆ ಅನುವಾದ ಮಾಡಬೇಕಾದದ್ದು ಒಂದು ಕೆಲಸವೇ ಆಗಿಬಿಟ್ಟಿದೆ. ಯಾವುದೇ ಸಭ್ಯ ದೇಶ ತನ್ನ ತಂತಿ ಹಾಗೂ ವೈರಲೆಸ್ ವ್ಯವಸ್ಥೆಯನ್ನು ವಿದೇಶಿ ಭಾಷೆಯಲ್ಲಿ ನಿರ್ವಹಿಸುವುದಿಲ್ಲ. ಏಕೆಂದರೆ ಹಾಗೆ ಮಾಡಿದರೆ ಬೇರೆ ದೇಶದ ಬೇಹುಗಾರಿಕೆಗೆ ತುಂಬ ಅನುಕೂಲ ಮಾಡಿಕೊಟ್ಟಂತಾಗುತ್ತದೆ.

ಎಲ್ಲಕ್ಕೂ ಕೆಟ್ಟದ್ದೆಂದರೆ, ಇಂಗ್ಲಿಷ್ ಭಾಷೆಯು ಜನಸಾಮಾನ್ಯರಲ್ಲಿ ಕೀಳರಿಮೆಯನ್ನು ತುಂಬಿದೆ. ಇಂಗ್ಲಿಷ್ ತಿಳಿಯದ್ದಕ್ಕಾಗಿ ಯಾವುದೇ ಸಾರ್ವಜನಿಕ ಕ್ಷೇತ್ರಕ್ಕೆ ತಾವು ಅನರ್ಹರೆಂದು ತಿಳಿದ ಅವರು ಬೇರೆಯವರಿಗೆ ಸುಲಭವಾಗಿ ಸ್ಥಾನ ಕಲ್ಪಿಸಿಕೊಡುತ್ತಾರೆ. ಹೀಗೆಯೇ ಅಲ್ಪಸಂಖ್ಯಾತ ಅಥವಾ ಪಾಳೇಗಾರಿಕೆಯ ಆಡಳಿತಕ್ಕೆ ಅಡಿಪಾಯ ಹಾಕಿದ್ದು. ಬರೀ ಬಂದೂಕಿನ ಮೂಲಕ ಜನತೆಯನ್ನು ಹತ್ತಿಕ್ಕುವುದಕ್ಕಿಂತ, ಸುಲಭವಾಗಿ ಅರ್ಥವಾಗದ ಭಾಷೆಯ ಮೂಲಕ ಜನಸಾಮಾನ್ಯರ ಜಂಘಾಬಲವನ್ನೇ ಉಡುಗಿಸಲಾಗುತ್ತಿದೆ. ಜನಭಾಷೆಯ ವಿನಾ ಜನತಾ ಸ್ವರಾಜ್ಯ ಸಾಧ್ಯವೇ ಇಲ್ಲ. ತಮ್ಮ ಮಕ್ಕಳಿಗೂ ಅವಕಾಶ ಸಿಕ್ಕರೆ ಮೇಲ್ವರ್ಗದವರಿಗೆ ಇರುವಂಥ ಇಂಗ್ಲೀಷಿನ ಯೋಗ್ಯತೆಯನ್ನು ದೊರಕಿಸಬಹುದೆಂದು ಕೆಲವರು ತಪ್ಪಾಗಿ ಯೋಚಿಸುತ್ತಾರೆ. ಉಚ್ಚ ವರ್ಗದವರು ತಮ್ಮ ಮನೆಯಲ್ಲಿ ಇಂಗ್ಲಿಷಿನ ಪರಿಸರ ನಿರ್ಮಿಸಬಲ್ಲರು. ಇದು ತಲೆತಲಾಂತರದಿಂದ ನಡೆದು ಬಂದಿದೆ. ವಿದೇಶಿ ಭಾಷೆಯಲ್ಲಿ ಅಧ್ಯಯನ ಮಾಡುವುದರಲ್ಲಿ ಜನಸಾಮಾನ್ಯರು ವಂಶಪರಂಪರೆಯಿಂದ ಇಂಗ್ಲಿಷಿನ ಗುಲಾಮರಾದವರೊಂದಿಗೆ ಪೈಪೋಟಿಗೆ ಇಳಿಯಲಾರರು..

ಇಂಗ್ಲಿಷ್ ತೊಲಗಲೇಬೇಕು. ಜನರ ಕ್ರಿಯಾಶೀಲತೆಯಿಂದ ಮಾತ್ರ ಇದು ಸಾಧ್ಯ. ಮೇಲ್ವರ್ಗದ ಜನರ ಮೋಸ ಮಾಡುವ ಶಕ್ತಿ ವೃದ್ಧಿಸುತ್ತಲೇ ಇದೆ. ಇಂತಹ ಅಜ್ಞಾನ ಮಡುಗಟ್ಟಿ ಅವರು ತಮಗೇ ತಿಳಿಯದಂತೆ ತಪ್ಪು ನಿಲುವುಗಳನ್ನು ತಳೆದಾಗ ಶಾಸನದ ಮೂಲಕ ಪರಿಹಾರ ಸಿಗಲಾರದು. ಕೇವಲ ಜನತೆಯ ಕ್ರಿಯಾಶೀಲತೆ ಹಾಗೂ ತ್ಯಾಗದಿಂದ ಪರಿವರ್ತನೆ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಜನತೆಗೆ ಹಲವಾರು ದಾರಿಗಳಿವೆ. ಅವುಗಳಲ್ಲಿ ಕೆಲವನ್ನು ಭಾಗಶಃ ಅನುಸರಿಸಲಾಗಿದೆ. ಅವೆಂದರೆ, ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಸುವ ಅಧ್ಯಾಪಕರನ್ನು ಬಹಿಷ್ಕರಿಸುವುದು, ನಾಮಫಲಕಗಳಲ್ಲಿನ, ಅದರಲ್ಲೂ ಸರಕಾರಿ ನಾಮಫಲಕಗಳಲ್ಲಿನ ಇಂಗ್ಲಿಷ್ ಬರಹವನ್ನು ಅಳಿಸುವುದು-ಇತ್ಯಾದಿ. ಇಂತಹ ಹಲವಾರು ಕೆಲಸ ಮಾಡುವುದು ಅವಶ್ಯಕವಾಗಿದೆ. ಮೂರನೇ "ಇಂಗ್ಲಿಷ್ ತೊಲಗಿಸಿ" ಸಮ್ಮೇಳನ ಹೈದರಾಬಾದಿನಲ್ಲಿ ಅಕ್ಟೋಬರ್ 12 ರಿಂದ 14ರವರೆಗೆ ನಡೆಯಲಿದೆ. ಈ ತನಕ ಒಂದು ಜೀವಂತ ಸಂಘಟನೆಯನ್ನು ರೂಪಿಸುವುದು ಈ ಸಮ್ಮೇಳನಕ್ಕೆ ಸಾಧ್ಯವಾಗಿಲ್ಲ. ಈಗಿಂದೀಗ ಇಂಗ್ಲಿಷನ್ನು ತೊಲಗಿಸಲು ಕಂಕಣಬದ್ಧರಾದ ಎಲ್ಲ ಕ್ರಿಯಾಶೀಲ ಶಕ್ತಿಗಳು ಸಹಕರಿಸಿದಾಗ ಮಾತ್ರ ಈ ಸಮ್ಮೇಳನ ಅಂಥ ಸಂಘಟನೆಯನ್ನು ರೂಪಿಸಬಲ್ಲದು. ಹೈದರಾಬಾದಿನ ಸಮ್ಮೇಳನದಲ್ಲಿ ಅಂಥವರೆಲ್ಲರೂ ಒಟ್ಟುಗೂಡಬೇಕು. ವಿಚಾರ ವಿನಿಮಯ ಮಾಡುವುದಕ್ಕಾಗಿ ಹಾಗೂ ಅವಶ್ಯಕ ಕಾರ್ಯ ನಿರ್ವಾಹಕ ಘಟಕಗಳನ್ನು ರೂಪಿಸುವುದಕ್ಕಾಗಿ ಈ ಸಮ್ಮೇಳನ ಒಂದು ತಕ್ಕ ವೇದಿಕೆಯಾಗುವುದೆಂದು ಆಶಿಸಲೆ?

●

(1962)

ಹಿಂದಿಯಿಂದ ಕನ್ನಡಕ್ಕೆ : ಹಸನ್ ನಯೀಂ ಸುರಕೋಡ

ಹಿಂದೂ , ಮುಸ್ಲಿಂ

ಈ ದಿನ ನಾನು ನಿಮ್ಮ ಜೊತೆ ಹಿಂದೂ-ಮುಸಲ್ಮಾನ ಹಾಗೂ ಭಾರತ-ಪಾಕಿಸ್ತಾನದ ಸಮಸ್ಯೆ ಕುರಿತು ಮಾತನಾಡಬೇಕೆಂದಿದ್ದೇನೆ. ಕಾರಣ, ಹೈದರಾಬಾದ್‌ನ ಜನ ಮನಸ್ಸು ಮಾಡಿದರೆ ಹಿಂದೂ-ಮುಸಲ್ಮಾನ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಒಂದು ದಿಟ್ಟ ಹೆಜ್ಜೆ ಇಡಬಲ್ಲರು; ಭಾರತ ಹಾಗೂ ಪಾಕಿಸ್ತಾನದ ನಡುವಣ ಹದಗೆಟ್ಟ ಪರಿಸ್ಥಿತಿಯನ್ನು ಸುಧಾರಿಸಬಲ್ಲರು. ಇಂಥ ಸಾಧ್ಯತೆಯುಳ್ಳ ಭಾರತದ ಎರಡು ನಗರಗಳ ಪೈಕಿ ಹೈದರಾಬಾದ್ ಕೂಡ ಒಂದು. ನಿಮಗೂ ಗೊತ್ತಿರುವಂತೆ ಅಂಥ ಇನ್ನೊಂದು ನಗರ ಲಖನೌ. ಅಷ್ಟಕ್ಕೂ ಭಾರತದ ಬೇರೆ ಯಾವ ನಗರಗಳಲ್ಲೇ ಆಗಲಿ, ಎಷ್ಟು ಲವಲವಿಕೆ ಇರಬೇಕೋ ಅಷ್ಟು ಕಾಣುತ್ತಿಲ್ಲ. ಆದರೆ ಇಲ್ಲಿ ಸಾಕಷ್ಟು ಜೀವಸೆಲೆಗಳಿವೆ. ಅದಕ್ಕೆ ಏನು ಕಾರಣ ಎನ್ನುವುದರ ಬಗ್ಗೆ ನಾನು ವಿವರವಾಗಿ ಮಾತನಾಡಬೇಕಿಲ್ಲ. ಅದು ನಿಮಗೆಲ್ಲ ಗೊತ್ತಿರುವ ಸಂಗತಿಯೇ ಆಗಿದೆ.

ಹಿಂದೂಗಳು ಮತ್ತು ಮುಸಲ್ಮಾನರು ಈ ನಗರದಲ್ಲಿ ಹೆಚ್ಚೂ ಕಡಿಮೆ ಸಮಸಮವಾಗಿದ್ದಾರೆ. ಹಿಂದೂ-ಮುಸಲ್ಮಾನ ಹಾಗೂ ಭಾರತ-ಪಾಕಿಸ್ತಾನ ಸಮಸ್ಯೆಗಳ ಬಗ್ಗೆ ಇವರ ಪ್ರವೃತ್ತಿ ಬದಲಾದರೆ ಅದು ಒಂದು ಪವಾಡವನ್ನೇ ಹುಟ್ಟು ಹಾಕಬಲ್ಲದು. ಇಂಥ ಪರಿವರ್ತನೆಯಾಗಬೇಕಾದರೆ ಇತಿಹಾಸವನ್ನು ನೋಡುವ ದೃಷ್ಟಿಕೋನ ತುಂಬ ಮುಖ್ಯವಾಗುತ್ತದೆ ಎಂಬುದು ನನ್ನ ಅಭಿಪ್ರಾಯ. ಅಷ್ಟಕ್ಕೂ ಹಿಂದೂಗಳು ಮತ್ತು ಮುಸಲ್ಮಾನರಲ್ಲಿ ಕೇವಲ ಧರ್ಮದ ಅಂತರವಿದೆ. ಈ ವಿಷಯವಾಗಿ ನಾನೇನೂ ಹೇಳಬಯಸುವುದಿಲ್ಲ. ಹಿಂದೂ ಎಷ್ಟೇ ಉದಾರಿಯಾದರೂ ತನ್ನ ರಾಮ ಹಾಗೂ ಕೃಷ್ಣರನ್ನು ಪ್ರವಾದಿ ಮೊಹಮ್ಮದರಿಗಿಂತ ತುಸು ಮಿಗಿಲೆಂದೇ ಭಾವಿಸುವನು. ಹಾಗೆಯೇ ಮುಸಲ್ಮಾನ ಎಷ್ಟೇ ಉದಾರಿಯಾದರೂ ತನ್ನ ಪ್ರವಾದಿ ಮೊಹಮ್ಮದರು ರಾಮ, ಕೃಷ್ಣರಿಗಿಂತ ಕೊಂಚವಾದರೂ ಮಿಗಿಲೆನ್ನುವವನೇ. ಆದರೆ ಈ ಭೇದಭಾವ ಅತಿಯಾಗಬಾರದು. ಅದು ಹತ್ತೊಂಬತ್ತು-ಇಪ್ಪತ್ತರ ಪ್ರಮಾಣ

ಮೀರದಿದ್ದರೆ ಇಬ್ಬರ ಮನೋಧರ್ಮಗಳ ಸರಿಯಾಗಿರುತ್ತವೆ. ಧರ್ಮದ ಕುರಿತು ನಾನು ಇಷ್ಟು ಮಾತ್ರ ಹೇಳಬಲ್ಲೆನೇ ಹೊರತು, ಇನ್ನು ಹೆಚ್ಚಿನದೇನನ್ನೂ ಹೇಳಬಯಸುವುದಿಲ್ಲ.

ಹೌದು, ಇತಿಹಾಸವನ್ನು ಹೇಗೆ ನೋಡಬೇಕೆಂಬುದೇ ತುಂಬ ಮುಖ್ಯವಾಗುತ್ತದೆ. ಕಾರಣ, ಎಷ್ಟೇ ಆಗಲಿ ನಾವು ಹಿಂದೂ-ಮುಸಲ್ಮಾನ ಸಮಸ್ಯೆ ಕುರಿತು ಮಾತನಾಡುವಾಗ ದಂತಗೋಪುರದಲ್ಲಿ ಕೂತು ಚರ್ಚಿಸುವುದಿಲ್ಲ; ನಾವು ಅರಬಸ್ತಾನದ ಮುಸಲ್ಮಾನರ ಕುರಿತು ಮಾತನಾಡದೆ ಭಾರತದ ಮುಸಲ್ಮಾನರ ಕುರಿತು ಮಾತನಾಡುತ್ತೇವೆ. ಭಾರತದ ಮುಸಲ್ಮಾನರು ಹಿಂದೂಗಳ ಸೋದರರೇ ಹೊರತು ಅರಬಸ್ತಾನದ ಮುಸಲ್ಮಾನರ ಸೋದರರಲ್ಲ. ಈ ಸೋದರ ಸಂಬಂಧವೇ ಇಲ್ಲವೆಂದರೆ, ಇವರಲ್ಲಿ ಅರಿವು ಮೂಡುವುದು ಸಾಧ್ಯವೇ ಇಲ್ಲ. ಸಾಮಾನ್ಯವಾಗಿ ಹಿಂದೂ ಹಾಗೂ ಮುಸಲ್ಮಾನರಲ್ಲಿ ಒಂದು ಭ್ರಮೆ ಇದೆ. ಏಳೆಂಟು ನೂರು ವರ್ಷಗಳವರೆಗೆ ಮುಸಲ್ಮಾನರ ಆಡಳಿತವಿತ್ತು, ಅವರು ದಬ್ಬಾಳಿಕೆ ನಡೆಸಿದರು, ಅತ್ಯಾಚಾರ ಎಸಗಿದರು ಎಂದು ಹಿಂದೂ ಭಾವಿಸುತ್ತಾನೆ. ಮುಸಲ್ಮಾನ ಎಷ್ಟೇ ಕಡುಬಡವನಾದರೂ, ಏಳೆಂಟು ಶತಮಾನಗಳ ಕಾಲ ರಾಜ್ಯವಾಳಿದ ತನ್ನ ಕೋಮಿನವರು ಈಚೆಗಷ್ಟೇ ಕೆಟ್ಟ ದಿನಗಳನ್ನು ಎದುರಿಸಬೇಕಾಗಿದೆ ಎಂದು ಭಾವಿಸುತ್ತಾನೆ.

ಹಿಂದೂ ಹಾಗೂ ಮುಸಲ್ಮಾನರಿಬ್ಬರಲ್ಲೂ ಈ ತಪ್ಪು ಕಲ್ಪನೆ ಮನೆ ಮಾಡಿಬಿಟ್ಟಿದೆ. ಇದು ಸರಿಯಲ್ಲ. ಇದು ಸರಿ ಇದ್ದರೆ ಈ ಬಗ್ಗೆ ನಾನೇನನ್ನೂ ಹೇಳಬೇಕಾಗಿರಲಿಲ್ಲ. ನಿಜ ಸಂಗತಿ ಏಂದರೆ, ಕಳೆದ ಏಳೆಂಟು ನೂರು ವರ್ಷಗಳಲ್ಲಿ ಮುಸಲ್ಮಾನ ಮುಸಲ್ಮಾನನನ್ನೇ ಕೊಂದಿದ್ದಾನೆ. ಇದು ಕೇವಲ ಸಾಂಕೇತಿಕವಾದ ಮಾತಲ್ಲ; ಇದು ಅಪ್ಪಟ ಸತ್ಯ. ತೈಮೂರಲಂಗ ಬರುತ್ತಲೇ ನಾಲ್ಕೈದು ಲಕ್ಷ ಜನರ ಕಗ್ಗೊಲೆ ಮಾಡಿದ. ಆ ಪೈಕಿ ಮೂರು ಲಕ್ಷ ಮುಸಲ್ಮಾನರೇ : ಕೊಲೆಯಾದವರು ಪಠಾಣ ಮುಸಲ್ಮಾನರು, ಕೊಲೆ ಮಾಡಿದವನು ಮೊಗಲ್ ಮುಸಲ್ಮಾನ. ಒಮ್ಮೆ ಮೊಗಲ್ ಮುಸಲ್ಮಾನರು ಪಠಾಣ ಮುಸಲ್ಮಾನರನ್ನೂ ಮತ್ತೊಮ್ಮೆ ಆಫ್ರಿಕಾದ ಮುಸಲ್ಮಾನರು ಮೊಗಲ್ ಮುಸಲ್ಮಾನರನ್ನೂ ಕೊಂದರು ಎನ್ನುವ ಮಾತು ಮುಸಲ್ಮಾನರ ಮನೆ ಮನೆಯಲ್ಲಿ ಜನಜನಿತವಾದರೆ-ಏಳೆಂಟು ಶತಮಾನಗಳ ಘಟನಾವಳಿ ಇವರ ಕಣ್ಣೆದುರು ಯಥಾವತ್ತಾಗಿ ಮೂಡಿ ಬರುತ್ತದೆ. ಇದು ಭಾರತದ ಮುಸಲ್ಮಾನರ ಸಮಸ್ಯೆಯಾಗಿರದೆ, ದೇಶೀ ಹಾಗೂ ವಿದೇಶೀಯರ ಪ್ರಶ್ನೆಯಾಗಿದೆ. ಎಲ್ಲಕ್ಕೂ ಮೊದಲು ಅರಬಸ್ತಾನದಿಂದ ಅಥವಾ ಬೇರೆಲ್ಲಿಂದಲೋ ಮುಸಲ್ಮಾನರು

ಬಂದರು; ಇವರು ವಿದೇಶೀಯರು. ಈ ಜನ ಭಾರತೀಯರ ಆಡಳಿತವನ್ನು ಕೊನೆಗಾಣಿಸಿದರು. ಬರುಬರುತ್ತಾ ಇವರೇ ದೇಶೀಯರಾದರು. ಶತಮಾನ ಅಥವಾ ಅರ್ಧ ಶತಮಾನದಲ್ಲಿ ಅವರು ದೇಶೀಯರಾಗುವಷ್ಟರಲ್ಲಿ, ಮತ್ತೊಂದು ವಿದೇಶೀ ಅಲೆ ಬಂತು. ಈ ಹೊಸ ವಿದೇಶೀಯರು ಹಿಂದೂಗಳನ್ನು ಕೊಂದಂತೇ ದೇಶೀ ಮುಸಲ್ಮಾನರನ್ನೂ ಕೊಂದರು. ಮುಂದೆ ಈ ವಿದೇಶೀಯರೂ ಒಂದು ಶತಮಾನ ಅಥವಾ ಅರ್ಧ ಶತಮಾನ ಕಳೆದಂತೆ ಕ್ರಮೇಣ ದೇಶೀಯರಾದರು. ಮತ್ತೆ ಇನ್ನೊಂದು ಅಲೆ ಬಂತು. ಏಳೆಂಟು ಶತಮಾನಗಳಲ್ಲಿ ದೇಶೀಯರೆಲ್ಲ ನಪುಂಸಕ ರಾಗಿದ್ದರು ಹಾಗೂ ವಿದೇಶಿಯರು ಸುಲಿಗೆಕೋರರಾಗಿದ್ದರೆಂಬುದು, ದೇಶೀಯರೆಲ್ಲ ಹೇಡಿ ಗಳಾಗಿದ್ದರು ಹಾಗೂ ವಿದೇಶೀಯರು ಕಾಡು ಮನುಷ್ಯರಾಗಿದ್ದರೆಂಬುದು ನಮ್ಮ ದೇಶದ ದೌರ್ಭಾಗ್ಯವಾಗಿತ್ತು. ಆ ಏಳೆಂಟು ಶತಮಾನಗಳ ನಮ್ಮ ಇತಿಹಾಸದ ಸಮೀಕ್ಷೆಯ ಫಲವಿದು.

ಈ ಮಾತನ್ನು ಹಿಂದೂ ಹಾಗೂ ಮುಸಲ್ಮಾನರಿಬ್ಬರೂ ಅರಿತುಕೊಳ್ಳಬೇಕು. ಅಂದರೆ, ಹಿಂದೂ, ಮುಸಲ್ಮಾನ ಎನ್ನದೇ ಪ್ರತಿಯೊಂದು ಮಗುವಿಗೆ ಶಾಲೆಯಲ್ಲೂ ಮನೆಯಲ್ಲೂ ರಜಿಯಾ, ಶೇರಶಹ, ಜಾಯಸಿ ಮುಂತಾದವರು ಹಿಂದೂಗಳ ಹಾಗೂ ಮುಸಲ್ಮಾನರ ಪೂರ್ವಜರು ಎನ್ನುವ ಸಂಗತಿಯನ್ನು ಮನವರಿಕೆ ಮಾಡಿಕೊಡಬೇಕು. ರಜಿಯಾ, ಶೇರಶಹ, ಜಾಯಸಿ ಮುಂತಾದವರು ನನ್ನ ಪೂರ್ವಜರೆಂದೇ ನಾನು ಭಾವಿಸುತ್ತೇನೆ. ಈಗ ನಾನಾಡಿದ ಮಾತು ಅಷ್ಟು ಸುಲಭದ ಮಾತಲ್ಲ. ಹಿಂದೂ ಅಥವಾ ಮುಸಲ್ಮಾನ ಎನ್ನದೇ ನಮ್ಮ ಜನರೆಲ್ಲ ಗಜನಿ, ಗೋರಿ ಹಾಗೂ ಬಾಬರ್ ಸುಲಿಗೆಕೋರರಾಗಿದ್ದರು ಹಾಗೂ ಆಕ್ರಮಣ ಕಾರರಾಗಿದ್ದರೆಂಬುದನ್ನು ಒತ್ತಿ ಹೇಳಲು ಸಮರ್ಥರಾಗಬೇಕೆಂದೂ ನಾನು ಬಯಸುತ್ತೇನೆ. ಈ ಎರಡೂ ಮಾತುಗಳನ್ನು ಆಡಿ ತೋರಿಸಲು ಅಳುಕಬಾರದು. ಗಜನಿ, ಗೋರಿ ಹಾಗೂ ಬಾಬರ್ ಇಡೀ ದೇಶವಾಸಿಗಳ ದೃಷ್ಟಿಯಲ್ಲಿ ಸುಲಿಗೆಕೋರರು ಹಾಗೂ ಆಕ್ರಮಣಕಾರರಾಗಿದ್ದರು. ಅವರು ವಿದೇಶೀಯರಾಗಿದ್ದರು ಹಾಗೂ ಈ ದೇಶದ ಜನರ ಆಡಳಿತವನ್ನು ಕೊನೆಗಾಣಿಸಿದ್ದರು. ಅದೇ ರಜಿಯಾ, ಶೇರಶಹ ಹಾಗೂ ಜಾಯಸಿಯಂಥವರು ನಮ್ಮೆಲ್ಲರ ಪೂರ್ವಜ ರಾಗಿದ್ದರು. ಇದು ಆ ಏಳೆಂಟು ಶತಮಾನಗಳ ನಮ್ಮ ಇತಿಹಾಸವನ್ನು ನೋಡುವ ದೃಷ್ಟಿಕೋನವಾಗಿ ಬಿಟ್ಟರೆ, ಹಿಂದೂ ಹಾಗೂ ಮುಸಲ್ಮಾನರು ಇತಿಹಾಸವನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ನೋಡದೆ ಸಮನ್ವಯ ದೃಷ್ಟಿಕೋನದಿಂದ ನೋಡಲಾ ರಂಭಿಸುವರು. ನಮ್ಮ ಇತಿಹಾಸದಲ್ಲಿ ಯಾರು ವಿದೇಶೀಯರಾಗಿದ್ದರು, ಯಾರು ದೇಶೀಯರಾಗಿದ್ದರು, ಯಾರು ನಮ್ಮ ಪರಾಗಿದ್ದರು, ಯಾರು ಪರಕೀಯರಾಗಿದ್ದರು ಎನ್ನುವುದು ಸ್ಪಷ್ಟವಾದ ಮೇಲೆ ಎರಡೂ ಕೋಮಿನ ದೃಷ್ಟಿಕೋನ ಒಂದೇ ಆಗಬಲ್ಲದು.

ನಾವು ಇಷ್ಟು ದೂರ ಕ್ರಮಿಸಬಲ್ಲೆವಾದರೆ ಇಂದಿನ ಸಂದರ್ಭಕ್ಕೆ ಉಪಯುಕ್ತವಾಗುವ ಕೆಲವು ಅಭಿಪ್ರಾಯಗಳನ್ನು ಈ ವಿಚಾರ ಸರಣಿಯಿಂದ ರೂಪಿಸ ಬಯಸುತ್ತೇನೆ. ಇಂದು ಹಿಂದೂಗಳು ಮುಸಲ್ಮಾನರು ಇಬ್ಬರೂ ಬದಲಾಗಬೇಕಾಗಿದೆ. ಎರಡೂ ಕೋಮಿನವರ ಮನಸ್ಸುಗಳು ಕೆಟ್ಟು ಹೋಗಿವೆ. ಈಗ ನಾನು ಪ್ರತಿಪಾದಿಸುತ್ತಿರುವ ವಿಚಾರ ಇದೇ ವಿಷಯಕ್ಕೆ ಸಂಬಂಧಿಸಿದ್ದು. ಅದೆಷ್ಟು ಜನ ಹಿಂದೂಗಳು ಶೇರಶಹನನ್ನು ತಮ್ಮ ಪೂರ್ವಜ ಎಂದು ಪರಿಗಣಿಸುತ್ತಾರೆ? ಅದೆಷ್ಟು ಜನ ಮುಸಲ್ಮಾನರು ಗಜನಿ, ಗೋರಿ ಸುಲಿಗೆಕೋರರಾಗಿದ್ದರೆಂದು ಹೇಳಬಲ್ಲರು? ನಾನೀಗ ನಿಮ್ಮೆದುರು ಮಾತನಾಡುತ್ತಿದ್ದೇನೆ. ಇದನ್ನು ಕೇಳಿದ ನಿಮಗೇ ಈ ಮಾತು ಸರಿ ಎನಿಸುತ್ತದೆ. ನೀವು ಮನೆಗೆ ಮರಳಿದ ನಂತರ ಯಾವನೋ ಸೈತಾನನೊಬ್ಬ ಬಂದು, "ಎಂಥ ಅಡ್ಡದಾರಿಗೆಳೆವ ಮಾತನ್ನು ಕೇಳಿ ಬಂದಿದ್ದೀರಿ. ಗಜನಿ, ಗೋರಿ ಬಂದಿರದಿದ್ದರೆ ಇಲ್ಲಿ ಮುಸಲ್ಮಾನರೆಲ್ಲಿರುತ್ತಿದ್ದರು? ಗೊತ್ತಾಯಿತಲ್ಲ ಸೈತಾನನ ಮಾತಿನ ಶೈಲಿ?" ಎಂದು ನಿಮ್ಮನ್ನು ಮತ್ತೆ ಅಡ್ಡದಾರಿಗೆ ಎಳೆಯಬಹುದು. ಇಂಥವರಿಗೆ ಇಸ್ಲಾಂ ಅಥವಾ ಪ್ರವಾದಿ ಮೊಹಮ್ಮದ್ ಮುಖ್ಯವಲ್ಲ. ಇವರಿಗೆ ಗಜನಿ-ಗೋರಿಗಳೇ ಮುಖ್ಯವಾಗುತ್ತಾರೆ. ಇದರ ಪರಿಣಾಮಗಳು ಏನಾಗಬಲ್ಲವೆಂದು ಸ್ವಲ್ಪ ಯೋಚನೆ ಮಾಡಬೇಕು. ಸೈತಾನನ ಮಾತಿನ ಧಾಟಿಯೇ ಈ ಥರದ್ದು. "ಅವನೆಂಥ ಮಾತುಗಳನ್ನು ಆಡಬಲ್ಲ ಎನ್ನುವುದು ಗೊತ್ತಾಯಿತಲ್ಲ? ಆತ ಶೇರಶಹನನ್ನು ಸಹ ಹಿಂದೂಗಳ ಪೂರ್ವಜರಲ್ಲಿ ಒಬ್ಬನನ್ನಾಗಿ ಮಾಡಿಬಿಟ್ಟ" ಎನ್ನುತ್ತಾನೆ ಆ ಸೈತಾನ. ಸರಿಯಾಗಿ ಯೋಚನೆ ಮಾಡಿ, ನಿಮ್ಮ ತಲೆಗಳನ್ನೂ ನಿಮ್ಮ ಮನಸ್ಸುಗಳನ್ನೂ ಕೊಡಹಿ, ಏಳೆಂಟು ಶತಮಾನಗಳ ಹೊಲಸನ್ನೆಲ್ಲ ಝಾಡಿಸಿ ಸ್ವಚ್ಛಗೊಳಿಸಿಕೊಂಡ ನಂತರ ನನ್ನ ಮಾತನ್ನು ಮತ್ತೊಮ್ಮೆ ಪರಿಶೀಲಿಸಿ. ಹಿಂದೂ ಮುಸಲ್ಮಾನರೆಲ್ಲರೂ ತಮ್ಮ ಮನೋಧರ್ಮಗಳಲ್ಲಿ ಪರಿವರ್ತನೆ ಮಾಡಿಕೊಳ್ಳುವ ಅಗತ್ಯ ಕುರಿತು ಈಗ ಯೋಚಿಸಬೇಕು.

ನಮ್ಮೆಲ್ಲರ ಮನಸ್ಸುಗಳು ಕೆಟ್ಟು ಹೋಗಿವೆ ಎನ್ನುವುದಕ್ಕೆ ಎರಡು ನಿದರ್ಶನಗಳನ್ನು ನೀಡಿ ಇದನ್ನು ಸ್ಪಷ್ಟಪಡಿಸುತ್ತೇನೆ. ಮೇಲ್ನೋಟಕ್ಕೆ ಎಲ್ಲವೂ ಸರಿ ಎನ್ನುವಂತಿದೆ. ಹೆಚ್ಚಿನಂಶ ಸರಿಯೇ ಇದೆ. ಈ ಗಲಭೆಗಳಾದರೂ ಎಲ್ಲಿ ಸಂಭವಿಸುತ್ತವೆ? ನಗರಗಳಲ್ಲೇ ಅಲ್ಲವೆ? ಹೊರನೋಟಕ್ಕೆ ಪರಿಸ್ಥಿತಿ ಮಾಮೂಲಾಗಿದ್ದರೂ ದಂಗೆಗಳಾಗುತ್ತಲೇ ಇವೆ. ಆದರೆ ಒಳಗೆ ಏನು ಹುದುಗಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಒಳಗೊಳಗೇ ಮನಸ್ಸುಗಳು ಒಡೆದು ಹೋಗಿವೆ ಎನ್ನುವ ಸತ್ಯವನ್ನು ಪ್ರಾಮಾಣಿಕ ವ್ಯಕ್ತಿ ನಿರಾಕರಿಸಲಾರ. ಇದರಿಂದಾಗಿ ನಮ್ಮ ದೇಶವೇ ಹಾಳಾಗಬಲ್ಲದು ಎನ್ನುವ ಕಾರಣಕ್ಕಾಗಿ ನನಗೆ ಕೆಡುಕೆನಿಸುತ್ತದೆ. ಯಾವುದೇ

ದೇಶದ ಎಲ್ಲ ಅಲ್ಪಸಂಖ್ಯಾತರು ಎಲ್ಲಿಯವರೆಗೆ ಸುಖಿಯಾಗಿರಲಾರರೋ ಅಲ್ಲಿಯವರೆಗೆ ಯಾವ ದೇಶವೂ ಸುಖಿಯಾಗಿರಲಾರದು. ಇದರರ್ಥ ನಾನು ಮುಸಲ್ಮಾನರ ಬಗ್ಗೆ ಮಾತಾಡುತ್ತಿದ್ದೇನೆ ಎಂದಲ್ಲ. ನಾನು ಕೇವಲ ಮುಸಲ್ಮಾನರನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತಾಡುತ್ತಿಲ್ಲ. ಮುಸಲ್ಮಾನರಲ್ಲಿ ಹೆಚ್ಚಾಗಿ ನೇಕಾರ, ಪಿಂಜಾರರಂಥ ಹಿಂದುಳಿದವರೇ ಇದ್ದಾರೆ. ಐದು ಕೋಟಿ ಮುಸಲ್ಮಾನರ ಜನಸಂಖ್ಯೆಯಲ್ಲಿ ನಾಲ್ಕೂವರೆ ಕೋಟಿ ಹಿಂದುಳಿದ ಮುಸಲ್ಮಾನರಿದ್ದಾರೆ. ನಾನು ಅವರ ಓದು ಬರಹ, ಬಡತನ ಮುಂತಾದ ಎಲ್ಲ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಅವರಿಗೇ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತೇನೆ. ಅದೇ ರೀತಿ ಹರಿಜನ, ಆದಿವಾಸಿ ಮುಂತಾದ ಜನರಿದ್ದಾರೆ. ಎಲ್ಲಿಯವರೆಗೆ ಇವರೆಲ್ಲ ಸುಖವಾಗಿರಲಾರರೋ ಅಲ್ಲಿಯವರೆಗೆ ಭಾರತ ಸುಖಿಯಾಗಲಾರದು. ಇದು ಮೂಲ ತತ್ವ. ಈ ವಿಷಯ ವಾಗಿಯೂ ನಮ್ಮ ಮನೋಧರ್ಮ ಬದಲಾಗಬೇಕು.

ಇನ್ನೊಂದು ಮುಖ್ಯ ವಿಷಯ : ಹೇಗಾದರೂ ಮಾಡಿ ಹಿಂದೂಗಳು ಮತ್ತು ಮುಸಲ್ಮಾನರ ಮನಸ್ಸುಗಳನ್ನು ನಾವು ಬೆಸೆಯಲು ಸಮರ್ಥರಾದರೆ ಪ್ರಾಯಶಃ ನಾವು ಭಾರತ ಪಾಕಿಸ್ತಾನಗಳನ್ನು ಒಗ್ಗೂಡಿಸುವ ಪ್ರಕ್ರಿಯೆಯನ್ನು ಹುಟ್ಟು ಹಾಕಬಲ್ಲೆವು. ಒಂದು ದೇಶ ಇಬ್ಭಾಗವಾಗಿ ಭಾರತ-ಪಾಕಿಸ್ತಾನಗಳಾಗಿದ್ದು, ಅವು ಕೊನೆತನಕ ಹೀಗೇ ಎರಡು ಪ್ರತ್ಯೇಕ ರಾಷ್ಟ್ರಗಳಾಗಿ ಉಳಿಯುತ್ತವೆಂದು ನಂಬಿ ನಡೆಯುವ ಮನುಷ್ಯ ನಾನಲ್ಲ. ಒಳ್ಳೆಯ ಉದ್ದೇಶವುಳ್ಳ ಯಾವ ವ್ಯಕ್ತಿಯೂ ಈ ಮಾತನ್ನು ನಂಬಲಾರ.

ಮನಸ್ಸುಗಳನ್ನು ಬೆಸೆಯುವ ದಾರಿ ಯಾವುದು? ಒಂದೆಡೆ ಹಿಂದೂಗಳ ಮನಸ್ಸಿನಲ್ಲಿ ಮುಸಲ್ಮಾನರ ಬಗ್ಗೆ ಬಲವಾದ ಸಂದೇಹ, ಅಪನಂಬಿಕೆ ಇದೆ. ಕಳೆದ ಹಲವಾರು ವರ್ಷಗಳಿಂದಲೂ ಸೈನ್ಯ ಮುಂತಾದ ಖಾತೆಗಳ ಮಾತು ಒತ್ತಟ್ಟಿಗಿರಲಿ, ಆಡಳಿತದ ಯಾವುದೇ ಖಾತೆಗಳಲ್ಲಿ ಮುಸಲ್ಮಾನರಿಗೆ ಎಷ್ಟು ಪ್ರಮಾಣದಲ್ಲಿ ಉನ್ನತ ಹುದ್ದೆಗಳು ಸಿಗಬೇಕಾಗಿದ್ದವೊ ಅಷ್ಟು ಸಿಕ್ಕಿಲ್ಲ-ಎನ್ನುವ ಸಂಗತಿಯನ್ನು ನಾವು ಅಲ್ಲಗಳೆಯಲಾಗದು. ಈ ಸಂಗತಿಯನ್ನು ಎತ್ತಿ ತೋರಿಸುವವರು ಕೆಲವೇ ಜನರಿದ್ದಾರೆ. ಕಾರಣ, ಸತ್ಯ ನುಡಿಯಲು ಮನುಷ್ಯ ಹಿಂಜರಿಯುತ್ತಾನೆ ಎನ್ನುವುದು. ಅದೇನೇ ಇರಲಿ, ಈ ಮಾತಂತೂ ನಿಜ. ನೆಹರೂಜಿ ಕೂಡ ಈ ಮಾತನ್ನು ಆಗಾಗ ಆಡುತ್ತಾರೆ. ಅವರ ಮಾತಿನ ಜಾಡನ್ನೇ ಹಿಡಿದು ಈಗ ಮುಂದೆ ಸಾಗೋಣ: ಖಾತೆಗಳು ಅವರವು; ಆಡಳಿತ ಅವರದು. ದಿಲ್ಲಿ ದರ್ಬಾರಿನ ಸಾಕ್ಷಾತ್ ಪ್ರಭು ಅವರೇ. ಸತತವಾಗಿ ನಾಲ್ಕೂ ಮುಕ್ಕಾಲು ವರ್ಷಗಳವರೆಗೆ ಮುಸಲ್ಮಾನರನ್ನು

ಸೈನ್ಯ ಮುಂತಾದ ಇಲಾಖೆಗಳಿಂದ ಬಹು ದೂರ ಇರಿಸಿದ್ದಾರೆ. ಮುಂದೆ ಮುಸಲ್ಮಾನರು ಪ್ರತಿಭಟಿಸಲು ಆರಂಭಿಸುತ್ತಿದ್ದಂತೆ ಮೂರು ತಿಂಗಳ ಕಾಲ ತಮ್ಮ ಮಾತಿನ ಧಾಟಿಯನ್ನೇ ಈ ನೆಹರೂ ಬದಲಾಯಿಸುತ್ತಾರೆ. ಮುಸಲ್ಮಾನರ ಯಾವುದೋ ಜಮಾಯತ್‌ನ ಸಮಾವೇಶ ಏರ್ಪಡಿಸಿ, ನಮ್ಮ ದೇಶದಲ್ಲಿ ಈ ಭೇದಭಾವವನ್ನು ನಾನು ಸಹಿಸಲಾರೆ ಎಂದು ಘಂಟಾಘೋಷವಾಗಿ ಸಾರುತ್ತಾರೆ. ನಮ್ಮ ದೇಶದ ಪ್ರತಿಯೊಬ್ಬ ಪ್ರಜೆಗೂ ಸಮಾನ ಸ್ಥಾನಮಾನ ಸಿಗಬೇಕು ಎಂದು ಪ್ರಲಾಪಿಸುತ್ತಾ ತರಹಾವರಿ ಮಾತಗಳನ್ನಾಡಿ ಅವರು ಮುಸಲ್ಮಾನರ ಮನಸ್ಸನ್ನು ಗೆಲ್ಲುವ ಪ್ರಯತ್ನ ಮಾಡುತ್ತಾರೆ. ನೆಹರೂ ಬಂದು ಕತ್ತರಿ; ಇವರ ಪಕ್ಷವೇ ಒಂದು ಕತ್ತರಿ ಎನ್ನುವುದನ್ನು ನೀವೆಲ್ಲ ಅರ್ಥಮಾಡಿಕೊಳ್ಳಬೇಕು. ಈ ಕಾಂಗ್ರೆಸ್ ಕತ್ತರಿ ಪ್ರಯೋಗ ಆಗುವ ರೀತಿ ಯಾವುದು? ಇದಕ್ಕೆ ಎರಡು ಅಲಗುಗಳಿವೆ. ನಾಲ್ಕೂ ಮುಕ್ಕಾಲು ವರ್ಷ ಮುಸಲ್ಮಾನರಿಗೆ ಸರಕಾರಿ ಕೆಲಸ ಕೊಡಕೂಡದು ಎನ್ನುವ ಅಲಗು ಹರಿತವಾಗಿರುತ್ತದೆ. ಮುಂದೆ ಮೂರು ತಿಂಗಳ ಕಾಲ ಇನ್ನೊಂದು ಅಲಗು ಹರಿತವಾಗುತ್ತದೆ. ಎಲ್ಲೆಲ್ಲೂ ಮುಸಲ್ಮಾನರ ಸಭೆಗಳನ್ನು ಏರ್ಪಡಿಸುವುದು, ಸಮಾರಂಭ ನಡೆಸುವುದು, ನೆಹರೂ ಮಹಾರಾಜರು ಏನೆಲ್ಲ ಮಾಡಲಿದ್ದಾರೆ ಎನ್ನುವುದನ್ನು ಡಂಗುರ ಹೊಡೆಸಿ ಪ್ರಚುರ ಪಡಿಸುವುದು, ಆಯೋಗಗಳನ್ನು ನೇಮಕ ಮಾಡುವುದು, ಅವುಗಳ ಶಿಫಾರಸುಗಳು ಇನ್ನೇನು ಬರಲಿವೆ ಎನ್ನುವುದು, ಮುಂದೆ ಮುಸಲ್ಮಾನರು ಸ್ವಲ್ಪ ಸಮಾಧಾನ ಗೊಂಡಿದ್ದಾರೆ ಎಂಬುದು ಗೊತ್ತಾಗುತ್ತಲೇ ಎಲ್ಲವನ್ನೂ ತಂತಾನೇ ಮರೆತು ಬಿಡುವುದು. ಹೀಗೆ ಕಾಂಗ್ರೆಸ್ ಕತ್ತರಿಯ ಈ ಅಲಗು ಮೊದಲಿನದಕ್ಕಿಂತ ಹೆಚ್ಚು ಹರಿತವಾಗಿರುತ್ತದೆ.

ಹಿಂದೂ ಹಾಗೂ ಮುಸಲ್ಮಾನರಿಬ್ಬರೂ ಈ ಸಂಗತಿಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ನೆಹರೂ ಪ್ರಭುಗಳೇ ತಮ್ಮ ಸಂರಕ್ಷಕರು ಎನ್ನುವ ತಪ್ಪು ಕಲ್ಪನೆ ಮುಸಲ್ಮಾನರಲ್ಲಿ ಮನೆಮಾಡಿದಂತಿದೆ. ಅವರೆಂಥ ಸಂರಕ್ಷಕರು ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. ನೆಹರೂ ಸಾಹೇಬರು ಅಥವಾ ಕಾಂಗ್ರೆಸ್ ಏನೇ ಮಾಡಿದರೂ, ಹಿಂದೂಗಳು ಕೂಡ ಅದರ ಹಿನ್ನೆಲೆ-ಮುನ್ನೆಲೆಯನ್ನು ಅರ್ಥ ಮಾಡಿಕೊಳ್ಳಬೇಕು. ದೇಶ ಸರ್ವನಾಶವಾದರೂ ಪರವಾ ಇಲ್ಲ ತಮ್ಮ ಆಡಳಿತ ನಿರಂತರವಾಗಿ ಮುಂದುವರೆಯಬೇಕು ಎನ್ನುವ ಒಪ್ಪಂದವಾಗಿ ಬಿಟ್ಟಿದೆಯೇನೋ ಎನ್ನುವಂತೆ ಕಾಂಗ್ರೆಸ್ ವರ್ತಿಸುತ್ತಿದೆ. ನಾವೆಲ್ಲರೂ ಈ ದೇಶದ ನಾಗರಿಕರು ಎನ್ನುವ ಮಾತನ್ನು ನೆನಪಿನಲ್ಲಿಟ್ಟುಕೊಂಡು ಹಿಂದೂಗಳೆಲ್ಲ ತಮ್ಮ ಮನಸ್ಸನ್ನು ಸ್ವಚ್ಛಗೊಳಿಸಿಕೊಳ್ಳಬೇಕು. ಸಂದೇಹದ ಮಾತು ಎದ್ದಿದೆ ಎಂದಿಟ್ಟುಕೊಳ್ಳಿ. ಯಾವುದೋ ಒಡಕಿನ ಸಂದರ್ಭದಲ್ಲಿ ಕೆಲವು ಮುಸಲ್ಮಾನರು ಅದೆಂಥದೋ

ಅರ್ಥವಾಗದ ಪ್ರವೃತ್ತಿಯನ್ನು ತೋರಿಸುತ್ತಿದ್ದು ಅವರನ್ನು ನಂಬಲಾಗದಂಥ ಸಂದರ್ಭ ಇದೆ ಎಂದಿಟ್ಟುಕೊಳ್ಳಿ. ಆಗ ನಾವು ಒಂದು ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ, ಹಿಂದೂಗಳು ಮುಸಲ್ಮಾನರನ್ನು ಎಷ್ಟೆಷ್ಟು ಸಂದೇಹದಿಂದ ನೋಡುತ್ತಾರೋ, ಮುಸಲ್ಮಾನರು ಅಷ್ಟೇ ಅಪಾಯಕಾರಿ ಯಾಗಬಲ್ಲರು. ಹಿಂದೂಗಳು ಅವರೊಂದಿಗೆ ಎಷ್ಟೆಷ್ಟು ಪ್ರೀತಿ ವಿಶ್ವಾಸದಿಂದ ವರ್ತಿಸುತ್ತಾರೋ ಅಷ್ಟರಮಟ್ಟಿಗೆ ಅವರು ಕಡಿಮೆ ಅಪಾಯಕಾರಿಯಾಗಬಲ್ಲರು. ಹಿಂದೂಗಳು ಈ ವಾದವನ್ನು ಅರ್ಥಮಾಡಿಕೊಂಡರೆ ಪರಿಸ್ಥಿತಿ ಸ್ವಲ್ಪ ಸುಧಾರಿಸ ಬಲ್ಲದು.

ಸಾಮಾನ್ಯ ಮನುಷ್ಯರು ಎಂದೂ ಗೂಢಚಾರರಾಗಲಾರರು ಎನ್ನುವ ಮಾತನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಗೂಢಚಾರರ ಹಿಂದೆ ದೊಡ್ಡ ಶಕ್ತಿ ಇರುತ್ತದೆ. ಅಂಥವರು ಸಂದಿಗೊಂದಿಗಳಲ್ಲಿ ಅಂಡಲೆಯುವವರಲ್ಲ. ಈ ವಿಷಯವಾಗಿ ಭಾರತ ಹಾಗೂ ಪಾಕಿಸ್ತಾನ ಸರಕಾರಗಳು ಎಷ್ಟು ಮೂರ್ಖತನದಿಂದ ವರ್ತಿಸುತ್ತಿವೆ ಎನ್ನುವುದನ್ನೂ ಹೇಳಬಯಸುತ್ತೇನೆ. ಜನರು ಅತ್ತಿಂದಿತ್ತ ಬರಹೋಗುವುದು ನಡೆದೇ ಇರುತ್ತದೆ. ನನಗೆ ಗೊತ್ತಿರುವಂತೆ ಪ್ರತಿದಿನವೂ ಇನ್ನೂರೋ ಮುನ್ನೂರೋ ಅಥವಾ ನಾನೂರೋ ಜನ ಅತ್ತಿಂದಿತ್ತ ಇತ್ತಿಂದತ್ತ ಬಂದು ಹೋಗುತ್ತಿರುತ್ತಾರೆ. ಅವರಲ್ಲಿ ಬಹುತೇಕ ಜನ ಅನಕ್ಷರಸ್ಥರೇ; ಸುಶಿಕ್ಷಿತರಾದರೆ, ತಮಗೆ ಎಷ್ಟು ದಿನಗಳ ವೀಸಾ ಸಿಕ್ಕಿದೆ, ಅದು ಯಾವಾಗ ಮುಗಿಯುತ್ತದೆ, ತಾವು ಯಾವಾಗ ತೆರಳಬೇಕಿದೆ ಎನ್ನುವುದೆಲ್ಲ ಗೊತ್ತಿರುತ್ತದೆ. ಬರೀ ಬಂಗಾಲದಲ್ಲಿ ಮಾತ್ರವಲ್ಲ ಇಡೀ ಪಾಕಿಸ್ತಾನದಲ್ಲಿ ಒಂದು ಕೋಟಿ ಅಥವಾ ೯೦ ಲಕ್ಷ ಹಿಂದೂಗಳಿದ್ದಾರೆ. ಪಾಕಿಸ್ತಾನದ ಹಿಂದೂಗಳು ಭಾರತಕ್ಕೆ, ಭಾರತದ ಮುಸಲ್ಮಾನರು ಪಾಕಿಸ್ತಾನಕ್ಕೆ ಬಂದು ಹೋಗುವುದುಂಟು. ಅವರಲ್ಲಿ ಬಹುತೇಕ ಜನ ಅನಕ್ಷರಸ್ಥರೇ. ಅವರಿಗೆ ವೀಸಾ ಮೊದಲಾದ ವಿಷಯಗಳು ಗೊತ್ತೇ ಇಲ್ಲ. ಪ್ರತಿದಿನ ಇಂಥ ನೂರಾರು ಜನ ಬಂದು ಹೋಗುವಾಗ ನಲವತ್ತೋ ಐವತ್ತೋ ಅಥವಾ ಹತ್ತಿಪ್ಪತ್ತೋ ಜನ ವೀಸಾ ಮುಗಿದ ನಂತರವೂ ತೆರಳುವುದಿಲ್ಲ. ಎರಡೂ ಕಡೆಗಿನ ಸರಕಾರಗಳು ಎಷ್ಟು ನೀಚವಾಗಿವೆಯೆಂದರೆ-ಅವು ಪ್ರತಿಯೊಬ್ಬನನ್ನು ಗೂಢಚಾರನೆಂದು ಪರಿಗಣಿಸುತ್ತವೆ. ಅವರನ್ನು ಬಂದೀಖಾನೆಗಳಲ್ಲಿ ಕೂಡಿ ಹಾಕಿ ಚಿತ್ರಹಿಂಸೆಗೆ ಗುರಿಪಡಿಸುತ್ತವೆ. ಗೂಢಚಾರರು ವೀಸಾದ ದಿನಾಂಕ ಮುಗಿದ ನಂತರವೂ ಉಳಿಯಬಲ್ಲರೆ? ಅಂಥ ವ್ಯಕ್ತಿ ತನ್ನ ವೀಸಾ ಹಾಗೂ ಪಾಸ್‌ಪೋರ್ಟನ್ನು ಬೇರೆ ವಿಧವಾಗಿ ಪಡೆದುಕೊಳ್ಳುತ್ತಾನೆ. ಅವನಿಗೆ ಹಲವಾರು ತಂತ್ರಗಳು, ಮಾರ್ಗೋಪಾಯಗಳು ಗೊತ್ತಿರುತ್ತವೆ. ಈ ದೃಷ್ಟಿಯಿಂದ ಭಾರತ ಹಾಗೂ ಪಾಕಿಸ್ತಾನದ ಸರಕಾರಗಳು ಈ ಅಶಿಕ್ಷಿತರ ಬಗ್ಗೆ ಸ್ವಲ್ಪವಾದರೂ ಕರುಣೆ ತೋರಬೇಕು. ಅವರನ್ನು ಗೂಢಚಾರರೆಂದು ಪರಿಗಣಿಸಿ

ಅವರನ್ನು ಗೋಳಾಡಿಸಕೂಡದು. ಗೂಢಚಾರರೇ ಬೇರೆ ತರಹದ ಜನ ಎನ್ನುವುದೂ ಈ ಸರ್ಕಾರಗಳಿಗೆ ಗೊತ್ತಾಗುವುದಿಲ್ಲವೆ?

ಹೇಗೆ ಹಿಂದೂಗಳ ಮನೋಧರ್ಮದಲ್ಲಿ ಪರಿವರ್ತನೆಯಾಗಬೇಕು ಎಂದೆನೋ ಅದೇ ರೀತಿ ಮುಸಲ್ಮಾನರ ಮನೋಧರ್ಮವೂ ಬದಲಾಗಬೇಕು ಎಂದು ನಾನು ಬಯಸುತ್ತೇನೆ. ಎಲ್ಲಾದರೂ, ಎಂದಾದರೂ ನಾನು ಇಂಗ್ಲಿಷ್ ತೊಲಗಿಸುವ ಮಾತನ್ನಾಡಿದಾಗ ಬಹಳ ದಿನಗಳಿಂದ ನನ್ನ ಜೊತೆಗಿರುವ ಮುಸಲ್ಮಾನರಂತೂ ನನ್ನ ಮಾತನ್ನು ಅರ್ಥ ಮಾಡಿಕೊಂಡಿದ್ದಾರೆ. ಇನ್ನು ಬೇರೆಯವರು ನಾನು ಹಿಂದಿಯನ್ನು ಕಡ್ಡಾಯವಾಗಿ ಹೇರುವ ಮಾತಾಡುತ್ತಿದ್ದೇನೆ ಎಂದು ಸಿಡಿಮಿಡಿಗೊಳ್ಳುತ್ತಾರೆ! ನಾನು ಇಂಗ್ಲಿಷನ್ನು ತೊಲಗಿಸುವ ಮಾತನ್ನಷ್ಟೇ ಆಡಿದ್ದೇನೆ. ನಾನೆಲ್ಲಿ ಹಿಂದೀ ಹೇರುವ ಮಾತಾಡಿದ್ದೇನೆ? ನಾನು ಇಂಗ್ಲಿಷನ್ನು ತೊಲಗಿಸುವ ಮಾತನ್ನಾಡಿದ್ದು- ಅದು ಕೇವಲ ಐವತ್ತು ಲಕ್ಷ 'ಗಣ್ಯ' ವ್ಯಕ್ತಿಗಳ ಭಾಷೆಯಾಗಿದ್ದು, ಅದನ್ನು ನಮ್ಮ ಮೇಲೆ ಹೇರಕೂಡದು ಎನ್ನುವ ಕಾರಣಕ್ಕಾಗಿ; ಕೋಟಿಗಟ್ಟಲೆ ಇರುವ ನಾವು ನಿರಾಳವಾಗಿ ಉಸಿರಾಡುವುದಕ್ಕಾಗಿ; ನಾವು ನಮ್ಮ ಸರಕಾರದ ಕಾರ್ಯಭಾರವನ್ನು ನಮ್ಮ ಭಾಷೆಯಲ್ಲೇ ನಡೆಸಬೇಕೆನ್ನುವ ಕಾರಣಕ್ಕಾಗಿ ಮಾತ್ರ. ನಾನು ತರಬಯಸುವುದು ನಮ್ಮ ಮಾತೃಭಾಷೆಗಳನ್ನೇ ಹೊರತು ಹಿಂದಿಯನ್ನಲ್ಲ. ತಮಿಳ್ನಾಡಿನಲ್ಲಿ ತಮಿಳು ಭಾಷೆ ಇರಲಿ, ಬಂಗಾಲದಲ್ಲಿ ಬಂಗಾಲಿ ಇರಲಿ. ವಾಸ್ತವದಲ್ಲಿ ನಾನು ಹಿಂದಿ ಹೇರುವವನೆಂದು ಪತ್ರಿಕೆಗಳಲ್ಲಿ ನನ್ನ ಬಗ್ಗೆ ಬಲು ಜೋರಾಗಿ, ಅಷ್ಟೇ ಕೆಟ್ಟದಾಗಿ ಪ್ರಚಾರ ನಡೆದಿದೆ. ಇದು ಅಪ್ಪಟ ಸುಳ್ಳು. ಎಲ್ಲ ಭಾಷೆಗಳ ಪ್ರಾಂತಗಳೂ ನಿರ್ಮಾಣವಾದವು. ಮರಾಠರು ಮರಾಠಿ ಭಾಷೆಯ ಉಳಿವಿಗಾಗಿ ಸಾವಿರಾರು ಜನರನ್ನು ಬಲಿಗೊಟ್ಟರು. ಮಹಾರಾಷ್ಟ್ರ ಅಸ್ತಿತ್ವಕ್ಕೆ ಬಂದ ಮೇಲೆ ಈ ಬಡಪಾಯಿ ಮರಾಠಿ ಅನಾಥವಾಗಿ ಬಿಟ್ಟಿತು. ನನಗೆ ಆಘಾತವಾಗುವುದು ಈ ಕಾರಣಕ್ಕಾಗಿಯೇ. ಅಲ್ಲಿ ಇನ್ನೂ 'ಇಂಗ್ಲಿಷ್ ರಾಣಿ'ಯ ಕಾರುಬಾರು ನಡೆದಿದೆ. ತಮಿಳ್ನಾಡಿನಲ್ಲಿ ಮತ್ತು ಆಂಧ್ರಪ್ರದೇಶದಲ್ಲೂ ಅದೇ 'ಇಂಗ್ಲಿಷ್ ರಾಣಿ'ಯ ಕಾರುಬಾರು. ಆದ್ದರಿಂದಲೇ ಇಂಗ್ಲಿಷ್ ರಾಣಿಯನ್ನು ತೊಲಗಿಸಿ ನಮ್ಮ ನಮ್ಮ ಭಾಷೆಗಳನ್ನು ಪ್ರತಿಷ್ಠಾಪಿಸೋಣ ಎಂದು ನಾನೆನ್ನುವುದು. ತಮ್ಮ ತಮ್ಮ ಮಾತೃಭಾಷೆ ಆಡಳಿತ ಭಾಷೆಯಾಗುವ ನೀತಿಯನ್ನು ಒಪ್ಪಿಕೊಂಡರೆ, ದಿಲ್ಲಿಯಲ್ಲಿ ಹಿಂದಿ ಬಂದು ಬಿಡುತ್ತದೆಂದು ಈ ಜನ ಆತಂಕಗೊಂಡಿದ್ದರೆ, ಇದಕ್ಕೆ ನನ್ನ ಬಳಿ ಪರಿಹಾರವೆಲ್ಲಿದೆ? ನೀವು ನಿಮ್ಮ ರಾಜ್ಯಗಳಲ್ಲಿ 'ಹಿಂದೀ ರಾಣಿ'ಯದರ್ಬಾರು ಬರಕೂಡದೆಂದು ಬಯಸುವುದಾದರೆ ನಾನದನ್ನು ಖಂಡಿತಾ ಬೆಂಬಲಿಸಲು ಸಿದ್ಧ. ಇಡೀ ಹಿಂದೀಯೇತರ ಭಾಷೆಯ ಜನಕ್ಕೆ ಯಾವುದೋ ಒಂದು ಭಾಷೆಯ ಬಗ್ಗೆ ಒಮ್ಮತವಿದೆ ಎಂದರೆ ದಿಲ್ಲಿಯ ಆಡಳಿತ ಭಾಷೆ ತಮಿಳು

ಇಲ್ಲವೆ ಬಂಗಾಲಿ ಅಥವಾ ಯಾವುದೇ, ಭಾರತದ ಜನಭಾಷೆ ಆಗಬೇಕೆನ್ನುವ ಮಾತನ್ನು ಹಿಂದೀ ಪ್ರಾಂತಗಳ ೨೦-೨೨ ಕೋಟಿ ಜನ ಒಪ್ಪಿಕೊಳ್ಳುವಂತೆ ಮಾಡುವ ಕೆಲಸವನ್ನು ನಾನೇ ಗುತ್ತಿಗೆಗೆ ತೆಗೆದುಕೊಳ್ಳಬಲ್ಲೆ.

ಇರಲಿ. ಈ ಮಾತನ್ನು ಇಲ್ಲಿಗೇ ನಿಲ್ಲಿಸಿ, ನಮ್ಮ ಮುಸ್ಲಿಂ ಬಂಧುಗಳ ವಿಚಾರವನ್ನು ಗಮನಿಸೋಣ. ಹಿಂದುಸ್ತಾನಿ ಅಥವಾ ಹಿಂದಿಯ ಮಾತೆತ್ತಿದರೆ ಸಾಕು, ಅವರ ಮನಸ್ಸಿನಲ್ಲಿ ಸಂದೇಹದ ಭೂತ ತಲೆ ಎತ್ತುತ್ತದೆ. ಯಾವ ಮನುಷ್ಯ ಈ ಮಾತನ್ನಾಡುತ್ತಿದ್ದಾನೆ ಎನ್ನುವುದನ್ನು ಮುಸಲ್ಮಾನರು ಅರ್ಥಮಾಡಿಕೊಳ್ಳಬೇಕು. ನಾನು ಹಿಂದೀ ಭಾಷೆಯನ್ನು ಹೇರುವವನೆಂದೇ ಅವರು ಸಂದೇಹಪಡುತ್ತಾರೆ. ನಾನೀಗ ಆಡುತ್ತಿರುವ ಭಾಷೆ ಯಾವುದು? ನನ್ನ ತಿಳಿವಳಿಕೆ ಪ್ರಕಾರ, ಈ ದೇಶ ಮತ್ತೊಮ್ಮೆ ಒಗ್ಗೂಡಬೇಕಾದರೆ ನಾನು ಈಗ ಆಡುತ್ತಿರುವ ಭಾಷೆಯೇ ರಾಷ್ಟ್ರ ಭಾಷೆಯಾಗಬೇಕು. ಅಪಭ್ರಂಶದಿಂದ ಉತ್ಪನ್ನವಾದ ಈ ಪ್ರಚಲಿತ ಭಾಷೆಯೇ ರಾಷ್ಟ್ರಭಾಷೆಯಾಗಬೇಕು. ಅಷ್ಟಕ್ಕೂ ಅದೊಂದು ದೊಡ್ಡ ಸಮಸ್ಯೆ. ಈ ಭಾಷೆ ಪಾಲಿ ಹಾಗೂ ಸಂಸ್ಕೃತದ ಮಗು ಎನ್ನುವುದೇನೋ ಸರಿಯೇ. ಇದು ಜನತೆಯೊಂದಿಗೆ ಹಾಸುಹೊಕ್ಕಾಗಿ ಬೆರೆತು ಹೋದ ಅಪಭ್ರಂಶ ಭಾಷೆ ಎನ್ನುವುದು ಮುಖ್ಯ. ಅಪಭ್ರಂಶದಲ್ಲಿ ಪಾರ್ಸಿ ಶಬ್ದಗಳು ಬರುವುದುಂಟು. ಅರಬ್ಬೀ ಭಾಷೆಯ ಶಬ್ದಗಳೂ ಕಾಣಸಿಗುವುದುಂಟು. ಒಂದು ಸಹಜ ಪ್ರಕ್ರಿಯೆಯ ಫಲವಾಗಿ ನಿರ್ಮಾಣಗೊಂಡ ಈ ಸಮ್ಮಿಶ್ರ ಭಾಷೆ, ಕೇವಲ ಪಾರ್ಸಿ ಅಥವಾ ಅರಬ್ಬೀ ಶಬ್ದಗಳನ್ನು ಬಳಕೆಗೆ ತರುವ ಉದ್ದೇಶಪೂರ್ವಕ ಪ್ರಯತ್ನದ ಫಲವಲ್ಲ. ಬರೀ ತೋರಿಕೆಗಾಗಿ ಅಥವಾ ಮುಸಲ್ಮಾನರನ್ನು ಖುಷಿಪಡಿಸುವುದಕ್ಕಾಗಿ ನಾನು ನನ್ನ ನಿಲುವನ್ನು ಬದಲಾಯಿಸುವುದಿಲ್ಲ. ಪ್ರಚಲಿತ ಭಾಷೆ ಸತ್ವಶಾಲಿ ಭಾಷೆಯಾಗಿರುತ್ತದೆ. ಜನ ತಮ್ಮ ಶ್ರದ್ಧೆ ಹಾಗೂ ಜೀವವನ್ನು ಅಕ್ಷರಶಃ ಅದರಲ್ಲಿ ತುಂಬಿರುತ್ತಾರೆ. ಹಾಗಾಗಿ ಅವರು ಅದೇ ಭಾಷೆಯನ್ನು ಬಳಸಬೇಕಾಗುತ್ತದೆ. ಅಂಥ ಭಾಷೆಯಿಂದಲೇ ನಾವು ಈ ರಾಷ್ಟ್ರವನ್ನು ಕಟ್ಟಬೇಕಾಗಿದೆ. ಇಂಥ ವಿಷಯದಲ್ಲಿ ಮುಸಲ್ಮಾನರು ಅನುಮಾನಪಡಲಾರಂಭಿಸಿದರೆ, ಅವರ ಮನಸ್ಸಿನಲ್ಲಿ ಅದೆಷ್ಟು ಕೊಳಕನ್ನು ತುಂಬಲಾಗಿದೆ. ಅವರ ಚಿಂತನೆ ಎಷ್ಟು ದೋಷಯುಕ್ತವಾಗಿದೆ ಎನ್ನುವ ಮಾತನ್ನು ನಾನು ಇಲ್ಲಿ ಒತ್ತಿ ಹೇಳಬೇಕಾಗುತ್ತದೆ.

ಮುಂದೆ ಈ ಭಾಷೆಗೆ ಯಾವ ಲಿಪಿ, ಯಾವ ಶೈಲಿ ಇರಬೇಕೆನ್ನುವ ಪ್ರಶ್ನೆ ತಲೆ ಎತ್ತಬಹುದಾದರೂ ಅದು ನನಗೆ ಮುಖ್ಯ ಎನಿಸುವುದಿಲ್ಲ. ಭಾರತದಲ್ಲಿ ಎಷ್ಟು ಭಾಷೆಗಳಿವೆಯೋ ಅವುಗಳಿಗೆಲ್ಲ ನಾಗರಿಲಿಪಿಯನ್ನೇ ಬಳಸಬೇಕೆನ್ನುವ ಸೂಚನೆಯನ್ನು

ಯಾರಾದರೂ ನೀಡಿದರೆ, ನಾಗರಿ ಎಂದರೆ ಹಿಂದಿ ಅಲ್ಲ ಎನ್ನುವುದು ತುಂಬ ಮುಖ್ಯವಾಗುತ್ತದೆ. ಈ ತಪ್ಪನ್ನು ಎಂದೂ ಮಾಡಬಾರದು. ಒಂದಿಲ್ಲೊಂದು ರೂಪದಲ್ಲಿ ಭಾರತದಲ್ಲಿ ಎಲ್ಲ ಭಾಷೆಗಳೂ ಬಳಸಿದ ಬರಹದ ಶೈಲಿಯೇ ನಾಗರಿ.

ಈವರೆಗೆ ಬರೆಯುವ ಎಷ್ಟೋ ಶೈಲಿಗಳು ಬಳಕೆಯಲ್ಲಿವೆ. ತೆಲುಗು, ತಮಿಳು, ಕನ್ನಡ ಮುಂತಾದ ಭಾಷೆಗಳು ಬರವಣಿಗೆಯ ಬೇರೆ ಬೇರೆ ರೂಪಗಳಷ್ಟೇ. ಯಾರಾದರೂ ಇಂಥ ಮಾತಗಳನ್ನಾಡಿದರೆ ಅವರ ಮಾತುಗಳನ್ನು ಪ್ರೀತಿಯಿಂದ ಲಕ್ಷ್ಯಗೊಟ್ಟು ಕೇಳಬೇಕು. ಅಂಥವರ ಬಗ್ಗೆ ಆತಂಕ ಬೇಡ.

ನಿಜಕ್ಕೂ ಇಂದು ಹಿಂದೂಗಳು ಮತ್ತು ಮುಸಲ್ಮಾನರ ಮನಸ್ಸುಗಳನ್ನು 'ಓಟಿ'ನ ರಾಜಕೀಯ ಹೊಲೆಗೆಡಿಸಿದೆ. ಚುನಾವಣೆಯ ಸಂದರ್ಭದಲ್ಲಿ ಧುತ್ತನೆ ಅವತರಿಸುವ ರಾಜಕಾರಣಿಗಳು ಬೇರೆ ಸಂದರ್ಭಗಳಲ್ಲಿ ಮಂಗಮಾಯವಾಗುತ್ತಾರೆ. 'ಓಟಿ'ನ ಭಿಕ್ಷೆ ಬೇಡುವವರು ಮತದಾರ ಮುನಿಸಿಕೊಳ್ಳುವಂತೆ ಮಾಡಬಹುದಾದ ಯಾವ ಮಾತನ್ನೂ ಆಡಲಾರರು. ಅದರಿಂದಾಗಿ ಭಾರತದಲ್ಲಿ ಎಷ್ಟು ಪಕ್ಷಗಳಿವೆಯೋ ಆ ಪೈಕಿ ಯಾವ ಪಕ್ಷವೂ ಹಿಂದೂ ಮತ್ತು ಮುಸಲ್ಮಾನರ ಮನೋಧರ್ಮಗಳನ್ನು ಪರಿವರ್ತಿಸುವ ಗೊಡವೆಗೇ ಹೋಗಲಾರದು. ಮನಸ್ಸಿನಲ್ಲಿ ರಾಶಿಯಾಗಿ ಬಿದ್ದಿರುವ ಕೊಳಕನ್ನು, ತಪ್ಪು ಕಲ್ಪನೆಗಳನ್ನು, ಭ್ರಮೆಗಳನ್ನು ದೂರ ಮಾಡದೆ, ಅವೆಲ್ಲ ಸರಿಯೇ ಎನ್ನುವ ರೀತಿಯಲ್ಲಿ ಎಲ್ಲರೂ ಆಡುವಂತೆ ಆಡಿ ಮತಗಳಿಸಬೇಕೆನ್ನುತ್ತವೆ. ನಮ್ಮ ರಾಜಕೀಯ ಬಿಕ್ಕಟ್ಟಿನ ಕೆಟ್ಟ ಅಂಶವೆಂದರೆ 'ಓಟಿ'ನ ರಾಜಕೀಯದಲ್ಲಿ ನಾವು, ಅದರಲ್ಲೂ ವಿಶೇಷವಾಗಿ ಮುಖಂಡರು, ಸತ್ಯ ನುಡಿಯಲು ಹಿಂಜರಿಯುತ್ತಿದ್ದೇವೆ ಎನ್ನುವುದು. ಅದರ ಪರಿಣಾಮವಾಗಿಯೇ ಹಿಂದೂಗಳ ಮತ್ತು ಮುಸಲ್ಮಾನರ ಮನಸ್ಸು ಕೊಳಕಾಗಿಯೇ ಉಳಿದು, ಎಂದೂ ಬದಲಾಗದೆ ಮುಂದುವರೆಯುತ್ತದೆ.

ಈ ಪರಿಸ್ಥಿತಿ ಸುಧಾರಿಸಬೇಕು. 'ಮುಸಲ್ಮಾನ' ಎನ್ನುವ ಮಾತೇ ರಾಜಕೀಯದಲ್ಲಿ ಇರಕೂಡದು;' ಅದು ದೂರವಾಗಬೇಕು. ಹಿಂದೂಗಳು ಹೇಗೆ ಬೇರೆ ಬೇರೆ ಪಕ್ಷಗಳಲ್ಲಿ ಹರಿದು ಹಂಚಿಹೋಗುತ್ತಾರೋ ಹಾಗೆಯೇ ಮುಸಲ್ಮಾನರೂ ಹಂಚಿಹೋಗಬೇಕು. ಮುಸಲ್ಮಾನರು ಹೊರಟು ನಿಂತರೆ ಒಟ್ಟಾಗಿಯೇ ಹೊರಡು ವವರು ಎನ್ನುವ ಮಾತನ್ನು ಹೆಚ್ಚು ಕಡಿಮೆ ಎಲ್ಲರೂ ಒಪ್ಪಿಕೊಂಡಂತಿದೆ. ಅವರು ಯಾವತ್ತೂ ಯಾವುದಾದರೊಂದು ಹೆಸರಿನಲ್ಲಿ ಒಗ್ಗೂಡುತ್ತಾರೆ. ಒಂದು ಕಾಲಕ್ಕೆ ಇತ್ತೆಹಾದುಲ್ ಮುಸ್ಲಿಮೀನ್‌ನಲ್ಲಿ ಇದ್ದಂತಹ ವ್ಯಕ್ತಿ ಇಂದೂ ಆ ಸಂಘಟನೆಯಲ್ಲಿಯೇ ಇದ್ದಾನೆ. ಯಾವತ್ತೂ ಒಂದು ಪಡೆಯಾಗಿ ಎಲ್ಲ ಮುಸಲ್ಮಾನರು ಸಾಧ್ಯವಿದ್ದಷ್ಟೂ

ಕಾಲ ಮುಂದುವರೆಯುತ್ತಿರುವುದು ಸರಿಯಲ್ಲ. ಅದರ ಪರಿಣಾಮವಾಗಿ ತಮ್ಮ ಮನಸ್ಸಿಗೊಪ್ಪುವಷ್ಟು ಸರಿಯಾದ ರಾಜಕೀಯವೆಂದು, ಹಿಂದೂಗಳೆಲ್ಲ ಇನ್ನೊಂದು ಪಡೆಯಾಗಿ ಒಂದೇ ಸಂಘಟನೆಯಲ್ಲಿ ಮುಂದುವರೆಯ ಬಹುದಾದ ದೊಡ್ಡ ದುರಂತದ ಸಾಧ್ಯತೆಗಳು ಇವೆ. ಇಂದು ಹೈದ್ರಾಬಾದ್‌ನಲ್ಲಿ ಹಿಂದೂಗಳು ಹಾಗೂ ಮುಸಲ್ಮಾನರು ಒಗ್ಗೂಡಿ ಸಾವಿರ ಗಟ್ಟಲೆಯಾಗಿ-ಅಷ್ಟೇ ಏಕೆ ಲಕ್ಷಾಂತರ ಎನ್ನೋಣ-ಯಾವುದೋ ಬೇಡಿಕೆಯ ಈಡೇರಿಕೆಗಾಗಿ ನಗರದಲ್ಲಿ ಮೂರ್ನಾಲ್ಕು ಮೈಲುದ್ದ ಮೆರವಣಿಗೆ ಹೊರಟರೆ ಆಂಧ್ರ ಪ್ರದೇಶದಲ್ಲಿ ಮಾತ್ರವಲ್ಲ, ಇಡೀ ಭಾರತದಲ್ಲೇ ಮಿಂಚಿನ ಸಂಚಾರವಾಗುತ್ತದೆ. ಹಿಂದೂಗಳು ಮತ್ತು ಮುಸಲ್ಮಾನರು ಒಂದುಗೂಡಿ ಏನನ್ನೋ ಸಾಧಿಸಲು ಹೊರಟಿದ್ದಾರಲ್ಲ ಎಂದು ಎಲ್ಲರೂ ದಂಗಾಗಬಹುದು. ಇದು ಸಾಧ್ಯವಾಗುವುದು ಕೇವಲ ಹಿಂದೂಗಳು ಅಥವಾ ಮುಸಲ್ಮಾನರೆಂದು ಮತೀಯವಾಗಿ ಒಗ್ಗೂಡದೇ ತಮ್ಮ ತಮ್ಮ ಆಶಯಗಳ ದೃಷ್ಟಿಕೋನದಿಂದ ತಮಗೆ ಇಷ್ಟವಾದ ರಾಜಕೀಯವನ್ನು ಆಯ್ಕೆ ಮಾಡಿಕೊಂಡು ಇವರೆಲ್ಲ ಒಗ್ಗೂಡಿದಾಗ ಮಾತ್ರ.

ಶೇಕಡಾ ೯೦ರಷ್ಟು ಪ್ರಶ್ನೆಗಳು ಜನಸಮುದಾಯಕ್ಕೆ ಸಂಬಂಧಿಸಿದವು. ಎಲ್ಲರನ್ನೂ ಕಾಡುತ್ತವೆ. ಇವೆಂಥ ಪ್ರಶ್ನೆಗಳು ಎಂದರೆ ಹಿಂದೂ ಮತ್ತು ಮುಸಲ್ಮಾನ ಎನ್ನುವ ಭೇದಭಾವ ಅವಕ್ಕಿಲ್ಲ. ಒರಟು ಬಟ್ಟೆಯ ಬೆಲೆ ಎಷ್ಟಿದೆ? ಸೀಮೆಎಣ್ಣೆ ಬೆಲೆ ಎಷ್ಟಿದೆ? ಭಾರತದ ಕೃಷಿ, ಕೈಗಾರಿಕೆ ಉತ್ಪನ್ನ ಯಾರಿಗೆ ಎಷ್ಟು ಸಿಕ್ಕಿತು? ಇವೆಲ್ಲ ಪ್ರಶ್ನೆಗಳು ಹಿಂದೂ, ಮುಸಲ್ಮಾನರಿಬ್ಬರಿಗೂ ಒಂದೇ ರೀತಿಯಲ್ಲಿ ಎದುರಾಗುವಂಥವು. ಉದಾಹರಣೆಗೆ ಭಾರತದಲ್ಲಿ ಹೆಚ್ಚುವರಿ ಉತ್ಪಾದನೆ ಆಗುತ್ತಿಲ್ಲ. ಎರಡು ವರ್ಷಗಳಿಂದಂತೂ ಅದು ಸ್ತಬ್ಧವಾಗಿದೆ. ಎರಡು ವರ್ಷಕ್ಕೆ ಮೊದಲು ಪ್ರತಿದಿನ ಪ್ರತಿಯೊಬ್ಬ ಸರಾಸರಿ ಎರಡು ನಯಾ ಪೈಸೆ ಹೆಚ್ಚುವರಿ ಉತ್ಪಾದನೆ ಮಾಡುತ್ತಿದ್ದ. ಆ ಎರಡು ನಯಾಪೈಸೆ ಕೂಡ ೪೪ ಕೋಟಿ ಜನರಿಗೆ ದಕ್ಕುತ್ತಿರಲಿಲ್ಲ. ೫೦ ಲಕ್ಷ ಗಣ್ಯ-ಮಾನ್ಯರೇ ಹೆಚ್ಚಾಗಿ ಅದನ್ನು ಕಬಳಿಸಿದ್ದರು. ಒಂದು ಕಾಲು ನಯಾ ಪೈಸೆ ಮಾತ್ರ ೫-೧೦ ಕೋಟಿ ಜನಕ್ಕೆ ಲಭ್ಯವಾಗುತ್ತಿತ್ತು. ೨೫ ಕೋಟಿ ಜನರಿಗಂತೂ ಏನೇನೂ ಸಿಗುತ್ತಿರಲಿಲ್ಲ. ಆದಾಗ್ಯೂ ಅವರು ಪ್ರತಿದಿನ ಮೂರಾಣೆಯಲ್ಲೇ ಬದುಕಬೇಕು. ಈ ಮಾತು ಹಿಂದೂ ಮತ್ತು ಮುಸಲ್ಮಾನರಿಬ್ಬರಿಗೂ ಅನ್ವಯಿಸುವಂಥದ್ದು. ಇಲ್ಲಿ ಯಾವ ಭೇದಭಾವವೂ ಇಲ್ಲ. ವಸ್ತುಗಳ ಬೆಲೆ ಎಷ್ಟಿದೆ? ಸರಕಾರಿ ನೌಕರರ ಸಂಖ್ಯೆ ಎಷ್ಟಿದೆ? ಕರ ಹೇಗೆ ವಿಧಿಸಲಾಗುವುದು? ಪೋಲೀಸ್ ಇಲಾಖೆ ಹೇಗೆ ಕಾರ್ಯ ನಿರ್ವಹಿಸುತ್ತದೆ? ಪೋಲೀಸ್ ಹಾಗೂ ಜನತೆಯ ನಡುವೆ ಎಂಥ

ಸಂಬಂಧವಿದೆ? ಬದುಕಿನ ಇಂಥ ನೂರಕ್ಕೆ ತೊಂಬತ್ತು ಸಮಸ್ಯೆಗಳಿಗೆ ಹಿಂದೂ ಮುಸಲ್ಮಾನ ಎನ್ನುವ ಭೇದಭಾವವಿಲ್ಲ. ಮೊದಲೂ ಇವೇ ಸಮಸ್ಯೆಗಳು ಕೋಲಾಹಲ ಎಬ್ಬಿಸಿದ್ದವು. ಈಗಲೂ ಇವೇ ಸಮಸ್ಯೆಗಳು ಕೋಲಾಹಲಕ್ಕೆ ಕಾರಣವಾಗಿವೆ. ನೌಕರಿ ಸಣ್ಣದೋ ದೊಡ್ಡದೋ ಎನ್ನುವ ಮಾತು ಒತ್ತಟ್ಟಿಗಿರಲಿ, ದಿನಗೂಲಿ ನೌಕರಿಯಾದರೂ ಸಿಗುವುದು ಯಾರಿಗೆ? ಹೀಗೇ ಮಧ್ಯಮ ವರ್ಗದ ಸುಶಿಕ್ಷಿತರ ಸಮಸ್ಯೆ ತಲೆದೋರುವುದು. ಇದೇ ರೀತಿ ಇನ್ನೂ ಕೆಲವು ಸಮಸ್ಯೆಗಳಿದ್ದು ಅವುಗಳಿಂದಾಗಿಯೇ ಮನಸ್ಸು ಕಹಿಯಾಗುತ್ತದೆ. ಈ ಕಾರಣಕ್ಕಾಗಿ ನಾನು ಹೇಳುವುದೇನೆಂದರೆ ಈ ನೂರಕ್ಕೆ ತೊಂಬತ್ತು ಸಮಸ್ಯೆಗಳನ್ನು ಪರಿಹರಿಸಿದರೆ ಎಲ್ಲ ತಂತಾನೇ ಸರಿಯಾಗುತ್ತದೆ. ಇನ್ನು ನೂರಕ್ಕೆ ಹತ್ತು ವಿಷಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಕೂಡ ಅಲಕ್ಷಿಸಲಾಗದು. ಅವೂ ತಲೆನೋವಾಗಿ ಕಾಡಬಹುದು. ಅದಕ್ಕಾಗಿ ಅವುಗಳನ್ನೂ ಪರಿಹರಿಸಬೇಕು. ಅವುಗಳ ಪರಿಹಾರಕ್ಕೆ ಸಾಕಷ್ಟು ಯೋಚನೆ ಮಾಡಿ ಯಾವ ಥರದ ರಾಜಕೀಯ ಅವಶ್ಯವೋ ಅದನ್ನು ಬಳಸಬೇಕು.

ಇದೇ ಸಂದರ್ಭದಲ್ಲಿ ನಾನು ಭಾರತ-ಪಾಕಿಸ್ತಾನ ಸಮಸ್ಯೆಯನ್ನು ಮತ್ತೆ ಎತ್ತಬೇಕೆಂದಿದ್ದೇನೆ. ದೇಶ ವಿಭಜನೆಯಾದಾಗ ನನ್ನಂಥವರು ಇದರ ವಿರುದ್ಧ ಏನನ್ನೂ ಮಾಡಲಿಲ್ಲವಲ್ಲ ಎಂದು ನನಗೆ ವಿಷಾದವೆನಿಸುತ್ತದೆ. ಪ್ರಾಯಶಃ ನಾವು ಅದನ್ನು ತಡೆಯಲಾಗುತ್ತಿರಲಿಲ್ಲ. ಆದಾಗ್ಯೂ ನಾವು ಏನನ್ನಾದರೂ ಮಾಡಬಹುದಿತ್ತು. ಕನಿಷ್ಠ ಪಕ್ಷ ನಾವು ಜೈಲಿಗೆ ಹೋಗಿದ್ದರೆ, ನಾವು ವಿರೋಧಿಸಿದೆವಲ್ಲ ಎನ್ನುವ ನೆಮ್ಮದಿಯಾದರೂ ಇರುತ್ತಿತ್ತು. ಆಗ ನಾವು ತಪ್ಪು ಮಾಡಿದೆವು. ಅದಕ್ಕೆ ಹಲವು ಕಾರಣಗಳಿದ್ದವು. ಮಹಾತ್ಮಾ ಗಾಂಧಿ ಕೂಡ ಒಂದು ಕಾರಣವಾದರು. ಆ ಮಾತನ್ನು ಇನ್ನು ಬಿಟ್ಟು ಬಿಡೋಣ. ಈ ದೇಶದ ವಿಭಜನೆಯೇನೋ ಆಗಿ ಹೋಯಿತು. ಇದನ್ನು ಸ್ಥಾಯಿ ಅಥವಾ ಪೂರ್ಣಗೊಂಡ ಪ್ರಕ್ರಿಯೆ ಎಂದು ಸುಮ್ಮನಿದ್ದು ಬಿಡಬೇಕೆ ಅಥವ ಒಕ್ಕೂಟಕ್ಕಾಗಿ ಒಂದು ದಾರಿ ಹುಡುಕಲು ಸಾಧ್ಯವೆ ಎನ್ನುವುದು ಈಗ ನಮ್ಮೆದುರು ಇರುವ ಪ್ರಶ್ನೆ. ದೇಶ ವಿಭಜನೆಯ ನಂತರವೂ ಪ್ರೀತಿ ಉಳಿಯಬಲ್ಲದು, ಶಾಂತಿ ನೆಲೆಯೂರಬಹುದು ಹಾಗೂ ಹಿಂಸೆ ತಲೆದೋರಲಾರದು ಎಂದು ಭಾವಿಸಿದ್ದರೂ ಅದು ಸಾಧ್ಯವಾಗಲಿಲ್ಲ. ಪ್ರೀತಿ ಉಳಿಯುವ ಬದಲು ದ್ವೇಷ ಹೆಚ್ಚಿತು. ವ್ಯತ್ಯಾಸವಿಷ್ಟೇ: ಒಳಗೊಳಗೇ ಹುದುಗಿದ್ದ ದ್ವೇಷ ಅಥವಾ ಅಸಮಾಧಾನ ಈಗ ಎರಡು ರಾಷ್ಟ್ರಗಳ ರೂಪದಲ್ಲಿ ಹೊರಚಿಮ್ಮಿ ಬಂದಿದೆ. ಭಾರತ ಹಾಗೂ ಪಾಕಿಸ್ತಾನ ಸರಕಾರಗಳ ಶಕ್ತಿ, ಹಣ, ಪ್ರಚಾರ, ವಿದೇಶ ನೀತಿಯ ಬಹುಪಾಲು ಇಂದು ಪರಸ್ಪರರನ್ನು ದೂಷಿಸುವುದರಲ್ಲೆ ವ್ಯಯವಾಗುತ್ತಿದೆ. ಪಾಕಿಸ್ತಾನ

ಕಿಡಿಗೇಡಿ ದೇಶ ಎನ್ನುವ ಮಾತು ಜಗತ್ತಿನಲ್ಲೆಲ್ಲ ಜನಜನಿತವಾಗಲೆಂದು ಭಾರತದ ವಿದೇಶ ವ್ಯವಹಾರಗಳ ಇಲಾಖೆ ಪ್ರಯತ್ನಿಸಿದರೆ, ಭಾರತ ಉದ್ಧಟ ದೇಶ ಎಂದು ಪಾಕಿಸ್ತಾನದ ವಿದೇಶಾಂಗ ಇಲಾಖೆ ಪ್ರಚಾರ ಮಾಡಲು ಪ್ರಯತ್ನಿಸುತ್ತದೆ. ಎರಡೂ ರಾಷ್ಟ್ರಗಳ ಕಸಬು ಇದೇ ಆಗಿದೆ. ಇದರಿಂದ ಯಾವುದಾದರೂ ಸಮಸ್ಯೆ ಬಗೆ ಹರಿದಿದೆಯೆ?

ಈ ಹಿನ್ನೆಲೆಯಲ್ಲಿ ಪತ್ರಿಕೆಗಳನ್ನು ನಾವು ತುಂಬ ಜಾಗರೂಕರಾಗಿ ಓದಲು ಕಲಿಯಬೇಕಾಗಿದೆ. ಇವೆರಡೂ ರಾಷ್ಟ್ರಗಳು ತಮಗೆ ಬೇಕೆಂದಾಗ ಜನತೆಯ ಮನಸ್ಸನ್ನು ಉದ್ವಿಗ್ನಗೊಳಿಸುತ್ತವೆ. ವೈರ ಹುಟ್ಟಿಸುತ್ತವೆ. ಇಲ್ಲವಾದರೆ ಏನೂ ಮಾಡದೇ ಕೈಕಟ್ಟಿ ಕುಳಿತುಕೊಳ್ಳುತ್ತವೆ. ಗಡಿಯಲ್ಲಿ ಸಣ್ಣ-ಪುಟ್ಟ ಘಟನೆಗಳು ಸಂಭವಿಸಿದರೆ, ಅವು ಭಾರತ ಹಾಗೂ ಪಾಕಿಸ್ತಾನ ಸರಕಾರಗಳ ಮುದ್ರೆ ಪಡೆದು ಎರಡೂ ದೇಶಗಳ ಪತ್ರಿಕೆಗಳಲ್ಲಿ ಪ್ರಕಟಗೊಂಡಾಗ ಜನತೆಯ ಮನಸ್ಸು ಉದ್ವಿಗ್ನಗೊಳ್ಳುತ್ತದೆ. ಈ ಸುದ್ದಿ, ಸರಕಾರಿ ಇಲಾಖೆಗಳಿಂದ ಲಭ್ಯವಾಗುತ್ತದೆ. ಜಾಗರೂಕತೆಯಿಂದ ಪತ್ರಿಕೆಗಳನ್ನು ಓದಬೇಕೆನ್ನುವುದು ಈ ಕಾರಣಕ್ಕಾಗಿ. ಭಾರತ ಸರಕಾರವು ನಲವತ್ತನಾಲ್ಕು ಕೋಟಿ ಜನರ ಲಕ್ಷ್ಯವನ್ನು ಚೀನಾದ ಕಡೆಯಿಂದ ಪಾಕಿಸ್ತಾನದ ಕಡೆಗೆ ತಿರುಗಿಸುವ ಸಾಧ್ಯತೆ ಇದೆ. ಇದೊಂದು ತಂತ್ರವಾಗಿರುವ ಸಾಧ್ಯತೆಯೂ ಇದೆ. ಚೀನಾ ಅಂತೂ ದೊಡ್ಡ ವೈರಿ. ಈ ಬಲಿಷ್ಠ ವೈರಿಯ ಬಗ್ಗೆ ಸರಕಾರಕ್ಕೆ ಹೆದರಿಕೆಯಾಗುತ್ತದೆ ಎನ್ನೋಣ. ಆಗ ಅದು ಜನತೆಯ ಲಕ್ಷ್ಯವನ್ನು ಸಣ್ಣ ವೈರಿಯತ್ತ ತಿರುಗಿಸಲು ಪ್ರಯತ್ನಿಸುತ್ತದೆ; ಆ ಕಾರಣಕ್ಕಾಗಿ ಅದು ಇಂಥ ಸುದ್ದಿ ನೀಡಲಾರಂಭಿಸುತ್ತದೆ. ನಾವು ಕೂಡ ಮೂರ್ಖರಾಗಿ ಬಿಡುತ್ತೇವೆ. ನಾವು ಚೀನಾದ ಬದಲು ಪಾಕಿಸ್ತಾನದ ಮೇಲೆ ನಮ್ಮ ಲಕ್ಷ್ಯ ಕೇಂದ್ರೀಕರಿಸುತ್ತೇವೆ.

ಅದೇ ರೀತಿ, ಪಾಕಿಸ್ತಾನದ ಸರಕಾರ ಬಿಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡಾಗ, ಅಥವಾ ತನ್ನ ದೇಶದ ಯಾವುದೋ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗದೇ ಹೋದಾಗ ಅದು 'ಭಾರತ ನಮ್ಮನ್ನು ನಿರ್ನಾಮ ಮಾಡಬೇಕೆಂದಿದೆ, ಆಕ್ರಮಣದ ತಯಾರಿ ನಡೆಸುತ್ತಿದೆ, ನಮ್ಮ ದೇಶ ಅಪಾಯದಲ್ಲಿದೆ, ಎಚ್ಚೆತ್ತುಕೊಳ್ಳಿ' ಎಂದು ತನ್ನ ಜನತೆಗೆ ಎಚ್ಚರಿಕೆ ನೀಡುತ್ತಾ, ಭಾರತವನ್ನು ದೂಷಿಸಲಾರಂಭಿಸುತ್ತದೆ. ಹೀಗೆ ಪಾಕಿಸ್ತಾನದ ಜನತೆಯ ಮನಸ್ಸನ್ನು ಅದು ಉದ್ವಿಗ್ನಗೊಳಿಸುತ್ತದೆ.

ಇಂದು ಎರಡೂ ರಾಷ್ಟ್ರಗಳ ಬಳಿ ವಿನಾಶಕಾರಿ ಶಸ್ತ್ರಾಸ್ತ್ರಗಳಿವೆಯಾದರೂ ಜನತೆ ಮನಸ್ಸು ಮಾಡಿದರೆ ಪರಿಸ್ಥಿತಿ ಬದಲಾಗಬಲ್ಲದು. ಈ ಕಾರಣಕ್ಕಾಗಿಯೇ

ನಾನು ಲೋಕಸಭೆಯಲ್ಲಿ ವಿದೇಶನೀತಿಗೆ ಸಂಬಂಧಿಸಿದ ಚರ್ಚೆಯಲ್ಲಿ ಒಂದೇ ಮಾತನ್ನು ಆಡಿದೆ. ಅದನ್ನು ಕೇಳಿದ ಕಾಂಗ್ರೆಸ್ಸಿಗರೆಲ್ಲ ಬೆಂಕಿ ಕಾರಿದರು. ಪಾಕಿಸ್ತಾನ ಸರಕಾರ ಭಾರತ ಸರಕಾರದಷ್ಟೇ ನೀಚವಾಗಿದೆ ಎಂದು ನಾನು ಹೇಳಿದ್ದೆ. ಎಷ್ಟು ನೇರವಾದ ಹಾಗೂ ಎಷ್ಟು ಸತ್ಯವಾದ ಮಾತು! ಇದರಲ್ಲಿ ತಪ್ಪೇನೂ ಇರಲಿಲ್ಲ ವಾದರೂ, ಎಲ್ಲೆಡೆ ಜನ ಆಕ್ರೋಶಗೊಂಡರು. ಇವನೇನು ಮಾತ ನಾಡುತ್ತಿದ್ದಾನೆ, ಎಂದು ದಿಗ್ಭ್ರಮೆಗೊಂಡು ಒಬ್ಬ ವ್ಯಕ್ತಿ ಅರಚಿಕೊಂಡ. 'ಇದೇ ನಿಮ್ಮ ಸ್ವಾಭಿಮಾನವೇ?' ಎಂದು ಇನ್ನೊಬ್ಬ ಬೊಬ್ಬೆ ಹಾಕಿದ. 'ಇದು ಸ್ವಾಭಿಮಾನದ ಮಾತೇ?' ಎಂದು ನಾನು ಹೇಳಬೇಕಾಯಿತು. ''ಇಪ್ಪತ್ತು ಸಾವಿರ ಚದರ ಮೈಲು ಭೂಮಿಯನ್ನು ನೀಡಿ ದೇಶವನ್ನು ಎರಡು ಹೋಳಾಗಿಸಿ, ಮತ್ತೆಂದೂ ಅವುಗಳನ್ನು ಒಂದುಗೂಡಿಸುವ ಮಾತೇ ಆಡಲಿಲ್ಲ. ಈಗ ನೀವು ಸ್ವಾಭಿಮಾನದ ಕುರಿತು ಮಾತನಾಡುತ್ತಿರುವಿರಾ? ನಿಮ್ಮ ಸ್ವಾಭಿಮಾನವನ್ನು ಕೆಣಕುವವರೆಗೆ ನೀವು ತಣ್ಣಗೆ ಕುಳಿತಿರಲಿಲ್ಲವೆ'' ಎಂದು ನಾನು ಕೇಳದೆ ವಿಧಿ ಇರಲಿಲ್ಲ.

ಸರಕಾರಗಳಿಂದ ಭಾರತ-ಪಾಕಿಸ್ತಾನದ ಸಮಸ್ಯೆ ನಿಜಕ್ಕೂ ಉಲ್ಬಣಗೊಳ್ಳುತ್ತದೆ; ಇದರಲ್ಲಿ ಸಂದೇಹವಿಲ್ಲ. ಅದಕ್ಕೆಂತಲೇ ನಾನೀಗ ಆಡಲಿರುವ ಮಾತು ಇರಿಸು-ಮುರಿಸು ಉಂಟುಮಾಡುತ್ತದೆ. ಸಣ್ಣ -ಪುಟ್ಟ ವಿಷಯಗಳನ್ನು ಭೂತಾಕಾರ ತಾಳುವಂತೆ ಮಾಡಲಾಗಿದೆ; ತಿಕ್ಕಾಟ ನಡೆದಿದೆ. ಪತ್ರಿಕೆಗಳ ಮೂಲಕ ಪರಸ್ಪರರನ್ನು ಉದ್ವಿಗ್ನಗೊಳಿಸ ಲಾಗುತ್ತದೆ; ತೋಳ್ಬಲದ ಪ್ರದರ್ಶನ ನಡೆದಿದೆ. ಇಂತಹ ಸಂದರ್ಭದಲ್ಲಿ ನಾನು ಭಾರತ-ಪಾಕಿಸ್ತಾನ ಒಕ್ಕೂಟದ ಮಾತನ್ನು ಆಡಬಯಸಿದ್ದೇನೆ. ರಾಷ್ಟ್ರ ಅಥವಾ ಪ್ರಾಂತದ ಮಾತು ಒತ್ತಟ್ಟಿಗಿರಲಿ, ಕೆಲವು ವಿಷಯಗಳಲ್ಲಾದರೂ ನಾವು ಒಗ್ಗಟ್ಟಾಗಲು ಮುಂದೆ ಹೆಜ್ಜೆ ಇಡಬೇಕಾಗಿದೆ. ಇದು ಸಾಧ್ಯವಾದರೆ ಸರಿ, ಇಲ್ಲವೆಂದರೆ ರಾಷ್ಟ್ರೀಯತೆಯ ವಿಷಯವಾಗಿ, ವಿದೇಶ ನೀತಿ ಹಾಗೂ ಸ್ವಲ್ಪ ಸೈನ್ಯದ ವಿಷಯವಾಗಿ ಒಂದು ಒಕ್ಕೂಟದ ರಚನೆ ಕುರಿತು ಚರ್ಚೆ ಆರಂಭವಾಗಬೇಕು. ನಿಮ್ಮೆದುರು ಹೇಳುತ್ತಿರುವ ಈ ಮಾತುಗಳನ್ನು ಲೋಕಸಭೆಯಲ್ಲೂ ನಾನು ಹೇಳಿದ್ದೇನೆ. ಈ ಮಾತು ಸರಕಾರದ ಮಟ್ಟದಲ್ಲಿ ಮಹತ್ವದ್ದೆನಿಸುತ್ತಿಲ್ಲ. ಅಂದರೆ ಭಾರತ ಹಾಗೂ ಪಾಕಿಸ್ತಾನ ಸರಕಾರಗಳಿಗೆ ಈ ಮಾತು ನಿಷ್ಪ್ರಯೋಜಕ. ಕಾರಣವಿಷ್ಟೇ: ಎರಡೂ ಸರಕಾರಗಳು ನೀಚವಾಗಿವೆ. ಅದಕ್ಕೆಂತಲೇ ಎರಡೂ ರಾಷ್ಟ್ರಗಳ ಜನತೆಯು ಇನ್ನು ಮುಂದೆ ಈ ನಿಟ್ಟಿನಲ್ಲಿ ಯೋಚನೆ ಮಾಡಬೇಕು. ಸ್ವತಂತ್ರವಾಗಿ ಯೋಚನೆ ಮಾಡುವುದು ಅವಶ್ಯ. ಈ ವಿಷಯವಾಗಿ ನಾನಂತೂ ಸದಾ ಸಿದ್ಧ. ಪ್ರತಿಯೊಬ್ಬರೂ ಈ ಅಭಿಪ್ರಾಯವನ್ನು ಒಪ್ಪಬೇಕೆಂದೇನಿಲ್ಲ. ಈ ನಿಟ್ಟಿನಲ್ಲಿ ನಾವೆಲ್ಲ ಹೃದಯವಂತಿಕೆ

ಯಿಂದ ಯೋಚಿಸಿದ್ದೇ ಆದರೆ, ಬೇರೆ ಬೇರೆ ಮಾರ್ಗೋಪಾಯಗಳು ತಂತಾನೆ ತೆರೆದುಕೊಳ್ಳುತ್ತವೆ.

ಭಾರತ-ಪಾಕಿಸ್ತಾನ ಒಕ್ಕೂಟ ಸಾಧ್ಯವಾದರೆ, ಮುಸಲ್ಮಾನರಿಗೆ ಅಥವಾ ಪಾಕಿಸ್ತಾನೀಯರಿಗೆ ಒಪ್ಪಿಗೆಯಾಗುವವರೆಗೆ ಸಂವಿಧಾನದಲ್ಲಿ ರಾಷ್ಟ್ರಪತಿ ಅಥವಾ ಪ್ರಧಾನಿಗಳಿಬ್ಬರಲ್ಲಿ ಒಬ್ಬರು ಪಾಕಿಸ್ತಾನಿಯಾಗಿರಬೇಕು ಎಂಬ ವಿಧಿಯನ್ನು ಸೇರಿಸಬೇಕು. ಇದರಿಂದಾಗಿ ನಾನು ಘರ್ಷಣೆಯನ್ನು ಹುಟ್ಟು ಹಾಕುತ್ತಿದ್ದೇನೆ ಎಂದು ಜನ ಆತಂಕಗೊಳ್ಳಬಹುದು. ಈ ಹಿಂದೆ, ಕಾಂಗ್ರೆಸ್ಸಿಗರಾಗಲಿ ಮುಸ್ಲಿಂ ಲೀಗಿನವರಾಗಲಿ ಮಾಡಿದ ಈ ದಿಕ್ಕಿನ ಪ್ರಯತ್ನಗಳು ಸಫಲವಾಗಲಿಲ್ಲ. ಪ್ರಯತ್ನ ನಡೆದಾಗೆಲ್ಲ ಘರ್ಷಣೆ ಉಂಟಾಗುತ್ತಿತ್ತು. 'ಮತ್ತೆ ನೀವೂ ಘರ್ಷಣೆಗೆ ದಾರಿ ಮಾಡಿಕೊಡುವಿರಾ?' ಎನ್ನುವವರಿಗೆ ನಾನು ಒಂದು ಮಾತು ಹೇಳಬಯಸುತ್ತೇನೆ. ಇದಕ್ಕೆ ಬೇರೆ ದಾರಿ ಇಲ್ಲವೆನಿಸಿದರೂ ಒಂದು ಸುಲಭದ ದಾರಿಯನ್ನು ಸೂಚಿಸುತ್ತೇನೆ: ಒಂದು ವರ್ಷದವರೆಗಂತೂ ಬಾಹ್ಯಘರ್ಷಣೆ ನೋಡಿದ್ದಾಯಿತು. ಇನ್ನು ಆಂತರಿಕ ಘರ್ಷಣೆ ಹೇಗೇ ಇರಲಿ, ಕನಿಷ್ಠ ಪಕ್ಷ ಅದು ಬಾಹ್ಯ ಘರ್ಷಣೆಗಿಂತ ಎಷ್ಟೋ ವಾಸಿ. ಭಾರತ-ಪಾಕಿಸ್ತಾನದ ಬಾಹ್ಯ ಘರ್ಷಣೆಯನ್ನು ತಪ್ಪಿಸಲಾರೆವು. ಇದು ಮುಂದುವರೆದಷ್ಟೂ ನಾವು ಜಗತ್ತಿನಲ್ಲಿ ಅಸಹಾಯಕರಾಗಿ, ಇಲ್ಲಾ ಬಲಿಪಶುಗಳಾಗಿ ದುರ್ಬಲರಾಗುತ್ತಲೇ ಹೋಗಬೇಕಾಗುತ್ತದೆ. ಆದ್ದರಿಂದಲೇ ಹೊಸ ನಿಟ್ಟಿನಲ್ಲಿ ನಾವು ಆಲೋಚನೆ ಮಾಡುವುದು ಸಾಧ್ಯವಾಗಬೇಕಾಗಿದೆ.

'ಇದುವರೆಗೆ ಕೇವಲ ಸರಳವಾದ ವಿಷಯಗಳನ್ನು ಕುರಿತು ನೀವು ಮಾತನಾಡಿದ್ದೀರಿ; ಹಲವಾರು ವಿವಾದದ ವಿಷಯಗಳಿವೆ, ಆ ಕುರಿತೂ ನೀವೇಕೆ ಮಾತಾಡಬಾರದು' ಎಂದು ಜನ ನನ್ನನ್ನು ಕೇಳಬಹುದು. ಆದರೆ, ಕಾಶ್ಮೀರ ಸಮಸ್ಯೆಯನ್ನು ಪ್ರತ್ಯೇಕವಾಗಿ ಪರಿಹರಿಸಬೇಕೆಂದು ವಾದಿಸುತ್ತಿರುವಾಗ ನಾನು ಯಾವುದೇ ಕೊಡುಕೊಳ್ಳುವಿಕೆಗೆ ಸಿದ್ಧನಿಲ್ಲ. ನನಗೆ ಅಧಿಕಾರ ಕೊಟ್ಟರೆ, ನಾನು ಈ ಒಕ್ಕೂಟದ ವಿನಃ ಕಾಶ್ಮೀರ ಸಮಸ್ಯೆಯನ್ನು ಪರಿಹರಿಸಲಾರೆ. ಇಂದು ನಡೆಯುತ್ತಿರುವ ಮಾತುಕತೆ ಅಬಾಧಿತವಾಗಿ ಮುಂದುವರೆಯುತ್ತಿಲ್ಲ. ಈ ಮುಂದಾಳುಗಳು ಮುಂಜಾನೆ ಒಂದು ಮಾತನ್ನಾಡಿದರೆ, ಸಂಜೆ ಇನ್ನೊಂದು ಮಾತನ್ನಾಡುತ್ತಾರೆ. ನನ್ನ ವಿಧಾನವಂತೂ ಅಂಥದ್ದಲ್ಲ. ನಾನು ಈ ನನ್ನ ವಿಧಾನವನ್ನು ಅನುಸರಿಸಿದರೆ ನನ್ನನ್ನೊಬ್ಬ ಹುಚ್ಚ ಎಂದು ಭಾರತದ ಜನ ಲೇವಡಿ ಮಾಡಬಹುದು. ಪ್ರಧಾನಿಗೆ ಇದು ತುಂಬ ಸುಲಭದ ಮಾತಾಗಿದೆ. ಪಾಕಿಸ್ತಾನದ ಜೊತೆ ಕಾಶ್ಮೀರ ಕುರಿತು ನಾವು ಮಾತುಕತೆಗೆ ಸಿದ್ಧರಿಲ್ಲ ಎಂದು ಅವರು ಬೆಳಿಗ್ಗೆ ಒಂದು ಹೇಳಿಕೆ ನೀಡುತ್ತಾರೆ; ಮಾತುಕತೆ ನಡೆದರೆ ಎಲ್ಲ

ವಿಷಯಗಳ ಕುರಿತು ಮಾತುಕತೆ ನಡೆಯಬೇಕೆಂದು ಸಾಯಂಕಾಲ ಇನ್ನೊಂದು ಹೇಳಿಕೆ ನೀಡುತ್ತಾರೆ. ಅವರಿಗೆ ಎರಡು ನಾಲಿಗೆಗಳಲ್ಲ, ಹಲವಾರು ನಾಲಿಗೆಗಳಿವೆ. ಅವರ ಮಾತನ್ನು ಬಿಟ್ಟು ಬಿಡೋಣ. ಒಂದು ಸಮಸ್ಯೆಯನ್ನು ಪ್ರತ್ಯೇಕವಾಗಿ ಪರಿಹರಿಸಬೇಕೆನ್ನುವುದಾದರೆ ಭಾರತ-ಪಾಕಿಸ್ತಾನ ಸಮಸ್ಯೆಯು ಎಂದೆಂದೂ ಬಗೆ ಹರಿಯಲಾರದು ಎಂದು ಮಾತ್ರ ನಾನು ಹೇಳಬಲ್ಲೆ. ನದಿ ನೀರಿನ ಸಮಸ್ಯೆಯನ್ನಷ್ಟೇ ಪರಿಹರಿಸಿದರೆ ಬೇರೊಂದು ಸಮಸ್ಯೆ ತಲೆದೋರಬಹುದು. ಕಾಶ್ಮೀರ ಸಮಸ್ಯೆಯನ್ನೂ ಹೇಗೋ ಬಗೆಹರಿಸಿದೆವು ಎನ್ನೋಣ, ಆಗ ಪೂರ್ವಪಾಕಿಸ್ತಾನದ ಹಿಂದೂಗಳ ಸಮಸ್ಯೆ, ಪಶ್ಚಿಮಪಾಕಿಸ್ತಾನ ಹಾಗೂ ಪೂರ್ವಪಾಕಿಸ್ತಾನಗಳ ನಡುವಣ ಸಂಚಾರವನ್ನು ಕುರಿತು ಸಮಸ್ಯೆ ಎದುರಾಗುತ್ತದೆ. ಭಾರತಪಾಕಿಸ್ತಾನ ಒಕ್ಕೂಟ ಸಾಧ್ಯವಾದರೆ ಮಾತ್ರ ನಾನು ಕಾಶ್ಮೀರದ ಸಮಸ್ಯೆ ಕುರಿತು ಯೋಚನೆ ಮಾಡಬಲ್ಲೆ -ಎಂದು ಸ್ಪಷ್ಟಪಡಿಸಬಯಸುತ್ತೇನೆ. ಕಾಶ್ಮೀರ ಭಾರತದಲ್ಲೇ ಉಳಿಯಲಿ ಅಥವಾ ಅದೊಂದು ಸ್ವಾಯತ್ತ ಘಟಕವಾಗಿ ಉಳಿದುಕೊಳ್ಳಲಿ ಅಥವಾ ಅದು ಪಾಕಿಸ್ತಾನದ ಜೊತೆ ಸೇರಲಿ, ಒಟ್ಟಾರೆ ನಾವೆಲ್ಲ ಒಂದೇ ಕುಟುಂಬದ ಸದಸ್ಯರಾಗಿ ಒಂದು ಒಕ್ಕೂಟ ವಾಗಬೇಕು; ಈ ಒಕ್ಕೂಟದ ಚೌಕಟ್ಟಿನಲ್ಲಿ ಭಾರತ-ಪಾಕಿಸ್ತಾನದ ಜನತೆ ಆಮೂಲಾಗ್ರ ಯೋಚನೆಮಾಡಲು ಉದ್ಯುಕ್ತರಾಗಬೇಕು.

ಎಲ್ಲಿಯವರೆಗೆ ಯಾವುದೋ ಒಂದು ಪ್ರಾಂತದ ಹಿಂದೂಗಳು ಮತ್ತು ಮುಸಲ್ಮಾನರು ಜಾಗೃತರಾಗಿ ಒಂದು ಹೊಸಪಡೆಯನ್ನು ರೂಪಿಸುವುದಿಲ್ಲವೋ ಅಲ್ಲಿಯವರೆಗೆ ಈ ಥರದ ಆಲೋಚನೆಯೇ ವ್ಯರ್ಥವೆಂದು ನಾನು ಇನ್ನೊಮ್ಮೆ ಹೇಳಬಯಸುತ್ತೇನೆ. ಅದಕ್ಕಾಗಿಯೇ ನಾನು ಹೈದ್ರಾಬಾದ್ ಹಾಗೂ ಲಖನೌ ನಗರಗಳ ಕುರಿತು ಮಾತನಾಡಿದೆ. ಹೈದ್ರಾಬಾದ್ ಹಾಗೂ ಲಖನೌ ನಗರಗಳ ಮುಸಲ್ಮಾನರು ಜಾಗೃತರಾಗಿ ಒಂದು ಹೊಸ ಶಕ್ತಿಯಾಗಬೇಕು. ಸಭೆ, ಪ್ರಚಾರ ಹಾಗೂ ಮತಪ್ರದರ್ಶನದ ಮೂಲಕ ದೇಶದಲ್ಲಿ ಒಂದು ಹೊಸ ಅಲೆ ಎದ್ದಿದೆ ಎಂದು ಅವರು ತೋರಿಸಿಕೊಟ್ಟರೆ, ಆಗ ಹೊಸ ಆಲೋಚನೆಯು ಜನಶಕ್ತಿಯಾಗಿ ಹೊರಹೊಮ್ಮಬಲ್ಲದು.

ಇದೇ ಸಂದರ್ಭದಲ್ಲಿ ಶೇಖ್‌ಅಬ್ದುಲ್ಲಾರಿಗೆ ಸಂಬಂಧಿಸಿದಂತೆ ಒಂದು ಸಣ್ಣ ಪ್ರಶ್ನೆ ಎದುರಾಗಬಹುದು. ಶೇಖ್ ಅಬ್ದುಲ್ಲಾರನ್ನು ಜೈಲಿನಲ್ಲಿ ಇಡಕೂಡದೆಂದು ಹಲವಾರು ವರ್ಷಗಳಿಂದ ನಾನು ಹೇಳುತ್ತಾ ಬಂದಿದ್ದೇನೆ. ಇತ್ತೀಚೆಗೆ ನಾನು ಏನು ಮಾತಾಡಿದರೂ ಸಾಕು, ಅದು ಕಾಳ್ಗಿಚ್ಚಾಗಿ ಹರಡುತ್ತದೆ. ಪತ್ರಿಕೆಯವರಿಂದ ಕೊಂಚ ಉಪಕಾರವಾಗಿದೆ. ಆದಾಗ್ಯೂ ಎಷ್ಟು ಹರಡಬೇಕೊ ಅಷ್ಟು ಹರಡುತ್ತಿಲ್ಲ.

ಪೂರ್ತಿಯಾಗಿ ಹರಡಿದರೆ ಅದರ ಗಮ್ಮತ್ತೇ ಬೇರೆ. ಅದಿರಲಿ, ಈ ಮಾತು ಹಬ್ಬಿದಾಗ ಕೆಲವರಿಗಂತೂ ಸಂತೋಷವಾಯಿತು. ಇನ್ನು ಕೆಲವರಿಗೆ ಕೆಡುಕೆನಿಸಿತು. 'ಒಬ್ಬ ದೇಶದ್ರೋಹಿಯನ್ನು ಬಿಡುಗಡೆ ಮಾಡಿ ಎನ್ನುವಿರಾ?' ಎಂದು ಕೆಲವೆಡೆ ಜನ ನನ್ನನ್ನು ಕೇಳಿದರು. ದೇಶದ್ರೋಹಿ! ಇದೆಂಥ ಮಾತು ಎನ್ನುವುದನ್ನು ಅರ್ಥ ಮಾಡಿಕೊಳ್ಳ ಬೇಕಾಗಿದೆ. ನಾನೇಕೆ ಬಿಡುಗಡೆಯ ಮಾತನ್ನಾಡಿದೆ? ಇದರ ಮುಖ್ಯಕಾರಣವೆಂದರೆ, ಈ ದೇಶದಲ್ಲಿ ಕಾನೂನುಬದ್ಧ ಆಡಳಿತ ನಡೆಯಬೇಕೇ ವಿನಃ ನಿರಂಕುಶಪ್ರಭುತ್ವವಲ್ಲ ಎನ್ನುವುದು. ಸ್ವಲ್ಪ ಕಾಲ ನೀವು ಶೇಖ್ ಅಬ್ದುಲ್ಲಾರನ್ನು ಮರೆತು ಬಿಡಿ. ನಮ್ಮ ಮಧ್ಯೆ ಒಬ್ಬ ಕಳ್ಳನಿದ್ದಾನೆ ಎಂದು ಭಾವಿಸೋಣ. ಆ ಕಳ್ಳ ನಾನೇ ಇರಬಹುದು. ಇಲ್ಲಾ ನಿಮ್ಮಲ್ಲಿ ಯಾರಾದರೂ ಇರಬಹುದು. ಕಳ್ಳನ ಬಂಧನವಾಗಬೇಕು. ಕಳ್ಳನೊಂದಿಗೆ ಹೇಗೆ ವರ್ತಿಸಬೇಕು ಎನ್ನುವುದಕ್ಕೆ ಕಾಯ್ದೆ ಕಾನೂನುಗಳಿವೆ. ಅವನನ್ನು ಕಾನೂನಿನ ಪ್ರಕಾರ ವಿಚಾರಣೆಗೆ ಗುರಿಪಡಿಸುವುದೋ ಇಲ್ಲಾ ಆತನನ್ನು ಮನಬಂದಂತೆ ಥಳಿಸಲಾರಂಭಿಸಬೇಕೊ? ದೊಡ್ಡ ಪ್ರಮಾಣದ ಕಳ್ಳತನವಾದರೆ, ವಿಚಾರಣೆಗೆ ಅವಕಾಶ ನೀಡದೇ ಆತನನ್ನು ಥಳಿಸಿಯೇ ಮುಗಿಸಿ ಬಿಡುವಿರಾ? ಆಗ ಅದು ಅರಾಜಕತೆಯಾಗಿ ಬಿಡುತ್ತದೆ. ಒಂದು: ಕಾನೂನುಬದ್ಧ ಆಡಳಿತ; ಎರಡು: ಅರಾಜಕತೆ-ಹೀಗೆ ಎರಡು ಮಾರ್ಗಗಳಿವೆ. ಪಾಕಿಸ್ತಾನದಲ್ಲಂತೂ ಕಳೆದ ಹತ್ತು ಹನ್ನೊಂದು ವರ್ಷಗಳವರೆಗೆ ನಿರಂಕುಶ ಪ್ರಭುತ್ವವೇ ಇದೆ. ಭಾರತದಲ್ಲೂ ಕಾನೂನುಬದ್ಧ ಆಡಳಿತ ಇಲ್ಲವಾಗುವ ಅಪಾಯ ನನಗೆ ಕಾಣುತ್ತಿದೆ.

ಹೆಜ್ಜೆ ಹೆಜ್ಜೆಗೂ ನೀವು ಇದನ್ನು ಕಾಣಬಹುದು. ನಾನು ನನ್ನದೇ ಒಂದು ನಿದರ್ಶನ ನೀಡುತ್ತೇನೆ: ನನ್ನ ವಿರುದ್ಧ ಒಂದು ಮೊಕದ್ದಮೆ ನಡೆದಿತ್ತು. ಅದು ಸಾಮಾನ್ಯ ಮೊಕದ್ದಮೆಯಾಗಿರಲಿಲ್ಲ. ಅಲಹಾಬಾದ್ ಉಚ್ಚನ್ಯಾಯಾಲದಲ್ಲಿ ಆ ಮೊಕದ್ದಮೆ ನನ್ನ ಪರವಾಗಿ ಆಯಿತು. ಮೂರು ಸಾವಿರ ಜನ ಏಕಕಾಲಕ್ಕೆ ಬಿಡುಗಡೆಯಾದರು. ಇಡೀ ಜಗತ್ತಿನಲ್ಲೇ ಅದೊಂದು ಅಪೂರ್ವ ಘಟನೆ ಎನಿಸಿತು. ಏಳೆಂಟು ವರ್ಷಗಳ ಹಿಂದಿನ ಮಾತು : ನಾವು ಗೆದ್ದೆವು, ಕಾನೂನು ಕುಸಿದು ಬಿತ್ತು; ಕಾನೂನು ಕುಸಿದು ಬೀಳುತ್ತಲೇ ಮೂರು ಸಾವಿರ ಜನ ಏಕಕಾಲಕ್ಕೆ ಬಿಡುಗಡೆಯಾದರು. ಮತ್ತೆ ಉತ್ತರ ಪ್ರದೇಶ ಸರಕಾರ ಮೇಲ್ಮನವಿ ಸಲ್ಲಿಸಿತು. ಅದರ ಸೂಚನೆ ನನಗೆ ಬಂತು. ಮೊದಲ ಸಲ ಈ ಸೂಚನೆ ನನಗೆ ಬರುತ್ತಲೇ ದಿಲ್ಲಿಯ ಸರ್ವೋಚ್ಚ ನ್ಯಾಯಾಲಯದಲ್ಲಿ ನಾನು ಹಾಜರಾದೆ. ಅಲ್ಲಿ ಗೊತ್ತಾದದ್ದೇನೆಂದರೆ, ಇಷ್ಟು ಬೇಗ ಈ ಮೊಕದ್ದಮೆ ವಿಚಾರಣೆಗೆ ಬರಲಾರದೆನ್ನುವುದು! ಭಾರತವೂ ಆಲಸಿಯಾಗಬಾರದೇಕೆ ಎಂದು ಸುಮ್ಮನಾದೆ. ನಾನೂ ಭಾರತೀಯನೇ. ಅದಕ್ಕಾಗಿ ಸಹಿಸಿಕೊಳ್ಳಬೇಕಾಯಿತು. ಇಲ್ಲದಿದ್ದರೆ ಅಧಿಸೂಚನೆ ನೀಡಿ, ಹಾಜರಾಗಲು ಆಜ್ಞೆ

ಹೊರಡಿಸಿ, ನಂತರ ಮೊಕದ್ದಮೆ ನಡೆಯಲಾರದೆಂದಾಗ ಸಿಟ್ಟು ಬರಬಹುದಿತ್ತು. ಮತ್ತೊಮ್ಮೆ ನನಗೆ ಸೂಚನೆ ಬಂತು. ನಾನು ನ್ಯಾಯಾಲಯದಲ್ಲಿ ಹಾಜರಾದೆ. ಆಗಲೂ ನಾನು ಸಹನೆಯಿಂದಿದ್ದೆ. ನಾನು ದೊಡ್ಡ ಮನುಷ್ಯ ಎಂದು ಹೇಳುತ್ತಿಲ್ಲ. ನಾನು ತುಂಬ ಮೃದು ಸ್ವಭಾವದ, ಒಂದರ್ಥದಲ್ಲಿ ಅಂಜುಬುರುಕನಾದ ಮನುಷ್ಯ. ಎರಡು ಸಲವೇನೊ ಸಹಿಸಿಕೊಂಡೆ. ಮೂರನೇ ಸಲ ಹಠಾತ್ತನೆ ಸೂಚನೆ ಬಂತು. ನ್ಯಾಯಲಯದಲ್ಲಿ ಹಾಜರಾದೆ. ಆಗ ಮೊಕದ್ದಮೆ ನಡೆಯಲಿದೆ ಎಂದು ಗೊತ್ತಾಯಿತು. ಇದೇನು ನಡೆಯುತ್ತಿದೆ ಎಂದು ನನಗೆ ದಿಗ್ಭ್ರಮೆಯಾಯಿತು. ನಾವು ನಾಗರಿಕರು, ಭಾರತದ ಪ್ರಜೆಗಳು. ನಮಗೆ ಮರ್ಯಾದೆಯೇ ಇಲ್ಲವೆಂದು ನಾಯಾಧೀಶರು ಭಾವಿಸಿದ್ದಾರೆಯೆ? ನ್ಯಾಯಾಧೀಶರೆಂದರೆ ತಮಗೆ ಮನ ಬಂದಾಗ ಆರೋಪಿ ತಮ್ಮೆದುರು ಹಾಜರಾಗಬೇಕೆಂದು ಆಜ್ಞೆ ಹೊರಡಿಸಿ, ತಮಗೆ ಮನಸ್ಸಿಲ್ಲದಿದ್ದರೆ ವಾಪಸಾಗೆಂದು ಆಜ್ಞಾಪಿಸಬಹುದೆ? ಏನೇ ಇರಲಿ, ಪ್ರಜೆಗಳಿಗೂ ಮರ್ಯಾದೆ ಎನ್ನುವುದು ಇರಬೇಕು. ನ್ಯಾಯಾಧೀಶರಿಗೆ ಕೈತುಂಬ ಕೆಲಸವಿದೆ ಎನ್ನುವುದಾದರೆ, ಪ್ರಜೆಗೂ ಕೆಲಸವಿದ್ದೇ ಇರುತ್ತದೆ. ನ್ಯಾಯಾಧೀಶರು ತಮಗೆ ಬೇಕಾದಾಗ ವಿಚಾರಣೆ ದಿನ ನಿಗದಿಪಡಿಸುತ್ತಾರೆ; ತಮಗೆ ಬೇಡವೆನಿಸಿದಾಗ ವಿಚಾರಣೆಯನ್ನು ಮುಂದೂಡುತ್ತಾರೆ. ಹೀಗೆ ಬೇಕಾದಾಗ ವಿಚಾರಣೆ ನಡೆಸುವುದು, ಬೇಡವಾದಾಗ ಅದನ್ನು ಮುಂದೂಡುವುದು ತಮ್ಮ ಹಕ್ಕು ಎನ್ನುವ ಭ್ರಮೆಯಲ್ಲಿರುವ ಬ್ಯಾರಿಸ್ಟರು ಹಾಗೂ ನ್ಯಾಯಾಧಿಶರುಗಳಿಂದಾಗಿಯೇ ನಮ್ಮ ದೇಶದಲ್ಲಿ ಕೋಟಿಗಟ್ಟಲೆ ಹಣ ಪೋಲಾಗಿ ಹೋಗುತ್ತಿದೆ. ಅದಿರಲಿ, ನಾನು ಮತ್ತೆ ನ್ಯಾಯಾಲಯದಲ್ಲಿ ಹಾಜರಾದೆ. ಮತ್ತೆ ಇಂಗ್ಲಿಷ್‌ಗೆ ಸಂಬಂಧಪಟ್ಟ ಪ್ರಶ್ನೆ ತಲೆ ಎತ್ತಿತು. ಹಲವಾರು ವಕೀಲರನ್ನು ಭೇಟಿಯಾದೆ. ಸ್ವತಃ ನಾನೇ ನ್ಯಾಯಾಲಯದಲ್ಲಿ ವಾದಮಾಡುವ ಕಾಲವೂ ಬರಲಿದೆ ಎನ್ನುವ ಮಾತು ಕೇಳಿ ಬಂತು. ಕಾರಣ, ಇಂಗ್ಲಿಷಿನಲ್ಲಿ ವಾದಮಾಡುವ ವಕೀಲರು ನನಗೆ ಬೇಡವೆಂದಿದ್ದೆ: ಎಲ್ಲರಿಗೂ ದಿಗ್ಭ್ರಮೆಯಾಯಿತು. ಆಗ ನಾನು, ''ಮಾನ್ಯ ನ್ಯಾಯಾಧೀಶರೇ, ಇದು ನನ್ನ ಮೊಕದ್ದಮೆ. ನೀವು ಎರಡು ಸಲ ಹಾಜರಾಗಲು ಆಜ್ಞೆ ಮಾಡಿದ್ದಿರಿ, ಮೂರನೇ ಸಲವೂ ಆಜ್ಞೆ ಮಾಡಿದಿರಿ, ತಾವು ಮೊಕದ್ದಮೆ ನಡೆಸುವುದಿಲ್ಲವೆ?'' ಎಂದು ಕೇಳಿದೆ. ಮೊದೆಮೊದಲು ಅವರು ಸಜ್ಜನರಂತೆ ಮಾತಾಡಿದರು. ದೊಡ್ಡ ನ್ಯಾಯಾಧೀಶರು; ಅಂದ ಮೇಲೆ ಚೆನ್ನಾಗಿಯೇ ಮಾತನಾಡಿದರು. ''ನಿಮ್ಮ ವಿಚಾರಣೆ ಬಹು ಬೇಗ ಆರಂಭವಾಗಲಿದೆ'' ಎಂದರು. ''ಮಾನ್ಯ ನ್ಯಾಯಾಧೀಶರೇ, ಈಗಾಗಲೇ ನಾನು ಎರಡು ಸಲ ಹಾಜರಾಗಿದ್ದೇನೆ. ಇದು ಮೂರನೇ ಸಲ, ಈಗ ಮತ್ತೊಮ್ಮೆ ಹಾಜರಾಗುವಂತೆ ಆಜ್ಞೆ ಮಾಡುವಿರಿ, ಅಲ್ಲವೆ?'' ಎಂದು ನಾನೆಂದೆ. ಅದೇಕೊ ಅವರಿಗೆ ಸಿಟ್ಟು ಬಂತು. '' ನಾನು ಆಜ್ಞೆ

ಮಾಡಿದರೆ ನೀವು ಇಪ್ಪತ್ತು ಸಲ ಹಾಜರಾಗಬೇಕು'' ಎಂದು ಅವರು ಅರಚಿಕೊಂಡರು. ಆಗ ನನ್ನ ಮನಸ್ಸಿನಲ್ಲಿ ಹೊಳೆದ ವಿಚಾರವನ್ನು ಬಾಯಿಬಿಟ್ಟು ಹೇಳಲಿಲ್ಲ; ಒಳ್ಳೆಯದಾಯಿತು. ಅದಕ್ಕೆ ಬದಲಾಗಿ, ''ಮಾನ್ಯ ನ್ಯಾಯಾಧೀಶರೆ, ಇನ್ನು ನೀವು ಏಕಪಕ್ಷೀಯವಾಗಿ ತೀರ್ಪು ನೀಡಬೇಕಾಗುತ್ತದೆ'' ಎಂದಷ್ಟೇ ಹೇಳಿ ನಾನು ಹೊರಬಂದೆ. ಏನೇ ಆಗಲಿ ನ್ಯಾಯಧೀಶರಾದವರು ನಾಗರಿಕರಿಗೆ ಮರ್ಯಾದೆ ಸಲ್ಲಿಸುವ ಪರಿಪಾಠ ಆರಂಭವಾದಾಗಲೇ ಜನಸಮುದಾಯವು ನ್ಯಾಯಾಧೀಶರಿಗೆ ಮರ್ಯಾದೆ ನೀಡಬಲ್ಲದು; ಇಲ್ಲದಿದ್ದರೆ ನ್ಯಾಯಾಧೀಶರು ಮನ ಬಂದಂತೆ ವರ್ತಿಸುವವರು ಎಂದಂತೆ ಆಗುತ್ತದೆ.

ಇದೇ ರೀತಿಯ ಪ್ರಭು ಈಗ ಪಂಜಾಬಿನಲ್ಲಿದ್ದಾರೆ. ಈ ಪ್ರತಾಪಸಿಂಹ ಖೈರಾನ್ ಒಬ್ಬರೇ ಅಂಥ ಪ್ರಭು ಅಲ್ಲ; ಇತ್ತ ಸಂಜೀವರೆಡ್ಡಿ ಹಾಗೂ ಅವರಂಥ ಇನ್ನಿತರ ಪ್ರಭುಗಳೂ ಒಂದೇ ಗೋಣಿಚೀಲದ ಸರಕುಗಳು. ಕೆಲವರ ಗುಟ್ಟು ರಟ್ಟಾಗಬಹುದು; ಇನ್ನು ಕೆಲವರು ಮರ್ಯಾದೆಗೇಡಿಯಾಗದೇ ಬಚಾವಾಗಬಹುದು– ಇವರ ವಿಷಯವಾಗಿ ನಾನು ಮಾತನಾಡಲಾರಂಭಿಸಿದ್ದು ಕಾನೂನುಬದ್ಧ ಆಡಳಿತ ಹಾಗೂ ನಿರಂಕುಶ ಪ್ರಭುತ್ವದ ನಡುವೆ ವ್ಯತ್ಯಾಸವಿರಬೇಕು, ಎನ್ನುವುದಕ್ಕಾಗಿ. ಹಾಗಾಗಿ ಈ ಮಾತನ್ನು ಇದೀಗ ಮತ್ತೆ ಹೇಳಿದೆ. ಅಲ್ಲೊಬ್ಬರು ಸಿವಿಲ್ ಸರ್ಜನ್ ಸಾಹೇಬರಿದ್ದರು. ಅವರನ್ನು ವರ್ಗಾಯಿಸುವುದಕ್ಕಾಗಿ ಪಂಜಾಬ್ ಮುಖ್ಯಮಂತ್ರಿ ಆಜ್ಞೆ ಹೊರಡಿಸಿದರು. ಆ ಸಿವಿಲ್ ಸರ್ಜನ್ ಸಾಹೇಬರು ಮುಖ್ಯಮಂತ್ರಿ ಹಾಗೂ ಅವರ ಮಡದಿ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಾ ಬಂದಿದ್ದರು. ಒಮ್ಮೆ ಹೊಲಿಗೆ ಯಂತ್ರಗಳನ್ನು ಕಾಣಿಕೆಯಾಗಿ ನೀಡಿ, ಮತ್ತೊಮ್ಮೆ ಔಷಧಿಗಳನ್ನು ಪೂರೈಸಿ, ಇನ್ನೊಮ್ಮೆ ಅವರ ಪೈಕಿಯ ರೋಗಿಗೆ ಪುಕ್ಕಟೆ ಚಿಕಿತ್ಸೆ ನೀಡಿ, ಅವರು ಮುಖ್ಯಮಂತ್ರಿಯ ಕೃಪೆಗೆ ಪಾತ್ರರಾಗಲು ಶತಪ್ರಯತ್ನ ಮಾಡಿದ್ದರು. ಮುಖ್ಯಮಂತ್ರಿಯ ಕಡೆಯ ಮನುಷ್ಯ ಎಂದೊಡನೆ ಆತನನ್ನು ತಮ್ಮ ಅತಿಥಿಯನ್ನಾಗಿ ಮೂರ್ನಾಲ್ಕು ತಿಂಗಳು ತಮ್ಮ ಮನೆಯಲ್ಲೇ ಇರಿಸಿಕೊಂಡು ಆತಿಥ್ಯ ನೀಡುತ್ತಿದ್ದರು. ಮುಂದೆ ಸರ್ಜನ್ ಸಾಹೇಬರು ಈ ವಿಷಯವಾಗಿ ಸ್ವಲ್ಪ ಅಲಕ್ಷ್ಯ ಮಾಡಿದರು. ಮುಖ್ಯಮಂತ್ರಿ ಆಕ್ರೋಶಗೊಂಡರು; ಅಷ್ಟೇ ಅಲ್ಲ, ಅವರ ವಿರುದ್ಧ ಕ್ರಮ ಕೈಗೊಂಡೇಬಿಟ್ಟರು. ಈಗ ಗಮನಿಸಬೇಕಾದ ಅಂಶವೆಂದರೆ, ಒಬ್ಬ ಮಂತ್ರಿ ತಾನು ಮಂತ್ರಿ ಎನ್ನುವ ಕಾರಣಕ್ಕಾಗಿ ಕಾಗದದ ಮೇಲೆ ಗೀಚಿದ್ದೆಲ್ಲ ಆಜ್ಞೆಯಾಗುವಷ್ಟರ ಮಟ್ಟಿಗೆ ಆತ ಅಧಿಕಾರ ಪಡೆಯಬಹುದೆ ಎನ್ನುವುದು. ಅದು ರಾಜ್ಯದ ಆಡಳಿತದಲ್ಲಿ ದಕ್ಷತೆ ಅಥವಾ ಅದಕ್ಷತೆಯನ್ನು ಗಮನಿಸಿ ಹೊರಡಿಸಿದ ಆಜ್ಞೆಯಾಗಿರಲಿಲ್ಲ. ತಮ್ಮ ಮಡದಿ, ಮಕ್ಕಳ ಔಷಧೋಪಚಾರ ಸರಿಯಾಗಿ ಮಾಡಲಿಲ್ಲವೆಂದು ಮುಖ್ಯಮಂತ್ರಿ ಪ್ರತಾಪಸಿಂಹ

ಅಂಥ ಆಜ್ಞೆ ಹೊರಡಿಸಿದ್ದರು. ಅಂದರೆ, ಅದು ನಿರಂಕುಶ ಪ್ರಭುತ್ವ. ಆಜ್ಞೆ ಹಾಗೂ ತೀರ್ಪು ಕಾನೂನುಬದ್ಧವಾಗಿರಬೇಕು. ಎಲ್ಲಿ ನಿರಂಕುಶ ಪ್ರಭುತ್ವವಿರುತ್ತದೋ ಅಲ್ಲಿ ವ್ಯಾಪಾರಿ ಹಾಗೂ ಅಧಿಕಾರಸ್ಥರ ನಡುವೆ ಎಂಥ ಸಂಬಂಧ ಏರ್ಪಡುವುದೆಂದರೆ ಅವರಿಬ್ಬರೂ ಪರಸ್ಪರರಿಗೆ ಸಹಾಯ, ಸಹಕಾರ ನೀಡುವುದರ ಮೂಲಕ ಜನತೆಯ ಸುಲಿಗೆ ಮಾಡಲು ಆರಂಭಿಸುವರು. ಅವರಿಬ್ಬರ ಸಂಬಂಧ ಅಬಾಧಿತವಾಗಿ ಮುಂದುವರೆಯುತ್ತದೆ. ಇಲ್ಲಿಯೂ ಅದೇ ರೀತಿ ನಡೆದಿರಬಹುದು. ನಾನು ಅದನ್ನು ಬಿಚ್ಚಿ ಹೇಳಬೇಕಾಗಿಲ್ಲ.

ಇನ್ನು ಶೇಖ್ ಅಬ್ದುಲ್ಲಾರೊಂದಿಗೆ ಕಾಯ್ದೆ, ಕಾನೂನಿನ ಪ್ರಕಾರ ವ್ಯವಹರಿಸಲಾಯಿತೆ ? ಅಥವಾ ಕಾನೂನನ್ನು ಬದಿಗೊತ್ತಿ ಅವರನ್ನು ಮನ ಬಂದಂತೆ ನಡೆಸಿಕೊಳ್ಳಲಾಯಿತೇ ಎಂಬುದನ್ನು ನೋಡೋಣ: ಶೇಖ್ ಅವರನ್ನು ಮನಬಂದಂತೆ ನಡೆಸಿಕೊಂಡಿರುವರೆಂಬುದರಲ್ಲಿ ಸಂದೇಹವಿಲ್ಲ. ಆ ಮನುಷ್ಯ ಒಳ್ಳೆಯವನೊ? ಕೆಟ್ಟವನೊ? ಅಥವಾ ದೇಶಭಕ್ತನೊ? ದೇಶದ್ರೋಹಿಯೊ? ಎಂಬ ಜಿಜ್ಞಾಸೆ ನನಗೆ ಮುಖ್ಯವಲ್ಲ. ಕಳ್ಳ, ಡಕಾಯಿತ ಹಾಗೂ ದೇಶದ್ರೋಹಿಗೂ ಕಾನೂನಿನ ಅಭಯ ಲಭ್ಯವಾಗಬೇಕು. ಅಂಥವರ ಮೇಲೆ ಅತ್ಯಾಚಾರ ನಡೆಯಕೂಡದು. ನಿಮ್ಮ ಅವಗಾಹನೆಗೆ ತರಬೇಕಾದ ಇನ್ನೊಂದು ಮಾತಿದೆ: ಪೊಲೀಸರು ಕಳ್ಳನೊಂದಿಗೆ ಮನಬಂದಂತೆ ವರ್ತಿಸುವುದನ್ನು ಕಂಡರೆ ನೀವು ವಿರೋಧಿಸಬೇಕು. ನೋಡಿ, ನೀವು ಹೆದರಬೇಕಾಗಿಲ್ಲ; ಹೆದರುತ್ತಾ ಹೋದರೆ ಪೊಲೀಸರಿಗೆ ಅದೇ ಅಭ್ಯಾಸವಾಗುತ್ತದೆ. ಇಂದು ಪೊಲೀಸರು ಕಳ್ಳನೊಂದಿಗೆ ಹೇಗೆ ವರ್ತಿಸುವರೋ ಅದೇ ರೀತಿ ಅವರು ನಾಳೆ ಸಾಹುಕಾರರೊಂದಿಗೂ ವರ್ತಿಸುವ ಸಾಧ್ಯತೆ ಇದೆ. ಅದಕ್ಕೇ ಕಾನೂನುಬದ್ಧ ಆಡಳಿತ ಬೇಕೆನ್ನುವುದು. ಭಾರತದಲ್ಲಿ ಬೇಡಿ ತೊಡಿಸಿ, ಕೈದಿಗಳನ್ನು ಎಳೆದೊಯ್ಯುವುದನ್ನು ನೋಡಿ ನನಗೆ ಕೆಡುಕೆನಿಸುತ್ತದೆ. ಸಜ್ಜನರು ಬೇಡಿಗಳನ್ನು ಅಡಗಿಸಬಯಸುತ್ತಾರೆ. ಬೇಡಿ ತೊಡಿಸುವುದು ಅನಿವಾರ್ಯವಾದರೆ, ಅದು ಕಾಣದಂತೆ ಕೈದಿಯನ್ನು ಕರೆದೊಯ್ಯಬೇಕು. ಬೇಡಿ ತೊಡಿಸುವುದಷ್ಟೇ ಅಲ್ಲ, ಟೊಂಕಕ್ಕೆ ಹಗ್ಗ ಕಟ್ಟಿ ಎಳೆಯುತ್ತಾ ರಸ್ತೆಯಲ್ಲೇ ಕೈದಿಯನ್ನು ಥಳಿಸುತ್ತಾರೆ. ಎಲ್ಲೆಲ್ಲಿ ಹೋಗಿ ಯಾವ ಯಾವ ಕೃತ್ಯಗಳನ್ನು ನಾನು ವಿರೋಧಿಸುತ್ತಾ ಹೋಗಲಿ? ಹಾಗೆಲ್ಲ ನಾನು ವಿರೋಧಿಸ ತೊಡಗುತ್ತಲೇ, ಇವನು ಎಲ್ಲರೊಂದಿಗೂ ಜಗಳವಾಡುತ್ತಾನಲ್ಲ ಎಂದು ಜನ ಭಾವಿಸುತ್ತಾರೆ. ನಿಮ್ಮ ಮಧ್ಯೆ ಇರುವ ಯುವಕರನ್ನು ಉದ್ದೇಶಿಸಿ ಹೇಳಬಯಸುವುದಿಷ್ಟೇ: ನಾನು ನಿಮ್ಮ ವಯಸ್ಸಿನವನಿದ್ದಾಗ, ರಸ್ತೆಯಲ್ಲಿ ಯಾರಿಗಾದರೂ ಕಪಾಳಮೋಕ್ಷವಾಗುವುದನ್ನು ಕಂಡರೆ ನನಗೆ ಕೆಡುಕೆನಿಸುತ್ತಿತ್ತು ಹೀಗೆ, ಕೆನ್ನೆಗೆ

ಬಾರಿಸುವವನನ್ನು ತಡೆಯುವುದು ನನ್ನ ಕರ್ತವ್ಯ ಎಂದು ಭಾವಿಸುತ್ತಿದ್ದೆ. ಬೀದಿ ಹಾಗೂ ನಗರದಲ್ಲಿನ ನಮ್ಮ ವರ್ತನೆ ಒಮ್ಮೆ ಕೆಟ್ಟಿತೆಂದರೆ, ಆ ದುರ್ವರ್ತನೆ ಬಹುದೂರದವರೆಗೆ ಪ್ರಭಾವ ಬೀರಬಲ್ಲದು.

ಅದಿರಲಿ, ಖಾನ್ ಅಬ್ದುಲ್ ಗಫಾರ್ ಖಾನ್ ಅವರನ್ನು ಬಿಡುಗಡೆ ಮಾಡಿರೆಂದು ಕೇಳುವ ಹಕ್ಕು ನನಗಿರಬೇಕೆಂದು ನಾನು ಬಯಸುತ್ತೇನೆ : ನನಗೆ ಈ ಹಕ್ಕು ಲಭ್ಯವಾಗಬೇಕಾದರೆ ಭಾರತದ ಜೈಲಿನಲ್ಲಿರುವ ಶೇಖ್ ಅಬ್ದುಲ್ಲಾರನ್ನು ಬಿಡುಗಡೆ ಮಾಡಿರೆಂದು ಕೇಳುವ ಹಕ್ಕು ಮೊದಲು ನನಗಿರಬೇಕು. ಇಲ್ಲಿ ಬಾಯಿಗೆ ಬೀಗ ಜಡಿದುಕೊಳ್ಳುವುದು, ಅಲ್ಲಿ ದೊಡ್ಡದನಿಯಲ್ಲಿ ಬೇಡಿಕೆಯೊಂದನ್ನು ಮುಂದಿಡ ಬೇಕೆನ್ನುವುದು ಸಾಧ್ಯವಿಲ್ಲ. ನನ್ನ ಧ್ವನಿ ಪಾಕಿಸ್ತಾನದಲ್ಲೂ ಕೇಳಿ ಬಂದೀತು. ಎಲ್ಲಿಯ ತನಕ ಜನರನ್ನು ಹತ್ತಿಕ್ಕುವುದು? ಒಂದಿಲ್ಲೊಂದು ದಿನ, ಈತನೂ ಮನುಷ್ಯನೇ, ಈತ ನಿಜವಾದ ಮನುಷ್ಯನಂತೆ ಕಾಣುತ್ತಾನೆ, ಈತ ನ್ಯಾಯ ಬಯಸುವ ಮನುಷ್ಯ –ಎಂದು ಜನರಿಗೆ ಮನವರಿಕೆಯಾಗುತ್ತದೆ. ಮನುಷ್ಯ ಎಲ್ಲಿಯೇ ಇರಲಿ, ನ್ಯಾಯಕ್ಕಾಗಿ ಎದೆ ಸೆಟೆಸಿ ನಿಲ್ಲಬೇಕು.

ಖಾನ್ ಅಬ್ದುಲ್ ಗಫಾರ್ ಖಾನ್ ಹಾಗೂ ಶೇಖ್ ಅಬ್ದುಲ್ಲಾರನ್ನು ನಾನು ಒಂದೇ ಸ್ಥಾನದಲ್ಲಿ ಖಂಡಿತಾ ಇಡಬಯಸುವುದಿಲ್ಲ. ಜನ ನನ್ನನ್ನು ತಪ್ಪಾಗಿ ಕೂಡಲೇ ತಿಳಿದುಕೊಳ್ಳಬಹುದು. ಖಾನ್ ಬಹಳ ದೊಡ್ಡ ಮನುಷ್ಯ; ಆತನೊಂದಿಗೆ ಶೇಖ್‌ರ ಹೋಲಿಕೆಯೇ ಸಲ್ಲದು. ಇಲ್ಲಿ ಸಣ್ಣವನು ಅಥವಾ ದೊಡ್ಡವನು ಎನ್ನುವುದು ಮುಖ್ಯವಲ್ಲ. ಇಲ್ಲಿ ಕೇವಲ ಶಾಂತಿ ಕುರಿತ ಕಾಯ್ದೆ ಕಾನೂನಿನ ಪ್ರಶ್ನೆ ಅಡಗಿದೆ. ಮನುಷ್ಯ ಸಣ್ಣವನಿರಬಹುದು; ಇಲ್ಲಾ ದೊಡ್ಡವನಿರಬಹುದು. ಎಲ್ಲರ ಜೊತೆಗೂ ಕಾನೂನು ಕಟ್ಟಳೆಯ ಪ್ರಕಾರವೇ ವ್ಯವಹರಿಸಬೇಕು. ನನಗೆ ನೆನಪಿರುವಂತೆ ಶೇಖ್ ಅಬ್ದುಲ್ಲಾ ಎಂದೂ ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಸೇರಿಸಬೇಕೆಂದು ಹೇಳಿಲ್ಲ. ಹೌದು, ಒಮ್ಮೆ ಅವರು ಒಂದು ಬೇಡಿಕೆಯನ್ನು ಮುಂದಿಟ್ಟಿದ್ದರು. ನನ್ನ ಅಭಿಪ್ರಾಯದಲ್ಲಿ ಅವರು ಆ ಬೇಡಿಕೆಯನ್ನು ಮಂಡಿಸಿದ ರೀತಿ ತಪ್ಪಾಗಿತ್ತು. ಅವರು ಕಾಶ್ಮೀರವನ್ನು ಸ್ವತಂತ್ರಗೊಳಿಸಬೇಕು ಎಂದಿದ್ದರು. ಕಾಶ್ಮೀರವನ್ನು ಭಾರತ ಹಾಗೂ ಪಾಕಿಸ್ತಾನದಿಂದ ಬೇರ್ಪಡಿಸಿ ಒಂದು ರಾಷ್ಟ್ರವಾಗಿಸಬೇಕು ಎಂಬುದು ಅವರ ಬೇಡಿಕೆಯಾಗಿತ್ತು. ಇಲ್ಲಿ ನಿಮಗೊಂದು ವಿಷಯ ತಿಳಿಸಲಿದ್ದೇನೆ. ಅದಕ್ಕೆ ಈಗ ಸಾಕ್ಷ್ಯಾಧಾರಗಳು ಉಳಿದಿರಲಿಕ್ಕಿಲ್ಲ. ಆದಾಗ್ಯೂ ಅದು ಅಪ್ಪಟ ಸತ್ಯ. ಎಷ್ಟೋ ಜನ ಆ ಕುರಿತು ಮಾತಾಡಿದ್ದನ್ನೂ ಕೇಳಿದ್ದೇನೆ. ಶೇಖ್ ಅಬ್ದುಲ್ಲಾ ಕೂಡ ಆ

ಮಾತನ್ನಾಡಲು ಈಗ ಹೆದರಬಹುದು. ನನಗೇನು ಹೆದರಿಕೆ? ಸ್ವತಂತ್ರ ಕಾಶ್ಮೀರದ ಮಾತನ್ನು ಶೇಖ್ ಅಬ್ದುಲ್ಲಾ ಎತ್ತಿದಾಗ, ಕಾಶ್ಮೀರದ ಜನತೆಗೆ ಪ್ರಧಾನಿಯಿಂದಲೇ ಸ್ವಲ್ಪ ಕುಮ್ಮಕ್ಕು ಸಿಕ್ಕಿತ್ತು- ಈತ ಮಹಾ ಸಂಚುಗಾರ, ಇನ್ನೊಬ್ಬರನ್ನು ಬಲೆಗೆ ಸಿಲುಕಿಸಿ ತಾನು ಹೊರಗೇ ಉಳಿಯುವವನು- ಇರಲಿ, ಈಗ ಶೇಖ್‌ರಂಥವರು ಈ ಮಾತನ್ನು ಆಡಿದರೆ ಅವರು ಶಿಕ್ಷೆ ಅನುಭವಿಸಬೇಕಾಗುತ್ತದೆ. ಕಾರಣವಿಷ್ಟೇ : ಈಗ ಕಾನೂನು ಬದಲಾಗಿದೆ.

ಇನ್ನೂ ಒಂದು ಗುಟ್ಟಿನ ಮಾತನ್ನು ಹೇಳಲಿದ್ದೇನೆ; ಇದು ನಿಜಕ್ಕೂ ತಲೆ ತಗ್ಗಿಸುವ ವಿಚಾರ. ಇದೀಗ ಒಬ್ಬ ವ್ಯಕ್ತಿ ಬಂದಿದ್ದ. ಆತ ಯಾರೆಂಬುದನ್ನು ಕೇಳಬೇಡಿ. ಆತ ಶೇಖ್ ಕುರಿತು ನನ್ನೊಂದಿಗೆ ಒಂದಿಷ್ಟು ಮಾತಾಡಿದ. ಅವನಿಗೆ ಬುದ್ಧಿ ಹೇಳಬೇಕೆನಿಸಿದ್ದರಿಂದ ಸ್ಪಷ್ಟವಾದ ಮಾತಿನಲ್ಲೇ ಅವನಿಗೆ ತಿಳುವಳಿಕೆ ಹೇಳಿದೆ. ಶೇಖ್ ಒಬ್ಬ ವ್ಯಕ್ತಿಗೆ ತನ್ನ ಪ್ರಸಕ್ತ ನಿಲುವನ್ನು ತಿಳಿಸಿದ್ದಾರೆ ಎನ್ನುವ ಮಾತು ನನಗೆ ಹಿತವೆನಿಸಿತು. ಅದೇನೂ ಅಷ್ಟು ಒಳ್ಳೆಯದಾಗಿರಲಿಲ್ಲ, ನಿಜ. ಆದರೆ ಕೆಟ್ಟದಾಗಿಯೂ ಇರಲಿಲ್ಲ. ಅದರ ಕೆಲವು ಅಂಶಗಳನ್ನು ಈಗ ಪುನರುಚ್ಚರಿಸ ಬಯಸುತ್ತೇನೆ:

''ಕಾಶ್ಮೀರದ ಜನತೆಯನ್ನು ಒಳಗೊಂಡಂತೆ, ಭಾರತದ ಜನತೆಗೆ ಯಾವುದೇ ರೀತಿಯ ನಷ್ಟ ಉಂಟು ಮಾಡಬಹುದಾದ ಯಾವುದೇ ಕೆಲಸ ನಾನು ಮಾಡಲಾರೆ'' ಎಂದು ಶೇಖ್ ಹೇಳಿದ್ದು. ಇದು ಸಣ್ಣ ಮಾತಾದರೂ ಒಂದರ್ಥದಲ್ಲಿ ಬಹಳ ದೊಡ್ಡ ಮಾತು. ಇದು ಶೇಖ್ ಆಡಿದ ಮಾತೆಂದು ನನಗೆ ತಿಳಿಸಲಾಯಿತು. ಸೋಜಿಗದ ವಿಷಯವೆಂದರೆ, ಶೇಖ್ ಅಬ್ದುಲ್ಲಾರ ಬಿಡುಗಡೆಗಾಗಿ ಸಹಿ ಸಂಗ್ರಹ ಮಾಡಲಾರಂಭಿಸಿದ ಜನ ನನ್ನ ಬಳಿ ಬಂದಾಗ ನಾನಂದೆ : ''ಏನು, ಈಗ ಪ್ರಧಾನಿಯು ಶೇಖ್ ಅಬ್ದುಲ್ಲಾರ ಬಿಡುಗಡೆಗಾಗಿಯೂ ಆಂದೋಳನ ಆರಂಭಿಸಿದರೆ?'' ಎಲ್ಲಿ ಏನು ನಡೆಯುತ್ತದೆ ಎನ್ನುವುದು ನನಗೂ ಗೊತ್ತಿದೆ. ಏನೇ ಆಗಲಿ, ಸೂಕ್ತ ಸಂಗತಿ ಇದ್ದರೆ ಸಹಿ ಮಾಡುವೆನೆಂದೆ. ಇದು ಒಳ್ಳೆಯ ವಿಚಾರವೆಂದು ನನಗೆ ಅನಿಸಿತು. ಅದಕ್ಕಾಗಿ ಎಲ್ಲಿಂದ ಸೂಚನೆ ಬಂದಿದ್ದರೂ ಸಹಿ ಮಾಡಬೇಕೆನಿಸಿತು. ಶೇಖ್ ನನಗೆ ಬಹು ದಿನಗಳಿಂದ ಪರಿಚಿತರು. ನಾವು ತಕ್ಕ ಮಟ್ಟಿಗೆ ಪರಸ್ಪರರನ್ನು ಅರ್ಥಮಾಡಿಕೊಂಡಿದ್ದೇವೆ; ಒಮ್ಮೊಮ್ಮೆ ತಪ್ಪಾಗಿ ಸಹ ಅರ್ಥಮಾಡಿ ಕೊಂಡದ್ದುಂಟು. ಕಾರಣ, ೧೯೪೬-೪೭ರಲ್ಲಿ ಅವರು ನನ್ನನ್ನು ಎರ್ರಾಬಿರ್ರಿ ಟೀಕಿಸಿದ್ದಾಗ, ಯಾವುದೇ ವ್ಯಕ್ತಿಯ ನಿಜವಾದ ನಿಲುವನ್ನು ತಿಳಿದುಕೊಂಡು ಮಾತನಾಡಿರೆಂದು ನಾನು ಶೇಖ್ ಅವರಿಗೆ ಅಂದಂತೆ ನೆನಪು. ಅದೇನೇ ಇರಲಿ, ಶೇಖ್ ಅವರಿಗೆ ಈ ಕೆಲ ಮಾತುಗಳನ್ನು

ತಿಳಿಸಬೇಕೆಂದು ಆ ಗೆಳೆಯರನ್ನು ಕೇಳಿಕೊಂಡೆ: "ಒಂದು ದೀರ್ಘ ಕಾಲಾವಧಿ ಕಳೆದಿದೆ. ನಿಮ್ಮ ಆಯುಷ್ಯದ ಹಲವಾರು ವರ್ಷಗಳು ಕಳೆದಂತೆ, ನನ್ನ ಜೀವಮಾನದ ಹಲವಾರು ವರ್ಷಗಳೂ ಕಳೆದಿವೆ. ನೀವು ನಿಮ್ಮ ಗೆಳೆಯನ ಅನುಯಾಯಿಯಾಗಿ ಉನ್ನತ ಹುದ್ದೆಯಲ್ಲಿದ್ದು ಜನತೆಯ ಕಲ್ಯಾಣಕ್ಕಾಗಿ ಸಾಕಷ್ಟು ಶ್ರಮಿಸಿದ್ದೀರಿ. ಅದರ ಪ್ರತಿಫಲ ನಿಮಗೆ ಸಿಕ್ಕಿದೆ. ಇನ್ನೊಮ್ಮೆ ಅಧಿಕಾರದ ಗದ್ದುಗೆಯನ್ನೇರಬೇಕೆನ್ನುವ ಆಸೆಯನ್ನು ಕೈಬಿಡುವುದಾಗಿ ಸಂಕಲ್ಪ ಮಾಡಿ. ಜೊತೆಗೆ ಇನ್ನೊಂದು ಪ್ರತಿಜ್ಞೆ ಕೂಡ ನಾವು ಮಾಡಬೇಕು: ನಾವು ಭಾರತದ ಹಿಂದೂ ಮತ್ತು ಮುಸಲ್ಮಾನರ ಮನಸ್ಸುಗಳನ್ನು ಬೆಸೆಯುವ ಉದ್ದೇಶಕ್ಕಾಗಿ ಅಧಿಕಾರದ ಗದ್ದುಗೆಯಿಂದ ದೂರ ಉಳಿದು ಪ್ರಯತ್ನಿಸೋಣ. ತನ್ಮೂಲಕ ಸಾಧ್ಯವಾದರೆ ಭಾರತ-ಪಾಕಿಸ್ತಾನ ಒಕ್ಕೂಟಕ್ಕಾಗಿ ದುಡಿಯೋಣ". ಈ ನನ್ನ ಮಾತುಗಳು ಅವರನ್ನು ತಲುಪಿದವೊ? ಇಲ್ಲವೊ? ಗೊತ್ತಿಲ್ಲ.

ಹೌದು, ಈ ಇಡೀ ಪ್ರಸಂಗಕ್ಕೆ ಸಂಬಂಧಿಸಿದಂತೆ ನಾನೊಂದು ಮಾತು ಹೇಳಬೇಕಾಗಿದೆ: ಲೋಕಸಭೆಯಲ್ಲಿ ಭಾರತ-ಪಾಕಿಸ್ತಾನ ಒಕ್ಕೂಟವನ್ನು ಕುರಿತು ಯೋಚಿಸಬೇಕೆಂದು ನಾನೆಂದಾಗ ಕೆಲವರು ಕಕ್ಕಾಬಿಕ್ಕಿಯಾದರು. ಮತ್ತೆ ಕೆಲವರು ನಡುವೆಯೇ ನನ್ನ ಮಾತಿಗೆ ಅಡ್ಡಿಪಡಿಸಿದರು. ಒಬ್ಬನಂತೂ ಸೆಟೆದು ನಿಂತು, "ಇವರು ದೊಡ್ಡ ಮುಖಂಡರು, ಸಾಮಾನ್ಯ ಮುಂದಾಳು ಅಲ್ಲ. ಇಂಥವರ ಬಾಯಿಂದ ಇಂಥ ಮಾತುಗಳು ಬಂದಾಗ, ಭಾರತ-ಪಾಕಿಸ್ತಾನ ಒಕ್ಕೂಟವನ್ನು ಹೇಗೆ ರೂಪಿಸಲಿದ್ದಾರೆಂದು ಕೇಳುವುದು ನಮ್ಮ ಹಕ್ಕು" ಎಂದು ಅವ್ಯಾಹತವಾಗಿ ಮಾತನಾಡಿದ. ಹೀಗೆ ಆತ ಎತ್ತಿದ ಪ್ರಶ್ನೆಗೆ ಉತ್ತರಿಸಬೇಕೆನ್ನುವಷ್ಟರಲ್ಲಿ ಅಧ್ಯಕ್ಷರು ಮಧ್ಯೆ ಪ್ರವೇಶಿಸಿದರು. ಈಗಾಗಲೇ ನಾನು ತುಂಬ ಸಮಯದವರೆಗೆ ಮಾತಾಡಿದ್ದು ಇದೊಂದು ಸುದೀರ್ಘ ಭಾಷಣವಾದೀತೆಂದು ಅವರು ಆಕ್ಷೇಪವೆತ್ತಿದರು. ನನಗೆ ಮಾತನಾಡುವುದಕ್ಕೆ ಅವಕಾಶ ನೀಡುವುದಿಲ್ಲವೆಂದರು. ವಿವರವಾಗಿ ಮಾತನಾಡುವುದು ನನಗೂ ಸಾಧ್ಯವಾಗಲಾರದೆನಿಸಿತು. ಆದರೂ ನಾನಿಷ್ಟು ಹೇಳಿಯೇ ಬಿಟ್ಟೆ: "ನಿಮಗೆ ನನ್ನ ಬೇರೆ ಯಾವ ಮಾತೂ ಅರ್ಥವಾಗದಿದ್ದರೆ ಹೋಗಲಿ, ಕನಿಷ್ಠ ಪಕ್ಷ ಕನಸು ಕಾಣೋಣ, ಭಾರತ-ಪಾಕಿಸ್ತಾನ ಒಕ್ಕೂಟದ ಉತ್ತಮ ಕನಸು ಕಾಣೋಣ ಎನ್ನುವ ನನ್ನ ಮಾತನ್ನಾದರೂ ದಯವಿಟ್ಟು ಅರ್ಥಮಾಡಿಕೊಳ್ಳಿ."

ಕನಸು, ಕನಸು... ಯಾವ ಕನಸು ಕಾಣುವುದೋ ಎಂದು ಗೊಣಗಾಟ ಶುರುವಾಯಿತು. ಹೌದು, ಕಾಂಗ್ರೆಸ್ಸಿಗರು ಈಗ ಕನಸು ಕಾಣುವುದನ್ನೇ ಮರೆತಿದ್ದಾರೆ ಎಂದು ನಾನಂದೆ. ಮೊದಲು ಇವರು ಕನಸು ಕಾಣುತ್ತಿದ್ದರು. ಈಗ ಸಿಂಹಾಸನಾ

ರೂಢರಾಗಿರುವ ಈ ವ್ಯಕ್ತಿಗಳನ್ನು ದೈನಂದಿನ ಸಮಸ್ಯೆಗಳೇ ಮುತ್ತಿ ಕಾಡುತ್ತಿರುವಾಗ ಇವರೆಲ್ಲ ಕನಸು ಕಾಣುವುದಾದರೂ ಹೇಗೆ? ಅವರು ಕನಸು ಕಾಣುತ್ತಿದ್ದಂತೆಯೇ ಇಂಗ್ಲೀಷರ ಆಡಳಿತ ಕೊನೆಗೊಂಡಿತು. ಯಾರೋ ಕೆಟ್ಟ ಕನಸು ಕಾಣುತ್ತಿದ್ದಂತೆ ದೇಶ ವಿಭಜನೆ ಆಯಿತು. ಒಳ್ಳೆಯ ಕನಸು ಕಾಣಲಾರಂಭಿಸಿದರೆ ಮಾತ್ರ ಮನಸ್ಸುಗಳನ್ನು ಬೆಸೆಯುವ ವಿಚಾರ ಹುಟ್ಟುವುದು. ಕನಸು ಕಾಣುವುದೆಂದರೆ, ಮನುಷ್ಯನಿಗೆ ನಿದ್ರೆ ಬಂದೊಡನೆ ಕನಸು ಕಾಣುತ್ತಾನೆ ಎಂದಲ್ಲ. ಆತ ಕುಳಿತಲ್ಲೇ ಕನಸು ಕಾಣಬಲ್ಲ. ಅದರಲ್ಲೂ ಯುವಕರು ಅವೆಷ್ಟೋ ಕನಸುಗಳನ್ನು ಕಾಣುತ್ತಾರೆ. ನೀವು ಕೂಡ ಎಷ್ಟೋ ಕನಸು ಕಾಣಬಲ್ಲಿರಿ. ಜೊತೆಗೆ ಭಾರತ-ಪಾಕಿಸ್ತಾನ ಒಕ್ಕೂಟದ ಕನಸನ್ನೂ ಕಾಣಬಾರದೆ? ಇನ್ನು ನಮ್ಮ ಪ್ರಧಾನಿ ಮಹಾಶಯರು ಆ ಪ್ರಶ್ನೆಗೆ ಉತ್ತರ ಕೊಡಬೇಕಿತ್ತು. ಅವರು ಎಂದಾದರೂ ಯಾವುದಾದರೂ ಪ್ರಶ್ನೆಗೆ ಸೂಕ್ತ ಉತ್ತರ ಕೊಟ್ಟಿದ್ದಾರೆಯೇ? ವಿದೇಶ ನೀತಿಯಲ್ಲಿ ಚಿಂತನೆ ಇಲ್ಲ, ಸಿದ್ಧಾಂತವಿಲ್ಲ, ಕನಸಿಲ್ಲ ಎಂದು ನನ್ನ ಭಾಷಣದಲ್ಲಿ ಟಿಪ್ಪಣಿ ಮಾಡಿದ್ದೆ. ನಾನು ಈ ಮೂರಕ್ಕೂ ಉದಾಹರಣೆ ಕೊಟ್ಟಿದ್ದೆ. ಕನಸಿಲ್ಲ ಎನ್ನುವುದಕ್ಕೊಂದು ನಿದರ್ಶನ : ಭಾರತ-ಪಾಕಿಸ್ತಾನ ಒಕ್ಕೂಟದ ಕನಸನ್ನೆಂದೂ ಕಾಣಲಿಲ್ಲ ಎನ್ನುವುದು. ಚಿಂತನೆ ಇಲ್ಲ : ಕಾರಣ? ನಾವೆಂದೂ ಸ್ವಂತ ವ್ಯಕ್ತಿತ್ವವುಳ್ಳವರಾಗಿ, ಸ್ವತಂತ್ರವಾಗಿ ಆಲೋಚನೆ ಮಾಡಿ, ಜಗತ್ತಿಗೆ ಯಾವ ಮಾರ್ಗೋಪಾಯವನ್ನೂ ಸೂಚಿಸಿಲ್ಲ. ಈ ನಡುವೆ ಕೂಡ, ಒಮ್ಮೆ ನಾವೊಂದು ಮಾರ್ಗೋಪಾಯ ಸೂಚಿಸಿದ್ದೆವು: ರಷ್ಯಾ ಹಾಗೂ ಅಮೇರಿಕಾದ ಕ್ರುಶ್ಚೆವ್ ಹಾಗೂ ಕೆನೆಡಿ ಸೇರಿ ಶೃಂಗಸಮ್ಮೇಳನ ಏರ್ಪಡಿಸಲಿ ಎನ್ನುವುದೇ ಆ ಸಲಹೆ: ಈಗ ತಯಾರಿಸಲಾದ ಬಾಂಬುಗಳನ್ನು ನಾಶಪಡಿಸುವುದೇ ಅದರ ಉದ್ದೇಶ. ವಿಹ್ವಲತೆಯನ್ನು ಕೊನೆಗಾಣಿಸಲು, ಅಣುಬಾಂಬನ್ನು ನಾಶಮಾಡಲು ಕ್ರುಶ್ಚೆವ್ ಹಾಗೂ ಕೆನೆಡಿ ಮಹಾಶಯರು ಸಭೆ ಮಾಡಬೇಕು..... ಆಗ ನಾನಂದೆ: ಈ ಕ್ರುಶ್ಚೆವ್ ಹಾಗೂ ಕೆನೆಡಿ ಶ್ರೀಮಂತ ರಾಷ್ಟ್ರಗಳ ಪ್ರತಿನಿಧಿಗಳಾಗಿದ್ದು, ಜಗತ್ತಿನ ದಾರಿದ್ರ್ಯ ನಿರ್ಮೂಲನದ ಬಗ್ಗೆ ಸಭೆ ಮಾಡಬಾರದೆ? ಭಾರತದ ವಿದೇಶ ನೀತಿಯಲ್ಲಿ ಚಿಂತನೆ ಇದ್ದಿದ್ದರೆ, ಜಗತ್ತಿನ ದಾರಿದ್ರ್ಯವನ್ನು ಕುರಿತು ಚರ್ಚೆ ಮಾಡಲು ಇವರಿಬ್ಬರ ಭೇಟಿ ಏರ್ಪಡಿಸಬಹುದಿತ್ತು. ನಮ್ಮಲ್ಲಿ ಯಾವುದೇ ಸಿದ್ಧಾಂತವಿಲ್ಲ. ನಾವು ಯಾವ ವಿಷಯದ ಬಗ್ಗೆಯೇ ಆಗಲಿ ನಿರಂತರ ಚಿಂತನೆ ಮಾಡಿದವರಲ್ಲ ಎನ್ನುವ ವಿವರಗಳನ್ನು ನೀಡಿದೆ. ಯಾರಾದರೂ ಅಸಂತುಷ್ಟರಾದಾರೆನ್ನುವ ಅಳುಕಿನಿಂದಲೇ ಭಾರತ ಸರಕಾರ ದೊಡ್ಡವರು ಸಣ್ಣವರೆನ್ನದೆ ನಿರ್ಲಿಪ್ತವಾಗಿ ಉಳಿದುಬಿಟ್ಟಿತು: ಇದರ ಫಲವಾಗಿ ಇಂದು ಎಲ್ಲರೂ ಸಮಸ್ಯೆಗಳನ್ನೆದುರಿಸುವಂತಾಗಿದೆ. ದುರ್ಬಲರ ಬಗ್ಗೆ ಕಾಳಜಿಯೇ ಇಲ್ಲ. ಬರ್ಮಾ ಹೇಗೆ ಚಿಂತಿಸುತ್ತದೆ? ನೇಪಾಳ ಹೇಗೆ ಚಿಂತಿಸುತ್ತಿದೆ

ಹಾಗೂ ಪಾಕಿಸ್ತಾನದ ಚಿಂತನೆಯ ದಿಕ್ಕು ಎತ್ತ ಸಾಗಿದೆ? ಎನ್ನುವುದರ ಪರಿವೆಯೇ ನಮಗೆ ಇಲ್ಲವಾಗಿದೆ.

ಅನಂತರ ಪ್ರಧಾನಿ, "ನಾನೇನು ಯಾರಿಗೂ ಹೆದರುವುದಿಲ್ಲ," ಎಂದು ಉತ್ತರಿಸಿದರು. ಹೆದರುವ ಮಗುವು "ನಾನೇನೂ ಹೆದರುವವನಲ್ಲ, ನಾನೆಂದೂ ಹೆದರಿಲ್ಲ," ಎನ್ನುವಂತೆಯೇ ಪ್ರಧಾನಿ ಉತ್ತರಿಸಿದರು. ಇವರಿಗೆ ಮಾರುತ್ತರ ಕೊಡಬೇಕೆನ್ನಿಸಿತು. ಈ ಮುದುಕನನ್ನೇಕೆ ಗೋಳುಹುಯ್ದುಕೊಳ್ಳುವುದು ಎಂದು ನಾನು ಸುಮ್ಮನಾದೆ. ಅವರ ಉತ್ತರವಿಷ್ಟೇ: ನಾನೇನೂ ಹೆದರುವುದಿಲ್ಲ. ಸಣ್ಣವರಿಗೆ ಹೆದರುವುದಿಲ್ಲವೆಂದರೆ ಸರಿಯೇ. ಆದರೆ, ತಮ್ಮ ಕುಟುಂಬದ ಬಂಡುಕೋರ ಮಕ್ಕಳ ಮೇಲೆ ಹಾಗೂ ಭಾರತ ಮಾತೆಯ ನಾಗಾ ಜನಸಮುದಾಯದ ಮೇಲೆ ವಿಮಾನ ಮೂಲಕ ಬಾಂಬ್ ದಾಳಿ ನಡೆದಿದೆ; ಗೋವೆಯ ಪುಟ್ಟ ಪೋರ್ಚುಗಲ್ ಮೇಲೆ ಬಾಂಬ್‌ದಾಳಿ ನಡೆಯಿತು. ಅದೇ ಬಲಿಷ್ಠ ರಾಷ್ಟ್ರವೊಂದರ ಸೈನ್ಯ ದೇಶದೊಳಗೆ ನುಗ್ಗುವಾಗ ಅದರ ಮೇಲೆ ವಿಮಾನದ ಮೂಲಕ ನಾವು ಬಾಂಬ್ ಎಸೆಯುವುದಿಲ್ಲ: ತಮಗಿಂತ ಬಲಶಾಲಿಯಾದವರನ್ನು ಕಂಡರೆ ಹೆದರುವುದು ನೆಹರೂ ಅವರ ಜಾಯಮಾನ. ಇಂಥ ಮನುಷ್ಯ ಒಳ್ಳೆಯವನಾಗಲಾರ ಎನ್ನುವ ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬೇಕು; ತನಗಿಂತ ದೊಡ್ಡವರೊಂದಿಗೆ ಮಾತುಕತೆಗಾಗಿ ಕಾತುರತೆ ತೋರುವುದಕ್ಕಿಂತ, ದೃಢ ಮನಸ್ಸಿನ ಸ್ವಾಭಿಮಾನ ಪ್ರಕಟಿಸುವವನೇ ಒಳ್ಳೆಯ ಮನುಷ್ಯ.

ಯಾರಾದರೂ ಮುನಿಸಿಕೊಳ್ಳುವರೇನೊ ಎನ್ನುವ ಹೆದರಿಕೆ ಇವರಿಗೆ. ಆಲ್ಜೀರಿಯಾದಲ್ಲಿ ಸರಕಾರ ರಚನೆಯಾಗುತ್ತಲೇ ಚೀನಾ ಹಾಗೂ ಪಾಕಿಸ್ತಾನ ಅದಕ್ಕೆ ಮಾನ್ಯತೆ ನೀಡಿದವು; ಭಾರತ ಮಾತ್ರ ಮಾನ್ಯತೆ ನೀಡಲಿಲ್ಲ. ಈ ಹೆದರಿಕೆಗೆ ಕಾರಣ, ಫ್ರಾನ್ಸ್ ಸಿಡಿಮಿಡಿಗೊಂಡೀತೆನ್ನುವುದು. ಕಾಂಗೊ ರಾಷ್ಟ್ರ ವಿಭಜನೆಗೊಂಡಾಗ ಲುಮುಂಬಾ ಅವರ ಕೊಲೆಯಾಯಿತು. ಆಗ ಭಾರತದ ಪ್ರತಿನಿಧಿ ಅಲ್ಲೇ ಇದ್ದರು. ಭಾರತ ಸರಕಾರ ಯಾವುದೇ ಪ್ರತಿಕ್ರಿಯೆ ತೋರಲಿಲ್ಲ. ಈ ಹೆದರಿಕೆಗೆ ಕಾರಣ-ಬೆಲ್ಜಿಯಂ ಆಗಲಿ, ಅಮೇರಿಕಾ ಆಗಲಿ ಅಸಮಾಧಾನಗೊಳ್ಳಬಹುದು ಎನ್ನುವುದು. ಟಿಬೆಟ್ ವಿಷಯವಾಗಿ, ಇಲ್ಲಾ ಹಂಗರಿ ವಿಷಯವಾಗಿ ಭಾರತವು ಯಾವುದೇ ಪ್ರತಿಕ್ರಿಯೆ ತೋರಲಿಲ್ಲ. ರಷ್ಯಾ ಸಿಡಿಮಿಡಿಗೊಳ್ಳಬಹುದು ಎನ್ನುವ ಭಯವೇ ಅದಕ್ಕೆ ಕಾರಣ. ರಷ್ಯಾ ಅಸಮಾಧಾನಗೊಂಡರೆ, ಕಾಶ್ಮೀರ ಸಮಸ್ಯೆ ಪರಿಹರಿಸುವಲ್ಲಿ ಅಡೆತಡೆ ಉಂಟಾಗಿ, ಸರಿ ಇದ್ದ ಪರಿಸ್ಥಿತಿ ಹದಗೆಡಬಹುದೆನ್ನುವ ಅತೀವ ಭಯ. ಈ ಸರಕಾರಕ್ಕೆ ಮೊದಲಿಂದಲೂ ಹೆದರಿಕೆ ಇದೆ; ಅಂದ ಮೇಲೆ ಸಿದ್ಧಾಂತ ಹಾಗೂ ಕನಸುಗಳ ಹತ್ತಿರ ಕೂಡ ನಾವೆಲ್ಲಿ ಸುಳಿಯುತ್ತೇವೆ ?

ಈ ಮೂರೂ ವಿಷಯಗಳ ಬಗ್ಗೆ ಪ್ರಧಾನಿ ಮೆಲುದನಿಯಲ್ಲೇ, "ನಾನು ಹೆದರುವ, ಬೆದರುವ ವ್ಯಕ್ತಿಯಲ್ಲ. ಕನಸು ಕಾಣುವ ಮಾತಾಡಿದ್ದೀರಿ; ಕನಸು ಕಾಣಲೇಬೇಕು" ಎಂದರು. "ಬರೀ ಕನಸು ಕಾಣುವುದಾದರೆ ಇಡೀ ವಿಶ್ವ ಒಕ್ಕೂಟದ ಕನಸನ್ನೇಕೆ ಕಾಣಬಾರದು?" ಎಂದು ಇನ್ನೂ ಮೆಲ್ಲಗೆ ಕೇಳಿದರು. ಇಡೀ ವಿಶ್ವದ ಒಕ್ಕೂಟ ರಚಿಸೋಣವೆಂದು ಲೋಕಸಭೆಯಲ್ಲಿ ಉತ್ತರ ಸಿಗುತ್ತದೆ. ಢಪೋರ ಶಂಖನ ಕತೆ ಕೇಳಿರುವಿರಲ್ಲ? ಆ ಢಪೋರಶಂಖನಿಗೆ ಒಂದು ಲಕ್ಷ ಕೊಡು ಎಂದು ಹೇಳಿದರೆ, ಒಂದು ಲಕ್ಷವೇಕೆ ? ಎರಡು ಲಕ್ಷ ತೆಗೆದುಕೊ ಎನ್ನುತ್ತಾನೆ. ಎರಡು ಲಕ್ಷ ಕೊಡು ಎಂದರೆ, ಎರಡು ಲಕ್ಷವೇಕೆ? ನಾಲ್ಕು ಲಕ್ಷ ತೆಗೆದುಕೊ ಎನ್ನುತ್ತಾನೆ. ಆತ ಎರಡರಷ್ಟು ಕೊಡುವವನೇ ವಿನಾ ಕೇಳಿದ್ದು ಮಾತ್ರ ಕೊಡುವವನಲ್ಲ! ಭಾರತದ ಪ್ರಧಾನಿ ಅಂಥ ಮನುಷ್ಯ: ನಾನು ಭಾರತ-ಪಾಕಿಸ್ತಾನ ಒಕ್ಕೂಟ ಕುರಿತು ಮಾತಾಡಿದರೆ, "ಇದೇನು? ನೀವು ಬರೀ ಭಾರತ-ಪಾಕಿಸ್ತಾನ ಒಕ್ಕೂಟದ ಬಗ್ಗೆ ಮಾತಾಡುತ್ತಿದ್ದೀರಲ್ಲ. ಇಗೋ ನಾನು ವಿಶ್ವಒಕ್ಕೂಟವನ್ನೇ ಮಾಡುತ್ತಿದ್ದೇನೆ" ಎನ್ನುತ್ತಾರೆ ಇವರು. ಈ ತರಹದ ಚಿಂತನೆಗೆ ದಿಕ್ಕುದೆಸೆ ಇರಲು ಸಾಧ್ಯವೆ?

ವಿಶ್ವ ಒಕ್ಕೂಟ ಕೂಡ ಒಂದಿಲ್ಲೊಂದು ದಿನ ರೂಪುಗೊಳ್ಳುವ ಸಾಧ್ಯತೆ ಇದೆ. ನಾನೂ ಅದನ್ನು ಬಯಸುತ್ತೇನೆ. ಈ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲು ಈ ಪ್ರಧಾನಿ ಮಾತ್ರ ಸಮರ್ಥರಲ್ಲ. ಕಾರಣ, ಅವರು ಅಧಿಕಾರದ ಗದ್ದುಗೆಗಾಗಿ ಅದೆಷ್ಟು ಜೊಲ್ಲು ಸುರಿಸುತ್ತಾರೆಂದರೆ, ಅವರೆಂದೂ ಇಂತಹ ಕನಸು ಕಾಣಲಾರರು. ಒಕ್ಕೂಟ ರೂಪುಗೊಳ್ಳಲು ಅದೆಷ್ಟು ವರ್ಷ ಬೇಕೊ ಹೇಳಲಾಗದು. ಐವತ್ತು ವರ್ಷ? ನೂರು ವರ್ಷ? ಅದಕ್ಕೂ ಹೆಚ್ಚು ಕಾಲ ಬೇಕಾಗಬಹುದು. ನಾನು ಭಾರತ-ಚೀನಾ ಒಕ್ಕೂಟದ ಕನಸು ಕೂಡ ಕಾಣಬೇಕೆನ್ನುವವನೇ; ಇಂಥ ಕನಸನ್ನು ಕಾಣಲೇಬೇಕು. ಚೀನಾದ ಸದ್ಯದ ರಾಕ್ಷಸೀ ಸರಕಾರ ತನ್ನ ಆಳ್ವಿಕೆಯನ್ನು ಮುಂದುವರೆಸಲಾರದು. ಒಂದಿಲ್ಲೊಂದು ದಿನ ಆ ರಾಕ್ಷಸೀ ಆಡಳಿತ ಕೊನೆಗೊಳ್ಳಲೇಬೇಕು. ಭಾರತದ ಜನ ಸಮುದಾಯವು ಈ ನೀಚ ಸರಕಾರದ ಹುಟ್ಟಡಗಿಸಿ, ಒಂದು ಉತ್ತಮ ಆಡಳಿತ ತರಬೇಕು. ಆಗ ಅವಶ್ಯವಾಗಿ ಒಂದು ಹೊಸ ದಾರಿ ಕಂಡೀತು. ಚೀನಾ ಹಾಗೂ ಪಾಕಿಸ್ತಾನಗಳೆರಡನ್ನೂ ಒಂದುಗೂಡಿಸಬೇಕೆಂದು ಅವರು ಹೇಳಿದರೆ, ಭಾರತೀಯರಾಗಿ ಅವರಿಗೆ ಏನೇನೂ ಪ್ರಜ್ಞೆ ಇಲ್ಲ, ವಿವೇಕ ಇಲ್ಲ ಎನ್ನಬೇಕಾಗುತ್ತದೆ. ಕಾರಣ ಎಂದಾದರೂ ಚೀನಾ ಹಾಗೂ ಪಾಕಿಸ್ತಾನ ಒಂದು ದೇಶವಾಗಿದ್ದವೆ? ಒಂದು ಭೂಪ್ರದೇಶ ಇತ್ತೀಚೆಗಷ್ಟೇ ಇಬ್ಭಾಗವಾಗಿ ಎರಡು ರಾಷ್ಟ್ರಗಳಾಗಿವೆ. ಈ ಎರಡೂ

ದೇಶಗಳ ಜನತೆ ಸ್ವಲ್ಪ ವಿವೇಕದಿಂದ ವರ್ತಿಸಲಾರಂಭಿಸಿದರೆ , ಎರಡೂ ದೇಶಗಳು ಹತ್ತಿಪ್ಪತ್ತು ವರ್ಷಗಳಲ್ಲಿ ಒಂದಾಗುತ್ತವೆ. ಆದ್ದರಿಂದ ಚೀನಾದೊಂದಿಗೆ ಈ ಭೂಪ್ರದೇಶವನ್ನು ಸೇರಿಸುವುದು ಮೂರ್ಖತನವೇ ಸರಿ. ಭಾರತ ಹಾಗೂ ಪಾಕಿಸ್ತಾನಗಳು ಒಗ್ಗೂಡುವ ಕನಸನ್ನೇ ನಾನು ಯಾವತ್ತೂ ಕಾಣುವವ. ಇದು ಮುಂದಿನ ೫-೧೦ ವರ್ಷಗಳಲ್ಲಿ ಸಾಧ್ಯವಿದೆ. ಚೀನಾದೊಂದಿಗೆ ಒಕ್ಕೂಟ ಸಾಧ್ಯವಾಗಲಾರದು. ಇದು ಮುಂದಿನ ಇಪ್ಪತ್ತು ವರ್ಷಗಳಲ್ಲೂ ಸಾಧ್ಯವಿಲ್ಲ. ಮೂವತ್ತು ವರ್ಷಗಳಲ್ಲೂ ಅಸಾಧ್ಯ. ಐವತ್ತು ವರ್ಷ ಕಳೆದರೂ ಅಷ್ಟೇ. ಜಗತ್ತಿಗೆ ಅದೊಂದು ಅಸಹಜ.ಚಿತ್ರವಾಗಿ ತೋರುವುದು. ಆದ್ದರಿಂದ ಯಾರಾದರೂ ಭಾರತ ಹಾಗೂ ಚೀನಾಗಳಂಥ ದೇಶಗಳನ್ನು ಒಗ್ಗೂಡಿಸುವ ಪ್ರಯತ್ನ ಮಾಡಿದರೆ ನೀವು ತಪ್ಪು ಮಾಡುತ್ತಿದ್ದೀರಿ ಎಂದು ವಾದಿಸಬೇಕಾಗುತ್ತದೆ.

ಪಾಕಿಸ್ತಾನದಲ್ಲಿ, ಬಂಗಾಲದಲ್ಲಿ ಯಾವ ಜನರಿದ್ದಾರೆ? ಅವರ ಭಾಷೆ ಯಾವುದು? ಉರ್ದು ಲಿಪಿ. ಬಲಗಡೆಯಿಂದ ಎಡಗಡೆಗೆ ಸಾಗುವ ಈ ಲಿಪಿಯು ಮುಸಲ್ಮಾನರ ವಿಶಿಷ್ಟ ಲಿಪಿ ಎಂದೊ, ಇದೊಂದು ವಿಶಿಷ್ಟ ಹೆಸರಿನ ಲಿಪಿ ಎಂದೊ ಮುಸಲ್ಮಾನರು ಭಾವಿಸುತ್ತಾರೆ. ಇವೆರಡೂ ತಪ್ಪು ಕಲ್ಪನೆಗಳೇ. ಪಾಕಿಸ್ತಾನದಲ್ಲಿ ೮-೯ ಕೋಟಿ ಮುಸಲ್ಮಾನರಿದ್ದು ಆ ಪೈಕಿ ಅರ್ಧಕ್ಕಿಂತ ಹೆಚ್ಚು ಜನ ಪಂಜಾಬ್ ಪ್ರಾಂತದಲ್ಲಿದ್ದಾರೆ. ಅವರದು ಕ,ಖ,ಗ,ಘ ಎನ್ನುವ ನಾಗರೀ ಲಿಪಿಯೇ. ಅದೇ ರೀತಿ ಬಂಗಾಲದವರ ಭಾಷೆ ಬಂಗಾಲಿಯಾಗಿದ್ದು, ಅವರದೂ ನಾಗರೀ ಲಿಪಿಯೇ ಆಗಿದೆ. ಹಾಗೆಯೇ ಎಷ್ಟೊ ಜನ ಕ್ರಿಶ್ಚಿಯನ್ನರು ತಮ್ಮದು ರೋಮನ್ ಲಿಪಿ ಎಂದೂ ತಮ್ಮ ಭಾಷೆ ಇಂಗ್ಲಿಷ್ ಎಂದೂ ಭಾವಿಸುತ್ತಾರೆ. ನಮ್ಮ ಭಾರತದ ಆಕಾಶವಾಣಿಯೊಂದಿದೆ. ಪ್ರತಿದಿನ ಮುಂಜಾನೆ ಅದರ 'ವಂದನಾ' ಕೇಳುತ್ತೇವೆ. ಅವರು ಒಮ್ಮೆ ಗೀತೆಯೊಳಗಿಂದ, ಒಮ್ಮೆ ರಾಮಾಯಣದೊಳಗಿಂದ ಏನನ್ನೋ ಆಯ್ದು ಕೇಳಿಸುತ್ತಾರೆ. ಇಲ್ಲಾ ಕ್ರಿಶ್ಚಿಯನ್ನರ ಯಾವುದಾದರೊಂದು ಭಕ್ತಿ ಗೀತೆಯನ್ನು ಕೇಳಿಸುತ್ತಾರೆ. ಇಂಥ ಸಂದರ್ಭದಲ್ಲಿ ಈ ರೇಡಿಯೊವನ್ನೇ ಒಡೆದು ಬಿಸಾಡಬೇಕೆ ನಿಸುತ್ತದೆ. ಏಸುಕ್ರಿಸ್ತ ಇಂಗ್ಲಿಷ್ ಮಾತನಾಡುತ್ತಿದ್ದನೇನೊ ಎನ್ನುವಂತೆ ಭಕ್ತಿಗೀತೆಯನ್ನು ಇಂಗ್ಲಿಷಿನಲ್ಲೇ ಕೇಳಿಸುತ್ತಾರೆ. ಏಸುವಿನ ಭಾಷೆ ಅರ್ಮೈಕ್ ಆಗಿತ್ತು. ಅದು ಇಂಗ್ಲಿಷಿಗಿಂತ ಹೆಚ್ಚಾಗಿ ಹಿಂದೂಸ್ತಾನಿ ಭಾಷೆಗೆ ಹತ್ತಿರದ ಸಂಬಂಧ ಹೊಂದಿದೆ ಎಂಬ ಸಂಗತಿಯನ್ನು ಯಾರಾದರೂ ಹೋಗಿ ಈ ಆಲ್ ಇಂಡಿಯಾ ರೇಡಿಯೋದವರಿಗೆ ತಿಳಿಸಬೇಕಾಗಿದೆ. ಏಸುವಿನ ಭಾಷೆ ಇಂಗ್ಲಿಷ್ ಆಗಿತ್ತೆಂದೇ ಕೆಲವು ಮೊದ್ದುಮಣಿಗಳು ಭಾವಿಸಿದ್ದಾರೆ. ಜನರಿಗೆ, ಜಗತ್ತಿನ ಬಗೆಗೆ ಸರಿಯಾದ ಮಾಹಿತಿ ನೀಡಲು ಶಾಲೆಯೊಂದನ್ನು ಆರಂಭಿಸಲೇ ಎನಿಸುತ್ತದೆ. ಪೂರ್ವ ಪಾಕಿಸ್ತಾನ ಅಥವಾ ಬಂಗಾಲದ ಭಾಷೆಯ

ಬಗ್ಗೆ, ಲಿಪಿಯ ಬಗ್ಗೆ ನಾನು ಮಾತನಾಡಿದ್ದು ಅವು ಎಷ್ಟು ಅನ್ಯೋನ್ಯವಾಗಿವೆ ಎಂದು ಹೇಳುವುದಕ್ಕಾಗಿ.

ಅದೇ ರೀತಿ ಪಶ್ಚಿಮ ಪಾಕಿಸ್ತಾನದ ಲಾಹೋರ್, ಕರಾಚಿ ಪ್ರದೇಶವನ್ನೇ ನೋಡಿ: ಈಗಲೂ, ಎರಡೂ ಕಡೆಗಿನ ಜನ ಪರಸ್ಪರ ಭೇಟಿಯಾದರೆ-ಹಾಗೆ ಕ್ವಚಿತ್ತಾಗಿ ಭೇಟಿಯಾದರೂ-ನಡುವೆ ಅಡ್ಡ ಗೋಡೆಯೊಂದು ಎದುರಾದಾಗ್ಯೂ ಆಗಾಗ ಅದು ಕುಸಿದಾಗೆಲ್ಲ ಅಪಾರ ಸಂತೋಷವಾಗುತ್ತದೆ. ಕೆಲ ದಿನಗಳ ಹಿಂದೆ ಒಬ್ಬ ವ್ಯಕ್ತಿ ಬಂದಿದ್ದ. ಆತ ಪಾಕಿಸ್ತಾನ ಸರಕಾರದ ಅಧಿಕಾರಿ. ನಾನು ಅವನೊಂದಿಗೆ ಈ ಸಂಗತಿಯ-ಸತ್ಯಸಂಗತಿಯ-ಕುರಿತು ಮಾತಾಡಿದೆ : ಭಾರತ ಹಾಗೂ ಪಾಕಿಸ್ತಾನದ ನಡುವೆ, ಬೇರೆ ಎರಡು ರಾಷ್ಟ್ರಗಳ ನಡುವೆ ಏರ್ಪಡುವಂಥ ಮೈತ್ರಿ ಏರ್ಪಡಲಾರದು. ಏಕೆಂದರೆ ನಮ್ಮ ಮೈತ್ರಿ ಆರಂಭವಾದರೆ ಅದು ಹೆಚ್ಚುತ್ತ ಹೋಗುವಂಥದ್ದು. ಅದು ಕಡೆಗೂ ಭಾರತ-ಪಾಕಿಸ್ತಾನ ಒಕ್ಕೂಟದ ಹಂತದಲ್ಲೇ ಪರ್ಯವಸಾನವಾಗಬಹುದೇ ಹೊರತು ಅದಕ್ಕೂ ಮೊದಲಲ್ಲ. ಈ ಮೈತ್ರಿ ಇಲ್ಲದ್ದರಿಂದ ವೈರ, ಯುದ್ಧದ ಪರಿಸ್ಥಿತಿಯೇ ಉದ್ಭವಿಸುತ್ತದೆ. ಯುದ್ಧ ಆಗಲಿ, ಬಿಡಲಿ. ಯುದ್ಧ ನಡೆದಿದೆಯೇನೊ ಎನ್ನುವಂಥ ಸ್ಥಿತಿ ನಿರ್ಮಾಣವಾಗಿದೆ. ನಾವು ಒಂದೇ ದೇಹದ ಎರಡು ಅಂಗಗಳಾಗಿದ್ದೇವೆ. ಹಾಗಾಗಿ ನಮ್ಮ ನಡುವೆ ಮಾಮೂಲಿ ಮೈತ್ರಿಯ ಮಾತೇ ಬರಕೂಡದು. ಈ ಎಲ್ಲ ನನ್ನ ಅನಿಸಿಕೆಗಳನ್ನು ಆತನಿಗೆ ತಿಳಿಸಿದೆ. ''ನಿಮ್ಮ ಈ ಮಾತು ನನಗೆ ಅರ್ಥವಾಗುತ್ತದೆ. ಆದರೆ ಈ ಕುರಿತು ಈಗ ಮಾತನಾಡದಿದ್ದರೇ ಒಳ್ಳೆಯದು'' ಎಂದು ಆತ ಹೇಳಿದ. ಒಂದಿಲ್ಲೊಂದು ದಿನ ಈ ಕುರಿತು ಮಾತಾಡಬೇಕಾದ ಪರಿಸ್ಥಿತಿ ಬಂದೇ ಬರುತ್ತದೆ. ಮೈತ್ರಿ ಏರ್ಪಡುವುದಾದರೆ ಬಿಚ್ಚು ಮನಸ್ಸಿನ ಮೈತ್ರಿ ಏರ್ಪಡಬೇಕು. ಇಲ್ಲದಿದ್ದರೆ, ಈ ವಿಚಾರ ಅಡತಡೆಗಳನ್ನೆದುರಿಸಿ ಕುಂಠಿತಗೊಳ್ಳುತ್ತದೆಂದು ನಾನು ಹೇಳಬೇಕಾಯಿತು.

ನಿಮಗೆ ಈ ಮಾತನ್ನೇಕೆ ಹೇಳುತ್ತಿದ್ದೇನೆ? ಎಷ್ಟೋ ಸಲ, 'ನಾವು ಅರವತ್ತು ಕೋಟಿ ಜನರಿದ್ದೇವೆ' ಎಂದು ಚೀನಿಯರು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಅವರಿಗೆ 'ಅರವತ್ತು ಕೋಟಿ' ಎನ್ನುವುದೇ ಅಭಿಮಾನದ ಸಂಗತಿ. ನಾವು ಕೂಡ ಸ್ವಲ್ಪ ಬುದ್ಧಿವಂತಿಕೆಯಿಂದ, ಉದಾರ ಮನಸ್ಸಿನಿಂದ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯ ಪ್ರವೃತ್ತರಾದರೆ ನಮ್ಮ ಭಾಗ್ಯವೂ ತೆರೆದೀತು. ಆಗ ಬರೀ ಅಭಿಮಾನದ ಬದಲಾಗಿ ಒಗ್ಗಟ್ಟಿನ ಬಲದ ಸಂಕೇತವಾಗಿ 'ನಾವೂ ಅರವತ್ತು ಕೋಟಿ ಜನರಿದ್ದೇವೆ' ಎಂದು ಹೇಳಬಲ್ಲೆವು. ಭಾರತ ಹಾಗೂ ಪಾಕಿಸ್ತಾನ ಬೇರೆ ಬೇರೆ ರಾಷ್ಟ್ರಗಳಲ್ಲ. ನಾವು

ಅರವತ್ತು ಕೋಟಿ ಜನರೆಲ್ಲ ಒಂದೇ. ಇಷ್ಟೊಂದು ಬಲ ಪಡೆಯಬೇಕಾದರೆ ಬುದ್ಧಿವಂತಿಕೆಯ ಅವಶ್ಯಕತೆ ಇದೆ.

ಮೊದಲಿಂದ ಕೊನೆಯವರೆಗೆ, ಹಿಂದೂ ಮತ್ತು ಮುಸಲ್ಮಾನ ಹಾಗೂ ಭಾರತ ಮತ್ತು ಪಾಕಿಸ್ತಾನ ಸಮಸ್ಯೆಗಳನ್ನು ಕುರಿತು ಈಗ ನಾನು ಇಷ್ಟೆಲ್ಲಾ ಮಾತಾಡಿದ್ದೇನೆ. ನೀವು ಸಣ್ಣ ಪುಟ್ಟ ತಂಡಗಳಾಗಿ ಈ ಬಗ್ಗೆ ವಿಚಾರ ವಿನಿಮಯ ಮಾಡಬೇಕು. ಇಂಥ ವಿಚಾರ ಫಲಪ್ರದವಾದರೆ, ಓಣಿ-ಗಲ್ಲಿಗಳಲ್ಲಿ ತಂಡ ತಂಡವಾಗಿ, ನೀವು ರಾಜಕೀಯ-ಸೌಹಾರ್ದರಾಜಕೀಯ-ಶುರು ಮಾಡಿದರೆ, ಇಂಗ್ಲಿಷ್ ತೊಲಗಿಸುವ, ಬೆಲೆಯೇರಿಕೆ ತಡೆಯುವ ವಿಚಾರಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಪ್ರಯೋಜನವಾಗಬಲ್ಲದು. ಒಟ್ಟಾರೆ, ಹಿಂದೂ ಹಾಗೂ ಮುಸಲ್ಮಾನರು ಜೊತೆಗೂಡಿ ಮುನ್ನುಗ್ಗಬೇಕು. ಎಷ್ಟೆಲ್ಲ ಸರಕುಗಳ ಬೆಲೆಗಳೇರಿವೆ. ಉದಾಹರಣೆಗೆ ಸಕ್ಕರೆ. ನಾನಿಂದು ಈ ಕುರಿತು ಮಾತಾಡಲಿಲ್ಲ. ನಿಮಗೇ ಗೊತ್ತಿರುವಂತೆ ಸಕ್ಕರೆ ಬೆಲೆ ಒಂದೂ ಕಾಲು ಅಥವಾ ಒಂದೂವರೆ ರೂಪಾಯಿಯಷ್ಟಿದೆ. ನಮ್ಮ ಉತ್ಪಾದನೆಯನ್ನು ಗಮನಿಸಿದರೆ, ಅದು ಹದಿಮೂರೂವರೆ ಆಣೆ ಇಲ್ಲಾ ಹದಿನಾಲ್ಕಾಣೆ ಆಗಿರಬೇಕಿತ್ತು. ಅಷ್ಟಕ್ಕೂ ಒಂಭತ್ತಾಣೆಗೆ ಸೇರಿನಂತೆ ಸಕ್ಕರೆ ಉತ್ಪಾದನೆಯಾಗುತ್ತದೆ. ಅದಕ್ಕೆ ಸರಕಾರದ ಕರ, ಲಾಭ ಮುಂತಾಗಿ ಸೇರಿಸಿದರೆ ದುಪ್ಪಟ್ಟಾಗುವುದೆಂದರೂ ಅದನ್ನು ಹದಿಮೂರುವರೆ ಆಣೆಗೆ ಸೇರಿನಂತೆ ಮಾರಬೇಕು. ಅದಕ್ಕಾಗಿ ಆಂದೋಲನ ಹೂಡಿದರೆ ಸ್ವಾಗತಾರ್ಹ. ಬಂಡವಾಳಶಾಹಿಗಳ ವಿರುದ್ಧ ಆಂದೋಲನ ಆರಂಭಿಸಿ. ನೀವು ನಿಮ್ಮದೇ ಆದ ಪಕ್ಷವನ್ನು ಆಯ್ಕೆ ಮಾಡಿಕೊಳ್ಳಿ. ಪಕ್ಷ ಬೇಡವಾದರೆ ಒಂದು ಸಂಘಟನೆಯಾಗಿ ಹೋರಾಡಿ. ಹೈದ್ರಾಬಾದ್‌ನಂಥ ಒಂದು ನಗರಕ್ಕೆ ಹೊಸ ಜೀವ ತುಂಬಿರಿ. ಎಲ್ಲ ಜನ ಇಲ್ಲಿ ಒಗ್ಗಟ್ಟನ್ನು ಸಾಧಿಸಿದ್ದಾರೆ ಎಂಬುದು ಅದರಿಂದ ಸಾಬೀತಾಗಲಿ. ನಾನಿಂದು ವಿಶೇಷವಾಗಿ ಹಿಂದೂ ಮತ್ತು ಮುಸಲ್ಮಾನ ಸಮಸ್ಯೆ ಕುರಿತು ಮಾತಾಡಿದ್ದೇನೆ. ನೆನಪಿನಲ್ಲಿಟ್ಟುಕೊಳ್ಳಬೇಕಾದ ವಿಚಾರವೆಂದರೆ, ಇದೇ ರೀತಿ ಮುಂದುವರೆದು ಹರಿಜನ, ಆದಿವಾಸಿ ಹಾಗೂ ಹಿಂದುಳಿದ ಜಾತಿಗಳ ಹಾಗೂ ಮಹಿಳೆಯರ ಸಮಸ್ಯೆಗಳನ್ನೂ ನಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಮಹಿಳೆ-ಆಕೆ ಮೇಲ್ಜಾತಿಯವಳಾಗಿರಬಹುದು ಇಲ್ಲಾ ಕೆಳ ಜಾತಿಯವಳಾಗಿರ ಬಹುದು-ಹಿಂದುಳಿದವಳೆಂದೇ ನಾನು ಭಾವಿಸುತ್ತೇನೆ. ನಿಮಗೂ ಗೊತ್ತಿರುವಂತೆ ಹೆಣ್ಣನ್ನು ಭಾರತದಲ್ಲಿ, ಅಷ್ಟೆ ಏಕೆ ಇಡೀ ಜಗತ್ತಿನಲ್ಲಿ, ಹತ್ತಿಕ್ಕಲಾಗಿದೆ. ಈ ಸಭೆಯಲ್ಲೂ ನನ್ನ ಮಾತನ್ನು ಹೆಚ್ಚಾಗಿ ಗಂಡಸರೇ ಕೇಳುತ್ತಿದ್ದಾರೆ. ಎಷ್ಟು ಜನ ಮಹಿಳೆಯರು ನನ್ನ ಮಾತನ್ನು ಕೇಳಲು ಬಂದಿದ್ದಾರೆ ನೋಡಿ. ಅದಕ್ಕಾಗಿ, ಅವರೆಷ್ಟು ಹಿಂದುಳಿದಿದ್ದಾರೋ ಅಷ್ಟರ ಮಟ್ಟಿಗೆ ಅವರಿಗೆ ವಿಶೇಷ ಅವಕಾಶಗಳನ್ನು

ನಾವು ನೀಡಬೇಕು. ಅಂದರೆ ಮಾತ್ರ ಅವರು ಮೇಲಕ್ಕೆ ಬರಬಹುದು. ನಾನು ಮೂರಾಣೆ ನಿದರ್ಶನ ನೀಡದಾಗೆಲ್ಲ ಈ ಹಿಂದುಳಿದವರ ಕುರಿತು ನಾನಾಡುವ ಮಾತಿನ ಉದ್ದೇಶ ಒಂದೇ ಆಗಿರುತ್ತದೆ. ಅದೇನೆಂದರೆ, ಯಾರು ಎಲ್ಲಕ್ಕೂ ಕೆಳಗಿದ್ದಾರೋ ಅವರ ಮೇಲೆ ದೃಷ್ಟಿ ಹಾಯಿಸಿದರೆ, ಅವರನ್ನು ಮೇಲೆತ್ತಿದರೆ, ನಿಜವಾದ ಅರ್ಥದಲ್ಲಿ ಅವರು ಮೇಲೇರಿದಂತಾಗುತ್ತದೆ. ಎಲ್ಲಕ್ಕೂ ಕೆಳಗಿರುವವರನ್ನು ಕಣ್ಣೆತ್ತಿ ನೋಡಿ. ಕೊನೆಯದಾಗಿ ಈ ಎಲ್ಲ ವಿಚಾರಗಳನ್ನು ಕುರಿತು ನೀವು ಗಂಭೀರವಾಗಿ ಚಿಂತನೆ ಮಾಡಬೇಕು; ಸಾಧ್ಯವಾದರೆ ಹೈದ್ರಾಬಾದ್ ನಗರಕ್ಕೆ ಹೊಸ ಜೀವತುಂಬಲು ಪ್ರಯತ್ನಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

●

(3-10-1963 ರಂದು ಹೈದರಾಬಾದ್‌ನಲ್ಲಿ ನೀಡಿದ ಉಪನ್ಯಾಸ)

ಹಿಂದಿಯಿಂದ ಕನ್ನಡಕ್ಕೆ : **ಹಸನ್ ನಯೀಂ ಸುರಕೋಡ**

ಇತಿಹಾಸ ಮತ್ತು ಅದರ ಉದ್ದೇಶ

ಇಪ್ಪತ್ತು ವರ್ಷಗಳ ಹಿಂದೆ ಬರ್ಲಿನ್ ವಿಶ್ವವಿದ್ಯಾಲಯದ ಉಪಹಾರ ಮಂದಿರದ ಒಂದು ಮೇಜಿನ ಸುತ್ತ ಕೆಲವು ಇತಿಹಾಸದ ವಿದ್ಯಾರ್ಥಿಗಳು ಕುಳಿತಿದ್ದರು. ಅವರಲ್ಲಿ ಕೆಲವರು ಹೆಗೆಲ್‌ವಾದಿಗಳಾಗಿದ್ದರು; ಕೆಲವರು ಮಾರ್ಕ್ಸ್‌ವಾದಿಗಳಾಗಿದ್ದರು. ಪ್ರೌಢನಾಗರಿಕತೆಯಿದ್ದ ಭಾರತ ಹೇಗೆ ವಿದೇಶಿ ಆಳ್ವಿಕೆಗೆ ತುತ್ತಾಯಿತು-ಎಂದು ನಾನು ಪ್ರಶ್ನಿಸಿದೆ. ಅವರಲ್ಲಿ ಯಾರಲ್ಲೂ ಉದ್ಧಟತನವಿರಲಿಲ್ಲ. ಇತಿಹಾಸ ಅಧ್ಯಯನ ಮಾಡಿದವರಿಗೆ ಸಹಜವಾಗಿಯೇ ಇರಬೇಕಾದ ವಿನಯವಿತ್ತು. ಮಾರ್ಕ್ಸ್‌ವಾದಿ ಉತ್ತರಿಸಲು ಪ್ರಯತ್ನಿಸಿದ: ''ಭಾರತದಲ್ಲಿ ಮಾರುಕಟ್ಟೆ ವ್ಯಾಪಾರ ಗ್ರಾಮಮಟ್ಟದಲ್ಲೇ ಉಳಿಯಿತು. ರಾಷ್ಟ್ರಮಟ್ಟದವರೆಗೆ ಬೆಳೆಯಲು ಅಶಕ್ತವಾಯಿತು; ದೇಶದಲ್ಲಿ ಸಾಕಷ್ಟು ಭೂರಹಿತ ಶ್ರಮಿಕವರ್ಗ ಇರಲಿಲ್ಲ; ಏಕೆಂದರೆ ಭಾರೀ ಪ್ರಮಾಣದಲ್ಲಿ ಒಕ್ಕಲೆಬ್ಬಿಸುವಿಕೆ ಇರಲಿಲ್ಲ; ಕೈಗಾರಿಕೆಗಳಾಗಿ ಬೆಳೆಯಲು ಉಮೇದನ್ನು ಹೊಂದಿರುವ ವಾಣಿಜ್ಯ ಬಂಡವಾಳ ಹೇರಳವಾಗಿ ಇರಲಿಲ್ಲ; ಮೆಕ್ಸಿಕೋಗೆ ಇದ್ದ ಭಾಗ್ಯ ಭಾರತಕ್ಕೆ ಇರಲಿಲ್ಲ; ಹಾಗೂ ಇತರರನ್ನು ಕೊಳ್ಳೆಹೊಡೆಯುವ ಮನಸ್ಸು ಇರಲಿಲ್ಲ'' ಎಂದು ಆತ ತಿಳಿಸಿದ. ಅದು ಬಹುಮಟ್ಟಿಗೆ ಸಮಗ್ರವಾದ ಉತ್ತರವಾಗಿತ್ತು (ವಸ್ತುಸ್ಥಿತಿಯ ಹಿನ್ನೆಲೆಯಲ್ಲಿ ತೌಲನಿಕವಾಗಿ ಸರಿಯಾಗಿತ್ತು. ಬ್ರಿಟಿಷರು ಭಾರತವನ್ನು ಗೆಲ್ಲುವುದಕ್ಕೆ ಮುಂಚೆ ನಮ್ಮ ಮಾರುಕಟ್ಟೆ ಗ್ರಾಮಮಟ್ಟದಲ್ಲಿತ್ತು). ಭಾರೀ ಪ್ರಮಾಣದಲ್ಲಿ ಭೂರಹಿತ ಶ್ರಮಿಕವರ್ಗ ನಮ್ಮಲ್ಲಿ ಇರಲಿಲ್ಲ. ನಮ್ಮ ವಾಣಿಜ್ಯ ಬಂಡವಾಳದ ವಿಷಯ ಚರ್ಚಾಸ್ಪದವಾಗಿದೆ. ಆದರೂ ನಾನು ಸುಮ್ಮನಿರದೆ ಈ ಮಾರ್ಕ್ಸ್‌ವಾದಿಯನ್ನು ಕೇಳಿದೆ: ''ನೀನು ಪಟ್ಟಿಮಾಡಿದ ಅಂಶಗಳು ಇಂಗ್ಲೆಂಡಿನಲ್ಲಿ ಅಥವಾ ಪಶ್ಚಿಮ ಯುರೋಪಿನ ಇತರ ದೇಶಗಳಲ್ಲಿ ಯಾಕೆ ಕಾಣಿಸಿಕೊಂಡವು ? ಭಾರತದಲ್ಲಿ ಯಾಕೆ ಕಾಣಿಸಿಕೊಳ್ಳಲಿಲ್ಲ?'' ಅದಕ್ಕೆ ಅವನಲ್ಲಿ ಉತ್ತರವಿರಲಿಲ್ಲ.

ಆಗ ಹೆಗೆಲ್‌ವಾದಿ ಉತ್ತರಿಸಲು ಉತ್ತೇಜಿತನಾಗಿ ರಂಗಕ್ಕಿಳಿದ. ಚರಿತ್ರೆಯ ಚೈತನ್ಯದ ಬಗ್ಗೆ ಏನೋ ಹೇಳಲು ಪ್ರಯತ್ನಿಸಿದ; ವಿದೇಶೀ ಆಕ್ರಮಣವನ್ನು

ತಡೆಗಟ್ಟಲು ಆ ಸಮಯದಲ್ಲಿ ಚರಿತ್ರೆಯ ಚೈತನ್ಯ ಭಾರತದ ಪರವಾಗಿ ಏಕೋ ಮನಸ್ಸು ಮಾಡಲಿಲ್ಲ; ಜನತೆ ನಿತ್ರಾಣವಾಗಿತ್ತು ಎಂದ. ಅದು ಕೂಡ ತೃಪ್ತಿಕರವಾದ ಉತ್ತರವಾಗಿರಲಿಲ್ಲ. ಇತಿಹಾಸದ ಗತಿಯನ್ನು ಕುರಿತು ಅಂತಿಮ ಉತ್ತರ ಕೊಡಲು ಉದ್ದೇಶಿಸುವ ವೈಚಾರಿಕ ಸಿದ್ಧಾಂತಗಳ ಈ ವಿಫಲತೆ ಕಂಗೆಡಿಸುವಂತಿತ್ತು. ಸಂಗತಿ ಗಳನ್ನು ಗುರುತಿಸುವ ಮಟ್ಟಿಗೆ ಮಾರ್ಕ್ಸ್‌ವಾದಿ ನಿಸ್ಸಂದೇಹವಾಗಿ ಉತ್ತಮ ಉತ್ತರ ನೀಡಿದ್ದ. ಆದರೆ ಈ ಸಂಗತಿಗಳಿಗೆ ಕಾರಣ ಹುಡುಕುವುದರಲ್ಲಿ ಅವನೂ ಹೆಗೆಲ್‌ವಾದಿಯಷ್ಟೆ ಕತ್ತಲಲ್ಲಿದ್ದ. ಒತ್ತಾಯಪಡಿಸಿದ್ದರೆ ಮಾರ್ಕ್ಸ್‌ವಾದಿ ಮತ್ತು ಹೆಗೆಲ್‌ವಾದಿ ಇಬ್ಬರೂ ಇನ್ನೂ ಚುರುಕಾದ, ಬಹುಶಃ ಒರಟಾದ, ಉತ್ತರಗಳನ್ನೆ ಕೊಡುತ್ತಿದ್ದರೇನೊ? ಮಾನವ ಇತಿಹಾಸ ನಿಶ್ಚಿತ ಪಥದಲ್ಲಿ ಸಾಗಿದೆ, ಯಾವುದೋ ಸಮಯದಲ್ಲಿ ಭಾರತಕ್ಕೆ ಇತರ ದೇಶಗಳಿಗೆ ಸಿಕ್ಕಿದ ಸೌಕರ್ಯ ಸಿಗಲಿಲ್ಲ ಎನ್ನುವುದು ಮಾನವ ಜನಾಂಗಕ್ಕೆ ಅಷ್ಟು ಮಹತ್ವಪೂರ್ಣ ಸಂಗತಿಯಲ್ಲ ಎಂದು ಮಾರ್ಕ್ಸ್‌ವಾದಿ ಹೇಳಬಹುದಿತ್ತು. ಉತ್ಪಾದನಾ ವಿಧಾನವನ್ನು ಘಟ್ಟದಿಂದ ಘಟ್ಟಕ್ಕೆ ಮಾನವಜನಾಂಗ ಏಕಪ್ರಕಾರವಾಗಿ ಸುಧಾರಿಸಿದೆ ಎನ್ನುವುದು ಮುಖ್ಯ ವಿಚಾರ. ಆ ಸಮಯದಲ್ಲಿ ಭಾರತಕ್ಕಿಂತ ಪಶ್ಚಿಮ ಯೂರೋಪು ಮುಂದಾಗಿತ್ತು. ನಾನು ಕೇಳಲು ಪ್ರಯತ್ನಿಸಿದ್ದು ಒಂದು ಗೌಣ ಪ್ರಶ್ನೆಯಾಯಿತು. ಅದೇ ರೀತಿಯಲ್ಲಿ ಹೆಗೆಲ್‌ವಾದಿ ಹೀಗೆ ಹೇಳಬಹುದಿತ್ತು: ಭಾರತೀಯರ ವಿಶೇಷ ಪ್ರತಿಭೆ ಆಧ್ಯಾತ್ಮದಲ್ಲಿದೆ, ಅರಾಜಕತೆ ಯಲ್ಲಿದೆ, ಆಲೋಚನೆಯಲ್ಲಿದೆ; ಅರಾಜಕತೆ, ಅನೇಕ ಸಲ ಮಾನವ ಚೈತನ್ಯ ಮತ್ತು ಸಂಘಟನೆಯ ಮಹತ್ವಪೂರ್ಣ ಸಾಧನೆಗಳಿಗೆ ಕಾರಣವಾಗುತ್ತದೆ; ಆದರೆ ಒಂದು ಜನಾಂಗ ಜಾಗತಿಕ ಇತಿಹಾಸದಲ್ಲಿ ತನ್ನ ಪಾತ್ರವನ್ನು ನಿರ್ವಹಿಸಿ, ತನ್ನ ಸೃಜನಶೀಲ ಶಕ್ತಿಗಳನ್ನು ಬರಿದು ಮಾಡಿಕೊಂಡಾಗ ಅದು ನಿರರ್ಥಕವಾಗುತ್ತದೆ.

ಈ ಉತ್ತರಗಳು ಯಾವ ವಿಧದಲ್ಲೂ ಇತಿಹಾಸದ ವಿಧಾನಗಳ ಸುಳಿವು ನೀಡುವುದಿಲ್ಲ. ಒಂದು ನಿರ್ದಿಷ್ಟ ದೇಶದಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಒಂದು ನಿರ್ದಿಷ್ಟ ಲಕ್ಷಣಗಳ ಮೊತ್ತ ಏಕೆ ಕಂಡುಬಂತು? ಇನ್ನೊಂದು ದೇಶದಲ್ಲಿ ಏಕೆ ಹಾಗೆ ಆಗಲಿಲ್ಲ ? ಎಂಬ ಪ್ರಶ್ನೆಗಳು ಉಳಿದೇ ಉಳಿಯುತ್ತವೆ. ಏಕೆಂದರೆ ಮನುಷ್ಯ ಹೇಗೆ ನಾನಾ ಅವಧಿಗಳಲ್ಲಿ ಏಳಿಗೆ ಹೊಂದಿದ್ದಾನೆ ಎಂಬುದರ ಬಗ್ಗೆ ಒಂದು ನಿಯಮವನ್ನು ಅಥವಾ ಒಂದು ಪ್ರಕ್ರಿಯೆಯ ಯಾವುದೋ ಒಂದು ಸುಳಿವನ್ನು ಕುರಿತು ಸ್ಪಷ್ಟವಾಗಿ ಹೇಳುತ್ತೇವೆನ್ನುವವರು, ಜನಾಂಗಗಳು ಮತ್ತು ವರ್ಗಗಳು ಏಕೆ ಉನ್ನತಿ ಮತ್ತು ಅವನತಿಯನ್ನು ಹೊಂದಿದವು ಎಂಬುದರ ಬಗ್ಗೆಯೂ ವಿವರಿಸಲು ಸಮರ್ಥರಾಗಿ ಇರಬೇಕಾಗುತ್ತದೆ. ಅದಕ್ಕೆ ಉತ್ತರವಿಲ್ಲದಿದ್ದರೆ, ಇತಿಹಾಸದ ನಿಯಮವನ್ನು ಕುರಿತು

ಮಾತನಾಡುವುದು ವ್ಯರ್ಥವಾಗುತ್ತದೆ. ಲಕ್ಷಣಗಳನ್ನು ವಿವರಿಸುವುದರಿಂದ ಕಾರಣಗಳನ್ನು ಸೂಚಿಸಿದಂತೆ ಆಗುವುದಿಲ್ಲ.

ಮನುಷ್ಯನನ್ನು ನಾನಾ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಯಾವ ವಿಷಯದ ಮೇಲೇ ಆಗಲಿ ನಾವು ಅಧಿಕೃತವಾಗಿ ಮಾತನಾಡಲು ಸಾಕಷ್ಟು ಸಾಮರ್ಥ್ಯವನ್ನು ಪಡೆದಿಲ್ಲ ಎಂಬುದು ಮನುಷ್ಯನನ್ನು ಕುರಿತ ಬೆಲೆಯುಳ್ಳ ವ್ಯಾಖ್ಯೆ ಇಲ್ಲ ಎನ್ನುವುದರಿಂದ ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಮನುಷ್ಯನನ್ನು ಆಲೋಚನಾಜೀವಿ ಎಂದು ಕರೆಯುತ್ತಾರೆ. ತಾನು ನಿಜವಾಗಿಯೂ ಆಲೋಚಿಸುತ್ತೇನೆಯೇ ಎಂಬ ಅನುಮಾನ ಅವನಿಗೇ ಇರಬೇಕು. ತನ್ನ ಆಲೋಚನಾ ಸಾಮರ್ಥ್ಯಕ್ಕೆ ಒಳ್ಳೆಯ ಪುರಾವೆಗಳನ್ನು ಅವನು ಹುಡುಕಬೇಕಾಗಿದೆ. ಎಷ್ಟರಮಟ್ಟಿಗೆ ಪ್ರಜ್ಞಾಪೂರ್ವಕ ಆಲೋಚನೆ ಅವನ ಚಟುವಟಿಕೆಗಳನ್ನು, ಸ್ಮೃತಿಶಕ್ತಿಯನ್ನು ಮತ್ತು ಸಂಸ್ಥೆಗಳನ್ನು ನಿಯಂತ್ರಿಸುತ್ತದೆ? ಅವನನ್ನು ಉಪಕರಣ ತಯಾರಿಸುವ ಪ್ರಾಣಿ ಎಂದೂ ಸಹ ವ್ಯಾಖ್ಯಾನಿಸಲಾಗಿದೆ; ಇದು ಬಹುಪಾಲು ವ್ಯಾಖ್ಯೆಗಳಿಗಿಂತ ಉತ್ತಮವಾದುದು. ಆದರೆ ಮನುಷ್ಯನಲ್ಲಿ ಇನ್ನೊಂದು ವಿಶೇಷ ಗುಣವಿದೆ. ಅದು ತನ್ನ ಮತ್ತು ತನ್ನ ಸಂಬಂಧಗಳ ಬಗೆಗಿರುವ ತಿಳುವಳಿಕೆ. ಈ ಸಂಬಂಧಗಳು, ಕೆಲವರು ವಿವರಿಸಿ ವ್ಯಾಖ್ಯಾನಿಸಲು ಪ್ರಯತ್ನಿಸುವಂತೆ, ದೇವರ ಜೊತೆಯೊ ಅಥವಾ ಇತರರು ಮತ್ತು ಹೆಸರಿಸಲಾಗದ ಪೂರ್ಣ (Whole)ದ ಜೊತೆಯೋ ಎಂಬುದು ಗೌಣವಾದ ಪ್ರಶ್ನೆ. ಯಾವುದು ಮುಖ್ಯವೆಂದರೆ ಆ ಸಂಬಂಧಗಳ ಅರಿವು ಮತ್ತು ಅವುಗಳ ಗುಣಮಟ್ಟ.

ಮನುಷ್ಯ ತನ್ನ ಬಗ್ಗೆ ಪ್ರಜ್ಞಾವಂತನಾಗುತ್ತಿದ್ದಂತೆಯೇ- ಅವನು ಯಾವುದೇ ಹಂತದಲ್ಲಿ ಪ್ರಜ್ಞಾವಂತನಾಗಿರಲಿ- ತಾನು ಪೂರ್ಣದಿಂದ ಬೇರ್ಪಟ್ಟಿದ್ದೇನೆನ್ನುವ ದುಃಖ ಅವನನ್ನು ಕಾಡುತ್ತದೆ; ಈಗ ಅವನು ಏನಾಗಿದ್ದಾನೆಯೋ ಅದಕ್ಕಾಗಿ ಆನಂದ ಭಾವ ಕೂಡ ಅವನನ್ನು ಆವರಿಸುತ್ತದೆ; ಆಮೇಲೆ ಅವನು ಪೂರ್ಣದ ಜೊತೆ ಹೇಗೆ ಒಂದಾಗುವುದೆಂದು ಯೋಚಿಸಲು ಪ್ರಾರಂಭಿಸುತ್ತಾನೆ, ತನ್ನ ಗುರಿಯ ಅನ್ವೇಷಣೆ ಶುರುವಾಗುತ್ತದೆ. ಜೀವನದ ಅರ್ಥವನ್ನು ಕಡೆದು ತೆಗೆಯುವ ಹುಡುಕಾಟ ಮೊದಲಾಗುತ್ತದೆ. ತನ್ನ ಗುರಿಯನ್ನು ಇತಿಹಾಸದ ಮುಖಾಂತರ ಕಂಡುಕೊಳ್ಳುತ್ತಿದ್ದೇನೆಯೇ ಎಂದು ಯಾವುದೋ ಹಂತದಲ್ಲಿ ಮನುಷ್ಯ ತನ್ನನ್ನೂ ತಾನು ಪ್ರಶ್ನಿಸುತ್ತಾನೆ. ಇದರಲ್ಲಿ ಅನುಮಾನವಿಲ್ಲ. ಆದರೆ ಜೀವನದ ನಾನಾ ಗುರಿಗಳನ್ನು ಪೂರೈಸಲು ಮನುಷ್ಯನು ನಾನಾ ಯುಗಗಳಲ್ಲಿ ಬಾಳಿದ್ದಾನೆ. ಅವನು ಆಲೋಚಿಸಿದ್ದೇ ಜೀವನದ ಅರ್ಥವಾಯಿತು. ಅಂಥ ಅರ್ಥಗಳನ್ನು ಅವನು ಪ್ರಜ್ಞಾಪೂರ್ವಕವಾಗಿ ಆಲೋಚಿಸಿದನೇ ಅಥವಾ ಆರ್ಥಿಕ ಇಲ್ಲವೆ ಇತರ ಪರಿಸ್ಥಿತಿಗಳ ಪರಿಣಾಮವಾಗಿ

ಅವುಗಳು ಅವನ ಮೇಲೆ ಹೇರಲ್ಪಟ್ಟವೇ ಎಂಬುದು ನಿಜಕ್ಕೂ ಸಂಶೋಧನೆಗೆ ಯೋಗ್ಯವಾದ ವಿಷಯ. ಆದರೆ ಈ ಉದ್ದೇಶಗಳು ಸದಾ ಇದ್ದೇ ಇವೆ ; ಹಾಗೆಯೇ ಜೀವನದ ಅರ್ಥ ಕೂಡ : ನಾನು ಎಲ್ಲಿಂದ ಬಂದೆ ? ಎಲ್ಲಿಗೆ ಹೋಗುತ್ತೇನೆ ? ಏಕೆ ಮತ್ತು ಹೇಗೆ ಬದುಕುತ್ತೇನೆ ? ಮನುಷ್ಯನ ಜೀವನವನ್ನು ಇತಿಹಾಸದುದ್ದಕ್ಕೂ ಹಿಂಬಾಲಿಸಿಕೊಂಡು ಬಂದಂತೆ ಕಾಣುವ ಈ ಅನ್ವೇಷಣೆಯಲ್ಲಿ ಅವನು ಸಂಸ್ಥೆಗಳನ್ನು ಕಟ್ಟಿದ್ದಾನೆ. ಅವುಗಳನ್ನು ಹಾಳುಗೆಡವಿದ್ದಾನೆ; ಯುದ್ಧಗಳನ್ನು ಹೂಡಿದ್ದಾನೆ, ಶಾಂತಿಯ ಒಪ್ಪಂದಗಳನ್ನು ಮಾಡಿಕೊಂಡಿದ್ದಾನೆ. ಈ ಎಲ್ಲ ಬೆಳವಣಿಗೆಯಲ್ಲಿ ಇತಿಹಾಸದ ಕ್ರಮವನ್ನು ರೂಪಿಸುವ ಘಟನಾವಳಿಗಳ ಮೂಲಕ ಜೀವನದ ಈ ಗುರಿಯನ್ನು ಕಂಡುಕೊಳ್ಳಲು ಸಾಧ್ಯವೇ ಎಂಬುದನ್ನು ಪತ್ತೆಹಚ್ಚಲು ಅವನು ಮತ್ತೆ ಮತ್ತೆ ಪ್ರಯತ್ನಿಸಿದ್ದಾನೆ.

ಇತಿಹಾಸದಲ್ಲಿ ಯಾವುದೇ ನಿಯಮ ಅಥವಾ ಉದ್ದೇಶ ಅಥವಾ ಯೋಜನೆ ಇದೆ ಎಂದು ಒಪ್ಪಿಕೊಳ್ಳದಿರುವ ವಿಚಾರಧಾರೆಗಳು ಖಂಡಿತಾ ಇವೆ. ಇದೆಲ್ಲ ಆಕಸ್ಮಿಕ ಮತ್ತು ಅನಿರೀಕ್ಷಿತ ಶಕ್ತಿಗಳ ಲೀಲೆ ಎಂದು ಅವು ಭಾವಿಸುತ್ತವೆ. ಏನೋ ನಡೆಯುತ್ತದೆ, ಏಕೆ ನಡೆಯುತ್ತದೆಂದು ಯಾರಿಗೂ ಗೊತ್ತಿಲ್ಲ. ಸಂಗತಿಗಳನ್ನು ಸಂಗ್ರಹಿಸಿ, ಜೋಡಿಸಿ, ನಡೆದದ್ದರ ಬಗ್ಗೆ ಸ್ವಾರಸ್ಯಕರ ವಿವರಣೆಯನ್ನು ಮಾತ್ರ ಕೊಡಬಹುದು. ಇತಿಹಾಸವನ್ನು ಕಾದಂಬರಿಯ ಹಾಗೆ ಓದುವಂತೆ ಬರೆಯಬಹುದು. ಆದರೆ, ಅದಕ್ಕೆ ನಿಶ್ಚಿತವಾಗಿ ಯಾವುದೇ ಯೋಜನೆ ಅಥವಾ ಉದ್ದೇಶ ಇಲ್ಲ. ಅಂಥ ದೃಷ್ಟಿಕೋನ ಎಷ್ಟು ಸಮರ್ಥನೀಯ ಎಂಬುದನ್ನು ಪಂಡಿತರಿಗೇ ಬಿಡೋಣ. ಅಂಥ ಒಂದು ದೃಷ್ಟಿಕೋನದಲ್ಲಿ ನನಗೆ ಅಷ್ಟು ಆಸಕ್ತಿಯಿಲ್ಲ. ಏಕೆಂದರೆ ಕೆಲಸ ಮಾಡಲು ಪ್ರೇರೇಪಿಸುವ ಒಂದು ಉಪಕರಣವನ್ನು, ಒಂದು ವೈಚಾರಿಕ ಸಾಧನವನ್ನು ಅದು ನನಗೆ ಒದಗಿಸುವುದಿಲ್ಲ. ಆದರೆ, ಇತಿಹಾಸದಲ್ಲಿ ಯಾವುದೇ ಉದ್ದೇಶ ಅಥವಾ ಯೋಜನೆ ಇದೆ ಎಂದು ಒಪ್ಪಿಕೊಳ್ಳದ ವಿದ್ವಾಂಸರೂ ಇದ್ದಾರೆ ಎನ್ನುವುದನ್ನು ಈ ವಿಷಯ ಕುರಿತು ಯಾವುದೇ ಅಧ್ಯಯನ ಮಾಡುವಾಗಲೂ ಸದಾ ನೆನಪಿನಲ್ಲಿ ಇಟ್ಟುಕೊಂಡಿರಬೇಕು. ಅಂಥ ಉದ್ದೇಶಗಳು ಇವೆ ಎಂದು ನಾವು ಹುಡುಕುವಾಗಲೂ ನಮ್ಮ ಶೋಧನೆ ವ್ಯರ್ಥವಾಗುತ್ತದೆಂದು ಹೇಳುವ ಅಭಿಪ್ರಾಯ ಸಮೂಹವಿದೆ ಎನ್ನುವುದನ್ನು ನಾವು ಎಂದೂ ಮರೆಯಬಾರದು.

ಭಾರತದ ಇತಿಹಾಸದ ಮಾತಿರಲಿ, ಇಡೀ ಜಗತ್ತಿನಲ್ಲಿಯೇ ಇತಿಹಾಸದ ಸಂಗತಿಗಳನ್ನು ಸಂಗ್ರಹಿಸುವುದೇ ಕಷ್ಟವಾಗಿರುವಾಗ ಅದರ ಉದ್ದೇಶಗಳನ್ನೂ

ವ್ಯಾಖ್ಯಾನಗಳನ್ನೂ ಕುರಿತು ಏನು ತಾನೆ ಹೇಳೋಣ ? ಗೌತಮ ಬುದ್ಧನಿಗೆ ತನ್ನ ಯುಗದ ಶ್ರೇಷ್ಠ ನರ್ತಕಿಯನ್ನು ಪರಿಚಯಿಸಿದಾಗ- ಆಕೆ ತನ್ನ ಸಂಘಕ್ಕೆ ಸೇರಬೇಕೆಂದು ಆತನು ಬಯಸಿದಾಗ, ಬುದ್ಧನಿಗೆ ಏನನ್ನಿಸಿತು ಎಂದು ತಿಳಿಯಲು ನನಗೆ ಹೆಚ್ಚು ಆಸಕ್ತಿ ಉಂಟು. ಅತ್ಯಂತ ನಿಪುಣೆಯಾದ ಈ ಹೆಣ್ಣು ತನ್ನನ್ನು ಸಂಘಕ್ಕೆ ಸೇರಿಸಿಕೊಳ್ಳಬೇಕೆಂದು ಕೇಳಿಕೊಂಡಾಗ ಆತ ತುಸುವಾದರೂ ಪುಳಕಗೊಂಡನೆ ಎನ್ನುವುದು ನಮಗೆ ತಿಳಿಯದು. ಅದು ತಿಳಿಯುವುದು ಕೂಡ ಸಾಧ್ಯವಿಲ್ಲ. . ಏಕೆಂದರೆ ಬುದ್ಧನನ್ನು ಬಿಟ್ಟರೆ ಬೇರಾರಿಗೂ ಅಲ್ಲಿ ಏನು ನಡೆಯಿತೆಂದು ಗೊತ್ತಿಲ್ಲ. ಅಥವಾ ಬಹುಶಃ ಅವನಿಗೂ ಏನು ನಡೆಯಿತೆಂದು ಗೊತ್ತಿಲ್ಲದಿರಲು ಸಾಕು! ಕ್ಲಿಯೋಪಾತ್ರಳ ಅನುರಾಗದಲ್ಲಿ ಸೀಸರ್‌ನ ಸ್ಥಾನವನ್ನು ಆಂಟೋನಿ ಆಕ್ರಮಿಸಿದಾಗ ಅವಳಿಗೆ ಏನನ್ನಿಸಿತು ? ಯೇಸುವಿಗೂ ಸಹ ಅವನ ಮ್ಯಾಗ್ಡಲೀನ್ ಇದ್ದಳು. ತಮ್ಮ ಕಾಲದಲ್ಲಷ್ಟೇ ಅಲ್ಲದೆ, ಎಲ್ಲ ಕಾಲದಲ್ಲಿಯೂ ಜನರ ಮನಸ್ಸನ್ನು ಅತ್ಯಂತ ಪರಿಣಾಮಕಾರಿಯಾಗಿ ಪ್ರಭಾವಗೊಳಿಸಬಲ್ಲ ಈ ವ್ಯಕ್ತಿಗಳ ನಿಜವಾದ ಭಾವನೆಗಳು ಏನಿದ್ದವು ಎಂಬುದು ಇತಿಹಾಸಕ್ಕೆ ತಿಳಿಯದೇ ಉಳಿದುಬಿಡುತ್ತದಲ್ಲ?

ಭಾರತದಲ್ಲಿ ಜಾತಿ ಪದ್ಧತಿ ಹೇಗೆ ಹುಟ್ಟಿತು? ಸೋತ ಎಲ್ಲಾ ಬುಡಕಟ್ಟುಗಳು ಭಾರತದ ಜಾತಿ ಪದ್ಧತಿಯೊಳಗೆ ಬೆರೆತು ಹೋಗಿ ನಾನಾ ಜಾತಿಗಳಾದುವೆ ? ಇದು ಭಾರತೀಯ ಚರಿತ್ರಕಾರರಿಗೆ ಇನ್ನೂ ಇತ್ಯರ್ಥವಾಗದಿರುವ ವಿಷಯ. ಏಕೆಂದರೆ ಅವರಿಗೆ ವಸ್ತುಸ್ಥಿತಿಗಳು ತಿಳಿದಿಲ್ಲ. ವಾಸ್ತವವಾಗಿ ಪ್ರಪಂಚದ ಪ್ರತಿಯೊಂದು ಜನಾಂಗದ ಪ್ರಾರಂಭಕಾಲವೂ ದಂತಕಥೆ ಮತ್ತು ನಿಗೂಢತೆಯಲ್ಲಿ ಹುದುಗಿಹೋಗಿದೆ. ಪುರಾತತ್ತ್ವ ಶಾಸ್ತ್ರೀಯ ತುಣುಕುಗಳು ಮತ್ತು ಸಾಹಿತ್ಯಕ ಆಧಾರಗಳಿಂದ ಜನಾಂಗ ವಲಸೆಗಳ ಸಂಗತಿಗಳು, ಅವುಗಳ ಘರ್ಷಣೆಗಳು ಮತ್ತು ಖಂಡಗಳ ಸ್ಥಿರೀಕರಣವನ್ನು ಸಂಗ್ರಹಿಸಬೇಕಾಗಿದೆ. ಹೀಗೆ ಮಾಡುವಾಗ ಸಾಕಷ್ಟು ಊಹಾಪೋಹಗಳು ಅನಿವಾರ್ಯ. ಮಾನವನ ಇತಿಹಾಸವನ್ನು ಕುರಿತು ಚಿಂತಿಸುವಾಗ ಐತಿಹಾಸಿಕ ಜಿಜ್ಞಾಸೆಯು ವಸ್ತುಸ್ಥಿತಿಗಳ ಶೋಧನೆಯ ಬಗ್ಗೆ ಇನ್ನೂ ಕಾಳಜಿವಹಿಸಬೇಕಾಗಿದೆ ಹಾಗೂ ಅವುಗಳಲ್ಲಿ ಕೆಲವು ಶೋಧನಾತೀತವಾದುವುಗಳು ಎಂಬುದನ್ನು ನಾವು ಜ್ಞಾಪಕದಲ್ಲಿ ಇಟ್ಟುಕೊಳ್ಳುವುದು ಒಳ್ಳೆಯದು. ಕೆಲ ವಿಷಯಗಳಲ್ಲಂತೂ ಪುರಾವೆ ಮತ್ತು ಸಂಗತಿಗಳ ನಡುವಿನ ಘರ್ಷಣೆಯನ್ನು ತಪ್ಪಿಸಲು ಸಾಧ್ಯವೇ ಇಲ್ಲ. ಬಾಹ್ಯ ಜಗತ್ತು ಮತ್ತು ಘಟನೆಗಳ ಸಂದರ್ಭದಲ್ಲೇ ಈ ಪರಿಸ್ಥಿತಿ ಇರುವಾಗ ಇತಿಹಾಸದ ಮಹಾಪುರುಷರನ್ನು ಪ್ರಚೋದನೆಗೊಳಿಸಿದ ಆ ಸೂಕ್ಷ್ಮತರ ಸಂಕಲ್ಪಗಳು ಮತ್ತು ಭಾವನೆಗಳ ಬಗ್ಗೆ ಏನು ತಾನೆ ಹೇಳಲು ಸಾಧ್ಯ ? ಆದರೆ ಅವು ಅವರೆಲ್ಲರ ಆಳದ ಸುಪ್ತಪ್ರಜ್ಞೆಯಲ್ಲಿ

ತಂಗಿರಬೇಕು ಅಥವಾ ಬದುಕಿನ ಕ್ರಮಗಳು ಮತ್ತು ಉದ್ದೇಶಗಳನ್ನು ಅರಿಯಲು ಮುಖ್ಯ ಕೀಲಿಕೈಯಾದ ಅವುಗಳೆಲ್ಲ ನಮಗೆ ಸಂವಹನವಾಗಿಲ್ಲವೆಂದೇ ಅರ್ಥ. ಆದರೂ ಕೂಡ ಇತಿಹಾಸದ ತಾತ್ವಿಕತೆ ಕುರಿತ ಅನ್ವೇಷಣೆಯು ವಿನಯಪೂರ್ವಕವಾಗಿಯಾದರೂ ಮುಂದುವರಿಯಲೇಬೇಕು.

(1955)

(ಲೋಹಿಯಾ ಅವರ 'ವೀಲ್ ಆಫ್ ಹಿಸ್ಟರಿ' ಪುಸ್ತಕದ ಮೊದಲನೆಯ ಅಧ್ಯಾಯದ ಅನುವಾದ)

ಇಂಗ್ಲಿಷಿನಿಂದ ಕನ್ನಡಕ್ಕೆ : **ಕೆ.ಎಸ್. ಭಗವಾನ್**

ಗಾಂಧಿವಾದ ಮತ್ತು ಸಮಾಜವಾದ

ಮಹಾತ್ಮನೊಬ್ಬ ಅರ್ಧಶತಮಾನಕ್ಕಿಂತ ಹೆಚ್ಚಾಗಿ ಸಾರ್ವಜನಿಕ ಜೀವನಕ್ಕೆ ಸಂಬಂಧಪಟ್ಟಿದ್ದರೆ ಪರಸ್ಪರ ವಿರೋಧವಾಗಿ ಕಾಣಬಲ್ಲ ಹೇಳಿಕೆಗಳನ್ನು ಕೊಟ್ಟಿರುತ್ತಾನೆ. ಮಹಾತ್ಮಗಾಂಧಿ ತಮ್ಮ ಅಪೂರ್ವವಾದ ಅಂತರ್ ದೃಷ್ಟಿಯನ್ನೂ ಮೀರಿ, ಪರಸ್ಪರ ವಿರೋಧವೆಂಬಂತೆ ಕಾಣುವ ಹಲವು ಹೇಳಿಕೆಗಳನ್ನು ಬ್ರಿಟಿಷ್ ಸಾಮ್ರಾಜ್ಯದ ಮೇಲೂ, ಜಾತಿ ಪದ್ಧತಿಯ ಮೇಲೂ, ಬಂಡವಾಳ ಹಾಗೂ ಕೆಲಸಗಾರನ ಸಂಬಂಧದ ಮೇಲೂ ನೀಡಿದ್ದಾರೆ.

ಅವರ ದೃಷ್ಟಿಯಲ್ಲಿ ಜಾತಿಪದ್ಧತಿ ಧರ್ಮದ ಒಂದಂಗವಾಗಿತ್ತು. ಕೊನೆಗೆ ಅದನ್ನು ಭಯಾನಕ ಪಾಪವೆಂದು ಕರೆಯುವವರೆಗೂ ಅವರು ಹೋದರು. ಅವರ ದೃಷ್ಟಿಯಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಕೆಲವಂಶಗಳು ಭಾರತದ ಒಳಿತಿಗೆ ಸಹಾಯಕವಾಗಿವೆ ಎಂದಿತ್ತು. ಕೊನೆಗೆ ಅದು ರಾಕ್ಷಸೀಯ ಹಾಗೂ ಪೈಶಾಚಿಕ ಎಂದು ಕರೆಯುವವರೆಗೂ ಹೋದರು. ಸ್ವಂತ ಸ್ವತ್ತು ಅಪೇಕ್ಷಣೀಯವೆಂಬ ನಂಬಿಕೆಯಿಂದ ಹೊರಟಅವರು, ಕೊನೆಗೆ ಅದನ್ನು ಪರಿಹಾರರಹಿತವಾಗಿ ವಶಪಡಿಸಿ ಕೊಳ್ಳಬೇಕೆನ್ನುವವರೆಗೂ ಹೋದರು; ಜಮೀನಿನ ಮೇಲಿನ ಸ್ವಾಮ್ಯವನ್ನು ಕಿತ್ತುಹಾಕಬೇಕೆನ್ನುವವರೆಗೂ ಹೋದರು.

ಈ ಹೇಳಿಕೆಗಳು ಒಂದಕ್ಕೊಂದು ಎಷ್ಟೊಂದು ವಿರುದ್ಧವಾಗಿವೆ ಎಂದರೆ ಇನ್ಯಾರಾದರೂ ಈ ರೀತಿ ಮಾತಾಡಿದ್ದರೆ ಅದನ್ನು ಅಸಂಬದ್ಧ ಪ್ರಲಾಪವೆಂದು ಕರೆಯುತ್ತಿದ್ದೆವು. ಗಾಂಧೀಜಿಯವರ ಪ್ರತ್ಯೇಕ ಹೇಳಿಕೆಗಳನ್ನು ಅವುಗಳ ಅಂತಃ ಸತ್ವದ ಸಂಪೂರ್ಣ ಅನ್ವಯಕ್ಕಾಗಿ ಪರಾಮರ್ಶಿಸಬೇಕು. ಹಾಗೂ ಭವಿಷ್ಯದಲ್ಲಿ ಉದ್ಭವಿಸಬಹುದಾದ ಅದೇ ಬಗೆಯ ಸಂದರ್ಭಗಳಲ್ಲಿ ಅನ್ವಯಿಸಲಿಕ್ಕೂ ಮತ್ತು ಅವರ ಆಲೋಚನೆ ಹಾಗೂ ಕಾರ್ಯಕ್ರಮಗಳ ಮುಂದುವರಿಕೆಯ ಸಾಧ್ಯತೆಯನ್ನು ಕಂಡು ಹಿಡಿಯಲಿಕ್ಕೂ ಪ್ರಯತ್ನಿಸಬೇಕು. ಬೇರೊಂದು ಬಗೆಯ ಸನ್ನಿವೇಶದಲ್ಲಿ ಅವರು ಯಾವ ಬಗೆಯಾಗಿ ವ್ಯವಹರಿಸುತ್ತಿದ್ದರೆಂಬುದನ್ನು ಊಹಿಸಬೇಕಾದುದು

ಅಗತ್ಯ. ಅವರ ಮೊದಲಿನ ಬರವಣಿಗೆಗಳ ಮೂಲಕ ಅವರ ಆಶೋತ್ತರಗಳನ್ನು ಮಾತ್ರ ಗಮನಿಸಿದರೆ ಬಹುಶಃ ಅವರು ಬೆಳೆ ಬೆಳೆದಂತೆ ಮುಂದೆ ನುಡಿದ ಕೆಲವು ಹೇಳಿಕೆಗಳಿಗೆ ಪ್ರಾಯಶಃ ವಿರುದ್ಧವಾದುವುಗಳಾಗಿರುತ್ತವೆ.

ಗಾಂಧೀಜಿಯವರು ವ್ಯಕ್ತಿ, ಸಂದರ್ಭ ಇತ್ಯಾದಿಗಳಿಗೆ ತಕ್ಕಂತೆ ವಿವಿಧಾರ್ಥಗಳನ್ನೀಯುವ ಬುದ್ಧ ಅಥವಾ ಕ್ರಿಸ್ತರಿಗಿಂತ ಹೆಚ್ಚು ನಿಷ್ಪುಷ್ಟರಾದವರು. ಅದೇ ಸಂದರ್ಭದಲ್ಲಿ ಅವರು ಕಾರ್ಲ್‌ಮಾರ್ಕ್ಸ್ ಮುಂತಾದ ಅತ್ಯಂತ ತರ್ಕಶುದ್ಧವೂ ವಿಸ್ತೃತವೂ ಆದ ಶಾಸ್ತ್ರೀಯ ತತ್ವಚಿಂತನೆಯಿತ್ತವರಿಗಿಂತ ವ್ಯಾಪಕರಾದವರು. ಅಂದರೆ ತತ್ವಜ್ಞಾನಿಗಿಂತ ವ್ಯಾಪಕವಾದ ಹಾಗೂ ಸಾಧುಸಂತರಿಗಿಂತ ಸ್ಪಷ್ಟ ಹಾಗೂ ನಿಷ್ಪುಷ್ಟರಾದಂಥವರು ಗಾಂಧೀಜಿ. ಗಾಂಧೀಜಿಯವರು ಬರೆದ ಒಂದೇ ಒಂದು ತತ್ವ ಅಥವಾ ತರ್ಕಬದ್ಧವಾದ ಪ್ರಣಾಳಿಕೆ ಎಂದರೆ, ಯಾರಾದರೂ ಅಪರೂಪವಾಗಿ ಓದುವ ಹಿಂದ್ ಸ್ವರಾಜ್ ಒಂದೇ. ಮಹಾತ್ಮಾಗಾಂಧಿಯವರು ಭಾರತೀಯರನ್ನು ಹಾಗೂ ಜಗತ್ತನ್ನು ಪ್ರಭಾವಿತಗೊಳಿಸುವುದು ತಮ್ಮ ಬರವಣಿಗೆಗಳಿಂದ ಅಲ್ಲವೇ ಅಲ್ಲ. ಅವರ ಜೀವನ ವಿಧಾನ ಮತ್ತು ಕಾರ್ಯಗಳಿಂದ ಮಾತ್ರ. ಅವರ ಬರವಣಿಗೆಗಳೇನಿದ್ದರೂ ಅವರ ಜೀವನ ಹಾಗೂ ನಡವಳಿಕೆಯ ವಿವರಣೆ ಮಾತ್ರ. ಕೆಲವರ ಸಂದರ್ಭದಲ್ಲಿ ಬರವಣಿಗೆ ಹಾಗೂ ಮಾತುಗಳು ಮುಖ್ಯವಾಗಿ ಬಿಟ್ಟು ಅವರ ಜೀವನವು ಅದಕ್ಕೆ ಒಂದು ಬಗೆಯ ಉಪವಿವರಣೆ ಮಾತ್ರವಾಗಿರುತ್ತದೆ. ಮಹಾತ್ಮಗಾಂಧಿಯವರು ಬರೆದದ್ದೂ ಅಪಾರವಾಗಿ, ಮಾತನಾಡಿದ್ದೂ ಅಪಾರವಾಗಿ. ಅವರ ಬರವಣಿಗೆ ಹಾಗೂ ಮಾತುಕತೆಗಳು ಅವರ ಬದುಕು ಮತ್ತು ನಡವಳಿಕೆಗಳ ವಿವರಣೆ ಮಾತ್ರವಾಗಿದೆ.

ಆದುದರಿಂದ ಗಾಂಧೀಜಿಯವರ ಬದುಕಿನ ಅರ್ಥವನ್ನು ತಿಳಿಯಲು ಅವರ ಜೀವನ ಹಾಗೂ ಕಾರ್ಯಕ್ರಮಗಳಿಗೆ ಹೋಗಬೇಕೇ ಹೊರತು, ಅವರ ಮಾತು ಹಾಗೂ ಬರವಣಿಗೆಗಳಿಗಲ್ಲ. ಏಕೆಂದರೆ ಅದು ಅವರ ಜೀವನದ ವಿವರಣೆ ಮಾತ್ರವಾಗಿದೆ. ಅವರ ಜೀವನ ಕ್ರಮದಿಂದ ಒಂದು ಸಿದ್ಧಾಂತವನ್ನು ರೂಪಿಸಲು ಇನ್ನೂ ಯತ್ನಗಳನ್ನು ಮಾಡಬಹುದಾಗಿದೆ. "ಗಾಂಧಿವಾದ", "ಗಾಂಧಿವಾದಿ" ಮುಂತಾದ ಪದಗಳು ಇನ್ನೂ ನಮ್ಮ ದೇಶದಲ್ಲಿ ಆಕರ್ಷಕ ಕಲ್ಪನೆಗಳಾಗಿವೆ. ಏನೇ ಇರಲಿ, ಅಂಥದೊಂದು ಕಾರ್ಯಪದ್ಧತಿ ಅಥವಾ ಆಡಳಿತ ಸಂಪ್ರದಾಯ ಬರಲು ಕೆಲವು ಕಾಲ ಹಿಡಿಯಬಹುದು. ಪ್ರಸ್ತುತ ಅಂಥದೊಂದು ಕಾಣುತ್ತಿಲ್ಲ. ಅಂಥದೊಂದು ಹೇಗೆ ನಿರೂಪಿತವಾಗುತ್ತದೆಂಬುದನ್ನು ನಾನು ಅರಿಯೆ. ಆದರೆ ನಿರೂಪಿತವಾಗಬೇಕೆಂಬುದಂತೂ ಅಗತ್ಯ. ಗಾಂಧಿಯವರಂಥ ದೊಡ್ಡ ಚೈತನ್ಯಪೂರ್ಣ ಜೀವನದ ಮೇಲೆ ಅಂಥ ಮಾರ್ಗ ಆಧಾರಿತವಾಗಿರಬೇಕಾದುದೂ ನಿರ್ವಿವಾದವಾದುದು.

ಪ್ರಪಂಚವು ಈಗ ಎರಡು ರಾಜಕೀಯ ಪದ್ಧತಿಗಳ ಮುಷ್ಟಿಯಲ್ಲಿದೆ. ಮೂರನೆಯದೊಂದು ನಿರ್ಮಾಣವಾಗುತ್ತಿದೆ. ಬಂಡವಾಳಶಾಹಿ ಹಾಗೂ ಕಮ್ಯೂನಿಸಂ ಈ ಎರಡೂ ಕೂಡ ಸಂಪೂರ್ಣವಾದ ಸಮಗ್ರವಾದ ರಾಜಕೀಯ ಸಂಪ್ರದಾಯಗಳು. ಇಡೀ ಜಗತ್ತೇ ಈ ಎರಡರ ಕೈಯಲ್ಲಿದೆ. ಇದರ ಪರಿಣಾಮ ಬಡತನ, ಯುದ್ಧ, ಹಾಗೂ ಭಯ. ಮೂರನೆಯದೊಂದರ ಕಲ್ಪನೆಯು ಈಗಾಗಲೇ ಜಾಗತಿಕ ವೇದಿಕೆಯ ಮೇಲೆ ತನ್ನ ಅಸ್ತಿತ್ವವನ್ನು ರೂಪಿಸುತ್ತಿದೆ. ಅದು ಇನ್ನೂ ಅಸಮಗ್ರವೂ ಅಸಂಪೂರ್ಣವೂ, ಆದರೆ ತೆರೆದುದೂ ಆಗಿದೆ. ಸತ್ಯ ಮತ್ತು ಪ್ರಗತಿಗಳಿಗೆ ತೆರೆದ ಪದ್ಧತಿಯಲ್ಲಿ ಇನ್ನೂ ಸಾಧ್ಯತೆ ಇರುತ್ತದೆ. ಆದರೆ ಮುಚ್ಚಿದ ಅಥವಾ ನಿಷ್ಠುರವಾದ ಸಂಪ್ರದಾಯಗಳು ವಾಸ್ತವಾಂಶವನ್ನು ಮಲಿನಗೊಳಿಸಿ, ಅವುಗಳನ್ನು ನಿರರ್ಥಕ ಮಾಡಲು ಅಪಾರ ಹಿಂಸೆಗೆ ಇಳಿಯುತ್ತವೆ. ತೆರೆದ ಪದ್ಧತಿಗಳು, ನವೀನ ಘಟನೆಗಳು ವಾಸ್ತವಾಂಶಗಳ ಆಧಾರದ ಮೇಲೆ ಬದುಕುತ್ತವೆ, ಹಾಗೂ ಪುನಶ್ಚೈತನ್ಯಗೊಳ್ಳುತ್ತವೆ. ಇದೇ ಸಮಾಜವಾದದ ಕಲ್ಪನೆ. ಗಾಂಧಿವಾದ ಎಂಬ ಒಂದು ಹೊಸವಾದವನ್ನು ರೂಪಿಸುವುದರ ಬದಲು, ಗಾಂಧೀಜಿಯವರ ಜೀವನ ಹಾಗೂ ಕಾರ್ಯಕ್ರಮದ ಅಂತಸ್ಸತ್ವವು ಜಾಗತಿಕ ರಂಗದಲ್ಲಿ ಈಗಾಗಲೇ ಇರುವ ಪದ್ಧತಿಗಳೊಳಗೆ ಒಳಗೊಳ್ಳುವಂತೆ ಮಾಡುವುದು ಒಳ್ಳೆಯದು. ಬಂಡವಾಳಶಾಹಿ ಹಾಗೂ ಸಮತಾವಾದಗಳು ಆಗಲೇ ಮುಚ್ಚಿರುವ ಪದ್ಧತಿಗಳಾಗಿರುವುದರಿಂದ ಅವು ಗಾಂಧಿವಾದದಿಂದ ಪ್ರಭಾವಿತವಾಗುವುದು ಸಂಶಯವೇ ಸರಿ. ಅಲ್ಲದೆ ಸಮಾಜವಾದಕ್ಕೆ ಗಾಂಧೀಜಿಯವರ ಜೀವನವು, ಆ ವಾದವನ್ನು ಪರಿಶುದ್ಧಗೊಳಿಸಿ ಶೋಧಿಸುವ ಜರಡಿಯಾಗಬಹುದು. ಗಾಂಧಿಯವರ ಜೀವನ ಮಾರ್ಗಗಳು ಬಂಡವಾಳಶಾಹಿ ಹಾಗೂ ಸಮತಾವಾದವನ್ನು ಪ್ರಭಾವಿತಗೊಳಿಸುವುದಾದರೆ- ನನಗಿಂತಲೂ ಸಂತುಷ್ಟನಾಗುವವನು ಯಾವನೂ ಇರಲಾರ. ಆದರೆ ಆ ಬಗ್ಗೆ ಎಲ್ಲರಿಗೂ ಸಂದೇಹವಿದೆ. ಹಾಗಾದರೆ ಗಾಂಧೀಜಿಯವರ ನಿಜವಾದ ಮೌಲ್ಯಗಳು ಅವರ ಯಾವ ಕಾರ್ಯಕ್ರಮಗಳೊಳಗೆ ಇವೆ?

ಗಾಂಧೀಜಿಯವರು ದುಃಖ ದಾರಿದ್ರ್ಯ ಕಷ್ಟಗಳಲ್ಲಿ ತೊಳಲಾಡುತ್ತಿರುವ ಕೋಟ್ಯಾನುಕೋಟಿ ಜನಗಳಿಗೆ ವಾಣಿಯಾಗಿ, ವಕ್ತಾರರಾದರು, ಅವರ ಪಾಲಿಗೆ ನೆಮ್ಮದಿಯೆನಿಸಿದರು ಎಂಬುದನ್ನು ಎಲ್ಲರೂ ಬಲ್ಲರು. ಜಗತ್ತಿನ ಯಾವುದೇ ಭಾಗಗಳಿಗೆ ಹೋದರೂ ಅಗಣಿತ ಜನಕೋಟಿ ಅನ್ಯಾಯದ ವಿರುದ್ಧ ಹೋರಾಡುವ ಮಹಾನ್ ಸಂಕೇತವಾಗಿ, ಆ ಹೋರಾಟದ ಸಂಕಟದಲ್ಲಿಯೇ ಧನ್ಯತೆಯನ್ನು ಕಾಣುವ, ಸರ್ಕಾರ ಅಥವಾ ಕಾನೂನುಗಳು ಎಲ್ಲಕ್ಕೂ ಅತೀತವಾದ, ಕೇವಲ ಜೀವನದ ದೆಸೆಯಿಂದಲೇ ಉದ್ಭವಿಸುವ ಯಾತನೆಯ ಅನುಭವದಲ್ಲಿಯೂ ಧನ್ಯತೆಯನ್ನು ಕಾಣುವ ಮಹಾನ್ ಸಂಕೇತವಾಗಿ ಗಾಂಧಿಯನ್ನು ಕಾಣುತ್ತಾರೆ.

ನಮ್ಮ ಜಗತ್ತಿನಲ್ಲಿ ದಬ್ಬಾಳಿಕೆಯನ್ನು ವಿರೋಧಿಸಿದ ಇತರೆ ವ್ಯಕ್ತಿಗಳು ಇಲ್ಲವೆಂದಲ್ಲ. ನಮ್ಮ ಜಗತ್ತು ಭೀಕರವಾದ ದಬ್ಬಾಳಿಕೆಯನ್ನು ಕಂಡಿರುವುದರ ಜೊತೆಗೇ ಮಹಾನ್ ವೀರಾಗ್ರಣಿಗಳ ಪ್ರತಿರೋಧವನ್ನು ಕಂಡಿದೆ. ಹಾಗಿದ್ದರೆ ಏಕೆ ಈತನೊಬ್ಬನನ್ನೇ ಜಗತ್ತು ಪ್ರತ್ಯೇಕವಾಗಿ ದಬ್ಬಾಳಿಕೆಯ ವಿಶಿಷ್ಟ ಪ್ರತಿರೋಧಿಯನ್ನಾಗಿ ಪರಿಗಣಿಸುತ್ತದೆ? ಅದಕ್ಕೆ ಕಾರಣ ನೇರವಾಗಿಯೇ ಇದೆ. ಆಧುನಿಕ ಜಗತ್ತು ಹಾಗೂ ಆಧುನಿಕ ಸಂಸ್ಕೃತಿ ಎಷ್ಟೊಂದು ಶಕ್ತವಾದುದೆಂದರೆ, ಎಷ್ಟೊಂದು ಸಾಮೂಹಿಕ ಹಾಗೂ ಸಮಷ್ಟಿಬದ್ಧವೆಂದರೆ ವ್ಯಷ್ಟಿ ಅಥವಾ ವ್ಯಕ್ತಿ ನಿರ್ಬಲ ಹಾಗೂ ಗಣನೆಗೆ ಬಾರದವನಾಗಿದ್ದಾನೆ. ಈ ಆಧುನಿಕ ನಾಗರಿಕತೆಯು ಎಲ್ಲಿಂದ ಉದ್ಭವಿಸಿತೆಂಬುದು ಒತ್ತಟ್ಟಿಗಿರಲಿ. ಅದು ಸಮಷ್ಟಿಯ ಗುಂಪಿನ ಅಡಿಯಾಳು. ಒಬ್ಬ ವ್ಯಕ್ತಿಯು ತನ್ನ ಗುಂಪಿನಲ್ಲಿ ತನ್ನನ್ನು ಎಷ್ಟರಮಟ್ಟಿಗೆ ಗುರುತಿಸಿಕೊಳ್ಳುತ್ತಾನೆ ಆ ಮಟ್ಟಿಗೆ ಮಾತ್ರ ಆತ ಸಶಕ್ತ, ಸಬಲ. ಯೂರೋಪ್ ಕೂಡ ಅನ್ಯಾಯದ ವಿರುದ್ಧ ಹೋರಾಡಿದೆ, ಆದರೆ ಸಮಷ್ಟಿಯಲ್ಲಿ. ಯೂರೋಪಿಯನ್ನರೂ ವೀರೋಚಿತ ಹೋರಾಟವನ್ನು ಅನ್ಯಾಯದ ವಿರುದ್ಧ ನಡೆಸಿದ್ದಾರೆ. ಆದರೆ ತಮ್ಮ ಹಿಂದೆ ಒಂದು ಗುಂಪು, ಸಂಸ್ಥೆ ಇಲ್ಲವೆ ವ್ಯವಸ್ಥೆ ಇದ್ದಾಗ ಮಾತ್ರ ಮತ್ತು ಆಯುಧೋಪಕರಣಗಳೊಡನೆ ಮಾತ್ರ. ಒಬ್ಬ ವ್ಯಕ್ತಿಯು ಯೂರೋಪಿನಲ್ಲಿ ನಿರ್ಬಲ. ಆತನು ಒಂದು ಗುಂಪಿನಲ್ಲಿದ್ದಾಗ ಮಾತ್ರ ಕಾರ್ಯಪ್ರವೃತ್ತನಾಗುವನು. ಆತನು ಏಕಾಂಗಿಯಾಗಿದ್ದರೆ, ಪರಿಸ್ಥಿತಿಯು ಪ್ರತಿಕೂಲವಾಗಿ ಸಮಷ್ಟಿಯ ಸಹಾಯವಿಲ್ಲದೇ ಹೋದರೆ ಇಲಿಯಂತಾಗುತ್ತಾನೆ.

ಹಿಟ್ಲರನು ಜರ್ಮನಿಯಲ್ಲಿ ಅಧಿಕಾರಕ್ಕೆ ಬಂದಾಗ ಧೈರ್ಯವಂತರೂ ಚಿಂತನಶೀಲರೂ ವೀರರೂ ಆದ ಯೂರೋಪಿನ ಸಮಾಜವಾದಿಗಳೂ ಸಮತಾವಾದಿಗಳೂ ಸತ್ವಹೀನರಾಗಿ ಅತ್ತಿಂದಿತ್ತ ಇತ್ತಿಂದತ್ತ ಹಿಟ್ಲರನಿಂದ ತಪ್ಪಿಸಿಕೊಂಡು ಆಶ್ರಯ ಹುಡುಕುತ್ತಾ ಅಕ್ಷರಶಃ ಇಲಿಗಳಂತೆಯೇ ವರ್ತಿಸಿದ್ದನ್ನು ನೋಡಬಹುದು. ಸಂಸ್ಥೆಗಳ ಹಾಗೂ ಆಯುಧೋಪಕರಣಗಳ ಬೆಂಬಲವಿಲ್ಲದ ವ್ಯಕ್ತಿಯು ಆಧುನಿಕ ನಾಗರಿಕತೆಯ ವಲಯದಲ್ಲಿ ಸತ್ವಹೀನನಾಗುವನು. ಈ ಸಂದರ್ಭದಲ್ಲಿಯೇ ಮಹಾತ್ಮಗಾಂಧಿ ತಮ್ಮ ಹಿಂದೆ ವ್ಯಾಪಕ ಜನ ಹಾಗೂ ಸಂಸ್ಥೆಗಳ ಬೆಂಬಲವಿಲ್ಲದಿದ್ದರೂ, ಹೋರಾಡಲು ಯಾವ ಆಯುಧವಿಲ್ಲದಿದ್ದರೂ ಅನ್ಯಾಯ ಹಾಗೂ ದಬ್ಬಾಳಿಕೆಯ ವಿರುದ್ಧ ಸೆಣೆಸಲು ಹಾಗೂ ಸಂಕಟವನ್ನು ಗಂಭೀರವಾಗಿ ಸಹಿಸಲು ತನ್ನ ಅಂತರಂಗದಲ್ಲಿ ಏನೋ ಒಂದು ಇದೆ ಎಂದು ತೋರಿಸಿದರು. ಕಳೆದ ಮೂವತ್ತು ವರುಷದಲ್ಲಿ ಗಾಂಧಿಯವರ ಈ ಅಪೂರ್ವವೂ ಅಮೋಘವೂ ಆದ ಕಾರ್ಯಗಳೇ ಆಧುನಿಕ ಮಾನವನನ್ನು ಆಕರ್ಷಿಸಿವೆ ಹಾಗೂ ಭವಿಷ್ಯವು ಇನ್ನೂ ಆಶಾದಾಯಕ ನವೀನ ಜಗತ್ತನ್ನು ಒಳಗೊಂಡಿದೆ ಎಂದು ನಂಬುವಂತೆ ಮಾಡಿವೆ.

ಗಾಂಧೀಜಿಗೆ ಇನ್ನೂ ಅನೇಕ ಗುಣಗಳಿದ್ದವು. ಅವನ್ನು ನಾನು ವಿವರಿಸುವ ಗೋಜಿಗೆ ಹೋಗುವುದಿಲ್ಲ. ಅದೆಂಥದೆಂದರೆ, ಮಗನನ್ನು ಕಳೆದುಕೊಂಡ ತಾಯಿಯೇ ಆಗಲಿ, ಪ್ರೇಯಸಿಯನ್ನು ಕಳೆದುಕೊಂಡ ಪ್ರಿಯತಮನೇ ಆಗಲಿ ಅವರಿಂದ ಏನೋ ಒಂದು ಸಮಾಧಾನ ಅಮಾಧಾನ ಶಾಂತಿ ಪಡೆಯುತ್ತಿದ್ದರು.ಇದೊಂದು ಅತ್ಯಂತ ವಿಚಿತ್ರ ಸಂಗತಿ. ಆದರೂ ಸತ್ಯಸಂಗತಿ. ಎಲ್ಲ ದೀನರೂ ದಲಿತರೂ ಸಂಕಟಕ್ಕೊಳಗಾದವರೂ ಅವರಲ್ಲಿ ಧನ್ಯತೆಯನ್ನು, ಶಾಂತಿಯನ್ನು ಹೊಂದುತ್ತಿದ್ದರು. ಆದುದರಿಂದಲೇ ಆತ ಸತ್ತಾಗ ಕೋಟಿಗಟ್ಟಲೆ ಜನರು ಅನುಭವಿಸಿದ ಹತಾಶೆ, ದುಃಖ ಇವು ಹಿಂದೆಂದೂ ಸಂಭವಿಸಿರಲಿಲ್ಲ. ಆ ಬಗೆಯ ಸಣ್ಣ ಸಂಗತಿಗಳು ಪ್ಯಾರಿಸ್ಸಿನಿಂದ ನ್ಯೂಯಾರ್ಕಿನವರೆಗೆ ಅಥವಾ, ಬರ್ಲಿನ್‌ನಿಂದ ಮಾಸ್ಕೋವರೆಗೆ, ಒಬ್ಬ ಟ್ಯಾಕ್ಸಿ ಡ್ರೈವರನೋ, ಕೂಲಿಯೋ ಪೋರ್ಟರನೋ, ಅಥವಾ ಶಾಲೆಯ ಉಪಾಧ್ಯಾಯನೋ ಹೇಗೆ ಗಾಂಧಿಯ ನಿರ್ಗಮನವನ್ನು ಜಗತ್ತಿನಲ್ಲಿ ಅನುಭವಿಸಿದನೆಂದು ತಿಳಿಸುತ್ತವೆಂದು ನನ್ನ ಊಹೆ.

ನನಗೆ ಅನಿಸುವ ಹಾಗೆ ಒಬ್ಬ ವ್ಯಕ್ತಿ ಯಾವುದೇ ಆಸರೆಯಿಲ್ಲದೆ ದಬ್ಬಾಳಿಕೆಯನ್ನು ಎದುರಿಸಲು ಸಾಧ್ಯವಾಗುವಂತೆ ಮಾಡುವ ಈ ಗುಣ ಮಹಾತ್ಮಾ ಗಾಂಧಿಯವರ ಬದುಕು ಮತ್ತು ಕಾರ್ಯಸಾಧನೆಯಲ್ಲಿ ಅತ್ಯಂತ ಮಹಾನ್ ಗುಣವೆನಿಸಿತ್ತು.

ಈ ಹಂತದಲ್ಲಿ ಬಹುಶಃ ಯಾರಾದರೂ ದಾರಿ ಅಥವಾ ವಿಧಾನ ಮತ್ತು ಗುರಿಯ ಬಗ್ಗೆ ಯೋಚಿಸಬಹುದು. ದಾರಿ ಮತ್ತು ಗುರಿಗಳು ಗಾಂಧಿಯವರ ಕಾರ್ಯದ ಸಮಾನತೆ ಬಗ್ಗೆ ನಿಕಟ ಸಂಪರ್ಕ ಹೊಂದಿದೆ. ದಾರಿ ಮತ್ತು ಗುರಿಗಳು ತತ್ವಜ್ಞಾನಿ ಜಾನ್‌ಡೇವಿ ಪ್ರಕಾರ ಪರಸ್ಪರ ಬದಲಿಸಬಹುದಾದಂಥವು. ಕ್ಷಿಪ್ರವಾದುದಾದರೆ ದಾರಿಯೇ ಗುರಿಯೂ ಆಗಿರುತ್ತದೆ. ವಿಸ್ತಾರವಾದುದಾದರೆ ಗುರಿಯೇ ದಾರಿಯೂ ಆಗಿರುತ್ತದೆ. ಒಬ್ಬನು ತನ್ನ ಗುರಿಯನ್ನು ತಲುಪಲು ಯಾವುದೇ ವಿಧಾನವನ್ನನುಸರಿಸಲಿ, ವಿಸ್ತಾರವಾದ ಕಾಲಾಂತರದಲ್ಲಿ ತಾನೇ ಗುರಿಯೂ ಆಗಿ ಸಂಭವಿಸುತ್ತದೆ. ಅಥವಾ ಒಬ್ಬ ಯಾವುದೇ ಗುರಿಯನ್ನು ಸಾಧಿಸಲು ಯತ್ನಿಸಿ ಬಹುಬುದ್ಧಿವಂತಿಕೆಯಿಂದ ಸಾಧಿಸಹೊರಟರೆ ಆ ದಾರಿಗಳುಗುರಿಗಳ ಕಾಲಾನುಕ್ರಮದ ಸಾಧನೆಗಳೇ ಆಗಿರುತ್ತವೆ. ಸುಳ್ಳಿನ ಮುಖಾಂತರ ಸತ್ಯವನ್ನು, ಕೊಲೆಯ ಮುಖಾಂತರ ಸರ್ವರ ಕ್ಷೇಮವನ್ನು, ಪ್ರಪಂಚದ ಏಕತೆಯನ್ನು, ನಮ್ಮ ದೇಶದ ಸ್ವಾತಂತ್ರ್ಯತ್ಯಾಗದ ಮುಖಾಂತರ ಸರ್ವಾಧಿಕಾರದ ಮೂಲಕ ಪ್ರಜಾತಂತ್ರವನ್ನು ಎಂದೆಂದಿಗೂ ಸಾಧಿಸಲು ಸಾಧ್ಯವೇ ಇಲ್ಲ. ಇವು ಸ್ವತಸ್ಸಿದ್ಧವಾದ ಸತ್ಯಗಳು. ಯಾವ ದಾರಿಯನ್ನು

ಹಿಡಿಯುತ್ತೇವೋ ಅದು ತತ್ಕಾಲಕ್ಕೆ ಗುರಿಯೂ ಆಗುತ್ತದೆ. ಅಂಥದರಲ್ಲಿ ಒಂದು ಪಂಥದ ಅನುಯಾಯಿಗಳು ನಮ್ಮ ದೇಶದ ಸ್ವಾತಂತ್ರ್ಯವನ್ನು ಬಿಟ್ಟು ಕೊಡುವುದು ಅಥವಾ ಸರ್ವಾಧಿಕಾರಿ ಆಡಳಿತಕ್ಕೆ ಶರಣಾಗುವುದು ಅಥವಾ ಸುಳ್ಳು ಹೇಳುವುದು ಇತ್ಯಾದಿಗಳಿಂದ ಇವುಗಳಿಗೆ ತದ್ವಿರುದ್ಧವಾದುವುಗಳನ್ನು ಸಾಧಿಸುತ್ತೇವೆನ್ನುವುದು, ನಾವು ಏನನ್ನು ಯಾವ ಯಾವ ಘಟ್ಟಗಳಲ್ಲಿ ಸಾಧಿಸುತ್ತೇವೆಯೋ ಅವು ಅಂತ್ಯದ ಒಟ್ಟಿನ ಸಾಧನೆಯಲ್ಲಿ ಪಾಲ್ಗೊಳ್ಳುತ್ತವೆ ಎನ್ನುವ ಸರಳವೂ, ಸಾಮಾನ್ಯವೂ, ಸ್ವತಸ್ಸಿದ್ಧವೂ ಆದ ನಿಯಮ ಒಂದಕ್ಕೆ ವಿರೋಧವಾದುದು. ಇದಕ್ಕೆ ಯಾವ ವಿಶೇಷತರ್ಕವೂ ಅನವಶ್ಯಕ. ದಾರಿ ಹಾಗೂ ಗುರಿ ಇವೆರಡನ್ನೂ ಸಂಪೂರ್ಣವಾಗಿ ಒಂದೇ ಎಂದು ಹೇಳಲಾಗದಿದ್ದರೂ ಅವು ಒಂದಕ್ಕೊಂದಕ್ಕೆ ಅತ್ಯಂತ ನಿಕಟ ಸಂಬಂಧಿಗಳಾಗಿರುವುದರಿಂದ, ಅವುಗಳ ವಿರೋಧವಾದವುಗಳು ವಿರೋಧವಾಗಿಯೇ ಉಳಿಯುತ್ತವೆ. ಆದ್ದರಿಂದ ಗಾಂಧೀಜಿಯವರು ಆಗಾಗ "ಒಂದೇ ಒಂದು ಹೆಜ್ಜೆ ನನಗೆ ಸಾಕು" ಎಂದೆನ್ನುತ್ತಿದ್ದರು. ಒಂದೇ ಹೆಜ್ಜೆ ನನಗೆ ಸಾಕೆನ್ನುವ ಸಿದ್ಧಾಂತವು ದಾರಿ ಮತ್ತು ಗುರಿ ಸಿದ್ಧಾಂತದ ನಿಕಟ ಸಂಬಂಧಿಯೂ ಹಾಗೂ ಅದಕ್ಕಿಂತ ಮಹತ್ವವಾದುದೂ ಆಗಿದೆ.

ಈಗ ಜಗತ್ತು ಭವಿಷ್ಯದ ಬಗೆಗೆ ಎಷ್ಟೊಂದು ಕಾತರವಾಗಿದೆ ಎಂದರೆ ಯಾವುದೇ ಗುರಿಯನ್ನು ಮುಂದಿರಿಸಿಕೊಳ್ಳಲಿ, ವರ್ತಮಾನಸ್ಥಿತಿಯನ್ನು ಅಲಕ್ಷಿಸುತ್ತದೆ. ಈಗ ಯಾರೂ ಸಾಕಷ್ಟು ಗಮನವನ್ನು ತಮ್ಮ ತತ್‌ಕ್ಷಣದ ಕಾರ್ಯಕ್ರಮಗಳಿಗೆ ಕೊಡುತ್ತಿಲ್ಲವೆಂದ ಕಾರಣ, ಒಂದು ಬಗೆಯ ಅಂಧಶ್ರದ್ಧೆ ಜನಗಳಲ್ಲಿ ಬೆಳೆಯುತ್ತಿದೆ. ಈ ಸದ್ಯದ ಕಾರ್ಯಕ್ರಮವು ನಿನ್ನ ಮುಂದಿನ ಗುರಿಗೆ ಹೇಗೆ ಸಂಬಂಧಿಯಾಗಿದೆ ಎಂದು ಯಾರಾದರೂ ಕೇಳಿದರೆ, ಮುಂದಿನ ಕಾರ್ಯಕ್ರಮಗಳವರೆಗೆ ಕಾದು ನೋಡು ಎಂದೆನ್ನುತ್ತಾರೆ. ಈ ಕಾಯುವಿಕೆಯಲ್ಲಿಯೇ ಅದರ ಮುಂದಿನ ಕಾರ್ಯಕ್ರಮಕ್ಕೂ ಅದು ವಿಸ್ತರಿಸಿರುತ್ತದೆ. ಇದೇ ರೀತಿ ಈ ಕಾರ್ಯಗಳ ಸರಪಣಿಯು ಅನಂತವಾಗಿ ವಿಸ್ತಾರಗೊಂಡು, ಯಾವೊಂದು ಕಾರ್ಯವೂ ತನ್ನನ್ನು ತಾನು ಸಮರ್ಥಿಸಿಕೊಳ್ಳುವುದೇ ಇಲ್ಲ. ಅದರ ಸಮರ್ಥನೆಯನ್ನು ಅದರ ಮುಂದಿನ ಕ್ರಿಯೆಯಲ್ಲಿ ಕಾಣಬಯಸುತ್ತೇವೆ. ಅದು ಎಂದೂ ಸಂಭವಿಸುವುದೇ ಇಲ್ಲ. ಈ ಕ್ರಿಯೆಯ ಸರಪಳಿ ಅನಂತವಾಗಿ ಮುಂದುವರೆಯುತ್ತಲೇ ಇರುತ್ತದೆ. ಸತ್ಯದ ಹಾಗೂ ಪ್ರಪಂಚದ ಶಾಂತಿಯ ಹೆಸರಿನಲ್ಲಿ, ಸಮೃದ್ಧಿಯ ಹೆಸರಿನಲ್ಲಿ ಕ್ರೌರ್ಯ ತಾಂಡವವಾಡುತ್ತಿದೆ. ಇಂದಿನ ಪ್ರಪಂಚ 'ಒಂದೇ ಒಂದು ಹೆಜ್ಜೆ ನನಗೆ ಸಾಕು' ಎನ್ನುವ ತತ್ವವನ್ನು ಎಷ್ಟೊಂದು ಮರೆತಿದೆ ಎಂದರೆ ಕರಾಳ ಕುತರ್ಕ, ಅಂಧಶ್ರದ್ಧೆ ಇತ್ಯಾದಿ ತಾಂಡವವಾಡುತ್ತಿವೆ. ಅಂಥ ತತ್ವಗಳು ತಮ್ಮ ವಿಜ್ಞಾನ ಹಾಗೂ ತರ್ಕಗಳನ್ನು ಹೊಗಳಿಕೊಳ್ಳುತ್ತವೆ. ಆದರೆ ಒಬ್ಬನು

ಒಂದು ಕಾರ್ಯದ ತತ್ಪರಿಣಾಮದಲ್ಲಿ ಮಾತ್ರವೇ ಲೀನನಾಗಿ ತನ್ನ ಅಂತಿಮ ಗುರಿಯನ್ನು ಮರೆಯಬೇಕೆಂದೇನೂ ಅಲ್ಲ. ತತ್ಫಲಗಳು ಕೇವಲ ಮುಂಬರುವ ಬದಲಾವಣೆಗೆ ಬೇಕಾದ ಅವಸ್ಥಾಂತರ ಮಾತ್ರವೆಂದು ಅದನ್ನು ಅಲಕ್ಷಿಸುವ ಅಗತ್ಯವೇನೂ ಇಲ್ಲ ಎಂದಷ್ಟೇ ಇದರ ಅರ್ಥ.

ತತ್ಫಲಗಳನ್ನು ಅಥವ ಶೀಘ್ರಫಲಗಳನ್ನು ಮಾತ್ರವೇ ಲಕ್ಷಿಸುವವರು ತಮ್ಮ ಮುಂದಿರುವ ಗುರಿಯನ್ನು ಮರೆತೇಬಿಡುತ್ತಾರೆಂಬ ಭಯವಿದೆ. ಇದು ಮತ್ತೆ ಸದ್ಯದ ಕಾರ್ಯಕ್ರಮಗಳನ್ನು ಅಲಕ್ಷಿಸಿ, ಗುರಿಯನ್ನು ಮಾತ್ರ ಲಕ್ಷಿಸುವಷ್ಟೇ ಕೆಟ್ಟದಾದುದು. ಅನೇಕ ಸಾರಿ ನಾನು ಯೋಚಿಸಿದಾಗ ಗಾಂಧೀಜಿಯವರನ್ನು ಕುರಿತು ಹೀಗೆ ಕಲ್ಪಿಸಿಕೊಂಡಿದ್ದೇನೆ-''ಊರ್ಧ್ವಗಾಮಿಯಾದ ಹೆಜ್ಜೆಗಳ ಮಾಲೆ, ಎಲ್ಲವೂ ಒಂದೇ ಗುರಿಯತ್ತ ಇಟ್ಟವು. ಆದರೆ ಅದರ ಅಂತ್ಯವು ಎಂದೂ ರೂಪುಗೊಂಡಿಲ್ಲ. ಹಾಗೂ ಅದು ಅನಂತವಾಗಿ ಊರ್ಧ್ವಗಾಮಿಯಾದುದು. ಆತ ಬಹು ಜಾಗರೂಕತೆಯಿಂದ ಭದ್ರವಾಗಿ ಹೆಜ್ಜೆ ಹಾಕುವಂಥವನು. ತನ್ನ ಕೋಟ್ಯಾನುಗಟ್ಟಲೆ ದೇಶಬಾಂಧವರನ್ನು ಕರೆದೊಯ್ಯುವಂಥವನು''. ಆ ''ಒಂದು ದೃಢ ಹೆಜ್ಜೆ ನನಗೆ ಸಾಕು''.

ಅನೇಕ ಪಕ್ಷಗಳೂ, ಪಂಥಗಳೂ ತಮ್ಮ ಅಂತಿಮ ಗುರಿಯನ್ನು ಸ್ಪಷ್ಟವಾಗಿಯೂ ಸಮಗ್ರವಾಗಿಯೂ ರೂಪಿಸಿಕೊಂಡಂಥವಾಗಿವೆ. ಅವು ಬಹುಶಃ ತಮ್ಮ ಸದ್ಯದ ಕಾರ್ಯಕ್ರಮವನ್ನು ತಮ್ಮ ಅಂತಿಮ ಗುರಿಯೊಂದಿಗೆ ಸಮರ್ಪಕವಾಗಿ ಸಂಬಂಧಿಸ ಬಲ್ಲಂಥವು. ಅವು ತಮ್ಮ ಗುರಿಯತ್ತ ಎಷ್ಟೊಂದು ಅವಸರದಿಂದ ಧಾವಿಸುತ್ತವೆಂದರೆ ಅವುಗಳ ಅಸಂಖ್ಯಾತ ಹಿಂಬಾಲಕರು ಅವುಗಳನ್ನು ಅನುಸರಿಸಲಾರರು. ಆದರೆ-ಈ ಸಿದ್ಧಾಂತ, ಒಂದು ಹೆಜ್ಜೆಯು ಇನ್ನೊಂದು ಹೆಜ್ಜೆಯನ್ನು ಅನುಸರಿಸುವ ಮಹಾತ್ಮನೋರ್ವನೇ ಅಲ್ಲದೆ ಅವನ ಹಿಂಬಾಲಕರೂ ಸಹ ಅಂತ್ಯವಿಲ್ಲದ ಈ ಸೋಪಾನಗಳನ್ನು ನಿರ್ದಿಷ್ಟ ದಿಕ್ಕಿನಲ್ಲಿ ಹತ್ತುತ್ತಾ ಹೋಗುವಂಥದು. ಮಹಾತ್ಮ ಗಾಂಧಿಯವರನ್ನು ಕುರಿತು ಆಲೋಚಿಸಿದಾಗಲೆಲ್ಲಾ ನನ್ನ ಮನಸ್ಸಿನಲ್ಲಿ ಉದ್ಭವಿಸುವ ಕಲ್ಪನೆ ಇದು. ಆದರೆ ಎಲ್ಲ ಪ್ರತಿಮೆಗಳು ಕಣ್ಮರೆಯಾಗುವಂತೆ ಇದೂ ಕಣ್ಮರೆಯಾಗಬೇಕು. ಇದು ಅತ್ಯಂತ ಸಮಗ್ರ ಹಾಗೂ ಸಂಪೂರ್ಣ ಎಂದು ತಿಳಿಯಬಾರದು. ಎಷ್ಟೋ ಸಾರಿ ಗಾಂಧಿ ಅನೇಕ ಸಂದರ್ಭಗಳಲ್ಲಿ ಏನನ್ನು ಮಾಡಿದರೋ, ಅದಕ್ಕಿಂತ ಬೇರೆಯ ರೀತಿಯಲ್ಲಿ ಕೆಲಸ ಮಾಡಬೇಕಿತ್ತೆನಿಸುತ್ತದೆ. ಒಬ್ಬ ಗಾಂಧೀಜಿಯಂತಹ ಮಹಾನ್ ವ್ಯಕ್ತಿಯ ಬಗ್ಗೆ ಆಲೋಚಿಸುವಾಗ ಅವರ ಬಗೆಗಿನ ವಾಸ್ತವಗಳೆಲ್ಲವನ್ನೂ ಆದರ್ಶವೆಂದು ಪರಿಗಣಿಸಬಹುದು. ನಾನು ಹಲವಾರು ಬಾರಿ ಕ್ಯಾಥೊಲಿಕ್‌ರಂತೆಯೂ, ಕಮ್ಯುನಿಸ್ಟರಂತೆಯೂ ಗಾಂಧಿಯವರ ಬಗ್ಗೆ

ಆಲೋಚಿಸಿದ್ದೇನೆ. ಕಮ್ಯುನಿಸ್ಟನು ತನ್ನ ಆದರ್ಶವನ್ನು ಯಾವುದೋ ಒಂದು ಕಾಲದಲ್ಲೋ ಒಂದು ದೇಶದಲ್ಲೋ ಅಥವಾ ಒಬ್ಬ ವ್ಯಕ್ತಿಯಲ್ಲೋ ಮೂರ್ತೀಭವಿಸುವಂತೆ ಕಂಡರಿಸುವವನು. ಆಗ ಆತನ ವಿಮರ್ಶನ ಶಕ್ತಿ ಎಲ್ಲ ಕ್ಷೀಣಿಸಿ, ಆತನ ಆದರ್ಶದ ಕುಂದುಕೊರತೆಗಳೆಲ್ಲವೂ ಅವನಿಗೆ ಕಾಣದಂತಾಗುತ್ತದೆ. ಅನೇಕ ಕಮ್ಯುನಿಸ್ಟರ ಈ ಚರ್ಯೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ. ಆದರೆ ಕೊನೆಗೆ ಗಾಂಧೀಜಿಯವರ ಬಗ್ಗೆ ನನಗಿರುವ ಮಮತೆಯನ್ನು ಅರ್ಥಮಾಡಿಕೊಂಡ ನಂತರವೇ ನನಗೆ ಕಮ್ಯುನಿಸ್ಟರ ಮನಸು ಅರ್ಥವಾದುದು. ಅದರಿಂದ ಸಂಪೂರ್ಣ ಬಿಡುಗಡೆಗೊಂಡಿರುವೆನೆಂದು ನಾನು ತಿಳಿಯಲಾರೆ. ಏಕೆಂದರೆ ಅವರ ಬಗೆಗೆ ನನಗೆ ವಿಚಾರಾತೀತ ಭಕ್ತಿ ಇನ್ನೂ ಇದೆ. ಯಾವುದೇ ನಿಷ್ಠೆಗೂ ಇದರಿಂದ ಸಂಪೂರ್ಣ ವಿಮುಕ್ತಿ ಕಷ್ಟಸಾಧ್ಯ. ಏನೇ ಇರಲಿ, ಈ ಅಪಾಯದ ವಿರುದ್ಧ ನಿಮ್ಮನ್ನು ಎಚ್ಚರಿಸುತ್ತೇನೆ. ಅದೃಷ್ಟವಶಾತ್ ನಾನು ಆ ರೀತಿ ವಾಸ್ತವವನ್ನೂ ಆದರ್ಶವನ್ನೂ ಒಂದಾಗಿ ಪರಿಭಾವಿಸುವ ತಪ್ಪಿಗೆ ಕೇವಲ ಒಂದೆರಡು ಸಾರಿ ಮಾತ್ರ ಪಕ್ಕಾಗಿದ್ದೇನೆ.

ಈ ದಾರಿ ಮತ್ತು ಗುರಿಯ ಸಿದ್ಧಾಂತಗಳು ತತ್ಪರಿಣಾಮದ ತತ್ವದೊಂದಿಗೆ ಸೇರಿ ಆಧುನಿಕ ಮಾನವನಿಗೆ ಅಸದೃಶ ಶಕ್ತಿಯ ಆಯುಧಗಳಾಗಿ ಪರಿಣಮಿಸಿವೆ. ಈ ಆಯುಧವು ಪ್ರಪಂಚದಲ್ಲಿ ಈಗ ಹೆಚ್ಚಾಗಿ ಉಪಯೋಗಿಸಲ್ಪಡುತ್ತಿದೆ. ಟ್ಯುನೀಸಿಯದ ಸ್ವಾತಂತ್ರ್ಯ ಹೋರಾಟಗಾರರು ಉಪಯೋಗಿಸುತ್ತಿದ್ದಾರೆ. ಆಫ್ರಿಕದ ಕರಿಯರು ಉಪಯೋಗಿಸುತ್ತಿದ್ದಾರೆ. ನಮ್ಮ ದೇಶದಲ್ಲಿ ಕೇವಲ ಕೆಲವು ವರುಷಗಳಿಂದೀಚೆಗೆ ಈ ವಿಧಾನಕ್ಕೆ ಗ್ರಹಣ ಹಿಡಿದಿದ್ದರೂ, ಆ ಮಹಾತ್ಮನ ಬೋಧನೆಗಳ ಯೋಗ್ಯತೆಯನ್ನು ಕೇವಲ ಆತನ ನಿಧನಾನಂತರದ ಮೂರು ನಾಲ್ಕುವರುಷಗಳ ಅವಧಿಯೊಳಗೆ ನಿರ್ಧರಿಸುವುದು ಅನಗತ್ಯ. ಇನ್ನೂ ಶತಮಾನಗಳವರೆಗಿನ ಅದರ ಪರಿಣಾಮಗಳನ್ನೂ ಆಗುಹೋಗುಗಳನ್ನೂ ಪರಿಗಣಿಸಬೇಕು. ಈ ವಿಧಾನ ಬಳಕೆಗೆ ಬರುವ ಮೊದಲು ರಾಜಕೀಯ ರಂಗದಲ್ಲಿ ಕೇವಲ ಎರಡೇ ವಿಧದ ಅಸ್ತ್ರಗಳಿದ್ದುವು. ಒಂದು ಕುಂದುಕೊರತೆಗಳ ನಿವಾರಣೆಗೆ ಸಂಸದೀಯ ಮಾರ್ಗ. ಇನ್ನೊಂದು ಹಿಂಸಾತ್ಮಕ ಚಟುವಟಿಕೆ. ಪಾರ್ಲಿಮೆಂಟ್ ಈ ಪರಿಯ ಅನ್ಯಾಯಗಳನ್ನು ನಿರ್ಮೂಲ ಮಾಡಲು ಅಸಮರ್ಥವಾದರೆ, ಜನತೆಯೇ ಅಡಚಣೆಗಳನ್ನು ಧ್ವಂಸಮಾಡಿ ಅಧಿಕಾರಿಗಳನ್ನು ಸೋಲಿಸಲು ಪ್ರಯತ್ನಿಸಬಹುದಿತ್ತು.

ಫ್ರೆಡ್ರಿಕ್ ಏಂಗೆಲ್ಸ್ ಮುಂಚಿನ ಕೃತಿಗಳಲ್ಲಿ ಚರಿತ್ರೆಯು ಕ್ಷೇಮ ಚಿಂತನೆಯಿಂದಲೇ ಸಂಭವಿಸಿದುದೇ ಹೊರತು ಪಾರ್ಲಿಮೆಂಟುಗಳಿಂದ ಏನೂ ಹಿರಿದಾದುದು ಆಗಿಲ್ಲ, ಆದುದರಿಂದ ಕೊನೆಗೆ ಜನತೆಯೇ ಅಡೆತಡೆಗಳತ್ತ, ಅಧಿಕಾರಿಗಳನ್ನೂ ಆಳುವವರನ್ನೂ

ಸೋಲಿಸಲು ಧಾವಿಸಬೇಕಾಗುತ್ತದೆ ಎಂದಿದ್ದಾನೆ. ಆದರೆ ಜರ್ಮನ್ ಪಾರ್ಲಿಮೆಂಟಿನಲ್ಲಿ ಲಾಸೇಲಿನ ಸೋಷಿಯಲ್ ಡೆಮೊಕ್ರಾಟಿಕ್ ಪಾರ್ಟಿಯು ಜಯಗಳಿಸಿದುದನ್ನು ನೋಡಿದ ನಂತರ, ಏಂಗೆಲ್ಸ್ ತನ್ನ ಅಭಿಪ್ರಾಯವನ್ನು ಪುನರ್ವಿಮರ್ಶಿಸಿ ಪಾರ್ಲಿಮೆಂಟ್ ಸಹ ಸಮರ್ಥವಾದುದೆಂದೂ, ಕ್ರಾಂತಿಕಾರಿಗಳು ಪಾರ್ಲಿಮೆಂಟನ್ನು ಒಂದು ಒಳ್ಳೆಯ ಮಾಧ್ಯಮವೆಂದು ಪರಿಗಣಿಸಬಹುದೆಂದೂ ಹೇಳಿದನು. ಈ ಹೇಳಿಕೆಯಲ್ಲಿ ಏಂಗೆಲ್ಸನು ಪಾರ್ಲಿಮೆಂಟಿಗೂ, ವಿಧ್ವಂಸಕ ಕೃತ್ಯಗಳಿಗೂ, ಪಾರ್ಲಿಮೆಂಟರಿ ಹಕ್ಕು ಬಾಧ್ಯತೆಗಳ ಜೀವನ ಕ್ರಮಕ್ಕೂ, ಹಿಂಸಾತ್ಮಕ ಚಟುವಟಿಕೆಗಳಿಗೂ ಇರುವ ವ್ಯತ್ಯಾಸವನ್ನು ಗುರುತಿಸುತ್ತಾನೆ. ಗಾಂಧಿ ಬಂದು ಮೂರನೆಯದೊಂದು ವಿಧಾನವನ್ನು ತೋರಿಸುವವರೆಗೂ ಯೂರೋಪಿಯನ್ ತಿಳಿವಳಿಕೆಗೆ ಈ ಎರಡು ಮಾರ್ಗಗಳಿಂದ ಆಚೆಗೆ ಹೋಗಲು ಅಸಾಧ್ಯವಾಗಿತ್ತು.

ಪಾರ್ಲಿಮೆಂಟ್ ಯಾವಾಗಲೂ ಬದಲಾವಣೆಯ ಏಕಮಾತ್ರ ಮಾಧ್ಯಮವೆಂದು ತಿಳಿಯಲು ನಾನು ಸಿದ್ಧನಿಲ್ಲ ಹಾಗೂ ನಾನು ಏಂಗೆಲ್ಸ್‌ನ ಪಾರ್ಲಿಮೆಂಟು ಕ್ರಾಂತಿಯ ಸಾಧನವಾಗಬಹುದೆಂಬ ಪ್ರತಿಗಾಮಿ ದೃಷ್ಟಿಗೂ ಪುಷ್ಟಿ ಕೊಡಲು ಸಾಧ್ಯವಿಲ್ಲ. ಅದರಲ್ಲೂ ಈ ಪ್ರಸ್ತುತ ಪರಿಸ್ಥಿತಿಯಲ್ಲಿ, ಮುಕ್ಕಾಲು ಪ್ರಪಂಚವು ಬಡತನ, ಕ್ಷೈಬ್ಯಗಳಲ್ಲಿ ನರಳುತ್ತಿರುವಾಗ, ಪಾರ್ಲಿಮೆಂಟು ಬದಲಾವಣೆಯ ಏಕಮಾತ್ರ ಮಾರ್ಗವಾಗಲು ಅಸಾಧ್ಯವಾಗಬಹುದು. ಆದೂ ಭಾರತದಲ್ಲಿ ಮತ್ತು ಈ ಬಗೆಯ ರಾಷ್ಟ್ರಗಳಲ್ಲಿ ಬಡತನ, ನಿರುದ್ಯೋಗ, ಕ್ಷಾಮ ಡಾಮರಗಳು ಹಾಗೂ ಹಸಿವಿನಿಂದ ಸಾವು ಇತ್ಯಾದಿಗಳು ಸಂಭವಿಸುತ್ತಿರುವ ಸಂದರ್ಭಗಳಲ್ಲಿ ಪಾರ್ಲಿಮೆಂಟ್ ಒಂದೇ ಇದನ್ನು ಪರಿಹರಿಸುವ ಮಾರ್ಗವೆಂದು ಬಗೆದರೆ, ಅದು ಕೊನೆಗೆ ಪಾರ್ಲಿಮೆಂಟನ್ನು ನಾಶ ಮಾಡುವ ಮಾರ್ಗವಾದೀತು. ಜನ ಈ ದೇಶದ ಪ್ರಜ್ಞಾವಂತ ರಾಜಕೀಯ ಪಕ್ಷಗಳೆಲ್ಲಾ ಪಾರ್ಲಿಮೆಂಟೊಂದನ್ನೆ ಅವಲಂಬಿಸಿವೆ ಎಂದು ನಂಬಿದರೆ, ತಮ್ಮ ಕಷ್ಟಪರಿಹಾರಾರ್ಥವಾಗಿ, ವಿಧಾನಸಭೆಗಳಲ್ಲಿ ಹಾಗೂ ಸಂಸತ್ತಿನಲ್ಲಿ ದಾರಿ ತೋರುವ ಎಲ್ಲಾ ಬಗೆಯ ಅವಿವೇಕಯುತ ಪಕ್ಷಗಳಿಗೂ ನುಗ್ಗುತ್ತಾರೆ. ಶಾಸನ ಸಭೆಗಳಲ್ಲಿ ಬೇರೊಂದು ಶಾಸನಗಳನ್ನು ಮಾಡುವುದೊಂದೇ ಎಲ್ಲ ಬಗೆಯ ಕಷ್ಟ ಕಾರ್ಪಣ್ಯಗಳಿಗೂ -ಬೆಲೆ ಏರಿಕೆಯ ತೊಂದರೆಯಾಗಿರಲಿ, ಕ್ಷಾಮದ ತೊಂದರೆ ಯಾಗಿರಲಿ- ಮೂಲ ಪರಿಹಾರ ಐದು ವರ್ಷಗಳಿಗೊಂದು ಬಾರಿ ನಡೆಯುವ ಚುನಾವಣೆಯ ಮಾರ್ಗವೇ ಎಂದು ಹೇಳಿದರೆ, ಜನತೆಯು ತಮ್ಮ ತಾಳ್ಮೆಯನ್ನು ಕಳೆದುಕೊಂಡು ಹತಾಶೆಯಮೇಲೆ ಹತಾಶೆಯು ಪ್ರೇರಿಸಿದಂತಾಗಿ ಸಮತೋಲ ತಪ್ಪಿ, ಯಾವುದಾದರೂ ಪಕ್ಷ ಬಂದು, ಈಗ ಹಿಂಸಾಕೃತ್ಯಗಳಿಗೆ ಅಡೆತಡೆಗಳಿಗೆ ಇಳಿಯಿರಿ ಎಂದು ಹೇಳಿದರೆ, ಅಮ್ಲ

ಎರಚಲು ಸಿದ್ಧರಾಗಿ ಅಂದರೆ-ಹೌದು, ಅದೇ ಇತ್ತೀಚಿನ ವಿಧಾನ-ಪಿಸ್ತೂಲು ರಿವಲ್ವಾರುಗಳಿಗೆ ಕೈಹಾಕಿರೆಂದರೆ, ಜನತೆ ಬಹುಶಃ ಇವುಗಳನ್ನು ಆದರದಿಂದ ಬರಮಾಡಿಕೊಂಡಾರು.

ಹೇಗೆ ಕಳ್ಳಕಾಕರೂ, ಡಕಾಯಿತರೂ ಜನಗಳ ಪ್ರಶಂಸೆಗೆ ಪಾತ್ರರಾಗುತ್ತಾರೆಂದು ನಾನು ಹೇಳಬೇಕಾಗಿಲ್ಲ. ಡಕಾಯಿತರೆಂದರೆ ಸಾಮಾನ್ಯ ಡಕಾಯಿತರಾದ ಭೂಪತ್ ಮಾನಸಿಂಗರೆಂದು ನನ್ನರ್ಥ. ಅವರು ಕೆಲ ಪ್ರದೇಶದ ಹಣವನ್ನು ಸೂರೆಮಾಡಿ ಅದರಲ್ಲಿ 20, 25 ಭಾಗ ಹಣವನ್ನು ಆವಶ್ಯಕತೆ ಇರುವ ತಂದೆ ತಾಯಿಗಳಿಗೆ, ವರದಕ್ಷಿಣೆ ತೆರಲಾರದ ಕನ್ಯಾಪಿತೃಗಳಿಗೆ ಕೊಡುವುದು ಮುಂತಾದವುಗಳನ್ನು ಮಾಡುತ್ತಿದ್ದರು. ಆದುದರಿಂದ ಪಾರ್ಲಿಮೆಂಟ್ ಹಾಗೂ ಸಂವಿಧಾನಬದ್ಧ ವಿಧಾನಗಳು ಮಾತ್ರವೆ ತಮ್ಮ ಉದ್ಧಾರದ ಮಾರ್ಗಗಳೆಂದು ತಿಳಿದರೆ, ಮುಕ್ಕಾಲು ಭಾಗದಷ್ಟು ಪ್ರಪಂಚ, ಅದರಲ್ಲಿಯೂ ಏಷ್ಯಾವು ಹಿಂಸಾಕೃತ್ಯ, ಚೂರಿ ಹಾಗೂ ಆಸಿಡ್ ಬಲ್ಬುಗಳಿಗೆ ಶರಣಾಗುತ್ತದೆ ಎಂದು ನಾನು ದೃಢವಾಗಿ ನಂಬುತ್ತೇನೆ, ಇಂಥ ಸಂದರ್ಭದಲ್ಲೇ ಮಹಾತ್ಮಾ ಗಾಂಧಿಯವರು ಸೂಚಿಸಿದ ಮೂರನೆಯ ಮಾರ್ಗವು ಏಕೈಕವಾಗಿ ಕಾರ್ಯಪ್ರವೃತ್ತವಾಗುವುದು. ಹಸಿವಿನಿಂದ ಸಾಯುತ್ತಿರುವ ಅಥವಾ ಕೆಲಸ ಕಳೆದುಕೊಂಡಿರುವಂಥ ಜನಕೋಟಿಯು ಐದು ವರ್ಷಗಳಿಗೆ ಒಮ್ಮೆ ಬರುವ ಚುನಾವಣೆಗಳಿಗಾಗಿ ಕಾಯಬೇಕಾಗಿಲ್ಲ. ಅವರು ತಮ್ಮ ಕೈಯಲ್ಲಿ ಇರುವ ಅಮೋಘವೂ, ಅಜೇಯವೂ ಆದ ಅಸಹಕಾರ ಚಳವಳಿಯ ಅಸ್ತ್ರವನ್ನು ಅನ್ಯಾಯ ಹಾಗೂ ದಬ್ಬಾಳಿಕೆಗಳು ಅಸಹನೀಯ ಪ್ರಮಾಣಕ್ಕೇರಿದಾಗ ಪ್ರಯೋಗಿಸಬಹುದು. ಯಾವಾಗ ಪಾರ್ಲಿಮೆಂಟರಿ ವಿಧಾನವು ನಮ್ಮ ನೋವು ಸಂಕಟಗಳನ್ನು ಪರಿಹರಿಸಲು ಅಶಕ್ತವಾಗುತ್ತದೋ ಆಗ ಜನತೆಯು ತಮ್ಮ ಮೇಲೆ ಹೇರಿದ ಅನ್ಯಾಯದ ಶಾಸನಗಳನ್ನು, ಕಟ್ಟುಪಾಡುಗಳನ್ನು ಉಲ್ಲಂಘಿಸುವ ಹಕ್ಕನ್ನು ಹೊಂದಿಯೇ ಇದ್ದಾರೆ.

ಶಾಸನಗಳನ್ನು ಉಲ್ಲಂಘಿಸುವುದು, ನ್ಯಾಯಾಲಯದ ಶಿಕ್ಷೆಗಳನ್ನು ಆಹ್ವಾನಿಸುವುದು, ಅಧಿಕಾರಿಗಳಿಂದ ಶಿಕ್ಷೆಗಳನ್ನು ಆಹ್ವಾನಿಸುವುದು, ಪ್ರಾಣಾರ್ಪಣೆಯವರೆಗೂ ಮುಂದುವರೆಯುವುದು-ಅದು ದುಃಖದ ವಿಷಯವಾದರೂ-ಬದಲಾವಣೆಯನ್ನು ಮಾಡುವ ಏಕಮಾತ್ರ ಹಾಗೂ ಸಮರ್ಪಕ ಮಾರ್ಗವೆಂದು ಬಗೆಯುತ್ತೇನೆ. ಯಾವ ಪಕ್ಷವೇ ಆಗಲಿ, ಪಂಥವೇ ಆಗಲಿ ಏನಾದರೂ ಬದಲಾವಣೆಯನ್ನು ತರಬೇಕೆಂದು ಆಶಿಸುವುದಾದರೆ ಸಾವಿಗೂ ತಯಾರಾಗಬೇಕೆಂದು ನಾನು ತಿಳಿಯುತ್ತೇನೆ, ಬರಿಯ ಬಾಯಲ್ಲಿ ಅಲ್ಲ, ಕಾರ್ಯಕ್ರಮದ ಸರಣಿಯಲ್ಲಿ ಸಂಭವಿಸುವ ಸಾಧ್ಯತೆಯಾಗಿ. ಯಾವಾಗ ಓರ್ವ ಸಾಯಲೇಬೇಕೆಂದು ಅರಿಯುತ್ತಾನೋ, ಆಗಲೇ ಆತ ಅದರ ಬಗ್ಗೆ

ಅಸಹ್ಯಪಡುತ್ತಾನೆ. ಅವನ ಪಕ್ಷದ ಯೋಗ್ಯತೆಯು ಆಗ ಆತನು ಆ ಸಾವನ್ನು ತಪ್ಪಿಸಿಕೊಂಡರೆ ಅದಕ್ಕಿಂತಲೂ ತಾನು ಹೀನನೆಂದು ಆತನು ತಿಳಿಯುವಂತೆ ಮಾಡುವುದರಲ್ಲಿದೆ. ಏನೇ ಇರಲಿ, ಇದು ಗಾಂಧೀಜಿಯವರು ರಾಜಕೀಯ ಕಾರ್ಯಕ್ರಮಕ್ಕೆ ಕೊಟ್ಟ ವಿಶಿಷ್ಟ ಕೊಡುಗೆ.

ಶಾಸನದ ಉಲ್ಲಂಘನೆಯು ಜನತೆಗೆ, ವ್ಯಕ್ತಿಗಳಿಗೆ, ಹಾಗೂ ಗುಂಪುಗಳಿಗೆ ತೆರೆದ ಮಾರ್ಗವಾಗಿದೆ. ನಾನೀಗ ಸತ್ಯಾಗ್ರಹವು ಸ್ವತಂತ್ರ ರಾಷ್ಟ್ರದಲ್ಲಿ ಸರಿಯೋ ಅಥವಾ ಬ್ರಿಟಿಷ್‌ರ ರಾಜ್ಯದಲ್ಲಿ ಮಾತ್ರವೇ ಸರಿಯೋ ಎನ್ನುವ ಬಾಲಿಶ ತರ್ಕಕ್ಕೆ ಹೋಗುವುದಿಲ್ಲ. ಸತ್ಯಾಗ್ರಹವು, ಎಲ್ಲಿಯವರೆಗೆ ಅನ್ಯಾಯ ದಬ್ಬಾಳಿಕೆಗಳು ಇರುವುವೋ ಅಲ್ಲಿಯವರೆಗೆ ಒಂದು ಅಸ್ತ್ರವಾಗಿ ಬದುಕುತ್ತದೆ. ಅದು ಬದುಕಲೇಬೇಕು; ಇಲ್ಲದೆ ಹೋದರೆ ಬಂದೂಕು ಮದ್ದುಗುಂಡುಗಳೇ ಗತಿಯಾಗುತ್ತವೆ. ಇದು ಕಳೆದ ಮೂರು ವರ್ಷಗಳಲ್ಲಿ ಭಾರತವು ವಿಶ್ವದ ಎದುರು ಇಟ್ಟಿರುವ ವಿಶಿಷ್ಟವಾದ ಪ್ರಶ್ನೆ- ನಮಗೆ ಬೇಕಾಗಿರುವುದು ಕಾನೂನುಭಂಗ ಚಳವಳಿಯೆ? ಅಥವಾ ಮದ್ದು ಗುಂಡೇ? ಈಗ ನಮಗೆ ಪರ್ಯಾಯ ಅಥವಾ ಆಯ್ಕೆ ಇರುವುದು ಪಾರ್ಲಿಮೆಂಟ್ ಹಾಗೂ ವಿಧ್ವಂಸಕ ಬಂಡಾಯ, ಅಥವಾ ಮತಚೀಟಿ ಮತ್ತು ಗುಂಡುಗಳು- ಈ ಎರಡರ ನಡುವೆ ಅಲ್ಲ. ಬುದ್ಧಿವಂತರು ಜಗತ್ತಿನ ಘುಂದಿಡುತ್ತಿರುವ ವಿಷಪೂರಿತ ತತ್ವ ಇದು. ಪರ್ಯಾಯ ಅಥವಾ ಆಯ್ಕೆ ಇರುವುದು ಸತ್ಯಾಗ್ರಹ ಹಾಗೂ ಬಂದೂಕಿನ ನಡುವೆ. ಮತದಾನ ಪದ್ಧತಿಯೂ ಅಸದೃಶವಾದುದು. ಜನತೆಯು ತಮ್ಮ ಮತ ಚಲಾಯಿಸುತ್ತಾರೆ. ತನ್ಮೂಲಕ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇದು ಐದು ವರುಷಗಳವರೆಗೆ ಜಾರಿಯಲ್ಲಿರುತ್ತದೆ. ಆದರೆ ಅನ್ಯಾಯ ಹಾಗೂ ದಬ್ಬಾಳಿಕೆಗಳು ಅಸಹನೀಯ ಪರಿಣಾಮಕ್ಕೆ ಏರಿದಾಗ, ನಮಗೆ ಪರ್ಯಾಯ ಅಥವಾ ಆಯ್ಕೆ ಇರುವುದು ಬಂದೂಕು ಅಥವಾ ಕಾನೂನು ಭಂಗದ ನಡುವೆ. ಈ ಶತಮಾನವು ಅಸ್ತಮಾನಕ್ಕೆ ಬರುವುದಕ್ಕೆ ಮೊದಲು ಜಗತ್ತಿನಾದ್ಯಂತ, ವ್ಯಕ್ತಿ ಮತ್ತು ಸಮಷ್ಟಿ ಎರಡರ ಕೈಯಲ್ಲೂ ತಮ್ಮ ನಿರಂಕುಶ ಪ್ರಭುಗಳನ್ನು ಸೋಲಿಸಲು ಕಾನೂನು ಭಂಗದ ಮಹಾಸ್ತ್ರವನ್ನು ಉಪಯೋಗಿಸಲು ಕಲಿತ ಶತಮಾನವಾಗುತ್ತದೆ. ನಾವು ಇದರ ಮುಂಚೂಣಿಯವ ರಾಗಬಹುದೇನೊ?

ಆದರೆ ಸತ್ಯಾಗ್ರಹ ಅಥವಾ ಕಾನೂನುಭಂಗ ಚಳವಳಿಯು ಬಂದೂಕಿನಷ್ಟೇ ಪ್ರಭಾವಶಾಲಿಯಾದ ಒಂದು ಜಾಗತಿಕ ಅಸ್ತ್ರವಾಗಬೇಕಾದರೆ, ಅದು ಅನೇಕ ಜಯ ಹಾಗೂ ಗೆಲುವುಗಳನ್ನು ದಾಖಲು ಮಾಡಬೇಕಾಗುತ್ತದೆ. ನಾನು ಟ್ಯುನೀಸಿಯದ ಅಥವಾ ದಕ್ಷಿಣಾಫ್ರಿಕದ ಅಥವಾ ಅಮೇರಿಕದ ನೀಗ್ರೊಗಳ ಉದಾಹರಣೆಯನ್ನು

ಕೊಡಬೇಕಾದರೆ, ಅವರ ರೀತಿಯ ಕಾನೂನುಭಂಗ ಇತ್ಯಾದಿಗಳು ಅವರಿಗೆ ಅನಿವಾರ್ಯ ಎಂಬುದನ್ನು ಮರೆಯಲಾರೆ. ಟ್ಯುನೀಸಿಯನ್ನರೇ ಆಗಲಿ, ಆಫ್ರಿಕನ್ನರೇ ಆಗಲಿ ಸತ್ಯಾಗ್ರಹಕ್ಕೂ ಹಾಗೂ ಕಲ್ಯಾಣಕಾರಿ ನವೀನ ಸಂಸ್ಕೃತಿ ಮತ್ತು ನಾಗರಿಕತೆಗಳ ನಿರ್ಮಾಣಕ್ಕೂ ಇರುವ ಸಾವಯವ ಸಂಬಂಧವನ್ನು ಅರಿತಿದ್ದಾರೆಂದು ತಿಳಿಯುವುದಿಲ್ಲ. ಬಹುಶಃ ತಮ್ಮ ಕೈಯಲ್ಲಿ ಇನ್ಯಾವ ಆಯುಧವೂ ಇರದ ಕಾರಣ ಅವರು ಅದನ್ನು ಬಳಸುತ್ತಿರಬಹುದು.

ಆದರೆ ಇಷ್ಟು ಮಾಡಿದರೂ ಸಾಕು. ''ಒಂದು ಹೆಜ್ಜೆ ನನಗೆ ಸಾಕು''-ಬಹಳ ಕಾಲದ ಹೆಣಗಾಟದ ಅನಂತರ ಅವರು ಈ ನಿಲುವಿಗೆ ಬಂದಿದ್ದಾರೆ. ಅವರು ಭಾವೀ ಜಗತ್ತಿನ ನಿರ್ಮಾಣ ಕಾರ್ಯದಲ್ಲಿ ಇದರ ಉಪಯುಕ್ತತೆಯನ್ನು ಅರಿಯಬಹುದು.

ತತ್ಫಲದ ತತ್ವವನ್ನು ನಾವು ಕೇವಲ ಕಾನೂನುಭಂಗ ಚಳವಳಿಗೆ ಮಾತ್ರವೇ ಸೀಮಿತಗೊಳಿಸಕೂಡದು. ಅದು ಮುಂದಕ್ಕೆ ವಿಸ್ತರಿಸುತ್ತದೆ. ಅದು ಆರ್ಥಿಕ ಮತ್ತು ರಾಜಕೀಯ ಕ್ಷೇತ್ರದೊಳಕ್ಕೂ ವಿಸ್ತರಿಸುತ್ತದೆ. ಗಾಂಧೀಜಿಯವರ ಮಟ್ಟಿಗೆ ಹೇಳುವುದಾದರೆ ಅವರು ನಮಗೆ ಎರಡು ಕಲ್ಪನೆಗಳನ್ನಿತ್ತಿದ್ದಾರೆ. ಒಂದು ಸ್ವಸಂಪೂರ್ಣವಾದ ಗ್ರಾಮ, ಹಾಗೂ ಗ್ರಾಮ ಸ್ವಯಮಾಡಳಿತ. ಈ ಎರಡರ ಕಲ್ಪನೆಗಳೂ ವಿಕೇಂದ್ರೀಕರಣದ ಮೇಲೆ ಆಧಾರಿತವಾದವು. ಈ ಸ್ವಸಂಪೂರ್ಣವಾದ ಗ್ರಾಮಗಳು ತಮ್ಮ ಆರ್ಥಿಕ ಬುನಾದಿಯ ಆಧಾರದ ಮೇಲೆಯೇ ನಿಲ್ಲುವಂಥ ಮತ್ತು ಚರಕದಂಥ ಸಣ್ಣ ಪ್ರಮಾಣದ ಯಂತ್ರೋಪಕರಣದ ಮೇಲೆ ನಿಲ್ಲುವಂಥ ವಾಗಿರಬೇಕು. ಹಾಗೂ ಗ್ರಾಮ ಸರ್ಕಾರದ ವ್ಯವಸ್ಥೆಯ ಕಲ್ಪನೆ ಸಹ ಮೊದಲ ದರ್ಜೆಯ ಪ್ರಜಾಪ್ರಭುತ್ವದ ಆಧಾರದ ಮೇಲೆ ರೂಪಿತಗೊಂಡುದು. ಏಕೆಂದರೆ ಆಧುನಿಕ ಜಗತ್ತಿನ ಪ್ರಜಾಪ್ರಭುತ್ವವು ಎರಡನೆಯ ದರ್ಜೆಯದು. ಗ್ರೀಕ್ ಚರಿತ್ರೆಯ ವಿದ್ಯಾರ್ಥಿಯೊಬ್ಬನು ಅಥೇನಿಯನ್ ಮತ್ತು ಇತರೆ ಮೊದಲ ದರ್ಜೆಯದಾಗಿದ್ದ ಕೊನೆಯ ಪಕ್ಷ ನಾಗರಿಕರುಗಳ ಮಟ್ಟಿಗೆ ಆದರೂ ಹಾಗಿದ್ದ ಪ್ರಜಾ ಪ್ರಭುತ್ವಗಳನ್ನು ಕುರಿತು ಆಲೋಚಿಸಬಹುದು. ಈ ರೀತಿಯ ಪ್ರಜಾಪ್ರಭುತ್ವವು ನಮ್ಮ ದೇಶದಲ್ಲಿಯೂ ಹಾಗೂ ಇತರೆಡೆಗಳಲ್ಲಿಯೂ ಪ್ರಾಚೀನ ಕಾಲದಲ್ಲಿತ್ತೆಂದು ಹೇಳುತ್ತಾರೆ. ಆದರೆ ನಮಗೆ ತಿಳಿದಂತೆ ಗ್ರೀಸಿನ ಜನತೆ ಮಾತ್ರ ರಾಜಕೀಯ ರಂಗದಲ್ಲಿ ತಮ್ಮ ಪ್ರತಿನಿಧಿಗಳ ಮಧ್ಯಸ್ತಿಕೆ ಇಲ್ಲದೆಯೆ ಆಳಿಕೊಳ್ಳುತ್ತಿದ್ದುದು. ಪ್ರತಿನಿಧಿಗಳು ಯಾವಾಗಲೂ ಅನಪೇಕ್ಷಣೀಯರಲ್ಲ. ಅವರಲ್ಲಿ ಹಲವರು ದಕ್ಷರೂ, ಹಾಗೂ ಬುದ್ಧಿವಂತರೂ ಇರಬಹುದು. ಆದರೆ ಯಾವುದೇ ಸಂದರ್ಭದಲ್ಲೂ ನಾವು ನಮ್ಮನ್ನು ಆಳಲು ಓರ್ವ ಪ್ರತಿನಿಧಿಯನ್ನು ನಿರ್ಮಾಣಮಾಡಿದಾಗ ಅದು ಮೊದಲ ದರ್ಜೆಯ ಪ್ರಜಾಸತ್ತೆ

ಆಗುವುದಿಲ್ಲ. ಅದು ಪರೋಕ್ಷ ಪ್ರಜಾ ಪ್ರಭುತ್ವ, ಆದುದರಿಂದ ಮೊದಲದರ್ಜೆಯ ನೇರ ಪ್ರಜಾಪ್ರಭುತ್ವವು ಕೇವಲ ಕೆಲವೇ ರಂಗಗಳಲ್ಲಿ, ಕೆಲವೇ ಜನರ ಮಟ್ಟಿಗೆ ಸಾಧ್ಯವಾದರೂ ಅದೊಂದು ಮಹಾನ್ ಸಾಧನೆ. ಗಾಂಧೀಜಿಯವರು ನಮ್ಮೆದುರು ಸ್ವಸಂಪೂರ್ಣ ಗ್ರಾಮ ಹಾಗೂ ಗಾಮೀಣ ಸ್ವಯಮಾಡಳಿತ ಈ ಎರಡು ಕಲ್ಪನೆಗಳನ್ನು ಏಕೆ ಕೊಟ್ಟರೆಂದರೆ-ತಮಗೆ ಬೇಕಾದಂಥ ಅರ್ಥವ್ಯವಸ್ಥೆಯನ್ನು ನಿರ್ಮಾಣ ಮಾಡಿ, ತಮಗೆ ಬೇಕಾದಂಥ ಆಳ್ವಿಕೆಯನ್ನು ಸ್ಥಾಪಿಸಿ, ತಮ್ಮ ಭವಿಷ್ಯವನ್ನು ತಾವೇ ನಿರ್ಧರಿಸಿ, ಹೊರಗಿನವರನ್ನು ಅವಲಂಬಿಸದೆ, ಹೊರಗಿನವರ ಮಧ್ಯಸ್ಥಿಕೆ ಇಲ್ಲದೆ ಇರಬಹುದು ಎಂದು. ಗಾಂಧಿಯವರ ಹೇಳಿಕೆಯನ್ನು ನಾನು ಬಹಳ ವ್ಯಾಪಕಗೊಳಿಸಿ ಹೇಳಿದೆ. ಏಕೆಂದರೆ ಇಂಥದೊಂದು ಪ್ರಸ್ತಾಪದ ಹಿನ್ನೆಲೆಯಲ್ಲಿ, ನಾನು ಮೇಲೆ ಹೇಳಿದುದಕ್ಕಿಂತ ವ್ಯತಿರಿಕ್ತ ಅರ್ಥ ಬರುವಂಥ ಹೇಳಿಕೆಗಳನ್ನು ಗಾಂಧೀಜಿಯವರ ಬರವಣಿಗೆಗಳಲ್ಲೆ ತೋರಿಸಲು ಸಾಧ್ಯ. ಗಾಂಧೀಜಿಯವರು ಬಹಳ ಸಂಕೀರ್ಣವಾದ ಯಂತ್ರಗಳಿಗೆ ತಮ್ಮ ಒಪ್ಪಿಗೆ ಸೂಚಿಸಿದ್ದರು. ಅವರು ವಿಮಾನ, ರೈಲ್ವೆ ಇಂಜಿನ್, ರೈಲು ಕೈಗಾರಿಕೆ, ಯಂತ್ರಗಳು ಮುಂತಾದವುಗಳನ್ನು ಒಪ್ಪಿದ್ದರು. ಆದರೆ ನಾನು ಹೇಳಿದುದೆಲ್ಲವಕ್ಕೂ ತದ್ವಿರುದ್ಧವಾದಂಥ ಅವರ ಹೇಳಿಕೆಗಳನ್ನು ಆರಿಸಬಹುದು. ನಾನು ಹೇಳಿದಂತೆ ನಾವು ಅವರ ಕಾರ್ಯಗಳಿಂದ ಅವರ ಆಲೋಚನೆಯ ಹಾಗೂ ಕಾರ್ಯಕ್ರಮದ ಗುರಿದಾರಿಗಳನ್ನು ಕಾಣಬೇಕೇ ಹೊರತು, ಯಂತ್ರಗಳ ಬಗ್ಗೆ ಅಥವಾ ಪ್ರತಿನಿಧಿಗಳ ಪ್ರಜಾಸತ್ತೆಯ ಬಗ್ಗೆ ವೈಯಕ್ತಿಕವಾಗಿ ಮಾಡಿರುವ ಹೇಳಿಕೆಗಳನ್ನಲ್ಲ.

ಅವರ ಮನಸ್ಸಿನ ದಿಕ್ಕು, ಸ್ವಸಂಪೂರ್ಣವಾದ ಗ್ರಾಮ ಹಾಗೂ ಗ್ರಾಮ ಸ್ವಯಂ ಪ್ರಭುತ್ವ ಇವುಗಳ ಕಡೆಗೆ ಇತ್ತೆಂಬುದರಲ್ಲಿ ಅನುಮಾನವಿಲ್ಲ. ಹೇಗೆ ಇದು ಒಂದು ಹೊಸಜಗತ್ತಿಗೆ ನಾಂದಿಹಾಡುವ ಒಂದು ಪಕ್ಷಕ್ಕೋ, ಒಂದು ಪಂಥಕ್ಕೋ ಸಂಬಂಧಿಸಬಹುದು? ಒಂದು ಬಹಳ ದೊಡ್ಡ ಸಂಕಟ ಶುರುವಾಗುತ್ತದೆ. ಈ ಆಧುನಿಕ ಪ್ರಪಂಚವು-ಅದರಲ್ಲಿ ಎಲ್ಲ ಕುಂದುಕೊರತೆಗಳಿದ್ದಾಗ್ಯೂ-ಅದರ ಎಲ್ಲ ಸಲಕರಣೆಗಳಿಂದ ಹೊರತಾದ ಸಹಾಯವೂ ಇಲ್ಲದೆ ನಮಗೆ ನವೀನ ಪ್ರಪಂಚ ಒಂದರ ನಿರ್ಮಾಣಕ್ಕೆ ಅನುವು ಮಾಡಿಕೊಡುವುದು ಸಾಧ್ಯವೆಂದು ತಿಳಿದಿಲ್ಲ. ಆಧುನಿಕ ಪ್ರಪಂಚವು ಯಂತ್ರೋಪಕರಣಗಳಿಂದ ಕಿಕ್ಕಿರಿದಿದೆ. ಮಾನವನು ಯಂತ್ರೋಪಕರಣಗಳ ಗುಲಾಮನಾಗಿದ್ದಾನೆ. ಈ ಅಂಶವನ್ನು ನಾವು ಗಮನಿಸಬೇಕು. ಆಧುನಿಕ ಮಾನವನು, ಯೂರೋಪ್ ಮತ್ತು ಅಮೆರಿಕಗಳಲ್ಲಿ, ಬಹುಪಾಲು ಜೀವನವನ್ನು ತಾನು ಜೀವಿಸುವುದಕ್ಕಿಂತ ಮಿಗಿಲಾಗಿ ತಾನು ಸೃಷ್ಟಿಸಿದ ವಸ್ತುಗಳನ್ನು ಹೊಂದಲಿಕ್ಕಾಗಿ ಬದುಕುತ್ತಾನೆ. ರೇಡಿಯೋಗಳು, ಕಾರುಗಳು, ಟೆಲಿವಿಷನ್ನುಗಳು ವ್ಯಾಕ್ಯೂಮ್ ಕ್ಲೀನರ್‌ಗಳು ಇವು ಆಧುನಿಕ ಮಾನವನ ಅಥವಾ ಗೃಹಿಣಿಯ ಗುಲಾಮರಲ್ಲ.

ಬದಲಿಗೆ ಸ್ವತಃ ತಾವೇ ವಸ್ತುಗಳ ಗುಲಾಮರಾಗಿದ್ದಾರೆ. ಇದೊಂದು ವಿಚಿತ್ರ ರೀತಿಯ ತಿಳಿವಳಿಕೆಯಾಗುತ್ತದೆ. ಏಕೆಂದರೆ ನಾವಿಲ್ಲಿ ಭಾರತದಲ್ಲಿ ಇವುಗಳನ್ನು ಹೊಂದಿಲ್ಲ. ಈ ಜೀವನದ ಉತ್ತಮ ವಸ್ತುಗಳನ್ನು ಹೊಂದಿರುವವರು ಆ ಬಗ್ಗೆ ಅಸಂತೃಪ್ತಿ ಹೊಂದಿರುತ್ತಾರೆಂದು ನಂಬುವುದೇ ಇಲ್ಲ. ನಾನು ಭಾರತ ಅಥವಾ ಅದೇ ಪರಿಸ್ಥಿತಿಯಲ್ಲಿರುವ ಇತರ ದೇಶಗಳು ಆ ವಸ್ತುಗಳ ಬಗ್ಗೆ ಆಶಿಸಲೇಕೂಡದೆಂದು ಈ ಹೊತ್ತು ಹೇಳಬಯಸುವುದಿಲ್ಲ. ಅವರು ಒಂದು ಸಭ್ಯ ಜೀವನ ಮಟ್ಟವನ್ನು ಅಪೇಕ್ಷಿಸಿದ ಪಕ್ಷದಲ್ಲಿ ಇದಕ್ಕೆಲ್ಲ ಪ್ರಯತ್ನಿಸಬೇಕಾಗುತ್ತದೆ. ಆದರೆ ಕಳೆದ ಮುನ್ನೂರು ವರುಷಗಳಿಂದ ಜೀವನ ಮಟ್ಟವನ್ನು ಏರಿಸುವುದರ ಬಗ್ಗೆಯೇ ಆಲೋಚಿಸುತ್ತ ಬಂದವರು, ಈಗ ಅವರು ಹೊಂದಿರುವ ವಸ್ತುಗಳು ಅವರ ಗುಲಾಮರಾಗದೆ, ಅವರೇ ಅವುಗಳ ಗುಲಾಮರಾಗಬೇಕಾದ ಸಂದರ್ಭದಲ್ಲಿ ಬಳಲಿ ಕುಸಿಯ ತೊಡಗಿದ್ದಾರೆ. ಈ ವಿಷಯದ ಬಗ್ಗೆ ಅಮೇರಿಕದಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಕೆಲವು ಅಮೆರಿಕನ್ನರು ನನ್ನನ್ನು ಕಿಚಾಯಿಸಲು ಯತ್ನಿಸಿದರು. ನನ್ನೆದುರು ಸಹಾನುಭೂತಿ ಪರರಲ್ಲದ ಸಭಿಕರಿದ್ದರು. ಆದರೆ ನಾನು ಗೃಹಿಣಿಯರಿಗೂ, ಅವರ ಇತರ ಗೃಹಸಲಕರಣೆಗಳಿಗೂ ಇರುವ ಸಂಬಂಧವನ್ನು ಎತ್ತಿಕೊಂಡು ಮಾತನಾಡಿದಾಗ ಆ ಬಗ್ಗೆ ಪ್ರಶಂಸೆಯ ಮಹಾಪೂರವೇ ನನಗೆ ದೊರಕಿತು.

ಯಂತ್ರೋಪಕರಣಗಳು ಅನೇಕಪಟ್ಟು ಹೆಚ್ಚಾಗುತ್ತಿವೆ. ಆದರೆ ಅವುಗಳನ್ನು ತಿರಸ್ಕರಿಸಿದರೆ, ವರ್ಜಿಸಿದರೆ ಏನಾಗುತ್ತದೆ? ಚರಕವು ಎಷ್ಟೇ ಸಮಾರಂಭಗಳಲ್ಲಿ, ಭಾರತಾಧ್ಯಕ್ಷರೂ ಹಾಗೂ ಇತರರು ಸ್ವಾತಂತ್ರ್ಯ ದಿನಾಚರಣೆಯ ದಿನ ಇದರಿಂದ ನೂಲುವಷ್ಟು ಸಮಾರಂಭದ ಸಾಂಕೇತಿಕ ಜನಪ್ರಿಯತೆಯನ್ನು ಗಳಿಸಿದ್ದರೂ ಅದೊಂದು ಮೃತ ಸಾಧನವಾಗಿರುವ ಪರಿಸ್ಥಿತಿಗೆ ಬಂದಿದೆ. ಆದುದರಿಂದಲೇ ಒಂದು ಕಡೆಯಿಂದ ಸ್ವಸಂಪೂರ್ಣ ಗ್ರಾಮವನ್ನೂ, ಚರಕವನ್ನೂ ಹಾಡಿಹೊಗಳುತ್ತ, ಇನ್ನೊಂದು ಕಡೆ ಅಗಾಧ ಬಟ್ಟೆಗಿರಣಿ, ಸಿಮೆಂಟ್ ಕಾರ್ಖಾನೆಗಳನ್ನು ಕಟ್ಟುತ್ತಾ ಇರುವ ನಿಷ್ಪ್ರಯೋಜಕ ಪರಿಸ್ಥಿತಿಯನ್ನು ಈಗ ಭಾರತದ ಜನತೆಯೂ ಎದುರಿಸಬೇಕಾಗಿ ಬಂದಿದೆ. ಇದೇ ರೀತಿ ಗ್ರಾಮ ಸ್ವಯಂಪ್ರಭುತ್ವದ ಕಲ್ಪನೆಯೂ ನಿಷ್ಪ್ರಯೋಜಕವಾದುದು. ಏಕೆಂದರೆ ಗಾಂಧಿ ಭಾರತದ ಧುರೀಣರು ರಚಿಸಿದ ಸಂವಿಧಾನಾತ್ಮಕ ಸಭೆ, ಭಾರತದ ಸಂವಿಧಾನ ರಚನೆಮಾಡಲೆಂದು ಸೇರಿದಾಗ, ಅದು ಆ ಸಂವಿಧಾನ ರಚನೆಯ ಮುನ್ನೂರಕ್ಕೂ ಹೆಚ್ಚು ಅನುಚ್ಛೇದಗಳನ್ನು ದಿಲ್ಲಿಯಿಂದ ಹೈದರಾಬಾದಿನವರೆಗೆ, ಭಾರತಾಧ್ಯಕ್ಷನಿಂದ ಹಿಡಿದು ಗೌರ್ನರನವರೆಗೆ, ಪಾರ್ಲಿಮೆಂಟಿನಿಂದ ಅಸೆಂಬ್ಲಿಯವರೆಗೆ ಅಧಿಕಾರ ಹಂಚಿಕೆಗಾಗಿ ಮಾಡಿತು. ಆದರೆ ಅದಕ್ಕೆ ಗ್ರಾಮಾಡಳಿತ ಹಾಗೂ ಗ್ರಾಮ ಸ್ವಯಂಪ್ರಭುತ್ವದ ಬಗ್ಗೆ ಆಲೋಚನೆ ಮಾಡಲು ಪುರುಸೊತ್ತಿರಲಿಲ್ಲ. ಕಟ್ಟಕಡೆಯಲ್ಲಿ

ಯಾರೋ ಗಾಂಧಿಯವರ ವಾದದ ಬುನಾದಿಯನ್ನೆಲ್ಲ ಎಲ್ಲೋ ಮರೆತಿದ್ದೇವೆಂದು ಸೂಚಿಸಿದಾಗ, ನಾಮಕಾವಾಸ್ತೆಗೆ ರಾಜ್ಯಾಂಗದಲ್ಲಿ ಒಂದು ಅನುಚ್ಛೇದವನ್ನು ಗ್ರಾಮಾಡಳಿತದ ಬಗ್ಗೆ ಸೇರಿಸಿದರು. ಯಾವ ವಿದ್ಯಾರ್ಥಿ ಬೇಕಾದರೂ ಭಾರತದ ರಾಜ್ಯಾಂಗವನ್ನು ಪರಿಶೀಲಿಸಿ ನೋಡಬಹುದು. ಮುನ್ನೂರ ತೊಂಬತ್ತೆರಡು ಅನುಚ್ಛೇದಗಳಲ್ಲಿ ಒಂದೇ ಒಂದು ಮಾತ್ರ ಗ್ರಾಮ ಸ್ವಯಂ ಪ್ರಭುತ್ವ ತುಂಬ ಅವಶ್ಯಕ ಎಂದು ಹೇಳಲು ಇರುವಂಥದು. ಹಾಗೆಂದರೇನು? ಅದನ್ನು ಹೇಗೆ ಆಚರಣೆಗೆ ತರುವುದು? ಯಾವ ತರಹದ ಅಧಿಕಾರವನ್ನು ಇದಕ್ಕೆ ಕೊಡಬೇಕು? ಇವ್ಯಾವುವೂ ಇಲ್ಲ. ಗ್ರಾಮರಾಜ್ಯಕ್ಕೆ ಕೊನೆಗೆ ದೊರೆತುದು ಕೇವಲ ರಾಜ್ಯಾಂಗದ ಗಮನ ಮಾತ್ರ. ಆ ಸೇರ್ಪಡೆಯಾದದ್ದೂ ಕೊಟ್ಟಕೊನೆಯಲ್ಲಿ. ಅದೂ ಒಂದು ಅನಂತರದ ಅಭಿಪ್ರಾಯದಂತೆ. ಇಲ್ಲಿಯೂ ನಾವು ಬುದ್ಧಿ ಉಪಯೋಗಿಸಬೇಕು. ಗಾಂಧೀಜಿಯವರು ಪ್ರತ್ಯೇಕವಾಗಿ ಏನು ಹೇಳಿದರೆಂಬುದನ್ನು ಮಾತ್ರ ನೋಡಿದರೆ ಸಾಲದು. ನಮಗೆ ಬೇಕಾದುದು ಮುಖ್ಯವಾಗಿ ಈ ದಿಕ್ಕು. ಅಂದರೆ, ಒಂದು ವಿಕೇಂದ್ರೀಕೃತ ಅರ್ಥ ವ್ಯವಸ್ಥೆ ಹಾಗೂ ವಿಕೇಂದ್ರೀಕೃತ ರಾಜಕೀಯ ಪದ್ಧತಿ ನಮಗೆ ಬೇಕಾದದ್ದು.

ಈ ತತ್ವವನ್ನು ಇನ್ನೊಬ್ಬ ಸಮಾಜವಾದಿ ಅನ್ವಯಿಸಿಕೊಳ್ಳಬಹುದಾದ ಬಗೆ ಎಂಥದು? ಆತನು ಯಂತ್ರೋಪಕರಣಗಳನ್ನು ಉಪಯೋಗಿಸಿಕೊಳ್ಳುತ್ತಾನೆ. ಆದರೆ ಈ ಹಿಂದೆ ಇದ್ದಂಥವುಗಳೇ ಆಗಬೇಕೆಂದೇನಲ್ಲ. ಇನ್ನೂ ಮುಂದೆ ಕಂಡು ಹಿಡಿಯಬೇಕಾದಂಥವು, ಹಾಗೂ ತಯಾರಿಸಬೇಕಾದಂಥವು ಕೂಡ ಆಗಿರಬಹುದು. ಅಧಿಕಾರದ ವಿಕೇಂದ್ರೀಕರಣದ ಬಗ್ಗೆ ಹೇಳುವುದಾದರೆ, ದೇಶದ ಏಕತೆ-ಅಖಂಡತೆಗೆ ತೊಂದರೆಯಾಗದಂತೆ ಅಧಿಕಾರದ ಹಂಚಿಕೆಯ ಕೊನೆಯ ಸಾಧ್ಯತೆಯವರೆಗೆ ಅಧಿಕಾರವನ್ನು ಹಂಚುವುದು. ಈ ತತ್ವವನ್ನು ಒಂದೇ ಸಾರಿ ವಿಸ್ತೃತವಾಗಿ ನಿರ್ಮಾಣ ಮಾಡಲಾಗದು. ಇದರ ಸಾಧ್ಯಾಸಾಧ್ಯತೆಗಳನ್ನು ಕಂಡುಕೊಳ್ಳಲು ಈ ಶತಮಾನದ ಉಳಿದ ಭಾಗವಷ್ಟೂ ಬೇಕಾದಿತೇನೋ. ಮೊದಲ ದರ್ಜೆಯ ಪ್ರಜಾಪ್ರಭುತ್ವದಲ್ಲಿ ಬದುಕುತ್ತಿರುವ ಒಬ್ಬ ಗ್ರಾಮಸ್ಥ ತನ್ನ ಭವಿಷ್ಯವನ್ನು ಕುರಿತಂತೆ ತಾನೇ ತೀರ್ಮಾನಿಸಿಕೊಳ್ಳುವಷ್ಟು ಅಧಿಕಾರವನ್ನು ಪಡೆದುಕೊಂಡಿದ್ದೇನೆಂದು ಭಾವಿಸುವಂತಾಗುವುದಾದರೆ ಈ ತತ್ವ ಸಾರ್ಥಕವಾಯಿತೆನಿಸುತ್ತದೆ.

ಎಲ್ಲ ಸಮಾಜವಾದಿ ಸಿದ್ಧಾಂತವೂ ಕೂಡ ತತ್ಫಲದ ತತ್ವವನ್ನು ಆರ್ಥಿಕ ವ್ಯವಸ್ಥೆ ಹಾಗೂ ಗ್ರಾಮ ಸ್ವಯಮಾಡಳಿತದ ಕಲ್ಪನೆಗೆ ಅನ್ವಯಿಸಬೇಕು. ಅಂದರೆ ಚರಕ ಮತ್ತು ಗ್ರಾಮರಾಜ್ಯದ ಕಲ್ಪನೆಗಳ ಮುಖಾಂತರವೇ ಎಂದೇನೂ ಅಲ್ಲ. ಬಹುಶಃ ಅಗಾಧ ಮೊತ್ತದ ಬಂಡವಾಳವನ್ನಪೇಕ್ಷಿಸದ, ಸಣ್ಣ ಪ್ರಮಾಣದ

ಯಂತ್ರೋಪಕರಣಗಳ ರೂಪದಲ್ಲಿ ಮತ್ತು ಗ್ರಾಮ ಸ್ವಯಂಪ್ರಭುತ್ವ ಪದ್ಧತಿಯ ರೂಪದಲ್ಲಿ ಆಲೋಚಿಸಬೇಕಾಗುತ್ತದೆ. ನಾನಿಲ್ಲಿ "ಗ್ರಾಮರಾಜ್ಯ" ಪದದ ಬದಲು ಗ್ರಾಮ ಸ್ವಯಂಪ್ರಭುತ್ವ ಎಂದು ಉದ್ದೇಶಪೂರ್ವಕವಾಗಿ ಉಪಯೋಗಮಾಡಿದ್ದೇನೆ. ಗ್ರಾಮಗಳ ಸ್ವಸಂಪೂರ್ಣತೆ ಅಥವಾ ಸ್ವಸಮಗ್ರತೆಯನ್ನು ಬಿಟ್ಟರೂ ಆಗಬಹುದು. ನಾವು ಇತರ ಗ್ರಾಮಗಳೊಂದಿಗೆ ನಿಕಟ ಸಂಪರ್ಕವನ್ನು ಹೊಂದಿರಬೇಕು ಹಾಗೂ ವಿಶಾಲ ವಿಶ್ವದೊಡನೆಯೂ ಕೂಡ. ಇದೇ ಸಂದರ್ಭದಲ್ಲಿ ಅಧಿಕಾರದ ವಿಕೇಂದ್ರೀಕರಣವೂ ಕೂಡ ಎಷ್ಟೊಂದು ವಿಸ್ತರಣಶೀಲವಾದುದಾಗಿರಬೇಕೆಂದರೆ ನಮ್ಮ ಭಾರತದ ಅಖಂಡತೆಯವರೆಗೂ ವಿಶಾಲಗೊಳ್ಳುವಂಥದಾಗಿರಬೇಕು.

ನಾನೀಗ, ಆಧುನಿಕ ಯಂತ್ರೋಪಕರಣಗಳು ಪ್ರಜಾಪ್ರಭುತ್ವದ ನಿಯಮಗಳನ್ನು ಉಲ್ಲಂಘಿಸುವಷ್ಟು ಬೆಳೆದಿವೆ ಎಂದು ಹೇಳಬೇಕಾಗಿಯೇ ಇಲ್ಲ. ಜೀವನ ಮಟ್ಟವನ್ನು ಹೆಚ್ಚಿಸಿಕೊಳ್ಳುವ, ಉತ್ಪಾದನೆಯನ್ನು ದ್ವಿಗುಣಿತಗೊಳಿಸುವ ಅಂಶಗಳಿಂದ ಅದು ನಿರ್ಮಾಣ ಮಾಡಿದ ನಾಗರಿಕತೆಯು ಈಗ ಅದರ ಅಡಿಯಾಳೇ ಆಗಿದೆ. ಈ ಕಳೆದ ಮುನ್ನೂರು ವರುಷಗಳ ಆಧುನಿಕ ನಾಗರಿಕತೆಯನ್ನು, ಕೆಲವು ಅಂಶಗಳ ಮುಖೇನ ಅದಕ್ಕಿಂತ ಹಿಂದೆ ಆಗಿ ಹೋದ ನಾಗರಿಕತೆಗಳಿಂದ ಪ್ರತ್ಯೇಕಿಸಬಹುದು. ಅಂಥ ಒಂದಂಶವೆಂದರೆ, ಈ ನಾಗರಿಕತೆಯ ಪ್ರತಿಯೊಬ್ಬ ಮನುಷ್ಯನೂ ಮನೆ, ಬಟ್ಟೆ, ಪೀಠೋಪಕರಣ ಇತ್ಯಾದಿಗಳನ್ನು ಬಯಸುತ್ತಾನೆ. ಇವುಗಳ ಬೆಲೆ ದಿನದಿನಕ್ಕೂ ದುಬಾರಿಯಾಗುತ್ತಿದೆ. ಆದರೆ ಯಾವ ರೀತಿಯ ಬೇಡಿಕೆಗಳು ಮಾನವ ಜೀವನದಲ್ಲಿವೆ ಎಂದರೆ ಅವು ಉತ್ಪಾದನೆಯನ್ನು ನಿರಂತರವಾಗಿ ಏರಿಸುವಂಥದಾಗಿದೆ. ಮತ್ತು ಆ ಕಾರಣವಾಗಿಯೇ ನಿರಂತರವಾಗಿ ಏರುವ ಉತ್ಪಾದನೆಯನ್ನು, ಮತ್ತೆ ಪುನಃ ಉತ್ಪಾದನೆಯನ್ನು ಏರಿಸುವ ಯಂತ್ರೋಪಕರಣಗಳ ಮೇಲೆ ತೊಡಗಿಸಿ ಮತ್ತು ಉತ್ಪಾದನೆಯನ್ನು ಉಲ್ಬಣಗೊಳಿಸಲಾಗಿದೆ. ಇದು ವಿಜ್ಞಾನ ಯಂತ್ರಕೌಶಲ ಹಾಗೂ ಸಂಶೋಧನೆಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳುವುದರಲ್ಲಿದೆ. ಆದರೆ ಈ ಮುನ್ನಡೆಯ ಒತ್ತಡವು ಇಡೀ ಪ್ರಪಂಚಕ್ಕೆ ಏಕಪ್ರಕಾರವಾಗಿ ಅನ್ವಯಿಸಲು ಅಸಾಧ್ಯವಾದುದು. ಉಳಿದ ಮುಕ್ಕಾಲು ಪ್ರಪಂಚದಲ್ಲಿ, ಅವು ಕೆಲಸಕ್ಕೆ ಬಾರದವುಗಳಾಗಿವೆ ಮತ್ತು ಈ ಯಂತ್ರೋಪಕರಣಗಳನ್ನು ಜನತೆಯ ಮೇಲೆ ಬಲತ್ಕಾರವಾಗಿ ಹೇರಿದಾಗ ಆ ದೇಶದ ನೈತಿಕ ಹಾಗೂ ಆರ್ಥಿಕ ವಿಕಾಸವೇ ಕುಬ್ಜವಾಗಿ ಕುಂಠಿತವಾಗಿದೆ.

ಆದುದರಿಂದ ಈ ಬಗ್ಗೆ ಇನ್ನೂ ವಿವರವಾಗಿ ಪರಿಶೀಲನೆ ಮಾಡುವುದು ನಿರರ್ಥಕ. ನಾವು ಸಂಪೂರ್ಣವಾಗಿ ಬೇರೆಯ ಸ್ವರೂಪವನ್ನುಳ್ಳ ಭಾರತವನ್ನು ನಿರ್ಮಾಣ ಮಾಡಬೇಕು. ಆದುದರಿಂದ ನಿರಂತರವಾಗಿ ಹೆಚ್ಚುವ ಜೀವನ ಸೌಲಭ್ಯಗಳ ಬದಲು ನಾವು ಸಭ್ಯ ಜೀವನ ಮಟ್ಟವನ್ನು ಮಾತ್ರ ಅಪೇಕ್ಷಿಸಬೇಕು. ಒಂದು ದೇಶದ

ಪರಿಧಿಯೊಳಗೆ ಸಂಪತ್ತನ್ನು ವೃದ್ಧಿ ಮಾಡುವ ಯತ್ನದ ಬದಲು ಹೊಸ ಪೀಳಿಗೆಯ ಮಂದಿ ಇಡೀ ಪ್ರಪಂಚದ ಹಿತವನ್ನು ತಮ್ಮ ಗುರಿಯಾಗಿ ಇಟ್ಟುಕೊಳ್ಳಬೇಕು. ಈ ಸಂದರ್ಭದಲ್ಲಿ ನಾವು ಗಾಂಧೀಜಿಯವರ ಜೀವನ ಹಾಗೂ ಕಾರ್ಯಕ್ರಮಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಅವು ಲಾಭಕರವಾದ ಸಹಾಯ ಮಾಡಬಲ್ಲುವುಗಳಾಗಿವೆ. ಅದು ಅವರ ಧ್ಯೇಯ ಹಾಗೂ ಗುರಿಗಳನ್ನು ಹೊಂದಿರುವ ಸ್ವತಂತ್ರವಾದ ದಾರಿಯಾಗಿರಬೇಕು. ಎಲ್ಲಿಯವರೆಗೆ, ಆಧುನಿಕ ನಾಗರಿಕತೆ ಆದರ್ಶರಹಿತವಾದುದು, ರಷ್ಯ ಹಾಗೂ ಅಮೆರಿಕಗಳು ಪ್ರತ್ಯೇಕವಾದ ರಾಜಕೀಯ ಪದ್ಧತಿಗಳಿಗೆ ಸಂಬಂಧಿಸಿದಂಥವಾದರೂ ಈ ಎರಡೂ ದೇಶಗಳ ಚಲನ ಶಕ್ತಿಯು ಒಂದೇ ಬಗೆಯದಾದ ಉತ್ಪಾದನೆಯನ್ನೂ ಬಯಕೆಯನ್ನೂ ಕೇವಲ ತಮ್ಮ ಗಡಿಗಳೊಳಗೇ ಹೆಚ್ಚಿಸಿಕೊಳ್ಳುವ ಮೃಗೀಯ ಪಿಪಾಸೆಯಿಂದ ಕೂಡಿದಂಥವು; ಅಮೆರಿಕದ ಆದರ್ಶ ಅಮೆರಿಕದೊಳಗೆ, ರಷ್ಯಾದ ಆದರ್ಶ ರಷ್ಯದೊಳಗೆ ಎಂದು ಅರಿತಿರುತ್ತೇವೆಯೊ ಅಲ್ಲಿಯವರೆಗೆ ಮೇಲಿನ ಧ್ಯೇಯಗಳನ್ನು ನಾವು ಮಹಾತ್ಮಾ ಗಾಂಧೀಜಿಯವರ ಆಶೋತ್ತರಗಳು ಹೌದೇ ಎಂದು ಕೇವಲ ಅವರ ಬರವಣಿಗೆಯಿಂದ ಸಂಪೂರ್ಣ ಸಾಧಿಸಲು ಸಾಧ್ಯವಾಗದೇ ಹೋದರೂ ಚಿಂತೆಯಿಲ್ಲ. ಏಕೆಂದರೆ ಅದೇ ಅಷ್ಟೊಂದು ಪ್ರಮುಖವಾಗಕೂಡದು. ಈ ಸಂದರ್ಭದಲ್ಲಿ ಸಮಾಜವಾದಿಯು ಸಮಸ್ತ ಪ್ರಪಂಚಕ್ಕೆ ಸಭ್ಯಜೀವನ ಮಟ್ಟಕ್ಕಾಗಿ ಮೂರು ಕಾರ್ಯಕ್ರಮಗಳನ್ನು ಮಂಡಿಸಬೇಕು.

ಸಮಾಜವಾದವು ಇನ್ನೂ ತೆರೆದ ಪದ್ಧತಿ. ಆದರೆ ಕಮ್ಯುನಿಸಂ ಹಾಗೂ ಬಂಡವಾಳಶಾಹಿ ಮುಚ್ಚಿದಂಥವು. ನವೀನ ಜಗತ್ತು ಇದೇ ಜಗತ್ತಿನ ಜನರಿಗೆ ಸಭ್ಯ ಜೀವನಾವಕಾಶಕ್ಕಾಗಿ ಹೋರಾಡಬೇಕು. ಸಂಪದಭಿವೃದ್ಧಿಗಿಂತ ಸಭ್ಯಜೀವನ ಎನ್ನುವುದು ಈ ಕಾಲದ ಮುಖ್ಯವಾದ ಘೋಷಣೆ ಎಂದು ನನ್ನ ನಂಬಿಕೆ.

ಈಗ ನಾನು ಗಾಂಧಿಯವರ ಇತರ ಹಲವು ಗುಣಗಳನ್ನು ಸಂಕ್ಷಿಪ್ತವಾಗಿ ವಿವರಿಸ ಬಯಸುತ್ತೇನೆ. ಅವರ ಮರಣಾನಂತರ ಒಂದು ಬಗೆಯ ಗ್ರಹಣ ಹಿಡಿದಿತ್ತು. ಆದರೆ ಅದು ತಾತ್ಕಾಲಿಕವಾದುದೆಂದು ನಂಬುತ್ತೇನೆ. ಅವರ ಬಗ್ಗೆ ಉತ್ಸವಗಳು, ಪ್ರತಿಮೆಗಳನ್ನು ನಿಲ್ಲಿಸುವುದು, ಹೊಗಳಿಕೆಗಳು, ಸಾಂಪ್ರದಾಯಿಕವಾದವಾದರೂ ಸಮಕಾಲೀನ ಪರಿಸ್ಥಿತಿಯಲ್ಲಿ ಸಾಪೇಕ್ಷವಾಗಿ ಅವರ ಬೋಧನೆಯ ಮಹಾನ್ ಪರಿಣಾಮವು ಹೊರಟುಹೋಗಿದೆ. ಇದೇತಕ್ಕೆ ಹೀಗಾಯ್ತು? ಗಾಂಧಿ ಏನು ಮಾಡಿದರೊ, ಏನು ಹೇಳಿದರೊ, ಏನು ಬರೆದರೊ ಅದರಲ್ಲೇನಾದರೂ ಊನವಿದೆಯೇ? ಬಹುಶಃ ಇರಬಹುದು. ಮತ್ತು ಇದು ನಿಜವಾದರೆ ಕೇವಲ ಇಂದಿನ ಜನತೆಯನ್ನು ಅವರ ನಡವಳಿಕೆಗಾಗಿ ಬೈದು ಪ್ರಯೋಜನವಿಲ್ಲ.

ಗಾಂಧೀಜಿಯು ಮಾನವನ ಬದುಕಿನ ಭೌತ ಆಧಾರಗಳಿಗೆ ಸರಿಯಾದ ಗಮನ ನೀಡಲಿಲ್ಲ ಅಂದರೆ, ಭೌತಿಕ ಹಾಗೂ ಆರ್ಥಿಕ ಅಂಶಗಳಿಗೆ. ನಾನು ಈ ಪದಗಳನ್ನು ಅವುಗಳ ವೈಜ್ಞಾನಿಕ ಅರ್ಥದಲ್ಲಿ ಉಪಯೋಗಿಸುತ್ತಿದ್ದೇನೆ. ಅವರು ದೇಹದ ಬಗ್ಗೆ ಯಾವುದೋ ಒಂದು ಉನ್ನತ ದೃಷ್ಟಿಯನ್ನು ಹೊಂದಿದುದರ ಪರಿಣಾಮವಾಗಿ ಮೂಡುವ ಭೀತಿಗೆ ಒಳಗಾಗಿದ್ದರು. ಅವರು ಶರೀರವನ್ನು ಸ್ವಚ್ಛವಾಗಿಡಬೇಕೆಂಬುದರ ಬಗ್ಗೆ ಆದ್ಯ ಗಮನವನ್ನಿತ್ತಿದ್ದರೆಂಬುದರ ಬಗ್ಗೆ ಏನೂ ಅನುಮಾನವಿಲ್ಲ. ಯಾರೇ ಆಗಲಿ ಅವರನ್ನನುಸರಿಸಬೇಕೆನ್ನುವವರು ಅವರ ಈ ಬಗೆಯ ನಿಯಮಗಳನ್ನು ಅಧ್ಯಯನ ಮಾಡಬೇಕು. ಅವರು ಆಹಾರ, ಬಟ್ಟೆ, ಗಂಡಸಿಗೂ ಹೆಂಗಸಿಗೂ ನಡುವಿನ ಸಂಬಂಧ ಇತ್ಯಾದಿಗಳ ಬಗ್ಗೆ ಅನೇಕ ಆಚಾರಗಳನ್ನು ಹೇಳಿದ್ದಾರೆ. ಹಾಗೂ ಸ್ವತಃ ನಡೆದುಕೊಂಡಿದ್ದಾರೆ. ಅವರು ತಮ್ಮ ಒಡನಾಡಿಗಳ, ಸಂಗಡಿಗರ ಅನೇಕ ಅಭ್ಯಾಸಗಳನ್ನು ತಿದ್ದಿದರು, ಮತ್ತು ತಮ್ಮ ದೇಶ ಬಾಂಧವರಲ್ಲಿ ಬಹುಮಂದಿಯನ್ನು ಪ್ರಭಾವಿತಗೊಳಿಸಿದ್ದರು. ಹಾಗೂ ಅವರು ಯಾವಾಗಲೂ ಭಾರತದ ಜನತೆ ಶುಚಿಯಾದ ಶರೀರವನ್ನಿಟ್ಟುಕೊಳ್ಳುವುದು ಹೇಗೆಂದು ಯೋಚಿಸುತ್ತಿದ್ದರು. ಅವರು ಆಗಾಗ್ಗೆ, ಅನೇಕ ಮಂದಿ ತಮ್ಮ ಅನುಯಾಯಿಗಳಾಗಿ ರುವುದಕ್ಕಿಂತ ತಮ್ಮ ಬೋಧನೆಯನ್ನು ಅನುಷ್ಠಾನಕ್ಕೆ ತರುವ ಕೆಲವೇ ಮಂದಿಯಾದರೆ ತಮಗೆ ಸಾಕೆಂದು ಹೇಳುತ್ತಿದ್ದರು. ಈ ರೀತಿ ಶರೀರವನ್ನು ಸ್ವಚ್ಛಗೊಳಿಸುವುದರ ಬಗ್ಗೆ ಇದ್ದ ವಿಪರೀತವಾದ ಆಸಕ್ತಿಯೊಡನೆಯೇ ಅದನ್ನು ತಿರಸ್ಕರಿಸುವ, ಅದನ್ನು ದಂಡಿಸುವ ಅಭೀಪ್ಸೆಯೂ ಇತ್ತು. ದೇಹ ಶುದ್ಧಿ ಹಾಗೂ ದೇಹದಂಡನೆ ಮತ್ತು ಆರ್ಥಿಕ ಅಂಶ ಈ ಎರಡೂ ಒಂದು ಮಟ್ಟದವರೆಗೆ ಪರಸ್ಪರ ಸಂಬಂಧವುಳ್ಳವು.

ಕಠೋಪನಿಷತ್ತಿನಲ್ಲಿ ಸುಂದರವಾದುದಕ್ಕೂ ಒಳಿತಿಗೂ, ಅಪೇಕ್ಷಣೀಯಕ್ಕೂ ಆವಶ್ಯಕಕ್ಕೂ, ಸುಖಕ್ಕೂ ಶ್ರೇಯಕ್ಕೂ ಇರುವ ದ್ವಂದ್ವವನ್ನೂ, ಅಂತರವನ್ನೂ ಬಹುಶಃ ಮೊಟ್ಟಮೊದಲ ಬಾರಿಗೆ ಆಲೋಚನೆಯಲ್ಲಿ ಎತ್ತಿದಾಗಲಿಂದ ಭಾರತೀಯರು ಈ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಮತ್ತು ಅವರಲ್ಲಿ ಶ್ರೇಷ್ಠರೆಲ್ಲರೂ ಮೊದಲನೆಯದರ ಸಾಮಾನ್ಯ ದಿಕ್ಕಿನತ್ತ ನಡೆದಿದ್ದಾರೆ. ಸುಂದರವೂ ಸುಖವೂ ಆದುದನ್ನು ಒಳ್ಳೆಯದೂ ಶ್ರೇಯಸ್ಕರವೂ ಆದುದಕ್ಕೆ ಬಲಿಕೊಡಲಾಗಿದೆ. ಗಾಂಧೀಜಿ ಸಾಮಾನ್ಯವಾಗಿ ಇದೇ ಕೆಲಸ ಮಾಡಿದರು. ಅವರ ಭಾಗಶಃ ವಿರಕ್ತ ತಪಶ್ಚರ್ಯೆಯನ್ನು ಹಾಗೂ ಅವರ ಜೀವಿತದ ಬಂಜರುತನವನ್ನು ಸಾಮಾಜಿಕ ಕಾರಣಗಳ ಆಧಾರದ ಮೇಲೂ ಚರ್ಚಿಸಬಹುದು. ಭಾರತದಂತಹ ದಾರಿದ್ರ್ಯಪೂರಿತ ಜನತೆಯೊಡನೆ ಸಂಪೂರ್ಣ ಸಾಮರಸ್ಯ ಕೇವಲ ಋಜುತ್ವದ ಮಟ್ಟದಲ್ಲಿ ಮಾತ್ರ ಸಾಧ್ಯವೇನೊ. ಇನ್ನೂ ಕೊಂಚ ಸಮೃದ್ಧ ಪರಿಸ್ಥಿತಿಯಲ್ಲಿ ಈ ಮಟ್ಟವು ಬಹುಶಃ ಬೇರೆಯ ದಾಗಿರುತ್ತಿತ್ತು.

ಗಾಂಧೀಜಿಯವರ ತಪಶ್ಚರ್ಯೆಯಲ್ಲಿ, ಋಜುತ್ವದಲ್ಲಿ ಒಂದು ಅಂತಿಮ ತತ್ವಚಿಂತನೆಯ ಅಂಶವಿಲ್ಲೆಂದು ಅಲ್ಲಗಳೆಯುವುದು ಅರ್ಥಶೂನ್ಯ. ಅವರು ಖಂಡಿತವಾಗಿಯೂ ಹೊನ್ನಿನೊಡನೆ ಅಥವಾ ಸಂಗೀತ ಸೌಂದರ್ಯ ಅಥವಾ ಜೀವನ ಮಟ್ಟವನ್ನು ಏರಿಸುವುದರ ಬಗ್ಗೆ ಮನಸ್ಸನ್ನು ತೊಡಗಿಸಲಿಲ್ಲ. ಅವರ ಪೂರ್ವಿಕರಂತೆಯೇ ಅವರೂ ಅದನ್ನು ತಿರಸ್ಕರಿಸಿದರು ಅಥವ ಗೌಣವಾಗಿ ಕಂಡರು. ಭೌತಿಕ ಮತ್ತು ಆಧ್ಯಾತ್ಮಿಕ, ಪ್ರಿಯ ಮತ್ತು ಶ್ರೇಯ, ಸುಂದರ ಮತ್ತು ಸತ್ಯ ಇವು ವ್ಯಾಖ್ಯಾನ ವಿವರಣೆಗಳ ಚಾತುರ್ಯದಿಂದಲ್ಲದೆ ಇನ್ನಾವ ಕಾರಣದಿಂದಲೂ ಒಂದರೊಳಗೊಂದು ಸಾಮರಸ್ಯ ಹೊಂದಲಾರವು ಎಂದು ಅನುಮಾನಿಸುತ್ತೇವೆ. ಅಷ್ಟೇ ಅಲ್ಲದೇ ಇವೆರಡೂ, ಭಿನ್ನತೆಗಳ ನಡುವೆಯೂ, ಒಂದು ಸಮತೋಲನವನ್ನು ಚೈತನ್ಯ ಹಾಗೂ ಭೌತಿಕತೆಯ ಒತ್ತಡದ ನಡುವೆಯೂ ಉಳಿಸಬಹುದೆಂದು ಅನುಮಾನಿಸಬಹುದು. ನನಗೊಂದು ದಿನ ಅಮೇರಿಕದ ಪದವಿ ತರಗತಿಯ ಒಬ್ಬ ವಿಧ್ಯಾರ್ಥಿ ಕೇಳಿದ:" ಒಂದು ಸಾರಿ ಭೌತಿಕತೆಯ ಗೂಳಿಯ ಕೊಂಬುಗಳನ್ನು ಒತ್ತಿಹಿಡಿದ ನಂತರ, ಹೇಗೆ ಹಿಡಿತ ಸಡಿಲಿಸಿ ಅದನ್ನು ಬಿಡುಗಡೆ ಮಾಡುವುದು? ಭೌತಿಕ ಸಾಧನ ಸಾಮಗ್ರಿಗಳನ್ನು ತಹಬಂದಿಯಲ್ಲಿಟ್ಟು ವಿರಾಮದ ಜೀವನವನ್ನು ಹೇಗೆ ಆರಂಭಿಸುವುದು?". ಈ ಪ್ರಶ್ನೆ ಆಗ ನನಗೆ ಬಲವಾದ ಆಘಾತ ಉಂಟು ಮಾಡಿತು. ಆ ಪ್ರಶ್ನೆ ಈಗಲೂ ಕೊರೆಯುತ್ತಿದೆ. ಜೀವನದ ಇಚ್ಛಾಶಕ್ತಿ ಹಾಗೂ ಪ್ರಯೋಗಶೀಲತೆಯನ್ನು ಬಿಟ್ಟರೆ ಇದಕ್ಕೆ ನನ್ನ ಬಳಿ ಯಾವ ಉತ್ತರವೂ ಇಲ್ಲ.

ಜೀವನ ಪ್ರವಾಹದ ರೂಪುರೇಷೆಗಳನ್ನು ಆ್ಯಡಮ್‌ಸ್ಮಿತ್ ಮತ್ತು ಟ್ರೂಮನ್ ಅಥವಾ ಕಾರ್ಲ್‌ಮಾರ್ಕ್ಸ್ ಅಥವಾ ಸ್ಟಾಲಿನ್ ನಿರೂಪಿಸಿರುವ ರೀತಿಯೇ ಅವರಿಗೆ ಮಾನವರ ಮನಸ್ಸು ಹಾಗೂ ಶರೀರಗಳ ಮೇಲೆ ಒಂದು ಬಗೆಯ ಹಿಡಿತವನ್ನು ತಂದು ಕೊಡುತ್ತದೆ. ಆದರೆ ಗಾಂಧೀಜಿಯವರಂಥ ಮನುಷ್ಯರು ಸಮಕಾಲೀನ ಅಭಿಪ್ರಾಯ ಹಾಗೂ ಆದರ್ಶಗಳಿಂದ ಬಹುದೂರ ಹೋಗಿ ಸಮಸ್ಯೆಗಳಿಗೆ ಮಾನವೀಯತೆಯು ಪುರಸ್ಕರಿಸದಂಥ ಪರಿಹಾರಗಳನ್ನೊದಗಿಸಿದರೆ ಆಗ ತಮ್ಮನ್ನು ತಾವು ಕೇವಲ ಔಪಚಾರಿಕವಾದ ಸಭೆ ಸಮಾರಂಭಗಳಿಗೆ, ಉತ್ಸವಗಳಿಗೆ ಇಳಿಸಿಕೊಂಡಂತಾಗುತ್ತದೆ. ಕೇವಲ ವಾರ್ಷಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುವ ಜನರ ನೆನಪೋ ಅಥವಾ 24 ಘಂಟೆಯಲ್ಲಿ ಕೇವಲ ಅರ್ಧ ಘಂಟೆಯ ಪ್ರವಚನವೋ ಆಗಿ ಹೋಗುತ್ತಾರೆ. ಗಾಂಧೀಜಿಯ ಹೆಸರು ಈಗ ಲೈಬ್ರರಿಗಳಲ್ಲಿ ಪರಾಮರ್ಶನ ಮಾಡುವ ಪುಸ್ತಕವಾಗಿಯೋ ಅಥವಾ ಕಾಲೇಜಿನ ಉಪನ್ಯಾಸಗಳಲ್ಲಿ ಜ್ಞಾಪಿಸುವ ದೊಡ್ಡ ವಸ್ತುವಾಗಿಯೋ ಉಳಿದಿದೆ. ಜೀವನ ಪ್ರವಾಹವು ಮಹಾತ್ಮಾ ಗಾಂಧೀಜಿಯವರ ಬೋಧನೆ, ಜೀವನಗಳ ಗೊಡವೆಯೇ ಇಲ್ಲದೆ ಸುಲಲಿತವಾಗಿ ಹರಿಯುತ್ತದೆ.

ಅವರ ಅನುಯಾಯಿಗಳಲ್ಲಿ ಬಹಳ ಮಂದಿ ಉನ್ನತವಾದ ಆದರ್ಶಗಳನ್ನು ಬದಿಗಿಟ್ಟು, ಸುಖಾಪೇಕ್ಷಿಗಳೂ ಲಂಪಟರೂ ಆಗಿ ಈಗ ಹೃದಯ ಪರಿವರ್ತನೆಯ ಬದಲು ಫಲಾಪೇಕ್ಷಿಗಳಾಗಿದ್ದಾರೆ. ಅವರಿಗೆ ದೀನ ದಲಿತರ ಹೃದಯಗಳನ್ನು ಪರಿವರ್ತಿಸಿ ಅವರಲ್ಲಿ ಧೈರ್ಯವನ್ನು, ಎಚ್ಚರವನ್ನು ಉಂಟುಮಾಡುವ ಅವಶ್ಯಕತೆ ಇಲ್ಲ. ದಬ್ಬಾಳಿಕೆಗಾರರನ್ನು, ಹಾಗೂ ಶೋಷಕರನ್ನು ಓಲೈಸಿಕೊಂಡಿರುವ ವಿಕಾರಾವಸ್ಥೆಗೆ ಅವರು ಇಳಿದಿದ್ದಾರೆ. ಅವರ ಜೀವನಕ್ರಮವಂತೂ ತೊಂದರೆಯೇ ಇಲ್ಲದೆ ಈಗಿರುವ ಪ್ರಪಂಚದ ಬಂಡವಾಳಶಾಹಿ ಅಥವಾ ಉದಾರವಾದದ ಮಿಶ್ರ ಆರ್ಥಿಕ ಪದ್ಧತಿ ಮತ್ತು ಸುಧಾರಣವಾದಿ ಸಮಾಜವಾದದ ಕೆಲವು ಸಾಂಪ್ರದಾಯಿಕ ಬಗೆಗಳು ಇತ್ಯಾದಿಗಳೊಡನೆ ಸುಲಲಿತವಾಗಿ ಸಾಗುತ್ತಿದೆ.

ಅವರ ಅತಿರೇಕವಾದಿ ಬೆಂಬಲಿಗರೆಲ್ಲಾ ಈಗ ಕಾರ್ಲ್‌ಮಾರ್ಕ್ಸ್‌ನನ್ನು ಆಶ್ರಯಿಸಲು ನಡೆದಿದ್ದಾರೆ. ಅವರೂ ಸಹ ಗಾಂಧೀಜಿಯವರ ಅಸಹಕಾರ ಚಳವಳಿ, ಗ್ರಾಮ ಸ್ವಯಂಪ್ರಭುತ್ವ ಮತ್ತು ಹತೋಟಿಯಲ್ಲಿಟ್ಟುಕೊಳ್ಳಬಹುದಾದ ಯಂತ್ರಗಳು (ಸಣ್ಣ ಪ್ರಮಾಣದ ಯಂತ್ರಗಳೂ ಸೇರಿದಂತೆ) ಮುಂತಾದ ಉದ್ದೇಶಗಳನ್ನು ಹೊತ್ತಿದ್ದ ಜೀವಂತ ಕ್ರಾಂತಿಕಾರಿ ಗಾಂಧೀಜಿಯಿಂದ ದೂರ ಸರಿದಿದ್ದಾರೆ. ಅವರು ಗಾಂಧೀಜಿಯವರ ಧ್ಯೇಯದಂತೆ ಜನಸಾಮಾನ್ಯರೊಡನೆ ತಮ್ಮನ್ನು ಗುರುತಿಸಿ ಕೊಳ್ಳುವ ನಾಯಕನಾಗುವ ಮಟ್ಟಿಗೆ ಮಾತ್ರವೇ ಅವರ ಅನುಯಾಯಿಗಳಾಗಿ, ಮಿಕ್ಕೆಲ್ಲ ವಿಷಯಗಳಲ್ಲೂ ಆಧುನಿಕ ನಾಗರಿಕತೆಯ ಯಂತ್ರಕೌಶಲ್ಯಕ್ಕೆ, ಆದರ್ಶಕ್ಕೆ, ಕಮ್ಯೂನಿಸಂ ಏಕಾಗ್ರತೆಗೆ ಸರಿಸಮಾನವಾದ ಏಕಾಗ್ರತೆಯನ್ನು ಸಾಧಿಸಿದ್ದಾರೆ. ಕಾಕತಾಳೀಯವಾಗಿ ಬಂಡವಾಳಶಾಹಿಯ ಏಕಾಗ್ರತೆಯೂ ಇದೇ ದಿಕ್ಕಿನಲ್ಲಿದೆ.

ಇದರ ಪರಿಣಾಮವಾಗಿ ನಾವು ಈಗ ಗಾಂಧೀಜಿಯ ಕೆಲವು ಉದಾತ್ತ ಗುಣಗಳನ್ನುಳ್ಳ ಕೆಲವು ಬಂಡವಾಳಶಾಹಿ ಮಾದರಿಗಳನ್ನೂ, ಕೆಲವು ಕಮ್ಯುನಿಸ್ಟ್ ಮಾದರಿಗಳನ್ನೂ ಹೊಂದಿದ್ದೇವೆ. ಇದರಲ್ಲಿ ಮೊದಲಿನದೇ ಹೆಚ್ಚು. ಈ ಅನೇಕ ವರುಷಗಳಿಂದ ಮಡುಗಟ್ಟಿ ನಿಂತಿದ್ದ ಭಾರತ ಈಗಲಾದರೂ ಗಾಂಧೀಜಿಯವರ ಮೂಲಭೂತ ಆಲೋಚನೆಗಳು ಉಪಯುಕ್ತವಾಗುವಂಥ ಒಂದು ಆರ್ಥಿಕ ಹಾಗೂ ಆಡಳಿತ ವ್ಯವಸ್ಥೆಯನ್ನು ಕಂಡುಹಿಡಿಯಬೇಕು. ಇಲ್ಲದಿದ್ದರೆ, ಗಾಂಧೀಜಿಯವರೂ ಚರಕಾಗಳೂ ಕೇವಲ ಅಲಂಕಾರ ಉತ್ಸವಗಳಿಗೆ ಮಾತ್ರ ಮೀಸಲಾಗಿ, ಗ್ರಾಮ ಸ್ವಪ್ರಭುತ್ವವು ಎಂದೆಂದಿಗೂ ಕಾರ್ಯಗತವಾಗದೆ ಉಳಿಯುತ್ತದೆ.

ಕಾರ್ಖಾನೆಗಳ ಮೇಲೆ ಕಾರ್ಖಾನೆಗಳನ್ನು ಕಟ್ಟುತ್ತೇವೆ. ಭಾರತವು ಜೀವನ ಮಟ್ಟವನ್ನು ಏರಿಸುವುದರ ಬಗ್ಗೆಯೇ ಆಲೋಚಿಸತೊಡಗುತ್ತದೆ. ಭಾರತವು ಅಮೆರಿಕ

ಅಥವಾ ರಷ್ಯಾದ ಒಂದು ದುರ್ಬಲ ನಕಲಾಗುತ್ತದೆ. ಈಗಿನ ನಾಗರಿಕತೆಯು ಇನ್ನೊಂದು ಹಂತದ ಆಟವನ್ನೂ ಆಡಿ ಮುಂದುವರೆಯಬೇಕಾಗುತ್ತದೆ. ಆದರೆ ಗಾಂಧೀಜಿಯವರ ಮೂಲಭೂತ ಧ್ಯೇಯ ಧೋರಣೆಗಳನ್ನು ಗಮನದಲ್ಲಿ ಇಟ್ಟುಕೊಂಡು, ಒಂದು ಆರ್ಥಿಕ ಮತ್ತು ಆಡಳಿತ ವ್ಯವಸ್ಥೆಯನ್ನು ನಾವು ನಿರ್ಮಾಣ ಮಾಡಿದರೆ ಈ ಜಗತ್ತು ನವೀನ ನಾಗರಿಕತೆಯೊಂದನ್ನು ನಿರ್ಮಾಣ ಮಾಡಲು ಭಾರತ ಸಹಾಯ ಮಾಡಿದಂತಾಗುತ್ತದೆ. ಇಡೀ ಪ್ರಪಂಚದಲ್ಲೇ ಸಮಾಜವಾದದ ಆದ್ಯ ಕರ್ತವ್ಯವೆಂದರೆ ಇದೇ. ಮತ್ತು ಭಾರತದಲ್ಲಂತೂ ಬಹು ಮುಖ್ಯವಾದ ಕರ್ತವ್ಯ ಇದು.

ಈವರೆವಿಗೂ ವಿವರಿಸಿದ ಪದ್ಧತಿಗಳೆಲ್ಲದರಲ್ಲೂ ವ್ಯಕ್ತಿಯು ಒಳ್ಳೆಯವ ನಾಗಿರಬೇಕಾದ ಅಗತ್ಯವೇ ಇಲ್ಲ. ಅದಕ್ಕೆ ಸಮಾಜವಾದವೂ ಹೊರತಲ್ಲ. ರೂಪಾಂತರ ಗೊಳ್ಳುತ್ತಿರುವ ವ್ಯಕ್ತಿಗೆ ಹೊಂದಾಣಿಕೆ ಮಾಡಿಕೊಳ್ಳಲು ಕೊಂಚ ಕಾಲ ಬೇಕು. ನಾವು ಈಗೇನು ಮಾಡಬೇಕೆಂದರೆ ಒಬ್ಬ ವ್ಯಕ್ತಿಗೆ ಒಳ್ಳೆಯವನಾಗಿರಬಹುದಾದ ಸಾಧ್ಯತೆಯನ್ನು ಉಂಟುಮಾಡುವುದು ಮಾತ್ರವಲ್ಲ ಒಳ್ಳೆಯವನಾಗಿರಬೇಕಾದಂಥ ಅನಿವಾರ್ಯತೆಯನ್ನೂ ತಂದುಕೊಡಬೇಕಾದಂಥ ವ್ಯವಸ್ಥೆಯನ್ನು ರೂಪಿಸಬೇಕು. ಬಂಡವಾಳಶಾಹಿ ಹಾಗೂ ಕಮ್ಯೂನಿಸಂಗಳು, ನಮಗೆ ಕೆಲವು ರೀತಿಯ ವ್ಯವಸ್ಥೆ ಹಾಗೂ ಆಲೋಚನೆಗಳನ್ನು ಕೊಟ್ಟಿವೆ. ಇದರಲ್ಲಿ ವ್ಯಕ್ತಿಯು ತಂತಾನೆ ಒಳ್ಳೆಯವ ನಾಗಿರುತ್ತಾನೆನ್ನುತ್ತಾರೆ. ಎಂದರೆ ಒಬ್ಬನು ಒಳ್ಳೆಯವನಾಗಿರಬೇಕೆಂದೇನೂ ಇಲ್ಲ. ಋಜುಜೀವನ ನಡೆಸುವವರ ವಿಶಿಷ್ಟ ಗುಣವೇ ಇದು. ಒಂದು ವ್ಯವಸ್ಥೆಯನ್ನು ಆಲೋಚಿಸಿ, ಅದನ್ನು ಕಾಗದದ ಮೇಲೆ ವಿಸ್ತೃತಗೊಳಿಸಿ, ಅನಂತರ ಅದಕ್ಕನು ಗುಣವಾಗಿ ಸಮಾಜವನ್ನು ತಿದ್ದುವುದರಲ್ಲೇ ಈ ಬುದ್ಧಿವಂತರು ತೃಪ್ತರಾಗುತ್ತಾರೆ, ಆದರೆ ಅಂಥವರು ಅನಿವಾರ್ಯವಾಗಿ ಸೋತಿದ್ದಾರೆ. ಈಗ ಮಾಡಬೇಕಾದ ಮೊದಲ ಕೆಲಸ, ಮಾನವ ವ್ಯಕ್ತಿತ್ವದ ಕೆಲವು ಒಳಿತುಗಳನ್ನು ತೆಗೆದುಕೊಂಡು ಒಂದು ವ್ಯವಸ್ಥೆಯನ್ನಾಗಿ ನೇಯುವುದು. ಅಷ್ಟೇ ಅಲ್ಲದೆ ಅಲ್ಲಿ ಆತನು ಒಳ್ಳೆಯವನಾಗಿ ಇರಬೇಕಾದುದನ್ನು ಅತ್ಯಗತ್ಯ ಅನಿವಾರ್ಯತೆಯನ್ನಾಗಿ ಮಾಡಬೇಕು. ಈವರೆಗೂ ಸಮಾಜವಾದಿ ವ್ಯವಸ್ಥೆಯಲ್ಲಿ ಈ ರೀತಿಯ ಅನಿವಾರ್ಯತೆ ಇರಲಿಲ್ಲ. ಕೇವಲ ಬಹಿರಂಗದ ಪರಿಸರ ಒಂದೇ ಮುಖ್ಯವಾದುದಾಗಿ ಸರ್ಕಾರ ಹಾಗೂ ಅಧಿಕಾರ ಆಡಳಿತಗಳನ್ನು ಬದಲಿಸಿದುದಾದರೆ, ವ್ಯಕ್ತಿಯ ಒಳ್ಳೆಯತನ ತಂತಾನೇ ಸಾಧಿತವಾಗುತ್ತಿದ್ದಿತು. ಈ ದೋಷವನ್ನು ಸಮಾಜವಾದವು ಬಂಡವಾಳಶಾಹಿ ಹಾಗೂ ಕಮ್ಯೂನಿಸಂನೊಡನೆ ಹಂಚಿಕೊಂಡಿತು. ಇದನ್ನು ನಾನು ದೋಷವೆಂದು ಬೇಕೆಂದೇ ಕರೆದಿದ್ದೇಕೆಂದರೆ, ಇದು 'ಪರಿಸರವಾದ'ದ ದೋಷ. ಕೇವಲ ಪರಿಸರ

ಒಂದೇ ಮುಖ್ಯವೆಂದೂ, ಪರಿಸರದೊಂದಿಗೆ ವ್ಯಕ್ತಿಯು ತಂತಾನೆ ಪರಿವರ್ತಿತ ನಾಗುತ್ತಾನೆಂದೂ ಇದು ಹೇಳುತ್ತದೆ.

ಮಹಾತ್ಮಾಗಾಂಧಿಯವರು ವ್ಯಕ್ತಿಯನ್ನು ಕುರಿತು ಒತ್ತಿಹೇಳಿ ವಾತಾವರಣ ಅಥವಾ ಪರಿಸರವನ್ನು ಗೌಣವಾಗಿ ಕಂಡಿದ್ದಾರೆ. ಈ ಸಂದರ್ಭದಲ್ಲೇ ಸಮಾಜವಾದವು ಪರಿಸರವನ್ನು ಮುಖ್ಯವೆಂದು ಪರಿಗಣಿಸಿ, ವ್ಯಕ್ತಿಯನ್ನುಅಮುಖ್ಯವೆಂದು ಕಂಡಿದೆ ಎಂಬುದನ್ನು ತಿಳಿಯುವಾ. ಈ ಬಗ್ಗೆ ತರ್ಕಪೂರ್ಣವಾದ ವ್ಯವಸ್ಥೆಯೊಂದನ್ನು ಆಲೋಚಿಸಬೇಕಾದರೆ, ಈ ಎರಡರ ಬಗ್ಗೆಯೂ ಸಮಾನವಾದ ಪ್ರಾಮುಖ್ಯವನ್ನು ಕೊಡಬೇಕು. ಏಕೆಂದರೆ ಮಾನವನೇ ಈಗ ದಾರಿ, ಮತ್ತು ಗುರಿಸಾಧನವೂ ಹೌದು. ತಾನು ಬದಲಾಗದಂಥ ಸದ್ಗುಣಗಳನ್ನು ಪ್ರದರ್ಶಿಸುತ್ತಲೇ ಒಳ್ಳೆಯ ಭವಿಷ್ಯದ ಸಾಧನವಾಗಲೂಬೇಕು ಆತ. ನಮಗೀಗ ಆವಶ್ಯಕತೆ ಇರುವುದು ಜ್ಞಾನಿಯಲ್ಲಿ ಮಿಲನಗೊಂಡ ಸಂತನದು.

ಸಮಾಜವಾದವು ಜ್ಞಾನಿಯೊಡನೆ ಬಹುಕಾಲ, ಪರಿಸರ ಹಾಗೂ ಉತ್ತಮ ವ್ಯವಸ್ಥೆಗಳನ್ನು ಕಂಡುಹಿಡಿಯುತ್ತಾ ಕಾಲ ಕಳೆದಿದೆ. ಸಂತ ಬದುಕಿನ ಮೌಲ್ಯಗಳ ಬಗ್ಗೆ, ಭೌತ ಸುಖಾಪೇಕ್ಷೆಗಳನ್ನು ನಿರಾಕರಿಸುವ ಬಗ್ಗೆ ಒತ್ತಿ ಹೇಳಿದ್ದಾಗಿದೆ. ಪ್ರತಿಯೋರ್ವನಲ್ಲಿಯೂ ಜ್ಞಾನಿಯ ಹಾಗೂ ಸಂತನ ಅಂಶಗಳು ಅಂತರ್ಗತ ವಾಗಿರುತ್ತದೆ. ಜ್ಞಾನಿಯ ಗುಣಗಳು ಕ್ರೂರತೆಯ ಮಟ್ಟಕ್ಕೇರಿದರೆ ದುರ್ಗುಣವಾಗಿ ಪರಿವರ್ತಿತವಾಗುತ್ತವೆ. ಸಂತನದು ಸಂಕುಚಿತ ಪ್ರಜ್ಞೆಯ ದುರ್ಗುಣವಾಗುತ್ತದೆ. ಹೀಗಾಗಿ ನಮ್ಮಲ್ಲಿನ ಜ್ಞಾನಿಯು ಕ್ರೂರಿಯೂ ಸಂತನು ಸಂಕುಚಿತ ಮನಸ್ಸುಳ್ಳವನೂ ಆಗಿ ಪರಿವರ್ತಿತವಾಗುತ್ತಾರೆ. ಜ್ಞಾನಿಯು ಕ್ರೂರಿಯಾಗಲು ಕಾರಣ ಆತನಂತೆ ಆಲೋಚಿಸಲು ಅಸಾಧ್ಯವಾದವರನ್ನೆಲ್ಲಾ ದ್ವೇಷಿಸುವುದರಿಂದ. ಸಂತನು ಸಂಕುಚಿತ ಪ್ರಜ್ಞೆಯುಳ್ಳವನಾಗಲು ಕಾರಣ ಒಳ್ಳೆಯವನೂ ಪರಿಶುದ್ಧನೂ ಆಗಲು ಯತ್ನಿಸದೆ ಇರುವುದರಿಂದ. ಸಂಕುಚಿತ ಬುದ್ಧಿಗೂ ಕ್ರೌರ್ಯಕ್ಕೂ ವ್ಯತ್ಯಾಸ ಬಹಳ ಕಡಿಮೆ. ಮಹಾತ್ಮಾಗಾಂಧಿಯವರ ಜೀವನದಿಂದ ಏನಾದರೂ ಪಾಠ ಕಲಿಯಬೇಕಾದರೆ ಅವರ ಸತ್ಯಾಗ್ರಹದ, ಅವರ ಜ್ಞಾನದ,ಅವರ ಸಂತಸ್ವಭಾವದ ಈ ಅಗೋಚರ ಗುಣಗಳನ್ನು ಹೊರತೆಗೆಯಬೇಕಾಗುತ್ತದೆ. ಸಂತಸ್ವಭಾವದ ಬಗ್ಗೆ ನಮಗೆ ಭೀತಿಸಲ್ಲದು. ಶರೀರವನ್ನೂ ಇಹವನ್ನೂ ತಿರಸ್ಕರಿಸದಿರುವ ಸ್ವಭಾವವು ಸಂತತ್ವವನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತದೆ. ಇದು ತಪ್ಪಾದುದು. ಜ್ಞಾನ ಮತ್ತು ಸನ್ನಡತೆ, ವಾತಾವರಣದ ಪರಿವರ್ತನೆ ಹಾಗೂ ವ್ಯಕ್ತಿತ್ವದ ಪರಿವರ್ತನೆ, ಕ್ರಾಂತಿ ಹಾಗೂ ಧರ್ಮ, ಮನಸ್ಸಿನ ಶಿಕ್ಷಣ, ನಡತೆಯ ಶಿಕ್ಷಣ ಇವು ಈವರೆಗೂ ಮಾನವ ಆಶ್ರಯ ಜೀವನದಲ್ಲಿ ಮಾತ್ರ ಧನ್ಯತೆಯನ್ನು ಕಂಡುದರಿಂದ ಒಂದಕ್ಕೊಂದಕ್ಕೆ ತದ್ವಿರುದ್ಧ

ವಾದಂಥವುಗಳಾಗಿದ್ದವು. ಮಹಾತ್ಮಾಗಾಂಧೀಜಿಯವರು ಈ ಜ್ಞಾನಿ ಹಾಗೂ ಸಂತ ಸ್ವಭಾವಗಳಲ್ಲಿ ಯಾವೊಂದು ಗುಣವನ್ನೂ ಹೆಚ್ಚುಮಾಡದೆ ಸಮರ್ಪಕವಾಗಿ ಜೊತೆಗೂಡಿಸಿಕೊಂಡರೊ ಇಲ್ಲವೊ ಎನ್ನುವುದು ಇಲ್ಲಿ ಪ್ರಸ್ತುತವಲ್ಲ. ಇಡೀ ಚರಿತ್ರೆಯಲ್ಲಿಯೇ ಮಾನವವರ್ಗದ ನಾಯಕಶ್ರೇಣಿಯಲ್ಲಿ ಮೊದಲನೆಯ ಬಾರಿ ರಾಜಕೀಯ ಹಾಗೂ ಸಾಮಾಜಿಕ ಮತ್ತು ಅಂತರಂಗದ ಶುದ್ಧಿ ಮತ್ತು ನಡವಳಿಕೆ ಈ ಎಲ್ಲದರಲ್ಲೂ ಅವರು ಕ್ರಾಂತಿಕಾರಿಯಾದವರು. ಈಗ ಗಾಂಧಿಯಿಂದ ಒಂದೆಳೆಯನ್ನೂ, ಮಾರ್ಕ್ಸ್‌ನಿಂದ ಒಂದೆಳೆಯನ್ನೂ ತೆಗೆದು ಹೊಸೆದು ಹಗ್ಗ ಮಾಡುವ ಯತ್ನಗಳು ನಡೆಯುತ್ತಿವೆ. ನನ್ನ ಮನಸ್ಸಿಗೆ ಇದು ಅಪ್ರಯೋಜಕವಾದ ಹಾಗೂ ಫಲಿತಾಂಶರಹಿತವಾದ ಪ್ರಯತ್ನವೆಂದು ತೋರುತ್ತಿದೆ. ಆದರೆ ಯಾರು ಯಾವ ಎಳೆಗಳಿಂದಲೇ ನೇಯಲಿ, ಒಬ್ಬ ವ್ಯಕ್ತಿಯು ಒಳ್ಳೆಯವನಾಗಿರಲು ಆಶಿಸಿದ ಪಕ್ಷದಲ್ಲಿ, ಅಂಥ ಸಾಧ್ಯತೆ ಇರುವ ವಾತಾವರಣವನ್ನು ಸೃಷ್ಟಿಸಿದರೆ, ಅದರೊಡನೆ ಅಸಹಕಾರ ಚಳವಳಿಯಂಥ ಅಸೀಮ ಆಯುಧವನ್ನು ಸಮಾಜವಾದದೊಡನೆ ಸಂಯೋಗಗೊಳಿಸಿದರೆ, ಇಡೀ ಮಾನವಕೋಟಿಗೆ ಮಹದುಪಕಾರವಾದೀತು. ಗಾಂಧಿವಾದವೆಂಬೊಂದು ಪ್ರತ್ಯೇಕ ಪಂಥ ನಿರ್ಮಾಣವು ಪ್ರಪಂಚಕ್ಕೆ ಅಷ್ಟೊಂದು ಉಪಯುಕ್ತವೆಂದು ನಾನು ನಂಬಲಾರೆ. ಸಮಾಜವಾದವು ಈಗಾಗಲೇ ಜಾಗತಿಕ ರಂಗದ ಮೇಲಿದೆ.

ಈ ವಾದವು ಇನ್ನೂ ತೆರೆದಂಥದು. ಇದು ನಮಗೆ ಆಶಾದಾಯಕವಾದುದಾಗಿದೆ. ಗಾಂಧೀಜಿಯವರ ಜೀವನ ಧ್ಯೇಯಗಳನ್ನು ಸಮಾಜವಾದದ ವಸ್ತ್ರದೊಡನೆ ನೇಯ್ದರೆ ನವೀನ ಸಮಾಜವೊಂದು ನಿರ್ಮಾಣವಾದೀತು. ಮಾನವ ಕುಲ ಆಗ ಶಾಂತಿ ಹಾಗೂ ಸಭ್ಯಜೀವನದ ನೂತನ ಯುಗವನ್ನು ನಿರೀಕ್ಷಿಸಬಹುದು.

●

ಹೈದರಾಬಾದ್, ಆಗಸ್ಟ್ 1952.

ಇಂಗ್ಲಿಷಿನಿಂದ ಕನ್ನಡಕ್ಕೆ : **ಕೆ. ಪಿ. ಪೂರ್ಣಚಂದ್ರತೇಜಸ್ವಿ**

ಭಾಗ : ಎರಡು

ಲೋಹಿಯಾ ಕುರಿತು

ರಾಮಮನೋಹರ ಲೋಹಿಯಾ : ಬದುಕಿನ ಹೆಜ್ಜೆಗಳು

ನಾನಕ್ ಚಂದ್ ಮೆಹ್ರೋತ್ರ

ರಾಮಮನೋಹರ ಲೋಹಿಯಾರವರು 1910 ಮಾರ್ಚಿ 23 ರಂದು ಉತ್ತರ ಪ್ರದೇಶದ ಫೈಜಾಬಾದ್ ಜಿಲ್ಲೆಯ ಅಕ್ಬರ್‌ಪುರದಲ್ಲಿ ಜನಿಸಿದರು. ವೈಶ್ಯಕುಟುಂಬ ವೊಂದರಲ್ಲಿ ಹುಟ್ಟಿದ ಅವರಿಗೆ ತಮ್ಮ ಕುಟುಂಬವು ತಲೆತಲಾಂತರದಿಂದ ಕಬ್ಬಿಣದ ವ್ಯಾಪಾರ ಮಾಡುತ್ತಿದ್ದ ಕಾರಣದಿಂದಾಗಿ ಲೋಹಿಯಾ ಎಂಬ ಹೆಸರು (ಲೋಹಾ ಎಂದರೆ ಹಿಂದಿಯಲ್ಲಿ 'ಕಬ್ಬಿಣ' ಎಂದು ಅರ್ಥ) ಸೇರಿಕೊಂಡಿತು. ಹೀರಾಲಾಲರ ಒಬ್ಬನೇ ಮಗನಾಗಿದ್ದ ಲೋಹಿಯಾ ತಮ್ಮ ತಾಯಿ ಚಂದ್ರಿಯವರನ್ನು ಎಳೆತನದಲ್ಲೇ ಕಳೆದುಕೊಂಡರು. ಸಕ್ರಿಯ ಕಾಂಗ್ರೆಸ್ ಕಾರ್ಯಕರ್ತರಾಗಿದ್ದ ಹೀರಾಲಾಲರು ಅಪಾರವಾಗಿ ರಾಷ್ಟ್ರೀಯ ಭಾವನೆಗಳನ್ನು ಮೈಗೂಡಿಸಿಕೊಂಡಿದ್ದರು; ಮುಂದೆ ಮಹಾತ್ಮಗಾಂಧಿಯವರ ಅನುಯಾಯಿಯಾದರು. ರಾಷ್ಟ್ರೀಯತಾ ಭಾವನೆ, ಭಾರತೀಯ ಸಂಸ್ಕೃತಿಯ ಬಗೆಗೆ ಇದ್ದ ಅಕ್ಕರೆ, ದೀನದಲಿತರ ಮೇಲಿನ ಸಹಾನುಭೂತಿ, ಕಂದಾಚಾರಗಳು ಮತ್ತು ಮೂಢನಂಬಿಕೆಗಳನ್ನು ಕುರಿತ ಚಿಕಿತ್ಸಕ ದೃಷ್ಟಿಯೇ ಮುಂತಾದ ವಿಶಿಷ್ಟ ಗುಣಗಳನ್ನು ಲೋಹಿಯಾರವರು ತಂದೆಯಿಂದ ಪಡೆದುಕೊಂಡರು. ಎಳೆತನದಿಂದಲೇ ಲೋಹಿಯಾ ಬಡವರು, ನಿರ್ಗತಿಕರು, ದುರ್ಬಲರು ಹಾಗೂ ದೀನದಲಿತರು ಆಕ್ರಮಣಕ್ಕೊಳಗಾದಾಗಲೆಲ್ಲ ಅವರ ಪರವಾಗಿ ಹೋರಾಡುತ್ತಿದ್ದರು.

ವಿದ್ಯಾಭ್ಯಾಸದ ಸಲುವಾಗಿ ಲೋಹಿಯಾ ಅನೇಕ ಸ್ಥಳಗಳಿಗೆ ಹೋದರು. ಅವರು ಪ್ರಾಥಮಿಕ ಶಾಲಾಶಿಕ್ಷಣವನ್ನು ಅಕ್ಬರ್‌ಪುರದಲ್ಲಿ ಮುಗಿಸಿದರು. 1925ರಲ್ಲಿ ಮುಂಬಯಿಯ ಮಾರವಾಡಿ ವಿದ್ಯಾಲಯದಲ್ಲಿ ಮೆಟ್ರಿಕ್ ಪರೀಕ್ಷೆಗೆ ಬರೆದು ತೇರ್ಗಡೆ ಹೊಂದಿದರು. ಅವರು ಇಂಟರ್‌ಮಿಡಿಯೇಟ್ ಮುಗಿಸಿದ್ದು 1927ರಲ್ಲಿ ಕಾಶಿವಿಶ್ವವಿದ್ಯಾನಿಲಯದ ಮೂಲಕ. ಅನಂತರ ಕಲ್ಕತ್ತೆಯ ವಿದ್ಯಾಸಾಗರ ಕಾಲೇಜು ಸೇರಿ 1929ರಲ್ಲಿ ಬಿ. ಎ. ಪದವಿಯನ್ನು ಗಳಿಸಿದರು. ವಿದ್ಯಾರ್ಥಿದೆಸೆಯಿಂದಲೇ ರಾಮಮನೋಹರರು ಭಾರತದ ರಾಜಕೀಯ ಆಗುಹೋಗುಗಳನ್ನು ಗಮನಿಸಿ ಕ್ರಿಯಾಶಾಲಿಯಾಗಿದ್ದರು. ಹಲವಾರು ಸಂದರ್ಭಗಳಲ್ಲಿ ಯುವಸ್ವಾತಂತ್ರ್ಯ ಹೋರಾಟಗಾರರಾಗಿ ಅವರು ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲುಗೊಂಡರು.

1920ರಲ್ಲಿ ಲೋಕಮಾನ್ಯ ತಿಲಕರು ತೀರಿಕೊಂಡಾಗ ಕೇವಲ ಹತ್ತುವರ್ಷ ವಯಸ್ಸಿನ ಬಾಲಕ ಲೋಹಿಯಾ ಶಾಲೆಯಲ್ಲಿ ಒಂದು ಮುಷ್ಕರ ಏರ್ಪಾಡು ಮಾಡುವುದರಲ್ಲಿ ಆಸಕ್ತಿವಹಿಸಿ ಕಾರ್ಯನಿರತರಾದರು. ಅನಂತರ ಅವರು ಗಾಂಧೀಜಿಯವರು ಕರೆಕೊಟ್ಟ ಅಸಹಕಾರ ಚಳವಳಿಯಲ್ಲಿ ಭಾಗವಹಿಸಿ ಒಂದು ವರ್ಷಕಾಲ ಅಧ್ಯಯನವನ್ನು ಹಾಗೆಯೆ ಕೈಬಿಟ್ಟರು. 1928ರಲ್ಲಿ ಅವರು ಸೈಮನ್ ಕಮೀಷನನ್ನು ಬಹಿಷ್ಕರಿಸುವ ಸಲುವಾಗಿ ಕಲ್ಕತ್ತೆಯಲ್ಲಿ ವ್ಯವಸ್ಥೆಗೊಂಡಿದ್ದ ಸಭೆಯೊಂದರ ಅಧ್ಯಕ್ಷತೆಯನ್ನು ವಹಿಸಿದ್ದರು. ಅದೇ ವರ್ಷ ಕಲ್ಕತ್ತೆಯಲ್ಲಿ ಜರುಗಿದ ಯುವ ಅಧಿವೇಶನವೊಂದರಲ್ಲಿ ಅವರಿಗೆ ಜವಾಹರಲಾಲ್ ನೆಹರೂ ಹಾಗೂ ಸುಭಾಸ್ ಚಂದ್ರ ಬೋಸರ ನಿಕಟ ಸಂಪರ್ಕ ದೊರೆಯಿತು.

1929ರಲ್ಲಿ ಲೋಹಿಯಾ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು. ಅಲ್ಲಿಯ ವಾತಾವರಣ ಅವರ ಸ್ವತಂತ್ರ ಸ್ವಭಾವಕ್ಕೆ ಸರಿಹೊಂದದಿದ್ದ ಕಾರಣ, ಅಲ್ಲಿಂದ ಜರ್ಮನಿಗೆ ಹೊರಟು ಬರ್ಲಿನ್ ವಿಶ್ವವಿದ್ಯಾನಿಲಯ ಸೇರಿದರು. ಅಲ್ಲಿ ಅಧ್ಯಯನ ಕೈಗೊಂಡು ಉಪ್ಪಿನ ಸತ್ಯಾಗ್ರಹವನ್ನು ಕುರಿತಂತೆ ಪ್ರೌಢಪ್ರಬಂಧ ರಚಿಸಿ, ಆ ವಿಶ್ವವಿದ್ಯಾನಿಲಯದಿಂದ ಅರ್ಥಶಾಸ್ತ್ರದಲ್ಲಿ ಪಿಎಚ್.ಡಿ. ಪದವಿ ಪಡೆದರು. ಬರ್ಲಿನ್ನಿನಲ್ಲಿ ಅವರು ಕೆಲವು ಕಾಲ ನೆಲೆಸಿ ಶಿಕ್ಷಣ ಪಡೆದ ನಿಮಿತ್ತ ಅವರ ಆಲೋಚನಾ ವಿಧಾನದ ಮೇಲೆ ಅಲ್ಲಿಯ ಪ್ರಭಾವ ಕೆಲವು ಮಟ್ಟಿಗೆ ಬಿದ್ದು ಕ್ರಮೇಣ ಪಕ್ವಗೊಂಡಿತು. ಜರ್ಮನಿಯಲ್ಲಿ ಹಿಟ್ಲರ್ ಮತ್ತು ನಾಜಿಗಳ ಉತ್ಥಾನ ಹಾಗೂ ಆ ಮಂದಿ ಜನಾಂಗೀಯ ಮೇಲರಿಮೆಯಲ್ಲಿ (racial superiority) ತಳೆದಿದ್ದ ನಂಬಿಕೆ ಇವುಗಳನ್ನು ಗಮನಿಸುವ ಕಹಿ ಅನುಭವ ಲೋಹಿಯಾರಿಗೆ ಉಂಟಾಗಿತ್ತು. ನಾಜಿಗಳನ್ನು ಸಮರ್ಪಕವಾಗಿ ಎದುರಿಸಿ ತಡೆಯುವಲ್ಲಿ ಜರ್ಮನ್ ಸೋಷಿಯಲಿಸ್ಟ್ ಡೆಮಾಕ್ರಾಟರ ವೈಫಲ್ಯ; ಯೂರೋಪಿನ, ಅದರಲ್ಲೂ ವಿಶೇಷವಾಗಿ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ ಇತರ ಸೋಷಿಯಲಿಸ್ಟ್ ಡೆಮಾಕ್ರಾಟಿಕ್ ಪಕ್ಷಗಳ ನೀತಿನಿಯಮಗಳು ಮತ್ತು ನಡೆವಳಿಕೆಗಳು; ಕಮ್ಯೂನಿಸ್ಟರು ಸೋಷಿಯಲಿಸ್ಟ್ ಹಿತಾಸಕ್ತಿಗಳನ್ನು ದೂರಮಾಡಿದ್ದು; ಅಂತಾರಾಷ್ಟ್ರೀಯ ಬಂಡವಾಳಶಾಹಿಗಳು ಜರ್ಮನ್ ನಾಜಿ ಪಕ್ಷಕ್ಕೆ ನೀಡಿದ ಒಟ್ಟಾರೆ ಬೆಂಬಲ ಹಾಗೂ ವೈಯಕ್ತಿಕ ಸ್ವಾತಂತ್ರ್ಯದ ದಮನ ಇಂಥ ಅನೇಕ ವಿದ್ಯಮಾನಗಳನ್ನು ಕೂಡ ಲೋಹಿಯಾ ಸ್ವತಃ ಗಮನಿಸಿದ್ದರು. ಜರ್ಮನಿಯಲ್ಲಿ ಅವರು ಮಾರ್ಕ್ಸ್ ಮತ್ತು ಹೆಗೆಲರ ಕೃತಿಗಳನ್ನು ಮೂಲಜರ್ಮನ್ ಭಾಷೆಯಲ್ಲೇ ಓದಿಕೊಂಡಿದ್ದರು. ಚರಿತ್ರೆಯಲ್ಲಿ ವಿದ್ಯಮಾನಗಳು ಹೇಗೆ ಘಟಿಸಿ ಮನುಷ್ಯ ಕುಲದ ಹಣೆಬರಹವನ್ನು ರೂಪಿಸುತ್ತವೆ ಎಂಬ ಬಗೆಗೆ ಮಾರ್ಕ್ಸ್ ಮತ್ತು ಹೆಗೆಲ್ ಸೂಕ್ತ ಸುಳಿವು ನೀಡುವುದರಲ್ಲಿ ಯಾವರೀತಿಯಲ್ಲಿ ವಿಫಲರಾಗಿದ್ದಾರೆ ಎಂಬುದನ್ನು ಸಹ

ಅವರು ಕಂಡುಕೊಂಡಿದ್ದರು. 1930ರಿಂದ 1932ರ ನಡುವಣ ಅವಧಿಯು ಭಾರತದ ನೆಲದಲ್ಲಿ ನಿರಂತರವಾದ ಚಟುವಟಿಕೆಗಳಿಂದ ಕೂಡಿತ್ತು. ಮಹಾತ್ಮಗಾಂಧಿಯವರು 1930ರ ಏಪ್ರಿಲ್ 6ರಂದು ದಂಡಿಯಲ್ಲಿ ಉಪ್ಪಿನ ನಿಯಮವನ್ನು ಮುರಿದು ಅಸಹಕಾರ ಚಳವಳಿಗೆ ನಾಂದಿ ಹಾಡಿದ್ದರು. ಲೋಹಿಯಾ ಅವರು ತಮ್ಮ ತಂದೆಯವರಿಂದ ಬಂದ ಪತ್ರವೊಂದರ ಮೂಲಕ ಬ್ರಿಟಿಷ್ ಸರಕಾರವು ಧರಸಾನ ಎಂಬಲ್ಲಿ ಸತ್ಯಾಗ್ರಹಿಗಳನ್ನು ಹೇಗೆ ನಿಷ್ಕರುಣೆಯಿಂದ ಹೊಡೆದುಬಡಿದು ದಬ್ಬಾಳಿಕೆ ನಡೆಸಿದೆ ಎಂಬುದನ್ನು ಮನವರಿಕೆಮಾಡಿಕೊಂಡರು. ಬರ್ಲಿನ್ನಿನಲ್ಲಿದ್ದಾಗ ಅವರು ಜಿನೀವಾಕ್ಕೆ ಹೋಗಿ ಅಲ್ಲಿಯ 'ಲೀಗ್ ಆಫ್ ನೇಷನ್ಸ್' ಸಂಸ್ಥೆಯಲ್ಲಿ ಬಿಕನೇರಿನ ಮಹಾರಾಜ ಭಾರತದ ಪರವಾಗಿ ಭಾಷಣ ಮಾಡಲು ಪ್ರಾರಂಭಿಸಿದಾಗ ಸಿಳ್ಳು ಹೊಡೆದಿದ್ದರು.

1933ರಲ್ಲಿ ಬರ್ಲಿನ್ ಬಿಟ್ಟ[1] ಲೋಹಿಯಾ ಫ್ಯಾಸಿಸ್ಟ್ ವಿರೋಧಿ, ಬಂಡವಾಳಶಾಹಿ ಹಾಗೂ ಸಾಮ್ರಾಜ್ಯಶಾಹಿ ವಿರೋಧಿಯಾಗಿ ಪರಿವರ್ತನೆಗೊಂಡಿದ್ದು ಸಮಾಜವಾದದ ಕಡೆಗೆ ಒಲವು ತೋರುವ ಪ್ರವೃತ್ತಿ ಹೊಂದಿದ್ದರು. ಜರ್ಮನಿಯಲ್ಲಿ ಲೋಹಿಯಾ 'ಅಲ್ಲಿಯ ಸಮಾಜವಾದಿ ಪಕ್ಷದ ಜೊತೆಗೆ ಅತ್ಯಂತ ಹೆಚ್ಚಿನ ಮಟ್ಟದ ಬೌದ್ಧಿಕ ಹಾಗೂ ತಾತ್ವಿಕ ಸಂಬಂಧವನ್ನು ಇಟ್ಟುಕೊಂಡಿದ್ದರು.'[2] 1934ರಲ್ಲಿ ಭಾರತದಲ್ಲಿ ಕಾಂಗ್ರೆಸ್ ಸಮಾಜವಾದೀ ಪಕ್ಷವನ್ನು ಕಟ್ಟುವುದರಲ್ಲಿ ಅವರು ಸಕ್ರಿಯವಾಗಿ ದುಡಿದರು. ಗಾಂಧೀಜಿಯವರ ಪ್ರಭಾವ ಅವರ ಮೇಲೆ ಸಾಕಷ್ಟು ಆಗಿತ್ತು. ಗಾಂಧೀಜಿಯು ಶಕ್ತಿ ಮತ್ತು ಸ್ಥೈರ್ಯಗಳ ಒಂದು ಮೂಲಪ್ರೇರಣೆ ಎಂಬುದಾಗಿ ಅವರು ಭಾವಿಸಿದ್ದರು. ಬರ್ಲಿನ್ನಿನಲ್ಲಿದ್ದಾಗಲೇ ಗಾಂಧೀ–ಇರ್ವಿನ್ ಒಪ್ಪಂದಕ್ಕೆ ಸಂಬಂಧಪಟ್ಟಂತೆ ಗಾಂಧೀಜಿಯವರ ಪಾತ್ರ ಕಮ್ಯೂನಿಸ್ಟರಿಂದ ಟೀಕೆಗೊಳಗಾದರೂ ಲೋಹಿಯಾ ಅದನ್ನು ಪ್ರಬಲವಾಗಿ ಸಮರ್ಥಿಸಿದ್ದರು. ಉಪ್ಪು ಮತ್ತು ಸತ್ಯಾಗ್ರಹ ಎಂಬ ಅವರ ಮಹಾಪ್ರಬಂಧದ ಶೀರ್ಷಿಕೆಯೇ ಬರ್ಲಿನ್ನಿನಲ್ಲಿದ್ದಾಗಲೂ ಅವರು ಗಾಂಧೀಜಿಯವರಿಂದ ಪ್ರೇರಣೆ ಪಡೆದುಕೊಳ್ಳುತ್ತಿದ್ದರು ಹಾಗೂ ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡಿದ್ದರು ಎಂಬುದನ್ನು ಸಮರ್ಥಿಸುತ್ತದೆ. ಗಾಂಧೀಜಿಯವರ ವಿಚಾರದಲ್ಲಿ ಅವರಿಗೆ ಅಪಾರವಾದ ಪ್ರೀತಿಗೌರವಗಳಿದ್ದ ಕಾರಣದಿಂದಾಗಿಯೇ 1939ರಲ್ಲಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕಾಗಿ ನಡೆದ ಐತಿಹಾಸಿಕ ಚುನಾವಣೆಯಲ್ಲಿ ಲೋಹಿಯಾ ತಟಸ್ಥ ನೀತಿ ಅನುಸರಿಸಿದರು. ಅವರು ಪಟ್ಟಾಭಿ ಸೀತಾರಾಮಯ್ಯ ಅಥವಾ ಸುಭಾಸ್ ಚಂದ್ರ ಬೋಸ್ ಇಬ್ಬರ ಪೈಕಿ ಯಾರ ಕಡೆಗೂ ಒಲವು ತೋರಲಿಲ್ಲ. ಕಾಂಗ್ರೆಸ್ ಸಮಾಜವಾದಿಗಳಾದರೂ ಸುಭಾಷ್‌ಚಂದ್ರಬೋಸರಿಗೆ ಬೆಂಬಲ ಸೂಚಿಸಿದರು.

ಹಾಗೆಯೇ ಅನಂತರದಲ್ಲಿ ಕಾಂಗ್ರೆಸ್ ಅಧ್ಯಕ್ಷರಾದ ಬೋಸರ ಮುಂದೆ ಪಂಡಿತ ಗೋವಿಂದವಲ್ಲಭಪಂತ್‌ರವರು ಮಹಾತ್ಮಾಗಾಂಧಿರವರಲ್ಲಿ ಪೂರ್ಣವಾಗಿ ನಂಬಿಕೆಯಿಟ್ಟಿರುವ ಕಾರ್ಯಕಾರಿ ಸಮಿತಿಯೊಂದನ್ನು ನೇಮಕಮಾಡಲು ನಿರ್ಣಯ ಮುಂದಿಟ್ಟಾಗ, ಸಮಾಜವಾದಿಗಳು ತಾಟಸ್ಥ್ಯ ವಹಿಸಿದರೆ, ಲೋಹಿಯಾ ಆ ನಿರ್ಣಯವನ್ನು ಬೆಂಬಲಿಸಿದರು. ಆದರೆ, ಗಾಂಧೀಜಿಯ ಬಗೆಗೆ ಅವರಿಗಿದ್ದ ಅಗಾಧ ನಿಷ್ಠೆ ಅವಿಮರ್ಶಾತ್ಮಕವಾದುದ್ದಾಗಿರಲಿಲ್ಲ.

ನೆಹರೂ ಸಹ ಲೋಹಿಯಾ ಅವರನ್ನು ಆಕರ್ಷಿಸಿದ್ದರು. ಲೋಹಿಯಾ ಮಾತಿನಲ್ಲಿ ಹೇಳುವುದಾದರೆ ''ನನ್ನ ಹಾಗೂ ನನ್ನ ದೇಶದ ಬಾಂಧವರ ಮೇಲೆ ನೆಹರೂ ಅವರು ಮಾಡಿದ ಅತ್ಯಂತ ಹೆಚ್ಚಿನ ಮಟ್ಟದ ಮೋಡಿ ಎಂದರೆ ಅವರ ಮಹಾ ಸೂಕ್ಷ್ಮಜ್ಞತೆ ಅಥವಾ ಅಂತಹ ಸೂಕ್ಷ್ಮಜ್ಞತೆ ತಮಗಿದೆಯೆಂಬುದನ್ನು ಅವರು ಮನದಟ್ಟು ಮಾಡುವ ಬಗೆ.''[3] ಕೆಲವು ಕಾಲ ಅವರಿಬ್ಬರೂ ತುಂಬ ಸೌಹಾರ್ದದಿಂದ ಒಟ್ಟಿಗೆ ದುಡಿದರು. ೧೯೩೭ರಲ್ಲಿ ಕಾಂಗ್ರೆಸ್ ಸಂಸ್ಥೆಯಲ್ಲಿ ಸ್ಥಾಪನೆಗೊಂಡಿದ್ದ ವಿದೇಶಾಂಗ ವ್ಯವಹಾರಗಳ ವಿಭಾಗದ ಕಾರ್ಯದರ್ಶಿ ಹುದ್ದೆಯನ್ನು ನಿರ್ವಹಿಸಲು ನೆಹರೂ ಲೋಹಿಯಾರ ವರಿಗೆ ಕರೆಕೊಟ್ಟರು. ಲೋಹಿಯಾ ೧೯೩೮ರ ವರೆಗೆ ಆ ಹುದ್ದೆಯಲ್ಲಿ ಸೇವೆಸಲ್ಲಿಸಿದರು. ಕಾಂಗ್ರೆಸ್ ಸಮಾಜವಾದಿ ಪಕ್ಷದ ಎನ್.ಇ.ಗೆ ಸೇರಿದ ಸದಸ್ಯರೊಬ್ಬರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಯಾವುದೇ ವಿಭಾಗೀಯ ಕಚೇರಿಯ ಸದಸ್ಯರಾಗಿ ರತಕ್ಕದ್ದಲ್ಲ ಎಂಬ ಹೊಸ ನಿಯಮವನ್ನು ಕಾಂಗ್ರೆಸ್ ಜಾರಿಗೆ ತಂದ ಕಾರಣ ಅವರು ಆ ಹುದ್ದೆಗೆ ರಾಜಿನಾಮೆ ಕೊಟ್ಟರು. ಅವರು ಆ ವಿಭಾಗದಲ್ಲಿ ಕೆಲಸ ಮಾಡಿದ ಎರಡು ವರ್ಷಗಳಷ್ಟು ಅಲ್ಪಕಾಲದಲ್ಲಿಯೇ ಭಾರತದ ವಿದೇಶಾಂಗ ನೀತಿಗೆ ಭದ್ರವಾದ ಬುನಾದಿಹಾಕುವಲ್ಲಿ ಸಲ್ಲಿಸಿದ ಸೇವೆ ಗಮನಾರ್ಹವಾದುದು. ಆ ವಿದೇಶಾಂಗ ವಿಭಾಗ ಲೋಹಿಯಾ ಬರೆದ ಕೆಲವು ಲೇಖನಗಳನ್ನು ಮತ್ತು ಕಿರುಹೊತ್ತಗೆಗಳನ್ನು ಪ್ರಕಟಿಸಿತು. ಇವುಗಳಲ್ಲಿ ಕೆಲವನ್ನು ಹೆಸರಿಸಬಹುದಾದರೆ, On the struggle for civil liberties, Indian foreign policy, India and china, Indian in foreign lands,Look of the foreign contractors, The salary of the Government officers, ಇತ್ಯಾದಿ .

ಫೆಬ್ರವರಿ ೧೯೩೭ರಲ್ಲಿ ಲೋಹಿಯ ''ಸ್ವರಾಜ್ ಕ್ಯಾ ಔರ್ ಕೈಸೆ?'' ಎಂಬ ಹಿಂದಿ ಕಿರುಹೊತ್ತಗೆಯನ್ನು ಹೊರತಂದರು.[4] ಅದು ಸರ್ಕಾರಕ್ಕೆ ದ್ರೋಹ ಬಗೆಯುವ ವಿಚಾರಗಳನ್ನು ಒಳಗೊಂಡಿತ್ತೆಂಬ ಆಧಾರದ ಮೇಲೆ ಉತ್ತರಪ್ರದೇಶದ ಸರ್ಕಾರ ಅದರ ಎಲ್ಲ ಪ್ರತಿಗಳನ್ನು ಮುಟ್ಟುಗೋಲು ಹಾಕಿಕೊಂಡಿತು.

1938ನೇ ಇಸವಿಯು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವಲಯಗಳಲ್ಲಿ ಅನೇಕ ಬಗೆಯ ಏರಿಳಿತಗಳನ್ನು ಕಂಡ ವರ್ಷವಾಗಿತ್ತು. ಮುಂಬರುವ ಯುದ್ಧದ ಕರಾಳ ಮೋಡಗಳು ಯೂರೋಪಿನಾದ್ಯಂತ ಭಯ ಹುಟ್ಟಿಸುವಂತಿದ್ದವು. ಆ ದಿನಗಳಲ್ಲಿ ಯುದ್ಧ ನಿಷೇಧವನ್ನು ಕುರಿತು ಪ್ರಚಾರ ಮಾಡುವುದೇ ಲೋಹಿಯಾರವರ ಪ್ರಮುಖ ಕಾರ್ಯವಾಗಿತ್ತು. ಭಾರತೀಯರು ಈ ಯುದ್ಧದಲ್ಲಿ ಯಾವ ಬಣಕ್ಕೂ ಸೇರದೆ ತಟಸ್ಥರಾಗಿದ್ದುಕೊಂಡು ಭಾರತೀಯ ನೆಲದಿಂದ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಕಿತ್ತೊಗೆಯುವ ತಮ್ಮ ಚಳುವಳಿಯನ್ನು ತೀವ್ರಗೊಳಿಸಬೇಕೆಂಬುದು ಅವರ ಅಭಿಮತವಾಗಿತ್ತು. ಲೋಹಿಯಾ ಫ್ಯಾಸಿಸಂ ಹಾಗೂ ಸಾಮ್ರಾಜ್ಯಶಾಹಿ ಎರಡಕ್ಕೂ ವಿರೋಧವಾಗಿದ್ದರು. 'ಬಂಡವಾಳಶಾಹಿ, ಫ್ಯಾಸಿಸಂ ಹಾಗೂ ಸಾಮ್ರಾಜ್ಯಶಾಹಿ-ಇವೆಲ್ಲಾ ಒಂದು ಸಿದ್ಧಾಂತದ ಬೇರೆ ಬೇರೆ ಮುಖಗಳೆಂದು ಅವರು ಭಾವಿಸಿದ್ದರು. ಅವರ ಮಾತುಗಳನ್ನು ಹೀಗೆ ಉಲ್ಲೇಖಿಸಬಹುದು: ''ಏಕಸ್ವಾಮ್ಯ ಬಂಡವಾಳಶಾಹಿ ಗುಂಪುಗಳು ತಮ್ಮ ಸ್ವಹಿತ ಕಾಪಾಡಿಕೊಂಡು ಅಧಿಕಾರದಲ್ಲಿ ಉಳಿಯಲು ಮಾಡುವ ಪ್ರಯತ್ನಗಳೇ ಸ್ವದೇಶದಲ್ಲಿ ಫ್ಯಾಸಿಸಂ ಹುಟ್ಟುಹಾಕುತ್ತವೆಯಾದರೆ ಬೇರೆ ದೇಶಗಳಲ್ಲಿ ಅದೇ ಸಾಮ್ರಾಜ್ಯಶಾಹಿ ಆಕ್ರಮಣಗಳಿಗೆ ಮತ್ತು ಸೆಣಸಾಟಗಳಿಗೆ ದಾರಿಮಾಡಿ ಕೊಡುತ್ತವೆ''.[5]

24 ಮೇ 1939ರಂದು ಮೊದಲ ಬಾರಿಗೆ ಲೋಹಿಯಾರವರನ್ನು ಕಲ್ಕತ್ತೆಯಲ್ಲಿ ದಸ್ತಗಿರಿ ಮಾಡಲಾಯಿತು. ಸರ್ಕಾರ ಅವರನ್ನು ಜಾಮೀನಿನ ಮೇಲೆ ಬಿಟ್ಟಿತಾದರೂ, ಕಲ್ಕತ್ತೆಯ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಅವರ ಮೇಲೊಂದು ಮೊಕದ್ದಮೆ ಹೂಡಿತು. ಅಲ್ಲಿ ರಾಮಮನೋಹರರು ತಮ್ಮ ಪರವಾಗಿ ತಾವೇ ವಾದಮಾಡಿ 14 ಆಗಸ್ಟ್ 1939ರಂದು ನಿರ್ದೋಷಿ ಎನಿಸಿಕೊಂಡು ಹೊರಬಂದರು.

1939ರ ಸೆಪ್ಟೆಂಬರ್ ಒಂದರಂದು ಹಿಟ್ಲರ್ ಪೋಲೆಂಡಿನ ಮೇಲೆ ಆಕ್ರಮಣ ಮಾಡಿದ್ದ ಹಾಗೂ ಸೆಪ್ಟೆಂಬರ್ ಮೂರರಂದು ಬ್ರಿಟನ್ ಜರ್ಮನಿಯ ಮೇಲೆ ಯುದ್ಧ ಹೂಡಿತು. ಆಗ ಭಾರತದ ಗವರ್ನರ್ ಜನರಲ್ ನಾಡಿನ ಜನತೆಯನ್ನಾಗಲಿ ಅಥವಾ ಅವರ ಪ್ರತಿನಿಧಿಗಳನ್ನಾಗಲಿ ಕೇಳದೆ ಭಾರತ ಮೈತ್ರಿಕೂಟದಲ್ಲಿ ಸೇರಿ ಯುದ್ಧದಲ್ಲಿ ಭಾಗಿಯಾಗಿದೆಯೆಂದು ಘೋಷಣೆ ಮಾಡಿದರು. 1939ರ ಅಕ್ಟೋಬರ್ ಒಂಬತ್ತರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ವಾರ್ಧಾದಲ್ಲಿ ಸಭೆಸೇರಿತು. ಸ್ವತಂತ್ರ ಭಾರತವು ಯುದ್ಧದಲ್ಲಿ ಬ್ರಿಟಿಷರಿಗೆ ಬೆಂಬಲ ನೀಡುತ್ತದೆ ಎಂಬ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಗೊತ್ತುವಳಿಯನ್ನು ಲೋಹಿಯಾ ವಿರೋಧಿಸಿದರು. ಆ ಸಂದರ್ಭದಲ್ಲಿ ಅವರು ಹೇಳಿದ ಮಾತು ಹೀಗಿದೆ : ''ಸಹಕಾರ ಇಲ್ಲವೇ ಬೆಂಬಲ

ನೀಡುವ ಪ್ರಶ್ನೆ ಉದ್ಭವಿಸುವುದು ಸ್ವಾತಂತ್ರ್ಯ ಪಡೆದ ಅನಂತರ ಮಾತ್ರ. ಬ್ರಿಟಿಷರ ಜೊತೆ ಯುದ್ಧದಲ್ಲಿ ಸಹಕರಿಸುವ ಕಾರಣದಿಂದಾಗಿ ಭಾರತಕ್ಕೆ ಸ್ವಾತಂತ್ರ್ಯ ದೊರೆಯುತ್ತದೆ ಎಂಬ ಸುಳ್ಳು ಭರವಸೆಗೆ ಅವಕಾಶ ಮಾಡಿಕೊಡುವುದು ತರವಲ್ಲ.''[6] ಈ ದಿನಗಳಲ್ಲಿ ಲೋಹಿಯಾ 'To Hell with Armaments' (ಶಸ್ತ್ರೀಕರಣಕ್ಕೆ ಧಿಕ್ಕಾರ) ಎಂಬ ಲೇಖನವೊಂದನ್ನು ಬರೆದರು. ಯುದ್ಧದಲ್ಲಿ ಬಳಕೆಯಾಗುವ ಮಾರಕ ಶಸ್ತ್ರಾಸ್ತ್ರಗಳು ಹಾಗೂ ಅವುಗಳ ಬಳಕೆಯಿಂದ ಉಂಟಾಗುವ ಪರಿಣಾಮಗಳು–ಇವುಗಳ ಬಗೆಗೆ ಅವರು ಜನಸಮುದಾಯದ ಗಮನ ಸೆಳೆಯುವ ಪ್ರಯತ್ನ ಮಾಡಿದ್ದರು. ಲೋಹಿಯಾ ಮತ್ತು ಇತರ ಸಮಾಜವಾದಿ ಮುಖಂಡರು ತಕ್ಷಣ ಸತ್ಯಾಗ್ರಹ ನಡೆಸುವಂತೆ ಆಗ್ರಹಿಸಿದ್ದರು.

ಲೋಹಿಯಾರ ಚಟುವಟಿಕೆಗಳಿಂದ ವಿಕ್ಷುಬ್ಧಗೊಂಡ ಬ್ರಿಟಿಷ್ ಸರ್ಕಾರ 1940ರ ಜೂನ್ ಏಳರಂದು ಅಲಹಾಬಾದಿನ ಸ್ವರಾಜ್ ಭವನದಲ್ಲಿ ಅವರನ್ನು ಬಂಧಿಸಿತು. 1940ರ ಮೇ ಹನ್ನೊಂದರಂದು ಉತ್ತರಪ್ರದೇಶದ ಸುಲ್ತಾನ್‌ಪುರ ಜಿಲ್ಲೆಯ ದೋಸ್ತ್‌ಪುರ ಎಂಬಲ್ಲಿ ಲೋಹಿಯಾ ಉದ್ರೇಕಕಾರಿ ಭಾಷಣ ಮಾಡಿ ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಗವರ್ನರುಗಳ ಸರ್ವಾಧಿಕಾರಿ ಆಡಳಿತವನ್ನು ಜಾರಿಗೆ ಕೊಟ್ಟಿದ್ದ ಬ್ರಿಟಿಷ್ ಸರ್ಕಾರವನ್ನು ಕಟುವಾಗಿ ಟೀಕಿಸಿ, ಜನರು ಬಲವಾಗಿ ಅಸಹಕಾರ ಚಳವಳಿ ಹೂಡಬೇಕೆಂದು ಕರೆಕೊಟ್ಟದ್ದರ ಕಾರಣವಾಗಿ ಈ ದಸ್ತಗಿರಿಯನ್ನು ಮಾಡಲಾಗಿತ್ತು. ಅವರಿಗೆ ಚಿತ್ರಹಿಂಸೆಕೊಟ್ಟು, ಕೈಗಳಿಗೆ ಕೋಳ ಹಾಕಿ ಮೂರು ಮೈಲಿ ದೂರದ ಜಿಲ್ಲಾ ನ್ಯಾಯಾಲಯಕ್ಕೆ ಜೈಲಿನಿಂದ ನಡೆಸಿಕೊಂಡು ಬರಲಾಯಿತು. ನ್ಯಾಯಾಲಯದಲ್ಲಿ ಹೇಳಿಕೆ ನೀಡುತ್ತಾ ಲೋಹಿಯಾ ತಮ್ಮನ್ನು ಸಮರ್ಥಿಸಿಕೊಂಡರು :

> ''ನಾವು ಶಸ್ತ್ರಾಸ್ತ್ರಗಳನ್ನು ಬಳಸುವ ದಾರಿಗೆ ಇಳಿದಾಗ ನಾವೇ ಅಳೆದೆಯವರಾಗುತ್ತೇವೆ. ಶಸ್ತ್ರಗಳ ಮೇಲೆ ನೆಚ್ಚಿಗೆ ಇಡುವವರು ತಮ್ಮ ಅಂತಃಕರಣದ ಮೇಲೆ ನೆಚ್ಚಿಗೆ ಇಡಲಾರರು. ಅವರು ತಮ್ಮದೇ ಅಸ್ತ್ರಗಳಿಗೆ ಗುಲಾಮರಾಗುತ್ತಾರೆ. ಅವರಲ್ಲಿ ಸ್ವಂತ ಶಕ್ತಿಯೆಂಬುದೇ ಉಳಿದಿರುವುದಿಲ್ಲ..... ಪ್ರೌಢ ಪ್ರಜಾಪ್ರಭುತ್ವ ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಅಸ್ತಿತ್ವಕ್ಕೆ ಬರಬೇಕು. ಅಲ್ಲಿ ಸಾಮ್ರಾಜ್ಯಶಾಹಿಗಾಗಲಿ ಅಥವಾ ಬಂಡವಾಳಶಾಹಿಗಾಗಲಿ ಖಂಡಿತ ಅವಕಾಶವಿರತಕ್ಕದ್ದಲ್ಲ... ಬ್ರಿಟನ್ ನಾಶವಾಗಿಹೋಗಲೆಂದು ನಾನು ಬಯಸುವುದಿಲ್ಲ. ಬ್ರಿಟಿಷರು ನಮಗೆ ಕೆಟ್ಟದ್ದು ಮಾಡಿದ್ದಾರೆ ನಿಜ, ಆದರೆ ನಾನು ಅವರಿಗೆ ಕೇಡನ್ನು ಬಯಸುವುದಿಲ್ಲ. ಮತ್ತೆ ಈ

> ಬ್ರಿಟಿಷ್ ಮಂದಿ ಇಂದು ಪ್ರಪಂಚದ ಜನರನ್ನೆಲ್ಲ ಗುಲಾಮರನ್ನಾಗಿಸುವ ವ್ಯವಸ್ಥೆಯೊಂದನ್ನು ತಮ್ಮ ಹೆಗಲ ಮೇಲೆ ಹೊತ್ತು ತಿರುಗುತ್ತಿದ್ದಾರಲ್ಲ ಎಂಬುದು ನನ್ನನ್ನು ಯಾತನೆಗೆ ಈಡುಮಾಡಿರುವ ಸಂಗತಿಯಾಗಿದೆ.''[7]

1940ರ ಜುಲೈ ಒಂದರಂದು ನ್ಯಾಯಾಲಯ ತನ್ನ ತೀರ್ಪನ್ನು ನೀಡಿತು ಹಾಗೂ ಆ ಪ್ರಕಾರ ಲೋಹಿಯಾರವರಿಗೆ ಎರಡು ವರ್ಷಗಳ ಕಠಿಣ ಶಿಕ್ಷೆ ವಿಧಿಸಲಾಗಿತ್ತು.

1941ರಲ್ಲಿ ಅಂತಾರಾಷ್ಟ್ರೀಯ ಪರಿಸ್ಥಿತಿಯಲ್ಲಿ ಒಂದು ಗಂಭೀರವಾದ ತಿರುವು ಕಂಡುಬಂದಿತು. ಮಿತ್ರಕೂಟದ ರಾಷ್ಟ್ರಗಳು ಏಷಿಯಾ ಮತ್ತು ಯೂರೋಪ್ ಎರಡರಲ್ಲಿಯೂ ಪ್ರತಿಕೂಲ ಪರಿಣಾಮಗಳನ್ನು ಎದುರಿಸಬೇಕಾಯಿತು. ಭಾರತೀಯರನ್ನು ಸಮಾಧಾನಪಡಿಸುವ ಸಲುವಾಗಿ ಬ್ರಿಟಿಷ್ ಸರ್ಕಾರ ಲೋಹಿಯಾ ಅವರನ್ನು ಮತ್ತು ಇತರ ಅನೇಕ ಮುಂದಾಳುಗಳನ್ನು 1941ರ ಡಿಸೆಂಬರ್‌ನಾಲ್ಕರಂದು ಬಿಡುಗಡೆ ಮಾಡಿತು. ಜಪಾನಿನ ವಿರುದ್ಧವಾಗಿ ಸಮರ್ಥನೆ ಪಡೆಯುವ ಸಲುವಾಗಿ ಭಾರತೀಯರ ಬೆಂಬಲಕ್ಕಾಗಿ ಹವಣಿಸಿ ಬ್ರಿಟಿಷ್ ಸರ್ಕಾರ ಒಂದು ಸಂಧಾನ ಯೋಜನೆಯನ್ನು ರೂಪಿಸಿತು; ಆ ಸಲುವಾಗಿ ಸರ್ ಸ್ಟಾಫರ್ಡ್ ಕ್ರಿಪ್ಸ್ ಅವರನ್ನು ಭಾರತಕ್ಕೆ ಕಳುಹಿಸಿತು. ಅನೇಕ ಪ್ರಯತ್ನಗಳನ್ನು ಮಾಡಿದರೂ ಈ ಸಂಧಾನ ಯಶಸ್ವಿಯಾಗಲಿಲ್ಲ. ಲೋಹಿಯಾ ಈ ಸಂಧಾನವನ್ನು ಪ್ರಬಲವಾಗಿ ವಿರೋಧಿಸಿದರು. ತಾವು ಬರೆದ *"The Mystery of Sir Stafford Cripps"* ಎಂಬ ಕಿರುಹೊತ್ತಗೆಯಲ್ಲಿ ಲೋಹಿಯಾ ಅವರು ''ಈ ಬ್ರಿಟಿಷರು ಸ್ವಯಂಪ್ರೇರಣೆಯಿಂದ ಭಾರತದಿಂದ ಹಿಂದೆಗೆಯುವಂತಹ ಜನ ಅಲ್ಲ'' ಎಂದು ಘೋಷಿಸಿದರು. ಅವರ ಆ ಮಾತಿನಂತೆ ''ಬ್ರಿಟಿಷ್ ಸರ್ಕಾರಕ್ಕೆ ಬೇಕೆನಿಸಿರುವ ಮೂಲಭೂತ ಅಗತ್ಯ ಎಂದರೆ ಬ್ರಿಟಿಷ್ ಚಕ್ರಾಧಿಪತ್ಯ ಮಾತ್ರ.''[8] ಮುಂದುವರಿದು ಲೋಹಿಯಾ ಈ ರೀತಿ ವಾದಿಸಿದರು: ''ಒಂದು ವೇಳೆ ಚರ್ಚಿಲ್ ಏನಾದರೂ ರಿಯಾಯಿತಿ ತೋರಿದ್ದರೆ ಅದು ತಮ್ಮ ಸಾಮ್ರಾಜ್ಯಶಾಹಿಯ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ, ಅಷ್ಟೆ; ದಂಗೆಯೇಳುವ ತಮ್ಮ ಅಧೀನ ರಾಷ್ಟ್ರವೊಂದನ್ನು ತನ್ನ ಭೌಗೋಳಿಕ ಹಾಗೂ ರಾಜಕೀಯ ಸ್ಥಿತಿಗತಿಗಳು ಹದಗೆಡುತ್ತಿರುವ ಸಮಯದಲ್ಲಿ ಸಂತುಷ್ಟಿಗೊಳಿಸಲು ಈ ಎಲ್ಲ ಹುನ್ನಾರ.''[9] ಈ ಕ್ರಿಪ್ಸ್ ಸಂಧಾನದ ಕರಡು ಘೋಷಣೆಯನ್ನು ಕುರಿತಂತೆ ಲೋಹಿಯಾ ಅವರು ಅದೊಂದು ''ಭಾರತವನ್ನು ವೈಷಮ್ಯ ತುಂಬಿದ ರಾಜ್ಯಗಳಾಗಿ ಒಡೆಯುವ ಸಂಚಿನ ಪ್ರಯತ್ನ'' ಎಂದು ಪರಿಭಾವಿಸಿದ್ದರು. ಬ್ರಿಟಿಷರ ಹಿತಾಸಕ್ತಿಗಳನ್ನು ಮಾತ್ರ ಕಾಯುವಂತಹ 'ಕೆಲವು ಏಣಿಗಳನ್ನು' ಅದು ಒಳಗೊಂಡಿತ್ತು ಎಂಬುದು ಅವರ ತೀರ್ಮಾನವಾಗಿತ್ತು.

"Treacherous Japan or Complacent Britain" (ವಿಶ್ವಾಸ ದ್ರೋಹಿ ಜಪಾನ್ ಅಥವಾ ಸಂತೃಪ್ತ ಬ್ರಿಟನ್) ಎಂಬ ತಮ್ಮ ಲೇಖನದಲ್ಲಿ ಲೋಹಿಯಾ ಕೇವಲ ಬ್ರಿಟನ್ನನ್ನು ಮಾತ್ರವಲ್ಲದೆ ಜಪಾನನ್ನೂ ಕೂಡ ಟೀಕಿಸಿದರು.

''ಭಾರತೀಯರು ಅವಮಾನ ಹಾಗೂ ದೈನ್ಯತೆಗೆ ಒಳಗಾದ ಏಷಿಯಾದ ಒಂದು ಜನಾಂಗ. ನಾವು ಈ ವಾಸ್ತವಾಂಶದಿಂದ ದೂರ ಓಡಿಹೋಗಬೇಕಾಗಿಲ್ಲ. ಅಲ್ಲದೇ ಜಪಾನ್ ಏಷಿಯಾದ ಒಂದು ಬಲಶಾಲಿ ರಾಷ್ಟ್ರವಾಗಿದೆ. ಒಂದು ವೇಳೆ ನಾನು ಕೇವಲ ಐರೋಪ್ಯ ನೀತಿ ಸಂಹಿತೆಗನುಗುಣವಾಗಿಯೇ ಮನಸ್ಸು ರೂಢಿಸಿ ಕೊಂಡವನಾಗಿದ್ದು, ಮಹಾತ್ಮಾಗಾಂಧಿಯವರಿಂದ ಪ್ರಭಾವಿತನಾಗದೆ ನನ್ನ ಘನವಾದ ಆಯಾಮದ ಬಗೆಗೆ ಅರಿವಿಲ್ಲದೆ ಇದ್ದ ಪಕ್ಷದಲ್ಲಿ ಟೋಜೋನನ್ನು ಮುಕ್ತಕಂಠದಿಂದ ಹೊಗಳುತ್ತಿದ್ದೆ. ಅವನು ಬ್ರಿಟನ್ನನ್ನು ಪರಾಭವಗೊಳಿಸುತ್ತಿರುವುದು ಒಂದು ಸಣ್ಣ ಸಂಗತಿ. ಅದಕ್ಕಿಂತಲೂ ಮಿಗಿಲಾಗಿ ಅವನು ಹಿಟ್ಲರ್‌ನನ್ನು ಮೀರಿ ನಿಂತವನು.... ನಾನು ಟೋಜೋನನ್ನು ಹಿಟ್ಲರ್ ಅಥವಾ ಚರ್ಚಿಲ್ ಅಷ್ಟೇ ಕೆಟ್ಟ ವ್ಯಕ್ತಿಯೆಂದು ಭಾವಿಸುತ್ತೇನೆ, ಏಕೆಂದರೆ ಕ್ರೂರ ನರಹತ್ಯೆ ಇವರ ಇಲ್ಲವೇ ಅವರ ವಿಜಯದಲ್ಲಿ ಕೊನೆಗೊಳ್ಳುವುದಾದರೂ ಉತ್ತಮ ಪ್ರಪಂಚವನ್ನು ಕಾಣಬಯಸುವ ನನ್ನ ಕನಸುಗಳು ನುಚ್ಚುನೂರಾದಂತೆ''[10].

ಆ ದಿನಗಳಲ್ಲಿ ನೆಹರೂ ಎರಡು ಬಗೆಯ ವಿಚಾರಗಳ ದ್ವಂದ್ವದಲ್ಲಿ ಸಿಲುಕಿದ್ದರು. ಫ್ಯಾಸಿಸಂ ವಿಚಾರದಲ್ಲಿ ಅವರು ಪ್ರಬಲವಾದ ವಿರೋಧ ತಳೆದಿದ್ದರು. ಫ್ಯಾಸಿಸ್ಟ್ ಶಕ್ತಿಗಳ ಹಾಗೂ ಮೈತ್ರಿಕೂಟದವರ ನಡುವಣ ಹೋರಾಟದಲ್ಲಿ ಅವರ ಸಹಾನುಭೂತಿ ಮೈತ್ರಿಕೂಟದವರ ಕಡೆಗೇ ಇತ್ತು. ಆದರೆ ಫ್ಯಾಸಿಸಂ ಮತ್ತು ಸಾಮ್ರಾಜ್ಯಶಾಹಿ ಇವೆರಡಕ್ಕೂ ಕಟ್ಟಾ ವಿರೋಧಿಯಾಗಿದ್ದ ಲೋಹಿಯಾಗೆ ನೆಹರೂರವರ ನಿಲುವು ಸರಿದೋರಲಿಲ್ಲ; ಹೀಗಾಗಿ ಅವರು ನೆಹರೂರವರನ್ನು ಟೀಕಿಸಿದರು. ಮೇ 1942ರಲ್ಲಿ ಅಲಹಾಬಾದಿನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ನೆಹರೂರವರನ್ನು ವಿರೋಧಿಸಿದ ಲೋಹಿಯಾ ಗಾಂಧೀಜಿ ಯವರು ಮೀರಾಬೆಹನ್ ಮೂಲಕ ಕಳುಹಿಸಿ ಕೊಟ್ಟಿರುವ ಕ್ವಿಟ್ ಇಂಡಿಯಾಗೆ ಸಂಬಂಧಿಸಿದ ಕರಡು ನಿರ್ಣಯವನ್ನು ಒಪ್ಪಿಕೊಳ್ಳಲು ಸದಸ್ಯರಿಗೆ ಕರೆಕೊಟ್ಟರು. ಆ ಸಮಯದಲ್ಲಿ ಲೋಹಿಯಾ ಒಂದು ಹೊಸ ಯೋಜನೆಯ ಬಗ್ಗೆ ಪರ್ಯಾಲೋಚಿಸಿ 'ಭಾರತೀಯ ನಗರಗಳನ್ನು ಮುಕ್ತವಾಗಿ ಇಡಲಾಗಿದೆಯೆಂದು ಘೋಷಿಸಲು ಸರ್ಕಾರವನ್ನು ಒತ್ತಾಯಿಸುವ ದಿಕ್ಕಿನಲ್ಲಿ ಗಾಂಧೀಜಿಯವರ ಮನವೊಲಿಸಲು ಪ್ರಯತ್ನಿಸಿದರು.'[11]

ಮುಂಬಯಿಯಲ್ಲಿ ನಡೆದ ತನ್ನ ಐತಿಹಾಸಿಕ ಅಧಿವೇಶನದಲ್ಲಿ 1942 ಆಗಸ್ಟ್ ಎಂಟರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಪ್ರಸಿದ್ಧವಾದ ''ಭಾರತ ಬಿಟ್ಟು ತೊಲಗಿ'' ಗೊತ್ತುವಳಿಗೆ ಅನುಮೋದನೆ ನೀಡಿತು. ಆಗಸ್ಟ್ ಒಂಬತ್ತರ ಮುಂಜಾನೆಯೇ ಗಾಂಧೀಜಿಯವರೂ ಸೇರಿದಂತೆ ಕಾಂಗ್ರೆಸ್ ನಾಯಕರನೇಕರ ಬಂಧನವಾಯಿತು. ಆದರೆ ಲೋಹಿಯಾ ಪೋಲೀಸರ ಕೈಗೆ ಸಿಕ್ಕದೆ ತಪ್ಪಿಸಿಕೊಂಡರು. ಹೋರಾಟಕ್ಕೆ ಮಾರ್ಗದರ್ಶನ ನೀಡಲು ಮುಂಬೈಯಲ್ಲಿ ಒಂದು ಕೇಂದ್ರೀಯ ನಿರ್ದೇಶನಾಲಯವನ್ನು ಸ್ಥಾಪಿಸಲಾಯಿತು. ಲೋಹಿಯಾ ಮತ್ತು ಅಚ್ಯುತ ಪಟವರ್ಧನ್ ಅದರ ಪ್ರಮುಖ ವ್ಯಕ್ತಿಗಳಾದರು. ಹೋರಾಟದ ಕಾರ್ಯಕ್ರಮವನ್ನು ಸೂಕ್ತವಾಗಿ ರೂಪಿಸುವ ಜವಾಬ್ದಾರಿಯನ್ನು ಲೋಹಿಯಾರವರಿಗೆ ವಹಿಸಲಾಗಿತ್ತು. ಆ ಸಮಯದಲ್ಲಿ ಲೋಹಿಯಾ ಅನೇಕ ಕರಪತ್ರಗಳನ್ನೂ, ಕಿರುಹೊತ್ತಗೆಗಳನ್ನೂ ಹೊರತಂದರು. 'Fighters March Forward' ಎಂಬುದು ಆ ಪೈಕಿ ಜನರನ್ನು ಹೆಚ್ಚಾಗಿ ಪ್ರೇರೇಪಿಸುವಂತಿತ್ತು. ಆ ಕಾಲಕ್ಕೆ ಅವರ ಸ್ಫೂರ್ತಿಯಿಂದಾಗಿ ಎರಡು ಭೂಗತ ಬಾನುಲಿಕೇಂದ್ರಗಳನ್ನು ಮುಂಬಯಿ ಮತ್ತು ಕಲ್ಕತ್ತೆಯಲ್ಲಿ ಪ್ರಾರಂಭಿಸಲಾಯಿತು. 1942ರ ಆಗಸ್ಟ್ 13 ರಿಂದ ನವೆಂಬರ್ 14 ರವರೆಗೆ 94 ದಿನಗಳ ಕಾಲ ಈ ಕಾಂಗ್ರೆಸ್ ರೇಡಿಯೋ ಜನತೆಯಲ್ಲಿ ಅಪಾರ ಸ್ಫೂರ್ತಿಯನ್ನು ತುಂಬುವ ಕೆಲಸ ಮಾಡಿತು.

ಒಂದು ವರ್ಷ, ಒಂಭತ್ತು ತಿಂಗಳು ಹಾಗೂ ಹನ್ನೆರಡು ದಿನಗಳ ಈ ಭೂಗತ ಅವಧಿಯ ಕಥೆ ನಿಜಕ್ಕೂ ತುಂಬಾ ರೋಚಕವೂ ರೋಮಾಂಚನಕಾರಿಯೂ ಆದುದು. ದೇಶಾದ್ಯಂತ ಎಲ್ಲೆಡೆ ಪಟ್ಟಿ ಮಾಡಿದ್ದ ಮೂರು ಹೆಸರುಗಳ ಪೈಕಿ ಲೋಹಿಯಾ ಅವರದೂ ಒಂದಾಗಿತ್ತು. ಉಳಿದ ಇನ್ನೆರಡು ಹೆಸರುಗಳೆಂದರೆ ಜಯಪ್ರಕಾಶ್ ನಾರಾಯಣ್ ಮತ್ತು ಅಚ್ಯುತ ಪಟವರ್ಧನ್. ಕಮ್ಯೂನಿಸ್ಟರ ವಿಚಾರದಲ್ಲಿ ಲೋಹಿಯಾ ಅವರಿಗಿದ್ದ ತೀವ್ರ ಅವಿಶ್ವಾಸವು ''ಭಾರತ ಬಿಟ್ಟು ತೊಲಗಿ'' ಚಳುವಳಿಯ ಕಾಲದಲ್ಲಿ ಪರಾಕಾಷ್ಠೆಯನ್ನು ಮುಟ್ಟಿತು. ಏಕೆಂದರೆ ಆ ಸಮಯದಲ್ಲಿ ಜನತೆಯ ಯುದ್ಧ ಎಂಬ ನೆಪವನ್ನು ಮುಂದಿಟ್ಟುಕೊಂಡ ಕಮ್ಯುನಿಸ್ಟರು ಬ್ರಿಟಿಷರ ಪರವಹಿಸಿ ನಾಡಿನ ಹೋರಾಟಗಾರರ ಪ್ರಯತ್ನಗಳನ್ನು ಹಾಳುಗೆಡವಿದರು.[12]

1944ರ ಮೇ ಇಪ್ಪತ್ತರಂದು ಲೋಹಿಯಾ ಅವರನ್ನು ಮುಂಬೈಯಲ್ಲಿ ದಸ್ತಗಿರಿ ಮಾಡಿ, ಲಾಹೋರ್ ಕೋಟೆಯ ಬಂಧೀಖಾನೆಗೆ ಕಳುಹಿಸಲಾಯಿತು. ಲೋಹಿಯಾ ಮಾತಿನಲ್ಲಿಯೇ ಹೇಳುವುದಾದರೆ ''ಈ ಸೆರೆಮನೆ ಬ್ರಿಟಿಷರು ತಮ್ಮ ಅತ್ಯಂತ ಅಪಾಯಕಾರಿ ಸೆರೆಯಾಳುಗಳನ್ನು ಹಿಡಿದಿಟ್ಟು, ಅವರ ಮೇಲೆ ಎಲ್ಲ ಪ್ರಾಚೀನ

ಹಿಂಸಾವಿಧಾನಗಳನ್ನು ಪ್ರಯೋಗಿಸುತ್ತಿದ್ದ ಜಾಗ ಅಷ್ಟೇ ಅಲ್ಲ, ಚಿತ್ರವಿಚಿತ್ರವಾದ ಹೊಸ ಹೊಸ ಹಿಂಸಾವಿಧಾನಗಳನ್ನು ಕಂಡುಹಿಡಿಯುತ್ತಿದ್ದ ಸ್ಥಳ ಕೂಡ ಆಗಿತ್ತು.''[13] ಲೋಹಿಯಾ ಅವರಿಗೆ ಇಲ್ಲಿ ಬಗೆಬಗೆಯ ರೀತಿಯಲ್ಲಿ ಹಿಂಸೆ ಕೊಡಲಾಯಿತು. ಅವುಗಳಲ್ಲಿ ಅತ್ಯಂತ ಭೀಕರವಾದುದೆಂದರೆ ಬಲವಂತವಾಗಿ ನಿದ್ದೆಗೆಡಿಸುವ ಹಿಂಸಾಚಾರ ಕೆಲವೊಮ್ಮೆ ಬಲವಂತವಾಗಿ ಹಠಯೋಗ ಅಭ್ಯಾಸಮಾಡುತ್ತಿರುವೆನೊ ಎಂದು ಅವರಿಗೆ ಅನಿಸುತ್ತಿತ್ತಂತೆ.[14] ಅವರು ಪ್ರೊ. ಲಾಸ್ಕಿ ಅವರಿಗೆ ಬರೆದ ಕಾಗದದಲ್ಲಿ ಲಾಹೋರ್ ಕೋಟೆಯ ಹಿಂಸಾಚಾರಗಳನ್ನು ಕುರಿತು ವರ್ಣಿಸಿದ್ದಾರೆ. ಅವರ ಕೆಲವು ಮಾತುಗಳು ಹೀಗಿವೆ:

> ''ಒಂದಲ್ಲ ಒಂದು ವಿಧದಲ್ಲಿ ನಾಲ್ಕು ತಿಂಗಳ ಕಾಲ ನನಗೆ ಚಿತ್ರ ಹಿಂಸೆ ಕೊಡಲಾಯಿತೆಂದು ಇಲ್ಲಿ ಹೇಳಬಯಸುತ್ತೇನೆ. ದಿನದಿಂದ ದಿನಕ್ಕೆ, ರಾತ್ರಿಯಿಂದ ರಾತ್ರಿಗೆ ನನ್ನನ್ನು ಸ್ವಲ್ಪವೂ ಮಲಗಲು ಬಿಡದಂತೆ ನೋಡಿಕೊಳ್ಳುತ್ತಿದ್ದರು. ಈ ರೀತಿ ನಾನು ಹತ್ತು ದಿನಗಳವರೆಗೆ ಸಂಪೂರ್ಣ ಎಚ್ಚರವಾಗಿದ್ದೆ. ಬಳಲಿದ ನನ್ನನ್ನು ನಿಲ್ಲಿಸಲು ಪ್ರಯತ್ನಿಸುತ್ತಿದ್ದ ಪೋಲೀಸರಿಗೆ ನಾನು ತಡೆಯೊಡ್ಡುವಾಗ ಕೋಳಹಾಕಿದ ಕೈಗಳ ಸಮೇತ ಒರಟುನೆಲದ ಮೇಲೆ ವರ್ತುಲಾಕಾರವಾಗಿ ದರದರ ಎಳೆದರು.''[15]

ಲೋಹಿಯಾ ಅವರನ್ನು ತದನಂತರ ಆಗ್ರಾ ಜೈಲಿಗೆ ವರ್ಗಾಯಿಸಿದರು. ಅಲ್ಲಿಂದಲೇ ಅವರು ಭಾರತದ ವೈಸರಾಯ್‌ಗೆ ಹಾಗೂ ಉತ್ತರ ಪ್ರದೇಶದ ಗವರ್ನರ್‌ಗೆ ಹಲವಾರು ಪತ್ರಗಳನ್ನು ಬರೆದರು. ಜೈಲಿನಲ್ಲಿದ್ದಾಗಲೇ ಲೋಹಿಯಾ ತಮ್ಮ ತಂದೆಯನ್ನು ಕಳೆದುಕೊಂಡರಾದರೂ ಪೆರೋಲ್‌ನ ಮೇಲೆ ಬಿಡುಗಡೆಯಾಗಲು ತಾವು ಒಪ್ಪಲಿಲ್ಲ.

1945ರಲ್ಲಿ ಯೂರೋಪಿನಲ್ಲಿ ನಡೆಯುತ್ತಿದ್ದ ಯುದ್ಧ ಮೈತ್ರಿಕೂಟದ ಪೂರ್ಣ ವಿಜಯದೊಡನೆ ಕೊನೆಗೊಂಡಿತು. ಇಂಗ್ಲೆಂಡಿನಲ್ಲಿ ಚುನಾವಣೆಗಳು ನಡೆದು ಕನ್ಸರ್ವೇಟಿವ್ ಪಕ್ಷದ ಬದಲಾಗಿ ಲೇಬರ್‌ಪಕ್ಷ ಜಯಗಳಿಸಿ ಆಡಳಿತಸೂತ್ರ ಹಿಡಿದುಕೊಂಡಿತು. 1946ರ ಏಪ್ರಿಲ್ ಹನ್ನೊಂದರಂದು ಲೋಹಿಯಾ ಮತ್ತು ಜಯಪ್ರಕಾಶ್ ನಾರಾಯಣ್ ಇಬ್ಬರೂ ಬಿಡುಗಡೆ ಹೊಂದಿದರು. ಗಾಂಧೀಜಿ ಹಾಗೂ ಇತರ ಕಾಂಗ್ರೆಸ್ ಮುಂದಾಳುಗಳು ಅನುಕ್ರಮವಾಗಿ 1944 ಮತ್ತು 1945ರಲ್ಲಿಯೆ ಬಿಡುಗಡೆ ಹೊಂದಿದ್ದರು. ಆ ಹೊತ್ತಿಗೆ ಕ್ಯಾಬಿನೆಟ್ ಮಿಷನ್ ಭಾರತಕ್ಕೆ ಬಂದಿತ್ತು. ಭಾರತಕ್ಕೆ ಸ್ವಾತಂತ್ರ್ಯ ನೀಡುವ ನಿಟ್ಟಿನಲ್ಲಿ ಕಾರ್ಯಸಾಧ್ಯವಾದ

ಯಾವುದಾದರೂ ಪರಿಹಾರವನ್ನು ಕಂಡುಕೊಳ್ಳಲು ಪೂರ್ಣ ಪ್ರಮಾಣದ ಮಾತುಕತೆಗಳು ನಡೆಯುತ್ತಿದ್ದವು. 1946ರ ಏಪ್ರಿಲ್ ಇಪ್ಪತ್ತನಾಲ್ಕರಂದು ಕಲ್ಕತ್ತಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಲೋಹಿಯಾ "ಕ್ಯಾಬಿನೆಟ್ ಮಿಷನ್ನಿನ ಆಗಮನ ಜನತೆಯ ದೃಢ ನಿರ್ಧಾರದ ಫಲ'' ಎಂದು ಹೇಳಿದರು.[16] ಒಂದು ವೇಳೆ ಈ ಸಂಧಾನ ವಿಫಲವಾದಲ್ಲಿ ಬ್ರಿಟಿಷರ ವಿರುದ್ಧ ಇನ್ನೂ ಉಗ್ರವಾಗಿ ಚಳುವಳಿ ನಡೆಸಲು ನಾಡಬಾಂಧವರು ಸಜ್ಜಾಗಿರಬೇಕೆಂದು ಅವರು ಜನತೆಗೆ ಕರೆನೀಡಿದರು.

ದೀರ್ಘಕಾಲದ ಸೆರೆವಾಸದ ಕಾರಣದಿಂದ ಲೋಹಿಯಾರ ಆರೋಗ್ಯ ತುಂಬಾ ಹದಗೆಟ್ಟಿತ್ತು. ಗೋವಾದಲ್ಲಿದ್ದ ಅವರ ಮಿತ್ರ ಶ್ರೀ ಜ್ಯೂಲಿಯಸ ಮೆನೆಜಿಸ್‌ರವರ ಕೋರಿಕೆಯ ಮೇರೆಗೆ ಲೋಹಿಯಾ ವಿಶ್ರಾಂತಿಯ ಸಲುವಾಗಿ 1946ರ ಜೂನ್ ಹತ್ತರಂದು ಗೋವಾ ತಲುಪಿದರು. ಆದರೆ ಅವರು ಗೋವಾದಲ್ಲಿ ಕಂಡಿದ್ದೇನೆಂದರೆ, ನಿರಂಕುಶ ಪ್ರಭುತ್ವ ಹಾಗೂ ಪ್ರಜಾಸ್ವಾತಂತ್ರ್ಯ ಮತ್ತು ಹಕ್ಕುಗಳ ದಮನ. ಜನ ಲೋಹಿಯಾರ ಬಳಿಗೆ ಸಾಗಿಬಂದರು. ಜೂನ್ 18 ರಂದು ಲೋಹಿಯಾ ಗೋವಾದ ಜನರನ್ನು ಉದ್ದೇಶಿಸಿ ಭಾಷಣಮಾಡಿ ಭಾರತದಲ್ಲಿ ಬ್ರಿಟಿಷ್ ಆಡಳಿತ ಕೊನೆಗೊಳ್ಳುತ್ತಿರುವುದರಿಂದ ಪೋರ್ಚುಗೀಸರು ಕೂಡ ಇಲ್ಲಿರಲು ಸಾಧ್ಯವೇ ಇಲ್ಲ ಎಂದು ಸಾರಿ ಹೇಳಿದರು. ಅವರನ್ನು ಅಲ್ಲಿಯ ಸರ್ಕಾರ ಬಂಧಿಸಿತಾದರೂ ಮಾರನೆಯ ದಿನವೇ ಬಿಡುಗಡೆಮಾಡಿತು. ಅನಂತರ ಅವರು ಗೋವಾ ಸರ್ಕಾರಕ್ಕೆ ಒಂದು ಎಚ್ಚರಿಕೆಯ ಮಾತನ್ನು ಹೇಳುತ್ತಲೇ ಭಾರತಕ್ಕೆ ಹಿಂದಿರುಗಿದರು: "ಇನ್ನು ಮೂರು ತಿಂಗಳೊಳಗೆ ಗೋವಾದ ಸರ್ಕಾರ ಅಲ್ಲಿಯ ಜನರಿಗೆ ಪ್ರಜಾಸ್ವಾತಂತ್ರ್ಯ ಮತ್ತು ಹಕ್ಕಗಳನ್ನು ಒದಗಿಸಲು ವಿಫಲವಾದಲ್ಲಿ ನಾನು ಇಲ್ಲಿ ಪ್ರತಿಭಟಿಸಲು ಮತ್ತೆ ಬರುತ್ತೇನೆ.''

ಗೋವಾದಿಂದ ಲೋಹಿಯಾ ಮುಂಬಯಿಗೆ ಬಂದರು. ಅಲ್ಲಿ ಸಭೆಯೊಂದರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ನೆಹರೂ ಅವರು ಲೋಹಿಯಾ ಮತ್ತು ಜೆ. ಪಿ. ಇಬ್ಬರೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ಸೇರಬೇಕೆಂದೂ ಮತ್ತು ಲೋಹಿಯಾ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುವಂತೆ ಮನವೊಲಿಸಲು ಪ್ರಯತ್ನಪಟ್ಟರು. ಅದಕ್ಕೆ ಪ್ರತಿಯಾಗಿ ಲೋಹಿಯಾ ಮೂರು ಷರತ್ತುಗಳ್ನು ನೆಹರೂರವರ ಮುಂದಿಟ್ಟರು: 1. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಯಾವೊಬ್ಬ ಸದಸ್ಯನೂ ಮಂತ್ರಿಯಾಗತಕ್ಕದ್ದಲ್ಲ. 2. ಕಾಂಗ್ರೆಸ್ ಪಕ್ಷ ಆಡಳಿತಾರೂಢವಾಗುವ ತನ್ನದೇ ಸರ್ಕಾರದ ಬಗೆಗೆ ಹಿತಕಾರಿಯೆನಿಸುವಂತಹ ಟೀಕೆಯನ್ನು ಮಾಡಲು ಅವಕಾಶವಿರುವಂತೆ ಏನಾದರೂ ಸೂತ್ರವನ್ನು ರೂಪಿಸಬೇಕು 3. ಕಾಂಗ್ರೆಸ್ ಅಧ್ಯಕ್ಷರು

ಖಂಡಿತವಾಗಿ ಸರ್ಕಾರದಲ್ಲಿ ಭಾಗಿಯಾಗದೆ ಹೊರಗುಳಿಯಬೇಕು.[17] ನೆಹರೂ ಈ ಷರತ್ತುಗಳಿಗೆ ಸಮ್ಮತಿಸಲಿಲ್ಲ; ಹಾಗಾಗಿ ಲೋಹಿಯಾ ಕೂಡ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲು ಒಪ್ಪಲಿಲ್ಲ. ಮತ್ತೆ ಗೋವಾಕ್ಕೆ ಹೋಗಲು ಲೋಹಿಯಾ ಪಟ್ಟು ಹಿಡಿದಿದ್ದರು. ಆದರೆ ನೆಹರೂ ಮತ್ತು ಪಟೇಲರಂತಹ ಉನ್ನತ ಮಟ್ಟದ ಕಾಂಗ್ರೆಸ್ಸಿಗರು ಈ ಬಗ್ಗೆ ತಳೆದಿದ್ದ ನಿರುತ್ಸಾಹವನ್ನು ಕಂಡು ಅವರಿಗೆ ಆಘಾತವಾಯಿತು. ಪೋರ್ಚುಗೀಸರು ಭಾರತದ ಒಂದು ಭಾಗವನ್ನು ತಮ್ಮ ಅಧೀನದಲ್ಲಿ ಇಟ್ಟುಕೊಂಡಿರುವುದು ಭಾರತದ ಮುಖದ ಮೇಲಿನ ಒಂದು ಸಣ್ಣ ಮೊಡವೆಯಂತಿದೆ ಎಂದು ಬಣ್ಣಿಸಿದ ನೆಹರೂ ಆ ಇಡೀ ಚಳವಳಿಯು ಅಂತಹ ತುರ್ತಿನದೂ ಅಲ್ಲ, ಅಗತ್ಯದ್ದೂ ಅಲ್ಲ ಎಂದು ತಳ್ಳಿ ಹಾಕಿದರು. ಲೋಹಿಯಾ ಅವರ ಪಕ್ಷದವರೇ ಆದ ಅನೇಕ ಮಂದಿ, ಜಯಪ್ರಕಾಶ ನಾರಾಯಣ್ ಅವರನ್ನೂ ಒಳಗೊಂಡಂತೆ, ಗೋವಾ ಹೋರಾಟಕ್ಕೆ ಅಷ್ಟೊಂದು ಮಹತ್ವ ಕೊಡುವಂತಹ ಆಸಕ್ತಿ ತೋರಲಿಲ್ಲ. ಆದರೆ ಇಷ್ಟೆಲ್ಲಾ ಅಡಚಣೆಗಳ ನಡುವೆಯೂ ಲೋಹಿಯಾ ಮಡಗಾಂವ್‌ಗೆ ತೆರಳಲು ತೀರ್ಮಾನಿಸಿದರು. ಗೋವಾ ಸರ್ಕಾರ 1946ರ ಸೆಪ್ಟೆಂಬರ್ ಇಪ್ಪತ್ತೊಂಬತ್ತರಂದು ಅವರನ್ನು ಕೂಲಾಯಿಮ್ ನಿಲ್ದಾಣದಲ್ಲಿ ಬಂಧಿಸಿತು. ಹತ್ತು ದಿನಗಳ ಕಾಲ ಅವರನ್ನು ಚಿತ್ರಹಿಂಸೆಗೆ ಗುರಿಪಡಿಸಿದ ಮೇಲೆ 1946ರ ಅಕ್ಟೋಬರ್ ಎಂಟರಂದು ಬಿಡುಗಡೆ ಮಾಡಲಾಯಿತು. ಕಡೆಗೆ ಗಾಂಧೀಜಿಯವರ ಹಿತವಚನದ ಮೇಲೆಗೆ ಲೋಹಿಯಾ ಗೋವಾಕ್ಕೆ ಮರುಪ್ರವೇಶಮಾಡಲಿಲ್ಲವಾದರೂ ಗೋವಾದ ಜನರ ಸಲುವಾಗಿ ಒಂದು 'ಬಹಿರಂಗ ಪತ್ರ'ವನ್ನು ಹೊರಡಿಸಿದರು. ಪತ್ರದ ಕೊನೆಯಲ್ಲಿ ಅವರು ಈ ರೀತಿ ಹೇಳಿದ್ದರು: ''ನಿಮ್ಮ ವಿಮೋಚನೆಗಾಗಿ ದೆಹಲಿಯತ್ತ ಇಲ್ಲವೇ ವಿಶ್ವಸಂಸ್ಥೆಯತ್ತ ಕಣ್ಣು ಹಾಯಿಸಬೇಡಿ. ನಿಮ್ಮ ಸ್ವಾತಂತ್ರ್ಯ ಇರುವುದು ನಿಮ್ಮಲ್ಲೇ. ಪ್ರಜಾತಂತ್ರಪ್ರಿಯರಾದ ಐದು ಲಕ್ಷ ಜನರ ಸಮೂಹ ಪೋರ್ಚುಗೀಸರನ್ನು ಮಣಿಸಬಲ್ಲುದು. ಬಂಧನಕ್ಕೆ ಒಳಗಾಗಿ, ಹೊಡೆತತಿನ್ನಿ, ಗುಂಡೇಟಿಗೆ ಎದೆಯೊಡ್ಡಿರಿ; ಏನೇ ಆದರೂ ನಿಮ್ಮ ಮೋರ್ಚಾಗಳನ್ನು ಮತ್ತು ಪ್ರದರ್ಶನಗಳನ್ನು ಕೈಬಿಡಬೇಡಿ; ತೆರಿಗೆಗಳನ್ನು ಕೊಡುವುದನ್ನು ತಿರಸ್ಕರಿಸಿ. ಯೂರೋಪಿಯನ್ನರು ಏಷಿಯಾಗೆ ಕಾಲಿಡಲು ಗೋವಾ ಮೊದಲ ಪ್ರವೇಶದ್ವಾರವಾಗಿತ್ತು. ಏಷಿಯಾದ ಮೇಲೆ ಯೂರೋಪ್ ಮೇಲುಗೈ ಸಾಧಿಸಿರುವುದನ್ನು ಗೋವಾದಲ್ಲಿ ನಾವೆಲ್ಲ ಬಗ್ಗುಬಡಿಯೋಣ.''[18]

ಗೋವಾದ ಈ ಪ್ರಕರಣದಿಂದಾಗಿ ಲೋಹಿಯಾರವರು ಗಾಂಧೀಜಿಯವರ ಅಂತರಂಗಕ್ಕೆ ಇನ್ನಷ್ಟು ಹತ್ತಿರವಾದರು; ಗೋವಾದಲ್ಲಿ ಲೋಹಿಯಾ ನಡೆಸಿದ ಚಟುವಟಿಕೆಗಳನ್ನು ಬೆಂಬಲಿಸಿದ ಏಕೈಕ ಮುಂದಾಳು ಗಾಂಧೀಜಿಯವರೊಬ್ಬರೆ.[19]

ಕ್ಯಾಬಿನೆಟ್ ಮಿಷನ್ ಒಂದು ಸೂಕ್ತವಾದ ಪರಿಹಾರ ಕಂಡುಕೊಳ್ಳಲು ವಿಫಲವಾದದ್ದು; ಮುಸ್ಲಿಂಲೀಗಿನ ಸಹಕಾರವಿಲ್ಲದೆ ಮಧ್ಯಂತರ ಸರ್ಕಾರದ ರಚನೆಯಾದದ್ದು; ಮುಸ್ಲಿಂಲೀಗ್ ಅಸೆಂಬ್ಲಿಯಲ್ಲಿ ಭಾಗವಹಿಸಲು ನಿರಾಕರಿಸಿ ತನ್ನದೇ ಆದ ನೇರ ಕಾರ್ಯಾಚರಣೆಗೆ ಇಳಿದದ್ದು–ಈ ಅಂಶಗಳೆಲ್ಲಾ ಭಾರತದಲ್ಲಿ ಮತೀಯ ಸೌಹಾರ್ದದ ಪರಿಸ್ಥಿತಿಯನ್ನು ಹದಗೆಡಿಸಿದ್ದವು. ಬಂಗಾಳ, ಬಿಹಾರ ಮತ್ತು ಇತರ ಪ್ರಾಂತ್ಯಗಳಲ್ಲಿ ಮತೀಯ ಗಲಭೆಗಳು ಪ್ರಾರಂಭವಾದವು. ಗೋವಾದಿಂದ ಹಿಂದಿರುಗಿ ಬಂದಮೇಲೆ ಲೋಹಿಯಾ ಗಾಂಧೀಜಿಯವರೊಡನೆ ಸೇರಿಕೊಂಡು ನೌಖಾಲಿ ಯಾತ್ರೆಗೆ ಹೊರಟು, ಮತೀಯ ಗಲಭೆಗಳ ಉದ್ರಿಕ್ತ ಸ್ಥಿತಿಯನ್ನು ತಹಬಂದಿಗೆ ತರಲು ಪ್ರಾಣದ ಮೇಲಿನ ಹಂಗು ತೊರೆದು ಕೆಲಸ ಮಾಡಿದರು. ರಾಜಕೀಯ ಪರಿಸ್ಥಿತಿ ದಿನೇದಿನೇ ಹದಗೆಡುತ್ತಿತ್ತು. 1947ರ ಫೆಬ್ರವರಿ ಇಪ್ಪತ್ತರಂದು ಬ್ರಿಟಿಷ್ ಪ್ರಧಾನಮಂತ್ರಿಯು ಭಾರತದಿಂದ ಬ್ರಿಟಿಷ್ ಸರ್ಕಾರವನ್ನು ಹಿಂತೆಗೆದುಕೊಳ್ಳುವ ತಮ್ಮ ಆಶಯವನ್ನು ಘೋಷಿಸಿದರು. ಆಗ ಲಾರ್ಡ್ ವಾವೆಲ್ ಅವರ ಸ್ಥಾನದಲ್ಲಿ ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ವೈಸ್‌ರಾಯ್ ಆಗಿ ನೇಮಿಸಿ ಭಾರತಕ್ಕೆ ಕಳುಹಿಸಿಕೊಡಲಾಯಿತು.

ಜೂನ್ 1947ರಲ್ಲಿ ಭಾರತ ವಿಭಜನೆಯನ್ನುಕುರಿತು ಚರ್ಚಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸೇರಿತು. ವಿಭಜನೆಯ ಯೋಜನೆಗೆ ವೈಯಕ್ತಿಕವಾಗಿ ಲೋಹಿಯಾ ವಿರೋಧಿಯಾಗಿದ್ದರೂ, ಅವರು ಅಧ್ಯಕ್ಷರಾಗಿದ್ದ ಸಮಾಜವಾದಿ ಪಕ್ಷ ತನ್ನ ತಾಟಸ್ಥ್ಯವನ್ನು ಪ್ರದರ್ಶಿಸಿತು.

ಲೋಹಿಯಾ ಅವರು ಈಗ ಗಾಂಧೀಜಿಯವರಿಗೆ ತೀರಾ ಹತ್ತಿರದವರಾಗಿದ್ದರು. ಗಾಂಧೀಜಿಯವರ ಹತ್ಯೆ ಅವರ ಪಾಲಿಗೆ ಬಹಳ ದೊಡ್ಡ ಆಘಾತವಾಗಿತ್ತು. ಮಹಾತ್ಮರ ರಕ್ಷಣೆಗೆ ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳದ ಇಡೀ ಭಾರತ ಸರ್ಕಾರವೇ ಈ ಕ್ರೂರ ಹತ್ಯೆಗೆ ಹೊಣೆಯೆಂದು ಅವರು ಉಗ್ರವಾಗಿ ಖಂಡಿಸಿದರು.

ಮಾರ್ಚಿ 1948ರಲ್ಲಿ ನಾಸಿಕ್‌ನಲ್ಲಿದ್ದ ಸಮಾಜವಾದಿಗಳು ಕಾಂಗ್ರೆಸ್ ಪಕ್ಷದಿಂದ ಹೊರಬರುವ ತೀರ್ಮಾನವನ್ನು ಕೈಗೊಂಡರು. ಭಾರತದ ಸ್ಥಳೀಯ ಪ್ರಾಂತ್ಯಗಳಲ್ಲಿ ಜನಾಂದೋಲನವನ್ನು ಇನ್ನೂ ತೀವ್ರಗೊಳಿಸಲು ಸಹ ನಿಶ್ಚಯ ಮಾಡಿದರು. ನಾಸಿಕ್ ಗೊತ್ತುವಳಿಯನ್ನು ಆಧರಿಸಿ, ಭಾರತದ ಸ್ಥಳೀಯ ಪ್ರಾಂತ್ಯಗಳ ಸಮಸ್ಯೆಗಳನ್ನು ಪರಿಹರಿಸಲು ಲೋಹಿಯಾ ಆರು ಅಂಶಗಳ ಕಾರ್ಯಕ್ರಮವೊಂದನ್ನು ರೂಪಿಸಿದರು.[20] ಪ್ರಜಾಪ್ರಭುತ್ವದ ಹೆಸರಿನಲ್ಲಿ ಭಾರತದ ಇಂತಹ ಅನೇಕ ಪ್ರಾಂತ್ಯಗಳಲ್ಲಿ ದಬ್ಬಾಳಿಕೆ ಮತ್ತು ನಿರಂಕುಶ ಪ್ರಭುತ್ವಗಳು ರಾಜಾರೋಷವಾಗಿ ಮೆರೆಯುತ್ತಿದ್ದುದು ಅವರನ್ನು

ಧೃತಿಗೆಡಿಸಿತು. ಹೈದರಾಬಾದಿನ ನಿಜಾಮರ ಕಾರ್ಯವಿಧಾನವನ್ನು ಟೀಕಿಸಿದ ಲೋಹಿಯಾ ಅವರು, ಒಂದು ವೇಳೆ ಭಾರತ ಸರ್ಕಾರ ಹೈದರಾಬಾದಿನಲ್ಲಿ ಏನಾದರೂ ಕಾರ್ಯಾಚರಣೆಯನ್ನು ಪ್ರಾರಂಭಿಸಿದರೆ, ದೇಶದ ಉಳಿದೆಡೆಗಳಲ್ಲಿ ಜನ ಶಾಂತಿಯನ್ನು ಕಾಪಾಡಿಕೊಂಡುಬರಬೇಕೆಂದು ಮನವಿ ಮಾಡಿಕೊಂಡರು. ವಿಂಧ್ಯಪ್ರದೇಶದಲ್ಲಿ ಪರಿಸ್ಥಿತಿ ಇನ್ನೂ ಹದಗೆಟ್ಟಿತ್ತು. ಜನಸಮೂಹವನ್ನು ಚದುರಿಸಲು ಪೊಲೀಸರು ಗೋಲೀಬಾರು ಮಾಡಬೇಕಾಯಿತು. 1949ರ ಜನವರಿ ಎಂಟರಂದು ಲೋಹಿಯಾ ವಿಂಧ್ಯಪ್ರದೇಶಕ್ಕೆ ಭೇಟಿ ನೀಡಿದರು. ಅವರನ್ನು ರೀವಾದಲ್ಲಿಯೇ ದಸ್ತಗಿರಿ ಮಾಡಿ, ಅನಂತರ ರೀವಾ-ಮಿರ್ಜಾಪುರ ಸರಹದ್ದಿನ ಬಳಿ ಬಿಡುಗಡೆ ಮಾಡಲಾಯಿತು.

1949ರಲ್ಲಿ 'ಹಿಂದ್ ಕಿಸಾನ್ ಪಂಚಾಯತ್' ಸಂಸ್ಥೆ ಅಸ್ತಿತ್ವಕ್ಕೆ ಬಂದಾಗ ಲೋಹಿಯಾ ಅದರ ಮೊದಲ ಅಧ್ಯಕ್ಷರಾದರು. ಆ ಸಂಘಟನೆಯ ಮೊದಲ ಅಧಿವೇಶನ 1950ರ ಫೆಬ್ರವರಿ ಇಪ್ಪತ್ತಾರರಂದು ರೀವಾದಲ್ಲಿ ನಡೆಯಿತು. ತಮ್ಮ ಅಧ್ಯಕ್ಷಭಾಷಣದಲ್ಲಿ ಲೋಹಿಯಾ ಬಡತನ ನಿರ್ಮೂಲನ ಕಾರ್ಯಕ್ರಮವನ್ನು ಮುಂದಿಟ್ಟರು.[21] ಶೋಷಿತ ಜನಸಮುದಾಯಕ್ಕೆ ಅನುಕೂಲವಾಗುವಂತೆ ಹಿಂದ್ ಕಿಸಾನ್ ಪರಿಷತ್ ಹದಿಮೂರು ಅಂಶಗಳ ಒಂದು ಕಾರ್ಯಕ್ರಮವನ್ನು ರೂಪಿಸಿತು.[22] ಕೃಷಿ ಸಂಬಂಧವಾದ ಹಾಗೂ ಕೈಗಾರಿಕಾ ವಸ್ತುಗಳ ಬೆಲೆಗಳನ್ನು ತೂಗಿಸಿಕೊಂಡು ಹೋಗುವುದು, ಒಂದು ಸಾವಿರ ರೂಪಾಯಿಗಳಷ್ಟು ಗರಿಷ್ಠ ಆದಾಯವನ್ನು ಪಡೆಯುವುದು, ಕುಟುಂಬವೊಂದಕ್ಕೆ ಇರಬೇಕಾದ ಜಮೀನಿಗೆ ಮಿತಿಯನ್ನು ವಿಧಿಸುವುದು ಇಂತಹ ಕೆಲವು ಅಂಶಗಳು ಆ ಕಾರ್ಯಕ್ರಮದಲ್ಲಿ ಸೇರಿದ್ದವು.

1949ರಲ್ಲಿ ನೇಪಾಳದಲ್ಲಿ ಪರಿಸ್ಥಿತಿ ತೀವ್ರವಾಗಿ ಬಿಗಡಾಯಿಸಿತು. ಅಲ್ಲಿಯ ರಾಣಾ ಜನಾಂದೋಲನವನ್ನು ಹತ್ತಿಕ್ಕಲು ಪ್ರಯತ್ನಿಸಿದ್ದ. ಲೋಹಿಯಾ ನೇಪಾಳಿ ಮುಂದಾಳುಗಳಿಗೆ ಉತ್ತೇಜನ ನೀಡಿ ರಾಣಾನ ನಿರಂಕುಶ ಪ್ರಭುತ್ವವನ್ನು ಕಿತ್ತೊಗೆಯಲು ಕರೆಕೊಟ್ಟರು. 1949ರ ಮೇ ಇಪ್ಪತ್ತೈದರಂದು ಈ ಸಲುವಾಗಿ ದೆಹಲಿಯಲ್ಲೊಂದು ಸಭೆ ಏರ್ಪಾಡಾಗಿ ಲೋಹಿಯಾ ನೇತೃತ್ವದಲ್ಲಿ ಒಂದು ಮೆರವಣಿಗೆ ನೇಪಾಳದ ರಾಯಭಾರಿ ಕಛೇರಿಯ ಕಡೆಗೆ ಹೊರಟಿತು. ಪೊಲೀಸರು ಅಶ್ರುವಾಯು ಪ್ರಯೋಗಿಸಿದರು. ಇತರ ಮುಂದಾಳುಗಳೊಡನೆ ಲೋಹಿಯಾ ಕೂಡ ದಸ್ತಗಿರಿಯಾದರು. ಎರಡು ತಿಂಗಳ ಸೆರೆವಾಸದ ಅನಂತರ 1949ರ ಜುಲೈ ಮೂರ ರಂದು ಅವರು ಬಿಡುಗಡೆ ಹೊಂದಿದರು.

ವಿಶ್ವಸರ್ಕಾರವನ್ನು ಬೆಂಬಲಿಸುವ ಸದಸ್ಯರ ಸಮ್ಮೇಳನದಲ್ಲಿ ಪಾಲುಗೊಳ್ಳಲು ಲೋಹಿಯಾ ಸ್ವೀಡನ್ನಿನ ರಾಜಧಾನಿಯಾದ ಸ್ಟಾಕ್‌ಹೋಮ್‌ಗೆ 1949ರ ಆಗಸ್ಟ್

ಇಪ್ಪತ್ತನಾಲ್ಕರಂದು ಪ್ರಯಾಣ ಬೆಳೆಸಿದರು. ವಿಶ್ವಶಾಂತಿಗಾಗಿ ಐದನೆಯ ಸ್ತಂಭದ ಅಗತ್ಯವನ್ನು ಕುರಿತು ಅವರು ಒತ್ತಿ ಹೇಳಿದರು. ಸ್ಟಾಕ್‌ಹೋಮ್‌ನಿಂದ ಹೊರಟ ಲೋಹಿಯಾ ಕೊಪೆನ್‌ಹ್ಯಾಗೆನ್, ಜರ್ಮನಿ, ಪ್ಯಾರಿಸ್, ಇಂಗ್ಲೆಂಡ್, ಪಶ್ಚಿಮ ಆಫ್ರಿಕ ಹಾಗೂ ಆಗ್ನೇಯ ಏಷ್ಯಾದ ರಾಷ್ಟ್ರಗಳಿಗೆ ಭೇಟಿಕೊಟ್ಟರು. ಅವರು ಈಜಿಪ್ಟಿಗೆ ಸಹ ಹೋಗಿಬಂದರು. ಫ್ರಾಂಕ್‌ಫರ್ಟ್‌ನಲ್ಲಿ ನಡೆಯಲಿದ್ದ ಅಂತಾರಾಷ್ಟ್ರೀಯ ಸಮಾಜವಾದಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಲೋಹಿಯಾ ಅವರು 1951ರ ಜುಲೈ ಮೂರರಂದು ಹೊರಟರು. ಅಲ್ಲಿಂದ ಅವರು ಯುಗೋಸ್ಲಾವಿಯಾ, ಅಮೇರಿಕ ಸಂಯುಕ್ತ ಸಂಸ್ಥಾನಗಳು, ಹವಾಯಿ, ಜಪಾನ್, ಹಾಂಗ್‌ಕಾಂಗ್, ಥಾಯ್ಲೆಂಡ್, ಮಲಯಾ, ಇಂಡೋನೇಷಿಯಾ ಮತ್ತು ಸಿಲೋನ್‌ಗಳಿಗೆ ಭೇಟಿಕೊಟ್ಟರು. ಅವರು ಪ್ರಿನ್ಸ್‌ಟನ್ನಿನಲ್ಲಿ ಹೆಸರಾಂತ ವಿಜ್ಞಾನಿ ಆಲ್‌ಬರ್ಟ್ ಐನ್‌ಸ್ಟೀನ್‌ರವರನ್ನು ಸಹ ಭೇಟಿಮಾಡಿದರು. ತಮ್ಮ ವಿಶ್ವಪ್ರವಾಸದ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಾ ಲೋಹಿಯಾ ಪ್ರಪಂಚ ಎರಡು ಭಾಗಗಳಾಗಿ ಒಡೆದಿದೆಯೆಂದು ಈ ರೀತಿ ವಿಶ್ಲೇಷಿಸಿದರು:

> ''ಪಶ್ಚಿಮಕ್ಕೆ ಹೋದಹಾಗೆಲ್ಲ ರೋಮಿನಿಂದ ಹೊನಲುಲುವರೆಗೆ ಒಂದು ಪ್ರಪಂಚ ತೆರೆಯುತ್ತಾ ಹೋಗುತ್ತದೆ. ಇಲ್ಲಿ ಒಳ್ಳೆಯ ಆಹಾರ, ಒಳ್ಳೆಯ ಉಡುಪು, ಒಳ್ಳೆಯ ಮನೆಗಳು ಕಂಡುಬರುತ್ತವೆ. ನಮ್ಮ ಪ್ರಪಂಚದ ಮಾನವ ಇತಿಹಾಸದ ಕಳೆದ ಮುನ್ನೂರು ವರ್ಷಗಳನ್ನು ಪ್ರಯೋಗದ ಸಲುವಾಗಿಯೇನೊ ಎಂಬಂತೆ ಎರಡು ಭಾಗಗಳಾಗಿ ಒಡೆದಿರುವಂತೆ ಕಾಣುತ್ತದೆ. ವಿಶೇಷವೆಂದರೆ, ಭೂಮಧ್ಯರೇಖೆಯ ಉತ್ತರಕ್ಕೆ, ಚೀನಾವನ್ನು ಹೊರತಾಗಿಸಿ, ಕಾಣುವ ಪ್ರಪಂಚದಲ್ಲಿ ಸುಖಸೌಕರ್ಯಗಳು ಸಾಪೇಕ್ಷವಾಗಿ ಉತ್ತಮವಾಗಿವೆ. ಹಾಗೆಯೆ ದಕ್ಷಿಣಕ್ಕೆ ಸರಿಯುತ್ತ ಹೋದಂತೆಲ್ಲ, ಆಸ್ಟ್ರೇಲಿಯ ಹಾಗೂ ಅಂಥ ಕೆಲವು ಪ್ರದೇಶಗಳನ್ನು ಬಿಟ್ಟರೆ ಉಳಿದೆಡೆಯಲ್ಲೆಲ್ಲ ಕಷ್ಟಕಾರ್ಪಣ್ಯಗಳು, ಕೊಳಕು, ರೋಗ ರುಜಿನಗಳು, ಭೀಕರ ಬಡತನ ತಾಂಡವವಾಡುತ್ತಿವೆ.[23]

1952ರಲ್ಲಿ ಪ್ರಜಾ ಸಮಾಜವಾದಿ ಪಕ್ಷದ ಉದಯವಾಯಿತು. 1953ರಲ್ಲಿ ಲೋಹಿಯಾ ಅದರ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾದರು. 1954ರಲ್ಲಿ ತಿರುವಾಂಕೂರು ಕೊಚ್ಚಿನ್ನಿನಲ್ಲಿ ಆಡಳಿತ ಸೂತ್ರ ವಹಿಸಿಕೊಂಡಿದ್ದ ಪಿ.ಎಸ್.ಪಿ. ಸರ್ಕಾರದ ಮುಖ್ಯಮಂತ್ರಿ ಒಂದು ಸನ್ನಿವೇಶದಲ್ಲಿ ಪ್ರದರ್ಶನಕಾರರ ಮೇಲೆ ನಡೆದ

ಗೋಲೀಬಾರು ಘಟನೆಗೆ ಸಂಬಂಧಿಸಿದಂತೆ ರಾಜೀನಾಮೆ ನೀಡದೆ ಹೋದಾಗ, ಲೋಹಿಯಾ ಪಕ್ಷದ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಸ್ವತಃ ರಾಜೀನಾಮೆ ಸಲ್ಲಿಸಿದರು. 1954ರಲ್ಲಿ ಉತ್ತರ ಪ್ರದೇಶದ ಸರ್ಕಾರ ನೀರಾವರಿ ದರಗಳನ್ನು ಹೆಚ್ಚಿಸಿದಾಗ ರೈತಬಾಂಧವರಿಗೆ ಅಪಾರ ಅತೃಪ್ತಿಯುಂಟಾಯಿತು. ಉತ್ತರ ಪ್ರದೇಶ ಪಿ.ಎಸ್.ಪಿ. ಪಕ್ಷದ ಕಾರ್ಯಕಾರಿ ಸಮಿತಿ ನಾಗರಿಕ ಅಶಿಸ್ತು ಚಳವಳಿಯೊಂದನ್ನು ನಡೆಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಸತ್ಯಾಗ್ರಹಿಗಳನ್ನು ಉತ್ತೇಜಿಸುವ ಸಲುವಾಗಿ ಲೋಹಿಯಾ ಉತ್ತರ ಪ್ರದೇಶದಲ್ಲಿ ಪ್ರವಾಸ ಕೈಗೊಂಡರು. 1951ರ ಜುಲೈನಾಲ್ಕರಂದು, 1932ರ ವಿಶೇಷ ಅಧಿಕಾರಗಳ ಅಧಿನಿಯಮದ (3)ನೇ ಪ್ರಕರಣದನ್ವಯ ಅವರನ್ನು ಫರೂಕಾಬಾದ್‌ನಲ್ಲಿ ದಸ್ತಗಿರಿ ಮಾಡಲಾಯಿತು. ತಮ್ಮ ಬಂಧನವನ್ನು ಪ್ರತಿಭಟಿಸಿ ಲೋಹಿಯಾ ಉಚ್ಚನ್ಯಾಯಾಲಯಕ್ಕೆ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದರು. ಜುಲೈ 21, 1954ರ ಜುಲೈ ಇಪ್ಪತ್ತೊಂದರಂದು ನೈನಿ ಜೈಲಿಗೆ ವರ್ಗಾಯಿಸಲಾಯಿತು. ಅಲ್ಲಿಂದ ಅವರು ಭಾರತದ ರಾಷ್ಟ್ರಪತಿಗಳ ಹೆಸರಿಗೆ ಒಂದು ಪತ್ರ ಬರೆದರು. ಅದರಲ್ಲಿ ಪ್ರಧಾನ ಮಂತ್ರಿ ನೆಹರೂ ಅಸಹಕಾರ ಚಳವಳಿ ಹಾಗೂ ಪಿ.ಎಸ್.ಪಿ. ಪಕ್ಷದ ಬಗೆಗೆ ನೀಡಿದ್ದ ಹೇಳಿಕೆಗಳನ್ನು ಕುರಿತು ಲೋಹಿಯಾ ಕಟುವಾಗಿ ಟೀಕಿಸಿದ್ದರು.

ಹೈಕೋರ್ಟಿನಲ್ಲಿ ಲೋಹಿಯಾ ವಾದಮಾಡಿ ಮೇಲೆ ಹೇಳಿದ ಅಧಿನಿಯಮದ (೩)ನೇ ಪ್ರಕರಣ ನಮ್ಮ ಸಂವಿಧಾನದ ಮೂಲ ಆಶಯಕ್ಕೇ ವಿರುದ್ಧವಾಗಿದೆಯೆಂದು ಪ್ರತಿಪಾದಿಸಿದರು. ಯಾವುದೇ ಅನ್ಯಾಯದಿಂದ ಕೂಡಿದ ನಿಯಮವನ್ನು ಉಲ್ಲಂಘಿಸುವಂತೆ ತನ್ನ ಅಭಿಪ್ರಾಯವನ್ನು ಪ್ರಚುರಪಡಿಸುವ ಹಕ್ಕು ಪ್ರತಿಯೊಬ್ಬ ಮನುಷ್ಯನಿಗೂ ಇರತಕ್ಕದ್ದೆಂದು ಅವರು ವಾದಹೂಡಿದರು. ಇಬ್ಬರು ನ್ಯಾಯಾಧೀಶರುಗಳ ನಡುವೆ ಈ ವಿಚಾರದಲ್ಲಿ ಅಭಿಪ್ರಾಯಭೇದ ಮೂಡಿದ ಕಾರಣ, ಪ್ರಕರಣವನ್ನು ಮೂರನೇ ನ್ಯಾಯಾಧೀಶರೊಬ್ಬರಿಗೆ ಒಪ್ಪಿಸಲಾಯಿತು. ನ್ಯಾಯಮೂರ್ತಿ ಅಗರವಾಲ್ ವಿಚಾರಣೆ ನಡೆಸಿ ಲೋಹಿಯಾರನ್ನು ಬಿಡುಗಡೆ ಮಾಡಿದರು. ಅವರ ಜೊತೆಯಲ್ಲಿಯೆ ಇನ್ನೂ ಮುನ್ನೂರು ಮಂದಿ ಸತ್ಯಾಗ್ರಹಿಗಳು ಕೂಡ ಬಿಡುಗಡೆ ಹೊಂದಿದರು.

ಡಿಸೆಂಬರ್, 1955ರಲ್ಲಿ ಸಮಾಜವಾದಿಗಳು ಹೈದರಾಬಾದಿನಲ್ಲಿ ಸಭೆ ಸೇರಿ ಲೋಹಿಯಾರವರ ಅಧ್ಯಕ್ಷತೆಯಲ್ಲಿ ಹೊಸ ಸಮಾಜವಾದಿ ಪಕ್ಷವೊಂದನ್ನು ಸ್ಥಾಪಿಸಿದರು. ಅಧಿಕಾರಕ್ಕೆ ಬರಲು ಲೋಹಿಯಾ 'ಸಪ್ತವಾರ್ಷಿಕ ಯೋಜನೆ'ಯ ಘೋಷಣೆಯೊಂದನ್ನು ಮುಂದಿಟ್ಟರು. ಮಾರ್ಚಿ 1 ರಂದು ಲೋಹಿಯಾ ಲಖ್ನೋದಲ್ಲಿ

ರೈತರ ಭಾರಿ ಮೆರವಣಿಗೆಯೊಂದರ ನೇತೃತ್ವವಹಿಸಿದರು. ಆಗಸ್ಟ್ 1956ರಲ್ಲಿ, 'ಮ್ಯಾನ್‌ಕೈಂಡ್' ಇಂಗ್ಲಿಷ್ ಪತ್ರಿಕೆ ಲೋಹಿಯಾರ ಪ್ರಧಾನ ಸಂಪಾದಕತ್ವದಲ್ಲಿ ಪ್ರಾರಂಭವಾಯಿತು. 1957ರಲ್ಲಿ ನಡೆದ ಎರಡನೇ ಮಹಾಚುನಾವಣೆಯಲ್ಲಿ ಅವರು ಚಾಕಿಯಾ-ಚಂದೌಲಿ (ವಾರಣಾಸಿ) ಲೋಕಸಭಾಕ್ಷೇತ್ರದಿಂದ ಉಮೇದುವಾರರಾಗಿ ನಿಂತಿದ್ದು ಶ್ರೀ ಟಿ. ಎನ್. ಸಿಂಗ್ ಎಂಬುವವರಿಂದ ಪರಾಭವ ಗೊಂಡರು.

ಮೇ, 1957ರಲ್ಲಿ ಉತ್ತರಪ್ರದೇಶ ಸಮಾಜವಾದಿ ಪಕ್ಷ ಆ ರಾಜ್ಯದಲ್ಲಿ ಅಸಹಕಾರ ಚಳವಳಿಯನ್ನು ಹಮ್ಮಿಕೊಂಡಿತು. ಅಪಾರಸಂಖ್ಯೆಯಲ್ಲಿ ಸತ್ಯಾಗ್ರಹಿಗಳ ದಸ್ತಗಿರಿ ಆಯಿತು. ನವಂಬರ್ ಎರಡರಂದು ಲೋಹಿಯಾರನ್ನು ಲಖ್ನೋನಗರದ ಮಾರಾಟ ತೆರಿಗೆ ಕಚೇರಿಯ ಪ್ರವೇಶದ್ವಾರದ ಬಳಿ ಅಪರಾಧಕಾನೂನು (ತಿದ್ದುಪಡಿ) ಅಧಿನಿಯಮದ ಪ್ರಕರಣ (7)ರ ಅನ್ವಯ ಬಂಧಿಸಲಾಯಿತು. ನವಂಬರ್ 30 ರಂದು ಮ್ಯಾಜಿಸ್ಟ್ರೇಟರು ಜೈಲಿನ ಒಳಗಡೆಯೆ ವಿಚಾರಣೆ ನಡೆಸಿದರು. ಈ ವಿಚಾರಣೆ ನಡೆವಳಿಗೆ ಲೋಹಿಯಾ ಒಪ್ಪದೆ ಹೋದುದರಿಂದ ಅವರನ್ನು ಒಂದು ಕುರ್ಚಿಗೆ ಕಟ್ಟಿಹಾಕಿ, ಒತ್ತಾಯಪೂರ್ವಕವಾಗಿ ನ್ಯಾಯಾಧೀಶರ ಮುಂದೆ ಹಾಜರು ಪಡಿಸಲಾಯಿತು. ನ್ಯಾಯಾಧೀಶರ ಎದುರಿನಲ್ಲಿ ಯಾವುದೇ ಮಾತನ್ನು ಆಡಲು ಇಲ್ಲವೆ ಹಸ್ತಾಕ್ಷರ ಹಾಕಲು ಲೋಹಿಯಾ ನಿರಾಕರಿಸಿದಾಗ ಅವರ ಹೆಬ್ಬೆಟ್ಟಿನ ಗುರುತನ್ನು ಬಲವಂತವಾಗಿ ಪಡೆದುಕೊಳ್ಳಲಾಯಿತು. ಡಿಸೆಂಬರ್ 3ರಂದು ಉಚ್ಚನ್ಯಾಯಾಲಯದ ಲಖ್ನೋವಿಭಾಗೀಯ ಪೀಠ ಲೋಹಿಯಾ ಸಲ್ಲಿಸಿದ್ದ ಹೇಬಿಯಸ್‌ಕಾರ್ಪಸ್ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಂಡಿತು. ಡಿಸೆಂಬರ್ 6 ರಂದು ಲೋಹಿಯಾ ತಮ್ಮ ಪರವಾಗಿ ಸ್ವತಃ ವಾದ ಮಾಡಿ ತಮ್ಮನ್ನು ಬಂಧಿಸಿ ಸೆರೆಯಲ್ಲಿ ಇಟ್ಟಿರುವುದು ಸಂವಿಧಾನಕ್ಕೆ ವಿರೋಧವಾಗಿರುವುದೆಂದು ಪ್ರತಿಪಾದಿಸಿದರು. ಡಿಸೆಂಬರ್ 12ರಂದು ನ್ಯಾಯಮೂರ್ತಿ ಬೇಗ್ ಈ ಅರ್ಜಿಯನ್ನು ಪುರಸ್ಕರಿಸಿದ ರಾದರೂ, ನ್ಯಾಯಮೂರ್ತಿ ಮುಲ್ಲಾ ಅದನ್ನು ತಿರಸ್ಕರಿಸಿದರು. ಇಬ್ಬರು ನ್ಯಾಯ ಮೂರ್ತಿಗಳ ನಡುವೆ ಅಭಿಪ್ರಾಯ ಭೇದವಿದ್ದ ಕಾರಣ ಪ್ರಕರಣದ ವಿಚಾರಣೆಯನ್ನು ನ್ಯಾಯಮೂರ್ತಿ ರಘುವೀರ್‌ದಯಾಳ್‌ರವರಿಗೆ ಒಪ್ಪಿಸಲಾಯಿತು. ಅವರೂ ಸಹ ಈ ಮನವಿಯನ್ನು ಪುರಸ್ಕರಿಸಲಿಲ್ಲ. ಕೊನೆಗೆ 1957ರ ಡಿಸೆಂಬರ್ ಇಪ್ಪತ್ತಮೂರರಂದು ಲೋಹಿಯಾ ಬಿಡುಗಡೆಹೊಂದಿದರು. ಜೈಲಿನಿಂದಲೇ ಅವರು ಉತ್ತರಪ್ರದೇಶದ ಬಂದೀಖಾನೆ ಸಚಿವರಿಗೆ ಒಂದು ಪತ್ರ ಬರೆದರು. ದಿನಕಳೆದಂತೆ ಈ ಪತ್ರವು 'ವಶಿಷ್ಠರು ಹಾಗೂ ವಾಲ್ಮೀಕಿಗಳು' ಎಂಬ ತಲೆಬರಹದ ಕಿರುಹೊತ್ತಿಗೆಯಾಗಿ ಪ್ರಕಟವಾಯಿತು.[24]

1959ರ ನವೆಂಬರ್ ಇಪ್ಪತ್ತಮೂರರಂದು ನೇಫಾ (NEFA) ಪ್ರದೇಶದ ಊರ್ವಶಿಯಂ ಎಂಬ ಭಾಗಕ್ಕೆ ಪ್ರವೇಶಿಸುತ್ತಿದ್ದ ಲೋಹಿಯಾರವರನ್ನು ಸೆರೆಹಿಡಿಯಲಾಯಿತು. ಏಪ್ರಿಲ್ 1960ರಲ್ಲಿ ಕಾನ್‌ಪುರದ ಪ್ರವಾಸಿಮಂದಿರ ವೊಂದರಲ್ಲಿ ಅತಿಕ್ರಮ ಪ್ರವೇಶಮಾಡಿ ತಂಗಿದ್ದಕ್ಕಾಗಿ ಅವರನ್ನು ದಸ್ತಗಿರಿ ಮಾಡಲಾಯಿತು. 1961ರಲ್ಲಿ "ಇಂಗ್ಲಿಷ್ ತೊಲಗಿಸಿ" ಚಳವಳಿಗೆ ಸಂಬಂಧಪಟ್ಟ ಸಭೆಯೊಂದರಲ್ಲಿ ತಮಿಳುನಾಡಿನಲ್ಲಿ ಅವರು ಮಾತನಾಡುತ್ತಿದ್ದಾಗ ಕಲ್ಲೇಟುಗಳು ಬಿದ್ದವು. 1961ರಲ್ಲಿಯೇ ಅವರು ಪುನಃ ವಿದೇಶಯಾತ್ರೆ ಕೈಗೊಂಡು ಹೊರದೇಶಗಳ ಸಮಾಜವಾದಿ ಮುಂದಾಳುಗಳನ್ನು ಭೇಟಿಯಾದರು. 1962ರಲ್ಲಿ ನಡೆದ ಮೂರನೇ ಮಹಾ ಚುನಾವಣೆಯಲ್ಲಿ ಲೋಹಿಯಾ ಸುರಕ್ಷಿತವಾದ ಕ್ಷೇತ್ರವನ್ನು ಆಯ್ಕೆಮಾಡಿಕೊಳ್ಳಲಿಲ್ಲ. ಭಾರತದಲ್ಲಿ ವ್ಯಕ್ತಿಪೂಜೆಯ ಪರಂಪರೆಯನ್ನು ಜನರೆದುರು ಬಹಿರಂಗಪಡಿಸಿ ಕಿತ್ತೊಗೆಯುವ ಸಲುವಾಗಿ ನೆಹರೂರವರಿಗೆ ವಿರುದ್ಧವಾಗಿ ಫೂಲ್‌ಪುರ ಚುನಾವಣಾ ಕ್ಷೇತ್ರದಲ್ಲಿ ನಿಂತು ಪರಾಭವಗೊಂಡರು.

1964ರ ಏಪ್ರಿಲ್ ಹದಿನೈದರಂದು ಲೋಹಿಯಾ ಮತ್ತೆ ವಿದೇಶಯಾತ್ರೆ ಕೈಗೊಂಡರು. 1964ರ ಮೇ ಇಪ್ಪತ್ತೇಳರಂದು ನೆಹರೂ ನಿಧನರಾದ ವೇಳೆಯಲ್ಲಿ, ಲೋಹಿಯಾ ಅಮೇರಿಕೆಯ ಮಿಸಿಸಿಪ್ಪಿಯಲ್ಲಿ ಪ್ರತ್ಯೇಕತಾ ಕಾನೂನನ್ನು ವಿರೋಧಿಸುವ ಸಲುವಾಗಿ ಹೋಟೆಲೊಂದನ್ನು ಪ್ರವೇಶಿಸಲು ಪ್ರಯತ್ನಿಸುತ್ತಿದ್ದರು. ಬಂಧನಕ್ಕೊಳಗಾದ ಅವರನ್ನು ಕೆಲವೇ ಗಂಟೆಗಳ ಅನಂತರ ಬಿಡುಗಡೆ ಮಾಡಿ ಯು. ಎಸ್.ಎ. ಸರ್ಕಾರ ಕ್ಷಮೆಕೇಳಿಕೊಂಡಿತು. ಜೂನ್ 1965ರಲ್ಲಿ ಲೋಹಿಯಾ ಅವರು ಜರ್ಮನಿ, ರಷ್ಯಾ ಮತ್ತು ಆಫ್ಘಾನಿಸ್ತಾನಗಳಿಗೆ ಭೇಟಿಕೊಟ್ಟರು. ಆಫ್ಘಾನಿಸ್ತಾನದಲ್ಲಿ ಅವರು ಖಾನ್ ಅಬ್ದುಲ್ ಗಫಾರ್ ಖಾನ್‌ರವರನ್ನು ಭೇಟಿಮಾಡಿದರು.

1965ರ ಆಗಸ್ಟ್ ಎಂಟರಂದು ಪಾಟ್ನಾಬಂದ್ ನಡೆದಾಗ ಪಾಟ್ನಾದಲ್ಲಿ ಬಹುದೊಡ್ಡ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಲೋಹಿಯಾ ವಿಧಾನಸಭೆಯನ್ನು ಘೇರಾವೋ ಮಾಡಲು ಕರೆಕೊಟ್ಟರು. ಜುಲೈ 1966ರಲ್ಲಿ ಪದಾರ್ಥಗಳ ಬೆಲೆಗಳು ಗಗನಮುಟ್ಟಿದಾಗ ಅದಕ್ಕಾಗಿ ಪ್ರತಿಭಟಿಸಿ, ಉತ್ತರಪ್ರದೇಶದ ಸಮಾಜವಾದಿ ಪಕ್ಷ ರಾಜ್ಯಾದ್ಯಂತ ಬಂದ್‌ಗಾಗಿ ಕರೆನೀಡಿತು. ಲೋಹಿಯಾ ಬಂದ್‌ಕಾರ್ಯಕ್ರಮವನ್ನು ಪೂರ್ಣ ಯಶಸ್ವಿಯನ್ನಾಗಿ ಮಾಡಲು ಆಗ್ರಾಕ್ಕೆ ಹೋದಾಗ, 1966ರ ಜುಲೈ ಹನ್ನೊಂದರಂದು ರೈಲುನಿಲ್ದಾಣದಲ್ಲಿ ಅವರನ್ನು ಸೆರೆಹಿಡಿಯ ಲಾಯಿತು. ಆಡಳಿತದಲ್ಲಿ ಕಾಂಗ್ರೆಸ್ ಪಕ್ಷದ ಏಕಸ್ವಾಮ್ಯವನ್ನು ಮುರಿಯಲು ಲೋಹಿಯಾ ನಾಲ್ಕನೇ ಮಹಾಚುನಾವಣೆಗೆ ಮುಂಚೆಯೇ "ಕಾಂಗ್ರೆಸ್ಸನ್ನು ಕಿತ್ತುಹಾಕಿ" ಎಂಬ ಘೋಷಣೆಯನ್ನು ಜಾರಿಮಾಡಿದರು.

1967ರ ಸೆಪ್ಟೆಂಬರ್ ಮುವ್ವತ್ತರಂದು ನವದೆಹಲಿಯ ವಿಲ್ಲಿಂಗ್‌ಡನ್ ಆಸ್ಪತ್ರೆಯಲ್ಲಿ ಹಿಗ್ಗಿದ ಪ್ರಾಸ್ಟೇಟ್ ಗ್ರಂಥಿಯ ಚಿಕಿತ್ಸೆಗಾಗಿ ಲೋಹಿಯಾ ಶಸ್ತ್ರಕ್ರಿಯೆಗೊಳಗಾದರು. ಅಕ್ಟೋಬರ್ 12ರಂದು ಸಾವಿನ ಕರಾಳಹಸ್ತಗಳು ಅಂತಿಮವಾಗಿ ಅವರ ಬದುಕಿನ ಯಾತ್ರೆಯನ್ನು ಅಲ್ಲಿಗೇ ಮೊಟಕುಗೊಳಿಸಿದವು.[25] ಅವರು ಐವತ್ತೇಳನೆಯ ವಯಸ್ಸಿನಲ್ಲಿ ನಿಧನರಾದರು. ನೆಲ್ಸನ್ನರಂತೆ ಲೋಹಿಯಾ ಕೂಡ ಆಸ್ಪತ್ರೆಯಲ್ಲಿ ತಮ್ಮ ಸುತ್ತಲೂ ನೆರೆದಿದ್ದ ಹಲವಾರು ವೈದ್ಯರನ್ನು ಕಂಡು ನೋವಿನಿಂದ ಹೇಳಿದರು: ''ನನ್ನೊಬ್ಬನಿಗಾಗಿ ಇಷ್ಟೊಂದು ಮಂದಿ ವೈದ್ಯರು; ಆದರೆ, ತಮ್ಮ ಜೀವಿತದ ಅವಧಿಯಲ್ಲಿ ಯಾವನೇ ಒಬ್ಬ ವೈದ್ಯನ ಮುಖವನ್ನು ಕಾಣಲೂ ಸಾಧ್ಯವಿಲ್ಲದ ಕೋಟ್ಯಾಂತರ ಜನ ನಮ್ಮ ನಡುವೆಯೇ ಇದ್ದಾರಲ್ಲಾ!''[26] ಸಾವಿನ ನಂತರ ಅವರ ಪಾರ್ಥಿವ ಶರೀರವನ್ನು ವಿದ್ಯುತ್ ಚಿತಾಗಾರದಲ್ಲಿ ಸಂಸ್ಕಾರಮಾಡಲಾಯಿತು. ತಾವು ಮರಣಹೊಂದಿದಾಗ ರೂಢಿಯಲ್ಲಿರುವ ವೈದಿಕ ವಿಧಾನಗಳ ರೀತಿಯಲ್ಲಿ ತಮ್ಮ ಸಂಸ್ಕಾರ ಮಾಡಕೂಡದೆಂದೂ, ಏಕೆಂದರೆ ಅದು ಜಾತಿಪದ್ಧತಿಯಿಂದ ಗ್ರಸ್ತವಾದ ಸಮಾಜದ ಒಂದು ಮುಖವೆಂದೂ ಅವರು ತಮ್ಮ ನಿಕಟವರ್ತಿಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದರು.

ಲೋಹಿಯಾ ತೀರಿಕೊಂಡಾಗ ಯಾವ ಆಸ್ತಿಪಾಸ್ತಿಯೂ ಇರಲಿಲ್ಲ; ಯಾವುದೇ ಕುಟುಂಬವನ್ನೂ ಬಿಟ್ಟುಹೋಗಲಿಲ್ಲ. ಅವರು ಬಿಟ್ಟುಹೋದದ್ದು ಕೇವಲ ತಮ್ಮ ಆದರ್ಶಗಳನ್ನು ಮಾತ್ರ. ಅವರು ಹೀಗೆ ಹೇಳುತ್ತಿದ್ದರು: ''ನನ್ನ ಬಳಿ ನನ್ನದೆಂಬುದೇನೂ ಇಲ್ಲ. ಭಾರತದ ಬಡವರು ಹಾಗೂ ಶ್ರೀಸಾಮಾನ್ಯರು ನನ್ನನ್ನು ತಮ್ಮವನು ಅಂದುಕೊಂಡಿರುವ ಒಂದು ಭಾವನೆಯನ್ನು ಬಿಟ್ಟರೆ ನನ್ನ ಬಳಿ ಇನ್ನೇನೂ ಉಳಿದಿಲ್ಲ.''[27]

ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಅಸ್ತಿತ್ವದಲ್ಲಿದ್ದ ಕೇಂದ್ರವಿಧಾನಸಭೆಗೆ ಸೇರುವಂತೆ ಬಂದ ಎಲ್ಲ ಪ್ರಸ್ತಾಪಗಳನ್ನು ಲೋಹಿಯಾ ತಳ್ಳಿಹಾಕಿದ್ದರು. ಏಕೆಂದರೆ ಅಲ್ಲಿ ಸದಸ್ಯನಾಗುವ ಪ್ರತಿಯೊಬ್ಬ ವ್ಯಕ್ತಿಯೂ ಬ್ರಿಟಿಷ್ ಸಾರ್ವಭೌಮತ್ವಕ್ಕೆ ತನ್ನ ನಿಷ್ಠೆಯನ್ನು ಘೋಷಿಸಿಕೊಳ್ಳಬೇಕಾಗಿತ್ತು. ತಮ್ಮ ಮನಸ್ಸಾಕ್ಷಿಗೆ ವಿರುದ್ಧವಾದುದರಿಂದ ಲೋಹಿಯಾ ಈ ಸದಸ್ಯತ್ವಕ್ಕೆ ಒಡಂಬಡಲಿಲ್ಲ. 1963ರಲ್ಲಿ ಅವರು ಲೋಕಸಭೆಗೆ ಸ್ಪರ್ಧಿಸಿ ಕಾಂಗ್ರೆಸ್ ಅಭ್ಯರ್ಥಿ ಡಾ. ಕೇಸ್ಕರ್ ಅವರನ್ನು 57,588 ಮತಗಳಿಂದ ಸೋಲಿಸಿ, ಫರೂಕಾಬಾದ್ ಕ್ಷೇತ್ರದಿಂದ ಉಪಚುನಾವಣೆಯಲ್ಲಿ ಜಯಶೀಲರಾದರು. 1967ರಲ್ಲಿ ಅವರು ಕನೂಜ್ ಲೋಕಸಭಾಕ್ಷೇತ್ರದಿಂದ ಸ್ಪರ್ಧಿಸಿ ತಮ್ಮ ಸ್ಥಾನವನ್ನು ಉಳಿಸಿಕೊಂಡರು. ಲೋಕಸಭೆಗೆ ಪ್ರವೇಶಿಸುವ ಮುನ್ನ ಲೋಹಿಯಾ ತಮ್ಮ ಬಗ್ಗೆ

ಎದ್ದಿದ್ದ ಒಂದು ವ್ಯಾಪಕವಾದ ಗುಮಾನಿಯನ್ನು ಪರಿಹರಿಸಿದರು. ಲೋಕಸಭೆಯಲ್ಲಿ ಅವರು ಗದ್ದಲ ಎಬ್ಬಿಸಿ ಅಸ್ತವ್ಯಸ್ತತೆ ಉಂಟುಮಾಡುತ್ತಾರೆಂಬ ವದಂತಿ ಹರಡಿತ್ತು. ಅವರು ಹೀಗೆ ಹೇಳಿದರು : "ನಾನು ನನ್ನ ಬದುಕಿನಲ್ಲಿ ಯಾವುದೇ ಗೊಂದಲ ಮತ್ತು ಅಸ್ತವ್ಯಸ್ತತೆಗಳನ್ನು ಉಂಟುಮಾಡಿಕೊಂಡಿಲ್ಲವೆಂದು ನಿಮಗೆ ಖಾತರಿ ನೀಡಬಲ್ಲೆ. ಅಂದಮೇಲೆ ಲೋಕಸಭೆಯಲ್ಲಿ ಹಾಗೆ ಮಾಡುವ ಉದ್ದೇಶ ನನಗೆ ಖಂಡಿತಾ ಇಲ್ಲ. ಆದರೆ ಜನತೆಯ ದುಃಖ ದುಮ್ಮಾನಗಳಿಗೆ, ಆಶೋತ್ತರಗಳಿಗೆ ದನಿಗೊಡುವ ನನ್ನ ಹಕ್ಕಿಗೆ ಯಾರಾದರೂ ಅಡ್ಡಿಮಾಡಿದರೆ ಆಗ ಆ ಕಥೆಯೇ ಬೇರೆ!"[28]

ಆದರೆ ಲೋಹಿಯಾ ಬಹು ಬೇಗನೆ ತಮ್ಮನ್ನು ಲೋಕಸಭೆಯ ನಿಯಮಾವಳಿಗೆ ಒಗ್ಗಿಸಿಕೊಂಡರು. ಲೋಕಸಭೆಯಲ್ಲಿ ಪ್ರಮಾಣವಚನ ಸ್ವೀಕರಿಸುವುದಕ್ಕೆ ಮುಂಚೆಯೆ ಅವರು ಆ ಮಹಾಸಭೆಯಲ್ಲಿ ಪ್ರಮಾಣವಚನ ಸ್ವೀಕರಿಸುವುದು ಕೇವಲ ಒಂದು ಔಪಚಾರಿಕತೆಯಲ್ಲ; ಅದೊಂದು ವಾಸ್ತವಸಂಗತಿ ಎಂಬುದನ್ನು ಮನದಟ್ಟು ಮಾಡಿಕೊಟ್ಟರು. ಲೋಕಸಭೆ ಜನಗಳ ಕಷ್ಟಕಾರ್ಪಣ್ಯಗಳು ಅಭಿವ್ಯಕ್ತಗೊಳ್ಳುವ ಒಂದು ನಿಜವಾದ ವೇದಿಕೆಯಾಗಬೇಕು, ಜನಸಮುದಾಯದ ಆಶೋತ್ತರಗಳನ್ನು ಪ್ರತಿಬಿಂಬಿಸುವ ಒಂದು ಕನ್ನಡಿಯಾಗಬೇಕು ಎಂದು ಅವರು ದೃಢವಾಗಿ ಭಾವಿಸಿದ್ದರು. ಆ ಸಭೆ ನಾಡಿನ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ವಲಯಗಳಲ್ಲಿ ಕ್ರಾಂತಿಯನ್ನು ಉಂಟುಮಾಡುವ ಸಾಧನವಾಗಬೇಕೇ ಹೊರತು ಪ್ರಧಾನಮಂತ್ರಿಯವರ ಬೇಕುಬೇಡಗಳಿಗೆ, ಅನ್ನಿಸಿಕೆಗಳಿಗೆ ತಾಳಹಾಕುವ ವೇದಿಕೆಯಾಗಬಾರದು ಎಂದು ಅವರು ಹೇಳುತ್ತಿದ್ದರು. ಆಗಸ್ಟ್ 1963ರಲ್ಲಿ ನೆಹರೂ ಸರ್ಕಾರ ವಿರುದ್ಧ ಅವಿಶ್ವಾಸ ಮತದ ನಿರ್ಣಯವನ್ನು ಮೊದಲ ಬಾರಿಗೆ ಮತಕ್ಕೆ ಹಾಕುವ ಸಂದರ್ಭ ಉದ್ಭವಿಸಿತು. ಆಗ ಲೋಹಿಯಾ ಮೇಲೆದ್ದು ಭಾರತದಲ್ಲಿ ಇಪತ್ತೇಳು ಕೋಟಿ ಜನರ ನಿತ್ಯದ ಆದಾಯ ಮೂರು ಆಣೆಗಳಷ್ಟಿದೆ.[29] ಹಾಗಾಗಿ, ಬಹುಜನರ ವಾಸ್ತವವಾದ ಬಡತನದ ಭೀಕರತೆಯನ್ನು ದೇಶ ಗಮನಿಸಬೇಕು, ನಮ್ಮ ಜನರನ್ನು ಕಿತ್ತುತಿನ್ನುತ್ತಿರುವ ಹಸಿವು ಮತ್ತು ಅರೆಹೊಟ್ಟೆಯ ಸ್ಥಿತಿಯನ್ನು ಒಂದು ರೋಗವಾಗಿ ಪರಿಗಣಿಸಬೇಕು ಎಂದು ಆಗ್ರಹಪಡಿಸಿದರು. ದೇಶದ ಖರ್ಚುವೆಚ್ಚಗಳ ಮೇಲೆ ಮಿತಿಯನ್ನು ಹಾಕಿಕೊಂಡರೆ, ಅದು ಈ ಮಹಾರೋಗಕ್ಕೆ ಒಂದು ಔಷಧಿಯಾಗಬಲ್ಲದೆಂದು ಅವರು ಆಗ್ರಹ ಪಡಿಸಿದರು. ಜನರ ಸಮಸ್ಯೆಗಳ ಬಗ್ಗೆ ಲೋಕಸಭೆಯ ಗಮನ ಸಳೆಯಲು ಯಾವಾಗಲೂ ಅವರು ತುದಿಗಾಲಿನಲ್ಲಿಯೇ ಇರುತ್ತಿದ್ದರು. ಏನೇ ಪ್ರಶ್ನೆಯನ್ನೆತ್ತಿದರೂ ಅದಕ್ಕೆ ಸಂಬಂಧಪಟ್ಟ ಎಲ್ಲ ವಾಸ್ತವಾಂಶಗಳು ಮತ್ತು ಅಂಕಿಅಂಶಗಳು ಅವರ ತುದಿ ಬೆರಳಿನಲ್ಲಿ ಇರುತ್ತಿದ್ದವು. ಅವರು ಯಾವಾಗಲೂ ಸತ್ಯದ ಪಕ್ಷಪಾತಿಯಾಗಿದ್ದರು.

ಧರ್ಮತೇಜ ಪ್ರಕರಣವೇ ಇರಲಿ ಅಥವಾ ಸ್ವೆತ್ಲಾನಾದೇ ಇರಲಿ ಅವರು ನಿಲ್ಲುತ್ತಿದ್ದುದು ಸತ್ಯದ ಕಡೆಗೇ. ಸ್ವೆತ್ಲಾನಾ ಅವರಿಗೆ ನ್ಯಾಯ ದೊರಕತಕ್ಕದ್ದೆಂಬ ವಿಚಾರ ಮನದಟ್ಟಾದಾಗ, ಲೋಹಿಯಾ ಅಂದಿನ ವಿದೇಶಾಂಗ ಖಾತೆಯ ಸಚಿವರಾಗಿದ್ದ ಶ್ರೀ ಎಂ.ಸಿ. ಛಗಲಾರವರನ್ನು ಸುಳ್ಳುಗಾರರೆಂದೂ, ಸದನವನ್ನು ಮತ್ತು ರಾಷ್ಟ್ರವನ್ನು ತಪ್ಪು ಹಾದಿಗೆ ಎಳೆಯುತ್ತಿದ್ದಾರೆಂದೂ ನಿಂದಿಸಲು ಹಿಂದೆಗೆಯಲಿಲ್ಲ. ಸ್ಟ್ಯಾಲಿನ್ನರ ಮಗಳಾದ ಸ್ವೆತ್ಲಾನಾರವರಿಗೆ ಆಶ್ರಯ ಕೊಡದೆ ಹೋದದ್ದಕ್ಕೆ ಅವರು ಸರ್ಕಾರದ ಮೇಲೆ ದೋಷಾರೋಪಣೆ ಮಾಡಿದರು. ಸೋವಿಯಟ್ ಯೂನಿಯನ್ನಿಗೆ ದಿಗಿಲುಗೊಂಡು ಭಾರತ ಸರ್ಕಾರ ಸ್ವೆತ್ಲಾನಾ ಭಾರತವನ್ನು ಬಿಟ್ಟುಹೋಗುವಂತೆ ಒತ್ತಾಯ ಉಂಟುಮಾಡಿತ್ತು ಎಂದು ಅವರು ಆರೋಪಿಸಿದರು.

ಭಾರತದ ಲೋಕಸಭೆಯಲ್ಲಿ ಮಂತ್ರಿಗಳ ಹಾರಿಕೆಯ ಉತ್ತರಗಳು, ಮೌನ ಇಲ್ಲವೇ ತಬ್ಬಿಬ್ಬು ಮಾತುಗಳ ಮೂಲಕ ಪದೇಪದೇ ಸತ್ಯದ ಕೊಲೆಯಾಗುತ್ತಿರುವುದನ್ನು ಕಂಡು ಲೋಹಿಯಾರ ಮನಸ್ಸಿಗೆ ತುಂಬ ನೋವಾಗುತ್ತಿತ್ತು. "ಇಂಗ್ಲೆಂಡಿನಂತಹ ದೇಶದಲ್ಲಿ ಇಂತಹ ಪರಿಸ್ಥಿತಿ ಅಸಾಧ್ಯ. ಇಂಗ್ಲೆಂಡಿನಲ್ಲಾಗಿದ್ದರೆ ಇಂತಹ ಒಂದು ಸ್ವೆತ್ಲಾನಾ ಪ್ರಕರಣ ಕ್ಷಣಮಾತ್ರದಲ್ಲಿ ಸರ್ಕಾರವನ್ನು ಅಧಿಕಾರದಿಂದ ಕಿತ್ತೆಸೆಯುತ್ತಿತ್ತು[30] ಎಂದು ಅವರು ಹೇಳುತ್ತಿದ್ದರು.

ಲೋಹಿಯಾರವರು ಹಸಿವು, ಬಡತನಗಳ ಬಗ್ಗೆ ಚರ್ಚೆಮಾಡುವುದಕ್ಕಿಂತ ಮಿಗಿಲಾಗಿ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರಿಗೆ ಬಳುವಳಿ ನೀಡಲಾದ ತುಪ್ಪಳದ ಕೋಟು ಹಾಗೂ ವಜ್ರದ ಕಂಠಾಭರಣಗಳಂತಹ ಗೌಣವಿಷಯಗಳ ಬಗ್ಗೆ ಹೆಚ್ಚು ಆಸಕ್ತಿಯಿಂದ ಚರ್ಚಿಸುತ್ತಾರೆಂಬ ವಿಮರ್ಶಕರ ಟೀಕೆಗೆ ಲೋಹಿಯಾ ಹೀಗೆ ಉತ್ತರಕೊಡುತ್ತಿದ್ದರು: "ಇವೆರಡಕ್ಕೂ ಹತ್ತಿರದ ಸಂಬಂಧವಿದೆ. ಒಂದು ದೇಶ ಇಲ್ಲವೇ ಸರ್ಕಾರ ಆಸ್ತಿಪಾಸ್ತಿ ಗಳಿಕೆಯ ಹಾಗೂ ಅಸತ್ಯದ ದಾರಿ ಹಿಡಿಯುವುದಾದರೆ ಅದು ಹಸಿವನ್ನು ತೊಡೆದುಹಾಕಲಾರದು. ಕೇವಲ ಸತ್ಯಸಂಧರು ಹಾಗೂ ಆಸ್ತಿಪಾಸ್ತಿಗಳನ್ನು ಹೆಚ್ಚಿಸಿಕೊಳ್ಳುವ ಲೋಭವನ್ನು ಬದಿಗಿಡಬಲ್ಲವರು ಮಾತ್ರ ಹಸಿವನ್ನು ನೀಗಬಲ್ಲರು."[31]

ಆಡಳಿತಾರೂಢ ವರ್ಗದ ಜನರಲ್ಲಿ ಭ್ರಷ್ಟಾಚಾರವನ್ನು ಅವರು ಕಿತ್ತೊಗೆಯ ಬಯಸಿದರು. ಅಂದಿನ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ಲೋಹಿಯಾರವರನ್ನು ಚಾರಿತ್ರ್ಯವಧೆ ಮಾಡುವ ವ್ಯಕ್ತಿ ಎಂದು ದೋಷಾರೋಪಣೆ ಮಾಡಿದಾಗ ಅವರು ಹೀಗೆ ಉತ್ತರಿಸಿದರು : "ನಾನು ನಿಂದನೆಗೆ ಒಳಗಾಗಿದ್ದೇನೆ.

ಆದರೆ, ಯಾರು ಹಣ ಮತ್ತು ಆಸ್ತಿಪಾಸ್ತಿಗಳಿಕೆಯ ಹಿಂದೆಬಿದ್ದು ಚಾರಿತ್ರ್ಯ ಕಳೆದುಕೊಂಡಿರುವವರೋ ಅಂತಹ ಜನ ಸದನದ ಒಳಗೆ ಮತ್ತು ಹೊರಗೆ ನಾನು ಅವರ ಚಾರಿತ್ರ್ಯವಧೆ ಮಾಡುತ್ತೇನೆಂದು ಪದೇ ಪದೇ ಹೌಹಾರುತ್ತಾರಲ್ಲ, ಈ ವಿಚಿತ್ರಕ್ಕೆ ಏನನ್ನುವುದು?"[32]

ಎಷ್ಟೋ ವೇಳೆ ಒಂದು ನಿರ್ದಿಷ್ಟ ವಿಷಯದ ಬಗ್ಗೆ ಮಾತನಾಡಬೇಕಾದರೆ ಲೋಹಿಯಾ ಅವರು ಮೂರ್ತ ವಿಷಯಗಳಿಂದ ಅಮೂರ್ತ ವಿಷಯಗಳ ಕಡೆಗೆ ಸಾಗಿಹೋಗುತ್ತಿದ್ದರು. ಹಾಗಾಗಿ ಲೋಕಸಭೆಯಲ್ಲಿ ಮಾಡಿದ ಅವರ ಅನೇಕ ಭಾಷಣಗಳು ಅವರ ರಾಜಕೀಯ ನೀತಿನಿಲುವುಗಳಿಗೆ ಕೈಗನ್ನಡಿಯಂತಿದ್ದವು. ಒಂದು ವಿಷಯ ಅದು ಮೂಲದಲ್ಲಿ ಇರುವುದಕ್ಕಿಂತ ಭಿನ್ನ ಮಜಲುಗಳಲ್ಲಿ ಕಂಡುಬರುವಂತೆ ಮಾಡುವ ಸಾಮರ್ಥ್ಯ ಒಬ್ಬ ಸಂಸತ್ ಸದಸ್ಯರಾಗಿ ಅವರಿಗೆ ಸಾಧ್ಯವಾಗಿತ್ತು.

ಲೋಹಿಯಾ ಅವರು ಲೋಕಸಭಾಕಲಾಪಗಳಿಗೆ ಅಡ್ಡಿಯುಂಟುಮಾಡುತ್ತಾರೆ ಹಾಗೂ ಯಾವಾಗಲೂ ಅಧ್ಯಕ್ಷರಿಗೆ ಎದುರು ಬೀಳುತ್ತಿರುತ್ತಾರೆ ಎಂಬ ಆರೋಪ ಅವರ ಮೇಲಿತ್ತು. ಎಷ್ಟೋ ವೇಳೆ ಅವರ ಟೀಕೆಗಳು ಉದ್ರೇಕಕಾರಿಯಾಗಿರುತ್ತಿದ್ದವು; ಅವರ ನಡವಳಿಕೆ ಅಕ್ಷಮ್ಯವೆನಿಸುವಂತಿರುತ್ತಿತ್ತು. 1964ರಲ್ಲಿ ಲೋಹಿಯಾರವರನ್ನು ಲೋಕಸಭೆಯಿಂದ ಅಮಾನತ್ತುಗೊಳಿಸಿದ್ದಾಗ ಅವರು ಸಭಾಧ್ಯಕ್ಷರನ್ನು ಸಾರ್ವಜನಿಕವಾಗಿಯೇ ಹೀಯಾಳಿಸಿದರು. ಸಭಾಧ್ಯಕ್ಷರು ತುಂಬ ದಬ್ಬಾಳಿಕೆಯಿಂದ ವರ್ತಿಸಿದ್ದಾರೆಂದೂ ಲೋಕಸಭೆಯ ಜನತಾಂತ್ರಿಕತೆಯ ಎಲ್ಲ ನೀತಿನಿಯಮಗಳನ್ನು ಗಾಳಿಗೆ ತೂರಿದ್ದಾರೆಂದೂ ಲೋಕಸಭೆಯ ಅಧ್ಯಕ್ಷರ ಕರ್ತವ್ಯ ಮತ್ತು ಕಾರ್ಯಾಚರಣೆಗಳಿಗೆ ಸಂಬಂಧಪಟ್ಟಂತೆ ಮುಕ್ತ ಮತ್ತು ನಿರ್ಭೀತ ಸ್ಥಿತಿಯ ಚರ್ಚೆಯನ್ನು ನಡೆಸುವ ಆವಶ್ಯಕತೆಯಿದೆಯೆಂದೂ ಅವರು ಒತ್ತಿ ಹೇಳಿದರು. ಲೋಕಸಭೆಯ ಅಧ್ಯಕ್ಷರ ವಿಚಾರವಾಗಿ ಸದನದ ಹೊರಗಿನ ವೇದಿಕೆಯಲ್ಲಿ ಅವರು ಆಡಿದ ಖಾರವಾದ ಮಾತುಗಳು ಆಘಾತಕಾರಿಯಾಗಿದ್ದವು. ಆದರೆ, ಒಂದು ಅಂಶವನ್ನು ನಾವು ಇಲ್ಲಿ ಮರೆಯಬಾರದು. ಅದು ಏನೆಂದರೆ, ಅವರ ಟೀಕೆಯ ಮೊನಚು ಮತ್ತು ಭಾಷೆ ಎಷ್ಟೋ ವೇಳೆ ಕಾಂಗ್ರೆಸ್ ಹಾಗೂ ವಿರೋಧಪಕ್ಷಗಳ ಸದಸ್ಯರಿಗೆ ನುಂಗಲಾರದ ತುತ್ತಾಗಿ ಕಂಡುಬರುತ್ತಿದ್ದರೂ ತಾವು ಮನಸ್ಸಿನಲ್ಲಿ ಏನನ್ನೂ ಇಟ್ಟುಕೊಳ್ಳುತ್ತಿರಲಿಲ್ಲ. ಸ್ವಲ್ಪ ಕಾಲದಲ್ಲೇ ತಾವು ಉಗ್ರವಾಗಿ ಟೀಕಿಸಿದವರೊಡನೆ ಪ್ರೀತಿಯಿಂದ ಬೆರೆತು ಮಾತಾಡುತ್ತಿದ್ದರು. ರಾಮಮನೋಹರರು ನಿಧನರಾದ ಸಮಯದಲ್ಲಿ ಲಖ್ನೋದ "ನ್ಯಾಷನಲ್ ಹೆರಾಲ್ಡ್" ಪತ್ರಿಕೆ ಒಬ್ಬ ಸಂಸತ್‌ಪಟುವಾಗಿ ತಾನು ಅವರನ್ನು ಕಂಡಬಗೆಯನ್ನು ಹೀಗೆ ಬಣ್ಣಿಸಿತ್ತು:

> ಅವರು ಚುನಾವಣೆಯಲ್ಲಿ ಗೆದ್ದಾಗ, ಕೆಲವು ವಲಯಗಳಲ್ಲಿ ಸಂಸತ್‌ಸದಸ್ಯರಾಗಿ ಲೋಹಿಯಾರವರು ರಚನಾತ್ಮಕವಾಗಿ ಸೇವೆಸಲ್ಲಿಸುವುದಕ್ಕಿಂತ ಅವರಿಂದ ಅಡಚಣೆಗಳೇ ಹೆಚ್ಚಾಗುತ್ತವೆಂದು ಭಾವಿಸಲಾಗಿತ್ತು..... ಆದರೆ ಲೋಕ ಸಭಾಸದಸ್ಯರಾಗಿದ್ದ ತಮ್ಮ ನಾಲ್ಕು ವರ್ಷಗಳ ಅವಧಿಯಲ್ಲಿ ಲೋಹಿಯಾ ಈ ಬಗೆಯ ಅನ್ನಿಸಿಕೆಯನ್ನು ಸಂಪೂರ್ಣವಾಗಿ ಸುಳ್ಳಾಗಿಸಿದ್ದು ಮಾತ್ರವಲ್ಲ, ತಮ್ಮದೇ ಆದ ಒಂದು ಗಂಭೀರ ಸ್ವಭಾವದ, ಸದುದ್ದೇಶದ ಏಕಾಗ್ರತೆಯಿಂದ ಕೂಡಿದ, ಅನೇಕರು ಅಸೂಯೆಪಡುವಂತಹ ಯಶಸ್ವಿ ವ್ಯಕ್ತಿತ್ವವನ್ನು ರೂಪಿಸಿಕೊಂಡರು.[33]

ಅಡಿಟಿಪ್ಪಣಿಗಳು

1. ಲೋಹಿಯಾ ಕೊಲಂಬೊ ಮೂಲಕ ಮದರಾಸು ತಲುಪಿದಾಗ ಅವರ ಬಳಿ ಬಿಡಿಗಾಸೂ ಇರಲಿಲ್ಲ. ಅವರು ಹೇಗಾದರೂ ಮಾಡಿ ಕಲಕತ್ತೆಗೆ ಹೋಗಲು ಟಿಕೇಟು ಪಡೆಯಬೇಕಾಗಿತ್ತು; 'ಹಿಂದೂ' ಪತ್ರಿಕೆಯ ಸಂಪಾದಕರ ಬಳಿ ಹೋಗಿ ಕೇವಲ ಎರಡು ಗಂಟೆಗಳಲ್ಲಿ 'ಹಿಟ್ಲರ್‌ವಾದದ ಭವಿಷ್ಯ' ಎಂಬ ವಿಷಯವಾಗಿ ಲೇಖನ ಬರೆದುಕೊಟ್ಟು ಇಪ್ಪತ್ತು ರೂಪಾಯಿ ಸಂಭಾವನೆ ಪಡೆದುಕೊಂಡರು. ಹಿಟ್ಲರ್ ಆಗಷ್ಟೆ ಜರ್ಮನಿಯ ಸಾರ್ವತ್ರಿಕ ಚುನಾವಣೆಗಳಲ್ಲಿ ಜಯಗಳಿಸಿದ್ದು, ಲೋಹಿಯಾ ತಮ್ಮ ಲೇಖನದಲ್ಲಿ ಜರ್ಮನಿ ಮತ್ತು ಪ್ರಪಂಚದ ಇತರ ಭಾಗಗಳ ಮೇಲೆ ಈ ನಾಜಿ ವಿಜಯದ ಪರಿಣಾಮಗಳನ್ನು ಕುರಿತು ವಿವರಿಸಿದ್ದರು.
2. ಲೋಹಿಯಾ : 'ಸಮಾಜವಾದಿ ಆಂದೋಲನ್‌ಕಾ ಇತಿಹಾಸ್', ಹೈದರಾಬಾದ್, 1963, ಪು. 20
3. 'Guilty Men of India's Partition'ಹೈದರಾಬಾದ್, 1970, ಪು.91,
4. ಬಿಹಾರದ ಕಮ್ಯೂನಿಸ್ಟ್ ಪಕ್ಷದ ಅಧಿವೇಶನದಲ್ಲಿ 1936 ಡಿಸೆಂಬರ್ ಐದರಂದು ಲೋಹಿಯಾ ಮಾಡಿದ ಅಧ್ಯಕ್ಷ ಭಾಷಣವೇ ಈ ಕೃತಿರುಹೊತ್ತಗೆ. ಇದರ ಕೆಲವು ಭಾಗಗಳು 'ಜನ್', ಮಾರ್ಚ್-ಏಪ್ರಿಲ್ 1970 ಪು .53-63ರಲ್ಲಿ ಅಚ್ಚಾಗಿತ್ತು.
5. Congress Socialist : 'The collapse of International Morality". Bombay, Feb.26, 1938, Vol.3, p. 148.
6. ಇಂದುಮತಿ ಕೇಳ್ಕರ್: 'ಲೋಹಿಯಾ- ಸಿದ್ಧಾಂತ್ ಔರ್ ಕರ್ಮ್', ಹೈದರಾಬಾದ್, 1963, ಪು. 83 ರಂದ ಉದ್ಧೃತ.
7. 'ಹರಿಜನ್' ಆಗಸ್ಟ್ 25, 1940. ಲೋಹಿಯಾ ನ್ಯಾಯಾಲಯದಲ್ಲಿ ಕೊಟ್ಟಿದ್ದ ಹೇಳಿಕೆಯ ಕೆಲವು ಭಾಗಗಳನ್ನು ಪ್ರಕಟಿಸಿ ಗಾಂಧೀಜಿಯವರು ಈ ಪ್ರಶ್ನೆಯನ್ನೆತ್ತಿದ್ದರು : "ಅವರಿಗೆ ಕಠಿಣ ಶಿಕ್ಷೆ ಕೊಡುವಂತಹ ಅಗತ್ಯವಾದರೂ ಏನಿತ್ತು?... ಡಾ. ಲೋಹಿಯಾ ಮತ್ತು ಇತರ ಕಾಂಗ್ರೆಸ್ಸಿಗರ ಬಂಧನವು ಭಾರತವನ್ನು ಬಿಗಿಯಾಗಿ ಕಟ್ಟುವ ಸರಪಳಿಯನ್ನು ದುರ್ಬಲಗೊಳಿಸುವ ಸುತ್ತಿಗೆಯ ಪೆಟ್ಟುಗಳಂತಿದೆ".

8. The Mystery of Sir Stafford Cripps, Padma Publications, Bombay, 1942, p.11
9. ಅದೇ, ಪು. 18
10. ಗಾಂಧಿಯವರು ಈ ಲೇಖನವನ್ನು 'ಹರಿಜನ' ಪತ್ರಿಕೆಯ 1942ರ ಏಪ್ರಿಲ್ ಹತ್ತೊಂಬತ್ತರ ಸಂಚಿಕೆಯಲ್ಲಿ ಪ್ರಕಟಿಸಿ, ಅದರ ಕೆಳಗೆ ಈ ಮಾತುಗಳನ್ನು ಸೇರಿಸಿದ್ದರು: "ಸಂಬಂಧಪಟ್ಟ ಎಲ್ಲರ ಗಮನವನ್ನೂ ಈ ಟಿಪ್ಪಣಿಯು ಸೆಳೆಯುತ್ತದೆಯೆಂಬ ಭರವಸೆ ನನಗಿದೆ."
11. Marx, Gandhi and Socialism, Hyderabad, 1963, p. 151
12. ಆ ಕಾಲಕ್ಕೆ ಲೋಹಿಯಾ ಬರೆದ 'Economics after Marx' ಎಂಬುದು ಒಂದು ಪ್ರಮುಖವಾದ ಬರವಣಿಗೆಯಾಗಿತ್ತು. ಅಲ್ಲಿ ಲೋಹಿಯಾ ಹೀಗೆ ಹೇಳಿದ್ದರು: "ಬ್ರಿಟಿಷರ ಆಡಳಿತಕ್ಕೆ ವಿರುದ್ಧವಾಗಿ 1942-43ರಲ್ಲಿ ನಡೆದ ಬಹಿರಂಗ ಹೋರಾಟದ ಸಮಯದಲ್ಲಿ ಸಮಾಜವಾದಿಗಳು ಜೈಲಿನಲ್ಲಿದ್ದರು; ಇಲ್ಲವೇ ಪೋಲೀಸರು ಅವರ ಬೆನ್ನುಹತ್ತಿ ಬೇಟೆಯಾಡುತ್ತಿದ್ದರು. ಆಗ ಕಮ್ಯುನಿಸ್ಟರು ವಿದೇಶಿ ಒಡೆಯರುಗಳ ಸಹಭಾಗಿತ್ವದಲ್ಲಿ ತಮ್ಮ ಜನಪರ ಹೋರಾಟವನ್ನು ಪ್ರಾರಂಭಿಸಿದರು. ಮಾರ್ಕ್ಸ್‌ವಾದದ ಸಿದ್ಧಾಂತವು ವ್ಯಾಪಕವಾಗಿ ಬಗೆಬಗೆಯ ವಿರೋಧಾಭಾಸಗಳೊಡನೆ ಬಳಕೆಗೆ ಬರುತ್ತಿದ್ದುದು ನನಗೆ ಹಿಡಿಸದಾಯಿತು. ಅದರಲ್ಲಿನ ಸತ್ಯಾಂಶವನ್ನು ಕಂಡುಕೊಂಡು ಅವರ ಅಸತ್ಯದ ಭಾಗವನ್ನು ನಾಶಮಾಡುವುದು ನನ್ನ ಆಸೆಗಳಲ್ಲಿ ಒಂದಾಯಿತು. ಅರ್ಥಶಾಸ್ತ್ರ, ರಾಜನೀತಿ, ಚರಿತ್ರೆ ಮತ್ತು ದರ್ಶನ ಈ ನಾಲ್ಕು ಮುಖಗಳನ್ನು ಕುರಿತು ನಾನು ಅಭ್ಯಾಸ ಮಾಡಬೇಕೆಂದು ಯೋಜಿಸಿಕೊಂಡಿದ್ದು, ಆರ್ಥಿಕ ಹಿನ್ನೆಲೆಯನ್ನು ಅರ್ಧಭಾಗದಷ್ಟು ವಿವೇಚಿಸುವಷ್ಟರಲ್ಲಿಯೇ ಪೊಲೀಸರು ನನ್ನನ್ನು ಸೆರೆಹಿಡಿದರು."
13. Lohia: 'An Interval During Politics', Hyderabad, 1965, P. 72.
14. ಅದೇ, P. 81
15. ಈ ಪತ್ರ 'Mankind' ಫೆಬ್ರವರಿ 1968, ಪು. 46ರಲ್ಲಿ ಪ್ರಕಟಗೊಂಡಿತ್ತು.
16. ಇಂದುಮತಿ ಕೇಳ್ಕರ್, ಪೂರ್ವೋಕ್ತ, ಪು.113 ರಿಂದ ಉಲ್ಲೇಖಿಸಲಾಗಿದೆ.
17. 'Guilty Men of India's Partition", P. 32.
18. ಈ ಪತ್ರವನ್ನು 'Mankind' ಆಗಸ್ಟ್, 1969, ಪು. 49ರಲ್ಲಿ ಪ್ರಕಟಿಸಲಾಗಿತ್ತು.
19. ಲೋಹಿಯಾರವರನ್ನು ಬೆಂಬಲಿಸುತ್ತ ಗಾಂಧೀಜಿ ಹೀಗೆ ಹೇಳಿದರು : "ಪತ್ರಿಕೆಗಳ ವರದಿಯ ಪ್ರಕಾರ ಡಾ. ಲೋಹಿಯಾ ಗೋವಾದ ಜನರ ಆಹ್ವಾನದ ಮೇರೆಗೆ ಅಲ್ಲಿಗೆ ಹೋಗಿದ್ದರು. ಅಲ್ಲಿ ಅವರು ಭಾಷಣಗಳನ್ನು ಮಾಡದಿರುವಂತೆ ಅವರ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ. ಸಹಜವಾಗಿಯೇ ಲೋಹಿಯಾ ಸರ್ಕಾರದ ಆದೇಶವನ್ನು ಉಲ್ಲಂಘಿಸಿದರು. ಹಾಗೆ ಮಾಡುವುದರ ಮೂಲಕ ಅವರು ನಾಗರಿಕ ಸ್ವಾತಂತ್ರ್ಯ ರಕ್ಷಣೆಯ ಸಲುವಾಗಿ, ಅದರಲ್ಲೂ ವಿಶೇಷವಾಗಿ ಗೋವಾದ ಜನತೆಗೆ ದೊಡ್ಡ ಸೇವೆಯನ್ನೇ ಸಲ್ಲಿಸಿದ್ದಾರೆ." (ಹರಿಜನ್, ಜೂನ್ 30, 1946).

    ಪೋರ್ಚುಗೀಸ್ ಭಾರತದ ಗವರ್ನರ್ ಜನರಲ್ ಬರೆದಿದ್ದ ಪತ್ರಕ್ಕೆ ಉತ್ತರವಾಗಿ ಜುಲೈ

18ರಂದು ಗಾಂಧೀಜಿ ಹೀಗೆ ಬರೆದರು : "ಡಾ. ಲೋಹಿಯಾರ ರಾಜಕೀಯ ಚಟುವಟಿಕೆಗಳು ಪ್ರಾಯಶಃ ನನ್ನ ರಾಜಕೀಯ ಚಟುವಟಿಕೆಗಳಿಗಿಂತ ಭಿನ್ನವಾಗಿರಬಹುದಾದರೂ ಅವರ ಬಗ್ಗೆ ನನಗೆ ಅಪಾರ ಪ್ರಶಂಸೆ ಇದೆ. ಅವರು ಗೋವಾಕ್ಕೆ ಹೋಗಿ ಅದರ ಕಪ್ಪು ಚುಕ್ಕೆಯ ಮೇಲೆ ತಮ್ಮ ಬೆರಳನ್ನಿಟ್ಟಿದ್ದಾರೆ. .... ಅವರು ಹಚ್ಚಿರುವ ದೀಪವನ್ನು ಗೋವಾದ ಜನರು ಆರಿಹೋಗಲು ಅವಕಾಶ ಮಾಡಿಕೊಡಲಾರರು, ಒಂದು ವೇಳೆ ಹಾಗೆ ಮಾಡಿದರೆ ನಿಮಗೆ ಕೇಡು ತಪ್ಪದು. ಡಾಕ್ಟರ್ ಸಾಹೇಬರು ಈ ಬಗೆಯ ದೀಪ ಹಚ್ಚಿರುವುದಕ್ಕಾಗಿ ನೀವು ಹಾಗೂ ಗೋವಾದ ಜನರು ಆವರಿಗೆ ಆಭಾರಿಯಾಗಿರಬೇಕು." (ಹರಿಜನ್ ಆಗಸ್ಟ್ 11, 1946)

20. ರಾಜಮಹಾರಾಜರುಗಳು ಆಳುತ್ತಿದ್ದ ಎಲ್ಲ ರಾಜ್ಯಗಳಲ್ಲಿ ಜಾರಿಗೆ ತರುವ ಸಲುವಾಗಿ ನಾಸಿಕ್‌ನಲ್ಲಿ ನಡೆದ ಈ ಸಮ್ಮೇಳನ ಆರು ಅಂಶಗಳ ಕಾರ್ಯಕ್ರಮವೊಂದನ್ನು ಶಿಫಾರಸುಮಾಡಿತು. ವಿವರಗಳಿಗೆ Report of the Sixth annual conferance of the S.P. Bombay 1948 PP. 40-41 ನೋಡಿ.
21. ವಿವರಗಳಿಗಾಗಿ Fragments of a World Mind PP. 91-96 ನೋಡಿ.
22. ಅದೇ ಪು. 108-111
23. An Interval During politics P.2
24. ವಿವರಗಳಿಗಾಗಿ ನೋಡಿ: The Caste system pp-49-74
25. 1977ರ ಅಕ್ಟೋಬರ್ ಮುಪ್ಪತ್ತರಂದು ಆರೋಗ್ಯ ಸಚಿವಾಲಯಕ್ಕೆ ಇಬ್ಬರು ಸದಸ್ಯರ ತಜ್ಞ ಸಮಿತಿ ಒಪ್ಪಿಸಿದ ವರದಿಯ ಪ್ರಕಾರ ಡಾ. ಲೋಹಿಯಾರ ಸಾವು ವೈದ್ಯರ ಅಲಕ್ಷ್ಯದಿಂದ ಉಂಟಾಗಿತ್ತು. ಆದರೆ ವರದಿಯಲ್ಲಿ ಉಲ್ಲೇಖಗೊಂಡಿದ್ದಂತೆ ಶಸ್ತ್ರಚಿಕಿತ್ಸೆಗಾಗಿ ಲೋಹಿಯಾರನ್ನು ಸಜ್ಜುಗೊಳಿಸಿದ ಬಗ್ಗೆ, ಶಸ್ತ್ರಕ್ರಿಯಾವಿಧಾನದ ಆಯ್ಕೆ, ತೀವ್ರ ರಕ್ತಸ್ರಾವವನ್ನು ತಡೆಗಟ್ಟಿದ ರೀತಿ ಇವೆಲ್ಲ ತೃಪ್ತಿಕರವಾಗಿದ್ದವು. ಶಸ್ತ್ರಚಿಕಿತ್ಸೆಯ ಅನಂತರ ಅವರಿಗೆ ನೀಡಲಾದ ಆಂಟಿಬಯಾಟಿಕ್ ಔಷಧಗಳ ಆಯ್ಕೆ ಕೂಡ ಸಮರ್ಪಕವಾಗಿತ್ತು. (ಇಂಡಿಯನ್ ಎಕ್ಸ್‌ಪ್ರೆಸ್, ನವಂಬರ್ 10, 1977).
26. ಓಂಕಾರ್ ಶರದ್ : "ಲೋಹಿಯಾ", 1972 ಪು. 298. "ಲಕ್ಷಾಂತರ ಮಂದಿಗೆ ದೊರೆಯದಿರುವ ಸೌಲಭ್ಯವನ್ನು ಕೇವಲ ಒಬ್ಬ ವ್ಯಕ್ತಿಗೆ ನೀಡುವುದರಿಂದ ಏನು ಪ್ರಯೋಜನ?" ಇದು ಮರಣಶಯ್ಯೆಯಲ್ಲಿದ್ದ ಲೋಹಿಯಾರ ಅಂತಿಮ ಉಕ್ತಿಗಳಲ್ಲಿ ಒಂದು.
27. 'ಉರಗದ್ ಕೀ ಬಾತ್' (ಅಂದರೆ ಆಲದಮರದ ಮಾತು-ಆಲದಮರವು ಸಮಾಜವಾದಿ ಪಕ್ಷದ ಚುನಾವಣಾ ಸಂಕೇತವಾಗಿತ್ತು) ಈ ಶೀರ್ಷಿಕೆಯ ಕಿರುಹೊತ್ತಗೆಯನ್ನು 1962ರಲ್ಲಿ ಅವರ ಚುನಾವಣಾ ಕ್ಷೇತ್ರವಾಗಿದ್ದ ಫೂಲ್‌ಪುರದಲ್ಲಿ ಹಂಚಲಾಯಿತು.
28. The Indian Expess,Delhi, May 31, 1963.
29. 1940ರಲ್ಲಿ ಲೋಹಿಯಾ ಲೆಕ್ಕಹಾಕಿದ ಹಾಗೆ ಒಬ್ಬ ಭಾರತೀಯನ ಸರಕಾರಿ ಆದಾಯ ಪ್ರತಿನಿತ್ಯ ಎರಡು ಆಣೆಗಳಾಗಿತ್ತು. ಆದಕ್ಕೆ ಹೋಲಿಸಿದಂತೆ ಅದೇ ಹೊತ್ತಿಗೆ ಒಬ್ಬ ಇಂಗ್ಲಿಷ್ ಪ್ರಜೆಯ ಆದಾಯ 45 ಆಣೆಗಳಷ್ಟಿತ್ತು. (Indian Economy in Figures, The Nationl Herald Jan . 18, 1940).

30. Note and Comments Vol II, PP. 228-29. (ಈ ಪುಸ್ತಕದಲ್ಲಿ ಲೋಹಿಯಾ ತಾವೇ ಸಂಸ್ಥಾಪಿಸಿ, ಸಂಪಾದಿಸಿ ಹೊರತರುತ್ತಿದ್ದ ಮಾಸಪತ್ರಿಕೆ Mankindನಲ್ಲಿ Note and comments ಎಂಬ ಶೀರ್ಷಿಕೆಯಡಿ ಫೆಬ್ರವರಿ 1966 ರಿಂದ ಅಕ್ಟೋಬರ್ 1967ರ ವರೆಗೆ ಬರೆದ ಲೇಖನಗಳು ಸಂಗ್ರಹಗೊಂಡಿವೆ.) ಲೋಹಿಯಾ ಹೀಗೆ ಹೇಳಿದ್ದರು: "ಅಲ್ಲಿಯ ಜನ (ಇಂಗ್ಲೆಂಡಿನ ಮಂದಿ) ಸತ್ಯವನ್ನು ಸಂರಕ್ಷಣೆ ಮಾಡಲು ತಮ್ಮ ಚುನಾಯಿತ ಪ್ರತಿನಿಧಿಗಳು ಶಾಸನ ಸಭೆಯಲ್ಲಿ ಎಚ್ಚರವಹಿಸುವಷ್ಟೇ ತಾವೂ ನಿರಂತರ ಜಾಗರೂಕರಾಗಿರುತ್ತಾರೆ. ಇಲ್ಲದೆ ಹೋದಲ್ಲಿ ಶಾಸನ ಸಭೆಯ ಹಿರಿಮೆಯನ್ನು, ಘನತೆಯನ್ನು ಕಾಪಾಡಿಕೊಂಡುಬರಲಾಗದು... ಇಲ್ಲಿ ಭಾರತದಲ್ಲಿ ನಾವು ಈ ವಿಷಯವನ್ನು ಚೆನ್ನಾಗಿ ಅರಿಯಬೇಕು. ಸಂಸತ್‌ಸಭೆ ಇಲ್ಲವೆ ಸಂಸದೀಯ ಪ್ರಜಾಪ್ರಭುತ್ವ ಸತ್ಯದೂರವಾಗಿದ್ದುಕೊಂಡು ಘನತೆಗೌರವಗಳನ್ನು ಕಾಪಾಡಿಕೊಳ್ಳಲಾರದೆಂಬುದನ್ನು ನಾವು ತಿಳಿದುಕೊಳ್ಳಬೇಕು. ನಿರಂತರ ಕಟ್ಟೆಚ್ಚರವೇ ಸ್ವಾತಂತ್ರ್ಯ ಉಳಿಸಿಕೊಳ್ಳಲು ನಾವು ನೀಡಬೇಕಾದ ಬೆಲೆ. ಹಾಗಾಗಿ ಜನತೆಯು ನಿರಂತರವಾಗಿ ತಮ್ಮ ಸಂಸತ್ತು ಹಾಗೂ ಅದರೊಳಗೆ ಕೆಲಸಮಾಡುವ ಸದಸ್ಯರ ಬಗ್ಗೆ ಯಾವಾಗಲೂ ಕಟ್ಟೆಚ್ಚರದಿಂದ ಇರಬೇಕು."

31. ಲೋಕಸಭೆಯಲ್ಲಿ ನಡೆದ ಚರ್ಚೆ, ಮಾರ್ಚ 8, 1967 Mankind ಜೂನ್- 1967, ಪುಟ 38 ರಿಂದ ಉದ್ಧೃತ.

32. ಅದೇ. ಪು. 37

33. ಅಕ್ಟೋಬರ್ 14, 1967.

ಇಂಗ್ಲಿಷ್‌ನಿಂದ ಕನ್ನಡಕ್ಕೆ : ಎಸ್. ಲಕ್ಷ್ಮೀನಾರಾಯಣ ಅರೋರಾ

ಲೋಹಿಯಾ : ವ್ಯಕ್ತಿತ್ವ ಮತ್ತು ವಿಚಾರಧಾರೆ

ಮಧು ಲಿಮಯೆ

ಡಾ. ರಾಮಮನೋಹರ ಲೋಹಿಯಾ ಅವರು ಒಬ್ಬ ಅಪ್ಪಟ ಚಿಂತಕ, ಅಸದೃಶ ನೇತಾರ. ಹಾಗೆಯೇ ಒಬ್ಬ ಬಂಡಾಯಗಾರ. ಆಧುನಿಕ ಭಾರತದ ನಿರ್ಮಾಣದಲ್ಲಿ ಅವರು ವಹಿಸಿದ ಪಾತ್ರ ಅತಿ ಮಹತ್ವದ್ದು. ಕೇವಲ ದಂತಗೋಪುರದ ತತ್ವಜ್ಞಾನಿ ಅವರಾಗಿರಲಿಲ್ಲ.

ಕಾಂಟ್, ಹೆಗೆಲ್ ಅಥವಾ ಕೋಮ್ಟ್‌ರಂತೆ ಡಾ. ಲೋಹಿಯಾ ಶೈಕ್ಷಣಿಕ ವ್ಯವಸ್ಥೆಯೊಂದರ ನಿರ್ಮಾತೃವಾಗಿರಲಿಲ್ಲ. ಅವರೊಬ್ಬ ಕ್ರಿಯಾಶೀಲ ವ್ಯಕ್ತಿಯಾಗಿದ್ದರು. ಸಮಾಜದ ಬದಲಾವಣೆಗೆ ಅಗತ್ಯವಾದ ಕಾರ್ಯಾಚರಣೆಗಳಿಗೆ ಯಾವುದೇ ತಾತ್ವಿಕ ವ್ಯವಸ್ಥೆಗಳು ಸ್ಫೂರ್ತಿ ನೀಡುವಂತಿರದಿದ್ದರೆ, ದಾರಿ ತೋರುವಂತಿರದಿದ್ದರೆ ಅವು ಲೋಹಿಯಾರ ಪಾಲಿಗೆ ನಿರರ್ಥಕವಾಗುತ್ತಿದ್ದವು. ತಾವೇ ಸ್ವಯಂ ಅಪ್ಪಟ ವಿಚಾರಗಳನ್ನು ಹೊಂದಿದವರಾಗಿ ರಾಜನೈತಿಕ, ಆರ್ಥಿಕ ಹಾಗೂ ಸಮಾಜದ ವೈಚಾರಿಕ ಕ್ಷೇತ್ರಗಳಿಗೆ ಅನೇಕ ಕೊಡುಗೆಗಳನ್ನೂ ನೀಡಿದಾಗ್ಯೂ ಕ್ರಾಂತಿಕಾರಕ ಕಾರ್ಯಾನುಷ್ಠಾನವಿಲ್ಲದೆ ಈ ವಿಚಾರಗಳನ್ನು ಜಾರಿಗೊಳಿಸುವುದಾಗಲಿ, ಜನತೆ ಸುಧಾರಿಸುವುದಾಗಲಿ ಸಾಧ್ಯವಿಲ್ಲ ಎಂಬುದು ಅವರ ಅಭಿಪ್ರಾಯವಾಗಿತ್ತು. ಹೀಗೆ ಅವರೊಬ್ಬ ಅನನ್ಯ ಕ್ರಿಯಾಶೀಲ ವ್ಯಕ್ತಿಯಾಗಿದ್ದರು.

ರಾಮಮನೋಹರರನ್ನು ಪುಣೆಯ ಫರ್‌ಗ್ಯೂಸನ್ ಕಾಲೇಜಿನಲ್ಲಿ ನಾನು ವಿದ್ಯಾರ್ಥಿಯಾಗಿದ್ದಾಗ 1939ರ ಸಮಯದಲ್ಲಿ ಭೇಟಿಯಾದೆ. ಅವರ ವಿಚಾರ ಹಾಗೂ ವ್ಯಕ್ತಿತ್ವಗಳು ನನ್ನ ಮೇಲೆ ಅದ್ಭುತವಾದ ಪರಿಣಾಮವನ್ನುಂಟು ಮಾಡಿದವು.

ರಾಮಮನೋಹರರು ಹುಟ್ಟಿದ್ದು ಉತ್ತರ ಪ್ರದೇಶದಲ್ಲಿನ ಅಕಬರ್‌ಪುರದ ಸಾಮಾನ್ಯ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ. ತಂದೆ ಹೀರಾಲಾಲರು ಒಬ್ಬ ಸ್ವಾತಂತ್ರ್ಯ ಸೇನಾನಿ. ಡಾ. ಲೋಹಿಯಾ ತಮ್ಮ ಶಾಲಾ ದಿನಗಳನ್ನು ಮುಂಬಯಿಯಲ್ಲಿ

ಮುಗಿಸಿ ಉನ್ನತ ಶಿಕ್ಷಣವನ್ನು ಕಲ್ಕತ್ತಾದಲ್ಲೂ, ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದಲ್ಲೂ ಪಡೆದರು.

ಇಂಗ್ಲಿಷ್, ಜರ್ಮನ್ ಹಾಗೂ ಫ್ರೆಂಚ್ ಭಾಷೆಗಳ ಮೇಲೆ ಅವರು ಶ್ಲಾಘನೀಯವಾದ ಹಿಡಿತವನ್ನು ಹೊಂದಿದ್ದಾರೆ. ಅವರ ಹಿಂದಿ ಭಾಷಾ ಪ್ರೌಢಿಮೆಯು ಸಶಕ್ತವಾದದ್ದು. ಅಂತೆಯೇ ಬಂಗಾಳಿ, ಗುಜರಾತಿ, ಮರಾಠಿಯೇ ಮುಂತಾದ ಇನ್ನೂ ಕೆಲವು ಭಾರತೀಯ ಭಾಷೆಗಳ ಜ್ಞಾನವೂ ಅವರಿಗಿತ್ತು.

ಪರಾಧೀನ ದೇಶವೊಂದರಲ್ಲಿ ತುಂಬು ಸಂವೇದನಾಶೀಲ ವ್ಯಕ್ತಿಯಾಗಿ ಜನ್ಮ ತಾಳಿದ ಡಾ. ಲೋಹಿಯಾ ಅವರು ಪ್ರಾಚೀನ ಕಾಲದಿಂದಲೂ ಅನ್ಯಾಕ್ರಾಂತವಾಗಿ ದಾಸ್ಯಕ್ಕೆ ಬಲಿಯಾಗುತ್ತ ಬಂದ ತನ್ನ ತಾಯ್ನಾಡನ್ನು ವಿಮುಕ್ತಗೊಳಿಸುವ ಹೆಬ್ಬಯಕೆಯನ್ನು ಹೊಂದಿದ್ದರು. ಹಾಗಾಗಿ ತಮ್ಮ ಎಳೆಯ ವಯಸ್ಸಿನಲ್ಲಿಯೇ ಸ್ವಾತಂತ್ರ್ಯ ಹೋರಾಟಗಾರರಾದರಲ್ಲದೆ ಆಗಸ್ಟ್ 42ರ ಚಳುವಳಿಗೆ ಸೈದ್ಧಾಂತಿಕ ಹೂರಣ ತುಂಬಿ ದಾರಿ ತೋರಿದರು.

1933ರಲ್ಲಿ ಬರ್ಲಿನ್ ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿ ಪಡೆದು ಭಾರತಕ್ಕೆ ಹಿಂತಿರುಗಿದಾಗ ಅವರಿಗೆ ಕೇವಲ ಇಪ್ಪತಮೂರರ ತುಂಬು ಹರೆಯ. ಅಂದಿನ ಯುವಪೀಳಿಗೆಯಲ್ಲಿ ಅಪಾರವಾದ ಸೈದ್ಧಾಂತಿಕ ಉನ್ಮಾದವಿದ್ದ ದಿನಗಳವು. ಅದರ ಮಂಥನದ ಪರಿಣಾಮವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಒಳಗೇ ಸಮಾಜವಾದಿ ಪಕ್ಷವು ಅಸ್ತಿತ್ವ ಪಡೆಯಿತು. ಆರಂಭದಿಂದಲೂ ಡಾ. ಲೋಹಿಯಾ ಅವರು ಕಾಂಗ್ರೆಸ್ ಸಮಾಜವಾದಿ ಪಕ್ಷದ ಒಂದು ಆಧಾರ ಸ್ತಂಭವಾಗಿದ್ದರು. ಜವಹರಲಾಲ್ ನೆಹರೂ ಅವರು ಶ್ರೀ ಜಮನಾಲಾಲ್ ಬಜಾಜ್ ಅವರ ಮುಖಾಂತರ ಡಾ. ಲೋಹಿಯಾ ಅವರ ಪ್ರತಿಭಾ ಸಂಪನ್ನತೆ ಹಾಗೂ ಆಕರ್ಷಕ ವ್ಯಕ್ತಿತ್ವದ ಬಗ್ಗೆ ತಿಳಿದು, 1936 ರಲ್ಲಿ ತಾವು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕಚೇರಿಯನ್ನು ಅಲಹಾಬಾದಿನಲ್ಲಿ ಪುನರ್ ವ್ಯವಸ್ಥೆಗೊಳಿಸಿದಾಗ ತರುಣ ರಾಮಮನೋಹರರನ್ನು ಅದರ ವಿದೇಶಿ ವಿಭಾಗದ ಹೊಣೆಗಾರಿಕೆಯನ್ನು ಹೊರುವ ಕಾರ್ಯಕ್ಕೆ ನೇಮಿಸಿದರು.

ಕಾಂಗ್ರೆಸ್‌ನ ವಿದೇಶಾಂಗ ಕಾರ್ಯದರ್ಶಿಯಾಗಿ ಲೋಹಿಯಾ ಅವರು ಏಶಿಯಾ, ಆಫ್ರಿಕಾ ಹಾಗೂ ಲ್ಯಾಟಿನ್ ಅಮೆರಿಕಾಗಳ ಸ್ವಾತಂತ್ರ್ಯ ಚಳುವಳಿಗಳು ಹಾಗೂ ಅಲ್ಲಿನ ಪ್ರಗತಿಪರ ಸಂಘಟನೆಗಳೊಂದಿಗೆ ನಿಕಟ ಸಂಬಂಧಗಳನ್ನು ಬೆಸೆದರು. ಅವರು ಸಾಗರೋತ್ತರ ಭಾರತೀಯರ ಸಮಸ್ಯೆಗಳ ತಲಸ್ಪರ್ಶಿ ಅಧ್ಯಯನ ಮಾಡಿ ಭಾರತದ ಜನತೆಯ ಲಕ್ಷ್ಯವನ್ನು ಆ ಸಹೋದರರತ್ತ ಸೆಳೆದರು. ಭಾರತ ಮತ್ತಿತರ ರಾಷ್ಟ್ರಗಳಲ್ಲಿ ನಡೆಯುತ್ತಿದ್ದ ನಾಗರಿಕ ಸ್ವಾತಂತ್ರ್ಯದ ದಮನ ಕುರಿತಂತೆ ಅವರು

ಕಟ್ಟೆಚ್ಚರದ ವ್ಯಕ್ತಿಯಾಗಿದ್ದರು. ಈ ವಿಷಯವಾಗಿ ಅವರು ಮಹತ್ವಪೂರ್ಣ ಕಿರುಹೊತ್ತಿಗೆಯೊಂದನ್ನು ಬರೆದರು.

ಡಾ. ಲೋಹಿಯಾ ತಮ್ಮನ್ನೆಂದೂ ಮಾರ್ಕ್ಸ್‌ವಾದಿ ಎಂದು ಕರೆದು ಕೊಂಡವರಲ್ಲ. ಅಂತೆಯೇ ಮಾರ್ಕ್ಸ್ ವಿರೋಧಿ ಎಂತಲೂ ಸಾರಿದವರಲ್ಲ. ಈ ಎರಡೂ ಪ್ರವೃತ್ತಿಗಳ ಬಗ್ಗೆ ಅವರು ಅಸಮ್ಮತಿ ವ್ಯಕ್ತಪಡಿಸಿದರು. ಆದಾಗ್ಯೂ ಕಾರ್ಲ್‌ಮಾರ್ಕ್ಸ್ ಸೇರಿದಂತೆ ಯುರೋಪ್ ಹಾಗೂ ಅಮೇರಿಕಾಗಳ ಇನ್ನೂ ಅನೇಕ ಸಮಾಜವಾದಿ ವಿಚಾರಧಾರೆಯ ಬಗ್ಗೆ ಆಳವಾದ ಅಧ್ಯಯನ ನಡೆಸಿದರು.

ಡಾ. ಲೋಹಿಯಾ ಅವರು 1942 ರ ಆಂದೋಲನದ ಸಮಯದಲ್ಲಿ ಮಾರ್ಕ್ಸ್‌ರ ಆರ್ಥಿಕ ಸಿದ್ಧಾಂತದ ವಿಮರ್ಶೆಯನ್ನು ಬರೆದರು. ಈ ವಿದ್ವತ್ ಕಾರ್ಯವು ಅಪೂರ್ಣವಾಗುಳಿಯಿತಾದರೂ ಬರೆದಿರುವಷ್ಟು ಆಂಶಿಕ ಭಾಗವು ಪ್ರಕಟವಾಗಿ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಸಿದ್ಧಾಂತದ ರೂಪುರೇಷೆಗಳನ್ನು ನಿಗದಿಪಡಿಸುತ್ತದೆ. ಸಾಮ್ರಾಜ್ಯಶಾಹಿಯು ಆರ್ಥಿಕ ಬಂಡವಾಳ ಶಾಹಿಯ ಕೊನೆಯ ಹಂತ ಎಂಬುದಾಗಿ ಮಂಡಿಸುವ ಹಾಬ್ಸನ್, ಹಿಲ್ ಫರ್ಡಿಂಗ್ ಹಾಗೂ ಲೆನಿನ್‌ರಂತಹ ಸಿದ್ಧಾಂತ ನಿರೂಪಕರ ನಿಲುವಿಗಿಂತ ಇವರು ಭಿನ್ನರಾಗಿದ್ದರು. ಈ ಸಿದ್ಧಾಂತ ನಿರೂಪಕರು ಅಂದು ಅತ್ಯಾಧುನಿಕವೆನಿಸಿದ್ದ 19ನೇ ಶತಮಾನದ ಉತ್ತರಾರ್ಧದಲ್ಲಿ ಆಫ್ರಿಕಾ ಮೊದಲಾದ ರಾಷ್ಟ್ರಗಳಲ್ಲಿ ನಡೆಯುತ್ತಿದ್ದ ಸಾಮ್ರಾಜ್ಯ ಶಾಹಿಯ ವಿಸ್ತರಣೆಯ ಅಂದಿನ ಪ್ರಚಲಿತ ಹಂತದ ವಿಷಯವನ್ನೇ ಸಾಮಾನ್ಯೀಕರಿಸಿ ಹೇಳುತ್ತಿದ್ದರು. ಪಾಶ್ಚಾತ್ಯರ ರಾಜ್ಯ ವಿಸ್ತರಣೆ ಹಾಗೂ ಆಕ್ರಮಣ ಪ್ರವೃತ್ತಿಯು ಅನೇಕ ಶತಮಾನಗಳ ಪೂರ್ವದಲ್ಲಿ ಕಂಡುಬರುವ ಮಧ್ಯಯುಗದಷ್ಟು ಹಳೆಯದು. ಪಶ್ಚಿಮ ಯುರೋಪಿನಲ್ಲಿ ಸುದೀರ್ಘ ಪ್ರಕ್ರಿಯೆಯಾಗಿ ಬೆಳೆದು ಉಲ್ಬಣಿಸಿದ ಬಂಡವಾಳ ಶಾಹಿಯು ಕೊನೆಯಲ್ಲಿ ಕೈಗಾರಿಕಾ ಕ್ರಾಂತಿಯಾಗಿ ಆಸ್ಫೋಟಿಸಿದ ತೆರದಲ್ಲಿ 19ನೇ ಶತಮಾನದಂತ್ಯದ ಈ ಸಾಮ್ರಾಜ್ಯಶಾಹಿಯೆಂಬುದು ಪಶ್ಚಿಮ ಜಗತ್ತು ಮತ್ತದರ ಆರ್ಥಿಕ ವ್ಯವಸ್ಥೆಗಳು ನಡೆಸಿದ ರಾಜ್ಯವಿಸ್ತರಣೆಯಲ್ಲಿ ಮುಂದಿನ ಆದರೆ ಕೊನೆಯದಲ್ಲದ ಘಟ್ಟವಾಗಿತ್ತು. ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿ ಈ ಎರಡೂ ಅವಳಿ ವ್ಯವಸ್ಥೆಗಳೆಂದು ತಿಳಿಸಿದ ಡಾ. ಲೋಹಿಯಾ, ಭಾರತದ ಪರಂಪರಾಗತ ಕೈಗಾರಿಕೆ ಹಾಗೂ ಕರಕುಶಲ ಕಲೆಯನ್ನು ಹಾಳುಗೆಡವಿದುದು ಬಂಡವಾಳಶಾಹಿಗಳ ಯಂತ್ರ ನಿರ್ಮಿತವಾದ ಅಗ್ಗದ ವಸ್ತುಗಳಲ್ಲ; ಅದು ಪ್ರಧಾನವಾಗಿ ಈಸ್ಟ್‌ಇಂಡಿಯಾ ಕಂಪೆನಿ ಹಾಗೂ ಬ್ರಿಟಿಷ್ ಸರ್ಕಾರವು ಭಾರತದಲ್ಲಿ ಹಿಡಿದಿದ್ದ ರಾಜಕೀಯ ಅಧಿಕಾರ ಎಂದು ವಾದಿಸಿದರು. ಭಾರತೀಯರ ಪ್ರಾಚೀನ ಕೈಗಾರಿಕೆಯನ್ನು ಹೊಸಕಿ ಹಾಕಿ ತಮ್ಮ ಉದ್ಯಮಿಗಳಿಗೆ

ಲಾಭ ಕಲ್ಪಿಸಲು ಬ್ರಿಟಿಷರು ತಮ್ಮ ಕೈಯಲ್ಲಿದ್ದ ರಾಜಕೀಯ ಅಧಿಕಾರವನ್ನು ಬಹು ವ್ಯವಸ್ಥಿತವಾಗಿ ಹೇರುವ ಹುನ್ನಾರವನ್ನು ನಡೆಸಿದ್ದರು. ತತ್ಫಲವಾಗಿ ಭಾರತೀಯ ಗೃಹ ಕೈಗಾರಿಕೆಗಳು ಬೃಹತ್ ಪ್ರಮಾಣದಲ್ಲಿ ನಾಶವಾದವು. ಇದರಿಂದಾಗಿ ಕೋಟ್ಯಾಂತರ ಜನ ತಮ್ಮ ಪಾರಂಪರಿಕ ಕಸಬುಗಳಿಂದ ವಂಚಿತರಾದರು, ಜೊತೆಗೆ ಬ್ರಿಟಿಷರು ತಮ್ಮ ಜವಳಿ, ಕಬ್ಬಿಣ, ಉಕ್ಕು ಈ ತಾಂತ್ರಿಕ ಉತ್ಪನ್ನಗಳನ್ನು ಭಾರತದ ಬೃಹತ್ ಮಾರುಕಟ್ಟೆಯಲ್ಲಿ ಪ್ರಚುರಪಡಿಸಲು ರಾಜಕೀಯ ಅಧಿಕಾರದ ಮೂಲಕ ತಾರತಮ್ಯ ನೀತಿಯನ್ನು ರಾಜಾರೋಷವಾಗಿ ಮೆರೆದರು. ಇಂಡಿಯಾದ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆದದ್ದು, ಲಾಭಾಂಶದ ಕಬಳಿಕೆ, ಡಿವಿಡೆಂಡುಗಳು, ಸರ್ಕಾರಿ ನೌಕರರ ಸಂಬಳ ಸಾರಿಗೆಗಳಾದಿಯಾಗಿ ಬ್ರಿಟಿಷರ ಕೈಗಾರಿಕಾ ಕ್ರಾಂತಿಗೆ ಗ್ರಾಸವನ್ನೊದಗಿಸಿದವು.

ಡಾ. ಲೋಹಿಯಾ ಭಾರತಕ್ಕೆ ಹಿಂತಿರುಗಿದ ತರುಣದಲ್ಲೆ ಮಹಾತ್ಮಾ ಗಾಂಧೀಜಿಯವರ ನಿಕಟವರ್ತಿಗಳಾದರು. ಅವರ ಮೇಲೆ ಗಾಂಧೀಜಿಯವರ ಆದರ್ಶಗಳು, ಮೌಲ್ಯಗಳು ಹಾಗೂ ವಿಧಾನಗಳು ಆಳವಾದ ಪ್ರಭಾವ ಬೀರಿದವು. ಅವರ ನಾಗರಿಕ ಪ್ರತಿಭಟನೆ ಹಾಗೂ ಅಸಹಕಾರಗಳಂತಹ ವಿಧಾನಗಳು ಇಪ್ಪತ್ತನೆ ಶತಮಾನದ ಅನನ್ಯ ಸೃಷ್ಟಿ ಎಂಬುದಾಗಿ ಲೋಹಿಯಾ ಪರಿಗಣಿಸಿದರು. ಸಮರ ವಿರೋಧಿ ಭಾಷಣ ಮಾಡಿದರೆಂಬ ಕಾರಣಕ್ಕೆ 1940ರಲ್ಲಿ ಲೋಹಿಯಾರನ್ನು ಬಂಧಿಸಿದಾಗ ಗಾಂಧೀಜಿ ಕಟುವಾಗಿ ಪ್ರತಿಕ್ರಿಯಿಸಿದ್ದರು. ರಾಮಮನೋಹರರರಂತಹ, ಜಯಪ್ರಕಾಶರಂತಹ ದೇಶಪ್ರೇಮಿಗಳ ಸೆರೆವಾಸವು ಸಹಿಸಲಸದಳವಾಗಿದ್ದು ಸ್ವಾತಂತ್ರ್ಯದ ವಿಷಯದಲ್ಲಾಗುತ್ತಿದ್ದ ಇಂತಹ ಅತಿಕ್ರಮಣಗಳಿಗೆ ತಾನು ಮೌನ ಸಾಕ್ಷಿಯಾಗುಳಿಯಲಾರೆ ಎಂದು ಗಾಂಧೀಜಿ ತಿಳಿಸಿದರು. 1940ರಲ್ಲಿ ಅವರು ಆರಂಭಿಸಿದ ವ್ಯಕ್ತಿಗತ ನಾಗರಿಕ ಅವಿಧೇಯತಾ ಆಂದೋಲನವು ಪ್ರಜಾತಾಂತ್ರಿಕ ಸ್ವಾತಂತ್ರ್ಯಕ್ಕಾಗಿ ಜನತೆಗಿರುವ ಹಕ್ಕನ್ನು ದೃಢಪಡಿಸುವುದಕ್ಕಾಗಿಯೇ ರೂಪುಗೊಂಡಿತ್ತು.

ಪರ್ಲ್ ಹಾರ್ಬರ್ ಘಟನೆಯ ಅನಂತರ ಹಾಗೂ ಆಗ್ನೇಯ ಏಶಿಯಾದಲ್ಲಿ ಪಾಶ್ಚಾತ್ಯರ ಸಾಮ್ರಾಜ್ಯಶಾಹಿ ಆಡಳಿತವು ಕುಸಿದ ನಂತರ, ಬ್ರಿಟನ್‌ನಲ್ಲಿ ಏರ್ಪಟ್ಟಿದ್ದ ಸಮ್ಮಿಶ್ರ ಸರ್ಕಾರವು ತನ್ನ ಯುದ್ಧ ಸಂಬಂಧದ ಪ್ರಯತ್ನಗಳಲ್ಲಿ ಭಾರತೀಯರು ಸಹಕರಿಸುವಂತೆ ಕೋರಲು ಸರ್ ಸ್ಟ್ಯಾಫೋರ್ಡ್ ಕ್ರಿಪ್ಸ್‌ನನ್ನು ಕಳುಹಿಸಿಕೊಟ್ಟಿತು. ಆದರೆ ಆ ಕುರಿತ ಮಾತುಕತೆಗಳು ವಿಫಲವಾದವು. ಮಹಾತ್ಮಗಾಂಧಿ, ರಾಮ ಮನೋಹರ ಲೋಹಿಯಾ ಮೊದಲಾದ ಅನೇಕ ಸಮಾಜವಾದಿಗಳು ಕ್ರಿಪ್ಸ್‌ನ ಯೋಜನೆಯನ್ನು ವಿರೋಧಿಸಿದರು. ಒಂದೆಡೆ ಹತಾಶಗೊಂಡ ಬ್ರಿಟಿಷ್

ಸಾಮ್ರಾಜ್ಯಶಾಹಿ, ಇನ್ನೊಂದೆಡೆ ಭಾರತದ ಬಾಗಿಲನ್ನು ತಟ್ಟುತ್ತಿದ್ದ ಜಪಾನ್ ಸಾಮ್ರಾಜ್ಯಶಾಹಿ ಹೀಗೆ ಇಕ್ಕಟ್ಟಿನಲ್ಲಿ ಸಿಕ್ಕು ತತ್ತರಿಸುತ್ತಿದ್ದಾಗ, ಕರಾಳತೆ ದಟ್ಟವಾಗಿ ಆವರಿಸುತ್ತಿದ್ದ ಆ ಸಂದರ್ಭದಲ್ಲಿ ತನ್ನ ಜನತೆಯನ್ನು ಸಂರಕ್ಷಿಸಲು 'ಭಾರತ ಬಿಟ್ಟು ತೊಲಗಿ' ಘೋಷಣೆಯನ್ನು ಮಹಾತ್ಮರು ನೀಡಿದರು. 1942 ಆಗಸ್ಟ್ ಒಂಬತ್ತರ ಮುಂಜಾವಿನಲ್ಲಿ ರಾಷ್ಟ್ರನಾಯಕರ ಬಂಧನವಾದಾಗ ಡಾ. ಲೋಹಿಯಾ ಅವರು ಮುಂದಾಳತ್ವ ವಹಿಸಿ, ಅಚ್ಯುತ್ ಪಟವರ್ಧನ್, ಅರುಣಾ ಅಸಫ್ ಅಲಿ, ಸುಚೇತಾ ಕೃಪಲಾನಿ ಮುಂತಾದ ನಾಯಕರೊಡನೆ ಸಮಾಲೋಚಿಸಿ ಬ್ರಿಟಿಷ್ ವಿರುದ್ಧವಾದ ಪ್ರಬಲ ತಡೆಯನ್ನು "ಭೂಗತ ಅಖಿಲಭಾರತ ಕಾಂಗ್ರೆಸ್ ಸಮಿತಿ" ಎಂಬ ಹೆಸರಿನಲ್ಲಿ ಸಂಘಟಿಸಿದರು. ಇದಾದ ಸ್ವಲ್ಪ ಸಮಯದಲ್ಲಿಯೇ ಜಯಪ್ರಕಾಶ ನಾರಾಯಣರು ಬಿಹಾರದ ಹಜಾರಿಬಾಗ್ ಜೈಲಿನಿಂದ ತಪ್ಪಿಸಿಕೊಳ್ಳುವ ಚಮತ್ಕಾರ ಮೆರೆದು ಸ್ವಾತಂತ್ರ್ಯದ ಸೇನಾನಿಗಳನ್ನು ಸೇರಿಕೊಂಡರು. ಜಯಪ್ರಕಾಶ್ ಹಾಗೂ ಲೋಹಿಯಾ ಇಬ್ಬರೂ ಕೂಡ ನೇಪಾಳದಲ್ಲಿನ ತಮ್ಮ ಗುಪ್ತ ನೆಲೆಗಳಿಂದಲೇ ಚಳವಳಿಯನ್ನು ಮುನ್ನಡೆಸಿದರು. ನಿಸ್ಸಂದೇಹವಾಗಿ ನಮ್ಮ ಸ್ವಾತಂತ್ರ್ಯ ಚಳವಳಿಯ ಈ ಮಹಾನ್ ಅಧ್ಯಾಯದೊಂದಿಗೆ ರಾಮಮನೋಹರರ ಹೆಸರು ಎಂದೆಂದಿಗೂ ಬೆಸೆದುಕೊಂಡಿರುತ್ತದೆ.

ಸ್ವಾತಂತ್ರ್ಯ ದೊರೆತ ನಂತರ ಕೋಮು ಗಲಭೆಗಳು ಆರಂಭವಾಗಿ, ಉತ್ತರ ಭಾರತ ಹಾಗೂ ಬಂಗಾಳದ ಬಹುಭಾಗಗಳಲ್ಲಿ ವ್ಯಾಪಿಸಿಕೊಂಡಿದ್ದಾಗ, ಶಾಂತಿ ಸ್ಥಾಪನೆಯ ಕಾರ್ಯದಲ್ಲಿ ಮಹಾತ್ಮರೊಂದಿಗೆ ಡಾ. ಲೋಹಿಯಾ ನಿರಂತರವಾಗಿ ದುಡಿದರು. ಕೋಮು ಸಾಮರಸ್ಯ ಸಾಧಿಸುವ ಸಾಹಸದಲ್ಲಿ ಲೋಹಿಯಾ ಅವರು ಎಷ್ಟೋ ಸಲ ತಮ್ಮ ಜೀವನವನ್ನೇ ಪಣವಾಗಿ ಒಡ್ಡಿದ್ದುಂಟು.

ಗಾಂಧೀಜಿಯವರು ಬದುಕಿದ್ದ ಕಾಲವಿಡೀ ಡಾ. ಲೋಹಿಯಾ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಸಮಾಜವಾದಿ ಮಾರ್ಪಾಟುಗಳಿಗಾಗಿ ಮಿಡುಕಿದರು. ಗಾಂಧೀಜಿಯವರ ಹತ್ಯೆಯ ನಂತರ ಕಾಂಗ್ರೆಸ್‌ನಲ್ಲಾದ ಬದಲಾವಣೆಗಳ ಬಗೆಗೆ ನಿರಾಶರಾಗಿ ಅದನ್ನು ತೊರೆದು, ಪ್ರಗತಿಪರವೂ ಕ್ರಿಯಾಶೀಲವೂ ಆದ ಪರ್ಯಾಯ ಸಂಘಟನೆಯೊಂದನ್ನು ಕಟ್ಟಲು ನಿರ್ಧರಿಸಿದರು. ಕಾಂಗ್ರೆಸ್ ಪಕ್ಷವು ಮಡುಗಟ್ಟಿನಿಂತು ನಾರುತ್ತಿರುವುದರಿಂದ ಪ್ರಗತಿಪರವಾದ ಪರ್ಯಾಯ ಸಂಘಟನೆಯು ಮಾತ್ರ ಭಾರತೀಯ ಸಮಾಜದಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರಬಲ್ಲದೆಂದು ಅವರು ತೀವ್ರವಾಗಿ ಆಲೋಚಿಸಿದರು.

ರಾಮಮನೋಹರ ಲೋಹಿಯಾ ಅವರು ಸಮಾಜವಾದಿ ಆಂದೋಲನಕ್ಕೆ

ನೀಡಿದ ಕೊಡುಗೆ ಬಹಳ ಮುಖ್ಯವಾದುದು. ಅವರು ತಮ್ಮ ಮನಸ್ಸಿನ ದಿಗಂತವನ್ನು ಸೀಮಿತಗೊಳಿಸಿಕೊಳ್ಳಲಾಗಲಿ ಅಥವಾ ಅದರ ಮೇಲೆ ಪಾಶ್ಚಾತ್ಯರ ಇಲ್ಲವೇ ರಷ್ಯನ್ನರ ವಿಚಾರಗಳನ್ನು ಹೇರಿಕೊಳ್ಳಲಾಗಲಿ ನಿರಾಕರಿಸಿದ ಮೊಟ್ಟಮೊದಲ ಭಾರತೀಯ ಸಮಾಜವಾದಿ ಚಿಂತಕರಾಗಿದ್ದರು. ಭಾರತವನ್ನೂ ಒಳಗೊಂಡಂತೆ, ಜಗತ್ತಿನ ಮೂರನೆಯ ಎರಡರಷ್ಟು ಕುಂಠಿತ ಪ್ರಗತಿಉಳ್ಳ ಪ್ರದೇಶಗಳಲ್ಲಿ ನೆಲೆಸಿದ್ದ ದಾರುಣ ಸ್ಥಿತಿಗತಿಗಳಿಗೆ ಅನ್ವಯಿಸಿ ತಮ್ಮ ವಿಚಾರಗಳನ್ನು ಡಾ. ಲೋಹಿಯಾ ಅನುಷ್ಠಾನಗೊಳಿಸಬಯಸಿದರು. ಗಾಂಧೀಜಿಯವರ ಆದರ್ಶಗಳಿಂದ ಅಪಾರವಾಗಿ ಪ್ರಭಾವಿತರಾಗಿದ್ದರೂ ಸಹ ಕುರುಡು ಅನುಕರಣೆಯ ದಾಸ್ಯ ಅವರಲ್ಲಿರಲಿಲ್ಲ. ವಿಕೇಂದ್ರೀಕರಣದ ಉತ್ಕಟ ಪ್ರತಿಪಾದಕರಾಗಿದ್ದೂ ಚರಕದ ತಾಂತ್ರಿಕತೆ ಮಾತ್ರದಿಂದಲೇ ಭಾರತದ ಸಮಸ್ಯೆಗಳಿಗೆ ಪರಿಹಾರ ಸಾಧ್ಯವಿಲ್ಲ ಎಂದು ಹೇಳುವಷ್ಟು ಸಂವೇದನಾ ಶೀಲರಾಗಿದ್ದರು. ಸಂಪತ್ತು ಒಂದೇ ಕಡೆ ಸೇರಿಕೊಳ್ಳುವುದು, ಪರಿಸರ ಮಾಲಿನ್ಯ, ನಿರುದ್ಯೋಗ, ಆದಾಯ ತಾರತಮ್ಯ ಮುಂತಾದವುಗಳನ್ನು ನಿವಾರಿಸಬಲ್ಲಂತಹ, ಹಾಗೆಯೇ ಕಡಿಮೆ ವೆಚ್ಚ, ಉತ್ಪಾದನೆಯಲ್ಲಿ ಹೆಚ್ಚಳ ಹಾಗೂ ಹೊಲಗಳಲ್ಲಿ ಇಲ್ಲವೆ ಕುಶಲ ಕೈಗಾರಿಗಳಲ್ಲಿ, ಕೈಕಸಬುಗಳಲ್ಲಿ ದುಡಿಯುವ ಸಾಧಾರಣ ಕಾರ್ಮಿಕರ ಆದಾಯದಲ್ಲಿ ಹೆಚ್ಚಳ ತರಬಲ್ಲಂತಹ, ವಿದ್ಯುತ್ ಅಳವಡಿಕೆಯೊಂದಿಗೆ ಸಣ್ಣ ಯಂತ್ರಗಳಿಂದ ಕೂಡಿದ ಹೊಸ ಬಗೆಯ ತಂತ್ರಜ್ಞಾನವನ್ನು ಡಾ. ಲೋಹಿಯಾ ಬಯಸಿದರು.

ಇತರ ಉಗ್ರವಾದಿ ಸ್ವಭಾವವನ್ನು ತಳೆದಿದ್ದ ಮಂದಿಗೆ ತುಂಬ ಆಪ್ಯಾಯಮಾನವೆನಿಸಿದ್ದ, ಶಸ್ತ್ರಾಸ್ತ್ರಗಳ ಬಳಕೆಯನ್ನು ತಡೆಯಲು ಸಾಧ್ಯವಿಲ್ಲವೆಂದು ತಿಳಿದ ಅವರ ಶಸ್ತ್ರಕ್ರಾಂತಿಯನ್ನು ಕುರಿತ ಧೋರಣೆಯನ್ನು ಡಾ. ಲೋಹಿಯಾ ಪ್ರತಿರೋಧಿಸಿದರು. ಅದೇ ಲೋಹಿಯಾ ಅವರು ಅಹಿಂಸಾತ್ಮಕ ನಾಗರಿಕ ಪ್ರತಿರೋಧದ (Non-Violent Civil Resistance) ಮೂಲಕ ಮನುಷ್ಯಕುಲದ ವಿಮುಕ್ತಿಗಾಗಿ ಮಹಾತ್ಮಗಾಂಧೀಜಿಯವರು ಹೊಸದೊಂದು ವಿಧಾನವನ್ನೇ ಎರಕ ಹೊಯ್ದರು ಎಂಬ ತೀರ್ಮಾನಕ್ಕೆ ಬಂದಿದ್ದರು.

ಅವರ ತಾತ್ವಿಕ ಬರಹಗಳೆಲ್ಲವೂ ಸೋಪಜ್ಞ ಚಿಂತನೆಯಿಂದ ತುಂಬಿವೆ. ಸಮಸ್ಯೆಗಳನ್ನೇ ವಿರೋಧಾಭಾಸಗಳನ್ನಾಗಿಸಿ, ವೈರುಧ್ಯಗಳನ್ನಾಗಿಸಿ ತೋರಿಸುವುದು ಹಾಗೂ ಅದೇ ವೈರುಧ್ಯಗಳನ್ನು ಪರಸ್ಪರ ಐಕ್ಯಗೊಳಿಸಿ ಇಲ್ಲವೆ ಹೊಸದಾದ, ಉನ್ನತಮಟ್ಟದ ವಿಶೇಷಣೆಯ ಮೂಲಕ ಪರಿಹಾರ ಸೂಚಿಸುವುದು ಡಾ. ಲೋಹಿಯಾರಿಗೆ ಅಚ್ಚುಮೆಚ್ಚಿನ ಸಂಗತಿಯಾಗಿತ್ತು. ಅವರ ಕಲ್ಪನೆಯಲ್ಲಿ ನಾಗರಿಕ

ಅವಿಧೇಯತೆ ಎಂದರೆ ಕ್ರೋಧಪ್ರೇಮಗಳ ಮಿಶ್ರಣವಾಗಿರುತ್ತದೆ; ಶಾಂತಿಯುತ ಕಾರ್ಯಾಚರಣೆ ಎಂದರೆ ಕಲಹ ಮತ್ತು ಸೋಮಾರಿತನ ಈ ಎರಡರಿಂದಲೂ ಭಿನ್ನವಾದುದು; ಸಾಮಿಪ್ಯದಿಂದ ಕೂಡಿದ ಸಹಬಾಳ್ವೆ ಎಂದರೆ- ಪ್ರಾಪಂಚಿಕವಾದ ಸಹ ಅಸ್ತಿತ್ವವೂ ಅಲ್ಲದ್ದು, ಹಣಾಹಣಿಯೂ ಅಲ್ಲದ್ದು. ಹೀಗೆ ಅವರ ಈ ಸ್ವಭಾವಕ್ಕೆ ಕೆಲವು ಉದಾಹರಣೆಗಳಿವೆ. ಈ ದೃಷ್ಟಿಯಿಂದ ಡಾ. ಲೋಹಿಯಾ ಅವರು ದ್ವಂದ್ವಾತ್ಮಕ ತರ್ಕ ಪದ್ಧತಿಯ ಪ್ರಭಾವಕ್ಕೆ ಒಳಗಾಗಿದ್ದರು ಎಂದು ಹೇಳಬಹುದು.

ಡಾ. ಲೋಹಿಯಾ ಅವರು ಕೆಟ್ಟದ್ದನ್ನು ತಡೆಯುವ ಪ್ರಯತ್ನದಲ್ಲಿದ್ದಾಗಲೇ ಸೃಜನಶೀಲ ಕ್ರಿಯೆಯ ಮಹತ್ವವನ್ನು ಅರಿತಿರುತ್ತಿದ್ದರು. ಅಧಿಕಾರದಿಂದ ರಾಜಕೀಯವನ್ನು ಬೇರ್ಪಡಿಸಲು ಸಾಧ್ಯವಿಲ್ಲವೆಂಬುದನ್ನು, ಹಾಗೆಯೇ ಅಧಿಕಾರದ ಪ್ರಾಮುಖ್ಯವನ್ನು ತಳ್ಳಿಹಾಕುವುದು ಸಾಧ್ಯವಿಲ್ಲ ಎಂಬುದನ್ನು ಸಹ ಅವರು ಬಹಳ ಚೆನ್ನಾಗಿ ಅರಿತಿದ್ದರು. ಇದೇ ವೇಳೆ ರಾಜ್ಯಾಧಿಕಾರವನ್ನು ಪ್ರಜಾಧಿಕಾರದಿಂದ ನಿಯಂತ್ರಿಸದಿದ್ದಲ್ಲಿ, ನಿರ್ದೇಶಿಸದಿದ್ದಲ್ಲಿ ಹಾಗೂ ಕಟ್ಟೆಚ್ಚರದಿಂದ ಪಳಗಿಸದಿದ್ದಲ್ಲಿ ಮೂಲಭೂತ ಬದಲಾವಣೆಗಳು ಸಾಧ್ಯವಾಗುವುದಿಲ್ಲ ಎಂಬ ಸತ್ಯವನ್ನು ಬಹು ನಿಚ್ಚಳವಾಗಿ ಅವರು ಮನಗಂಡಿದ್ದರು. ಇದೇ ಕಾರಣಕ್ಕಾಗಿ ಅವರು ದೇಶದ ಸಾಮಾಜಿಕ ಕ್ರಾಂತಿಯನ್ನು ಸಾಧಿಸಲು ಸೆರೆಮನೆ, ಸಲಿಕೆ ಮತ್ತು ವೋಟುಗಳನ್ನು ಸಂಕಲನಗೊಳಿಸಿದ ಸೂತ್ರವೊಂದನ್ನು ರೂಪಿಸಿದ್ದರು. ಯುವಕರು ತಮ್ಮ ಒಂದು ಗಂಟೆಯ ಉಚಿತ ಹಾಗೂ ಸ್ವಯಂ ಶ್ರಮವನ್ನು ರಾಷ್ಟ್ರದ ಪುನರ್‌ನಿರ್ಮಾಣಕ್ಕಾಗಿ ಅರ್ಪಿಸುವಂತೆ ಅವರ ಮನಸ್ಸನ್ನು ಒಲಿಸಿದ್ದರು.

ರಾಮಮನೋಹರರ ಜೀವಿತಾವಧಿಯಲ್ಲಿ ಅವರ ಪ್ರಭಾವದಿಂದ ಹೊರಗುಳಿದ ಅಥವಾ ಅವರೊಂದಿಗೆ ಸಂಬಂಧವಿಟ್ಟುಕೊಳ್ಳದಿದ್ದ ಚಳುವಳಿಗಳೇ ವಿರಳವೆನ್ನಬಹುದು. 1946ರಲ್ಲಿ ಜೈಲಿನಿಂದ ಬಿಡುಗಡೆಯಾದ ಮೇಲೆ ಡಾ. ಲೋಹಿಯಾ ಅವರು ಗೋವಾಕ್ಕೆ ಭೇಟಿ ನೀಡಿದ್ದರು. ಅಲ್ಲಿನ ಪೋರ್ಚುಗೀಸ್ ಫ್ಯಾಸಿಸ್ಟ್ ಸರ್ಕಾರವು ಗೋವಾದ ಜನತೆಯಿಂದ ಮೂಲಭೂತವಾದ ನಾಗರಿಕ ಸ್ವಾತಂತ್ರ್ಯವನ್ನು ಕಿತ್ತುಕೊಂಡಿದ್ದನ್ನು ಕಂಡು ಆ ಕೂಡಲೇ ಮಡಗಾಂವ್‌ದಲ್ಲಿ ನಾಗರಿಕ ಹಕ್ಕುಗಳಿಗಾಗಿ ಹೋರಾಟವನ್ನು ಆರಂಭಿಸಿದರು. ಅವರನ್ನು ಪೋರ್ಜುಗೀಸ್ ಅಧಿಕಾರಿಗಳು 1946ರ ಜೂನ್ 18ರಂದು ಬಂಧಿಸಿದರು. ಅವರ ಬಂಧನದ ಈ ದಿನವನ್ನು ಗೋವಾ ವಿಮುಕ್ತಿ ದಿನವನ್ನಾಗಿ ಈಗಲೂ ಆಚರಿಸಲಾಗುತ್ತಿದೆ.

ನಮ್ಮ ದೇಶದ ಬಹು ದೊಡ್ಡ ಸಂಖ್ಯೆಯ ಜನತೆ ಹಳ್ಳಿಗಾಡುಗಳಲ್ಲಿ ವಾಸಿಸುತ್ತಾರೆಂಬುದು ರಾಮಮನೋಹರರಿಗೆ ತಿಳಿದ ಸಂಗತಿಯಾಗಿತ್ತು. ಅವರು

ಬಡರೈತರ, ಭೂರಹಿತರ ಹಾಗೂ ಕೃಷಿ ಕಾರ್ಮಿಕರ ಆಕಾಂಕ್ಷೆಗಳ ಸಂಕೇತವಾಗಿ ಪರಿಣಮಿಸಿದರು. ನಮ್ಮ ಸಾಮಾಜಿಕ ಸಂಬಂಧಗಳನ್ನು ತಳದಿಂದಲೇ ಮರು ವ್ಯವಸ್ಥೆಗೊಳಿಸಬೇಕೆಂಬುದನ್ನು ಸೂಚಿಸಿದುದು ಮಾತ್ರವಲ್ಲದೆ ಅಂತಹ ಕ್ರಾಂತಿಕಾರಕ ಮಾರ್ಪಾಟಿಗೆ ಅಗತ್ಯವಾದ ಸೈದ್ಧಾಂತಿಕ ನೆಲೆಗಟ್ಟನ್ನು ಒದಗಿಸಿದ ಮಹಾನ್ ನಾಯಕರಲ್ಲಿ ಡಾ. ಲೋಹಿಯಾ ಒಬ್ಬರಾಗಿದ್ದರು. ಅವರು ಈ ಆಮೂಲಾಗ್ರ ಬದಲಾವಣೆಯನ್ನು 'ಸಪ್ತಕ್ರಾಂತಿ' ಎಂದು ಕರೆದರು. ಇದರ ಮೇಲು ಹೊದಿಕೆಯನ್ನು ಕಳಚಿ ಸಮಸ್ಯೆಯ ಹೃದಯವನ್ನು ಪ್ರವೇಶಿಸಿ ಪರಿಶೀಲಿಸಿದರೆ ಗಾಂಧೀಜಿಯವರ ಸರ್ವೋದಯ ಪರಿಕಲ್ಪನೆ ಅರ್ಥಾತ್ ಕಡುಬಡವರ, ದಿಕ್ಕಿಲ್ಲದವರ ಕಲ್ಯಾಣ, ಲೋಹಿಯಾಜೀಯವರ ಸಪ್ತಕ್ರಾಂತಿ ಪರಿಕಲ್ಪನೆ ಹಾಗೂ ಜಯಪ್ರಕಾಶಜೀಯವರ ಸಂಪೂರ್ಣಕ್ರಾಂತಿ ಇವುಗಳು ಒಂದೇ ಕ್ರಾಂತಿಕಾರಕ ಬದಲಾವಣೆಯ ವಿಭಿನ್ನ ಹೆಸರುಗಳಾಗಿರುವುದು ಕಂಡುಬರುತ್ತದೆ.

ರಾಮಮನೋಹರಜೀಯವರು ಸಾಮ್ರಾಜ್ಯಶಾಹಿ ಹಾಗೂ ವಸಾಹತುಶಾಹಿ ವಿರುದ್ಧ ಕ್ರಾಂತಿಯು ಶೀಘ್ರವಾಗಿ ಪೂರ್ಣಗೊಳ್ಳಬೇಕೆಂದು ಬಯಸಿದರು. ವಿಶ್ವಸಭೆ (World Parliament) ಹಾಗೂ ವಿಶ್ವ ಸರ್ಕಾರ ಸ್ಥಾಪನೆಗಾಗಿ ಸರ್ವತಂತ್ರ ಸ್ವತಂತ್ರವಾದ ರಾಷ್ಟ್ರ ಸರ್ಕಾರಗಳು ಸ್ವಯಂ ಮುಂದೆ ಬಂದು ತಮ್ಮ ಪರಮಾಧಿಕಾರದ ಒಂದು ಭಾಗವನ್ನು ವಿಶ್ವಸರ್ಕಾರಕ್ಕೆ ವರ್ಗಾಯಿಸಬೇಕೆಂದು ಬಯಸಿದರು. ಜಗತ್ತು ಸರ್ವಾಧಿಕಾರದಿಂದ ಮುಕ್ತವಾಗಬೇಕು ಎಂಬ ಅವರ ಕನಸು ಸಾಕಾರಗೊಳ್ಳುವುದಕ್ಕೆ ಹತ್ತಿರವಾಗುತ್ತಿದ್ದುದನ್ನು ಕಾಣುವಷ್ಟು ಭಾಗ್ಯಶಾಲಿಗಳಾಗಿದ್ದರು. ಆದರೆ ವಿಶ್ವಸರ್ಕಾರ ಅಸ್ತಿತ್ವಕ್ಕೆ ಬರುವುದನ್ನು ಕಣ್ಣಾರೆ ನೋಡುವಷ್ಟು ದೀರ್ಘಾಯುಷ್ಯದ ಭಾಗ್ಯ ಅವರಿಗಿರಲಿಲ್ಲ. ಈ ಗುರಿಸಾಧನೆಯು ಅವರ ಹತ್ತನೇ ಪುಣ್ಯ ತಿಥಿಯಾದ ಇಂದೂ ಕೈಗೆತ್ತಿಕೊಳ್ಳಲಾಗದೆ ಹಾಗೆಯೇ ಉಳಿದಿದೆ.

ಡಾ. ಲೋಹಿಯಾ ಅವರು ಜನಾಂಗ ಭೇದ ಹಾಗೂ ವರ್ಣಭೇದ ನೀತಿಗಳ ವಿರುದ್ಧ ಕ್ರಾಂತಿಯನ್ನು ಬೆಂಬಲಿಸಿದುದು ಮಾತ್ರವಲ್ಲದೆ ನೀಗ್ರೋ ಸಮಾನ ಹಕ್ಕುಗಳ ಚಳುವಳಿಯಲ್ಲಿ ಸ್ವಯಂ ಭಾಗವಹಿಸಿ 1964ರಲ್ಲಿ ಬಂಧಿಸಲ್ಪಟ್ಟಿದ್ದರು. ಆದರೆ ಮರುಕ್ಷಣವೇ ಅಮೇರಿಕಾ ಸರ್ಕಾರದ ಕೃಪಾಪೂರ್ಣ ಕ್ಷಮಾಯಾಚನೆಯೊಂದಿಗೆ ಅವರನ್ನು ಬಿಡುಗಡೆಗೊಳಿಸಲಾಯಿತು ಎಂಬ ಮಾತು ಬೇರೆ.

ಡಾ. ಲೋಹಿಯಾ ಅವರು ಆರ್ಥಿಕ ಸಮಾನತೆಯಲ್ಲಿ ಖಚಿತವಾದ ನಂಬಿಕೆಯುಳ್ಳವರಾಗಿದ್ದರು. ಅದು ಸಂಪೂರ್ಣ ಸಮಾನತೆಯಲ್ಲದಿದ್ದರೂ ಪರಮಾವಧಿ ಸಾಧ್ಯತೆಯ ಸಮಾನತೆ, ಸಾಧನೀಯವಾದ ಸಮಾನತೆ. ಆಫ್ರಿಕಾ,

ಏಶಿಯಾ ಹಾಗೂ ಲ್ಯಾಟಿನ್ ಅಮೇರಿಕಾಗಳ ಪುನಶ್ಚೇತನಕ್ಕೆ ಕಮ್ಯೂನಿಸಂ ಆಗಲಿ ಬಂಡವಾಳಶಾಹಿಯಾಗಲಿ ಸೂಕ್ತವಾದ ಸಿದ್ಧಾಂತಗಳಲ್ಲ ಎಂಬುದು ಅವರ ಅಭಿಪ್ರಾಯವಾಗಿತ್ತು. ರೋಗಪೀಡಿತವಾದ ಈ ಜಗತ್ತಿನ ಸಮಸ್ಯೆಗಳನ್ನು ಚೌಖಂಬಾ ರಾಜ್ಯವ್ಯವಸ್ಥೆ, ವಿಕೇಂದ್ರೀಕೃತ ಸಾಮಾಜಿಕ ವ್ಯವಸ್ಥೆ ಹಾಗೂ ಸಣ್ಣ ಘಟಕದ ಯಂತ್ರ ಕೈಗಾರಿಕಾ ವ್ಯವಸ್ಥೆಗಳು ಮಾತ್ರ ಪರಿಹರಿಸಬಲ್ಲವು ಎಂಬುದಾಗಿ ಅವರು ನಂಬಿದ್ದರು.

ಆಧುನಿಕ ನಾಗರಿಕತೆಯಲ್ಲಿ ಹೊಮ್ಮಿದ ಸಮಾನತಾ ಆಂದೋಲನದ ಬಗ್ಗೆ ಡಾ. ಲೋಹಿಯಾರಿಗೆ ಮೆಚ್ಚುಗೆಯಿತ್ತು. ವಿಶ್ವಬಂಡವಾಳವಾದದ ಶೋಷಕ ಮುಖವನ್ನು ಮಾತ್ರ ಅವರು ಇಷ್ಟಪಡಲಿಲ್ಲ. ಕಮ್ಯೂನಿಸ್ಟ್ ಸಮಾಜಗಳು ಆಯಾ ದೇಶಗಳ ಶ್ರೀಸಾಮಾನ್ಯರಿಗೆ ಜೀವನಾನುಭೋಗದ ಕನಿಷ್ಠ ಅಗತ್ಯಗಳು ಹಾಗೂ ಸಾಮಾಜಿಕ ಭದ್ರತೆಗಳು ದಕ್ಕುವಂತೆ ಮಾಡಿದ್ದನ್ನು ಮೆಚ್ಚದಿರಲಿಲ್ಲ. ಆದರೆ ಕಮ್ಯುನಿಸ್ಟ್ ವ್ಯವಸ್ಥೆಯೊಳಗೆ ಅಂತರ್ಗತವಾಗಿದ್ದ ಕೇಂದ್ರೀಕರಣ ಪ್ರವೃತ್ತಿ, ಹಿಂಸೆ, ಹಾಗೂ ಮನಸ್ಸನ್ನು ಹತ್ತಿಕ್ಕುವ ಪ್ರವೃತ್ತಿಯನ್ನು ಖಂಡಿಸಿದರು. ಈ ಎರಡೂ ವ್ಯವಸ್ಥೆಗಳಲ್ಲಿ ಯೂರೋ-ಅಮೇರಿಕನ್ ಕಮ್ಯುನಿಸ್ಟ್ ರಾಷ್ಟ್ರೀಯ ಸರ್ಕಾರಗಳ ವ್ಯಾಪ್ತಿಯಲ್ಲಿ ಬರುವಂಥ ಸದಾ ಏರುಮುಖಿಯಾದ ಐಹಿಕ ಜೀವನ ಮಟ್ಟದ, ಸ್ವಾರ್ಥಪರವಾದ ಆದರ್ಶಗಳೇ ತುಂಬಿರುತ್ತವೆ ಹೊರತು ಸಕಲ ಮನುಷ್ಯ ಕುಲಕ್ಕೂ ಸುಸಂಪನ್ನವಾದ ಜೀವನ ಮಟ್ಟ ಒದಗಿಸುವ ಪರಿಕಲ್ಪನೆಯೇ ಅವುಗಳಲ್ಲಿಲ್ಲ ಎಂಬುದು ಅವರ ಪ್ರಮುಖ ಟೀಕೆಯಾಗಿತ್ತು. ಈ ವಿಶಾಲತಾತ್ವಿಕ ಹಿನ್ನೆಲೆಯಲ್ಲಿಯೇ ಹೆನ್ರಿಫೋರ್ಡ್ ಹಾಗೂ ಜೋಸೆಫ್ ಸ್ಟಾಲಿನ್ ಅವರ ನಡುವಣ ಹೋಲಿಕೆ ಬಗ್ಗೆ ಲೋಹಿಯಾ ಅವರು ಮಾಡಿರುವ ಟಿಪ್ಪಣಿಯನ್ನು ಅರ್ಥಮಾಡಿಕೊಳ್ಳಬೇಕು.

ಡಾ. ರಾಮಮನೋಹರ ಲೋಹಿಯಾ ಅವರು ಸಾಮಾಜಿಕ ಸಮಾನತೆಯ ಬಗೆಗಿನ ಆಂದೋಲನದ ಒಬ್ಬ ಗಂಭೀರ ಸ್ವರೂಪದ ಹರಿಕಾರರಾಗಿದ್ದರು. ಜಾತಿ ಪದ್ಧತಿ ಹಾಗೂ ಹುಟ್ಟಿನ ಆಧಾರದ ಮೇಲೆ ರೂಪುಗೊಂಡ ಮೇಲು ಕೀಳಿನ ಶ್ರೇಣೀಕರಣ ವ್ಯವಸ್ಥೆಗಳೇ ಈ ಭವ್ಯರಾಷ್ಟ್ರದ ವಿನಾಶ ಹಾಗೂ ಪರಕೀಯ ಆಕ್ರಮಣಗಳಿಗೆ ತುತ್ತಾಗಿ ಪುನರಪಿ ಸಂಭವಿಸಿದ ದಾಸ್ಯ ಹಾಗೂ ಪರದೇಶೀಯರ ಆಳ್ವಿಕೆಗೆ ಏಕೈಕ ಕಾರಣವಾಗಿದೆ ಎಂಬುದ ಅವರ ನಿಲುವಾಗಿತ್ತು. ಜಾತಿ ವಿನಾಶ ಚಳುವಳಿಯನ್ನು ಅವರು ಹುಟ್ಟುಹಾಕಿದರು. ಪರಂಪರಾಗತವಾಗಿ ಅಸಮಾನತೆಯನ್ನೇ ನಿರಂತರವಾಗಿ ಉಂಡು, ಉಟ್ಟು, ಹಾಸಿ, ಹೊದ್ದುಕೊಂಡು ಬರುತ್ತಿರುವ ಸಮಾಜವೊಂದರಲ್ಲಿ ಎಲ್ಲರಿಗೂ ಸಮಾನ ಅವಕಾಶಗಳನ್ನು ಕೊಟ್ಟಮಾತ್ರಕ್ಕೆ ಸಮಾನತೆ ಸಾಕ್ಷಾತ್ಕಾರ ಆಗುವುದಿಲ್ಲ. ಮುಂದಿನ ದಿನಗಳಲ್ಲಿ ದೀರ್ಘಕಾಲದವರೆಗೂ ಹಿಂದುಳಿದ

ವರ್ಗಗಳಿಗೆ, ಹರಿಜನರಿಗೆ, ಆದಿವಾಸಿಗಳಿಗೆ ಮತ್ತು ಅಲ್ಪಸಂಖ್ಯಾತರಲ್ಲಿಯೇ ಮೂಲೆ ಗುಂಪಾದವರಿಗೆ ಮುಂದುವರಿದವರ ಮಟ್ಟಕ್ಕೆ ಏರಲು ಅವಕಾಶವಾಗುವಂತೆ ವಿಶೇಷವಾದ ಸವಲತ್ತುಗಳನ್ನು ಕಲ್ಪಿಸಬೇಕು ಎಂಬುದು ಲೋಹಿಯಾ ಅವರ ಹೆಬ್ಬಯಕೆಯಾಗಿತ್ತು.

ಆಧುನಿಕ ನಾಗರಿಕತೆಯನ್ನು ಅವರು ಟೀಕಿಸುತ್ತಿದ್ದರೂ ಸಹ ಈ ನಾಗರಿಕತೆ ಬೆಳೆಸುತ್ತಿರುವ ಸಮಾನತಾ ಭಾವನೆಯ ಬಗ್ಗೆ ಈ ಮಹಾಚೇತನಕ್ಕೆ ಅಪಾರ ಮೆಚ್ಚುಗೆಯಿತ್ತು. ಭಾರತೀಯ ಸಮಾಜದ ಲಕ್ಷಣಗಳಾದ ಆರ್ಥಿಕ ಅಸಮಾನತೆ ಹಾಗೂ ಸಾಮಾಜಿಕ ಅನ್ಯಾಯ ಇವುಗಳು ಲೋಹಿಯಾಅವರ ಮನಸ್ಸಿನಲ್ಲಿ ನಮ್ಮ ಸಮಾಜದ ರಚನಾ ಮೂಲದಲ್ಲಿಯೇ ಸರ್ವಾಂಗೀಣ ಕ್ರಾಂತಿಯನ್ನು ಉಂಟು ಮಾಡಬೇಕೆಂಬ ಉತ್ಕಟ ಹಂಬಲವನ್ನು ಸೃಷ್ಟಿಸಿದವು. ಈ ಮೂಲಕವಾಗಿಯೇ ಅವರ 'ಸಪ್ತಕ್ರಾಂತಿ' ಕಲ್ಪನೆಯು ಜನ್ಮ ತಾಳಿತು. ಈ ಏಳುಕ್ರಾಂತಿಗಳು ಭಾರತವನ್ನು ಬದಲಾಯಿಸುವುದು ಮಾತ್ರವಲ್ಲ, ಅವು ಸಂಪೂರ್ಣಗೊಂಡಾಗ ಇಡೀ ಜಗತ್ತನ್ನೇ ಮಾರ್ಪಡಿಸುತ್ತವೆ ಎಂದು ಅವರು ನಂಬಿದ್ದರು.

ಡಾ. ಲೋಹಿಯಾ ಮಹಾನ್ ದೇಶಪ್ರೇಮಿಯಾಗಿದ್ದರಾದರೂ ಸಂಕುಚಿತ ದೃಷ್ಟಿಯ ರಾಷ್ಟ್ರವಾದಿಯಾಗಿರಲಿಲ್ಲ. ಅವರಿಗೆ ವಿಶ್ವದೃಷ್ಟಿ, ವಿಶ್ವಮನಸ್ಸು ಇದ್ದವು. ಮನುಷ್ಯ ಕುಲದ ವಿಮುಕ್ತಿ ಹಾಗೂ ಜಗತ್ತಿನ ಐಕ್ಯತೆಗಳನ್ನು ಬಂಡವಾಳಶಾಹಿ ವ್ಯವಸ್ಥೆಯಿಂದಾಗಲಿ ಸಾಮ್ಯವಾದಿ ವ್ಯವಸ್ಥೆಯಿಂದಾಗಲಿ ಸಾಧಿಸುವುದು ಸಾಧ್ಯವಿಲ್ಲ, ಅಲ್ಲದೆ ಈ ಉದ್ದೇಶಕ್ಕೆ ಈ ಎರಡು ವ್ಯವಸ್ಥೆಗಳು ಅಪ್ರಸ್ತುತವಾಗುತ್ತವೆ ಎಂಬುದು ಅವರ ಅಭಿಪ್ರಾಯವಾಗಿತ್ತು.

ಜನಭಾಷೆಯಲ್ಲದ ಊಳಿಗಮಾನ್ಯ ಭಾಷೆಯೊಂದು ಶಿಕ್ಷಣದ ಮಾಧ್ಯಮ ಹಾಗೂ ಆಡಳಿತ ಭಾಷೆಯಾಗಿ ಪ್ರಚಲಿತವಾಗುವುದನ್ನು ಸಾರಾಸಗಟಾಗಿ ಅವರು ಪ್ರತಿರೋಧಿಸಿದರು. ಭಾಷೆ ಮಾತ್ರವಲ್ಲದೆ ಊಳಿಗಮಾನ್ಯ ಸಂಸ್ಕೃತಿಯನ್ನು ಬಿಂಬಿಸುವ ವೇಷಭೂಷಣಗಳನ್ನೂ, ಅರಮನೆಯಂತಹ ಗಗನಚುಂಬಿ ಕಟ್ಟಡಗಳಲ್ಲಿ ವಾಸಿಸುವುದನ್ನೂ ಅವರು ವಿರೋಧಿಸಿದರು. ಶ್ರೀಸಾಮಾನ್ಯರ ಕಡು ದಾರಿದ್ರ್ಯ ಹಾಗೂ ಅವರ ಕಷ್ಟಕಾರ್ಪಣ್ಯಗಳು ಸಮಾಜದ ಒಂದು ಮಗ್ಗುಲಾದರೆ, ಶ್ರೀಮಂತರ ಐಷಾರಾಮ ಜೀವನವು ಅದರ ಇನ್ನೊಂದು ಮಗ್ಗುಲು ಎಂದು ಅವರು ಸ್ಪಷ್ಟವಾಗಿ ಅರಿತಿದ್ದರು. ಹೊಸಜೀವನ ವಿಧಾನವನ್ನು ಈ ದೇಶದ ಜನರಲ್ಲಿ ಉಂಟುಮಾಡುವುದು ಪರದೇಶಿ ಭಾಷೆಯೊಂದರ ಸತತ ಉಪಯೋಗದಿಂದ ಸಾಧ್ಯವಾಗದು ಎಂದು ಲೋಹಿಯಾ ಅವರು ಖಚಿತವಾಗಿ ನಂಬಿದ್ದರು. ನಾವು ಸಂಸತ್ತಿನಲ್ಲಿ ತಮಿಳು

ಮತ್ತಿತರ ದಕ್ಷಿಣದ ಭಾಷೆಗಳನ್ನು ಜಾರಿಗೆ ತಂದಿರುವುದು ಅವರ ಸ್ಫೂರ್ತಿಯಿಂದಲೇ. ಅಲ್ಲದೆ ಅವರ ಸಮರ್ಥ ಮುಖಂಡತ್ವದಲ್ಲಿಯೇ ನನ್ನಂತಹ ಹಿಂದಿಯೇತರ ಜನರು ಹಿಂದಿ ಹಾಗೂ ಇತರ ಭಾರತೀಯ ಭಾಷೆಗಳನ್ನೇ ಸಂಸತ್ತಿನ ಒಳಗೂ ಹೊರಗೂ ಮಾತನಾಡಬೇಕೆಂದು ನಿಶ್ಚಯಿಸಿದೆವು.

ಮಹಾತ್ಮ ಗಾಂಧೀಜಿಯವರನ್ನು ಬಿಟ್ಟರೆ ಇನ್ನಾವ ಮುಖಂಡರೂ ಸ್ತ್ರೀ-ಪುರುಷ ಸಮಾನತೆಗೆ ಲೋಹಿಯಾ ಅವರು ನೀಡಿದಷ್ಟು ಒತ್ತು ನೀಡಲಿಲ್ಲ. ರಾಜಕೀಯ ರಂಗಮಾತ್ರವಲ್ಲದೆ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯು ಸಕ್ರಿಯ ಪಾತ್ರವಹಿಸಬೇಕೆಂದು ಅವರು ಸ್ತ್ರೀಯರಿಗೆ ಸದಾ ಪ್ರೋತ್ಸಾಹ ನೀಡುತ್ತಿದ್ದರು. ಮಹಿಳೆಯರ ಬಗ್ಗೆ ಗಾಢವಾದ ಸಹಾನುಭೂತಿ ಲೋಹಿಯಾರಿಗಿತ್ತು. ಬಹುದೂರದಿಂದ ನೀರನ್ನು ಹೊತ್ತು ತರುವ, ಶೌಚಾಲಯ ವ್ಯವಸ್ಥೆಯಿಲ್ಲದೆ, ಸದಾ ಹೊಗೆಯನ್ನು ಹೊಮ್ಮಿಸುವ ಹಸಿ ಸೌದೆಯೊಂದಿಗೆ ಹೆಣಗುತ್ತಾ ಜೀವಿಸುವ ಗ್ರಾಮೀಣ ಮಹಿಳೆಯರ ಭಯಂಕರವಾದ ಸಮಸ್ಯೆಗಳ ಬಗ್ಗೆ ನಿರಂತರವೂ ಅವರು ಚಿಂತಿಸಿದರು.

ಎಲ್ಲಿಯವರೆಗೆ ಈ ಪ್ರಪಂಚದಲ್ಲಿ ಅನ್ಯಾಯವೇ ಮೇಲುಗೈ ಪಡೆದಿರುತ್ತದೆಯೋ, ಎಲ್ಲಿಯತನಕ ಮೂರನೆ ಒಂದರಷ್ಟಿರುವ ಬಿಳಿಯರು ಹಾಗೂ ಮೂರನೆ ಎರಡರಷ್ಟಿರುವ ಕರಿಯರ ನಡುವೆ ಶ್ರಮಕ್ಕಾಗಿ ಪಡೆವ ಪ್ರತಿಫಲಗಳಲ್ಲಿ ಅಸಮಾನತೆ ಇರುತ್ತದೊ ಅಲ್ಲಿಯವರೆಗೆ ಯುದ್ಧ ಶಸ್ತ್ರಗಳನ್ನು ನಿಷೇಧಿಸಲೂ ಸಾಧ್ಯವಿಲ್ಲ; ಅದೇ ಹೊತ್ತಲ್ಲಿ ಶಾಂತಿಯನ್ನು ಸ್ಥಾಪಿಸುವುದೂ ಅಸಾಧ್ಯ ಎಂಬುದಾಗಿ ಲೋಹಿಯಾ ವಾದಿಸಿದರು. ಆದರೂ ಸಹ ಅಣ್ವಸ್ತ್ರಗಳು ಶೋಧನೆಯಾದನಂತರ ಒಂದು ಅಂತಿಮ ಹಂತವನ್ನು ತಲುಪಿದಂತಾಗಿರುವುದರಿಂದ, ಇನ್ನು ಶಸ್ತ್ರ ಕ್ರಾಂತಿಯೆಂಬುದು ಅಪ್ರಸ್ತುತವಾಗಿದೆ. ನಾಗರಿಕ ಅವಿಧೇಯತೆ ಮತ್ತು ಅಹಿಂಸಾತ್ಮಕ ಪ್ರತಿಭಟನೆಗಳು ಇಪ್ಪತ್ತನೇ ಶತಮಾನದ ಸರ್ವೋತ್ಕೃಷ್ಟ ಪರಿಹಾರವಾಗಿದ್ದು ತಮ್ಮ ಸಪ್ತಕ್ರಾಂತಿಯ ಸಾಧನೆಯು ಈ ವಿಧಾನದಿಂದಲೇ ಸಾಧ್ಯವಾಗಬಹುದೆಂದು ಅವರು ಭಾವಿಸಿದರು.

ಲೋಹಿಯಾ ಅವರು ತಮ್ಮನ್ನು ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯ ಆದರ್ಶಕ್ಕೆ ಸಮರ್ಪಿಸಿಕೊಂಡಿರುವುದರ ಜೊತೆಗೆ ರಾಜ್ಯಪ್ರಾಬಲ್ಯವಾದದ (Statism) ಕಟ್ಟಾ ವಿರೋಧಿಯೂ ಆಗಿದ್ದರು. ವ್ಯಕ್ತಿಯ ಖಾಸಗಿತನವನ್ನೂ, ಸ್ವಾತಂತ್ರ್ಯವನ್ನೂ ಅವರು ಇನ್ನಿಲ್ಲದಂತೆ ಗೌರವಿಸಿದರು. ಆದರೆ ರಾಷ್ಟ್ರಜೀವನದ ಎಲ್ಲ ಕ್ಷೇತ್ರಗಳಲ್ಲೂ ಸರ್ಕಾರದ ಕ್ರೂರ ನಿಯಂತ್ರಣವಿರುವುದನ್ನು ಅವರು ದ್ವೇಷಿಸಿದರು. ವಿರೋಧದ ಸ್ವಾತಂತ್ರ್ಯ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಇವುಗಳು ಸಪ್ತಕ್ರಾಂತಿಯ ಅವಿಭಾಜ್ಯ ಅಂಶಗಳೆಂಬುದನ್ನು ಲೋಹಿಯಾ ಅವರು ಎತ್ತಿಹಿಡಿದರು.

ಅಪರಾಧ ಸಂಹಿತೆಯ (Criminal Procedure Code) 107-109 ಕಲಮುಗಳನ್ನು ಬಡವರು ಹಾಗೂ ಅಮಾಯಕರ ವಿರುದ್ಧ ದುರುಪಯೋಗ ಮಾಡಿದುದರ ಬಗ್ಗೆ ಡಾ. ಲೋಹಿಯಾಅವರು ಬಹುವಾಗಿ ನೊಂದುಕೊಂಡರು. ಈ ಕಲಮುಗಳನ್ವಯ ಇಂತಿಷ್ಟು ಬಂಧನಗಳಾಗಲೇಬೇಕು ಎಂಬ ಜನವಿರೋಧಿ ನಂಬುಗೆಯ ಅಕ್ರಮ ವ್ಯವಸ್ಥೆಯನ್ನು ಅವರು ಬಹಿರಂಗಗೊಳಿಸಿದರು. ಈ ಕಲಮುಗಳನ್ನು ಅವರು ಬಡವರ ಮೀಸಾ ಎಂಬುದಾಗಿ ಕರೆದರು. ನ್ಯಾಯಾಲಯದ ಒಳಗೆ ಮಾತ್ರವಲ್ಲದೆ ಹೊರಗೂ ಸಹ ನಾಗರಿಕ ಸ್ವಾತಂತ್ರ್ಯಗಳಿಗಾಗಿ ತಮ್ಮ ಹೋರಾಟವನ್ನು ಅವರು ಮುಂದುವರೆಸಿದರು. ಸರ್ವೋಚ್ಚನ್ಯಾಯಾಲಯವು ಈ ಬಗ್ಗೆ ಎರಡು ತೀರ್ಪುಗಳನ್ನು ಅವರ ಪರವಾಗಿ ನೀಡಿತು. ಮಾನವ ಸ್ವಾತಂತ್ರ್ಯದ ಹೋರಾಟದ ಹಾದಿಯಲ್ಲಿ ಇವು ಎರಡು ಪ್ರಮುಖ ಮೈಲುಗಲ್ಲುಗಳಾಗಿವೆ.

ಡಾ. ಲೋಹಿಯಾ ಅವರು ತನ್ನ ದೇಶವನ್ನು ಅಪರಿಮಿತವಾಗಿ ಪ್ರೀತಿಸುತ್ತಿರುವಾಗಲೂ ವಿಶ್ವಮನಸ್ಸನ್ನು ಹೊಂದಿರುತ್ತಿದ್ದರು. ತನ್ನ ರಾಷ್ಟ್ರವನ್ನು ದಾರಿದ್ರ್ಯದಿಂದ, ದಾರುಣತೆಯಿಂದ ಮೇಲೆತ್ತಲು ಹೊರಟ ಸಮಯದಲ್ಲಿಯೇ ಮಾನವ ಜನಾಂಗದ ಇತರ ವರ್ಗಗಳೊಂದಿಗೂ ಮೈತ್ರಿಯನ್ನು ಸಾಧಿಸಬಯಸಿದರು. ಅವರ ಭ್ರಾತೃಭಾವವು ವಿಶ್ವರಾಷ್ಟ್ರದ ಪರಿಶುದ್ಧವಾದ ಭಾವವಾಗಿತ್ತು. ಸಮಸ್ತ ಮನುಷ್ಯ ಕುಲದ ಒಗ್ಗಟ್ಟಿನ ಅವರ ಪರಿಕಲ್ಪನೆಯ ಬುನಾದಿಯು 'ಭಾರತ ಮಾತೆ'ಯ ಪ್ರೀತಿಯಿಂದ ಉದ್ದೀಪ್ತವಾಗಿತ್ತು. ರಾಷ್ಟ್ರೀಯತೆ, ಕುಲ ಜನಾಂಗಗಳನ್ನು ಮೀರಿದ ಮನಸ್ಸಿನ ಪೌರತ್ವ ಹಾಗೂ ಆದರ್ಶಗಳ ಪೌರತ್ವ ಎಂಬ ನವೀನ ಪರಿಕಲ್ಪನೆಗಳನ್ನು ಅವರು ಅನುಮೋದಿಸಿದರು. ಯಾವುದೇ ಪಾಸ್‌ಪೋರ್ಟ್, ವೀಸಾಗಳಿಲ್ಲದೆ ಮುಕ್ತವಾಗಿ ಯಾವುದೇ ಪ್ರಜೆಗಳು ಪ್ರಪಂಚದ ಉದ್ದಗಲಕ್ಕೂ ಸಂಚರಿಸುವಂತಹ ಒಂದು ಅಂತರರಾಷ್ಟ್ರೀಯ ವ್ಯವಸ್ಥೆಯ ಕನಸನ್ನು ಲೋಹಿಯಾ ಕಂಡರು. ಇನ್ನಾವುದೇ ರಾಷ್ಟ್ರನಾಯಕರೂ ಇಷ್ಟು ಅಸಾಧಾರಣವಾದ ಸುಂದರ ಕನಸು ಕಾಣಲಿಲ್ಲ. ಈ ನಲವತ್ತು ವರ್ಷಗಳಲ್ಲಿ ನಾನು ಅನೇಕ ನಾಯಕರನ್ನು ಕಂಡಿದ್ದೇನೆ. ಆದರೆ ಅವರ‍್ಯಾರೂ ಲೋಹಿಯಾ ಅವರ ರೀತಿಯಲ್ಲಿ ಬಡವರನ್ನೂ ಬಲ್ಲಿದರನ್ನೂ ಒಂದೇ ಬಗೆಯಾಗಿ ಪರಿಗಣಿಸಲಿಲ್ಲ. ಹಾಗೂ ಎಲ್ಲರೀತಿಯ ಉಪೇಕ್ಷಿತರೊಂದಿಗೆ ಹಾಗೂ ಶೋಷಿತರೊಂದಿಗೆ ಅವರು ಒಂದೇ ಬಗೆಯ ಸಂಬಂಧವನ್ನಿಟ್ಟುಕೊಂಡಿದ್ದರು. ಕಮಟು ಹಿಡಿದ ಚಿಂದಿ ಬಟ್ಟೆತೊಟ್ಟ ಕಡುಬಡವನಿಗೆ ಅವರು ಕೊಟ್ಟಿದ್ದು ಹಾಗೂ ರಾಜಮನೆತನದ ಹಿನ್ನೆಲೆಯ ಅವರ ಗೆಳೆಯನೊಬ್ಬ ಈ ವ್ಯಕ್ತಿಯಿಂದ ಪಡೆದದ್ದು ಒಂದೇ ಪ್ರೀತಿಯನ್ನು. ದೇಶದ ಯುವಶಕ್ತಿಗೆ ಅವರು ಸ್ಫೂರ್ತಿಯ ಚಿಲುಮೆಯಾಗಿದ್ದರು. ತರುಣರು ನಿಧಾನವಾದರೂ ನಿರಂತರವಾಗಿ

ಮುಂದೆ ಸಾಗಲು, ತಮ್ಮ ಧೈರ್ಯ ಸಾಹಸಗಳನ್ನು ತೋರಲು ಲೋಹಿಯಾ ಅವರು ಸತತ ಉತ್ತೇಜನ ನೀಡಿದರು. ಪ್ರೇಮಪೂರಿತವಾದ ಈ ಗುಣವನ್ನು ಅವರು ಮಹಾತ್ಮಗಾಂಧೀಜಿಯರೊಂದಿಗೆ, ಜಯಪ್ರಕಾಶ ನಾರಾಯಣರೊಂದಿಗೆ ಸಮನಾಗಿ ಹಂಚಿಕೊಂಡವರು. ಡಾ.ಲೋಹಿಯಾರವರಲ್ಲಿ ಬುದ್ಧಿಮತ್ತೆಯು ಅವರ ವ್ಯಕ್ತಿತ್ವದ ಸೌಂದರ್ಯದೊಡನೆ ಅಸಾಧಾರಣವಾಗಿ ಬೆಸೆದುಕೊಂಡಿತ್ತು. ಅವರು ಅತ್ಯಂತ ಪ್ರತಿಭಾನ್ವಿತ ಸಂವಾದಕಾರರೂ ಆಗಿದ್ದರು. ಅವರೊಬ್ಬ ವರ್ಣರಂಜಿತ ವ್ಯಕ್ತಿ. ಅವರಿಗೆ ನಾಟಕದ ಗಂಧವೂ ಇತ್ತು. ಸಾರ್ವಜನಿಕರಂಗದ ಇತರ ಯಾವುದೇ ನಾಯಕರೂ ಮಾಡದಂತಹ ಪದಗಳ ಜೋಡಣೆಯನ್ನು ಪ್ರಸಂಗವನ್ನರಿತು ಮಾಡುತ್ತಿದ್ದರು.

ಲೋಹಿಯಾ ಅವರು ಒಬ್ಬ ಶುಷ್ಕ, ಸಂಕುಚಿತ ಮನಸ್ಸಿನ ರಾಜಕಾರಣಿಯಾಗಿರಲಿಲ್ಲ. ಅವರೊಬ್ಬ ವಿಶಾಲ ಆಸಕ್ತಿಗಳ ವ್ಯಕ್ತಿಯಾಗಿದ್ದರು. ಇತಿಹಾಸ, ತತ್ವಶಾಸ್ತ್ರ, ಸಾಹಿತ್ಯ, ಶಿಲ್ಪ, ವರ್ಣಕಲೆ, ವಾಸ್ತುಶಿಲ್ಪ ಹೀಗೆ ಎಲ್ಲದರಲ್ಲೂ ಆಸಕ್ತಿ. ಪ್ರೀತಿಯಿಂದ ಈ ವಿಷಯಗಳನ್ನು ಒಳಗೊಳ್ಳುವಂತಹ, ಹತ್ತಿರವಾಗಿಸಿ ಕೊಳ್ಳುವಂತಹ ತಾಜಾತನ ಇವರ ದೃಷ್ಟಿಯಲ್ಲಿತ್ತು. ಆದುದರಿಂದಲೇ ಆಯಾಯ ಶಾಸ್ತ್ರಗಳಲ್ಲಿನ ಕೆಲವು ಪರಿಣತರು ಲೋಹಿಯಾರನ್ನು ಆಶ್ಚರ್ಯಕರ ರೀತಿಯಲ್ಲಿ ಮೆಚ್ಚಿಕೊಂಡಿದ್ದರು.

ಇತಿಹಾಸ ಕುರಿತ ಭಾರತೀಯರ ದೃಷ್ಟಿಕೋನ ಬದಲಾಗಬೇಕೆಂದು ಲೋಹಿಯಾ ಬಯಸಿದ್ದರು. ಘಜನಿ, ಘೋರಿ ಮತ್ತು ಬಾಬರರನ್ನು ವಿದೇಶಿ ಆಕ್ರಮಣಕಾರರೆಂದು ಭಾರತದ ಮುಸ್ಲಿಮರು ನೋಡುವಂತಾಗಬೇಕು ಎಂದು ಮುಸ್ಲಿಮರನ್ನು ಕೋರಿದರೆ, ರಜಿಯಾ, ಶೇರ್‌ಷಾಹ್, ರಹೀಮ್ ಹಾಗೂ ಜಾಯಸೀಯಂಥವರನ್ನು ತಮ್ಮ ಪೂಜನೀಯ ಪೂರ್ವಜರೆಂದು ಭಾವಿಸುವಂತೆ ಹಿಂದೂಗಳನ್ನು ಕೋರಿದರು. ಆಗ ಮಾತ್ರವೇ ಈ ನೆಲದ ಹಿಂದೂ-ಮುಸ್ಲಿಮರ ನಡುವೆ ನೇರ ಸೌಹಾರ್ದ ಏರ್ಪಡುವುದು ಸಾಧ್ಯ ಎಂದು ದೃಢವಾಗಿ ನಂಬಿದರು.

ಇತರ ಅನೇಕ ಅಲ್ಪಸಂಖ್ಯಾತರ ಹಿತಾಸಕ್ತಿಯಂತೆಯೇ ಮುಸ್ಲಿಮ್ ಸಮುದಾಯದ ಬಗೆಗೆ ಅದರಲ್ಲೂ ಹಿಂದುಳಿದ ಮುಸ್ಲಿಮರ ಶ್ರೇಯೋಭಿವೃದ್ಧಿಯ ಬಗೆಗೆ ಅತೀವವಾದ ಮುತುವರ್ಜಿ ಲೋಹಿಯಾ ಅವರಿಗಿತ್ತು. ಉರ್ದು ಭಾಷೆಯ ಉತ್ಕಟ ಪ್ರೇಮಿ ಅವರಾಗಿದ್ದರು. ಕೋಮುಗಲಭೆಗಳಲ್ಲಿ ಅಡಗಿರುತ್ತಿದ್ದ ಬರ್ಬರ ಪ್ರವೃತ್ತಿಯು ಇವರನ್ನು ಆಳವಾಗಿ ನೋಯಿಸಿದಷ್ಟು ಮತ್ತಾವ ಸಂಗತಿಯೂ ಬಾಧಿಸಿಲ್ಲ. ಹಲವಾರು ಸಂದರ್ಭಗಳಲ್ಲಿ ಮುಸ್ಲಿಮರ ಪ್ರಾಣ ಮಾನಗಳನ್ನುಳಿಸಲು ತಮ್ಮ ಜೀವವನ್ನು ಆಪತ್ತಿಗೆ ಒಡ್ಡಿಕೊಂಡಿದ್ದರು. ಹಿಂದೂಗಳು ಅಥವಾ ಸರ್ಕಾರ

ತಂತಮ್ಮ ಮಾನವೀಯ ಅಂತರಂಗದ ಕರ್ತವ್ಯಗಳನ್ನು ಸಮರ್ಪಕವಾಗಿ ನೆರವೇರಿಸಿದರೆ ಸಾಕು, ಅದಕ್ಕಿಂತ ದೊಡ್ಡ ತ್ಯಾಗ ಯಾವುದೂ ಬೇಕಿಲ್ಲ ಎಂದು ಅವರು ಹೇಳಿದರು. ಹಿಂದೂಮುಸ್ಲಿಮರಲ್ಲಿ ಪರಸ್ಪರ ಸಂಪರ್ಕದ ಸೌಹಾರ್ದ ಸಭೆಗಳನ್ನು ಏರ್ಪಡಿಸುವುದನ್ನು ಅವರು ಬಹುವಾಗಿ ಇಷ್ಟಪಟ್ಟರು. ಅಲ್ಲದೆ ರಕ್ಷಾಬಂಧನದ ದಿನ ಬಲಿಷ್ಠ ಕೋಮುಗಳವರು ಅಲ್ಪಸಂಖ್ಯಾತ ಕೋಮುಗಳಲ್ಲಿನ ತಮ್ಮ ಸಹೋದರ ಸಹೋದರಿಯರ ಮಾನ ಪ್ರಾಣಗಳನ್ನು ರಕ್ಷಿಸುವ ಪಣ ತೊಡಬೇಕೆಂದು ಆಶಿಸಿದರು.

ರಾಮಮನೋಹರರ ಸಾವು ಹತ್ತುವರ್ಷಗಳ ಹಿಂದೆ ವೈದ್ಯಕೀಯ ಹಾಗೂ ಸರ್ಕಾರದ ನಿರ್ಲಕ್ಷ್ಯದಿಂದ ಸಂಭವಿಸಿತು. ಅವರು ಈ ಜಗತ್ತಿಗೆ ಬರುವಾಗ ಬರಿಗೈಯಲ್ಲಿ ಬಂದಂತೆ ಹೋಗುವಾಗಲೂ ಯಾವ ಆಸ್ತಿಪಾಸ್ತಿಗಳ ಹಂಗಿಲ್ಲದೆ ಬರಿಗೈಯಲ್ಲಿಯೇ ತೆರಳಿದರು. ಹಣ ಮತ್ತು ಕುಟುಂಬ ವ್ಯಾವೋಹಗಳಿಂದ ಅವರು ಸದಾ ದೂರವಿದ್ದವರು. ಆದರೆ ಸಮಸ್ತ ಮಾನವಕುಲವೇ ಅವರ ಕುಟುಂಬವಾಗಿತ್ತು. ಸಂಸ್ಕೃತದ ಒಂದು ನುಡಿಯಂತೆ ಅವರ ಗುರಿ 'ವಸುಧೈವ ಕುಟುಂಬಕಂ' ಆಗಿತ್ತು. ಅವರ ಶವಸಂಸ್ಕಾರವು ದೆಹಲಿ ನಗರದಲ್ಲಿ ದಿಕ್ಕಿಲ್ಲದ ಬಡವರ ಶವಗಳನ್ನು ಸುಟ್ಟು ಬೂದಿಮಾಡುವ ವಿದ್ಯುತ್ ಚಿತಾಗಾರದಲ್ಲಿ ನಡೆಯಿತು. ಅವರು ಇಂದು ಬದುಕಿದ್ದಿದ್ದರೆ ಊಳಿಗಮಾನ್ಯ ಆಡಳಿತವೊಂದು ಕೊನೆಗೊಂಡದ್ದಕ್ಕಾಗಿ ಸಂತಸದಿಂದ ಹಿಗ್ಗುತ್ತಿದ್ದರು.* ಆದರೆ ತಾವು ನಡೆಸಿದ ಚುಕ್ಕಾಣಿಯ ಮೇಲೆ ವಿಶ್ರಾಂತ ರಾಗಿಬಿಡುತ್ತಿದ್ದರು ಎಂದು ನಂಬುವುದು ಸಾಧ್ಯವಿಲ್ಲ. ಜನತಾ ಸರ್ಕಾರ ಹಾಗೂ ಜನತಾ ಮುಂದಾಳತ್ವವನ್ನು ಸಹ ಅವರವರ ಚುಕ್ಕಾಣಿಗಳ ಮೇಲೆ ಆಲಸ್ಯದಿಂದ ನಿರಾಳವಾಗಿ ಮಲಗಲು ಅವರು ಬಿಡುತ್ತಿರಲಿಲ್ಲ. ಬದಲಾಗಿ ಶೀಘ್ರವಾದ ಕ್ರಮಗಳನ್ನು ಕೈಗೊಂಡು ತಾವು ಚುನಾವಣೆಯಲ್ಲಿ ಜನರಿಗೆ ನೀಡಿದ ಭರವಸೆಗಳನ್ನು ಈಡೇರಿಸುವಂತೆ ಹಾಗೂ ಬೃಹತ್ ಕಾರ್ಯಯೋಜನೆಗಳನ್ನು ಕೈಗೊಂಡು ಉತ್ಪಾದನೆಯನ್ನು ಹೆಚ್ಚಿಸಿ ಬಡತನವನ್ನು ಕೊನೆಗಾಣಿಸುವಂತೆಅವರನ್ನು ಸತತವಾಗಿ ತಿವಿದು ಎಚ್ಚರಿಸುತ್ತಿದ್ದರು.

ಡಾ. ಲೋಹಿಯಾರವರು ಬಹುಮುಖ ವ್ಯಕ್ತಿತ್ವದ ತುಂಬು ಆತ್ಮೀಯ ಚೇತನವಾಗಿದ್ದರು. ನಿಸ್ಸಂಶಯವಾಗಿಯೂ ಅವರು ಬಹುಚರ್ಚಿತ ವ್ಯಕ್ತಿಯಾಗಿದ್ದರು. ಎಲ್ಲ ಕ್ರಾಂತಿಕಾರರೂ ಸಾಮಾನ್ಯವಾಗಿ ಸಂಘರ್ಷ ಹಾಗೂ ವಿವಾದ ಗಳನ್ನು ಹುಟ್ಟು ಹಾಕುತ್ತಾರೆ. ಕ್ರಿಸ್ತನೂ ಕೂಡ ಕುಟುಂಬಗಳನ್ನು ವಿಭಜಿಸಿ ತಂದೆಯ ವಿರುದ್ಧ

---

* ಇಂದಿರಾಗಾಂಧಿ ಆಡಳಿತ ಕೊನೆಗೊಂಡು ಜನತಾ ಸರ್ಕಾರ ಸ್ಥಾಪನೆಯಾದ ಸಂದರ್ಭ.

ಮಗನನ್ನು ನಿಲ್ಲಿಸಲು ತಾನು ಬಂದಿರುವುದಾಗಿ ಹೇಳಿಕೊಂಡ. ಲೋಹಿಯಾರವರು ತಮ್ಮ ವಿರುದ್ಧವಾದ ಟೀಕೆಗಳಿಂದ ತಾಳ್ಮೆ ಕಳೆದುಕೊಳ್ಳುತ್ತಿದ್ದರೆಂಬುದು ನಿಜ. ಕೆಲವೊಮ್ಮೆ ಅಸಂಭಾವಿತ ಆರೋಪಗಳನ್ನು ಮಾಡುತ್ತಿದ್ದರು ಎಂದು ಅವರ ಸಹೋದ್ಯೋಗಿಗಳು ಭಾವಿಸಿದುದುಂಟು. ಆದರೆ ಇಂತಹ ಕೆಲವು ವೈಫಲ್ಯಗಳ ನಡುವೆಯೂ ರಾಷ್ಟ್ರದ ಪುನಶ್ಚೇತನಕ್ಕೆ ಹಾಗೂ ಪುನನಿರ್ಮಾಣಕ್ಕೆ ಚಿರಕಾಲ ನಿಲ್ಲುವಂತಹ ಕೊಡುಗೆಗಳನ್ನು ಲೋಹಿಯಾ ಅವರು ನೀಡಿದರು ಎಂಬುದನ್ನು ಯಾರೂ ಅಲ್ಲಗಳೆಯಲಾರರು.

ಡಾ. ಲೋಹಿಯಾ ಅವರ ಕೆಲವು ವಿಚಾರಗಳು ದಂತಗೋಪುರದ ವಿಷಯಗಳಾಗಿವೆ ಎಂದು ಅವರ ಟೀಕಾಕಾರರಲ್ಲಿ ಕೆಲವರು ಹೇಳುತ್ತಾರೆ. ಎಲ್ಲ ದಾರ್ಶನಿಕರೂ, ಮಹಾನ್ ಕ್ರಾಂತಿಕಾರಿಗಳೂ ಸ್ವಲ್ಪ ಮಟ್ಟಿಗಾದರೂ ಅಂತಹ ''ದಂತಗೋಪುರ'' ಆದರ್ಶಗಳನ್ನು ಹೊಂದಿರುತ್ತಾರೆ. ಇಂಥ ದರ್ಶನ ಇಲ್ಲದಿದ್ದಲ್ಲಿ ಯಾವುದೇ ವ್ಯಕ್ತಿಯೂ ಗುರುತರ ಕಾರಣವೊದಗಿದಾಗ ತ್ಯಾಗಮಾಡುವ ಸ್ಫೂರ್ತಿಯನ್ನು ಪಡೆಯಲಾರ. ಡಾ. ಲೋಹಿಯಾ ಅವರ ಯಾವ ಅಭಿಪ್ರಾಯಗಳು, ವಿಚಾರಗಳು ಅವರ ಜೀವಿತಾವಧಿಯಲ್ಲಿ ಪರೀಕ್ಷಿಸಲ್ಪಡಲಿಲ್ಲವೊ, ಅದೇ ವಿಚಾರಗಳು ದೇಶದ ಸಮಸ್ಯೆಗಳ ನಿವಾರಣೆಗಾಗಿ ಮುಂಬರುವ ದಿನಗಳಲ್ಲಿ ಅತ್ಯಂತ ಹೆಚ್ಚು ಪ್ರಸ್ತುತವಾದುವೂ, ಮಾನ್ಯವೂ ಆಗುತ್ತವೆಂದು ನಾನು ಮನಸಾರೆ ನಂಬಿದ್ದೇನೆ. ಕಾಲಸರಿದಂತೆ ಅವರ ವ್ಯಕ್ತಿತ್ವ ಹಾಗೂ ಸಾಧನೆ ಕುರಿತ ನೇತ್ಯಾತ್ಮಕ ಹಾಗೂ ಚರ್ಚಾಸ್ಪದ ಸಂಗತಿಗಳು ನೇಪಥ್ಯಕ್ಕೆ ಸರಿಯುತ್ತವೆ. ರಾಜಕಾರಣ, ಅರ್ಥಶಾಸ್ತ್ರ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಕುರಿತ ಅವರ ಸಶಕ್ತ ವಿಚಾರಗಳು ಜಾಜ್ವಲ್ಯಮಾನವಾಗಿ ಮಿನುಗುತ್ತವೆ. ಚಾರಿತ್ರಿಕ ಹಿನ್ನೆಲೆಯಲ್ಲಿ ಹೇಳುವುದಾದರೆ, ಆಧುನಿಕ ಭಾರತಕ್ಕೆ ಅವರು ನೀಡಿರುವ ಕೊಡುಗೆಯಂತೂ ಮಹಾತ್ಮಾಗಾಂಧಿಯವರ ಸಾಧನೆಗಳಿಗೆ ಮಾತ್ರ ಎರಡನೆಯದೆಂಬುದರಲ್ಲಿ ನನಗಂತೂ ಸಂಶಯವಿಲ್ಲ. ಡಾ. ಲೋಹಿಯಾಜಿಯವರಿಗೆ ಸಲ್ಲಿಸಬೇಕಾದ ನಿಜವಾದ ಶ್ರದ್ಧಾಂಜಲಿ ಎಂದರೆ ಸ್ವಾತಂತ್ರ್ಯದ ಪರಿಮಿತಿಯೊಳಗೆ ಸಮಾಜವೊಂದನ್ನು ಸಮೃದ್ಧಗೊಳಿಸುವುದೇ ಆಗಿದೆ. ಅಂದರೆ ಅದಕ್ಕಾಗಿ ನಮ್ಮನ್ನು ನಾವು ಸಮರ್ಪಿಸಿಕೊಳ್ಳುವುದಾಗಿದೆ.

●

ಇಂಗ್ಲಿಷ್‌ನಿಂದ ಕನ್ನಡಕ್ಕೆ : **ಗುರುರಾಜ ಬೀಡೀಕರ್**

ಲೋಹಿಯಾ ಚಿಂತನೆಯ ಹಲವು ಮುಖಗಳು

ಜಾರ್ಜ್ ಫರ್ನಾಂಡಿಸ್

ಡಾ. ರಾಮಮನೋಹರ ಲೋಹಿಯಾ ಅವರು ಕಳೆದ ನೂರು ವರ್ಷಗಳಲ್ಲಿ ಪ್ರಾಯಶಃ ಭಾರತ ಸೃಷ್ಟಿಸಿದ ಏಕಮಾತ್ರ ಸ್ವತಂತ್ರ ಚಿಂತಕರು. ತಮ್ಮ ಚಿಂತನೆಗಳನ್ನು ಕಾರ್ಯರೂಪಕ್ಕಿಳಿಸಲು ಇತರರನ್ನು ಅವಲಂಬಿಸುವ ಚಿಂತಕರಿಗೂ, ಲೋಹಿಯಾ ಅವರಿಗೂ ತುಂಬಾ ವ್ಯತ್ಯಾಸವಿದೆ. ತಮ್ಮ ಈ ದಿಟ್ಟ ನಂಬಿಕೆಗಳಿಗಾಗಿ ಅವರು ಭಾರೀ ಬೆಲೆ ತೆರಬೇಕಾಯಿತು. ಬ್ರಿಟಿಷ್ ಹಾಗೂ ಭಾರತ ಸರ್ಕಾರಗಳಿಂದ ಮಾತ್ರವಲ್ಲ, ಪೋರ್ಚುಗಲ್, ನೇಪಾಳ ಹಾಗೂ ಅಮೆರಿಕನ್ ಸಂಯುಕ್ತ ಸಂಸ್ಥಾನಗಳ ಸರ್ಕಾರಗಳಿಂದಲೂ ಹಲವು ಸಲ ಅವರು ಬಂಧನಕ್ಕೆ ಒಳಗಾಗಬೇಕಾಯಿತು. ರಾಜಕೀಯ ದಾರ್ಶನಿಕರಾದ ಲೋಹಿಯಾ ತಮ್ಮ ಕಾಲದ ಘಟನೆಗಳನ್ನು ವಿಶ್ಲೇಷಿಸುವಾಗ ತಾವಿದ್ದ ಕಾಲಕ್ಕಿಂತ ಎಷ್ಟೋ ವರ್ಷಗಳಾಚೆಗೆ ನಡೆಯ ಬಲ್ಲಂಥದ್ದನ್ನೂ ಗ್ರಹಿಸಬಲ್ಲ ದೂರದೃಷ್ಟಿಯ ರಾಜಕೀಯ ಚಿಂತಕರಾಗಿದ್ದರು. ಅವರ ಈ ಪ್ರವಾದಿತನದಿಂದಲೇ ಒಮ್ಮೆ ಹೀಗೆ ಹೇಳಿದ್ದರೆಂದು ಕಾಣುತ್ತದೆ: ''ಜನ ನನ್ನ ಮಾತನ್ನು ಕೇಳಿಯೇ ಕೇಳುತ್ತಾರೆ. ಪ್ರಾಯಶಃ, ನಾನು ಸತ್ತನಂತರ ಆ ಕಾಲ ಬರಬಹುದು. ಆದರೆ, ಎಂದಾದರೊಂದು ದಿನ ಅವರು ನನ್ನ ಮಾತು ಕೇಳುವುದು ಮಾತ್ರ ಗ್ಯಾರಂಟಿ''.

ಇದೀಗ, ಲೋಹಿಯಾ ಸತ್ತ ಇಪ್ಪತ್ತು ವರ್ಷಗಳ ನಂತರ ಭಾರತ ಹಾಗೂ ವಿದೇಶಗಳಲ್ಲಿ ಜನ ಅವರ ಮಾತಿಗೆ ಕಿವಿಗೊಡತೊಡಗಿದ್ದಾರೆ.

ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ ಮಾನವಕುಲ ನಡೆಸುತ್ತಿರುವ ಮುಖ್ಯ ಹೋರಾಟಗಳನ್ನು ಕುರಿತು ಮಾತಾಡುತ್ತಾ, ಲೋಹಿಯಾ ಅವುಗಳನ್ನು ಸಪ್ತಕ್ರಾಂತಿಗಳೆಂದು ವಿಂಗಡಿಸಿದ್ದರು. ಲೋಹಿಯಾರಂತೆ, ಅವರು ರೂಪಿಸಿದ ಸಮಾಜವಾದಿ ಪಕ್ಷವೂ ಈ ಕ್ರಾಂತಿಗಳಲ್ಲಿ ಪಾಲ್ಗೊಂಡಿತ್ತು. ತಾವು ಪ್ರತಿಪಾದಿ

ಸುತ್ತಿರುವ ಸಪ್ತಕ್ರಾಂತಿಯ ಹೋರಾಟಗಳು ಈ ಕೆಳಕಂಡ ಉದ್ದೇಶಗಳಿಗಾಗಿ ನಡೆಯಬೇಕೆಂಬುದು ಲೋಹಿಯಾ ಕನಸು :

(i) ಗಂಡು, ಹೆಣ್ಣುಗಳ ನಡುವಣ ಸಮಾನತೆಗಾಗಿ (ii) ಮೈಬಣ್ಣವನ್ನು ಆಧರಿಸಿದ ರಾಜಕೀಯ, ಆರ್ಥಿಕ ಹಾಗೂ ಆಧ್ಯಾತ್ಮಿಕ ಅಸಮಾನತೆಯ ವಿರುದ್ಧ (iii) ಅನೂಚಾನವಾಗಿ ನಡೆದು ಬಂದ ಸಂಪ್ರದಾಯ ಸೃಷ್ಟಿಸಿದ ಹಿಂದುಳಿದ ಹಾಗೂ ಮುಂದುವರಿದ ಜಾತಿ, ಸಮುದಾಯಗಳ ನಡುವಣ ಅಸಮಾನತೆಯ ವಿರುದ್ಧ; ಹಿಂದುಳಿದವರಿಗೆ ವಿಶೇಷ ಅವಕಾಶಗಳನ್ನು ಸೃಷ್ಟಿಸುವುದರ ಪರ (iv) ವಿದೇಶೀ ಗುಲಾಮರಾಗಿರುವುದರ ವಿರುದ್ಧ; ಸ್ವಾತಂತ್ರ್ಯ ಮತ್ತು ಜಾಗತಿಕ ಪ್ರಜಾಪ್ರಭುತ್ವವಾದಿ ಆಳ್ವಿಕೆಯ ಪರ (v) ಆರ್ಥಿಕ ಸಮಾನತೆ ಮತ್ತು ಯೋಜಿತ ಉತ್ಪಾದನೆಯ ಪರ; ಖಾಸಗಿ ಬಂಡವಾಳದ ಅಸ್ತಿತ್ವ ಹಾಗೂ ಅದನ್ನು ಕುರಿತ ವ್ಯಾಮೋಹದ ವಿರುದ್ಧ (vi) ಖಾಸಗಿ ಬದುಕಿನ ಮೇಲೆ ನಡೆಯುವ ಅನ್ಯಾಯವಾದ ಆಕ್ರಮಣಗಳ ವಿರುದ್ಧ; ಪ್ರಜಾಪ್ರಭುತ್ವವಾದಿ ಮಾರ್ಗಗಳ ಪರ (vii) ಆಯುಧಗಳ ವಿರುದ್ಧ; ಸತ್ಯಾಗ್ರಹದ ಪರ.

ಈ ಸಪ್ತಕ್ರಾಂತಿಗಳು ಅಥವಾ ಹೋರಾಟಗಳ ಸುತ್ತ ತಮ್ಮ ಚಿಂತನೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಾ, ಕ್ರಮೇಣ ಈ ಚಳುವಳಿಗಳನ್ನು ಎಲ್ಲೆಡೆ ಹರಡತೊಡಗಿದ ಲೋಹಿಯಾ, ಈ ಚಳುವಳಿಗಳು ಬುಡಮೇಲುಗೊಳಿಸಲೆತ್ನಿಸುತ್ತಿದ್ದ ಹಳೆಯ ವ್ಯವಸ್ಥೆಯ ರಕ್ಷಕರ ಕೆಂಗಣ್ಣಿಗೂ ತುತ್ತಾದರು. ಆಳುವ ಪಕ್ಷಗಳ ಕೈಯ ಚಾವಟಿಯಾಗಿ, ಅಥವಾ ದಾಸಿಯರಾಗಿ ವರ್ತಿಸುವ ಸಮೂಹ ಮಾಧ್ಯಮಗಳು ಭಾರತದಲ್ಲಿ ಹಾಗೂ ವಿದೇಶಗಳಲ್ಲಿ ಲೋಹಿಯಾ ಅವರ ಚಾರಿತ್ರ್ಯವಧೆ ಮಾಡಿದಷ್ಟು ಕ್ರೂರವಾಗಿ ಬೇರಾವ ಸಾರ್ವಜನಿಕ ವ್ಯಕ್ತಿಗಳ ಚಾರಿತ್ರ್ಯವಧೆಯನ್ನೂ ಮಾಡಿಲ್ಲ. ಲೋಹಿಯಾ ಅವರ ಮಾತುಗಳನ್ನು ವಿಕೃತಗೊಳಿಸುತ್ತಾ, ಅವರ ಮಾತು ಹಾಗೂ ಕ್ರಿಯೆಗಳ ಆಳದ ಅರ್ಥವನ್ನು ಗ್ರಹಿಸದೆ, ಕೇವಲ ಮೇಲ್ಪದರದ ಅರ್ಥವನ್ನಷ್ಟೆ ಬಿಂಬಿಸುತ್ತಾ ಸಮೂಹ ಮಾಧ್ಯಮಗಳು ಈ ವಿಕೃತೀಕರಣದ ಕೆಲಸವನ್ನು ಯಶಸ್ವಿಯಾಗಿ ಮಾಡಿಬಿಟ್ಟವು.

ಉದಾಹರಣೆಗೆ, ಜವಾಹರಲಾಲ್ ನೆಹರೂ ಅವರು ತಮ್ಮ ತಂದೆ ಮೋತಿಲಾಲ್‌ನೆಹರೂ ಅವರನ್ನು 'ಮಾನವರ ಮಧ್ಯೆ ಇರುವ ರಾಜಕುಮಾರ' ಎಂದು ವರ್ಣಿಸಿದಾಗ, ಈ ವರ್ಣನೆಯಲ್ಲಿ ಆಳುವವನು ಹಾಗೂ ಆಳಿಸಿಕೊಳ್ಳುವವನ ನಡುವೆ, ರಾಜಕುಮಾರ ಹಾಗೂ ಸಾಮಾನ್ಯರ ನಡುವೆ ಅಂತರ ಸೃಷ್ಟಿಸುವ ಧೂರ್ತ

ಹಂಚಿಕೆಯೊಂದು ಇದ್ದುದನ್ನು ಲೋಹಿಯಾ ಥಟ್ಟನೆ ಗುರುತಿಸಿದರು. ಮೋತಿಲಾಲರ ತಂದೆ ದಿಲ್ಲಿಯ ಬ್ರಿಟಿಷ್ ಸರ್ಕಾರದಲ್ಲಿ 'ಕೊತ್ವಾಲ' ಹುದ್ದೆಯಲ್ಲಿ ಇದ್ದುದನ್ನು ನೆನಪಿಸಿದ ಲೋಹಿಯಾ, ಕೊತ್ವಾಲನೊಬ್ಬನ ಮೊಮ್ಮಗನೂ, ನ್ಯಾಯವಾದಿಯೊಬ್ಬನ ಮಗನೂ ಆಗಿರುವ ವ್ಯಕ್ತಿಯೊಬ್ಬ ಪ್ರಧಾನಮಂತ್ರಿ ಹುದ್ದೆಯನ್ನು ಆಕ್ರಮಿಸಿದ್ದರ ಹಿಂದಿರುವ ದೊಡ್ಡ ನಾಟಕೀಯ ಬೆಳವಣಿಗೆಗಳನ್ನು ಭಾರತದ ತರುಣರು ಅರಿತರೆ, ಅವರು ಪಡೆಯಬಹುದಾದ ಮಹತ್ತರ ಪ್ರೇರಣೆ ಹಾಗೂ ಪ್ರೋತ್ಸಾಹ ಎಂಥದೆಂಬುದನ್ನು ಕುರಿತು ಲೋಹಿಯಾ ಮಾತಾಡುತ್ತಾ ಹೋದರು.

ತಕ್ಷಣ ಲೋಹಿಯಾ ವಿರುದ್ಧ ಭಯಂಕರ ಪ್ರತಿದಾಳಿಯೇ ಶುರುವಾಯಿತು. ಸ್ವತಃ ಪ್ರಧಾನಮಂತ್ರಿ ಜವಾಹರಲಾಲರು, ಇದನ್ನು ತಮ್ಮ ವಂಶವನ್ನೇ ಅವಮಾನಗೊಳಿಸುವ ಪ್ರಯತ್ನವೆಂದು ಕರೆದರು. ಆದರೆ, ಲೋಹಿಯಾ ಅಂಥದೇನನ್ನೂ ಮಾಡಿರಲಿಲ್ಲ. ಆಗಷ್ಟೇ ಗುಲಾಮಗಿರಿಯಿಂದ ಬಿಡುಗಡೆಗೊಂಡ ಜನರಿಗೆ ಹೊಸ ಭರವಸೆ ಮೂಡುವಂತೆ ಮಾಡುವ, ಹಾಗೂ ಸ್ವಾತಂತ್ರ್ಯದ ಜೊತೆಜೊತೆಗೆ ಹಳೆಯ ಫ್ಯೂಡಲ್ ವ್ಯವಸ್ಥೆಯ ಬದಲಿಗೆ ಹೊಸ ಸಮಾನತೆಯ ವ್ಯವಸ್ಥೆಯ ಆಗಮನವೂ ಆಗಿದೆಯೆಂದು ಜನ ಅರಿಯುವಂತೆ ಮಾಡುವ ಪ್ರಯತ್ನವನ್ನಷ್ಟೇ ಲೋಹಿಯಾ ಮಾಡಿದ್ದು. ಆದರೆ, ರಾಜಕುಮಾರನೆಂದು ಕರೆಸಿಕೊಳ್ಳುವವನ ಮಗ ತಾನೆಂದು ಬಿಂಬಿಸಿಕೊಳ್ಳುವುದರ ಮೂಲಕ, ಪ್ರಜಾಪ್ರಭುತ್ವ ಸಿದ್ಧಾಂತದ ತಿರುಳನ್ನೇ ನಾಶಮಾಡಲು ನೆಹರೂ ಪ್ರಯತ್ನಿಸುತ್ತಿದ್ದರು. ಭಾರತದಲ್ಲಿ ಮತ್ತೊಂದು ರಾಜಮನೆತನ ರೂಪುಗೊಳ್ಳತೊಡಗಿತ್ತು.

ಮುಂದೊಮ್ಮೆ, ಅಂತರರಾಷ್ಟ್ರೀಯ ಸಮೂಹ ಮಾಧ್ಯಮಗಳು 'ನೆಹರೂ ನಂತರ ಯಾರು?' ಎಂಬ ಬಿಸಿಬಿಸಿ ಚರ್ಚೆಯಲ್ಲಿ ಮುಳುಗಿದಾಗ, ಭಾರತದಲ್ಲಿ ಪ್ರಧಾನಮಂತ್ರಿ ಸ್ಥಾನಕ್ಕೆ ಲಾಯಕ್ಕಾದ ವ್ಯಕ್ತಿಯಾರೆಂಬುದನ್ನು ಕುರಿತು ಬರಹಗಾರರು ಹಾಗೂ ಪತ್ರಕರ್ತರು ತಮ್ಮ ತಮ್ಮಲ್ಲೇ ಕದನಕ್ಕಿಳಿದಿದ್ದರು. ಆಗ, ತಮ್ಮ ನಂತರ ತಮ್ಮ ಮಗಳೇ ಪ್ರಧಾನಿಯಾಗುವಂತೆ ಮಾಡಲು ನೆಹರೂ ಸಾಕಷ್ಟು ಎಚ್ಚರಿಕೆ ವಹಿದ್ದರೆಂದು ಭವಿಷ್ಯ ನುಡಿಯುವ ಮೂಲಕ ಲೋಹಿಯಾ ಆ ಅರ್ಥಹೀನ ಚರ್ಚೆಯನ್ನು ಕೊನೆಗೊಳಿಸಲೆತ್ನಿಸಿದ್ದರು. ಅಲ್ಲದೆ 'ನೀವೀಗ ಬೆಳಗಾಗೆದ್ದು ಪತ್ರಿಕೆಗಳಲ್ಲಿ ನೋಡಿ ನೋಡಿ ಸುಸ್ತಾಗಿರುವ ಸೊರಗಿದ ಮುಖದ ಬದಲಿಗೆ, ಹೊಳೆಯುವ ನಗುಮುಖವೊಂದು ಪ್ರತಿದಿನ ಬೆಳಗಿನ ಪತ್ರಿಕೆಗಳಲ್ಲಿ ನಿಮ್ಮನ್ನು ಎದುರಾಗುತ್ತದೆ' ಎಂದು ತಮಾಷೆ ಮಾಡಿದ್ದರು. ಜೊತೆಗೇ, ಪುರುಷಪ್ರಧಾನ ಸಮಾಜವೊಂದರಲ್ಲಿ ಮಹಿಳಾ ಪ್ರಧಾನ ಮಂತ್ರಿಯೊಬ್ಬರು ಎದುರಿಸಬೇಕಾಗಿ ಬರುವ ಕ್ಷುದ್ರ ದಾಳಿಗಳನ್ನು

ಕುರಿತು ಆತಂಕ ಹಾಗೂ ಕಾಳಜಿ ವ್ಯಕ್ತಪಡಿಸಿದ್ದರು. ಈ ಭವಿಷ್ಯವಾಣಿಯ ಸಂಬಂಧದಲ್ಲಿ 1958ರಲ್ಲಿ ಸಮೂಹಮಾಧ್ಯಮಗಳು ತೋರಿದ ತಾತ್ಸಾರ ಹಾಗೂ ಮಾಡಿದ ಗೇಲಿಯ ಬಗೆಗೆ ಲೋಹಿಯಾ ಅಷ್ಟು ತಲೆಕೆಡಿಸಿಕೊಳ್ಳಲಿಲ್ಲ. ಅಂದು ಅವರನ್ನು ಹೀಗಳೆದವರೇ ಕೊನೆಗೆ ಸೋಲನ್ನಪ್ಪಬೇಕಾಯಿತು.

ಸಮಾಜವಾದದ ಮೂಲವನ್ನು ವೈದಿಕ ಸಾಹಿತ್ಯದಲ್ಲಿ ಅಥವಾ ಏಸುಕ್ರಿಸ್ತನ ಬೋಧನೆಗಳಲ್ಲಿ ಹುಡುಕುವ ಪ್ರಯತ್ನಗಳನ್ನು ಕೆಲವು ರಾಜಕೀಯ ನಾಯಕರು ಮಾಡಿದ್ದರೂ, ''ಸಮಾಜವಾದ'' ಎಂಬ ತತ್ವ ಹುಟ್ಟಿದ್ದು ಈಚಿನ ಶತಮಾನಗಳಲ್ಲಿ ಎಂಬುದು ನಿರ್ವಿವಾದ. 'ಸಮಾಜವಾದ' ಎಂಬ ಶಬ್ದ ಮೊದಲು ಕಾಣಿಸಿಕೊಂಡಿದ್ದು 1830ರಲ್ಲಿ. ಯೂರೋಪಿನ ಚಿಂತಕರು ಹಾಗೂ ಬರಹಗಾರರು ಕೆಲವೊಮ್ಮೆ ಸಮಾಜವಾದಿ ತತ್ವವನ್ನು ಕ್ರಿಶ್ಚಿಯನ್ ಧಾರ್ಮಿಕ ನೀತಿಗಳ ಜೊತೆಗೆ ತಳಕು ಹಾಕಿ ಸಮಾಜವಾದ ಎಂಬ ಶಬ್ದಕ್ಕೆ ಹಲವು ಬಗೆಯ ವ್ಯಾಖ್ಯಾನಗಳನ್ನು ನೀಡಿದ್ದರೂ, ಈ ಎಲ್ಲ ಅರ್ಥಗಳನ್ನೂ ಕ್ರೋಢೀಕರಿಸಿ ಕಾರ್ಲ್‌ಮಾರ್ಕ್ಸ್ ಅವನ್ನು ತನ್ನ ವೈಜ್ಞಾನಿಕ ಸಮಾಜವಾದದ ಕಲ್ಪನೆಯ ಜೊತೆಗೆ ಬೆಸೆದ. 1864ರಲ್ಲಿ ತಾನು ಸ್ಥಾಪಿಸಿದ 'ದ ಫಸ್ಟ್ ಇಂಟರ್‌ನ್ಯಾಷನಲ್' ಮೂಲಕ ಮಾರ್ಕ್ಸ್ ತನ್ನ ಸಮಾಜವಾದಿ ಚಿಂತನೆಗಳು ಇತರರ ಸಮಾಜವಾದಕ್ಕಿಂತ (ಇವರನ್ನು ಆದರ್ಶರಾಜ್ಯ -utopian- ಕಲ್ಪನೆಯ ಸಮಾಜವಾದಿಗಳೆಂದು ಮಾರ್ಕ್ಸ್ ಕರೆದ.) ಹೇಗೆ ಭಿನ್ನವೆಂದು ತೋರಿಸಲಾರಂಭಿಸಿದ. ಆದರೆ ವೈಜ್ಞಾನಿಕ ಸಮಾಜವಾದಿಗಳು ಹಾಗೂ ಆದರ್ಶರಾಜ್ಯ ಕಲ್ಪನೆಯ ಸಮಾಜವಾದಿಗಳಿಬ್ಬರಿಗೂ ಸಮಾನವಾದ ಒಂದು ನಂಬಿಕೆಯಿತ್ತು. ದುಡಿಯುವ ವರ್ಗದ ಅಂತರರಾಷ್ಟ್ರೀಯ ಭ್ರಾತೃತ್ವದ ಬಗೆಗೆ ಹಾಗೂ ತಮ್ಮನ್ನು ಕಟ್ಟಿಹಾಕಿರುವ ಸರಪಳಿಯನ್ನು ಹರಿದೊಗೆಯುವ ಏಕಮಾತ್ರ ಸಾಧನವೆಂದರೆ ದುಡಿಯುವ ವರ್ಗದ ಏಕತೆ ಎಂಬುದನ್ನು ಕುರಿತು ಅವರಿಗಿದ್ದ ಆಳವಾದ ನಂಬಿಕೆ ಅದು. 1876ರಲ್ಲಿ 'ದ ಫಸ್ಟ್ ಇಂಟರ್‌ನ್ಯಾಷನಲ್'ಅನ್ನು ವಿಸರ್ಜಿಸಲಾಯಿತು. 1889ರಲ್ಲಿ 'ದ ಸೆಕೆಂಡ್ ಇಂಟರ್‌ನ್ಯಾಷನಲ್' ಸ್ಥಾಪಿತವಾಯಿತು. ಅಷ್ಟು ಹೊತ್ತಿಗಾಗಲೇ ಸಮಾಜವಾದಿಗಳು ಯೂರೋಪಿನಲ್ಲಿ ಅತ್ಯಂತ ಮಹತ್ವದ ರಾಜಕೀಯ ಶಕ್ತಿಯಾಗಿ ರೂಪುಗೊಳ್ಳ ತೊಡಗಿದ್ದರು. ಭವಿಷ್ಯದ ಜಗತ್ತು ದುಡಿಯುವ ವರ್ಗಕ್ಕೆ ಸೇರಿದ್ದು ಎಂಬ ನಂಬಿಕೆ ಆಗ ದೃಢವಾಗತೊಡಗಿತ್ತು.

ಆದರೆ ಮೊದಲನೆಯ ಮಹಾಯುದ್ಧ ಜಾಗತಿಕ ಸಮಾಜವಾದದ ಕನಸುಗಳನ್ನು (ಅಥವಾ ಭ್ರಮೆಗಳನ್ನು) ಕೊಂದುಬಿಟ್ಟಿತು. ಕಾರಣ, ಆಗ ಕಾರ್ಮಿಕರು ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಂಡದ್ದು ತಮ್ಮನ್ನು ತುಳಿಯುತ್ತಿದ್ದ ಶೋಷಕರ ವಿರುದ್ಧ

ಅಲ್ಲ. ಬದಲಿಗೆ, ನಿನ್ನೆ ಮೊನ್ನೆಯವರೆಗೂ ತಾವು ವಿರೋಧಿಸುತ್ತಿದ್ದ ಶೋಷಕರನ್ನೂ ಅವರು ಆಳುತ್ತಿದ್ದ ತಮ್ಮ ತಾಯ್ನಾಡುಗಳನ್ನೂ ರಕ್ಷಿಸಲು ಅವರು ಶಸ್ತ್ರಗಳನ್ನು ಬಳಸಬೇಕಾಯಿತು. ಹೀಗೆ 'ಧೀರ ಹೊಸಜಗತ್ತಿನ' ಕನಸು ಮುರುಟಿಹೋದ ಮೇಲೆ ಉಳಿದದ್ದು ಪಾರ್ಲಿಮೆಂಟರಿ ಅಥವಾ ಇನ್ನಿತರ ಮಾರ್ಗಗಳಲ್ಲಿ ಅಧಿಕಾರ ಹಿಡಿಯುವ ಮೂಲಕ ಸಮಾಜವಾದವು ದುಡಿಯುವ ವರ್ಗಕ್ಕೆ ಹೊಸ ಬದುಕನ್ನು ಕೊಡಬಲ್ಲದು ಎಂಬ ಆಸೆ ಮಾತ್ರ. ಹಿಟ್ಲರ್ ಹಾಗೂ ಇತರೆ ಫ್ಯಾಸಿಸ್ಟ್ ನಾಯಕರು ಯೂರೋಪಿನ ಕೇಂದ್ರರಂಗದಲ್ಲಿದ್ದ ಕಾಲದಲ್ಲಿ, ರಷ್ಯನ್ ಕ್ರಾಂತಿ ಹಾಗೂ ಎರಡನೆಯ ಮಹಾಯುದ್ಧದ ನಡುವಿನ ಅವಧಿ ಹಲವು ತಾತ್ವಿಕ ಅಲ್ಲೋಲ ಕಲ್ಲೋಲಗಳನ್ನು ಉಂಟು ಮಾಡಿತು. ಇದರ ಫಲವಾಗಿ, ಕಾರ್ಮಿಕರು ತಂತಮ್ಮ ರಾಷ್ಟ್ರೀಯ ಕೋಶಗಳ ಬಂಧಿಯಾಗಿಬಿಟ್ಟರು; ಕ್ರಮೇಣ ಯೂರೋಪಿನ ಬಹುತೇಕ ಭಾಗವನ್ನು ನಾಶಮಾಡಿದ ಸೈನ್ಯಗಳ ಭಾಗವಾಗಿಬಿಟ್ಟರು. ಆಗ ಬರ್ಲಿನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದ ಲೋಹಿಯಾ, ಕಾರ್ಮಿಕ ವರ್ಗ ಹಾಗೂ ಸಮಾಜವಾದಗಳ ಅಂತರ ರಾಷ್ಟ್ರೀಯತಾವಾದದ ಅಣಕದಂತಿದ್ದ ಈ ಪ್ರಳಯರೂಪಿ ಬೆಳವಣಿಗೆಗಳನ್ನು ಕುತೂಹಲದಿಂದ ಗಮನಿಸುತ್ತಿದ್ದ ಪ್ರೇಕ್ಷಕರಾಗಿದ್ದರು. ಪ್ರಾಯಶಃ ಈ ಘಟ್ಟದಲ್ಲೇ ಲೋಹಿಯಾ ಸತ್ಯದ ಹುಡುಕಾಟದಲ್ಲಿ ತೊಡಗಿದ್ದು. ಈ ಹುಡುಕಾಟ ಅವರನ್ನು ಮಾರ್ಕ್ಸ್‌ವಾದವೂ ಸೇರಿದಂತೆ ಎಲ್ಲ ಸಿದ್ಧಾಂತಗಳ ಬದ್ಧವೈರಿಯನ್ನಾಗಿ ಮಾಡಿತು. ಜೊತೆಗೇ ಅವರನ್ನೊಬ್ಬ ಮೂರ್ತಿಭಂಜಕರನ್ನಾಗಿಯೂ ಮಾಡಿತು. ಲೋಹಿಯಾ ತಮ್ಮ ಖಾಸಗಿ ಹಾಗೂ ರಾಜಕೀಯ ಬದುಕುಗಳೆರಡರಲ್ಲೂ ಚಿಂತನೆ ಹಾಗೂ ಕ್ರಿಯೆಗಳನ್ನು ಬೆಸೆಯುವ ವ್ಯಕ್ತಿಯಾಗಿ ರೂಪುಗೊಂಡದ್ದು ಕೂಡ ಈ ಹುಡುಕಾಟದಿಂದಲೇ.

ಬಂಡವಾಳವಾದ ಹಾಗೂ ಕಮ್ಯುನಿಸಂ ಎರಡನ್ನೂ ಲೋಹಿಯಾ ತಿರಸ್ಕರಿಸಿದರು. ಇವೆರಡೂ ಸಿದ್ಧಾಂತಗಳಲ್ಲಿ 'ಆರ್ಥಿಕ ಗುರಿಯುಳ್ಳ ಸಮುದಾಯ'ದ ಕಲ್ಪನೆಯೇ ಪ್ರಧಾನ. ಹೀಗಾಗಿ ಬಹುಸಂಖ್ಯಾತ ಮಾನವ ಸಮುದಾಯದ ಸಮಸ್ಯೆಗಳನ್ನು ಅವು ಸಮರ್ಥವಾಗಿ ಅರಿಯಲಾರವು ಎಂಬುದನ್ನು ಅವರ ಬುದ್ಧಿಜೀವಿ ಕಣ್ಣು ಗ್ರಹಿಸಿಬಿಟ್ಟಿತ್ತು. ಆರ್ಥಿಕ ಪ್ರಜಾಪ್ರಭುತ್ವಕ್ಕೆ ಬೇಕಾದ ಪರಿಸ್ಥಿತಿಯನ್ನು ಕಮ್ಯುನಿಸಂ ನಿರ್ಮಿಸುತ್ತದೆ ಹಾಗೂ ರಾಜಕೀಯ ಪ್ರಜಾಪ್ರಭುತ್ವ ಅರಳಲು ಬಂಡವಾಳವಾದವು ಸಹಾಯಕವಾಗುತ್ತದೆ ಎಂಬ ವಾದವನ್ನು ಲೋಹಿಯಾ ಎಂದೂ ಒಪ್ಪಲಿಲ್ಲ. 'ಉತ್ಪಾದನೆಯ ತಂತ್ರವನ್ನು ಕಮ್ಯುನಿಸಂ ಪಡೆದಿರುವುದೇ ಬಂಡವಾಳದಿಂದ. ಹೀಗಾಗಿ ಅದು ಉತ್ಪಾದನೆಯ ಬಂಡವಾಳವಾದಿ ಸಂಬಂಧಗಳನ್ನು ಮಾತ್ರ ನಾಶಮಾಡಲೆತ್ನಿಸುತ್ತದೆ' ಎಂಬುದು ಲೋಹಿಯಾ ಅವರ ವಾದ. ಸ್ವತಃ

ಬಂಡವಾಳವಾದಕ್ಕೇ ಸಾಧ್ಯವಾಗದೇ ಹೋದ ಬಂಡವಾಳವಾದಿ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸುವ ಹಾಗೂ ಅದನ್ನು ಮುಂದುವರಿಸುವ ಕಾರ್ಯವನ್ನು ತಾನು ಮಾಡುತಿದ್ದೇನೆಂದು ಕಮ್ಯುನಿಸಂ ಹೇಳಿಕೊಳ್ಳುತ್ತಿದ್ದುದನ್ನು ಲೋಹಿಯಾ ಎತ್ತಿ ತೋರಿಸಿದರು.

ಲೋಹಿಯಾ ಅವರ ಪ್ರಕಾರ, ಬಂಡವಾಳವಾದ ಅಥವಾ ಕಮ್ಯುನಿಸಂಗಳಿಗೆ ಹೋಲಿಸಿದರೆ, ಸಮಾಜವಾದ ಒಂದು ಹೊಸ ಸಿದ್ಧಾಂತವಾಗಿತ್ತು. ಬಂಡವಾಳವಾದ ತಂದಿರುವ ವಿಪತ್ತುಗಳಿಂದ ಮಾನವಕುಲವನ್ನು ಪಾರುಮಾಡಲು ಸಮಾಜವಾದಿ ಸಿದ್ಧಾಂತ ತನ್ನದೇ ಆದ ತಾತ್ವಿಕತೆ ಹಾಗೂ ಕಾರ್ಯವಿಧಾನಗಳನ್ನು ರೂಪಿಸಿ ಕೊಳ್ಳಬೇಕೆಂದು ಲೋಹಿಯಾ ಬಯಸಿದ್ದರು. ಯೂರೋಪಿಯನ್ ಸಮಾಜವಾದ ಬರುಬರುತ್ತಾ Welfare Statism ಆಗಿದ್ದನ್ನು ಕಂಡಿದ್ದ ಲೋಹಿಯಾ, ಈಗಾಗಲೇ ಜಾಗತಿಕ ಬಂಡವಾಳವಾದದಿಂದ ಆರ್ಥಿಕ ಸಂಕಷ್ಟಕ್ಕೊಳಗಾಗಿರುವ ಮೂರನೇ ಎರಡರಷ್ಟು ಜಗತ್ತಿಗೆ ಈ ಯೂರೋಪಿಯನ್ ಸಮಾಜವಾದ ಎಷ್ಟು ಅಪ್ರಸ್ತುತವೆಂಬುದನ್ನು ಅರಿತಿದ್ದರು. ಯೂರೋಪಿಯನ್ ಸಮಾಜವಾದಿಗಳು ಉತ್ಪಾದನೆಯ ನ್ಯಾಯಬದ್ಧ ಹಂಚಿಕೆಯನ್ನು ಸಾಧಿಸಿದ್ದು ಸಾಂವಿಧಾನಿಕ ಮಾರ್ಗಗಳ ಮೂಲಕ. ಅದು ಸಾಧ್ಯವಾದದ್ದು ಕೂಡ ಎಷ್ಟೋ ಕಾಲದ ನಂತರ. ಆದರೆ ಲೋಹಿಯಾ ಕಲ್ಪನೆಯ ಸಮಾಜವಾದ ಆದಷ್ಟೂ ಕ್ಷಿಪ್ರವಾಗಿ ಬದಲಾವಣೆ ತರಬಲ್ಲಂಥದ್ದು. ಉತ್ಪಾದನೆಯತ್ತ ಒತ್ತು ಕೊಟ್ಟ ಈ ಸಮಾಜವಾದ ಅಗತ್ಯ ಬಿದ್ದರೆ ಅಸಾಂವಿಧಾನಿಕವಾಗಿಯೂ ಇರಬಹುದು ಎಂದು ಅವರು ಹೇಳುತ್ತಿದ್ದರು.

ಉತ್ಪಾದನೆಯ ಕ್ಷೇತ್ರದ ಮಾತು ಬಂದಾಗ ಲೋಹಿಯಾ ಸಣ್ಣಘಟಕಗಳ ತಂತ್ರಜ್ಞಾನ ಕುರಿತ ತಮ್ಮ ಸಿದ್ಧಾಂತವನ್ನು ಮುಂದಿಟ್ಟರು. ಅವರ ವಾದ ಇದು: ಜಗತ್ತಿನಲ್ಲಿ ಬಿಳಿಯರು ಬಳಸುತ್ತಿರುವ ಉತ್ಪಾದನಾ ಸಾಧನಗಳಿಗೆ ಹೋಲಿಸಿದರೆ, ಜಗತ್ತಿನ ಇತರೆ ಜನರು (ವರ್ಣೀಯರು) ಬಳಸುತ್ತಿರುವ ಉತ್ಪಾದನೆಯ ಸಾಧನಗಳು ಆ ದೇಶಗಳ ಜನಸಂಖ್ಯೆಗೆ ಏನೇನೂ ಸಾಲವು. ಬಂಡವಾಳವಾದ ರೂಪಿಸಿದ ಉತ್ಪಾದನಾ ಮಾದರಿಗಳನ್ನು ಅನುಕರಿಸುವುದರಲ್ಲಿ ಅರ್ಥವಿಲ್ಲ. ಈ ದೃಷ್ಟಿಯಿಂದ ವರ್ಣೀಯರಿಗೆ (ಅಂದರೆ ಪಶ್ಚಿಮೇತರ ಜನರಿಗೆ) ಉತ್ಪಾದನೆಯ ವಿತರಣೆಯ ಹೊಸವಿಧಾನ ಹಾಗೂ ಅದಕ್ಕೆ ತಕ್ಕಂಥ ಒಡೆತನದ ಬಗೆಗಳ ಅಗತ್ಯ ಇದೆಯೆಂದು ಲೋಹಿಯಾ ನಂಬಿದ್ದರು. ವಿಜ್ಞಾನಕ್ಕೆ ಜನರನ್ನು ಕುರಿತು ಇರುವಷ್ಟೇ ಕಾಳಜಿ ಪರಿಸರದ ಕುರಿತೂ ಇರಬೇಕೆಂಬುದು ಲೋಹಿಯಾರ ಬಯಕೆ. ಮಹಾತ್ಮಾ ಗಾಂಧಿಯವರ ವಿಕೇಂದ್ರೀಕೃತ ತಂತ್ರಜ್ಞಾನದ ತತ್ವವನ್ನೇ ಇನ್ನಷ್ಟು ಬೆಳೆಸುತ್ತಾ ಸಣ್ಣ ಸಣ್ಣ ಪಟ್ಟಣಗಳು ಹಾಗೂ ಹಳ್ಳಿಗಳಿಗೆ ಎಟಕುವಂಥ ಯಂತ್ರಗಳನ್ನು ಕಂಡು

ಹಿಡಿಯಬೇಕು ಹಾಗೂ ತಯಾರಿಸಬೇಕು ಎಂದು ಲೋಹಿಯಾ ಹೇಳುತ್ತಿದ್ದರು. ಜೊತೆಗೇ ವಿಜ್ಞಾನ ಮತ್ತು ಯೋಜನೆಗಳ ತುರ್ತಿಗೂ ಒಡೆತನ ಹಾಗೂ ರಾಜಕೀಯ ನಿಯಂತ್ರಣಗಳ ತುರ್ತಿಗೂ ಪರಸ್ಪರ ಸಂಬಂಧವಿರಬೇಕು ಎಂಬುದು ಅವರ ನಿಲುವು.

ದೊಡ್ಡ ದೊಡ್ಡ ಜಮೀನ್ದಾರರನ್ನು ಬಿಟ್ಟು, ಭಾರತದ ಉಳಿದ ಬಹುಸಂಖ್ಯಾತ ರೈತರೇ ಸಮಾಜವಾದವನ್ನು ಬೆಳೆಸುವವರು ಎಂದು ಲೋಹಿಯಾ ನಂಬಿದ್ದರು. ಸಾಂಪ್ರದಾಯಿಕ ಸಮಾಜವಾದ ರೈತಾಪಿ ಜನರನ್ನು ನಡೆಸಿಕೊಂಡ ಲೋಕಾಭಿರಾಮದ ಧಾಟಿಯನ್ನು ಅವರು ಕಟುವಾಗಿ ಟೀಕಿಸುತ್ತಿದ್ದರು: ''ಕಾರ್ಖಾನೆಗಳ ಕಾರ್ಮಿಕರಿಂದ ತಮ್ಮೆಲ್ಲ ಬಲ ಪಡೆದ ಯುರೋಪಿಯನ್ ಸಮಾಜವಾದ ಹಾಗೂ ಕಮ್ಯುನಿಸಂಗಳಿಗೆ ರೈತನನ್ನು ಕಂಡರೆ ಅಷ್ಟಕ್ಕಷ್ಟೆ. ರೈತನೆಂದರೆ ಆಸ್ತಿಯ ಒಡೆಯ ಹಾಗೂ ತಾನು ಬೆಳೆದ ಬೆಳೆಗೆ ಅವನು ಹೆಚ್ಚಿನ ಬೆಲೆ ಪಡೆಯುತ್ತಾನೆ ಎಂದು ಸಮಾಜವಾದ ಹಾಗೂ ಕಮ್ಯುನಿಸಂಗಳೆರಡೂ ನಂಬಿದ್ದೇ ಈ ತಾತ್ಸಾರಕ್ಕೆ ಕಾರಣ'' ಎಂದಿದ್ದರು ಲೋಹಿಯಾ. ಕಾರ್ಖಾನೆಯ ಕಾರ್ಮಿಕ ಮಾತ್ರ ಕ್ರಾಂತಿಯ ಸಾಧನವಾಗಬಲ್ಲ ಎಂಬ ಪಶ್ಚಿಮದ ಸಿದ್ಧಾಂತ ಹೇಗೆ ಅಸಂಗತವೋ, ಹಾಗೆಯೇ ಹೊಸ ವ್ಯವಸ್ಥೆಯನ್ನು ಸೃಷ್ಟಿಸಬಲ್ಲ ಏಕಮಾತ್ರ ಸಾಧನವೆಂದರೆ ರೈತ ಎಂದು ಉಬ್ಬಿಸುವುದೂ ಅಸಂಗತವೇ. ''ಜಗತ್ತಿನ ಇತರೆಡೆಗಳಂತೆ ಭಾರತದಲ್ಲಿ ಕೂಡ ರೈತ ವಹಿಸಬೇಕಾದ ಪಾತ್ರ ನಿಸ್ಸಂದೇಹವಾಗಿ ಮುಖ್ಯವಾದದ್ದು. ಹಾಗೆಯೇ ಉಳಿದವರ ಪಾತ್ರ ಕೂಡ ಅಷ್ಟೇ ಮಹತ್ವದ್ದು. ಕ್ರಾಂತಿಯಲ್ಲಿ ರೈತರು, ಕಾರ್ಮಿಕರು, ಕುಶಲಕರ್ಮಿಗಳು ಹಾಗೂ ನಗರದ ಬಡವರ ನಡುವೆ ಅಗತ್ಯವಾದ ಹೊಂದಾಣಿಕೆ ಸಾಧಿಸಬೇಕೆಂಬ ಕಲ್ಪನೆಯ ಬದಲಿಗೆ, ಸಮಾನ ಸಂಬಂಧಗಳ ಪರಿಕಲ್ಪನೆಯನ್ನು ಚಾಲ್ತಿಗೆ ತರಬೇಕು'' ಎಂಬುದು ಲೋಹಿಯಾರ ನಿಲುವು.

ಹೊಸ ರಾಜಕೀಯ ಹಾಗೂ ಆರ್ಥಿಕ ವ್ಯವಸ್ಥೆಗಾಗಿ ನಡೆಯುವ ಈ ಹೋರಾಟ ಶಾಂತಿಯುತವಾದದ್ದಾಗಿರಬೇಕೆಂದು ಲೋಹಿಯಾ ಪ್ರತಿಪಾದಿಸುತ್ತಿದ್ದರೂ, ಜನತೆಯ ಹೋರಾಟದ ಕೆಲವು ತೀವ್ರ ಘಟ್ಟಗಳಲ್ಲಿ ಹಿಂಸೆಯ ಸ್ಫೋಟದ ಸಾಧ್ಯತೆಯನ್ನೇನೂ ಅವರು ಸಂಪೂರ್ಣವಾಗಿ ನಿರಾಕರಿಸಲಿಲ್ಲ. ಗಾಂಧೀಜಿ ತಮ್ಮ ಸತ್ಯಾಗ್ರಹದ ಕಲ್ಪನೆಯನ್ನು ಆಧ್ಯಾತ್ಮೀಕರಿಸುತ್ತಿದ್ದರು. ಆದರೆ ಲೋಹಿಯಾ ಎಲ್ಲ ಬಗೆಯ ಅನ್ಯಾಯಗಳ ವಿರುದ್ಧ ವೈಯಕ್ತಿಕ ಹಾಗೂ ಸಾಮೂಹಿಕ ನಾಗರಿಕ ಅವಿಧೇಯತೆಯನ್ನು ತೋರುವ ಮೂಲಕ ಹೊಸ ವ್ಯವಸ್ಥೆಯನ್ನು ಸೃಷ್ಟಿಸಬೇಕೆಂದು ಕರೆಕೊಟ್ಟರು.

ಶತಶತಮಾನಗಳಿಂದ ಅಧೋಗತಿಗೊಳ್ಳುತ್ತಲೇ ಇರುವ ಭಾರತೀಯ ಚೇತನ

ಹೊಸಸ್ಫೂರ್ತಿ ಪಡೆಯದಿದ್ದರೆ ಈ ದೇಶ ನಿಜವಾದ ಮುನ್ನಡೆಯನ್ನೆಂದೂ ಸಾಧಿಸಲಾರದೆಂದು ಲೋಹಿಯಾ ತಿಳಿದಿದ್ದರು. ''ಜಾತಿ ಮತ್ತು ಹೆಣ್ಣು- ಇವೆರಡರ ಸಂದರ್ಭದಲ್ಲೂ ಪ್ರಧಾನವಾಗಿ ಕಾಣುವ ಪ್ರತ್ಯೇಕತಾವಾದಿ ಮನಸ್ಥಿತಿಯೇ ಭಾರತೀಯ ಚೇತನದ ಅಧೋಗತಿಗೆ ಮೂಲ ಕಾರಣವಾಗಿದೆ. ಸಾಹಸಕ್ಕಿಳಿಯಬಲ್ಲ ಮನಸ್ಸು ಹಾಗೂ ಸಂತಸ ಚಿಮ್ಮಿಸಬಲ್ಲ ಶಕ್ತಿಗಳೆರಡನ್ನೂ ಕೊಂದುಹಾಕುವ ಭಯಂಕರ ಶಕ್ತಿ ಈ ಪ್ರತ್ಯೇಕತಾವಾದಿ ಮನೋಭಾವಕ್ಕಿದೆ'' ಎಂದಿದ್ದರು ಲೋಹಿಯಾ. ಈ ಎರಡೂ ಬಗೆಯ ಪ್ರತ್ಯೇಕತಾವಾದಿ ಮನಸ್ಸು ಹಾಗೂ ಬಡತನಗಳು ಒಂದನ್ನೊಂದು ಅವಲಂಬಿಸಿವೆ ಎಂದು ನಂಬಿದ್ದ ಲೋಹಿಯಾ, ''ಈ ಎರಡೂ ಬಗೆಯ ಪ್ರತ್ಯೇಕತಾವಾದಗಳ ವಿರುದ್ಧ ನಾವು ಪ್ರಜ್ಞಾಪೂರ್ವಕವಾದ ಹಾಗೂ ನಿರಂತರವಾದ ಯುದ್ಧ ನಡೆಸದಿದ್ದರೆ, ನಾವು ಬಡತನದ ವಿರುದ್ಧ ಮಾಡುವ ಹೋರಾಟವೆಲ್ಲವೂ ವ್ಯರ್ಥ'' ಎಂಬುದನ್ನು ಮನಗಂಡಿದ್ದರು. ಭಾರತೀಯ ಸಾಮಾಜಿಕ ಸಂದರ್ಭ ಕುರಿತ ಲೋಹಿಯಾರ ಈ ಒಳನೋಟವೇ ಸಾಮಾಜಿಕವಾಗಿ ನಿರ್ಲಕ್ಷ್ಯಕ್ಕೊಳಗಾದ ಸಮುದಾಯಗಳಿಗೆ ವಿಶೇಷ ಅವಕಾಶಗಳನ್ನೂ, ಅಗ್ರಪಂಕ್ತಿಯ ಮನ್ನಣೆಯನ್ನೂ ನೀಡಬೇಕಾದ ಅಗತ್ಯ ಕುರಿತ ಸಿದ್ಧಾಂತವೊಂದನ್ನು ರೂಪಿಸುವಂತೆ ಅವರನ್ನು ಪ್ರೇರೇಪಿಸಿತು. 1955ರಲ್ಲಿ ಅವರು ಹುಟ್ಟು ಹಾಕಿದ ಸಮಾಜವಾದಿ ಪಕ್ಷದಲ್ಲಿ ಶೇಕಡಾ ಅರವತ್ತರಷ್ಟು ಪದಾಧಿಕಾರಿಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಜಾತಿಗಳಿಗೆ ಸೇರಿದವರಾಗಿದ್ದರು. ಅಲ್ಪಸಂಖ್ಯಾತರು ಹಾಗೂ ಹೆಂಗಸರನ್ನು ಆರಿಸುವಾಗ ಅವರಲ್ಲಿಯೂ ಹಿಂದುಳಿದ ಜಾತಿಗಳ ಪ್ರತಿನಿಧಿಗಳನ್ನೇ ಆರಿಸಲಾಗುತಿತ್ತು. ಪಾರ್ಲಿಮೆಂಟಿನಿಂದ ಹಿಡಿದು ಸ್ಥಳೀಯ ಸಂಸ್ಥೆಗಳ ಚುನಾಯಿತ ಸ್ಥಾನಗಳವರೆಗೂ ಸಮಾಜವಾದಿ ಪಕ್ಷ ಇದೇ ನಿಯಮವನ್ನು ಅನುಸರಿಸುತ್ತಿತ್ತು.

ಲೋಹಿಯಾರ ಈ ಅಂಗ್ರಪಂಕ್ತಿಯ ಅವಕಾಶಗಳ ಸಿದ್ಧಾಂತವು ಭಾರತೀಯ ವ್ಯವಸ್ಥೆಯನ್ನು ಎಂದಿನಿಂದಲೂ ನಿಯಂತ್ರಿಸುತ್ತಿರುವ ಮೇಲುಜಾತಿಗಳ ಸಿಟ್ಟಿಗೆ ಗುರಿಯಾದದ್ದು ಸಹಜವೇ. ಐದು ಸಾವಿರ ವರ್ಷಗಳಿಂದ ಶೇಕಡಾ ಎಂಬತ್ತರಷ್ಟು ಜನರಿಗೆ ಎರಡನೇ ದರ್ಜೆಯ ಬದುಕು ಹಾಗೂ ಅದೇ ಬಗೆಯ ಸ್ಥಾನಮಾನಗಳನ್ನು ನೀಡಿರುವ ಭಾರತೀಯ ಸಂದರ್ಭದಲ್ಲಿ, ಸಮಾನತೆಯ ಅಮೂರ್ತ ಪರಿಕಲ್ಪನೆಗೆ ನಿಜವಾದ ಅರ್ಥ ತರಲು ಹೊರಟಾಗ ಎದುರಿಸಬೇಕಾದ ವಿರೋಧಗಳ ಅರಿವು ಲೋಹಿಯಾ ಅವರಿಗಿತ್ತು. ದುರ್ಬಲಜಾತಿಗಳಿಗೆ ವಿಶೇಷ ಅವಕಾಶಗಳನ್ನು ಒದಗಿಸಬೇಕೆಂಬ ಲೋಹಿಯಾರ ತತ್ವ ಕುರಿತು ಕಟುಟೀಕೆಯನ್ನು ಆರಂಭಿಸಿದ ಮಾರ್ಕ್ಸ್‌ವಾದಿ ಮಡಿವಂತರು ''ಲೋಹಿಯಾ ಜಾತಿರಾಜಕಾರಣದಲ್ಲಿ ಮುಳುಗಿದ್ದಾರೆ'' ಎಂದು ಟೀಕಿಸತೊಡಗಿದಾಗ, ''ವರ್ಗ ಕೂಡ ಜಡ್ಡುಗಟ್ಟಿದ ಜಾತಿಯೇ'' ಎಂದು ಲೋಹಿಯಾ ಮಾರುತ್ತರವಿತ್ತರು.

ಲೋಹಿಯಾ ಅವರ ಪ್ರಕಾರ ಭಾರತೀಯ ಮಹಿಳೆಯರು ಎರಡುರೀತಿಯಲ್ಲಿ ನಿರಂತರವಾಗಿ ಕಷ್ಟಗಳನ್ನೆದುರಿಸುತ್ತಾ ಬಂದಿದ್ದಾರೆ: ಒಂದು, ಅನಾದಿಕಾಲದಿಂದ ಜಗತ್ತಿನ ಎಲ್ಲೆಡೆಯಲ್ಲೂ ಕಂಡುಬರುವ ಗಂಡಿನ ದಬ್ಬಾಳಿಕೆಯಿಂದ. ಎರಡು, ಅದಕ್ಕಿಂತ ಮುಖ್ಯವಾಗಿ, ಉಸಿರುಕಟ್ಟಿಸುವ ಜಾತಿಪದ್ಧತಿಯಿಂದ. ಹೀಗಾಗಿ, ಭಾರತೀಯ ಸಂದರ್ಭದಲ್ಲಿ ಹೆಣ್ಣು ಗಂಡಿಗೆ ಸಮಾನಳಾಗಿ ನಿಲ್ಲಬೇಕೆಂದರೆ ಅವಳಿಗೆ ವಿಶೇಷ ಅವಕಾಶಗಳನ್ನು ಸೃಷ್ಟಿಸುವುದು ತಕ್ಷಣದ ಅಗತ್ಯ. "ಈ ದೇಶದಲ್ಲಿ ಕಮ್ಯುನಿಸ್ಟ್, ಕಾಂಗ್ರೆಸ್ ಹಾಗೂ ಸಮಾಜವಾದಿ ರಾಜಕಾರಣದಿಂದ ಹಿಡಿದು ಎಲ್ಲ ಬಗೆಯ ರಾಜಕಾರಣದಲ್ಲೂ ಉದ್ದೇಶಪೂರ್ವಕವಾಗಿಯೋ ಅಥವಾ ರೂಢಿಗತವಾಗಿಯೋ ಒಂದು ವಿಷಯ ಕುರಿತು ಮಾತ್ರ ರಾಷ್ಟ್ರೀಯ ಸಹಮತವಿದೆ. ಅದೆಂದರೆ, ಇಡೀ ಜನಸಂಖ್ಯೆಯ ಮುಕ್ಕಾಲು ಭಾಗ ಇರುವ ಶೂದ್ರರನ್ನೂ ಸ್ತ್ರೀಯರನ್ನೂ ತುಳಿಯುವುದು ಹಾಗೂ ಅವರ ಮತದಾನದ ಹಕ್ಕನ್ನು ಕಸಿದುಕೊಳ್ಳುವುದು "ಎಂದು ಲೋಹಿಯಾ 1953ರಲ್ಲಿ ಬರೆದಿದ್ದರು.

ನಗರ ಪ್ರದೇಶದ ಸ್ತ್ರೀವಾದಿಗಳ ಕಾಳಜಿಗಳನ್ನೂ ಒಪ್ಪಿಕೊಂಡು ಅವರನ್ನು ಬೆಂಬಲಿಸುತ್ತಲೇ, ಹೆಣ್ಣಿನ ಸಮಸ್ಯೆಗಳು ಮದುವೆ ಹಾಗೂ ಆಸ್ತಿಹಕ್ಕುಗಳಂಥ ವಿಷಯಗಳನ್ನು ಮೀರಿದಂಥವು ಎಂಬುದನ್ನು ಲೋಹಿಯಾ ಗ್ರಹಿಸಿದ್ದರು. ಈ ಕುರಿತು ಅವರು ಒಂದೆಡೆ ಬರೆದಿದ್ದಾರೆ: "ಬಹುತೇಕ ಭಾರತೀಯ ಹೆಂಗಸರ ಸಮಸ್ಯೆಯೆಂದರೆ ನಲ್ಲಿಯ ನೀರು, ಹಾಗೂ ಶೌಚದ ವ್ಯವಸ್ಥೆ ಇಲ್ಲದಿರುವುದು. ಪ್ರತಿದಿನ ಬೆಳಗು ಬೈಗುಗಳಲ್ಲಿ ದೂರದ ಬಾವಿಯಿಂದಲೋ ಹೊಂಡದಿಂದಲೋ ರಾಡಿಯೆದ್ದ ನೀರನ್ನು ಹೊತ್ತು ತರುವ ಶಾಪಕ್ಕೆ ಭಾರತೀಯ ಸ್ತ್ರೀ ತುತ್ತಾಗಿದ್ದಾಳೆ. ಅವಳು ಶೌಚಕ್ಕೆ ಹೋಗಲು ಸಾಧ್ಯವಿರುವುದು ಸಂಜೆ ಸೂರ್ಯ ಮುಳುಗಿದ ಮೇಲೆ ಅಥವಾ ಬೆಳಿಗ್ಗೆ ಸೂರ್ಯ ಹುಟ್ಟುವ ಮೊದಲು ಮಾತ್ರ. ಅವಳ ಅಡುಗೆಮನೆಯ ಕೊನೆಯಿಲ್ಲದ ಗುಲಾಮಗಿರಿಯ ಜೊತೆಗೆ ಆಕೆ ಬಳಸುವ ಒಲೆಯ ಉಸಿರು ಕಟ್ಟಿಸುವ ಹೊಗೆಯೂ ಸೇರಿಕೊಂಡು ಪರಿಸ್ಥಿತಿ ಇನ್ನಷ್ಟು ಕರುಣಾ ಜನಕವಾಗಿಬಿಟ್ಟಿದೆ." ಲೋಹಿಯಾ ಆರಂಭಿಸಿದ ಸ್ತ್ರೀವಿಮೋಚನಾ ಹೋರಾಟಗಳಲ್ಲಿ ಇವೆರಡೂ ಪ್ರಶ್ನೆಗಳು ಪ್ರಧಾನವಾಗಿದ್ದವು. ಅರೆಹೊಟ್ಟೆ, ನಿರುದ್ಯೋಗ ಹಾಗೂ ಅನ್ಯಾಯಗಳ ವಿರುದ್ಧದ ಹೋರಾಟದಲ್ಲಿ ಹೆಂಗಸರೂ ಪಾಲ್ಗೊಳ್ಳಬೇಕೆಂದು ಲೋಹಿಯಾ ಒತ್ತಾಯಿಸುತ್ತಿದ್ದರು. ಹೆಂಗಸರು ಹೋರಾಟಗಳಲ್ಲಿ ಪಾಲ್ಗೊಳ್ಳದಿದ್ದರೆ ನಮ್ಮ ನಡುವೆ ಯಾವ ಮೂಲಭೂತ ಬದಲಾವಣೆಗಳನ್ನೂ ನಾವು ಕಾಣಲಾರೆವೆಂಬುದು ಅವರ ಖಚಿತ ನಿಲುವಾಗಿತ್ತು. "ಒಮ್ಮೆ ಕಾಫೀಹೌಸೊಂದರಲ್ಲಿ ಹರಟುತ್ತಿದ್ದವರ ಜೊತೆ ಕೂತಿದ್ದೆ. ಮಾತಿನ ನಡುವೆ ಒಬ್ಬ 'ಇಂಥ ಕಾಫೀ ಟೇಬಲ್ಲಿನ ಮಾತುಕತೆಗಳೇ ಫ್ರೆಂಚ್ ಕ್ರಾಂತಿಯನ್ನು ಹುಟ್ಟುಹಾಕಿದ್ದು' ಎಂದ. ನನಗೆ ಮೈ ಉರಿದುಹೋಯಿತು. ಒಬ್ಬ

ಶೂದ್ರನಾಗಲೀ, ಹೆಂಗಸಾಗಲೀ ಇರದೆ ನಿರ್ಜೀವವಾಗಿದ್ದ ಆ ಗುಂಪಿನಲ್ಲಿದ್ದ ನಮ್ಮಂಥ ಗೊಡ್ಡು ಜನರೆಲ್ಲ ನಿನ್ನೆಯ ಮೇವನ್ನೇ ಸುಮ್ಮನೆ ಯಾಂತ್ರಿಕವಾಗಿ ಮೆಲುಕು ಹಾಕುವ ದನಗಳಂತಿದ್ದೆವು'' ಎಂದೊಮ್ಮೆ ಲೋಹಿಯಾ ಬರೆದಿದ್ದರು.

ಪ್ರಜಾಪ್ರಭುತ್ವಕ್ಕೆ ನಿಜವಾದ ಅರ್ಥ ಬರಬೇಕಾದರೆ ಜನಭಾಷೆಗಳನ್ನೇ ಬಳಸಬೇಕಾದ್ದು ಅತ್ಯಗತ್ಯ ಎಂದು ರಾಮಮನೋಹರ ಲೋಹಿಯಾ ನಂಬಿದ್ದರು. ಇಂಗ್ಲಿಷಿನ ಬಿಗಿಹಿಡಿತದಿಂದ ಮಕ್ಕಳನ್ನು ಬಿಡಿಸಿ, ಮಕ್ಕಳಿಗೆ ಅವರ ತಾಯ್ನುಡಿಯಲ್ಲೇ ಕಲಿಸಬೇಕಾದ್ದು ಅತ್ಯಗತ್ಯವೆಂಬುದನ್ನು ಅವರು ಮನಗಂಡಿದ್ದರು. ಇಂಗ್ಲಿಷ್ ಕಲಿತ ಕೆಲವೇ ಜನರ ಪುಟ್ಟ ಗುಂಪು ಭಾರತೀಯ ಭಾಷೆಗಳನ್ನು ಕಡೆಗಣಿಸುವುದರ ಮೂಲಕ ಭಾರತದ ಆತ್ಮವನ್ನೇ ನಾಶಮಾಡುವುದರ ಜೊತೆಗೇ, ಆಡಳಿತ ಹಾಗೂ ಕೈಗಾರಿಕೆಗಳನ್ನೂ ನಿಯಂತ್ರಿಸುತ್ತಿದ್ದುದನ್ನು ಲೋಹಿಯಾ ಉಗ್ರವಾಗಿ ವಿರೋಧಿಸುತ್ತಿದ್ದರು. ಭಾರತದಲ್ಲಿ ನ್ಯಾಯಯುತ ಸಮಾಜ ಸ್ಥಾಪನೆಗಾಗಿ ನಡೆಸಬೇಕಾದ ಹೋರಾಟದ ವ್ಯಾಪ್ತಿಯನ್ನು ಗುರುತಿಸುತ್ತಾ, ಭಾರತೀಯ ಸಮಾಜದಲ್ಲಿ ಹಣ, ಇಂಗ್ಲಿಷ್ ಭಾಷೆ ಹಾಗೂ ಮೇಲುಜಾತಿ–ಈ ಮೂರೂ ಒಂದೆಡೆ ಸೇರಿದರೆ ಸೃಷ್ಟಿಯಾಗುವ ಭಯಾನಕ ಸ್ಥಿತಿ ಕುರಿತು ಲೋಹಿಯಾ ನಮ್ಮನ್ನು ಇನ್ನಿಲ್ಲದಂತೆ ಎಚ್ಚರಿಸಿದ್ದಾರೆ.

ತಾವು ಪ್ರತಿಪಾದಿಸುತ್ತಿದ್ದ ಸಪ್ತಕ್ರಾಂತಿಯ ಪರಿಕಲ್ಪನೆಯನ್ನು ಎಲ್ಲೆಡೆ ಹರಡುವಂಥ ವಾತಾವರಣವನ್ನು ನಿರ್ಮಿಸಲು ಸಮಾಜವಾದಿ ಚಳುವಳಿಯಿಂದ ಸಾಧ್ಯವಾಗಲಿಲ್ಲ ಎಂಬ ಅಂಶ ಲೋಹಿಯಾರನ್ನು ಹತಾಶೆಗೆ ದೂಡಿತು. ಆದರೆ ಇದೇ ಚಳುವಳಿಯಲ್ಲಿ ತಮ್ಮ ಜೊತೆಗಿದ್ದ ಜಯಪ್ರಕಾಶನಾರಾಯಣರಿಗಿಂತ ಲೋಹಿಯಾ ಭಿನ್ನವಾಗಿದ್ದರು. ಅಧಿಕಾರ ಹಿಡಿಯಲು ಸಮಾಜವಾದಿಗಳು ನಡೆಸಬೇಕಾದ ಹೋರಾಟದ ಬೀಸು ಎಷ್ಟು ದೊಡ್ಡದೆಂಬುದನ್ನು ಅರಿತ ಜಯಪ್ರಕಾಶರು ಪಕ್ಷಾತೀತ ರಾಜಕಾರಣದತ್ತ ಸರಿದುಬಿಟ್ಟರು. ಆದರೆ ಲೋಹಿಯಾ ಮಾತ್ರ ಸಮಾಜವಾದಿಗಳು ಬರೇ ಆರೇಳು ವರ್ಷಗಳಲ್ಲಿ ಅಧಿಕಾರ ಹಿಡಿಯಲು ಸಾಧ್ಯವಾಗುವಂತೆ ಪಕ್ಷವನ್ನು ಸಂಘಟಿಸಬೇಕೆಂದು ಅವರನ್ನು ಹುರಿದುಂಬಿಸುತ್ತಾ ಮುನ್ನಡೆದರು. ಜೊತೆಗೇ, ಈ ಹೋರಾಟವನ್ನು ನೂರಾರು ವರ್ಷಗಳ ಕಾಲ ಮುಂದುವರಿಸಬಲ್ಲ ತಾಳ್ಮೆ ಹಾಗೂ ಬದ್ಧತೆ ನಿಮಗಿರಬೇಕೆಂದು ಸಮಾಜವಾದಿ ಗೆಳೆಯರಿಗೆ ತಿಳಿವಳಿಕೆ ಹೇಳುತ್ತಿದ್ದರು.

1962ರ ಚೀನಾ ಆಕ್ರಮಣ ಲೋಹಿಯಾರ ಕಾರ್ಯತಂತ್ರವನ್ನು ಸ್ವಲ್ಪ ಬದಲಿಸುವಂತೆ ಮಾಡಿತು. ಸಮಾಜವಾದಿ ಪಕ್ಷ ಏಕಾಂಗಿಯಾಗಿ ರಾಜಕೀಯ

ಅಧಿಕಾರ ಹಿಡಿಯಬೇಕೆಂಬ ತಮ್ಮ ಹಿಂದಿನ ನಿಲುವನ್ನು ಲೋಹಿಯಾ ಕೊಂಚ ಮಾರ್ಪಡಿಸಿಕೊಳ್ಳಬೇಕಾಯಿತು. ವಿರೋಧ ಪಕ್ಷಗಳೆಲ್ಲ ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳಬೇಕು; ಒಗ್ಗೂಡಿ ಕಾಂಗ್ರೆಸ್ ಆಡಳಿತವನ್ನು ಕಿತ್ತೆಸೆಯಬೇಕು ಎಂದು ಲೋಹಿಯಾ ಕರೆಕೊಟ್ಟರು. ಈ ಕಾಂಗ್ರೆಸ್ ವಿರೋಧೀವಾದದ ಹೊಸ ಕಾರ್ಯತಂತ್ರ 1967ರ ಜನವರಿಯಲ್ಲಿ ನಡೆದ ಪಾರ್ಲಿಮೆಂಟ್ ಹಾಗೂ ರಾಜ್ಯವಿಧಾನಸಭಾ ಚುನಾವಣೆಗಳಲ್ಲಿ ಒಳ್ಳೆಯ ಫಲ ತಂದುಕೊಟ್ಟಿತು. ಲೋಹಿಯಾ ಅವರು ಈ ದೇಶದ ಅತ್ಯಂತ ದೊಡ್ಡ ರಾಜಕೀಯ ನಾಯಕರೆಂಬುದನ್ನು ಎಲ್ಲರೂ ಒಪ್ಪಿಕೊಳ್ಳ ಬೇಕಾಯಿತು. ಆದರೆ, ಆನಂತರ ಲೋಹಿಯಾ ನಮ್ಮನಡುವೆ ಬಹುಕಾಲ ಉಳಿಯಲಿಲ್ಲ. ಆ ವರ್ಷದ ಅಕ್ಟೋಬರ್‌ನಲ್ಲಿ ನಾವು ಕಂಡ ಲೋಹಿಯಾರ ಸಾವು-ಮಧುಲಿಮಯೆ ಅವರು ಹೇಳುವಂತೆ, ವೈದ್ಯಕೀಯ ಹಾಗೂ ಸರ್ಕಾರಿ ನಿರ್ಲಕ್ಷ್ಯದಿಂದ ಉಂಟಾದ ಸಾವು-ಕೇವಲ ಸಮಾಜವಾದಿ ಚಳುವಳಿಗೆ ಮಾತ್ರ ಆಘಾತ ತರಲಿಲ್ಲ; ಅದು ಇಡೀ ದೇಶಕ್ಕೆ ಆದ ದೊಡ್ಡ ಆಘಾತವಾಗಿ ಪರಿಣಮಿಸಿತು.

ರಾಮನೋಹರ ಲೋಹಿಯಾ ಅವರು ಇನ್ನಷ್ಟು ಕಾಲ ಬದುಕಿದ್ದರೆ, ಭಾರತದ ಚರಿತ್ರೆ ಭಿನ್ನವಾದ ಹಾದಿ ಹಿಡಿಯುತ್ತಿತೆಂಬುದರಲ್ಲಿ ಅನುಮಾನವಿಲ್ಲ, ನಿಜ. ಆದರೆ, ಅವರು ತಮ್ಮ ಕನಸುಗಳು ನನಸಾಗುವುದನ್ನು ಕಾಣುತ್ತಾ ಆನಂದಪಡುತ್ತಿದ್ದರೋ, ಅಥವಾ ತಮಗಿಂತ ಮೊದಲು ತೀರಿಕೊಂಡ ಗಾಂಧಿಯಂತೆ ಅಥವಾ ತಮ್ಮ ನಂತರ ಗತಿಸಿದ ಜಯಪ್ರಕಾಶರಂತೆ ಭ್ರಮನಿರಸನಗೊಂಡು ಕಡುದುಃಖಿಯಾಗಿರುತ್ತಿದ್ದರೋ ಹೇಳುವುದು ಕಷ್ಟ. ಆದರೆ, ಮುಂದೊಮ್ಮೆ ಮಾನವ ಕುಲವು ತನಗೆ ಎದುರಾಗುವ ಸಂಕಷ್ಟಗಳ ವಿರುದ್ಧ ತಾನು ಹೋರಾಡುವಾಗಲೆಲ್ಲ ಲೋಹಿಯಾರ ಚಿಂತನೆಗಳ ಮಹತ್ವವನ್ನೂ, ಪ್ರಸ್ತುತತೆಯನ್ನೂ ಅರಿಯಲೇಬೇಕಾಗುತ್ತದೆ. ಲೋಹಿಯಾ ಪ್ರತಿಪಾದಿಸಿದ ಸಪ್ತಕ್ರಾಂತಿಗಳ ಅನುಷ್ಠಾನಕ್ಕಾಗಿ ಸಜ್ಜಾಗಬೇಕಾಗುತ್ತದೆ. ಹೀಗಾಗಿ ಲೋಹಿಯಾ ಚಿಂತನೆಗಳು ಸದಾಕಾಲ ಬದುಕಿ ಉಳಿದೇ ಉಳಿಯುತ್ತವೆ.

ಇಂಗ್ಲಿಷ್‌ನಿಂದ ಕನ್ನಡಕ್ಕೆ : **ನಟರಾಜ್ ಹುಳಿಯಾರ್**

(23 ಮಾರ್ಚ್, 1987ರ ಲೋಹಿಯಾ ಜನ್ಮದಿನದಂದು ಪ್ರಕಟವಾದ ರಾಮಮನೋಹರ ಲೋಹಿಯಾ ಅವರ ಕೆಲವು ಕೃತಿಗಳ ಮರುಮುದ್ರಣಗಳಿಗೆ ಜಾರ್ಜ್ ಫರ್ನಾಂಡಿಸ್ ಅವರು ಬರೆದ ಮುನ್ನುಡಿ.)

ಲೋಹಿಯಾ ಅವರ ಜಾತ್ಯತೀತತೆ

ಮುಖ್ತಾರ್ ಅನೀಸ್

ಭಾರತದಲ್ಲಿ ಜಾತ್ಯತೀತತೆಯೆಂದರೆ ವಿಭಿನ್ನ ಧರ್ಮಗಳ ಬಗ್ಗೆ ರಾಷ್ಟ್ರದ ನಿರಪೇಕ್ಷ ಅಥವಾ ಸಮಾನದೃಷ್ಟಿ ಎಂದರ್ಥ. ದೇಶದ ಬಹುತೇಕ ರಾಜಕೀಯ ಪಕ್ಷಗಳು ಹಾಗೂ ಅವುಗಳ ನಾಯಕರು ಜಾತ್ಯತೀತತೆಯ ಪ್ರತಿಪಾದನೆಯನ್ನು ಮಾಡುತ್ತಾರೆ. ಆದರೆ, ಅವರ ಜಾತ್ಯತೀತತೆಯ ಪರಿಕಲ್ಪನೆ ಅಲ್ಪಸಂಖ್ಯಾತರ ಹಿತದೃಷ್ಟಿಯಿಂದ ವಾದಿಸುವ ಅಥವಾ ಮತೀಯ ಗಲಭೆಗಳಾದಾಗ ಯಾವುದೇ ಹಿಂದೂ ಸಂಪ್ರದಾಯವಾದಿ ಸಂಘಟನೆಯನ್ನು ಕುರಿತು ಟೀಕೆ ಮಾಡುವ ಮಟ್ಟಿಗಷ್ಟೇ ಸೀಮಿತವಾಗಿರುತ್ತದೆ.

ಜಾತ್ಯತೀತ ಪಕ್ಷಗಳ ಮುಖಂಡರೆಂದು ಕರೆದುಕೊಳ್ಳುವವರು ಹಿಂದೂ ಹಾಗೂ ಮುಸಲ್ಮಾನರಲ್ಲಿ ನಡೆದು ಬಂದ ರೂಢಿಗತ ಮೂಢನಂಬಿಕೆಗಳ ಹಾಗೂ ಹಳೆಯ ಸಂಪ್ರದಾಯಗಳ ಕುರಿತು ನಿಷ್ಠುರವಾಗಿ ಮಾತಾಡಲು ಹಿಂಜರಿಯುತ್ತಾರೆ. ಅದರ ಪರಿಣಾಮವಾಗಿ ಎರಡೂ ಧರ್ಮಗಳ ಮೂಲಭೂತವಾದಿ ಶಕ್ತಿಗಳಿಗೆ ಉತ್ತೇಜನ ದೊರೆಯುತ್ತದೆ. ಹಾಗೆಯೇ ದೇಶದ ರಾಜಕೀಯದಲ್ಲಿ ಅವುಗಳ ವರ್ಚಸ್ಸು ಬೆಳೆಯುತ್ತ ನಡೆದಿದೆ. ಜಾತ್ಯತೀತ ಪಕ್ಷಗಳ ಮುಖಂಡರಲ್ಲಿರುವ, ಅಲ್ಪಸಂಖ್ಯಾತರಲ್ಲಿ ಜನಪ್ರಿಯರಾಗಿರಬೇಕೆಂಬ ಕುತ್ಸಿತ ಭಾವನೆಯಿಂದಾಗಿ ದೇಶಕ್ಕೆ ಅಪಾಯವೇ ಹೆಚ್ಚಾಗಿದೆ. ಇದರ ಪರಿಣಾಮವಾಗಿ ಎರಡೂ ಸಂಪ್ರದಾಯಗಳ ನಡುವೆ ವಿನಾಶಕಾರಿ ಶಕ್ತಿಗಳು ಸಕ್ರಿಯವಾಗಿವೆ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ರಾಮಮನೋಹರ ಲೋಹಿಯಾ ಅವರು ಜಾತ್ಯತೀತತೆಗೆ ತಮ್ಮದೇ ಆದ ಪ್ರತ್ಯೇಕ ವ್ಯಾಖ್ಯೆಯನ್ನು ನೀಡಿದರು. ಅವರು ಹಿಂದೂ ಹಾಗೂ ಮುಸ್ಲಿಮರನ್ನು ಹತ್ತಿರ ಹತ್ತಿರ ತರುವ ದೃಷ್ಟಿಯಿಂದ ಅವರ ಅನಿಷ್ಟ ಪರಂಪರೆಗಳ ಹಾಗೂ ಪ್ರತಿಗಾಮಿ ವಿಚಾರಗಳ ತೀಕ್ಷ್ಣ ಖಂಡನೆ ಮಾಡಿದರು.

ನನಗೆ ನೆನಪಿರುವ ಪ್ರಕಾರ, ಅವರು ಸಾರ್ವಜನಿಕ ಸಭೆಗಳಲ್ಲಿ ಹಿಂದೂಗಳ ಜುಟ್ಟು, ಜನಿವಾರ, ನಾಮಗಳನ್ನು ಮತ್ತು ಮುಸ್ಲಿಮರ ಬುರ್ಖಾಗಳನ್ನು ಕುರಿತು ಕಟುವಾಗಿ ಟೀಕಿಸಿದಾಗಲೆಲ್ಲ ಗೊಂದಲವೆದ್ದು ಬಿಡುತ್ತಿತ್ತು. ಅನೇಕ ಸಲ ಅವರ ಸಭೆಗಳಲ್ಲಿ ಅವ್ಯವಸ್ಥೆ ವ್ಯಾಪಿಸಿ ಬಿಡುತ್ತಿತ್ತು . ಆದರೆ ಅನಂತರದ ದಿನಗಳಲ್ಲಿ ಅವರ ವಿಚಾರಗಳಿಗೆ ಬಹಳಷ್ಟು ಜನರ ಸಮ್ಮತಿ ದೊರೆಯಲಾರಂಭಿಸಿತ್ತು. ದೇವಸ್ಥಾನ ಮತ್ತು ಮಸೀದಿಗಳ ಹೊರತಾದ ಸಾರ್ವಜನಿಕ ಜೀವನದಲ್ಲಿ ಸಮಸ್ತ ಭಾರತೀಯರು ಒಂದೇ ಎಂದು ಕಾಣುವಂತಿರಬೇಕೆಂದು ಅವರು ಹಾರೈಸುತ್ತಿದ್ದರು. ಅವರ ಮುಖದ ಮೇಲೆ ತಾವು ಬೇರೆ ಬೇರೆ ಎಂಬುದರ ನೆರಳು ಕೂಡ ಕಾಣಿಸದಿದ್ದಲ್ಲಿ ಒಳ್ಳೆಯದಲ್ಲವೆ? ಎಂಬುದು ಅವರ ಆಶಯವಾಗಿತ್ತು.

ಲೋಹಿಯಾ ಅವರು ತಮ್ಮ ಸಿದ್ಧಾಂತಗಳಿಗೆ ಸದಾ ಬದ್ಧರಾಗಿದ್ದರು. ರಾಜಿ ಮಾಡಿಕೊಳ್ಳುವ ಮನೋವೃತ್ತಿ ಅವರದಾಗಿರಲಿಲ್ಲ. ಜಾತ್ಯತೀತ ಭಾರತದಲ್ಲಿ, ಶಿಕ್ಷಣ ಸಂಸ್ಥೆಗಳಲ್ಲಿ ಧರ್ಮ ಇಲ್ಲವೇ ಜಾತಿಸೂಚಕ ಶಬ್ದಗಳ ಬಳಕೆಯಾಗಲೇ ಬಾರದೆಂಬ ನಂಬಿಕೆ ಅವರದಾಗಿತ್ತು. ಕಾಶಿಯ ಹಿಂದೂ ವಿಶ್ವವಿದ್ಯಾಲಯದಿಂದ 'ಹಿಂದೂ' ಶಬ್ದವನ್ನು ತೆಗೆದು ಹಾಕಬೇಕೆಂಬ ಕೇಂದ್ರ ಸರಕಾರದ ಪ್ರಸ್ತಾಪಕ್ಕೆ ಲೋಹಿಯಾ ಅವರು ಸಂಪೂರ್ಣ ಬೆಂಬಲ ನೀಡಿದ್ದರು. ಅದರಿಂದಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತರು ಅವರ ಮೇಲೆ ಮರಣಾಂತಕ ಹಲ್ಲೆಯನ್ನೂ ನಡೆಸಿದರು. ಅವರಲ್ಲಿ ಸಾಂಪ್ರದಾಯಿಕತೆಯ ವಿರುದ್ಧ ಹೋರಾಡುವ ಅದ್ಭುತ ಸಾಮರ್ಥ್ಯವಿತ್ತು. ತಮ್ಮ ಜನಪ್ರಿಯತೆಯನ್ನು ಪಣಕ್ಕೆ ಒಡ್ಡುವ ಪ್ರಸಂಗ ಬಂದರೂ ಅವರು ಈ ಬಗ್ಗೆ ಹಿಂದೆ-ಮುಂದೆ ನೋಡುತ್ತಿರಲಿಲ್ಲ.

ನನಗೆ ನೆನಪಿನಲ್ಲಿರುವ 1967ರ ಚುನಾವಣೆಯ ಕಾಲದ ಒಂದು ಘಟನೆಯೆಂದರೆ ಅವರು ಮುಸ್ಲಿಮ್ ಸಂಪ್ರದಾಯವಾದಿಗಳ ಸಿಟ್ಟಿಗೆ ಒಳಗಾಗಬೇಕಾಗಿ ಬಂದ ಪ್ರಸಂಗ. ಆಗಿನ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು ರಾಮಪುರದಲ್ಲಿ ಮಾತನಾಡುತ್ತ ಸಮಸ್ತ ಭಾರತೀಯ ನಾಗರಿಕರ ಸಲುವಾಗಿ ಸಮಾನ ನಾಗರಿಕ ಸಂಹಿತೆ ರಚಿಸುವ ಹೇಳಿಕೆ ನೀಡಿದ್ದರು. ಪ್ರಧಾನಿಯವರು ತಮ್ಮ ಹೇಳಿಕೆಯನ್ನು ಹಿಂದೆಗೆದುಕೊಂಡಾರೆಂಬ ಅನುಮಾನದೊಡನೆಯೇ ಲೋಹಿಯಾ ಈ ಹೇಳಿಕೆಗೆ ಬೆಂಬಲ ಸೂಚಿಸಿದರು. ಅವರ ಭವಿಷ್ಯವಾಣಿ ನಿಜವೇ ಆಯಿತು. ಪ್ರಧಾನಿಯವರು ತಮ್ಮ ಹೇಳಿಕೆಯನ್ನು ಹಿಂದೆಗೆದುಕೊಂಡರು. ಲೋಹಿಯಾ ಒಬ್ಬಂಟಿಯಾದರು. ಕಾನಪುರದ ಉರ್ದು ಸಮಾಚಾರ ಪತ್ರಿಕೆ 'ಸಿಯಾಸತ್ ಜದೀದ್' ಕಾಂಗ್ರೆಸ್ ನೀಡಿದ ಕುಮ್ಮಕ್ಕಿನಿಂದ ಲೋಹಿಯಾ ಅವರ ಹೆಸರು ಕೆಡಿಸುವ ಕೆಲಸಕ್ಕೆ ಕೈಹಾಕಿತು. 'ಸಿಯಾಸತ್

ಜದೀದ್' ಸಂಪಾದಕರು ಕಾನಪುರದ ಮುಸ್ಲಿಮ್ ಬಹುಸಂಖ್ಯಾತ ಮತದಾರ ಕ್ಷೇತ್ರವೊಂದರಲ್ಲಿ ಸಮಾಜವಾದಿ ಉಮೇದುವಾರ ಬಾಬೂ ಬದರೇ ಅವರ ಪ್ರತಿಸ್ಪರ್ಧಿಯಾಗಿದ್ದರು. ಲೋಹಿಯಾ ಅವರು ಆ ಮುಸ್ಲಿಮರ ಬಹುಸಂಖ್ಯಾತ ಮೊಹಲ್ಲಾಗಳಲ್ಲಿ ಪ್ರಚಾರ ಸಭೆ ನಡೆಸಿದರು. ತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟರು. ಪರಿಣಾಮವೇನಾಯಿತೆಂದರೆ, ಸಂಯುಕ್ತ ಸಮಾಜವಾದಿ ಪಕ್ಷದ ಮುಸ್ಲಿಂ ಅಭ್ಯರ್ಥಿ ಬಾಬೂ ಬದರೇ ವಿಜಯಿಯಾದರು ಹಾಗೂ 'ಸಿಯಾಸತ್ ಜದೀದ್' ಪತ್ರಿಕೆಯ ಸಂಪಾದಕರು ಠೇವಣಿ ಕಳೆದುಕೊಂಡರು.

ಈ ಚುನಾವಣೆಯ ಮೊದಲು ನಡೆದ ಮತ್ತೊಂದು ಘಟನೆಯ ಬಗ್ಗೆ ವಿವರಿಸುವುದು ಅಗತ್ಯವೆಂದೆನಿಸುತ್ತದೆ. 1966ರಲ್ಲಿ ವಿವಿಧ ಹಿಂದೂ ಸಂಘಟನೆಗಳು 'ಗೋಹತ್ಯಾ ವಿರೋಧಿ ಚಳವಳಿ' ಹೂಡಿದ್ದವು. ಲೋಹಿಯಾ ಅವರು ಈ ಚಳವಳಿಯನ್ನು ಸಮರ್ಥಿಸಿದ್ದರೂ, ಗೋಹತ್ಯೆಯ ಪ್ರಶ್ನೆಗೆ ಸಾಂಪ್ರದಾಯಿಕತೆಯ ಬಣ್ಣ ಬಳಿಯಕೂಡದೆಂಬ ನಿಲುವು ಅವರದಾಗಿತ್ತು. ಮುಸ್ಲಿಮ್ ಸಂಘಟನೆಗಳೂ ಈ ಚಳವಳಿಯನ್ನು ಸಮರ್ಥಿಸಬೇಕೆಂಬುದು ಅವರ ಸೂಚನೆಯಾಗಿತ್ತು. ಚಳುವಳಿ ನಡೆದಾಗಲೇ ಶ್ರೀ ಪ್ರಭುದತ್ತ ಬ್ರಹ್ಮಚಾರಿಯವರು ಮಥುರಾದಲ್ಲಿ ಅನಿರ್ದಿಷ್ಟಕಾಲದ ಉಪವಾಸ ಸತ್ಯಾಗ್ರಹ ಹೂಡಿದರು. ಕೆಲದಿನಗಳ ಬಳಿಕ ಅವರ ಸ್ಥಿತಿ ಗಂಭೀರವಾಗಿ ಬಿಟ್ಟಿತು. ಮಥುರಾ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶದ ವಾತಾವರಣಕ್ಕೆ ಬಿಸಿಯೇರಿತು. ಶ್ರೀಪ್ರಭುದತ್ತ ಬ್ರಹ್ಮಚಾರಿಯವರು ತಮ್ಮ ಉಪವಾಸ ವ್ರತ ಮುರಿಯಬೇಕೆಂದು ಲೋಹಿಯಾ ಅವರು ನಿವೇದಿಸಿಕೊಂಡರು. ಕೊನೆಗೆ ಲೋಹಿಯಾ ಅವರು ಸ್ವತಃ ಮಥುರಾಕ್ಕೆ ಹೋಗಿ ಬ್ರಹ್ಮಚಾರಿಯವರು ಉಪವಾಸ ಸತ್ಯಾಗ್ರಹ ಹಿಂದೆಗೆದುಕೊಳ್ಳುವಂತೆ ಮಾಡಬೇಕೆಂದೂ ಸೂಚಿಸಲಾಯಿತು. ಲೋಹಿಯಾ ಅವರು ಆಗ್ರಾ ಮಾರ್ಗವಾಗಿ ಮಥುರಾಕ್ಕೆ ಪ್ರಯಾಣ ಮಾಡುತ್ತಿದ್ದರು. ಆಕಸ್ಮಿಕವಾಗಿ ಅದೇ ದಿನ ಆಗ್ರಾದಲ್ಲಿ ಉತ್ತರ ಪ್ರದೇಶ ಸಂಯುಕ್ತ ಸಮಾಜವಾದಿ ಪಕ್ಷದ ಮಹಾಕಾರ್ಯದರ್ಶಿ ಅಬ್ಬಾಸ್ ಅಲಿ ಸಹ ಅಲ್ಲಿದ್ದರು. ಲೋಹಿಯಾ ಅವರು ತಮ್ಮೊಡನೆ ಬರುವಂತೆ ಅಲಿಯವರನ್ನು ಆತ್ಮೀಯವಾಗಿ ಒತ್ತಾಯಿಸಿದರು. ಮಥುರಾಕ್ಕೆ ತಾವು ಬರುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ಅಲಿಯವರು ತಿಳಿಸುತ್ತಾ, ತಾವು ಲಖ್ನೋಗೆ ಹಿಂದಿರುಗಲು ಅನುಮತಿ ನೀಡಬೇಕೆಂದು ಲೋಹಿಯಾ ಅವರನ್ನು ಕೇಳಿಕೊಂಡರು. ಲೋಹಿಯಾ ಅವರ ಪ್ರೀತಿಯು ಕೊನೆಗೂ ಅಲಿಯವರನ್ನು ಮಥುರಾಕ್ಕೆ ಕರೆದುಕೊಂಡು ಹೋಯಿತು. ಲೋಹಿಯಾ ಅವರು ಮಥುರಾದಲ್ಲಿ ಪ್ರಭುದತ್ತ ಬ್ರಹ್ಮಚಾರಿಯವರೊಡನೆ ಏಕಾಂತದಲ್ಲಿ ಭೇಟಿಯಾಗಿ, ಅಬ್ಬಾಸ ಅಲಿಯವರ ಮೂಲಕ ತಮ್ಮ ಉಪವಾಸ ಮುಕ್ತಾಯಗೊಳಿಸಬೇಕೆಂದು

ಕೇಳಿಕೊಂಡರು. ಮುಸ್ಮಲಾನ್ ಬಂಧುವೊಬ್ಬರ ಮೂಲಕ ಈ ಉಪವಾಸ ನಿಂತರೆ ನಿಜಕ್ಕೂ ಗೋಹತ್ಯಾ ಚಳುವಳಿಗೆ ಬಲ ಬರಬಹುದೆಂದೂ, ಅದೊಂದು ರಾಷ್ಟ್ರೀಯ ಮಹತ್ವದ ಸಂಗತಿಯಾಗಬಹುದೆಂದೂ ಲೋಹಿಯಾ ಆಸೆಪಟ್ಟಿದ್ದರು. ಪ್ರಭುದತ್ತ ಬ್ರಹ್ಮಚಾರಿಯವರು ಈ ಮಾತಿಗೆ ಸಮ್ಮತಿಸಲಿಲ್ಲ. ಅವರು ಲೋಹಿಯಾ ಅವರ ಮೂಲಕವೇ ತಾವು ಉಪವಾಸ ನಿಲ್ಲಿಸಲು ಇಚ್ಛಿಸಿದರು; ಉಪವಾಸ ನಿಂತ ಬಳಿಕ ಲೋಹಿಯಾ ಅವರ ಕಾರು ದೆಹಲಿಯ ದಾರಿ ಹಿಡಿಯಿತು. ಅವರು ಪಕ್ಕದಲ್ಲಿದ್ದ ಅಬ್ಬಾಸ್ ಅಲಿಯವರಿಗೆ ತಾವು ಅವರನ್ನು ಮಥುರಾಕ್ಕೆ ಕರೆತಂದ ಉದ್ದೇಶವನ್ನು ವಿವರಿಸಿದರು. ಲೋಹಿಯಾ ಅವರಿಗೆ ಆ ದಿನ ತುಂಬಾ ನಿರಾಸೆಯಾಗಿತ್ತು. "ಈ ದೇಶ ಒಂದಾಗುವ ಬಗೆ ಹೇಗೆ ?" ಎಂದು ಕೇಳಿದ ಅವರು ಮೇಲಿಂದ ಮೇಲೆ ಈ ಉದ್ಗಾರವೆತ್ತುತ್ತಲಿದ್ದರು: "ಇಲ್ಲಿ ಪರಸ್ಪರ ಬೆಸೆಯುವ ಶಕ್ತಿಗಳಿಗಿಂತ ಒಡೆಯುವ ಶಕ್ತಿಗಳೇ ಹೆಚ್ಚು ಸಕ್ರಿಯವಾಗಿವೆ!"

●

ಹಿಂದಿಯಿಂದ ಕನ್ನಡಕ್ಕೆ: ಬಿ.ಎ. ಸನದಿ

ಲೋಹಿಯಾ ನೆನಪುಗಳು

ಕೋಣೆ ಸದಾಶಿವ ಕಾರಂತ

ಡಾ. ರಾಮಮನೋಹರ ಲೋಹಿಯಾ ಎಂದೊಡನೆ ಪರಸ್ಪರ ವಿರೋಧ ವಾದ, ಸಂಘರ್ಷಪೂರ್ಣವಾದ ಚಿತ್ರಗಳು ಮನಸ್ಸಿನಲ್ಲಿ ಮೂಡುತ್ತವೆ. ಕೆಲವರ ಪಾಲಿಗೆ ಕಾಲ್ಪನಿಕವಾದ ಗಾಳಿಯಂತ್ರಗಳತ್ತ ಖಡ್ಗ ಝಳಪಿಸುವ ಸರದಾರನಾಗಿ ಅವರು ಕಂಡರೆ, ಇನ್ನು ಕೆಲವರ ದೃಷ್ಟಿಯಲ್ಲಿ ಯಾರೋ ತನ್ನನ್ನು ಹಿಂಸಿಸುತ್ತಿದ್ದಾರೆಂದು ಸದಾ ಚಡಪಡಿಸುವ ಅತೃಪ್ತ ರಾಜಕಾರಣಿಯಾಗಿ ಲೋಹಿಯಾ ಗೋಚರವಾದರು. ಕೆಲವರಂತೂ ಈತ ಹಾದಿ ತಪ್ಪಿದ ಮಹಾಮೇಧಾವಿ ಎಂದು ತೀರ್ಮಾನಿಸಿದರು. ಅಧಿಕಾರದಲ್ಲಿದ್ದ ಮಂದಿಯಂತೂ ದೇಶದಲ್ಲಿ ಅರಾಜಕತೆ ಮಾಡಲೆಂದೇ ಸೆಡ್ಡು ಹೊಡೆದು ನಿಂತವ ಈತ ಎಂದು ಬಗೆದರು. ತಾವು ನಂಬಿದ ತತ್ತ್ವಗಳ ಬಗ್ಗೆ ಲೋಹಿಯಾ ತಾಳಿದ್ದ ನಿಲುವು, ಸ್ವಾತಂತ್ರ್ಯ ಹೋರಾಟದಲ್ಲಿ ಅವರು ವಹಿಸಿದ ಪಾತ್ರ, ಹಾಗೂ ಅವರ ತ್ಯಾಗ ಸಾಮರ್ಥ್ಯ ಇವುಗಳನ್ನು ಕಂಡ ಕೆಲವು ಜನರಲ್ಲಿ ಕೊಂಚ ಮೆಚ್ಚುಗೆ ಇದ್ದಿತಾದರೂ ಅವರ ಬಗ್ಗೆ ಒಂದು ಥರದ ಭಯವೂ ಇತ್ತು. ವಿರೋಧ ಪಕ್ಷದಲ್ಲಿದ್ದವರೂ ಕೂಡ ಅವರನ್ನು ಸ್ವಲ್ಪ ಗುಮಾನಿಯಿಂದಲೇ ಕಂಡರು. ಅವರ ರಾಜಕೀಯ ಸ್ಥೈರ್ಯ, ಧೋರಣೆಯಲ್ಲಿನ ಸ್ಥಾಯಿ ನಿಲುವು, ಆಲೋಚನೆ ಹಾಗೂ ಹಿಡಿದ ಮಾರ್ಗ ಇತ್ಯಾದಿಗಳನ್ನು ಮೆಚ್ಚಿದವರೂ ಕೂಡ ಈತನೊಡನೆ ಹೆಜ್ಜೆ ಹಾಕಿ ನಡೆದರೆ ಕೇವಲ ಹೊರಗಿನ ಕ್ರಾಂತಿಯಲ್ಲಿ ಮುಳುಗಿ ಹೋಗಿ, ಇಲ್ಲವೇ ಓಟದಲ್ಲಿ ಹಿಂದೆ ಬೀಳುವುದಾಗಿ ದಿಗಿಲುಗೊಂಡರು. ಈ ಯಾವ ಲೆಕ್ಕಾಚಾರಗಳೂ ಸತ್ಯಕ್ಕೆ ಹತ್ತಿರವಾದುವಲ್ಲ. ವಾಸ್ತವವಾಗಿ ಈತ ತುಂಬು ಶ್ರೀಮಂತ ಹೃದಯವನ್ನುಳ್ಳ, ಶ್ರೀಮಂತ ಆಲೋಚನೆಗಳ, ಮಾನವೀಯ ಧೋರಣೆಯ ವಿಶಾಲ ದೃಷ್ಟಿಯುಳ್ಳ ಒಬ್ಬ ಮಹಾವ್ಯಕ್ತಿ. ಇಂದಿನ ಪೌರ್ವಾತ್ಯ ಹಾಗೂ ಪಾಶ್ಚಾತ್ಯ ನಾಗರಿಕತೆಗಳಲ್ಲಿನ ದೋಷಗಳನ್ನು ಅರಿತು ಆ ದೋಷಗಳಿಂದ ಮುಕ್ತವಾದ ಹೊಸದೊಂದು ನಾಗರಿಕತೆಯನ್ನು ಕಟ್ಟುವ ತವಕ ಹೊಂದಿದ್ದ ದ್ರಷ್ಟಾರ ಆತ. ತಾನು ಹೊಸದಾಗಿ

ಕಟ್ಟಬಯಸಿದ್ದ ನಾಗರಿಕತೆಯಲ್ಲಿ ಜಾತಿ ಮತಗಳ ಭೇದವಿರುವುದಿಲ್ಲ; ಹಾಗೆಯೇ ಈ ಹೊಸ ಸನ್ನಿವೇಶದಲ್ಲಿ, ವ್ಯಕ್ತಿ ಅನ್ಯಾಯದ ವಿರುದ್ಧ ವೈಯಕ್ತಿಕ ಹಾಗೂ ಸಾಮೂಹಿಕ ನೆಲೆಯಲ್ಲಿ ನಾಗರಿಕ ಅಸಹಕಾರದ ಮಹತ್ವ ಎಷ್ಟೆಂದು ಅರಿಯುತ್ತಾನೆ. ಇಂತಹ ಕಡೆ ವ್ಯಕ್ತಿ ತನ್ನ ನೆಲೆಯಲ್ಲಿಯೇ ಸ್ಥಿರವಾದದ್ದರ ಜೊತೆ ಜೊತೆಯಲ್ಲೇ ಬದಲಾಗುವುದು ಸಂಯೋಗವಾಗಿರುವುದನ್ನು ಅರಿಯಲು ಪ್ರಯತ್ನಿಸುತ್ತಾನೆ. ಹೋರಾಟದ ಜೊತೆಯಲ್ಲೇ ಒಂದು ಬಗೆಯ ಸಮತೋಲನವನ್ನು ಸಾಧಿಸಲು ಯತ್ನಿಸುತ್ತಾನೆ, ಆ ಮೂಲಕ ನಿರುಮ್ಮಳ ಚಟುವಟಿಕೆಯ ಹೊಸ ನಾಗರಿಕತೆಯಲ್ಲಿ ಆತ ಭಾಗವಹಿಸಲೆಣಿಸುತ್ತಾನೆ.

ನಾನು ಮೊದಲು ಲೋಹಿಯಾರನ್ನು ಭೇಟಿಯಾದದ್ದು 1946 ರಲ್ಲಿ, ಅವರು ಗೋವಾ ವಿಮೋಚನಾ ಚಳವಳಿಯ ಸಂದರ್ಭದಲ್ಲಿ ಅಲ್ಲಿ ಮೊಕ್ಕಾಂ ಹೂಡಿದ್ದಾಗ. ನಾನು ಆಗ ಕಾಂಗ್ರೆಸ್ ಸಮಾಜವಾದಿ ಪಕ್ಷದ ಕರ್ನಾಟಕ ಪ್ರಾಂತೀಯ ಘಟಕದ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೆ. ನಾನು ಕೂಡಲೇ ಬೆಳಗಾವಿಗೆ ಹೋಗಿ ತಮ್ಮನ್ನು ಭೇಟಿ ಮಾಡಬೇಕೆಂದು ಅವರು ತಂತಿ ಕಳಿಸಿದರು. ಅದೇ ದಿನ ರಾತ್ರಿ ರೈಲಿನಲ್ಲಿ ನಾನು ಹುಬ್ಬಳ್ಳಿಯಿಂದ ಪ್ರಯಾಣ ಮಾಡಿ ಮಾರನೇ ದಿನ ಮುಂಜಾನೆ ಬೆಳಗಾವಿ ತಲುಪಿದೆ. ಅವರು ಉಳಿದುಕೊಂಡಿದ್ದ ಜಾಗವನ್ನು ನಾನು ತಲುಪುತ್ತಿದ್ದಂತೆಯೇ ನನ್ನನ್ನು ಅವರು ಕೇಳಿದ ಮೊದಲ ಪ್ರಶ್ನೆಯೆಂದರೆ: ನನ್ನ 'ಬೆಳಗಿನ ಉಪಹಾರ ಆಯಿತೆ' ಎಂದು. 'ಇಲ್ಲ' ಅಂತ ನಾನು ಹೇಳಿದ ಕೂಡಲೇ ಪಕ್ಷದ ಸ್ಥಳೀಯ ಕಾಮ್ರೇಡ್ ಒಬ್ಬರನ್ನು ಕರೆದು ಸಮೀಪದ ಹೋಟಲಿನಲ್ಲಿ ಮೊದಲು ಇವರಿಗೆ ಬೆಳಗಿನ ಉಪಾಹಾರ ಕೊಡಿಸು ಎಂದು ಆತನನ್ನು ನನ್ನ ಜೊತೆಯಲ್ಲಿ ಕಳುಹಿಸಿದರು. ಲೋಹಿಯಾ ಅಂದರೆ ಹೀಗೆ. ತಮ್ಮ ಆತಿಥೇಯರಿಗೆ ತೊಂದರೆ ಕೊಡಲು ಅವರಿಗೆ ಮನಸ್ಸು ಬರಲಿಲ್ಲ; ಹಾಗೆಯೇ ನನ್ನ ಬೆಳಗಿನ ಉಪಾಹಾರವೂ ಸಾಂಗವಾಗಿ ನೆರವೇರಬೇಕು ಎಂಬುದು ಅವರ ಮನಸ್ಸಿನಲ್ಲಿತ್ತು. ಲೋಹಿಯಾರ ದೃಷ್ಟಿಯಲ್ಲಿ ಪಕ್ಷದ ಪ್ರತಿಯೊಬ್ಬ ಕಾಮ್ರೇಡ್ ಕೂಡ ಒಬ್ಬ ಮನುಷ್ಯ, ಕೇವಲ ಕಾರ್ಯಕರ್ತನಲ್ಲ. ಅವರಿಗೂ ತಮ್ಮ ವೈಯಕ್ತಿಕ ಸಮಸ್ಯೆಗಳು, ಬೇಕು ಬೇಡಗಳು ಇರುತ್ತವೆ. ಹಾಗಾಗಿ ಪ್ರತಿಯೊಬ್ಬರ ಅಗತ್ಯಗಳ ಕಡೆ ಅವರ ಗಮನವಿರುತ್ತಿತ್ತು. ಆ ಅಗತ್ಯಗಳನ್ನು ಪೂರೈಸಬೇಕಾದದ್ದು ನಾಯಕರಾದವರ ಕರ್ತವ್ಯವೆಂದು ತಿಳಿದಿದ್ದರು. ಸಮಾಜವಾದಿ ಚಳುವಳಿಯ ಬೇರೆ ಬೇರೆ ಸಾಮರ್ಥ್ಯಗಳಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ಕಾರ್ಯಕರ್ತನ ಯೋಗಕ್ಷೇಮವೂ ಮುಖ್ಯವೆಂದು ಬದುಕಿನುದ್ದಕ್ಕೂ ಅವರು ಬಗೆದಿದ್ದ ಕಾರಣ, ಅವರು ಹಾಗೂ ಅತ್ಯಂತ ಕಿರಿಯರಾದ ಅವರ ಹಾಗೂ ಇಂತಹ ಸಂಗಾತಿಗಳ ನಡುವೆ ಜೊತೆ ನಿಕಟವೂ, ದೃಢವೂ ಆದ

ಬಾಂಧವ್ಯ ಬೆಳೆಯಲು ಸಾಧ್ಯವಾಯಿತು. ಉಪಪ್ರಧಾನ ಮಂತ್ರಿಗಳಾದ ಶ್ರೀ ಮೊರಾರ್ಜಿ ದೇಸಾಯಿಯವರು ಲೋಹಿಯಾರ ನೆನಪಿಗೆ ಗೌರವ ಸಮರ್ಪಿಸುತ್ತಾ, ತಮ್ಮ ಪ್ರಸಾರ ಬಾಷಣದಲ್ಲಿ ಮಹಾತ್ಮಾ ಗಾಂಧಿಯವರನ್ನು ಬಿಟ್ಟರೆ ಲೋಹಿಯಾ ಒಬ್ಬರೇ ಉತ್ಕಟವಾದ ನಿಷ್ಠೆಯ ಹಿಂಬಾಲಕರು ಹಾಗೂ ಸಂಗಾತಿಗಳನ್ನು ಹೊಂದಿದ್ದರೆಂದು ಹೇಳಿದ್ದರು.

ಹೋಟೆಲ್ಲಿನಿಂದ ನಾನು ವಾಪಸ್ಸಾಗುತ್ತಿದ್ದಂತೆಯೇ ನನ್ನ ಹೆಸರೇನೆಂದು ಅವರು ಕೇಳಿದರು. ನನ್ನ ಹೆಸರು ಕಾರಂತ ಅಂತ ಹೇಳಿದೆ. ಅದು ನನಗೆ ಗೊತ್ತು ಆದರೆ ನಿಮ್ಮ ಮನೆಯವರು ಕರೆಯುವ ಹೆಸರು ಹೇಳಿ ಎಂದು ಕೇಳಿದರು; ಅದಾದ ತರುವಾಯ ಹೆಸರಿಟ್ಟೇ ನನ್ನನ್ನು ಕರೆಯುತ್ತಿದ್ದರು. ಒಂದು ಭೇಟಿಗೂ ಇನ್ನೊಂದು ಭೇಟಿಗೂ ಬಹಳ ವರ್ಷಗಳ ಅಂತರವಿದ್ದಾಗ್ಯೂ ನನ್ನ ಪೂರ್ಣ ಹೆಸರನ್ನು ಅವರು ಮರೆತಿರಲಿಲ್ಲ. ಅವರ ವ್ಯಕ್ತಿತ್ವದ ಇನ್ನೊಂದು ಮುಖವನ್ನು ಇದು ಪ್ರಕಟಪಡಿಸುತ್ತದೆ. ಪ್ರತಿಯೊಬ್ಬ ಸಂಗಾತಿಯೂ ತಮ್ಮ ಆಪ್ತವಲಯಕ್ಕೆ ಸೇರಿದವರೆಂಬುದನ್ನು ಸೂಚಿಸುವುದು ಅವರ ಮಾರ್ಗವಾಗಿತ್ತು. ಈ ಮೊದಲ ಮಾತುಕತೆಯಾದ ನಂತರ ಗೋವಾ ವಿಮೋಚನಾ ಚಳವಳಿಯಲ್ಲಿ ನಾನು ಏನು ಮಾಡಬೇಕೆಂಬುದರ ಬಗ್ಗೆ ವಿವರಿಸಿದರು. ಸೆರೆಮನೆಯಿಂದ ಬಿಡುಗಡೆಯಾದ ನಂತರ ಅವರು ಗೋವಾಕ್ಕೆ ಭೇಟಿ ಕೊಟ್ಟ ಕಾರಣವೇನೆಂದು ನನಗೆ ಗೊತ್ತು ಎಂದು ತಿಳಿಸಿದಾಗ, ಏನು ಕಾರಣವಿರಬಹುದು ಹೇಳಿ ಎಂದು ಕೇಳಿದರು. ಹದಿಹರೆಯವನ್ನು ಆಗಷ್ಟೇ ದಾಟುತ್ತಿದ್ದ ನನಗೆ ವಾಸ್ತವವಾಗಿ ಲೋಹಿಯಾರ ಗೋವಾ ಭೇಟಿಯ ಮಹತ್ವ ತಿಳಿದಿರಲಿಲ್ಲ. ವಿಶ್ರಾಂತಿಗಾಗಿ ತಾವು ಅಲ್ಲಿಗೆ ಹೋದದ್ದು ಎಂದು ನಾನಂದಾಗ, ಸುಮ್ಮನೆ ನಕ್ಕುಬಿಟ್ಟರೇ ಹೊರತು ಬೇರೇನೂ ಹೇಳಲಿಲ್ಲ. ಆನಂತರವೇ ನನಗೆ ತಿಳಿದದ್ದು, ಅವರ ಗೋವಾ ಭೇಟಿಯ ಕ್ರಾಂತಿಕಾರಕವಾದ ಮಹತ್ವ. ದೇಶದ ಗಡಿ ಪ್ರದೇಶಗಳಾದ ಗೋವಾ, ನೇಪಾಳ್ ಹಾಗೂ ಮಣಿಪುರ ಇತ್ಯಾದಿಗಳಲ್ಲಿ ಲೋಹಿಯಾರು ಅನುಸರಿಸಿದ್ದ ಕ್ರಮದ ಯಶಸ್ಸಿನ ಹಿನ್ನೆಲೆಯಲ್ಲಿ ಇಡೀ ರಾಷ್ಟ್ರವನ್ನು ಬಿಡುಗಡೆ ಮಾಡುವ ಉಪಾಯಗಳನ್ನು ಚಿಂತಿಸಿದ್ದರು. ನನ್ನ ಆ ಮೊದಲನೇ ಭೇಟಿಯಲ್ಲಿ ತಮ್ಮ ಕ್ರಾಂತಿಕಾರಿ ಸಮರೋಪಾಯದ ಬಗ್ಗೆ ಅವರು ವಿವರಿಸದಿದ್ದುದು ಅರ್ಥಪೂರ್ಣವಾಗಿ ತೋರುತ್ತದೆ. ನಾನಿನ್ನೂ ಚಿಕ್ಕವನಿರುವುದರಿಂದ ಸಮರೋಪಾಯದ ವಿವರಗಳನ್ನು ತಿಳಿಸುವುದು ಅಷ್ಟು ಉಚಿತವಲ್ಲವೆಂದು ಅವರು ಮನಗಂಡರೆಂದು ಊಹಿಸಬಹುದು. ಅವರು ಕೆಲಸ ಮಾಡುತ್ತಿದ್ದ ರೀತಿಯ ಬಗ್ಗೆ ಇದು ತಿಳಿಸಿಕೊಡುತ್ತದೆ. ಪ್ರತಿಯೊಬ್ಬ ಸಂಗಾತಿಯೂ ತನಗೆ ಹತ್ತಿರದವರು ಎಂದು ಮನದಟ್ಟು ಮಾಡುತ್ತಲೇ, ಎಲ್ಲರಿಗೂ ಎಲ್ಲ ವಿಷಯಗಳನ್ನು ತಿಳಿಸಬಾರದೆಂಬ ಎಚ್ಚರವೂ ಅವರಲ್ಲಿತ್ತು. ಪ್ರತಿಯೊಬ್ಬ

ಕಾರ್ಯಕರ್ತರಿಗೂ ಅವರಿಗೆ ಅತ್ಯಂತ ಸೂಕ್ತವಾದ ಕೆಲಸವನ್ನು ವಹಿಸುವುದು ಔಚಿತ್ಯಪೂರ್ಣವೆಂಬುದು ಅವರ ಇಂಗಿತವಾಗಿತ್ತು.

ಕಾನ್‌ಪುರದಲ್ಲಿ ನಡೆದ ಪಕ್ಷದ ಸಮಾವೇಶದಲ್ಲಿ ಅವರು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ನಾನು ಅವರನ್ನು ಎರಡನೇ ಬಾರಿಗೆ ಭೇಟಿಯಾದೆ. ಸಮಾಜವಾದೀ ಚಳವಳಿಯ ಚರಿತ್ರೆಯಲ್ಲಿ ಈ ಸಮಾವೇಶ ಬಹಳ ಪ್ರಮುಖವಾದ ಸ್ಥಾನವನ್ನು ಪಡೆಯಿತು. ಇದು ನಡೆದದ್ದು ಎರಡನೇ ಮಹಾಯುದ್ಧದ ನಂತರ, 'ಭಾರತ ಬಿಟ್ಟು ಹೊರಡಿ' ಚಳವಳಿಯೂ ಆಗಿಹೋದ ಬಳಿಕ. ಆಗಸ್ಟ್ ಚಳವಳಿಯ ಹಿನ್ನೆಲೆಯಲ್ಲಿ ಅನೇಕರು ಪಕ್ಷವನ್ನು ಸೇರಿದ್ದರು; ಈ ಸಮಾವೇಶದ ಸಂದರ್ಭದಲ್ಲೇ ಪಕ್ಷವು ಪ್ರಜಾಸತ್ತಾತ್ಮಕ ಸಮಾಜವಾದವೇ ತನ್ನ ಚಳವಳಿಯ ಧ್ಯೇಯವೆಂಬುದನ್ನು ತನ್ನ ಪತಾಕೆ ಮೇಲೆ ಸ್ಪಷ್ಟವಾಗಿ ಪಡಿ ಮೂಡಿಸಿತು. ಕರಡು ಹೇಳಿಕೆಯ ಪ್ರಸ್ತಾಪದ ಬಗ್ಗೆ ಮಾತನಾಡಬೇಕೆಂದು ಡಾ. ಲೋಹಿಯಾ ನನಗೆ ಒತ್ತಾಯಿಸಿದರು. ಇನ್ನೂ ಅನೇಕರನ್ನು ಅವರು ಆ ಬಗ್ಗೆ ಕೇಳಿರಲೂಬಹುದು. ಅವರಿಗೆ ಹೊಸದಾಗಿ ಸೇರ್ಪಡೆಯಾದವರ ಮನೋಬಲ, ಧೋರಣೆ ಹಾಗೂ ಬೌದ್ಧಿಕ ಮಟ್ಟವನ್ನು ತಿಳಿಯುವ ಇಚ್ಛೆಯುಂಟಾಗಿತ್ತು. ಕರಡು ಪ್ರಸ್ತಾವನೆ ಬಗೆಗೆ ಆಲೋಚಿಸಿ, ಅದರಲ್ಲಿರುವ ಸಂಕೀರ್ಣ ಸೈದ್ಧಾಂತಿಕ ವಿಷಯಗಳನ್ನು ಕುರಿತಂತೆ ಯುವಕರು ಧೈರ್ಯವಾಗಿ ಸಾರ್ವಜನಿಕವಾಗಿ ಮಾತನಾಡುವಂತೆ ಅವರು ಪ್ರೋತ್ಸಾಹ ನೀಡುತ್ತಿದ್ದರು. ಆ ಸಮಾವೇಶದಲ್ಲಿ ಬೇರೆ ಯಾವ ನಾಯಕರೂ ನಾನು ಮಾತನಾಡಬೇಕೆಂದು ಕೇಳಿಕೊಳ್ಳಲಿಲ್ಲ; ಇದೊಂದು ಗಮನಾರ್ಹ ಅಂಶ. ಬೇರೆ ನಾಯಕರು ನನ್ನನ್ನು ಮಾತನಾಡಲು ಕೇಳದೆ ಹೋದದ್ದು ಕೇವಲ ಆಕಸ್ಮಿಕವೇ ? ಲೋಹಿಯಾರೊಬ್ಬರೇ ನನ್ನನ್ನು ಮಾತನಾಡುವಂತೆ ತಿಳಿಸಲು ಕಾರಣವೇನು ? ಪಕ್ಷದ ಸಂಗಾತಿಗಳ ಬೌದ್ಧಿಕ ಮಟ್ಟ ಹಾಗೂ ಅವರ ತರಬೇತಿಯ ಬಗ್ಗೆ ಲೋಹಿಯಾರವರು ಇತರ ನಾಯಕರಿಗಿಂತ ಹೆಚ್ಚು ಒಲವನ್ನು ಹೊಂದಿದ್ದರೆಂಬುದು ಸರ್ವವಿದಿತ; ನನಗಂತೂ ಹಾಗನ್ನಿಸಿದೆ.

ಮತ್ತೆ ನಾನು ಡಾ. ಲೋಹಿಯಾರನ್ನು ಭೇಟಿಯಾದದ್ದು ಹದಿನಾಲ್ಕು ವರ್ಷಗಳ ನಂತರ; ಈ ಅವಧಿಯಲ್ಲಿ ಅದೆಷ್ಟು ಮಹತ್ವದ ಘಟನೆಗಳು ಜರುಗಿಹೋಗಿದ್ದವು ! ಈ ಅವಧಿಯಲ್ಲಿ ಲೋಹಿಯಾ ಮತ್ತು ದಿವಂಗತ ಪ್ರಧಾನಮಂತ್ರಿಯ ರಾಜಕೀಯ ಚಿಂತನೆಯ ನಡುವಣ ಅಂತರ ಬಹಳವಾಗಿತ್ತು, ಲೋಹಿಯಾರಂತೂ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷದ ಬಗ್ಗೆ ಸಂಪೂರ್ಣವಾಗಿ ಭ್ರಮನಿರಸನಗೊಂಡಿದ್ದರು. ಸ್ವಲ್ಪ ಕಾಲ ಭರವಸೆಯನ್ನು ಹುಟ್ಟಿಸಿದ್ದಂಥ ಸಮಾಜವಾದೀ ಚಳವಳಿ ಮೊದಲನೇ ಮಹಾ ಚುನಾವಣೆಯಲ್ಲಿ ಹೀನಾಯವಾದ ಸೋಲನ್ನನುಭವಿಸಿದ್ದು ಇದೇ ಅವಧಿಯಲ್ಲಿ.

ಇದೇ ಅವಧಿಯಲ್ಲಿಯೇ ಪಕ್ಷಕ್ಕೆ ಬಹಳ ಭಾರಿ ಹಿನ್ನಡೆಯುಂಟಾದದ್ದು; ಉದಾಹರಣೆಗೆ ಪಕ್ಷ ಇಬ್ಭಾಗವಾದದ್ದು, ಚಳವಳಿಯಿಂದ ಉನ್ನತಮಟ್ಟದ ನಾಯಕರು ಹೊರಗೆ ಹೋದದ್ದು, ಭಾರತೀಯ ಸಮಾಜವಾದಿಗಳಲ್ಲಿ ಅಗ್ರಮಾನ್ಯರೆಂದು ಯೂಸುಫ್ ಮೆಹರಲೀ ಅವರ ಪ್ರಶಂಸೆಗೆ ಪಾತ್ರರಾಗಿದ್ದ ಆಚಾರ್ಯ ನರೇಂದ್ರ ದೇವರ ಅಕಾಲಿಕ ಮರಣದಿಂದುಂಟಾದ ನಷ್ಟ, ಕೆಳ ಹಂತದ ಕಾರ್ಯಕರ್ತರು ಬಹುತೇಕ ನಿಷ್ಕ್ರಿಯರಾಗಿದ್ದುದು ಇತ್ಯಾದಿ. ಇನ್ಯಾರಾದರೂ ಆಗಿದ್ದರೆ ಈ ಘಟನೆಗಳ ಆಘಾತಕ್ಕೆ ತತ್ತರಿಸಿ ಹೋಗುತ್ತಿದ್ದರು. ಆದರೆ ಲೋಹಿಯಾ ಈ ಸಂಕಷ್ಟಗಳ ಸರಮಾಲೆಯನ್ನು ವಿಜಯಮಾಲೆಯೆಂಬಂತೆ ಕೊರಳಿನಲ್ಲಿ ಧರಿಸಿ ಭಗ್ನಾವಶೇಷದಿಂದ ಮೇಲೆದ್ದರು, ಪಕ್ಷದ ಹೊಸ ಹಾಗೂ ಸಮಗ್ರಧ್ಯೇಯವನ್ನು ಪತಾಕೆಯ ಮೇಲೆ ಮೂಡಿಸಿ ಸಮಾಜವಾದವನ್ನು ಎತ್ತಿ ಹಿಡಿದರು.

ನನ್ನ ವ್ಯಾಸಂಗದ ಬಗ್ಗೆ ನನ್ನಲ್ಲಿ ಹೆಚ್ಚು ಕಾಳಜಿಯಿದ್ದ ಪರಿಣಾಮವಾಗಿ ಆ ವರ್ಷಗಳಲ್ಲಿ ನಾನು ರಾಜಕೀಯವಾಗಿ ಹೆಚ್ಚು ಚಟುವಟಿಕೆಯಿಂದ ಇರಲಿಲ್ಲ. ಅವರನ್ನು ಭೇಟಿ ಮಾಡಿ ತುಂಬಾ ವರ್ಷಗಳಾಗಿದ್ದ ಕಾರಣ, ಮತ್ತೆ ಅವರನ್ನು ಕಾಣುವ ಮೊದಲು ಅವರಿಗೆ ಪತ್ರ ಬರೆಯಬೇಕೆಂದು ನನಗೆ ಅನ್ನಿಸಿತು. ಅವರೊಡನೆ ಸಂದರ್ಶನಕ್ಕೆ ಅವಕಾಶ ಕೇಳುತ್ತಲೇ, ಅದೇ ಪತ್ರದಲ್ಲಿ ಸಮಾಜವಾದೀ ಚಳುವಳಿಯ ನಾಯಕತ್ವವನ್ನು ಕಟುವಾಗಿ ಟೀಕಿಸುತ್ತಾ ಪಕ್ಷ ಈ ದುರ್ಗತಿಗೆ ಇಳಿದಿರಲು ಅವರು ಹಾಗೂ ಜಯಪ್ರಕಾಶ್ ನಾರಾಯಣ್ ಕಾರಣರೆಂದು ತಿಳಿಸಿದ್ದೆ. ನನ್ನ ಟೀಕೆಯನ್ನು ಅವರು ಮನಸ್ಸಿಗೆ ತಂದುಕೊಳ್ಳದೆ, ನಾನು ಅವರನ್ನು ಭೇಟಿಯಾಗಲೆಂದು ಮಾರುತ್ತರ ಬರೆದರು. ಬಹಳ ವರ್ಷಗಳ ಕಾಲ ಚಟುವಟಿಕೆಯಿಂದ ಇರದ ಒಬ್ಬ ಸಾಮಾನ್ಯ ಕಾರ್ಯಕರ್ತನನ್ನು ಅವರು ಬರಮಾಡಿಕೊಂಡ ರೀತಿಯನ್ನು ನಾನೆಂದೂ ಮರೆಯುವಂತಿಲ್ಲ. ನವದೆಹಲಿಯ ತಮ್ಮ ನಿವಾಸದ ವರಾಂಡದಲ್ಲಿ ಅವರು ಕುಳಿತಿದ್ದರು. ನನ್ನನ್ನು ನೋಡಿದ ಕೂಡಲೇ ಹದಿನಾಲ್ಕು ವರ್ಷಗಳ ನಂತರ ನನ್ನನ್ನು ಪತ್ತೆ ಹಚ್ಚಿದರಷ್ಟೇ ಅಲ್ಲ, ಕುಳಿತಲ್ಲಿಂದ ಎದ್ದು ಬಂದು, ಹಿತವಾಗಿ ನನ್ನ ಬೆನ್ನು ತಟ್ಟುತ್ತಾ 'ಹದಿನಾಲ್ಕು ವರ್ಷಗಳು ಅಥವಾ ಇನ್ನೂ ಹೆಚ್ಚಿರಬೇಕು, ನಮ್ಮ ಭೇಟಿ' ಎಂದರು. ಇಷ್ಟು ವರ್ಷ ನಾನು ಏನೇನು ಮಾಡಿದೆ ಇತ್ಯಾದಿಯಾಗಿ ಅವರು ನನ್ನನ್ನು ಪ್ರಶ್ನಿಸಿದರು. ಅವರ ಪ್ರಶ್ನೆಗಳಿಗೆ ಉತ್ತರಿಸಿಯಾದ ಬಳಿಕ ಉಳಿದ ವಿಷಯಗಳನ್ನು ಮಾತನಾಡಲು ಸ್ವಲ್ಪ ಸಮಯ ಗೊತ್ತುಪಡಿಸಬೇಕು ಎಂದು ನಾನು ಕೇಳಿದೆ. ಹಿಂದುಮುಂದು ನೋಡದೆ 'ಆಗಲಿ, ಅದಕ್ಕೇನಂತೆ' ಎಂದರು. ಒಂದೆರಡು ದಿನಗಳ ನಂತರ ಅವರನ್ನು ಭೇಟಿಯಾಗಿ ನನ್ನ ಹೃದಯದ ಒಳಗೆ ಇದ್ದುದೆಲ್ಲವನ್ನೂ ಸಾಂಗವಾಗಿ ಅವರ ಮುಂದೆ ತೋಡಿಕೊಂಡೆ ಜೊತೆಗೆ ಪಕ್ಷದ ನಾಯಕತ್ವವೇ ಅದರ

ದುಸ್ಥಿತಿಗೆ ಕಾರಣವೆಂದು ಮತ್ತೊಮ್ಮೆ ಹೇಳಿದೆ. ಸಮಾಜವಾದಿ ಚಳವಳಿಯನ್ನು ದಿಕ್ಕು ತಪ್ಪಿಸಿದುದೇ ನಾಯಕತ್ವವೆಂದು ಪುನರುಚ್ಚರಿಸಿದೆ. ನಾಯಕತ್ವ ಸರಿಯಾದ ಮಾರ್ಗದರ್ಶನ ನೀಡಿದ್ದ ಪಕ್ಷದಲ್ಲಿ ಹಿಂಬಾಲಕರು ದಿಕ್ಕು ತಪ್ಪುತ್ತಿರಲಿಲ್ಲ, ಇದರಲ್ಲಿ ಅವರ ತಪ್ಪೇನೂ ಇಲ್ಲ, ನಾಯಕರು ಇನ್ನೂ ಚುರುಕಾಗಿ, ಸ್ಥೈರ್ಯದಿಂದ ಕಾರ್ಯತತ್ಪರರಾಗಿದ್ದರೆ, ಪಕ್ಷದ ಬಲ ಇನ್ನೂ ಅನೇಕಪಟ್ಟು ಹೆಚ್ಚುತ್ತದೆಂದು ಹೇಳಿದೆ. ನಾನು ಅವರನ್ನು, ಅವರ ಇತರ ಸಹೋದ್ಯೋಗಿಗಳನ್ನು ದೂಷಿಸುವ ಸಂದರ್ಭದಲ್ಲಿ ನನ್ನ ಮಾತಿಗೆ ಅಡ್ಡಿಪಡಿಸದೆ ಬಹಳ ಗಮನವಿಟ್ಟು ಆಲಿಸಿದರು. ನಾನು ಮಾತು ಮುಗಿಸಿದ ನಂತರ ಒಂದೆರಡು ಕ್ಷಣ ಮೌನವಾಗಿದ್ದು ನಿಧಾನಗತಿಯಲ್ಲಿ ತಾವು ಮಾತನಾಡತೊಡಗಿದರು. "ಅಂದರೆ ನಾವು ಇನ್ನೂ ಹೆಚ್ಚು ನಿಷ್ಠುರವಾಗಿ ರಬೇಕಾಗಿತ್ತು ಅಂತ ತಾನೆ ? ಪ್ರಾಯಶಃ ನೀನು ಹೇಳುವುದು ಸರಿ". ಅವರ ಈ ಹೇಳಿಕೆಯಿಂದ ನನಗೆ ವಿಷಾದವಾಯಿತು. ಅವರ ಮನನೋಯಿಸಿಬಿಟ್ಟೆನೇನೋ ಎಂದು ತಿಳಿದು ನನ್ನ ಒರಟು ಮಾತುಗಳನ್ನು ಕ್ಷಮಿಸಬೇಕೆಂದು ಕೇಳಿಕೊಂಡೆ. ನನ್ನ ಕ್ಷಮೆಯಾಚನೆಯ ಅಗತ್ಯವಿಲ್ಲವೆಂದೂ ಚಳವಳಿಯ ಸಮರ್ಪಕವಾದ ಮುನ್ನಡೆಗೆ ನಾಯಕರು ಹಾಗೂ ಕಾರ್ಯಕರ್ತರು ಪರಸ್ಪರ ವಿಮರ್ಶೆಮಾಡಿಕೊಳ್ಳುವುದು ಆರೋಗ್ಯದ ಲಕ್ಷಣವೆಂದೂ ತಿಳಿಸಿದರು. ಈ ಚರ್ಚೆಯ ಕುರಿತಾಗಿ ಇನ್ನೊಂದು ಅಂಶವನ್ನು ನಾನು ಪ್ರಸ್ತಾಪಿಸಲೇಬೇಕು. ಪಾಶ್ಚಾತ್ಯ ನಾಗರಿಕತೆಯ ಬಗ್ಗೆ ಅವರ ಅನಿಸಿಕೆಗಳು ಚಿರಪರಿಚಿತವಾಗಿರುವಂಥವು. ಪಾಶ್ಚಾತ್ಯ ನಾಗರಿಕತೆಯ ಕೊನೆಗಾಲ ಸಮೀಪವಾಗಿದ್ದು ಇಷ್ಟರಲ್ಲೇ ಅದು ಇನ್ನಿಲ್ಲ ವಾಗುವುದೆಂದು ತೀರ್ಮಾನಿಸಿದ್ದರು. ಆದಾಗ್ಯೂ ಒಮ್ಮೆ ವಿದೇಶ ಯಾತ್ರೆಯೊಂದರಿಂದ ಅವರು ವಾಪಸ್ಸಾದ ಸಂದರ್ಭದಲ್ಲಿ ನೀಡಿದ ಪತ್ರಿಕಾ ಸಂದರ್ಶನದಲ್ಲಿ ಪಾಶ್ಚಾತ್ಯರ ನಗುವಿನಲ್ಲಿ ಹೆಚ್ಚು ಲವಲವಿಕೆ ಯಿರುವುದಾಗಿಯೂ, ಅವರ ಬದುಕಿನಲ್ಲಿ ಹೆಚ್ಚು ಹರ್ಷವಿದೆಯೆಂದೂ ತಿಳಿಸಿದರೆಂದು ವರದಿಯಾಗಿತ್ತು. ಹಾಗಾಗಿ, ಆ ವಿಷಯವಾಗಿ ಅವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಂಡಿದ್ದಾರೆಯೇ ಎಂದು ತಿಳಿಯುವ ಕುತೂಹಲ. ಒಂದು ಸ್ವಲ್ಪ ಅವರನ್ನು ಕೆರಳಿಸೋಣ ಎನ್ನುವ ಹುನ್ನಾರು ಕೂಡ ನನ್ನ ಮನಸ್ಸಿನಲ್ಲಿದ್ದಿತು; ಏಕೆಂದರೆ, ಪ್ರಚೋದಿಸಿದಾಗ ಲೋಹಿಯಾ ಹಾಗೂ ಜೆ.ಪಿ ಸ್ಫೂರ್ತಿಯಿಂದ ಮಾತನಾಡುವುದು ನನ್ನ ಗಮನಕ್ಕೆ ಬಂದಿತ್ತು. ಚಾರಿತ್ರಿಕವಾಗಿ ಗಮನಿಸಿ ಹೇಳುವುದಾದರೆ ಪಾಶ್ಚಾತ್ಯ ನಾಗರಿಕತೆ ಅವಸಾನವಾಗಿ ಹೋಗಿದೆ ಎಂದು ಹೇಳುತ್ತಾ, ಅವರ ಇತ್ತೀಚಿನ ಪ್ರವಾಸದಲ್ಲೇನಾದರೂ ಅದಕ್ಕೆ ವಿರುದ್ಧವಾದಂಥ ಅನುಭವವಾಗಿದೆಯೋ ಹೇಗೆ ಅಂದೆ. ಹಾಗೆ ಹೇಳಿದಾಕ್ಷಣ ಅವರ ಮುಖದ ಮೇಲೆ ಆಶ್ಚರ್ಯದ ಸೂಚನೆ ಕಾಣಿಸಿಕೊಂಡಿತು. ಅಂಥ ಚಹರೆಯನ್ನು ಅವರಲ್ಲಿ ಅದಕ್ಕೆ

ಮೊದಲು ನಾನು ಕಂಡಿರಲಿಲ್ಲ. ಚರ್ಚೆಯನ್ನು ನಾನು ಮುಂದುವರೆಸಲಿಲ್ಲ. ಏಕೆಂದರೆ ಅದರ ಅಗತ್ಯ ಕಾಣಲಿಲ್ಲ. ಅವರ ಆ ಮುಖಭಾವದಿಂದ ನನಗೆ ಸ್ಪಷ್ಟವಾದದ್ದೆಂದರೆ ಪಾಶ್ಚಾತ್ಯ ನಾಗರಿಕತೆಯ ಬಗೆಗಿನ ಅವರ ಅಭಿಪ್ರಾಯದಲ್ಲಿ ಏನೂ ಬದಲಾವಣೆ ಯಾಗಿರಲಿಲ್ಲ.

ಅವರೊಡನೆ ನಾನು ಚರ್ಚೆ ಮಾಡುತ್ತಿರುವಾಗಲೇ ಅವರನ್ನು ಭೇಟಿ ಮಾಡಲು ಕಮ್ಯೂನಿಸ್ಟ್ ನಾಯಕ ಶ್ರೀ ಪಿ.ಸಿ. ಜೋಶಿಯವರು ಬಂದರು. ಓಹ್ ! ಅವರನ್ನು ಲೋಹಿಯಾ ಬರಮಾಡಿಕೊಂಡ ರೀತಿ ಆಪ್ತವಾಗಿತ್ತು. ತಮ್ಮನ್ನು ತುಂಬಾ ಹೀನಾಯವಾಗಿ ಟೀಕಿಸಿದ ಪಕ್ಷದ ನಾಯಕರೊಬ್ಬರು ಬಂದಿದ್ದಾರೆ-ಆ ಪಕ್ಷದವರು ಲೋಹಿಯಾ ಅಮೆರಿಕಾದಿಂದ ಹಣ ತೆಗೆದುಕೊಂಡಿದ್ದಾರೆ ಎನ್ನುವ ಮಟ್ಟದ ಆಪಾದನೆಯನ್ನು ಮಾಡಿದ್ದರು-ಅಷ್ಟಾಗಿಯೂ ಜೋಶಿಯವರನ್ನು ಲೋಹಿಯಾ ಬರಮಾಡಿಕೊಂಡ ಆಪ್ತತೆಯಲ್ಲಿ ಜೋಶಿ ಕರಗಿಹೋದರು. ಆಗ ನನ್ನ ಕಡೆ ತಿರುಗಿ ಲೋಹಿಯಾ ಹೇಳಿದರು. ''ನಮ್ಮ ಪಕ್ಷದ ಸ್ಥಿತಿಯ ಬಗ್ಗೆ ನೀನು ಪ್ರಶ್ನೆ ಮಾಡುತ್ತಿದ್ದೀಯಾ; ಜೋಶಿ ಪಕ್ಷ ಹೇಗಿದೆ ಅಂತ ಅವರನ್ನೇ ಕೇಳು''. ಈ ಒಂದು ವಾಕ್ಯದಲ್ಲಿ ಲೋಹಿಯಾರವರು ದೇಶದಲ್ಲಿನ ಎಡಪಂಥೀಯ ಚಳವಳಿಯ ಬಗ್ಗೆ ತಿಳಿಸಿದ್ದರು. ಈ ಭೇಟಿಯ ಅಂತ್ಯದಲ್ಲಿ ನಾನು ಅವರನ್ನು ಕುರಿತು 'ಈಗ ಮತ್ತೆ ನಾನು ಸಕ್ರಿಯವಾಗಿ ಚಳವಳಿಯಲ್ಲಿ ಭಾಗವಹಿಸಬೇಕೆಂದಿದ್ದೇನೆ, ಏನಾದರೂ ನನಗೆ ಕೆಲಸ ಕೊಡಿ' ಎಂದು ಕೇಳಿದೆ. ತಕ್ಷಣ ಉತ್ತರಿಸಿದರು, ''ಕೆಲಸಕ್ಕೇನು, ಬೇಕಾದಷ್ಟಿದೆ. ''ಮ್ಯಾನ್ ಕೈಂಡ್'' ಪತ್ರಿಕೆಯನ್ನು ಪುನಃ ಪ್ರಾರಂಭಿಸಬೇಕೆಂದಿದ್ದೇನೆ. ಇದರ ಜೊತೆಗೆ ನನಗೆ ಬೇರೆ ರೀತಿಯ ಸಹಾಯದ ಅಗತ್ಯವೂ ಇದೆ''. ಆನಂತರ ತಮ್ಮ ನಿವಾಸದ ಹಿಂಭಾಗಕ್ಕೆ ನನ್ನನ್ನು ಕರೆದುಕೊಂಡು ಔಟ್‌ಹೌಸುಗಳನ್ನು ತೋರಿಸಿದರು. ''ನೀನು ಇಲ್ಲಿ ಕೆಲಸ ಮಾಡಬೇಕಾಗುತ್ತದೆ. ಈ ಕೊಠಡಿಗಳಲ್ಲಿ ಫ್ಯಾನುಗಳಿವೆ. ಫ್ಯಾನುಗಳಿಲ್ಲದೆ ನೀನು ಕೆಲಸ ಮಾಡುವುದು ನನಗಿಷ್ಟವಿಲ್ಲ.'' ಇತ್ಯಾದಿ. ಈ ಭೇಟಿಯ ನಂತರ ಅದೂ ಇದೂ ಬರೆಯುವುದರಲ್ಲಿ ನಾನವರಿಗೆ ಸಹಾಯ ಮಾಡತೊಡಗಿದೆ. ನಮ್ಮ ದೇಶದ ಸಾರ್ವಜನಿಕ ಜೀವನದ ಬಗ್ಗೆ ವಿಷಾದವೆನಿಸಲು ಕಾರಣ, ಅಂಥ ದೊಡ್ಡ ನಾಯಕರಿಗೂ ಸಹ ಪ್ರಾಥಮಿಕ ಸೌಲಭ್ಯಗಳೂ ಇರಲಿಲ್ಲವೆಂಬುದು. ಅವರ ಬದುಕಿನ ಕೊನೆಯ ತನಕ ಒಬ್ಬ ವಿದ್ಯಾರ್ಹತೆಯುಳ್ಳ ಕಾರ್ಯದರ್ಶಿಯಾಗಲಿ, ಗುಮಾಸ್ತರಾಗಲಿ ದೊರೆಯಲಿಲ್ಲ. ಒಬ್ಬ ಶೀಘ್ರಲಿಪಿಕಾರನಿಲ್ಲ, ಅಷ್ಟೆ ಏಕೆ, ಒಬ್ಬ ಬೆರಳಚ್ಚುಗಾರನೂ ಇರಲಿಲ್ಲ. ಈ ಸೇವೆಗಳಿಗಾಗಿ ಸಂಬಳ ಕೊಡಲು ಅವರ ಬಳಿ ಹಣವಿರಲಿಲ್ಲ. ತಮ್ಮ ತತ್ವಗಳಲ್ಲಿ ಕೊಂಚ ರಾಜಿ ಮಾಡಿಕೊಂಡಿದ್ದ ಪಕ್ಷದಲ್ಲಿ, ಮಾರವಾಡಿ ವರ್ತಕರ ಮನೆತನದಲ್ಲಿ ಹುಟ್ಟಿದ್ದ ಲೋಹಿಯಾ ಆರಾಮ ಜೀವನ ನಡೆಸಲು ಅಡ್ಡಿಯೇನೂ

ಇರಲಿಲ್ಲ. ಆದರೆ ಅವರು ಮಾತ್ರ ಆ ಮಾರ್ಗವನ್ನು ಎಂದೂ ಹಿಡಿಯರು. ತತ್ವಗಳಿಗೋಸ್ಕರ ಇದೆಲ್ಲವನ್ನೂ ನಿರಾಕರಿಸುವ ಹಂತವನ್ನು ಅವರು ತಲುಪಿಸಿದ್ದರು. ಅವರು ಹೇಳಿದ ಮಾತುಗಳು ಮನನ ಯೋಗ್ಯ. "ರಾಷ್ಟ್ರದ ರಾಜಕಾರಣದ ಕೆಸರಿನಲ್ಲಿ ಯಾವುದೂ ಉಳಿಯುವುದಿಲ್ಲ, ಯೋಗ್ಯವಾದುದು, ಮೌಲಿಕವಾದುದು ಯಾವುದೂ ನಿಲ್ಲುವುದಿಲ್ಲ. ತಾನು, ತನ್ನದೆಂಬ ಮಿತಿಗೆ ಎಲ್ಲರೂ ಅಂಟಿಕೊಳ್ಳುವವರೇ. ವ್ಯಕ್ತಿ ತನ್ನ ಅಥವಾ ತನ್ನ ಪುಟ್ಟ ಬಳಗದ ಯೋಗಕ್ಷೇಮದ ಕಡೆ ಗಮನ ಹರಿಸುತ್ತಾನೆ. ತತ್ತ್ವಜ್ಞಾನ ಬೋಧಿಸುವವನ ಮನಸ್ಸಿನಲ್ಲಿ ಏನೋ ಕುಯುಕ್ತಿ ಹಣಿಕಿಕ್ಕುತ್ತಿರುತ್ತದೆ. ಇವೆಲ್ಲ ಸಂಕುಚಿತ ಉದ್ದೇಶಗಳ ಪರಿಣಾಮಗಳು. ರಾಷ್ಟ್ರೀಯ ದೃಶ್ಯವೇ ಹಾಗಿರುವಾಗ, ಈ ಜೌಗಿನಲ್ಲಿ ಗಟ್ಟಿ ನೆಲವನ್ನು ಹಿಡಿಯುವುದು ಅಸಾಧ್ಯವೆಂದರೂ ಸರಿಯೇ. ಈ ಕೆಸರಿನೊಳಕ್ಕೆ ತತ್ವ ಹಾಗೂ ನಿಯಮಗಳ ಗಟ್ಟಿಯಾದ ಕವೆಗಳನ್ನು ನೆಡಬೇಕು. ಸುತ್ತಲ ದೃಶ್ಯಕ್ಕೆ ಹೋಲಿಸಿದಾಗ ಇವು ವಾಸ್ತವವಾಗಿ ಇರುವುದಕ್ಕಿಂತ ಹೆಚ್ಚಿನ ರೀತಿಯಲ್ಲಿ ಉಗ್ರಗಾಮಿಗಳಂತೆ ಗೋಚರಿಸುವುದು ಸಹಜವೇ ಆಗಿದೆ".

ಲೋಹಿಯಾರವರ ಬಗ್ಗೆ ಸದಾಹಗೆತನ ಸಾಧಿಸಿದ ಇಂಗ್ಲಿಷ್ ಪತ್ರಿಕೆಗಳು ಹಾಗೂ ವ್ಯವಸ್ಥೆ, ಇವೆರಡೂ ಜೊತೆಗೂಡಿ ದಿವಂಗತ ಪ್ರಧಾನಿ ನೆಹರೂ ಹಾಗೂ ಅವರ ಮನೆತನದ ವಿರುದ್ಧ ಲೋಹಿಯಾ ವಿಷ ಕಾರುತ್ತಾರೆ ಎನ್ನುವ ಸಂಗತಿಯನ್ನು ಹಬ್ಬಿಸಿರುವುದು ಎಲ್ಲರಿಗೆ ತಿಳಿದಿದೆ. ಕಾಗದ ಪತ್ರ ಬರೆಯುವುದರಲ್ಲಿ ನಾನು ಅವರಿಗೆ ಸಹಾಯ ಮಾಡುತ್ತಿದ್ದ ಸಂದರ್ಭದಲ್ಲಿ ಒಮ್ಮೆ ನನಗೆ ಅವರು ಒಂದು ಪತ್ರವನ್ನು ಕೊಟ್ಟರು. ಆ ಪತ್ರದ ಕರ್ತೃ ಘಟನೆಯೊಂದನ್ನು ಸವಿಸ್ತಾರವಾಗಿ ತಿಳಿಸುತ್ತಾ, ಶ್ರೀಮತಿ ಇಂದಿರಾಗಾಂಧಿಯವರ ಪುತ್ರನೊಬ್ಬ ಕಾರು ಕಳುವಿನ ಮೊಕದ್ದಮೆಯೊಂದರಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ. ಡಾ. ಲೋಹಿಯಾ ಇದರ ಬಗ್ಗೆ ಸಂಸತ್ತಿನಲ್ಲಿ ಪ್ರಸ್ತಾಪ ಮಾಡಬೇಕೆಂದು ಕೇಳಿದ್ದ. ಕಡತದಲ್ಲಿ ಆ ಕಾಗದವನ್ನು ಸೇರಿಸುವಂತೆ ತಿಳಿಸಿ ಲೋಹಿಯಾ ನನಗೆ ಹೇಳಿದರು: "ಅಧಿಕಾರದಲ್ಲಿರುವವರನ್ನು ಹಿಂಸಿಸುವುದು ನನಗಿಷ್ಟವಾದ ಕಾಯಕವೆಂದು ಕೆಲವರು ತಿಳಿದಿದ್ದಾರೆ. ಇಲ್ಲ, ಅಂಥ ಕಾರ್ಯಮಾಡಲು ನನಗಿಷ್ಟವಿಲ್ಲ. ಕಾರು ಕಳುವಿನ ಸುದ್ದಿ ನಿಜವಾಗಿದ್ದರೂ ಸಹ ನಾನು ಈ ವಿಷಯವನ್ನು ಕೈಗೆತ್ತಿಕೊಳ್ಳಲಾರೆ. ಎಲ್ಲ ಮಕ್ಕಳು ಕೆಲವು ವೇಳೆ ತಪ್ಪು ಮಾಡುತ್ತಾರೆ. ಇಂದಿರಾರವರ ಮಗನೂ ಅಮಾಯಕವಾಗಿ ಏನೋ ತುಂಟತನ ಮಾಡಿರಬಹುದು. ನಾನು ಪಂಡಿತ್ ನೆಹರೂರವರನ್ನು ಟೀಕೆ ಮಾಡಿರುವುದು ಬೇರೆ ಉದ್ದೇಶಕ್ಕಾಗಿ. ಜೊತೆಗೆ, ನೆಹರು ಬೇರೆ ಸ್ತರದಲ್ಲೇ ಇದ್ದಂಥ ವ್ಯಕ್ತಿ". ನೆಹರೂ ಬಗ್ಗೆ ಅವರು ಮೆಚ್ಚುಗೆಯ ಮಾತಾಡಿದುದನ್ನು ನಾನು ಇದೇ ಸಂದರ್ಭದಲ್ಲಿ ದಾಖಲಿಸುವುದು ಸೂಕ್ತವಾಗಿರುತ್ತಿತ್ತು. ಆದರೆ ಆ ನಾಟಕದಲ್ಲಿ ಪಾತ್ರಧಾರಿ

ಗಳಾಗಿದ್ದವರು ಇನ್ನೂ ಬದುಕಿರುವುದರಿಂದ ಅವರ ವ್ಯಕ್ತಿತ್ವಕ್ಕೆ ಧಕ್ಕೆಯುಂಟಾಗುವ ಪರಿಣಾಮವಾಗಿ ಈಗ ಸ್ವಲ್ಪ ಕಾಲ ಸುಮ್ಮನಿರುವುದು ಕ್ಷೇಮವೆಂದು ತಿಳಿಯುವೆ. ಲೋಹಿಯಾ ಅವರು ಯಾವ ವ್ಯಕ್ತಿಯ ವಿರುದ್ಧವೂ ವೈಯಕ್ತಿಕ ದ್ವೇಷವನ್ನು ಸಾಧಿಸುತ್ತಿರಲಿಲ್ಲ. ನಾನು ಹತ್ತಿರದಿಂದ ಕಂಡಿರುವ ನಮ್ಮ ರಾಷ್ಟ್ರದ ರಾಜಕೀಯ ನಾಯಕರ ಪೈಕಿ ಅನೇಕರ ಸಂಪರ್ಕ ನನಗೆ ಉಂಟಾಗಿದೆಯೆಂದು ಹೇಳಬಲ್ಲೆ. ಇವರ ನಡುವೆ ಡಾ. ಲೋಹಿಯಾ ಮಾತ್ರ ಒಬ್ಬ ಸಂತನಂತೆ ನನಗೆ ಕಾಣುತ್ತಾರೆ. ಬೆಳಗಾವಿಯಲ್ಲಿ ಮೊದಲ ಬಾರಿಗೆ ಅವರನ್ನು ಭೇಟಿಯಾದಾಗ ಅವರ ಸಂತತನದ ಬಗ್ಗೆ ನಾನು ಕಮಲಾದೇವಿಯವರ ಜೊತೆ ಪ್ರಸ್ತಾಪ ಮಾಡಿದ್ದೇನೆ. ಅವರೆಂದರು, ''ಹೌದು, ಅವರದು ಶ್ರೀಮಂತ ಹೃದಯ, ಎಲ್ಲಕ್ಕಿಂತ ಮಿಗಿಲಾಗಿ ಅವರದು ಸೂಕ್ಷ್ಮವಾದ ಬುದ್ಧಿ''.

ಸಮಾಜವಾದವನ್ನು ತಮ್ಮ ಬದುಕಿನಲ್ಲಿ ಈ ಮಹಾನುಭಾವ ಅಕ್ಷರಶಃ ಬಾಳಿ ತೋರಿಸಿದವರು. ಮನುಷ್ಯ ವ್ಯಕ್ತಿತ್ವವನ್ನು ಅವರು ಎಷ್ಟು ಉತ್ಕಟವಾಗಿ ಗೌರವಿಸುತ್ತಿದ್ದರೆಂದರೆ, ಸ್ಥಾನಮಾನ, ಅಂತಸ್ತು ಇತ್ಯಾದಿ ಪರಿಧಿಗಳನ್ನು ಅವರು ಲೆಕ್ಕಿಸುತ್ತಿರಲಿಲ್ಲ. ಹೋಟೆಲು ಮಾಣಿಗಳೂ ಸಹ ಅವರ ಸ್ನೇಹಿತರು ಹಾಗೂ ಸಂಗಾತಿಗಳು. ಕೆಲವು ಸಾರಿ ನನ್ನನ್ನವರು ಹೋಟೆಲ್ಲುಗಳಿಗೆ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಹೋಟೆಲ್ಲಿನ ಮಾಣಿಗಳೂ ಅವರು ಕುಳಿತಿದ್ದ ಟೇಬಲ್ಲನ್ನು ಸುತ್ತುವರೆದು ಪ್ರಸ್ತುತ ರಾಜಕೀಯ ಪರಿಸ್ಥಿಯನ್ನು ತಮ್ಮವರಲ್ಲೊಬ್ಬರಂತೆ ಚರ್ಚಿಸುವುದು ಸರ್ವೇ ಸಾಮಾನ್ಯವಾಗಿದ್ದಿತು. ಯಾವುದೇ ರೀತಿಯ ಅಸಹನೆಯನ್ನು ಲೋಹಿಯಾ ಅವರ ಬಗ್ಗೆ ತೋರುತ್ತಿರಲಿಲ್ಲ.

ತುಂಬಾ ಸಜ್ಜನಿಕೆ ಹಾಗೂ ಪ್ರೀತಿಯಿಂದ ಅವರೊಡನೆ ಮಾತನಾಡುತ್ತಿದ್ದರು. ಒಂದು ಸಾರಿ ಅವರು ಒಬ್ಬ ಮಾಣಿಯನ್ನು ಶರ್ಮಾಜಿ ಎಂದು ಸಂಬೋಧಿಸಿದರು, ನಂತರ ನನ್ನ ಬಳಿ ಪಿಸು ಮಾತಿನಲ್ಲಿ ಹೇಳಿದರು. ''ಮಾಣಿಗಳನ್ನು ಯಾಕಾದ್ರೂ 'ಹೇ ಮಾಣಿ' ಎಂದು ಕರೆಯುತ್ತಾರೋ, ನಾ ಕಾಣೆ.'' ಅಂದರೆ ಅವರ ಮಾತಿನ ಇಂಗಿತ ಸ್ಪಷ್ಟ: ಮರ್ಯಾದೆಗೆ ಹೊರತಾದ ಆ ಬಗೆಯ ಸಂಬೋಧನೆಯು ಮನುಷ್ಯರಿಗೆ ತಕ್ಕುದಲ್ಲ.

ಅವರ ಜೊತೆ ಕೆಲಸ ಮಾಡುವ ನಮ್ಮಂಥವರ ವೈಯಕ್ತಿಕ ಜವಾಬ್ದಾರಿ ತಮ್ಮದೇ ಎನ್ನುವಂತೆ ಅವರು ನಡೆದುಕೊಳ್ಳುತ್ತಿದ್ದರು. ಒಮ್ಮೆ ನನ್ನ ಆರೋಗ್ಯ ಕೆಟ್ಟಿತು. ಆ ಸಂದರ್ಭದಲ್ಲಿ ಅವರು ನನ್ನನ್ನು ಅಖಿಲಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಸೇರಿಸಿದ್ದಲ್ಲದೆ ತಮ್ಮ ಅಭಿಮಾನಿಯೊಬ್ಬರ ಮೂಲಕ ಸರಿಯಾದ

ತಪಾಸಣೆಗೆ ಒಳಪಡಿಸಿ ಆರೋಗ್ಯವನ್ನು ಚೆನ್ನಾಗಿ ನೋಡಿಕೊಳ್ಳುವಂತೆ ತಿಳಿವಳಿಕೆ ಹೇಳಿದರು. ಇನ್ನೊಂದು ಘಟನೆಯನ್ನು ನಾನು ಮರೆಯುವಂತೆಯೇ ಇಲ್ಲ. ದೆಹಲಿ ಪುರಭವನದಲ್ಲಿ ಜೆ.ಪಿ. ಯವರು ಕಾಶ್ಮೀರದ ಸ್ಥಿತಿಗತಿಗಳ ಬಗ್ಗೆ ಮಾತನಾಡುವುದನ್ನು ಕೇಳಿಸಿಕೊಳ್ಳಲು ಹೋಗಿದ್ದೆ. ಸ್ಥಳೀಯ ಜನಸಂಘದ ಕಾರ್ಯಕರ್ತರು ಜೆ.ಪಿ. ಯವರ ವಿರುದ್ಧ ಕಪ್ಪು ಬಾವುಟ ಪ್ರದರ್ಶನ ಮಾಡಿ ಸಭೆಗೆ ಅಡ್ಡಿಯುಂಟು ಮಾಡಲು ಪ್ರಯತ್ನಿಸಿದರು. ಪ್ರದರ್ಶನಕಾರರಲ್ಲಿ ಕೆಲವರು ಜೆ.ಪಿ.ಯನ್ನು ಅವಹೇಳನಕರವಾದ ರೀತಿಯಲ್ಲಿ ಕರೆದರಲ್ಲದೆ, ಅವರೊಬ್ಬ ರಾಷ್ಟ್ರದ್ರೋಹಿಯೆಂಬುದಾಗಿಯೂ ಕೂಗಿದರು. ಅನೇಕ ವಿಷಯಗಳ ಬಗ್ಗೆ ಜೆ.ಪಿ.ಯವರು ತಾಳಿದ್ದ ನಿಲುವಿನ ವಿರುದ್ಧ ನನ್ನ ಆಲೋಚನೆಯಿದ್ದಿತು. ಜೆ.ಪಿ.ಯವರು ಸಮಾಜವಾದಿ ಪಕ್ಷದಿಂದ ದೂರವಾಗಿದ್ದ ಕಾಲ. ಸಮಾಜವಾದೀ ಚಳುವಳಿಯ ಅತ್ಯಂತ ಸಂಕ್ರಮಣದ ಸನ್ನಿವೇಶದಲ್ಲಿ ಜೆ.ಪಿ. ಚಳವಳಿಯನ್ನು ತೊರೆದರೆಂಬ ತೀವ್ರ ಅಸಮಾಧಾನ ಒಳಗಡೆ ಇದ್ದಿತಾದರೂ ಅವರನ್ನು 'ದೇಶದ್ರೋಹಿ' ಎಂದು ಕರೆದಾಗ ಸಹಿಸಿಕೊಳ್ಳಲಾಗಲಿಲ್ಲ. ಹಾಗಾಗಿ ಪ್ರದರ್ಶನಕಾರರ ಜೊತೆ ವಾಗ್ವಾದಕ್ಕಿಳಿದೆ. ನನ್ನ ವಾದವನ್ನು ಕೇಳುವ ಮನಸ್ಥಿತಿ ಅವರಿಗಿರಲಿಲ್ಲ, ಅವರಲ್ಲಿ ಕೆಲವರು ನನ್ನ ಮೈಮೇಲೆ ಕೈಮಾಡಿದ್ದೇ ಅಲ್ಲದೆ, ನನ್ನ ಅಂಗಿಯನ್ನೂ ಹರಿದರು. ನನಗೆ ಸ್ವಲ್ಪ ದಿಗ್ಭ್ರಾಂತಿಯಾದಂತಾಗಿ ಕೂಡಲೇ ಡಾ. ಲೋಹಿಯಾರ ಬಳಿ ಓಡಿ ಹೋಗಿ ಕೋಪದ ದನಿಯಲ್ಲೇ ಇಂಥ ಜನಗಳ ಜೊತೆ ಸಂಬಂಧವನ್ನು ನೀವು ಹೇಗೆ ತಾನೆ ಇಟ್ಟುಕೊಂಡಿರುವಿರಿ ಎಂದು ಕೇಳಿದೆ. ಆ ಸಂದರ್ಭದಲ್ಲಿ ನಾಲ್ಕನೇ ಮಹಾಚುನಾವಣೆಗಳು ಸಮೀಪವಾಗುತ್ತಿದ್ದವು; ಡಾ. ಲೋಹಿಯಾರವರು ಕಾಂಗ್ರೆಸ್‌ನ ವಿರುದ್ಧ ಎಲ್ಲಾ ವಿರೋಧ ಪಕ್ಷಗಳನ್ನು ಸಂಘಟಿಸಬೇಕೆಂಬ ತಮ್ಮ ಪ್ರಸಿದ್ಧವಾದ ವ್ಯೂಹ ರಚನೆಯಲ್ಲಿ ತೊಡಗಿದ್ದರು. ನನ್ನನ್ನು ಅವರು ಸಮಾಧಾನ ಮಾಡಿದರಾದರೂ, ಕಾಶ್ಮೀರದ ವಿಚಾರದಲ್ಲಿ ಜೆ.ಪಿ.ಯವರ ನಿಲುವು ದೋಷಯುಕ್ತವಾದುದೆಂದು ತಿಳಿಸಿದರು. ನಾನು ಉತ್ತರಿಸಿದೆ. ''ವಿಷಯ ಅದಲ್ಲ. ಸಾರ್ವಜನಿಕರ ಮುಂದೆ ತಮ್ಮ ಅಭಿಪ್ರಾಯವನ್ನು ಮಂಡಿಸುವ ಹಕ್ಕು ಜೆ.ಪಿ.ಯವರಿಗಿದೆ''. ಇದನ್ನು ಅವರು ಒಪ್ಪಿ, ಕೂಡಲೇ ಸ್ಥಳೀಯ ಜನಸಂಘದ ನಾಯಕರೊಬ್ಬರನ್ನು ದೂರವಾಣಿಯ ಮೂಲಕ ಸಂಪರ್ಕಿಸಿ ಅವರ ಕಾರ್ಯಕರ್ತರು ನಾಗರಿಕ ಹಕ್ಕುಗಳ ತಜ್ಞರಾದ ತಮ್ಮ ಸ್ನೇಹಿತರೊಬ್ಬರ ಮೈಮೇಲೆ ಕೈ ಮಾಡಿರುವುದನ್ನು ಖಂಡಿಸಿದರು. ತಮ್ಮ ಕಿರಿಯ ಸಂಗಾತಿಗಳ ಬಗ್ಗೆ ಅವರಿಗಿದ್ದ ಕಳಕಳಿ ಆ ಬಗೆಯದು.

ಜನಸಂಘಕ್ಕೆ ಸಂಬಂಧ ಪಟ್ಟ ಇನ್ನೊಂದು ಪ್ರಸಂಗವನ್ನು ನೇರವಾಗಿಯೇ ಹೇಳಿಬಿಡಬಹುದು. ಹಿಂದಿನ ಮಹಾ ಚುನಾವಣೆಯಲ್ಲಿ ಡಾ. ಲೋಹಿಯಾರನ್ನು ಪರಾಭವಗೊಳಿಸಲು ಜನಸಂಘ ಏನೆಲ್ಲ ಪಿತೂರಿ ನಡೆಸಿತು. ಈ ಉದ್ದೇಶಕ್ಕಾಗಿಯೇ

ಅದು ಕಾಂಗ್ರೆಸ್‌ನೊಡನೆ ಸಖ್ಯ ಬೆಳೆಸಿತು. ಸ್ವಾತಂತ್ರ್ಯಾನಂತರ ಅಬಾಧಿತವಾಗಿ ಒಂದೇ ಪಕ್ಷ ಆಡಳಿತ ಸೂತ್ರ ಹಿಡಿದಿರುವುದನ್ನು ತಪ್ಪಿಸುವ ಸಲುವಾಗಿ ಲೋಹಿಯಾರು ವಿರೋಧ ಪಕ್ಷಗಳನ್ನು ಒಟ್ಟುಗೂಡಿಸುವ ಕೆಲಸಕ್ಕೆ ಪ್ರಯತ್ನ ನಡೆಸಿದ್ದರಷ್ಟೆ. ಚುನಾವಣಾ ಪ್ರಚಾರದ ಸಂದರ್ಭದಲ್ಲೂ ಸಹ ಎಲ್ಲಾ ವಿರೋಧಪಕ್ಷಗಳ ಪರವಾಗಿ ಮಾತನಾಡಿದರು; ಇದರಿಂದ ಸ್ವಾಭಾವಿಕವಾಗಿಯೇ ಜನಸಂಘಕ್ಕೂ ಲಾಭವಾಗಿತ್ತು. ಹಾಗಾಗಿ, ಜನಸಂಘದವರು ಮಾಡಿದ ಮೋಸದಿಂದ ನಾವೆಲ್ಲ ಕುಪಿತರಾದದ್ದು ಸಹಜ. ಚುನಾವಣೆಯೆಲ್ಲಾ ಮುಗಿದ ಮೇಲೆ ಈ ಘಟನಾವಳಿಗಳ ಬಗ್ಗೆ ನಾವು ಮಾತನಾಡುತ್ತಿರುವ ಸಂದರ್ಭದಲ್ಲಿ ನಾನಂದೆ : "ಯಾವುದಾದರೂ ಒಂದು ಘಟ್ಟದಲ್ಲಿ ನಾವು ಜನಸಂಘದ ವಿರುದ್ಧ ಹೋರಾಡಲೇಬೇಕು; ಈಗಲೇ ಹೋರಾಟಕ್ಕಿಳಿಯೋಣ". ಅದಕ್ಕೆ ಅವರ ಉತ್ತರ ಹೀಗಿತ್ತು : "ಆ ತರಹದ ಭಾವೋದ್ವೇಗದ ರಾಜಕಾರಣ ಸಲ್ಲದು". ಈ ಒಂದು ಪುಟ್ಟ ವಾಕ್ಯದಲ್ಲಿ ಅವರ ರಾಜಕೀಯ ಪರಿಣತಿಯ ಮಹದ್ದರ್ಶನವಾಯಿತು. ಒಂದು ದಶಕಕ್ಕೂ ಹೆಚ್ಚಿನ ಕಾಲ ಒಂದು ಸುಭದ್ರವಾದ ರಾಜಕೀಯ ಪಕ್ಷವನ್ನು ಕಟ್ಟಲು ಅವರು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಕಾಂಗ್ರೆಸ್ ಪಕ್ಷಕ್ಕೆ ಸರಿಸಾಟಿಯಾಗಬಲ್ಲಂಥ ಪಕ್ಷದ ಕಟ್ಟುವಿಕೆ ಅದಾಗಿತ್ತೆಂಬುದನ್ನು ನಾವು ಮರೆಯುವಂತಿಲ್ಲ. ದೇಶದಲ್ಲಿ ಆಗ ಪ್ರಚಲಿತವಿದ್ದ ವಿಲಕ್ಷಣ ಸನ್ನಿವೇಶದಿಂದಾಗಿ ಲೋಹಿಯಾರ ಪ್ರಯತ್ನಗಳಿಗೆ ಅಡ್ಡಿಯುಂಟಾಯಿತು. ಯಾವುದೇ ಅಡೆತಡೆಯಿಲ್ಲದೆ ಆಡಳಿತ ನಡೆಸಲು ಕಾಂಗ್ರೆಸ್ ಪಕ್ಷಕ್ಕೆ ಹಾದಿ ಬಿಟ್ಟರೆ ದೇಶ ಒಳಗಿನಿಂದ ಹಾಗೂ ಹೊರಗಿನಿಂದ ದುರ್ಬಲಗೊಳ್ಳುವುದೆಂದು ಸ್ಪಷ್ಟವಾಗಿ ತಿಳಿದಿದ್ದ ಲೋಹಿಯಾ ಅವರು ಈ ತಿಳಿವಳಿಕೆಯ ಹಿನ್ನೆಲೆಯಲ್ಲೂ ಸಹ ಸ್ವಲ್ಪ ಕಾಲ ಸುಮ್ಮನಿದ್ದುಬಿಡುವ ತೀರ್ಮಾನ ತೆಗೆದುಕೊಂಡರು. ಸಮಾಜವಾದಿ ಪಕ್ಷ ನಿರ್ಮಾಣದ ಕಾರ್ಯವನ್ನು ಸ್ಥಗಿತಗೊಳಿಸಿ, ವಿರೋಧ ಪಕ್ಷಗಳ ಸಂಘಟನೆಯಲ್ಲಿ ಸಂಪೂರ್ಣವಾಗಿ ತೊಡಗಿಕೊಂಡರು. ಈ ಬಗ್ಗೆ ಅಪಹಾಸ್ಯ ಮಾಡುವುದು, ಕಟಕಿಯಾಡುವುದು ಸುಲಭವೇನೊ. ವಸ್ತುಸ್ಥಿತಿ ಏನೆಂದರೆ, ಈ ಉಪಾಯ ಫಲ ನೀಡಿರುವುದು ಸರ್ವವಿದಿತವಾಗಿದೆ; ಕಾಂಗ್ರೆಸ್ ಪಕ್ಷವನ್ನು ಅಧಿಕಾರದಿಂದ ಇಳಿಸಲು ಯಾರಿಂದಲೂ ಸಾಧ್ಯವಿಲ್ಲ ಎಂಬ ನಂಬಿಕೆಯನ್ನು ಹುಸಿಗೊಳಿಸಲಾಗಿದೆ. ಡಾ. ಲೋಹಿಯಾರವರ ಮಾರ್ಗದರ್ಶನದ ಎಸ್.ಎಸ್.ಪಿ. ತೋರಿದ ರೀತಿಯಲ್ಲೇ ಉಳಿದ ವಿರೋಧ ಪಕ್ಷಗಳು ರಾಜಕೀಯ ಪ್ರೌಢಿಮೆಯನ್ನು ಪ್ರದರ್ಶಿಸಿದ್ದರೆ, ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಇರುತ್ತಿರಲಿಲ್ಲ ಹಾಗೂ ರಾಷ್ಟ್ರದ ಚರಿತ್ರೆಯಲ್ಲಿ ಹೊಸದೊಂದು ಅಧ್ಯಾಯ ಪ್ರಾರಂಭವಾಗುತ್ತಿತ್ತು. ಜನಸಂಘದಂಥ ಪಕ್ಷದೊಡನೆ ಸಂಬಂಧ ಬೆಳೆಸುವ, ಹಾಗೂ ವಿರೋಧ ಪಕ್ಷಗಳ ಒಗ್ಗೂಡುವಿಕೆಯ ಬಗೆಗಿನ ತೊಂದರೆ, ದೋಷಗಳು

ರಾಮಮನೋಹರ್ ಲೋಹಿಯಾರವರಿಗೆ ಚೆನ್ನಾಗಿ ತಿಳಿದಿತ್ತು. ಬದಲಾವಣೆಯ ಪ್ರಕ್ರಿಯೆಯಲ್ಲಿ ಈ ಬಗೆಯ ಸೇರ್ಪಡೆ ಅನಿವಾರ್ಯವೆಂದು ಕೂಡ ಅವರಿಗೆ ಅನ್ನಿಸಿತ್ತು.

ಒಂದು ದಿನ ಮಧ್ಯಾಹ್ನ ಚಳಿಗಾಲದ ಬಿಸಿಲಿನಲ್ಲಿ ಅವರು ಹೊರಗೆ ಕುಳಿತಿದ್ದರು. ಬಹಳ ಪ್ರಸನ್ನರಾಗಿರುವಂತೆ ಕಂಡರು. ಅಮೆರಿಕನ್ನರೊಬ್ಬರು ನಿಶ್ಶಸ್ತ್ರೀಕರಣದ ಬಗ್ಗೆ ಬರೆದಿದ್ದ ಒಂದು ಪುಸ್ತಕವನ್ನು ತೆಗೆದುಕೊಂಡು ಹೋಗಿದ್ದೆ. ಆ ಪುಸ್ತಕದಲ್ಲಿ ಕಣ್ಣಾಡಿಸಿದ ಬಳಿಕ ನಿಶ್ಶಸ್ತ್ರೀಕರಣ, ಅಹಿಂಸಾ ತತ್ವ ಇತ್ಯಾದಿಗಳ ಬಗ್ಗೆ ಮಾತನಾಡತೊಡಗಿದರು. ಚರ್ಚೆಯ ಒಂದು ಘಟ್ಟದಲ್ಲಿ ನಮ್ಮ ಗಣರಾಜ್ಯದ ಮೊದಲ ಅಧ್ಯಕ್ಷರಾದ ಡಾ. ರಾಜೇಂದ್ರಪ್ರಸಾದರ ಧೋರಣೆಯನ್ನು ಕುರಿತು ಟೀಕಿಸತೊಡಗಿದೆ. ನನ್ನ ಮಾತಿನ ಧಾಟಿ ಹೀಗಿತ್ತು: ಅವರು ಅಧ್ಯಕ್ಷರಾಗಿದ್ದಾಗ, ಈ ವಿಷಯವಾಗಿ ಯಾವ ಮುಂದಾಳತ್ವವನ್ನೂ ವಹಿಸಲಿಲ್ಲ; ಹಾಗಾಗಿ ಇವರಿಗೆ ದೃಢವಾದ ನಿಲುವಿಲ್ಲ; ಹಾಗೂ ಇವರೊಬ್ಬ ಆಷಾಢಭೂತಿ ಎಂಬ ಆಪಾದನೆಯನ್ನು ಜನರು ಮಾಡುವಂತಾಗಿದೆ. ಇದಕ್ಕೆ ಡಾ. ಲೋಹಿಯಾರ ಉತ್ತರವೆಂದರೆ: ''ದಿವಂಗತ ರಾಷ್ಟ್ರಪತಿಗಳಾದ ಡಾ. ಪ್ರಸಾದ್‌ರ ರೀತಿಯಲ್ಲೇ ಭಾರತೀಯ ಗಾಂಧೀವಾದಿಗಳಾದ ಆಚಾರ್ಯ ವಿನೋಬಾ ಹಾಗೂ ಜೆ.ಪಿ.ಯವರು ತಪ್ಪು ಮಾಡುತ್ತಾರೆ''. ಏಷ್ಯಾದ ರಾಷ್ಟ್ರಗಳು ಬಲಾಢ್ಯ ರಾಷ್ಟ್ರಗಳಲ್ಲವಾದ್ದರಿಂದ ಬಾಹ್ಯ ಅಹಿಂಸಾ ಪಾಲನೆಯಲ್ಲಿ ಮೊದಲ ಹೆಜ್ಜೆ ಇಡಬೇಕೆಂದು ನಿರೀಕ್ಷಿಸುವುದು ಸಮಂಜಸವಲ್ಲ. ಈ ನಿಟ್ಟಿನಲ್ಲಿ ಶಕ್ತಿಯುತ ರಾಷ್ಟ್ರಗಳು ಮುಂದಾಗಿ ಹೆಜ್ಜೆ ಇಡುವುದು ಸೂಕ್ತ. ''ಆ ಕಾರಣದಿಂದ ಬಾಹ್ಯ ಅಹಿಂಸೆಯ ಸಂಬಂಧವಾಗಿ ನಾನು ಮೌನ ತಾಳುವುದು'' ಎಂದು ಹೇಳಿದರು. ಜೊತೆಗೆ, ಅಹಿಂಸೆಯ ವಿಚಾರದಲ್ಲಿ ವಿನೋಬಾರಂಥ ಗಾಂಧಿವಾದಿಗಳಿಗಿಂತ ತಾವು ಹೆಚ್ಚು ಸಮಂಜಸ ಅಭಿಪ್ರಾಯವುಳ್ಳವರೆಂದು ಲೋಹಿಯಾ ಹೇಳಿದ್ದರು. ತಮ್ಮ ಅಧ್ಯಕ್ಷಾವಧಿಯ ಕೊನೆಯ ದಿನಗಳಲ್ಲಿ ಡಾ. ರಾಜೇಂದ್ರಪ್ರಸಾದರೂ ಕೂಡ ಅಸುಖಿಗಳಾಗಿದ್ದಾರೆಂದು ಲೋಹಿಯಾ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಬಿಹಾರದ ತಮ್ಮ ಪತ್ರಕರ್ತ ಗೆಳೆಯನೊಬ್ಬನ ಮೂಲಕ ಲೋಹಿಯಾ ಅವರು ತಿಳಿದಿದ್ದ ಅಂಶವೆಂದರೆ, ಪಂಡಿತ್ ನೆಹರೂರವರ ಸಬಲವಾದ ಸ್ಥಾನದ ಪರಿಣಾಮವಾಗಿ ಡಾ. ರಾಜೇಂದ್ರಪ್ರಸಾದರು ಏನೂ ಮಾಡಲಾಗದಂಥ ಅಸಹಾಯಕತೆಯಿಂದ ವ್ಯಾಕುಲ ಚಿತ್ತರಾಗಿದ್ದರು. ತಮ್ಮ ಅನಾರೋಗ್ಯ ಹಾಗೂ ಇಳಿವಯಸ್ಸಿನ ಕಾರಣದಿಂದ ಪ್ರಸಾದರು ನೆಹರೂರವರ ವಿರುದ್ಧ ಸಂಘರ್ಷಕ್ಕಿಳಿಯುವ ಸ್ಥಿತಿಯಲ್ಲಿರಲಿಲ್ಲ. ಇದೇ ಸಂದರ್ಭದಲ್ಲಿ ಲೋಹಿಯಾ ಹೇಳಿದರು : ''ನನ್ನನ್ನು ಮುಗಿಸಲು ನೆಹರೂ ಪ್ರಯತ್ನಿಸಲಿಲ್ಲವೆಂದು ತಿಳಿಯಬೇಡ; ಪ್ರಯತ್ನಿಸಿದರು, ಆದರೆ ಮುಗಿಸಲು ಅವರಿಂದಾಗಲಿಲ್ಲ.''

●

ಇಂಗ್ಲಿಷ್‌ನಿಂದ ಕನ್ನಡಕ್ಕೆ : ಪಿ. ನಾಗಣ್ಣ

ಲೋಹಿಯಾ ಮತ್ತು ಜಯಪ್ರಕಾಶ್

ಮಧು ಲಿಮಯೆ

ಸ್ವತಂತ್ರ ಭಾರತದ ರಾಜನೀತಿ ಹಾಗೂ ವಿಚಾರಧಾರೆಯ ಮೇಲೆ ಗಾಢವಾದ ಪ್ರಭಾವ ಬೀರಿದ ಕೆಲವೇ ಕೆಲವು ಹಿರಿಯ ಚೇತನಗಳಲ್ಲಿ ಡಾ. ರಾಮಮನೋಹರ ಲೋಹಿಯಾ ಹಾಗೂ ಜಯಪ್ರಕಾಶ್ ನಾರಾಯಣರು ಪ್ರಮುಖರು.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕೊನೆಯ ಹಂತದಲ್ಲಿ ಇವರಿಬ್ಬರ ಪಾತ್ರ ಬಲು ಮಹತ್ವಪೂರ್ಣವಾಗಿತ್ತು. ಲೋಹಿಯಾ ಅವರು ಭೂಗತ ಚಳವಳಿಯಲ್ಲಿ ತಾವು ವಹಿಸಿದ ಪಾತ್ರದ ಬಗ್ಗೆ ತಾವಾಗಿಯೇ ಎದೆಯುಬ್ಬಿಸಿ ಹೇಳಿಕೊಂಡವರಲ್ಲ. ಮಾತ್ರವಲ್ಲ, ಕ್ರಾಂತಿಗಾಗಿ ಉಪಯುಕ್ತ ಸಂಘಟನೆ ಮಾಡುವ ಬಗ್ಗೆ ತಮ್ಮಿಂದ ಹೆಚ್ಚಿನದೇನೂ ಸಲ್ಲಲಿಲ್ಲವೆಂದೇ ಅವರು ಹೇಳುತ್ತಿದ್ದರು. ಹಜಾರಿಬಾಗ ಸೆರೆಮನೆಯಿಂದ ಜಯಪ್ರಕಾಶ ನಾರಾಯಣರು ತಪ್ಪಿಸಿಕೊಂಡಾಗ ಆ ಘಟನೆಯಿಂದ ಜನರ ಮನಸ್ಸಿನಲ್ಲೊಂದು ಕುತೂಹಲ ಹುಟ್ಟಿಕೊಂಡಿತೆಂದು ಲೋಹಿಯಾ ನುಡಿದರು. ಭಾರತದ ಜನತೆ ತೀರಾ ಉತ್ಸಾಹರಹಿತ, ನಿಷ್ಕ್ರಿಯ ಹಾಗೂ ನಿತ್ರಾಣರಾಗಿದ್ದು ಅಸಹಾಯಕತೆಯ ದೆಸೆಯಲ್ಲಿದ್ದಾಗ ಇಂಥದೊಂದು ಘಟನೆ ಕಿಡಿಯಾಗಿ ಪ್ರಜ್ವಲಿಸಿದಂತಾಗುತ್ತದೆಂದು ಅವರು ಬಿಚ್ಚು ಮನಸ್ಸಿನಿಂದ ಮಾತಾಡಿದರು. ಇದೇ ಒಂದು ಘಟನೆಯಿಂದಾಗಿ ಜಯಪ್ರಕಾಶರ ಜನಪ್ರಿಯತೆ ಬಹಳವಾಗಿ ಹೆಚ್ಚಿತು. ಉತ್ತರ ಭಾರತದ ಕೆಲ ಭಾಗಗಳಲ್ಲಿ ಕಾಯದೇ ಇಂಕಿಲಾಬ್, ಜಯಪ್ರಕಾಶ್ ಜಿಂದಾಬಾದ್ (ಕ್ರಾಂತಿ ಚಿರಾಯುವಾಗಲಿ, ಜಯಪ್ರಕಾಶ್ ಜಯಶೀಲರಾಗಲಿ) ಎಂಬ ಘೋಷಣೆಗಳೂ ಮೊಳಗತೊಡಗಿದವು. ಆದರೆ ಭೂಗತ ಚಳುವಳಿಯನ್ನು ಪ್ರಜ್ವಲಗೊಳಿಸುವಲ್ಲಿ ಲೋಹಿಯಾ ಅವರ ಪಾತ್ರ ಮಹತ್ವದ್ದಾಗಿರಲಿಲ್ಲವೆಂದೇನೂ ಇದರ ಅರ್ಥವಲ್ಲ-ಕಾರ್ಯಾಚರಣೆ ಹಾಗೂ ಆಲೋಚನೆಗಳ ದೃಷ್ಟಿಯಿಂದ ಭೂಗತ ಸಂಘಟನೆಯಲ್ಲಿ ಅವರ ಸ್ಥಾನ ಅಸಾಧಾರಣವೆ ಆಗಿತ್ತು-ಭೂಗತ ರೇಡಿಯೊದ ಕಲ್ಪನೆಯನ್ನು ಉಷಾ ಮೆಹ್ತಾ ಮತ್ತಿತರ ಸಂಗಾತಿಗಳ ಸಹಾಯದಿಂದ ಅವರು

ಬಳಕೆಗೆ ತಂದರು. ಭೂಗತ ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯ ಮೂಲಕ ಅನುದಿನವೂ ಹೊಸ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಪ್ರಮುಖ ಹೊಣೆಗಾರರೇ ಅವರಾಗಿದ್ದರು. ಲೋಹಿಯಾ ಅವರೇ ಸುಚೇತಾ ಕೃಪಲಾನಿಯವರಂಥ ಗಾಂಧೀವಾದಿ ಹಾಗೂ ಅಚ್ಯುತ ಪಟವರ್ಧನರಂಥ ಸಮಾಜವಾದಿಗಳ ನಡುವಿನ ಕೊಂಡಿಯಾಗಿದ್ದರು. ಬ್ರಿಟಿಷ್ ಸಾಮ್ರಾಜ್ಯವಾದದ ಮರ್ಮಸ್ಥಾನಗಳೆನಿಸಿದ್ದ ಪೋಲಿಸ್ ಠಾಣೆಗಳು, ರೈಲು ಸ್ಟೇಶನ್, ತಂತಿ, ಅಂಚೆಕಚೇರಿ-ಇತ್ಯಾದಿಗಳ ಮೇಲೆ ಹಲ್ಲೆಗೈದು ವಿದೇಶೀಯ ರಾಜ್ಯಭಾರದ ಬೇರು ಅಲ್ಲಾಡಿಸುವ ಕ್ರಾಂತಿಕಾರಿ ಯೋಜನೆ ಅವರದೇ ಸರಿ. ಜತೆಗೆ ಪ್ರಜೆಗಳ ಜೀವಹಾನಿಯಾಗದಂತೆ ಎಚ್ಚರಿಕೆ ವಹಿಸುವುದನ್ನು ಅವರು ಮಹತ್ವದ ಕಾರ್ಯವೆಂದೇ ಭಾವಿಸಿದ್ದರು. ಇದೆಲ್ಲ ಗಾಂಧೀಜಿಯವರ ವಿಚಾರಧಾರೆಯ ನೇರ ಪ್ರಭಾವ ಆಗಿತ್ತು.

ಸಮಾಜವಾದಿ ಪಕ್ಷದ ಜನರಿಗೆ ಕಾಂಗ್ರೆಸ್‌ನ ಒಳಸೇರುವ ಅವಕಾಶ ವೀಯುವುದು ಮಾತ್ರವಲ್ಲದೆ ಅವರಿಗೆ ಹೊಣೆಗಾರಿಕೆಯ ಅಧಿಕಾರ ಸ್ಥಾನಗಳನ್ನೂ ಕೊಡಬೇಕೆಂದು ಗಾಂಧೀಜಿಯವರು ಬಯಸುತ್ತಿದ್ದರು. ಉದ್ದುದ್ದ, ಬಿಸಿ ಬಿಸಿ ಮಾತನಾಡುವ ಸಮಾಜವಾದಿಗಳ ಮೇಲೆ ಸಂಘಟನೆಯ ಹೊಣೆ ಹೊರಿಸುವುದರಿಂದ ಮುಪ್ಪು ಸೋಕಿದಂತಾಗಿದ್ದ ಕಾಂಗ್ರೆಸ್‌ನಲ್ಲಿ ಹೊಸ ಚೈತನ್ಯ ಮೂಡಬಹುದೆಂದೂ ಜಡಗೊಳ್ಳುತ್ತ ನಡೆದಿದ್ದ ಸಂಘಟನೆಯಲ್ಲಿ ಹೊಸ ರಕ್ತ ಹರಿದಂತಾಗಬಹುದೆಂದೂ ಅವರಿಗೆನಿಸುತ್ತಿದ್ದಿರಬೇಕು. 1946ರಲ್ಲಿ ಜವಾಹರಲಾಲ್ ನೆಹರೂ ಮೂರನೆಯ ಬಾರಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಅವರು ಜಯಪ್ರಕಾಶ್ ಹಾಗೂ ಲೋಹಿಯಾ ಅವರೊಡನೆ ಮಾತುಕತೆ ನಡೆಸಿದರು. ಗಾಂಧೀಜಿಯವರ ಇಚ್ಛಾನುಸಾರ ಲೋಹಿಯಾ ಅವರಿಗೆ ಕಾಂಗ್ರೆಸ್‌ನ ಪ್ರಧಾನಕಾರ್ಯದರ್ಶಿ ಸ್ಥಾನ ನೀಡಬೇಕೆಂದು ಅವರು ಸಿದ್ಧರಾಗಿದ್ದರು. ಕಾರ್ಯಕಾರಿಸಮಿತಿಯಲ್ಲೂ ಇಬ್ಬರು ಸಮಾಜವಾದಿಗಳನ್ನು ತೆಗೆದುಕೊಳ್ಳಲು ಒಪ್ಪಿಕೊಂಡಿದ್ದರು. ಆದರೆ ಸಮಾಜವಾದಿಗಳನ್ನು ಒಂದೆಡೆಗಿಟ್ಟು ಅವರಿಂದ ಯಾವೊಂದು ಘನವಾದ ಕಾರ್ಯಮಾಡಿಸುವ ಇಚ್ಛೆ ಅವರಿಗಿರಲಿಲ್ಲ. ಗಾಂಧೀಜಿಯವರ ಮನಸ್ಸಿನಲ್ಲೇನೊ ಆ ಇಚ್ಛೆಯಿತ್ತು. ಆದರೆ ನೆಹರೂ ಅವರ ಆಲೋಚನೆ ಬೇರೆಯೇತರದ್ದು. ಸಮಾಜವಾದಿ ಮುಖಂಡರ ನಡುವೆ ಭಿನ್ನಾಭಿಪ್ರಾಯ ಹಾಗೂ ವೈಮನಸ್ಯವಿದ್ದುದನ್ನು ತಿಳಿದಿದ್ದ ಅವರು ಈ ವೈಮನಸ್ಯ ಬೆಳೆಯುವಂತೆ ಮಾಡುತ್ತ ಚಾಣಾಕ್ಷತನದಿಂದ ತಮ್ಮ ಕೆಲಸ ಸಾಧಿಸುವ ಯತ್ನದಲ್ಲಿದ್ದರು. ನೆಹರೂ ಅವರೊಡನೆ ಮಾತುಕತೆ ನಡೆಸುವ ಮುನ್ನ ಅವರೊಡನೆ ಏನೆಲ್ಲ ಮಾತಾಡಬೇಕು, ತಮ್ಮ ನಿಲುವು ಯಾವುದಿರಬೇಕು ಎಂಬ ಬಗ್ಗೆ ಲೋಹಿಯಾ ಹಾಗೂ ಜಯಪ್ರಕಾಶರ

ನಡುವೆ ಯಾವ ವಿಚಾರ ವಿನಿಮಯವೂ ನಡೆದಿರಲಿಲ್ಲ. ಕಾಂಗ್ರೆಸ್‌ನ ಅಧ್ಯಕ್ಷ ಬ್ರಿಟಿಷ್ ವೈಸ್‌ರಾಯ್‌ನ ಕಾರ್ಯಸಮಿತಿಯ ಸದಸ್ಯನಾಗಲಾರ, ಆ ಸಮಿತಿಯಲ್ಲಿ ಯಾವ ಮಂತ್ರಿಯೂ ಇರಲಾರ ಹಾಗೂ ಕಾಂಗ್ರೆಸ್ ಸಂಘಟನೆಗೆ ಸರಕಾರದ ಕಾರ್ಯಕಲಾಪಗಳ ಬಗ್ಗೆ ಸದ್ಭಾವನಾ ಪೂರ್ಣವಾಗಿ ವಿಚಾರ ಮಾಡುವ ಮುಕ್ತ ಅವಕಾಶವಿರಬೇಕು ಎಂಬುದಾಗಿ ಲೋಹಿಯಾ ಹೇಳಿದರು. ಜಯಪ್ರಕಾಶರೂ ಈ ಮಾತಿಗೆ ತಮ್ಮ ಸಮ್ಮತಿ ಸೂಚಿಸಿದರು. ಇದರ ಪರಿಣಾಮವಾಗಿ ಆ ಮಾತುಕತೆ ಅರ್ಧಕ್ಕೆ ನಿಂತು ಹೋಯಿತು. ಆದರೆ, ಕೆಲವು ತಿಂಗಳುಗಳ ನಂತರ ಕೋಮುಗಲಭೆಗಳು ಹಾಗೂ ದೇಶದ ವಿಭಜನೆಯ ಗಂಡಾಂತರ ಎದುರಾಗಬಹುದೆಂದು ಹೇಳಿದ ನೆಹರೂ ಜಯಪ್ರಕಾಶರನ್ನು ಪ್ರತ್ಯೇಕವಾಗಿಯೇ ಕರೆದು ಈ ಆಪತ್ಕಾಲದಲ್ಲಿ ಅವರು ತಮ್ಮ ಕಾರ್ಯಸಮಿತಿಯಲ್ಲಿದ್ದು ತಮಗೆ ನೆರವಾಗಬೇಕೆಂದು ಕೋರಿದರು. ಜಯಪ್ರಕಾಶರು ಲೋಹಿಯಾರ ಮಾತೆತ್ತಿದಾಗ ನೆಹರೂ ನುಡಿದರು: "ಮೊದಲು ನೀವು ನಿರ್ಧಾರ ಮಾಡಿ. ನಂತರ ನಾನು ರಾಮ ಮನೋಹರರನ್ನು ಯಾವಾಗಲಾದರೂ ಕರೆಸಿಕೊಂಡೇನು". ಜಯಪ್ರಕಾಶರಿಗೆ ನೆಹರೂ ಅವರ ಲೆಕ್ಕ ಹೊಳೆಯದೆ 'ಆಗಲಿ' ಎಂದುಬಿಟ್ಟರು. ಇದೊಂದು ದೃಷ್ಟಾಂತದಿಂದ ಸಮಾಜವಾದಿಗಳಲ್ಲಿ ಹೇಗೆ ಭೇದ ಭಾವದಿಂದ ವರ್ತಿಸಿ ಅವರಲ್ಲಿ ವೈಮನಸ್ಯ ಹೆಚ್ಚಿಸಲು ನೆಹರೂ ಪ್ರಯತ್ನಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ.

ಕಾಂಗ್ರೆಸ್‌ನ ಸಮಾಜವಾದಿಗಳು ತಮ್ಮ ಪಕ್ಷದ ಸದಸ್ಯರಾಗಿರಲಿ ಬಿಡಲಿ, ನೆಹರೂ ಅವರೇ ತಮ್ಮ ನಿಜವಾದ ಮುಖಂಡರೆಂಬ ಭಾವನೆ ಮೊದಲಿನಿಂದಲೂ ಸಾಮಾನ್ಯ ಜನರಲ್ಲಿತ್ತು. ಸಮಾಜವಾದಿ ನಾಯಕರೊಡನೆ ನೆಹರೂ ಅವರಿಗೆ ನಿಕಟ ಸ್ನೇಹವಿತ್ತೆಂಬುದು ಅಷ್ಟೇ ನಿಜವಾಗಿತ್ತು. ಸ್ವಯಂ ಲೋಹಿಯಾ ಅವರೇ ನೆಹರೂಗೆ ಸಾಕಷ್ಟು ಹತ್ತಿರದವರಾಗಿದ್ದರು; ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್‌ನ ವಿದೇಶ ವಿಭಾಗ (1936-39)ವನ್ನು ನೋಡಿಕೊಂಡಿದ್ದರು. ಜಯಪ್ರಕಾಶ-ನೆಹರೂ ಅವರ ಸಂಬಂಧವೂ ಹತ್ತಿರದ್ದೆ ಆಗಿತ್ತು. ಅವರು ನೆಹರೂ ಅವರನ್ನು ಭಾಯಿ (ಅಂದರೆ ಅಣ್ಣಯ್ಯ) ಎಂದೇ ಸಂಬೋಧಿಸುತ್ತಿದ್ದರು. ಮಹಾತ್ಮಾ ಗಾಂಧಿ ಹಾಗೂ ಜವಾಹರಲಾಲ್ ನೆಹರೂ ಅವರನ್ನು ಪರಸ್ಪರ ಹೋಲಿಸಿದರೆ ನೆಹರೂ ಅವರು ಹೆಚ್ಚು ಪ್ರಗತಿಶೀಲರೂ ವಾಮಪಂಥೀಯ ಒಲವುಳ್ಳವರೂ ಆಗಿದ್ದರೆಂದು ಸಮಾಜವಾದೀ ನಾಯಕರ ತಿಳಿವಳಿಕೆಯಾಗಿತ್ತು. ಗಾಂಧೀಜಿ ಹಾಗೂ ಸುಭಾಷ್‌ಚಂದ್ರ ಬೋಸ್‌ರಿಗಿಂತಲೂ ನೆಹರೂ ಅವರೇ ಹೆಚ್ಚು ಆಧುನಿಕ ಪ್ರವೃತ್ತಿಯವರೆಂಬ ಗ್ರಹಿಕೆಯೂ ಅವರದಾಗಿತ್ತು. ಮುಂದೆ, ಲೋಹಿಯಾ ಅವರಿಗೆ ತಮ್ಮದೇ ತಪ್ಪಾಯಿತೆಂದೆನಿಸಲಾರಂಭಿಸಿತು. ವಾಸ್ತವದಲ್ಲಿ ಅವರ ಅನಿಸಿಕೆ 1942 ರಿಂದಲೇ

ಸಡಿಲುಗೊಳ್ಳತೊಡಗಿತ್ತು. ಗಾಂಧೀಜಿಯವರ ಹತ್ಯೆಯ ದಿನದಂದು ಅದು ಸಂಪೂರ್ಣ ಕುಸಿದು ಬಿದ್ದಂತಾಯಿತು. ಆದರೆ ಜಯಪ್ರಕಾಶರ ಮನಸ್ಸಿನಲ್ಲಿ ಮೂಡಿದ್ದ ಭಾವನೆ ಮಾತ್ರ ಕೊನೆಯವರೆಗೂ ಕರಗದೇ ಉಳಿದಿತ್ತು. ಗಾಂಧೀಜಿಯವರ ವಿಷಯದಲ್ಲಂತೂ ಜಯಪ್ರಕಾಶರ ಅಭಿಪ್ರಾಯ ಆಮೂಲಾಗ್ರ ಬದಲಾವಣೆಗೊಂಡಿತು. ಅವರ ವಿಚಾರಪ್ರಣಾಲಿಯನ್ನು ಅವರು ಸಾಧ್ಯವಾದಷ್ಟು ಅಚ್ಚುಕಟ್ಟಾಗಿ ಅರ್ಥೈಸಿಕೊಂಡರು. ಆದರೆ ನೆಹರೂ ಅವರು ಪ್ರಗತಿಶೀಲರಾಗಿದ್ದು ಸಮಾಜವಾದವನ್ನು ಕ್ರಿಯಾ ರೂಪದಲ್ಲಿಳಿಸಲು ಬಯಸುತ್ತಿದ್ದರೆಂದು ಕೊನೆಯವರೆಗೂ ಅವರಿಗೆ ಅನಿಸುತ್ತಿತ್ತು. ಒಮ್ಮೊಮ್ಮೆ ತಾತ್ಕಾಲಿಕವಾಗಿ ಕೋಪ ಬಂದಾಗ ಜಯಪ್ರಕಾಶರ ಮನಸ್ಸಿನಲ್ಲಿ ಗೂಢವಾಗಿದ್ದ ಅಭಿಪ್ರಾಯ ಪೂರ್ಣವಾಗಿ ಬದಲಾದ ಹಾಗೆ ಭಾಸವೂ ಆಗುತ್ತಲಿತ್ತು. ಆದರೆ ಆ ಭಾವನೆ ಕೇವಲ ಮೇಲ್ಪದರದಾಗಿರುತ್ತಿತ್ತು. ಅವರ ಮನಸ್ಸಿನಲ್ಲಿ ನೆಹರೂ ಅವರ ಬಗ್ಗೆ ಆಳವಾದ ಪ್ರೀತಿ ಇದ್ದೇ ಇತ್ತು. ನೆಹರು ಅವರ ಪ್ರಭಾವ ವಲಯದಿಂದ ಅವರಿಗೆಂದೂ ಹೊರಬೀಳುವುದಾಗಲೇ ಇಲ್ಲ.

ಆಚಾರ್ಯ ನರೇಂದ್ರದೇವರ ಹಾಗೆ ಲೋಹಿಯಾ ಅವರು ಕಾಂಗ್ರೆಸ್ ಬಿಡಬೇಕೆಂದು ಬಯಸಿದವರಲ್ಲ. 'ಸಾವಿರ-ಒಂದೂವರೆ ಸಾವಿರ ವರ್ಷಗಳ ನಂತರ ಈಗಷ್ಟೆ ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತವಾಗಿದೆ; ಅದರ ಬೇರುಗಳು ಕೂಡ ಇನ್ನೂ ಗಟ್ಟಿಗೊಂಡಿಲ್ಲ. ಹೊಸರಾಷ್ಟ್ರವನ್ನು ಸ್ಥಿರತೆಯೆಡೆಗೊಯ್ಯುವ ಹಾಗೂ ಸಮಾಜದಲ್ಲಿ ಪರಿವರ್ತನೆಯನ್ನು ತರುವ ಕೆಲಸವನ್ನು ಸಫಲವಾಗಿ ಮಾಡುವ ಕೆಲಸ ಕಾಂಗ್ರೆಸ್‌ನಿಂದಲೇ ಸಾಧ್ಯ ಎಂಬುದು ಅವರ ಅನಿಸಿಕೆಯಾಗಿತ್ತು. ಕಾಂಗ್ರೆಸ್ಸನ್ನೇ ಜನತಂತ್ರ ಹಾಗೂ ಸಮಾಜವಾದ ಪಕ್ಷವಾಗಿ ಬದಲಾಯಿಸುವ ಸಾಧ್ಯತೆಯ ಪ್ರಯೋಗಮಾಡಿ ನೋಡುವ ವಿಚಾರ ಲೋಹಿಯಾ ಅವರದಾಗಿತ್ತು. ನಮ್ಮ ಪಕ್ಷದ ಬಹುಮತ ಇದರ ವಿರುದ್ಧವಾಗಿತ್ತು. ಅವರನ್ನು ಒಪ್ಪಿಸುವುದು ನನಗೆ ಸಾಧ್ಯವಾಗಲಿಲ್ಲ. ಈ ಮಧ್ಯೆ ಗಾಂಧೀಜಿಯವರೂ ನಿಧನ ಹೊಂದಿದ್ದರು. ಪ್ರಯೋಗದ ಜಿಜ್ಞಾಸೆಯೆಲ್ಲ ಸಮಾಪ್ತಗೊಂಡಿತ್ತು. ಕಾಂಗ್ರೆಸ್ ಪಕ್ಷದಲ್ಲಿ ನ್ಯಾಯ ಹಾಗೂ ಸಮಾನ ದೃಷ್ಟಿಯ ಧೋರಣೆಯೊಡನೆ ಮುನ್ನಡೆಯಬಲ್ಲ ಬೇರೊಬ್ಬ ವ್ಯಕ್ತಿಯಿರಲಿಲ್ಲವೆಂಬುದೂ ನನಗೆ ಖಾತರಿಯಾಗಿತ್ತು.

ಆರಂಭದಲ್ಲಿ ಲೋಹಿಯಾ ಕಾಂಗ್ರೆಸ್ ಬಗ್ಗೆ ಸಾಕಷ್ಟು ಆಶಾವಾದಿಗಳಾಗಿಯೇ ಇದ್ದರು. ಪ್ರಾಯಶಃ ಉತ್ತರ ಪ್ರದೇಶದ ಕಾಂಗ್ರೆಸ್ ಮೇಲೆ ಸಮಾಜವಾದಿಗಳ ಪ್ರಭಾವವಿರುತ್ತಿದ್ದುದೂ, ಅದರ ಸಮಿತಿಗಳು ಅವರ ಹತೋಟಿಯಲ್ಲಿರುತ್ತಿದ್ದುದೂ ಅದಕ್ಕೆ ಕಾರಣವಿರಬೇಕು. ಸಮಾಜವಾದಿ ಪಕ್ಷದವರು ಅಧ್ಯಕ್ಷ ಅಥವಾ

ಕಾರ್ಯದರ್ಶಿಗಳಾಗಿರದಿದ್ದರೆ, ಕನಿಷ್ಠ ಕೆಲವು ಜಿಲ್ಲಾ ಸಮಿತಿಗಳಾದರೂ ಅವರ ಕೈಯಲ್ಲಿರುತ್ತಿದ್ದವು. ಅದರಿಂದಾಗಿ ಸಮಾಜವಾದಿ ವಿಚಾರಗಳನ್ನೂ, ಕಾರ್ಯ ಕ್ರಮಗಳನ್ನೂ ವ್ಯಾಪಕ ರೂಪದಲ್ಲಿ ಪ್ರಚುರಗೊಳಿಸುವ ಅವಕಾಶ ಅವರಿಗೆ ದೊರೆಯುತ್ತಿತ್ತು. ಆದರೆ, ಬಿಹಾರ ಮುಂಬಯಿ ಇತ್ಯಾದಿ ಪ್ರದೇಶಗಳ ಕಾಂಗ್ರೆಸ್ ಸಮಿತಿಗಳು ಇದಕ್ಕಿಂತ ಬೇರೆಯಾಗಿ ಸಮಾಜವಾದ ವಿರೋಧಿ ನಾಯಕರ ಕೈಯಲ್ಲಿದ್ದವು. ಕಾಂಗ್ರೆಸ್ ನಾಯಕರ ಹಾಗೂ ಸಮಾಜವಾದಿಗಳ ನಡುವೆ ಯಾವಾಗಲೂ ಒಂದು ಬಗೆಯ ತಿಕ್ಕಾಟವಿರುತ್ತಿತ್ತು. ಅವರ ಪರಸ್ಪರ ಸಂಬಂಧಗಳು ಸಾಕಷ್ಟು ಕಹಿಗೊಂಡಿದ್ದವು. ಈ ಪ್ರದೇಶಗಳ ನಾಯಕರು ಹಾಗೂ ಕಾರ್ಯಕರ್ತರು ಕಾಂಗ್ರೆಸ್‌ನಿಂದ ಹೊರಬೀಳಬೇಕೆಂದೇ ಹೇಳುತ್ತಿದ್ದರು.

ಒಮ್ಮೆ ಯೋಗ್ಯ ಅಥವಾ ಯೋಗ್ಯವಲ್ಲದ ಎಲ್ಲ ರೀತಿಗಳಿಂದ ಕಾಂಗ್ರೆಸ್‌ನಿಂದ ಹೊರಬೀಳಲು ಹಾತೊರೆಯುತ್ತಿದ್ದ ಜನರೇ ಮುಂದೆ ಕೆಲವು ವರ್ಷಗಳ ತರುವಾಯ-ಮುಖ್ಯವಾಗಿ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಸೋಲು ಅನುಭವಿಸಿದ ಮೇಲೆ ಕಾಂಗ್ರೆಸ್‌ಗೆ ಸಹಕಾರ ನೀಡಲು ಕಾತುರರಾದುದನ್ನು ಕಂಡು ಲೋಹಿಯಾ ಅವರಿಗೆ ಆಶ್ಚರ್ಯವೆನಿಸುತ್ತಿತ್ತು. ಈ ಅಸಂಗತತೆಯಿಂದ ತುಂಬ ಚಿಂತಿತರಾದರು. ಸಮಾಜವಾದಿ ನಾಯಕರ ಹಾಗೂ ಚಳುವಳಿಗಾರರ ಯಾವುದೋ ರಹಸ್ಯವೊಂದು ಇದರ ಹಿನ್ನೆಲೆಯಲ್ಲಿರಬೇಕೆಂದು ಅವರಿಗೆನಿಸುತ್ತಿತ್ತು. ಸಮಾಜವಾದಿ ಚಳವಳಿ ಗಾರರಿಗೆ ತಾತ್ಕಾಲಿಕ ಲಾಭ-ಹಾನಿಗಳ ಲೆಕ್ಕಹಾಕುವ ಚಾಳಿಯೇ ಉಂಟಾಗಿದ್ದು ಸಮಾಜವಾದಿಗಳು ಕಾಂಗ್ರೆಸ್‌ನಿಂದ ಹೊರಬಿದ್ದಾಗ ಬಹಳಷ್ಟು ನಾಯಕರು ಜನತೆಯ ಮನಸ್ಸು ಗಂಭೀರ ಸ್ವಭಾವದ ರಾಜನೀತಿ ಹಾಗೂ ರಾಜಕೀಯ ತಜ್ಞರತ್ತ ಹೊರಳುವುದೆಂದೇ ಭಾವಿಸಿದ್ದರು. ಆದರೆ ಹಾಗಾಗದೇ ಹೋದುದಕ್ಕಾಗಿ ಅವರು ಹತಾಶರಾದರು. ಕಾಂಗ್ರೆಸ್‌ನವರ ನೆಲೆದೋರದ ಸಮಾಜವಾದದ ಬಗ್ಗೆ ಕೇಳಿ ಇವರ ಮನಸ್ಸು ವಿಚಲಿತಗೊಂಡಿತು. ತಮ್ಮ ಸ್ವಂತದ ಸಮಾಜವಾದವೇ ಸಪ್ಪೆಯಾದಂತೆ ಅವರಿಗೆ ಭಾಸವಾಗತೊಡಗಿ, ಅವರು ಹಾಗೆ ಆಡಿ ತೋರಿಸಲಿಕ್ಕೂ ತೊಡಗಿದರು. ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಊರೂರಿಗೆ ಬಾವಿಗಳನ್ನು ತೋಡಿಸುವ ಅಥವಾ ಇಂಥ ಇನ್ನಿತರ ವಿಕಾಸ ಯೋಜನೆಗಳನ್ನು ದೊಡ್ಡ ಪ್ರಮಾಣದಲ್ಲಿ ಕೈಕೊಂಡಾಗಲೂ ಅವರ ಆತಂಕ ಹೆಚ್ಚಿತು. ಆದ್ದರಿಂದಲೇ, ಸಮಾಜವಾದಿ ಆಂದೋಳನ ಅಸ್ಥಿರಗೊಂಡಿತೆಂದು ಲೋಹಿಯಾ ಅನ್ನುತ್ತಿದ್ದರು.

ಲೋಹಿಯಾ ಅವರ ಈ ಆತ್ಮನಿರೀಕ್ಷಣೆ ಸಮಾಜವಾದಿ ಪಕ್ಷದ ಮೌಲ್ಯ ಮಾಪನದ ದೃಷ್ಟಿಯಿಂದ ಮಹತ್ವಪೂರ್ಣವೇ ಆಗಿದೆ. ಅಶೋಕ ಮೆಹ್ತಾ,

ಜಯಪ್ರಕಾಶ್ ಇತ್ಯಾದಿ ನಾಯಕರ ಮಟ್ಟಿಗೆ ಹೇಳುವುದಾದರೆ ಅವರಲ್ಲಿ ನಿಶ್ಚಿತವಾಗಿಯೂ ಸ್ಥಿರತೆ ಕಡಿಮೆಯೇ ಆಗಿತ್ತು. ಜಯಪ್ರಕಾಶದಲ್ಲಿ ಸದ್ಭಾವನೆ ತುಂಬಿ ತುಳುಕುವಂತಿತ್ತು. ಲೋಹಿಯಾ ಅವರ ಹಾಗೆ ಜಯಪ್ರಕಾಶರಲ್ಲೂ ಅಧಿಕಾರಲಾಲಸೆ ಲವಲೇಶವೂ ಇರಲಿಲ್ಲ. ಆದರೆ ಅವರಲ್ಲಿ ವಿಚಾರಗಳ ಸ್ಪಷ್ಟತೆಯಿರುತ್ತಿರಲಿಲ್ಲ. ಅಕ್ಕ ಪಕ್ಕದ ಜನರಿಂದ ಅವರು ಬಲು ಬೇಗ ಪ್ರಭಾವಿತರಾಗುತ್ತಿದ್ದರು. ಅಲ್ಲದೆ ಯಾವುದೇ ವಿವಾದಾಸ್ಪದ ಪ್ರಶ್ನೆಯ ಬಗ್ಗೆ ಸ್ಪಷ್ಟ ಅಭಿಪ್ರಾಯ ಕೊಡುವುದಕ್ಕೂ, ಕೊಟ್ಟ ಅಭಿಪ್ರಾಯಕ್ಕೆ ಅಂಟಿಕೊಂಡಿರುವುದಕ್ಕೂ ಅವರು ಹಿಂಜರಿಯುತ್ತಿದ್ದರು. ಸುಭಾಷ್ ಬೋಸ್‌ರು ಎರಡನೆಯ ಸಲ ಅಧ್ಯಕ್ಷಪದವಿಗಾಗಿ ಸ್ಪರ್ಧಿಸುವ ಪ್ರಶ್ನೆಯೇ ಆಗಲಿ, ತ್ರಿಪುರಾ ಕಾಂಗ್ರೆಸ್‌ನ ನಂತರದ ಮತಭೇದಗಳ ಪ್ರಶ್ನೆಯಾಗಲೀ, ಕಮ್ಯುನಿಸ್ಟ್ ಪಕ್ಷದ ವಿಷಯದಲ್ಲಿ ಬದಲಾಯಿಸಿದ ಧೋರಣೆಯ ಪ್ರಶ್ನೆಯೇ ಆಗಲಿ, ಅಥವಾ ಕಾಂಗ್ರೆಸ್ ಬಿಡುವ ಪ್ರಶ್ನೆಯೇ ಆಗಲಿ, ಕಿಸಾನ್ ಮಜ್‌ದೂರ ಪ್ರಜಾ ಪಕ್ಷದೊಡನೆ ವಿಲೀನಗೊಳ್ಳುವ ಸಮಸ್ಯೆಯೇ ಆಗಲಿ, ಅಥವಾ ಕಾಂಗ್ರೆಸ್‌ಗೆ ಸಹಕಾರ ನೀಡುವ ಬಗೆಗಿನ ವಿವಾದವೇ ಆಗಲೀ, ಜಯಪ್ರಕಾಶರು ಒಮ್ಮೊಮ್ಮೆ ಅಸ್ಥಿರ ನೀತಿಯನ್ನು ಅನುಸರಿಸುತ್ತಿದ್ದರು. ಅವರಿಗೆ ತಮ್ಮ ಮನಸ್ಸನ್ನು ಗಟ್ಟಿಗೊಳಿಸಲಾಗುತ್ತಿರಲಿಲ್ಲ. ಲೋಹಿಯಾ ಅವರಿಗೆ ಜಯಪ್ರಕಾಶರ ಈ ನೀತಿಗಳಿಂದಾಗಿ ಬಹಳ ನಿರಾಸೆಯುಂಟಾಗುತ್ತಿತ್ತು. ಒಂದೆರಡು ಬಾರಿ, ತಕ್ಕ ಸಂದರ್ಭ ನೋಡಿ, ಲೋಹಿಯಾ ಅವರು ಜಯಪ್ರಕಾಶರಿಗೆ-ಅವರು ತಮ್ಮ ಅಭಿಪ್ರಾಯವನ್ನು ಬಾಯ್ಬಿಚ್ಚಿ ಹೇಳದೆ ಎಲ್ಲರ ಅಭಿಪ್ರಾಯ ಕೇಳಿಕೊಂಡ ನಂತರ ತಾನು ತನ್ನದನ್ನು ಹೇಳುವ ರೀತಿಯ ಬಗ್ಗೆ-ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿಯೂ ಇದ್ದರು. “ಕೊನೆಗೂ ನೀವು ನನ್ನನ್ನು ಪಕ್ಷದ ಮಹಾಕಾರ್ಯದರ್ಶಿ ಎಂದು ಆರಿಸಿದ್ದೀರಿ. ಮಹಾಕಾರ್ಯದರ್ಶಿ ಅಂದಮೇಲೆ ಎಲ್ಲರ ಅಭಿಪ್ರಾಯ ಕೇಳಿಕೊಂಡ ನಂತರವೇ ತನ್ನ ಅಭಿಪ್ರಾಯ ವ್ಯಕ್ತಪಡಿಸುವ ಸವಲತ್ತು ಅವನಿಗಿರಬೇಕೆಂದೂ, ಎಲ್ಲರನ್ನೂ ಜೊತೆಯಾಗಿ ಕರೆದೊಯ್ಯುವುದು ಅಗತ್ಯ” ಎಂದು ಜಯಪ್ರಕಾಶರು ಉತ್ತರವಿತ್ತರು. ಜಯಪ್ರಕಾಶರ ಮಾತಿನಲ್ಲಿ ವಾಸ್ತವಾಂಶವೂ ಇತ್ತೆಂದು ಲೋಹಿಯಾರಿಗೆ ಅನಿಸುತ್ತಿತ್ತು; ಆದರೆ ಅದಕ್ಕೆ ಇನ್ನೊಂದು ಮುಖವೂ ಇತ್ತು. ಒಂದು ವೇಳೆ ನಾಯಕರೆದುರಿಗೇ ನಿಶ್ಚಿತ ಗುರಿಯೆಂಬುದಿರದಿದ್ದರೆ, ಗಾಳಿಯ ಅಲೆಗಳಂತೆ ಅವರ ವಿಚಾರಗಳು ಹರಿದಾಡಿದರೆ, ಎಲ್ಲರೂ ಸಮ್ಮತಿಸುವ ದಾರಿ ಹಿಡಿಯುವುದೇ ಆದರೆ ಮುಂದೆ ಗಂಡಾಂತರವನ್ನು ಎದುರಿಸಬೇಕಾಗಿ ಬರಬಹುದು. ಲೋಹಿಯಾ ಅವರ ದೃಷ್ಟಿಯಲ್ಲಿ ನಾಯಕನೆಂದರೆ ಕೇವಲ ಪ್ರಚಲಿತ ಅಭಿಪ್ರಾಯಕ್ಕೆ ಸೈ ಎನ್ನುವವನಲ್ಲ; ಪ್ರಚಲಿತವಿರಲಿ, ಇಲ್ಲದಿರಲಿ, ಯೋಗ್ಯ ವಿಚಾರವನ್ನು ಇತರರಿಗೆ ಮನವರಿಕೆ ಮಾಡಿಕೊಡಲು ನಿಷ್ಠುರ ಕ್ರಮವನ್ನು

ಕೈಕೊಳ್ಳಲೆತ್ನಿಸುವಂಥವನು. ಮೂಲಭೂತ ವಿಷಯಗಳಲ್ಲಿ, ಹಾಗೂ ಸಿದ್ಧಾಂತಗಳಲ್ಲಿ ನಾಯಕರು ದೃಢಚಿತ್ತರೂ ಅವಿಚಲರೂ ಆಗಿರಬೇಕೆಂಬುದು ಅವರು ಅಭಿಪ್ರಾಯವಾಗಿತ್ತು.

ಜಯಪ್ರಕಾಶರ ಪರವಾಗಿಯೂ ಕೊಂಚ ಹೇಳಬಹುದಾಗಿದೆ. ಯಾವುದೇ ದೊಡ್ಡ ಸಂಘಟನೆ ನಡೆಸಲು, ಯಾವಾಗಲೂ ತುಂಬ ನಿಷ್ಠುರವಾದ ಸ್ವಂತ ನಿಲುವನ್ನೇ ತಳೆಯುವುದು ಉಚಿತವಾಗುವುದಿಲ್ಲ; ಹೊಂದಾಣಿಕೆಯ ಮನೋಭಾವನೆ ಇರಬೇಕಾಗುತ್ತದೆ. ಲೋಹಿಯಾ ಸಂಘಟನೆ ನಡೆಸಲು ಸೂಕ್ತ ವ್ಯಕ್ತಿಯಾಗಿರಲಿಲ್ಲ; ಅವರು ಚಿಂತನ-ಮನನ ಮಾಡುವಂಥವರು. ಹಾಗೆಂದ ಮಾತ್ರಕ್ಕೆ ಅವರು ಆರಾಮಾಸನದಲ್ಲಿ ಕುಳಿತು ಇತರರಿಗೆ ಮಾತ್ರ ಉಪದೇಶ ನೀಡುವರಾಗಿದ್ದರೆಂದು ಅಪಾರ್ಥ ಮಾಡಿಕೊಳ್ಳಬೇಕಿಲ್ಲ. ಇಲ್ಲ, ಅವರು ಕ್ರಾಂತಿಗೆ ಹೊರತಾದ ಕ್ರಾಂತಿ ಬೇಡವೆನ್ನುವ ನಾಯಕರಾಗಿರಲಿಲ್ಲ. ಸೃಜನಶೀಲ ಚಿಂತನೆಯ ಜೊತೆಜೊತೆಗೆ ಅವರು ಹಲವೊಂದು ಜನಪರ ಆಂದೋಲನಗಳ ಮುಖಂಡತ್ವವನ್ನೂ ವಹಿಸಿದರು. ಗೋವಾ ವಿಮೋಚನಾ ಆಂದೋಲನ, ನೇಪಾಳದ ಜನತಂತ್ರ ಕ್ರಾಂತಿ, ರೈತರ ಚಳವಳಿಗಳು, ವಿಂಧ್ಯ ಪ್ರದೇಶದ ಆಂದೋಲನ, ಮಣಿಪುರದಲ್ಲಿ ಜನತಾಂತ್ರಿಕ ಸ್ವಾತಂತ್ರ್ಯಗಳ ಮೇಲಾದ ದಾಳಿಗಳ ಪ್ರತಿಭಟನೆ-ಇಂಥ ಎಲ್ಲ ಆಂದೋಲನಗಳಲ್ಲಿ ಲೋಹಿಯಾ ಅವರು ಮುಂಚೂಣಿಯಲ್ಲಿರುತ್ತಿದ್ದರು. ಆದರೆ, ಇದರ ಹೊರತಾಗಿಯೂ ಸಂಘಟನೆಯನ್ನು ರೂಪಿಸುವ ಕಾರ್ಯಕೌಶಲವೊಂದು ಬೇರೆ ಪ್ರಕಾರದ್ದೇ ಇರುತ್ತದೆ. ತಮ್ಮಲ್ಲಿ ಅಂಥ ಕೌಶಲವೂ ಇಲ್ಲ; ಅಂಥ ಕಾರ್ಯದಲ್ಲಿ ಆಸಕ್ತಿಯೂ ಇಲ್ಲವೆಂದು ಸ್ವತಃ ಲೋಹಿಯಾ ಅವರಿಗೇ ಅನಿಸುತ್ತಿತ್ತು. 1955ರ ತರುವಾಯ 2-3 ವರ್ಷಗಳ ವರೆಗೆ ಸಂಘಟನೆಯೊಂದಕ್ಕೆ ರೂಪ ಕೊಡಲು ಅವರು ಪ್ರಯತ್ನಿಸಿ ವಿಫಲರಾದರು. ಏನೆಂದರೂ ಅವರದು ಬೌದ್ಧಿಕ ನಾಯಕತ್ವದ ಅಭಿಲಾಷೆ. ಆದರೆ ಸಂಘಟನಾತ್ಮಕ ನಾಯಕತ್ವಕ್ಕೆ ಒಬ್ಬರು, ಬೌದ್ಧಿಕ ನಾಯಕತ್ವಕ್ಕೆ ಬೇರೊಬ್ಬರು ಎಂದಾಗುವುದು ಸಾಧ್ಯವೇ? ಇದು ಅಷ್ಟು ಸರಳ ವಿಚಾರವಲ್ಲವೆಂದು ಒಮ್ಮೆ ಅಶೋಕ ಮೆಹ್ತಾ ಲೋಹಿಯಾ ಅವರಿಗೆ ಹೇಳಿದರು. ''ನೀನು ಬೌದ್ಧಿಕ ನಾಯಕನಾಗಿರು; ಬೇರೊಬ್ಬರು ಸಂಘಟನೆಯ ನಾಯಕರಾಗಿರಲಿ'' ಎಂದರೆ ಯಾರು ಒಪ್ಪುತ್ತಾರೆ?

ಲೋಹಿಯಾ ಅವರು, ಸಾಮಾನ್ಯವಾಗಿ, ಒಂದು ವಿಚಾರವನ್ನು ಮುಂದಿಡುತ್ತಿದ್ದರು. ಆದರೆ ಅದರ ಅನುಷ್ಠಾನಕ್ಕಾಗಿ ಬೇರೆಯವರ ಜೊತೆಗೆ ಮಾತುಕತೆ ನಡೆಸುವ ಹೊಣೆ ಹೊರಲು ಮಾತ್ರ ಅವರು ಸಿದ್ಧರಿರುತ್ತಿರಲಿಲ್ಲ. ಇದರ ಕಾರಣವನ್ನೂ ಅವರು ಸ್ವತಃ ವಿವರಿಸಿದ್ದರು. ಅದು ಸಮಾಜವಾದಿ ಏಕತೆಯ (1964) ಹಾಗೂ

ಪ್ರತಿಪಕ್ಷಗಳ ಏಕತೆಯ (1966-67) ಸಂದರ್ಭ. ಆಗ ಅವರೆಂದಿದ್ದರು : "ಮೊದಲನೆಯ ಕಾರಣವೆಂದರೆ ಈಗ ನನ್ನ ವಯಸ್ಸು. ನಾನು-ನೀನು, ನಾ-ನಾ, ನೀ-ನೀ ಅಂತ ವಾಗ್ವಾದಕ್ಕಿಳಿಯುವುದಲ್ಲ. ಆದರೆ ನಿಮಗೆಲ್ಲ ಗೊತ್ತು. ಜನ ಒಂದೆಡೆ ಸೇರಿದರೆ ಸ್ವಲ್ಪ ಮಟ್ಟಿಗಾದರೂ ನಾನು-ನೀನುಅಂತ ವಾಗ್ವಾದ ನಡೆದೇ ನಡೆಯುತ್ತದೆ. ಮೊದಲು ಚರ್ಚೆಯ ರೂಪದಲ್ಲಿದ್ದರೂ ಕ್ರಮೇಣ ಅದು ವಾಗ್ವಾದದ ರೂಪಧಾರಣ ಮಾಡುತ್ತದೆ. ಅದೀಗ ನನ್ನಿಂದ ಸಾಧ್ಯವಾಗುವುದಿಲ್ಲ. ಈ ಕೆಲಸವನ್ನು ನೀವೇ ಮಾಡಬೇಕಾದೀತು. ಎರಡನೆಯ ಮಾತೆಂದರೆ ಪರಸ್ಪರ ವಿಚಾರಗಳನ್ನು ಅಳೆಯುವ, ತಿಳಿಯುವ ಅಥವಾ ವಿನಿಮಯ ಮಾಡಿಕೊಳ್ಳುವ ಸಾಮರ್ಥ್ಯವೂ ಅಷ್ಟಾಗಿ ನನ್ನಲ್ಲಿಲ್ಲ. ಯಾಕೆಂದರೆ ವರ್ಷಾನುವರ್ಷ ಅಥವಾ ನನ್ನ ಮಟ್ಟಿಗೆ ಶತಮಾನಗಳಿಂದ ಸೂಕ್ತವೆನಿಸುತ್ತ ಬಂದ ವಿಷಯದ ಬಗ್ಗೆ ವಿನಾಕರಣ ವಾದ ವಿವಾದವೆದ್ದುದಾದರೆ ನನ್ನಂಥ ವ್ಯಕ್ತಿ ಸಿಡಿದು ದೂರಾಗುವ ಸಂಭವವಿರುತ್ತದೆ. ಹೀಗೆ ಒಡಕು ಹುಟ್ಟಿಸುವ ಮನಸ್ಸೂ ನನಗಿಲ್ಲ. ಕೊಂಚ ಸೌಮ್ಯ ಮನಸ್ಸುಳ್ಳವರು, ತೋರಿಕೆಗಾದರೂ ಕೊಂಚ ಕೊಡು-ಕೊಳ್ಳಲು ಸಿದ್ಧರಿದ್ದವರು, ವಿಚಾರ ವಿನಿಮಯ, ವಾದ-ವಿವಾದ ಮಾಡಿಯೂ ಯಾವುದಾದರೊಂದು ನಿರ್ಣಯಕ್ಕೆ ಬಂದು ತಲುಪುವವರು ಪರಸ್ಪರ ಮಾತುಕತೆ ಮಾಡಿದರೊಳಿತು. ನನ್ನಂಥ ವ್ಯಕ್ತಿಯಿಂದ ಬಿರುಕು ಹುಟ್ಟುವ ಸಂಭವವೇ ಹೆಚ್ಚು. ಮೂರನೆಯ ಆತಂಕದ ಸಂಗತಿ ಏನೆಂದರೆ, ನಾನು ಎಷ್ಟೇ ಮೆದುವಾಗಿರಲು ಬಯಸಿದರೂ, ನನ್ನಂತ ಮನುಷ್ಯ ಮನಸ್ಸಿಗೆ ಬಂದಂತೆಯೆ ವರ್ತಿಸುವ ಹಾಗೆ ಮಾಡುವ ಒಂದು ವಿಲಕ್ಷಣ ವಾತಾವರಣ ಇಲ್ಲಿದೆ.

ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆಯ ಕಾಲದಿಂದಲೂ ಅದರ ಸಂಘಟನೆಯ ಹೊಣೆಯನ್ನು ಜಯಪ್ರಕಾಶರೇ ನಿರ್ವಹಿಸಿದರು. ಕಾಂಗ್ರೆಸ್‌ನಿಂದ ಪ್ರತ್ಯೇಕಿಸಿಕೊಂಡ ನಂತರವೂ ನಾಲ್ಕು ವರ್ಷಗಳವರೆಗೆ ಅವರು ದೇಶಾದ್ಯಂತ ಸಾಧನಗಳನ್ನು ಒಟ್ಟುಗೂಡಿಸುತ್ತ, ಕಾರ್ಯಕರ್ತರನ್ನು ಒಗ್ಗೂಡಿಸುತ್ತ ಹಾಗೂ ಸಮಿತಿಗಳನ್ನು ಸ್ಥಾಪಿಸುತ್ತ ಸಂಚರಿಸುತ್ತಲೇ ಇದ್ದರು. ಕಾರ್ಮಿಕಸಂಘಗಳ ಸಂಘಟನೆಯನ್ನು ರೂಪಿಸುವುದರಲ್ಲೂ ಅವರು ಸಕ್ರಿಯ ಪಾತ್ರವಹಿಸಿದರು. ಕಲ್ಲಿದ್ದಲು, ರೈಲು, ತಂತಿ-ಇತ್ಯಾದಿ ಕಾರ್ಮಿಕ ಸಂಘಗಳ ಜತೆ ಅವರ ನಿಕಟ ಸಂಬಂಧವಿತ್ತು. ಇವುಗಳ ಮಹಾಸಂಘಕ್ಕೆ ಅವರು ಅಧ್ಯಕ್ಷರಾಗಿದ್ದರು. ಆರಂಭದ ಹಂತದಲ್ಲಿ ಸಮಾಜವಾದಿ ಪಕ್ಷದ ಆಚಾರಸಂಹಿತೆ, ಠರಾವು ಇತ್ಯಾದಿಗಳನ್ನು ಅವರೇ ಬರೆಯುತ್ತಿದ್ದರು. ತಾತ್ಪರ್ಯವೆಂದರೆ 1952ರವರೆಗೆ ಎಲ್ಲ ದೃಷ್ಟಿಗಳಿಂದಲೂ ಸಮಾಜವಾದಿ ಆಂದೋಳನದ ಎಲ್ಲರಿಗಿಂತ ಹಿರಿಯ ನಾಯಕರಾಗಿದ್ದರು. 1952ರ ಚುನಾವಣೆಗಳಲ್ಲಿ ಸಮಾಜವಾದಿ ಪಕ್ಷಕ್ಕೆ ಸೋಲುಂಟಾದ ಬಳಿಕ ಅವರ ಮನಸು

ಪಕ್ಷದಿಂದ ದೂರ ಸರಿಯಲಾರಂಭಿಸಿತು. ಸಂಘಟನಾ ಕಾರ್ಯದಲ್ಲಿದ್ದ ಅವರ ಆಸಕ್ತಿ ತೀವ್ರವಾಗಿ ಕಡಿಮೆಯಾಯಿತು. ವೈಫಲ್ಯ ಇದಕ್ಕೊಂದು ಮುಖ್ಯ ಕಾರಣವಾಗಿತ್ತು. ಅದರೊಟ್ಟಿಗೆ, ಅವರ ವಿಚಾರಗಳಲ್ಲಿಯೂ ಪರಿವರ್ತನೆ ಉಂಟಾಗಲಾರಂಭಿಸಿತು. ಚುನಾವಣೆಯಲ್ಲಾದ ಪರಾಜಯವು ತಮ್ಮ ವೈಯಕ್ತಿಕ ಪರಾಜಯವೇ ಎಂಬ ಭಾವನೆ ಅವರದಾಯಿತು. ಭೂದಾನದತ್ತ ಹಾಗೂ ವಿನೋಬಾ ಅವರ ವಿಚಾರಧಾರೆಯತ್ತ ಅವರ ಒಲವು ಹೆಚ್ಚತೊಡಗಿತು. 1952ರಲ್ಲಿ ಉಪವಾಸ ಇತ್ಯಾದಿ ಆಧ್ಯಾತ್ಮಿಕ ಸ್ವರೂಪದ ಪ್ರಯೋಗಗಳಲ್ಲೂ ಅವರು ತಮ್ಮನ್ನು ತೊಡಗಿಸಿಕೊಂಡರು. ಈ ಮಧ್ಯೆಯೇ ಜವಹರಲಾಲ್ ನೆಹರೂ ಅವರು ಇವರಿಗೊಂದು ಪತ್ರ ಬರೆದು ಕಳಿಸಿದರು. ದೇಶದಲ್ಲಿ ಬೆಳೆಯುತ್ತ ಹೊರಟ ಸಂಪ್ರದಾಯವಾದಿ ಶಕ್ತಿಗಳ ಹಾಗೂ ವಿನಾಶಕ ವಿಚಾರಗಳ ವಿಷಯವನ್ನು ಪ್ರಸ್ತಾಪಿಸುತ್ತ ಪ್ರಧಾನ ಮಂತ್ರಿಗಳು ದೇಶದ ಎದುರಿಗಿರುವ ಭಯಾನಕ ಪರಿಸ್ಥಿತಿಯ ಚಿತ್ರವನ್ನು ಆ ಪತ್ರದಲ್ಲಿ ವಿವರಿಸಿದ್ದರು. ಕಾಂಗ್ರೆಸ್ ಹಾಗೂ ಸಮಾಜವಾದಿಗಳ ನಡುವಿನ ಕಂದರ ದೊಡ್ಡದಾಗುತ್ತಲೇ ಹೋಗಿರುವ ಬಗ್ಗೆ ಅವರು ತಮ್ಮ ವಿಷಾದವನ್ನು ವ್ಯಕ್ತಪಡಿಸಿದ್ದರು. ಜಯಪ್ರಕಾಶ್ ಅವರು ದೆಹಲಿಗೆ ಬಂದು ತಮ್ಮನ್ನು ಕಾಣಬೇಕೆಂದು ಆಮಂತ್ರಿಸಿದ್ದರು. ಪರಸ್ಪರ ಸಹಕಾರದ ಮಾತುಕತೆಗಳ ಸರಣಿ ಇಲ್ಲಿಂದಲೇ ಆರಂಭಗೊಂಡಿತು.

ಜಯಪ್ರಕಾಶ್ ಅವರಲ್ಲುಂಟಾದ ಈ ಬದಲಾವಣೆ ಲೋಹಿಯಾ ಅವರ ಮನಸ್ಸಿಗೆ ಸರಿ ಬರುತ್ತಿರಲಿಲ್ಲ. ಇದರಿಂದ ಸಮಾಜವಾದೀ ಆಂದೋಲನ ಹಾಗೂ ಪರಿವರ್ತನೆಯ ರಾಜನೀತಿ ನಾಶಗೊಳ್ಳಬಹುದೆಂಬ ಅಳುಕು ಅವರಲ್ಲಿತ್ತು. ಜಯಪ್ರಕಾಶರಲ್ಲಿ ನಾಯಕತ್ವದ ಕೆಲವು ಅವಶ್ಯಕ ಗುಣಗಳಿದ್ದು ಹಾಗೂ ತಮ್ಮಲ್ಲಿ ಅವುಗಳ ಅಭಾವವಿದ್ದ ಕಲ್ಪನೆ ಲೋಹಿಯಾ ಅವರಿಗಿತ್ತು. ಇತ್ತೀಚಿನ ದಿನಗಳ ಮಾತಿನಲ್ಲಿ ಇದಕ್ಕೆ ಜನಾಕರ್ಷಣೆ ಅನ್ನುವುದಿಲ್ಲ, ಮೋಡಿ ಎನ್ನುವುದುಂಟು. 1954ರಲ್ಲಿ ಅವರು ಜಯಪ್ರಕಾಶರಿಗೆ ಬರೆದ ಒಂದು ಪತ್ರದಲ್ಲಿ 'ನನಗೆ ಸಂಘಟನೆಯ ಭಾರ ಹೊರುವುದು ಅಸಾಧ್ಯವೆನಿಸುತ್ತದೆ. ನಾನು ಮಹಾ ಕಾರ್ಯದರ್ಶಿಯ ಸ್ಥಾನದಿಂದ ಹಿಂದೆ ಸರಿಯಬಯಸುತ್ತೇನೆ. ಈ ಹೊಣೆಯನ್ನು ನೀವು ನಿರ್ವಹಿಸಿರಿ' ಎಂದಿದ್ದರು. ಮುಂದುವರಿದು 'ದೇಶದ ಜನತೆ ನಿಮ್ಮನ್ನು ಮೆಚ್ಚಿಕೊಂಡಿದೆ. ನೀವು ಮನಸ್ಸು ಮಾಡಿದರೆ ದೇಶವನ್ನು ಅಲ್ಲಾಡಿಸಬಲ್ಲಿರಿ. ಆದರೆ ದೇಶವನ್ನು ಅಲ್ಲಾಡಿಸುವವರು ತಾವು ಸ್ವತಃ ಅಲ್ಲಾಡಬಾರದು, ಅಷ್ಟೇ' ಎಂದೂ ಅವರೆಂದಿದ್ದರು. ಲೋಹಿಯಾ ಅವರ ಈ ಅಭಿಪ್ರಾಯ ಮುಂದೆ ಬದಲಾದಂತೇನೂ ಕಾಣುವುದಿಲ್ಲ. ಪ್ರಜಾ ಸಮಾಜವಾದಿ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ, ಲೋಹಿಯಾ ಅವರನ್ನು ಪಕ್ಷದಿಂದ ತೆಗೆದು ಹಾಕಬೇಕೆಂಬ ಪ್ರಸ್ತಾಪವನ್ನು ಸ್ವತಃ

ಜಯಪ್ರಕಾಶರೇ ಮಾಡಿದ ಬಗ್ಗೆ ವಿಷಾದವೆನಿಸಿದ್ದರೂ, ಜಯಪ್ರಕಾಶರ ಸ್ಥಾನಮಾನ ಹಾಗೂ ಅಧಿಕಾರದ ವಿಷಯವಾಗಿ ಲೋಹಿಯಾ ಅವರ ಮನಸ್ಸಿನಲ್ಲಿ ಅಸೂಯೆಯೇನೂ ಇರಲಿಲ್ಲ. ಪ್ರಾಯಶಃ ವೈಚಾರಿಕ ನೆಲೆಯಲ್ಲಿ ಹಾಗೂ ಬೌದ್ಧಿಕ ನಾಯಕತ್ವದ ವಿಷಯದಲ್ಲಿ ಇಬ್ಬರಲ್ಲೂ ಕೊಂಚ ಸ್ಪರ್ಧೆಯಿದ್ದಿರಬಹುದಾದರೂ, ಅಧಿಕಾರ ಮೋಹಕ್ಕೆ ಅದರ ಸಂಬಂಧವೇನೂ ಇರಲಿಲ್ಲ. 1952ರಲ್ಲಿ ಪಂಚಮಢಿ ಎಂಬಲ್ಲಿ ನಡೆದ ಸಮ್ಮೇಳನದಲ್ಲಿ ಲೋಹಿಯಾ ಅವರು ಮಾಡಿದ ಅಧ್ಯಕ್ಷ ಭಾಷಣದಿಂದಾಗಿ ಸಮಾಜವಾದಿ ಕಾರ್ಯಕರ್ತರಿಗೆ ಸಾಕಷ್ಟು ಪ್ರೇರಣೆ ದೊರೆತಿತ್ತು. ಅದರಿಂದ ಭಾರತೀಯ ಸಮಾಜವಾದದ ಸ್ವರೂಪಕ್ಕೆ ಮತ್ತಷ್ಟು ಕಳೆಯೇರಿದಂತಾಗಿತ್ತು. 'ಇಲ್ಲಿಯವರೆಗೆ ನಾನು ಸಂಘಟನೆ ಹಾಗೂ ವಿಚಾರಪ್ರಣಾಲಿ ಇವೆರಡರ ನೆಲೆಯಲ್ಲೂ ಸಮಾಜವಾದೀ ಆಂದೋಲನದ ನಾಯಕನಾಗಿದ್ದೆ. ಈಗ ಲೋಹಿಯಾ ಅವರನ್ನೊಬ್ಬ ಬೌದ್ಧಿಕ ನಾಯಕನೆಂದು ಜನರು ಪರಿಗಣಿಸಲಾರಂಭಿಸಿದ್ದಾರೆ'ಎಂಬ ಮಾತು ಜಯಪ್ರಕಾಶರ ಮನಸ್ಸಿನಲ್ಲಿ ಮೂಡಿಕೊಂಡಿತ್ತು. ಅವರು ಸಮಾಜವಾದದ ಮೇಲೊಂದು ಹೊಸ ಪುಸ್ತಕವನ್ನು ಬರೆಯಬೇಕೆಂದುಕೊಂಡು ಅದರ ಕರಡು ರೂಪರೇಷೆ ಹಾಕಿಕೊಡಬೇಕಾಗಿ ನನ್ನನ್ನು ಕೇಳಿದ್ದರು. ಆಗ ಅವರಿಬ್ಬರ ಮಧ್ಯೆ ಅಸೂಯೆಯ ಭಾವ ಮೂಡಿಕೊಂಡಿದೆಯೇನೋ ಎಂದು ನನಗೆ ಭಾಸವಾಯಿತು. ಪಂಚಮಢಿ ಸಮ್ಮೇಳನದಲ್ಲಿ ಸೇರಿದ ಕಾರ್ಯಕರ್ತರು 'ಕಳೆದ ನಾಲ್ಕು ವರ್ಷಗಳಲ್ಲಿ ಜಯಪ್ರಕಾಶರು ಜನಸಂಘರ್ಷದ ಆಂದೋಳನದಲ್ಲಿ ವಿಶೇಷ ಸಾಧನೆಯನ್ನೇನೂ ಮಾಡಲಿಲ್ಲವೆಂದೂ, ಯಾವ ಚಮತ್ಕಾರ ದಿಂದೊಡಗೂಡಿದ ಕಾರ್ಯವನ್ನೇನೂ ಮಾಡಿ ತೋರಿಸಲಿಲ್ಲವೆಂದೂ' ಟೀಕಿಸಿದರು. ಈ ಮಾತಿನಿಂದ ಅವರಿಗೆ ತುಂಬ ನೋವಾಯಿತು. ತಮ್ಮನ್ನು ಸಮರ್ಥಿಸಿಕೊಳ್ಳುತ್ತ ಅವರೆಂದರು : 'ನೀವು ಸಂಘಟನಾ ಕಾರ್ಯದ ಭಾರವನ್ನೆಲ್ಲ ನನ್ನ ಮೇಲೆ ಹೊರಿಸಿದ್ದಿರಿ. ನಾನು ದೇಶದುದ್ದಗಲಕ್ಕೂ ಸಂಚರಿಸಬೇಕಾಗುತ್ತಿತ್ತು; ಹಣ ಶೇಖರಿಸಬೇಕಾಗುತ್ತಿತ್ತು. ಇಂಥ ಪರಿಸ್ಥಿತಿಯಲ್ಲಿ ಸಂಘರ್ಷದತ್ತ ಗಮನ ಹರಿಸಲು ಸಮಯವೆಲ್ಲಿತ್ತು?' ಜಯಪ್ರಕಾಶರ ಈ ಮಾತು ಒಂದರ್ಥದಲ್ಲಿ ಸರಿಯೇ ಆಗಿತ್ತು. ಆದರೆ ಅದಕ್ಕಿಂತಲೂ ಸರಿಯಾದ ಮಾತೊಂದಿತ್ತು. ಅದೆಂದರೆ, ಜವಾಹರಲಾಲ್ ನೆಹರೂ ಸರಕಾರದ ಬಗೆಗೆ ಅವರ ಮನಸ್ಸಿನಲ್ಲಿಲ್ಲದ ಕೋಪ, ನಂತರ, ಇಂದಿರಾಗಾಂಧಿಯವರ ಸರಕಾರದ ಬಗೆಗೆ ಅವರ ಮನಸ್ಸಿನಲ್ಲಿ ಹುಟ್ಟಿಕೊಂಡಿತೆಂಬುದು. ಅಂದರೆ ಸರಕಾರದೊಡನೆ ಕಾದಾಡಲು, ಹಾಗೂ ತಲೆಗೊಡಲು ಬೇಕಾದ ಕೆಂಗಿಡಿ ಅಥವಾ ಪ್ರಖರತೆ ಅವರಲ್ಲಿ ಮೂಡಲಿಲ್ಲ. ಇನ್ನೊಂದೆಡೆ ಇಷ್ಟೆಲ್ಲಾ ಆಂದೋಲನ ನಡೆಸಿದರೂ, ಇಷ್ಟೆಲ್ಲ ಹೊಸ ವಿಚಾರಗಳನ್ನು ಕೊಟ್ಟರೂ ಅದರ ಶ್ರೇಯಸ್ಸು ತಮಗೆಂದೂ ಸಿಕ್ಕಲಿಲ್ಲವೆಂಬ ದುಃಖ ಲೋಹಿಯಾ ಅವರಿಗೂ ಆಗುತ್ತಿತ್ತು.

ಜಯಪ್ರಕಾಶ್ ಅವರು ರಾಜಕಾರಣಕ್ಕೆ ಮರಳಿ ಬರಬೇಕೆಂದು ಲೋಹಿಯಾ ಅವರು 1957 ರಿಂದ ಸತತ ಪ್ರಯತ್ನಶೀಲರಾಗಿದ್ದರು. ತಮ್ಮ ಮರಣಕ್ಕೆ ಮುನ್ನವೂ ಅವರು ಜಯಪ್ರಕಾಶರನ್ನು ಭೇಟಿ ಮಾಡಿದ್ದರು, ಮುಂದೆಯೂ ಭೇಟಿಮಾಡುವ ಆಲೋಚನೆಯಲ್ಲಿದ್ದರು. 1957ರಲ್ಲಿ ಲೋಹಿಯಾ ಅವರೆಂದಿದ್ದರು: ''ಜಯ ಪ್ರಕಾಶರು ಸ್ವತಃ ಪಕ್ಷಕ್ಕೆ ಬರಬೇಕೆಂಬಷ್ಟರ ಮಟ್ಟಿಗೆ ನಾನು ಸಮಾಜವಾದಿ ಪಕ್ಷದ ಏಕತೆಯಲ್ಲಿ ಆಸಕ್ತಿಯುಳ್ಳವನಾಗಿದ್ದೇನೆ. ಯಾಕೆಂದರೆ, ಒಂದು ಸಣ್ಣ ಪಕ್ಷವನ್ನು ನಡೆಸಿಕೊಂಡು ಹೋಗುವುದೇ ನನಗೆ ಕಷ್ಟ ಸಾಧ್ಯವೆನಿಸುತ್ತಿರುವಾಗ, ಎಲ್ಲರೂ ಬಂದು ಸೇರಿದ ದೊಡ್ಡ ಪಕ್ಷವನ್ನು ನಾನು ಹೇಗೆ ತೂಗಿಸಿಕೊಂಡು ಹೋಗಬಲ್ಲೆ ? ಅದೇ ನನಗೆ ತಿಳಿಯದಾಗಿದೆ. ಆದ್ದರಿಂದಲೇ ಜಯಪ್ರಕಾಶರು ಬರಬೇಕಾದದ್ದು ಅಗತ್ಯ''. ಆದರೆ, ಆಗ ಜಯಪ್ರಕಾಶರ ಮೇಲೆ ಲೋಹಿಯಾ ಅವರ ಮಾತಿನ ಪರಿಣಾಮವೇನೂ ಆಗಲಿಲ್ಲ. ''ದೇಶವನ್ನು ಈ ರೀತಿ ಅಲ್ಲಾಡಿಸುವ ಪ್ರಕ್ರಿಯೆಯ ಬಗೆಗೆ ತಮಗೆ ವಿಶ್ವಾಸವೂ ಇಲ್ಲ; ಇಂಥ ಕಾರ್ಯದಲ್ಲಿ ತಮಗೆ ಆಸಕ್ತಿಯೂ ಇಲ್ಲ'' ಎಂದು ಅವರು ಸ್ಪಷ್ಟಪಡಿಸಿದರು. ಜಯಪ್ರಕಾಶ್-ಲೋಹಿಯಾ ಅವರ ನಡುವೆ ಉಂಟಾದ ಭಿನ್ನಾಭಿಪ್ರಾಯದ ಕಾರಣದಿಂದಾಗಿ, ಅವರಿಬ್ಬರ ವ್ಯಕ್ತಿತ್ವ ಹಾಗೂ ಗುಣಗಳು ಪರಸ್ಪರ ಪೂರಕವಾಗಿದ್ದರೂ, ಪರಸ್ಪರ ಸಹಕಾರಯುತ ಮುನ್ನಡೆ ನಿಷ್ಫಲಗೊಂಡುದು ಸಮಾಜವಾದಿ ಆಂದೋಲನದ ದೌರ್ಭಾಗ್ಯವೇ ಸರಿ.

ಮಹಾತ್ಮಾ ಗಾಂಧಿಯವರು ವ್ಯಾಪಕವಾದ ದೇಶಹಿತವನ್ನು ದೃಷ್ಟಿ ಯಲ್ಲಿರಿಸಿಕೊಂಡು ರಾಷ್ಟ್ರದ ರಥವನ್ನೆಳೆಯಲು ನೆಹರೂ-ಪಟೇಲರಂಥ ಎರಡು ಕುದುರೆಗಳನ್ನು ಸಫಲತಾಪೂರ್ವಕವಾಗಿ ಹೂಡಿದ್ದರು. ವಿಷಾದದ ಸಂಗತಿಯೆಂದರೆ ಸಮಾಜವಾದಿ ಆಂದೋಲನದಲ್ಲಿ ಪರಿವರ್ತನೆಯ ಬಂಡಿಗೆ ಜಯಪ್ರಕಾಶ್-ಲೋಹಿಯಾ ಅವರಂಥ ಎತ್ತುಗಳನ್ನು ಹೂಡುವಂಥ ಗಾಂಧಿಯೊಬ್ಬರು ಇರಲಿಲ್ಲ ಎಂಬುದು. ಯಾವ ಕೆಲಸವನ್ನು ಜಯಪ್ರಕಾಶರು ಮಾಡಬೇಕೆಂದು ಲೋಹಿಯಾ ಬಯಸುತ್ತಿದ್ದರೋ, ಹಾಗೂ ಲೋಹಿಯಾ ಅವರ ಜೀವಿತ ಕಾಲದಲ್ಲಿ ಜಯಪ್ರಕಾಶರು ಅದನ್ನು ತಳ್ಳಿ ಹಾಕುತ್ತ ಹೋದರೋ, ಆ ಕಾರ್ಯವನ್ನು 1974 ರ ನಂತರ ಅವರೇ ಮಾಡಿದರು. ಒಂದು ವೇಳೆ ಅವಕಾಶವಾಗಿದ್ದಿದ್ದರೆ ಲೋಹಿಯಾ 1969 ರಲ್ಲೇ ಕಾಂಗ್ರೆಸ್‌ನ ಗದ್ದುಗೆಯನ್ನು ಬುಡಮೇಲು ಮಾಡಿಬಿಡುತ್ತಿದ್ದರೇನೊ. ಆದರೆ ಹಾಗಾಗಲಿಲ್ಲ. ಜಯಪ್ರಕಾಶರು ಈ ಕೆಲಸವನ್ನು ಕೈಗೆತ್ತಿಕೊಳ್ಳುವವರೆಗೂ ಸಮಾಜವಾದಿ ಆಂದೋಲನ ವಿಘಟಿತಗೊಳ್ಳುತ್ತ ಅತ್ಯಂತ ಕ್ಷೀಣಾವಸ್ಥೆಗೆ ಬಂದು ತಲುಪಿತ್ತು. ದೇಶದ ರಾಜನೀತಿಗೊಂದು ಹೊಸ ದಿಕ್ಕು ತೋರಿಸುವ ಅಥವಾ ದೇಶದ

ಆರ್ಥಿಕ-ಸಾಮಾಜಿಕ ಚೌಕಟ್ಟಿನಲ್ಲಿ ಮೂಲಭೂತ ಬದಲಾವಣೆ ತರಲು ಬೇಕಾದ ಅದರ ಸಾಮರ್ಥ್ಯವೇ ಬತ್ತಿಹೋದಂತಾಗಿತ್ತು.

ಲೋಹಿಯಾ ಅವರಲ್ಲಿ ಯಾವುದೇ ಮುಲಾಜಿಲ್ಲದೆ ತಮ್ಮ ಆತ್ಮನಿರೀಕ್ಷಣೆ ಮಾಡಿಕೊಳ್ಳುವ ಬಲು ದೊಡ್ಡ ಗುಣವಿತ್ತು. ಪ್ರತಿಯೊಬ್ಬ ವ್ಯಕ್ತಿಯ ದೃಷ್ಟಿಕೋನ ಬೇರೆ ಬೇರೆಯಾಗಿರುತ್ತದೆಂಬ ಸಂಗತಿಯನ್ನು ಅವರು ಚೆನ್ನಾಗಿ ಬಲ್ಲವರಾಗಿದ್ದರು. ಸತ್ಯವನ್ನು ಪ್ರತಿಯೊಬ್ಬನೂ ಯಾವಾಗಲೂ ಯಾವುದೇ ಒಂದು ದೃಷ್ಟಿಕೋನದಿಂದ ನೋಡಬಯಸುತ್ತಾನೆ. ಇದು ಮನುಷ್ಯನ ಸಹಜವಾದ ದೋಷವಾಗಿದ್ದು, ಈ ದೋಷವನ್ನು ಸಂಪೂರ್ಣವಾಗಿ ತೊಡೆದು ಹಾಕುವುದು ಸಾಧ್ಯವಿಲ್ಲವೆಂದು ಅವರು ಹೇಳುತ್ತಿದ್ದರು. ಆದರೆ ಪೂರ್ಣಸತ್ಯವನ್ನು ಗ್ರಹಿಸಲು ಒಂದು ಸಮ್ಯಕ್‌ದೃಷ್ಟಿ, ಒಂದು ಪೂರ್ಣದೃಷ್ಟಿಯೇ ರೂಪಗೊಳ್ಳಬೇಕೆಂಬುದು ಅವರ ಇಚ್ಛೆಯೂ ಆಗಿತ್ತು; ಅವರ ಪ್ರಯತ್ನವೂ ಸಾಗಿತ್ತು.

ಮುಂದೆ ಅವರು ಕೆಲವು ವೇಳೆ ಪರಿಮಾಣಭೇದ ಎಂಬುದರ ಬಗೆಗೆ ಮಾತು ಆಡುತ್ತಿದ್ದರು. ಪರಿಮಾಣಭೇದ ಅತ್ಯಗತ್ಯವೆಂದೇ ಅವರಿಗೆನಿಸುತ್ತಿತ್ತು. ಆದರೆ ಅನೇಕ ಸಲ ಇದನ್ನು ಸಾಧಿಸುವುದು ಅವರಿಗೇ ಸಾಧ್ಯವಾಗುತ್ತಿರಲಿಲ್ಲ. ಅವರ ಪ್ರಕಾರ, ಪರಿಮಾಣಭೇದವೆಂದರೆ ದೊಡ್ಡ ಕಾರ್ಯಸಾಧನೆಯ ಸಂದರ್ಭದಲ್ಲಿ ಸಣ್ಣ ಪುಟ್ಟ ಲೋಪ-ದೋಷಗಳನ್ನು ಗಮನಿಸದಿರುವುದು. 'ನನ್ನಲ್ಲಿ ಪರಿಮಾಣಭೇದದ ಗುಣವಿದ್ದಿದ್ದರೆ ಜನರ ಲೋಪ-ದೋಷಗಳನ್ನು ನಾನು ನುಂಗಿಕೊಳ್ಳಬಹುದಿತ್ತು.' ಎಂದು ಅವರು ಅನ್ನುತ್ತಿದ್ದರು. ಆದರೆ ಪರಿಮಾಣಭೇದದ ಗುಣ ಇಲ್ಲದಿರುವ ಕಾರಣ ಸಂಬಂಧ ಕಡಿದುಕೊಳ್ಳುವ ಪ್ರಸಂಗಗಳು ಬರುತ್ತವೆ. ರಾಜಕಾರಣ ದಲ್ಲಿರುವವರು ಹೀಗೆಲ್ಲ ಮಾಡಬಾರದು. ನಾವು ಬೀಳುತ್ತ ಏಳುತ್ತ ಈ ಹಂತದವರೆಗೆ ಬಂದು ತಲುಪಿದ್ದೇವೆ. ಈಗ ಯಾರೂ ಸಂಬಂಧ ಹರಿದುಕೊಳ್ಳದೇ ಅದನ್ನು ಭದ್ರಗೊಳಿಸಬೇಕು. ತಮ್ಮ ಹೋರಾಟ ದೊಡ್ಡ ಶಕ್ತಿಯೊಡನೆ -ಪರ್ವತದಂಥ ಶಕ್ತಿಯೊಡನೆ-ನಡೆಯುವುದಿದೆ. ಆದ್ದರಿಂದ ಈಗ ಸಂಬಂಧ ಕಡಿದುಕೊಳ್ಳುವ ವಿಚಾರವನ್ನೇ ಎತ್ತಬಾರದು-ಅದು ಯಾವ ಪ್ರಕಾರದ್ದಾಗಿದ್ದರೂ. ದೇವರು ಭಾರತದಲ್ಲಿ ಇಂಥ ಜನರನ್ನೇ ಸೃಷ್ಟಿ ಮಾಡಿರುವಾಗ ನಾವು ಮಾಡುವುದೇನು ? ಯಾರು ಯಾರನ್ನು ಯಾವ ಯಾವ ಹಂತದವರೆಗೆ ಪರೀಕ್ಷೆ ಮಾಡಿ ನೋಡಲು ಸಾಧ್ಯ?

ಸಿದ್ಧಾಂತದ ದೃಷ್ಟಿಯಿಂದ ಅತಿ ಎಂಬುದು ಎರಡೂ ರೀತಿಯಿಂದ ಒಳ್ಳೆಯದಲ್ಲ

ಎಂಬುದನ್ನು ಲೋಹಿಯಾ ಚೆನ್ನಾಗಿ ಅರಿತವರಾಗಿದ್ದರು. ಅವರು ಹೇಳುತ್ತಿದ್ದರು: ''ಯಾವೊಬ್ಬ ವ್ಯಕ್ತಿ ಅಥವಾ ರಾಷ್ಟ್ರದಲ್ಲಿ ಹಠದ ಸ್ವಭಾವ ಅತಿಯಾಗಿ ಬಿಟ್ಟರೆ ಅದು ಒಳ್ಳೆಯ ಲಕ್ಷಣವಲ್ಲ, ಸದಾ ಆತ್ಮಸಮರ್ಪಣೆಯ ಮಟ್ಟಕ್ಕೆ ಹೋಗುವ ವಿನಮ್ರ ಭಾವನೆಯೂ ಅತಿಯಾಗಿಬಿಟ್ಟರೆ ನಮಗೆ ವಿಷವಾಗಿ ಪರಿಣಮಿಸುತ್ತದೆ. ಎರಡಕ್ಕೂ ಒಂದು ಮಿತಿಯೆಂಬುದಿರಬೇಕು. ಆ ಮಿತಿಯನ್ನು ಮೀರಿ ನಾವು ಹೋಗಕೂಡದು. ತಲೆ ಹೋದರೂ ತಲೆ ಬಾಗಿಸಕೂಡದು; ಯಾರದೇ ಕಾಲ ಕೆಳಗಿನ ಹುಲ್ಲಾಗ ಕೂಡದು.'' ನಮ್ಮ ಮಿತಿಗಳ ವಿಷಯದಲ್ಲಿ, ಆಳುವ ಪಕ್ಷದೊಡನೆ ವಿರೋಧವಾಗಿ ನಿಂತು ಆಲೋಚನೆ ಮಾಡುವ ವಿಷಯದಲ್ಲಿ, ನಿಯಮಪಾಲನೆಯ ವಿಷಯದಲ್ಲಿ, ಲೋಹಿಯಾ ಅವರು ಛಲದಿಂದಲೇ ವರ್ತಿಸುತ್ತಿದ್ದರು. ಇಂಥ ಪ್ರಸಂಗದಲ್ಲಿ ಪರಿಮಾಣಭೇದದ ವಿಚಾರವೇ ಸುಳಿಯುತ್ತಿರಲಿಲ್ಲ. ಆದರೆ ಜಯಪ್ರಕಾಶರಲ್ಲಿ ಬೇರೆ ತರಹದ ದೋಷಗಳಿದ್ದವು. ವಿರೋಧ ವ್ಯಕ್ತಪಡಿಸುವ ರಾಜಕೀಯದಲ್ಲಿ ಅವರು ಬಂಡೆಗಲ್ಲಿನಂತೆ ಗಟ್ಟಿಯಾಗಿ ನಿಲ್ಲಲಾಗದವರಾಗಿದ್ದರು. ಕೇವಲ 1942 ರ ಆಂದೋಲನ ಹಾಗೂ 1974-77 ರಲ್ಲಿ ಅವರು ಲೋಹಿಯಾರಂತೆ ಛಲವಂತರಾಗಿ ತಮ್ಮ ಕಾರ್ಯಸಾಧನೆ ಮಾಡಿ ತೋರಿಸಿದರು.

ಲೋಹಿಯಾ ತುಂಬ ಅಹಂಕಾರಿ ಹಾಗೂ ಗರ್ವದ ವ್ಯಕ್ತಿಯಾಗಿದ್ದರೆಂಬುದು ಬಹಳ ಜನರ ಆರೋಪವಾಗಿತ್ತು. ಕೆಲ ಮಟ್ಟಿಗೆ ಇದು ನಿಜವೂ ಆಗಿತ್ತು. ಅವರು ಸ್ವತಃ ಅನ್ನುತ್ತಿದ್ದರು: 'ಒಬ್ಬ ವ್ಯಕ್ತಿ ಯಾವುದೊಂದು ಸಿದ್ಧಾಂತದ ಅಥವಾ ವಿಚಾರಧಾರೆಯ ವಾಹಕನಾಗಿಬಿಟ್ಟರೆ, ಅದರಿಂದ ದೂರವಾಗಿರುವುದು ಕಷ್ಟಕರ'. ಪ್ರತಿಯೊಬ್ಬ ವ್ಯಕ್ತಿಯೊಡನೆಯೂ ಲೋಹಿಯಾ ಅವರ ವರ್ತನೆ ಸಮಾನವಾಗಿರುತ್ತಿತ್ತು, ಪ್ರೀತಿಯಿಂದ ಕೂಡಿರುತ್ತಿತ್ತು. ಆತ ಹರಕು ಬಟ್ಟೆಯುಟ್ಟವನಾಗಿರಲಿ, ಹೊಟ್ಟೆ ಹಸಿದವನಾಗಿರಲಿ ಅಥವಾ ಯಾವನೇ ಮಹಾರಾಜ ಇಲ್ಲವೆ ಶೆಟ್ಟಿಯಾಗಿರಲಿ ಇಂಥ ಸಮದೃಷ್ಟಿಯ ನಾಯಕನನ್ನು ನಾನೆಲ್ಲಿಯೂ ನೋಡಿಲ್ಲ. ಈ ತರಹದ ಸಮದೃಷ್ಟಿ ಬಲು ವಿರಳವಾದದ್ದು. ಜಯಪ್ರಕಾಶರಲ್ಲಿ ಇಂಥ ಸಮದೃಷ್ಟಿಯಿರಲಿಲ್ಲ. ಅವರ ವರ್ತನೆಯಲ್ಲಿ ಅಂತರ ಕಂಡು ಬರುತ್ತಿತ್ತು. ಶ್ರೀಮಂತರಿಂದ ಹಾಗೂ ಪ್ರತಿಷ್ಠಿತ ವ್ಯಕ್ತಿಗಳಿಂದ ಅವರು ಕೆಲವು ವೇಳೆ ಪ್ರಭಾವಿತರಾಗುತ್ತಿದ್ದರು.

ಗಾಂಧೀಜಿಯವರ ಮೃದುಭಾಷಿತ್ವ ಹಾಗೂ ವಿರೋಧಿಗಳ ಬಗೆಗೆ ಅವರು ತೋರುತ್ತಿದ್ದ ಸೌಮ್ಯ ಹಾಗೂ ಸದ್ಭಾವಪೂರ್ಣ ವರ್ತನೆಯು ಅದ್ಭುತ ಹಾಗೂ ಅಪರೂಪದ ಸಂಗತಿಯಾಗಿತ್ತು. ಲೋಹಿಯಾ ಹಾಗೂ ಜಯಪ್ರಕಾಶರ ಮೇಲೆ ಗಾಂಧೀಜಿಯವರ ಗಾಢವಾದ ಪ್ರಭಾವವಿತ್ತು. ಆದರೆ ಲೋಹಿಯಾ ಅವರ ವ್ಯಕ್ತಿತ್ವ

ಆಕರ್ಷಕವಾಗಿದ್ದರೂ ಅದರಲ್ಲೊಂದು ಪ್ರಖರತೆಯಿತ್ತು. ಅವರ ಮಾತುಗಳೂ ಖಾರವಾಗಿರುತ್ತಿದ್ದವು.ತಮ್ಮ ಸಹೋದ್ಯೋಗಿಗಳ ಮೇಲೆ ಪ್ರಹಾರ ಮಾಡುವಾಗ ಅವರಿಗೆ ಇತರರ ಭಾವನೆಗಳ ಬಗೆಗೆ ಅಷ್ಟಾಗಿ ಗಮನವಿರುತ್ತಿರಲಿಲ್ಲ. ಚುಚ್ಚು ಮಾತುಗಳಿಂದಾಗಿ ಅವರಿಗೆ ವೈರಿಗಳೂ ಸಾಕಷ್ಟಾಗಿದ್ದರು. ಜಯಪ್ರಕಾಶರ ಸ್ವಭಾವ ಸೌಮ್ಯ ಸ್ವರೂಪದ್ದು. ಅವರ ವ್ಯಕ್ತಿತ್ವದಲ್ಲೊಂದು ಮಾಧುರ್ಯವಿತ್ತು. ಅವರು ತಕ್ಷಣ ಯಾರನ್ನೂ ನಿರಾಸೆಗೊಳಿಸುತ್ತಿರಲಿಲ್ಲ. ಅವರು ಮೃದುಭಾಷಿಯಾಗಿದ್ದರು. ಹಾಗೆ ನೋಡಿದರೆ ವಾಮಪಂಥೀಯರಾದ ನಮ್ಮಲ್ಲಿ ತೀಕ್ಷ್ಣ ಮಾತುಗಾರಿಕೆಯೇ ವಿಶೇಷ ರೂಢಿಯಲ್ಲಿರುವುದು. ತಿಲಕ್-ಅಗರ್‌ಕರ್ ಅಥವರ ನಡುವೆಯೂ ವಾದ-ವಿವಾದಗಳ ಬಿಸಿಯೇರುತ್ತಿರಲಿಲ್ಲ. ಗಾಂಧೀಜಿಯವರು ರೂಢಿಯಲ್ಲಿ ತಂದ ವಿವಾದದ ಹೊಸ ಶೈಲಿಯನ್ನು ಲೋಹಿಯಾ ಅವರೂ ರೂಢಿಸಿಕೊಂಡಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ವಿರೋಧಗಳ ಬಗೆಗೆ ಸದ್ಭಾವನೆಯಿರಿಸಿಕೊಂಡು ಮಾತುಕತೆ ನಡೆಸುವುದು ತಮ್ಮ ದೌರ್ಬಲ್ಯದ ಲಕ್ಷಣವೇನೂ ಅಲ್ಲವೆಂಬುದನ್ನು ಗಾಂಧೀಜಿ ತೋರಿಸಿಕೊಟ್ಟರು.

ಸಂಘಟನೆ ಹಾಗೂ ನಿಯಮಪಾಲನೆಯ ವಿಷಯದಲ್ಲೂ ಲೋಹಿಯಾ ಅವರ ವಿಚಾರಗಳು ಅತ್ಯಂತ ಆದರ್ಶವಾದಿ ಸ್ವರೂಪದವಾಗಿದ್ದವು. ಆದರೆ ಈ ವಿಷಯದಲ್ಲಿ ಅವರಲ್ಲಿ ಅತಿ ಎನ್ನಬಹುದಾದ ದೋಷ ಇಣಕಿಹಾಕುತ್ತಿತ್ತು. 1955 ರಿಂದ 1960 ರವರೆಗೆ ಲೋಹಿಯಾ ಅವರು ಸಂಘಟನೆ ಕುರಿತಂತೆ 'ಆದರ್ಶವಾದಿ ನೆಲೆಯಲ್ಲಿ ಯಾವ ಪಕ್ಷವು ವಿರೋಧ ಪಕ್ಷದ ಸ್ಥಾನದಲ್ಲಿದ್ದೂ ತನ್ನನ್ನು ನಿಷ್ಕಲ್ಮಕ್ಷವಾಗಿರಿಸಿಕೊಳ್ಳಬಲ್ಲುದೋ ಅದೇ ಪಕ್ಷ ಮುಂದೆ ಸರಕಾರ ರಚಿಸಿದಾಗಲೂ ನಿಷ್ಕಲ್ಮಷ ಆಡಳಿತವನ್ನು ನಡೆಸಬಲ್ಲ ಕ್ಷಮತೆಯನ್ನು ಹೊಂದಿರುತ್ತದೆ' ಎಂದು ಬರೆದುದುಂಟು. ಅದಕ್ಕಾಗಿಯೇ ಹುರಿಯಾಳುಗಳ ಆಯ್ಕೆಗಾಗಿ ಹಾಗೂ ಶಾಸಕರ ನಡವಳಿಕೆಗಾಗಿ ಕೆಲವು ನಿಷ್ಠುರ ನಿಯಮಗಳನ್ನು ಅವರು ರೂಪಿಸಿದ್ದರು. ಉದಾಹರಣೆಗೆ 1) ಯಾವುದೊಂದು ಮತದಾರ ಕ್ಷೇತ್ರದಲ್ಲಿಯ ಮತದಾರರ ಪೈಕಿ ನೂರಕ್ಕೆ ಒಬ್ಬರಷ್ಟು ಪಕ್ಷದ ಸದಸ್ಯರಿದ್ದರೆ ಮಾತ್ರ ಅಲ್ಲಿಂದ ಒಬ್ಬ ಹುರಿಯಾಳು ಸ್ಪರ್ಧಿಸಬಹುದು. 2) ನೇರವಾಗಿ ಚುನಾವಣೆಯಲ್ಲಿ ಸೋತವರು ವಿಧಾನ ಪರಿಷತ್ ಅಥವ ರಾಜ್ಯಸಭೆಗೆ ಮತ್ತೆ ಸ್ಪರ್ಧಿಸಕೂಡದು. 3) ಪಕ್ಷದ ಮುಖಾಂತರ ನಡೆಯುವ ಆಂದೋಲನಗಳಲ್ಲಿ ಪದಾಧಿಕಾರಿಗಳೂ ಸಹಭಾಗಿಗಳಾಗಬೇಕು. ಇಂಥ ನಿಯಮಗಳು ಚೆನ್ನಾಗಿಯೇ ಇದ್ದವು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಅವುಗಳ ಆಚರಣೆ ಮಾತ್ರ ಸರಿಯಾದ ರೀತಿಯಲ್ಲಿ ನಡೆಯಲಿಲ್ಲ. ಮೊದಲನೆಯ ನಿಯಮದ ಕಾರಣ ಸಮಾಜವಾದಿ ಪಕ್ಷವು ವ್ಯಾಪಕವಾದ ಪ್ರಮಾಣದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಲಾಗಲಿಲ್ಲ.

ಹಾಗೂ ಗ್ರಾಮದಿಂದ ಕ್ಷೇತ್ರೀಯ ಸ್ತರದವರೆಗಿನ ಕಾರ್ಯಕರ್ತರು ಇತರ ಪಕ್ಷಗಳನ್ನು ಸೇರಿಕೊಂಡರು. ಮುಲ್ಕಾ ಗೋವಿಂದರೆಡ್ಡಿ ಅವರ ವಿಷಯದಲ್ಲಿ ಎರಡನೆಯ ನಿಯಮವನ್ನು ಕಡ್ಡಾಯದಿಂದ ಪಾಲಿಸಲಾಯಿತು. ತತ್ಪರಿಣಾಮವಾಗಿ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಇತ್ಯಾದಿ ಪ್ರಾಂತಗಳಲ್ಲಿ ಪಕ್ಷದ ಸಂಘಟನೆಗೆ ದೊಡ್ಡ ಧಕ್ಕೆಯುಂಟಾಯಿತು. ಅಷ್ಟೇ ಅಲ್ಲ, ಕೆಲವೇ ವರ್ಷಗಳ ನಂತರ ಲೋಹಿಯಾ ಅವರ ಒಬ್ಬ ಪ್ರಮುಖ ಅನುಯಾಯಿ ಉತ್ತರಪ್ರದೇಶದಲ್ಲಿ ಈ ನಿಯಮವನ್ನೇ ಮುರಿದು ರಾಜ್ಯಸಭೆಯ ಚುನಾವಣೆಯಲ್ಲಿ ಸ್ಪರ್ಧಿಸಿದರು. ಈ ಸದಸ್ಯನೊಡನೆ ಲೋಹಿಯಾ ಅನೇಕ ದಿನಗಳವರೆಗೆ ಮಾತನಾಡುವುದನ್ನು ಕೂಡ ನಿಲ್ಲಿಸಿದ್ದರು. ಈ ಪ್ರಸಂಗದಲ್ಲಿ ಅವರಿಗೆ ಈ ಹಿಂದೆ ಉಲ್ಲೇಖಿಸಿರುವ ಪರಿಮಾಣ ಭೇದದ ಅವಶ್ಯಕತೆ ತಲೆದೋರಿತು. ಅಂತೆಯೇ ಅವರು ಈ ವಿಷಯದಲ್ಲಿ ಹೆಚ್ಚು ಉಗ್ರರಾಗಲಿಲ್ಲ. ಹೀಗೆಯೇ ಮುಲ್ಕಾ ಗೋವಿಂದರೆಡ್ಡಿಯವರ ವಿಷಯದಲ್ಲೂ ತಮ್ಮ ಪರಿಮಾಣ ಭೇದದ ತತ್ವವನ್ನು ಅನ್ವಯಿಸಿದ್ದರೆ ಒಳ್ಳೆಯದಿತ್ತೇನೋ.

ಚುನಾವಣೆಯ ಚಾಕಚಕ್ಯತೆಯ ಬಗ್ಗೆ ಲಕ್ಷ್ಮಣ ರೇಖೆ ಎಳೆಯುವುದು ಮತ್ತು ಪರಿಮಾಣ ಭೇದ ತತ್ವವನ್ನು ಅನುಸರಿಸುವುದೂ ಅಷ್ಟು ಸುಲಭವೇನಿರಲಿಲ್ಲ. ಆರಂಭದ ವರುಷಗಳಲ್ಲಿ, ಚುನಾವಣೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಅಥವಾ ವಿರೋಧವನ್ನು ಪ್ರಕಟಿಸುವ ವಿಷಯದಲ್ಲಿ ಅವರು ಅಸಮ್ಮತಿ ಸೂಚಿಸಿದ್ದರು. ಅದು ರಾಜಕೀಯ ಮೋಸ ಹಾಗೂ ಸ್ವಲಾಭ ಪ್ರವೃತ್ತಿಯ ಪ್ರತೀಕವೆಂದೇ ಅವರು ಭಾವಿಸಿದ್ದರು. 1953ರಲ್ಲಿ ಕಾಂಗ್ರೆಸ್ ಜೊತೆಗೆ ಸಹಕರಿಸುವ ಮಾತುಕತೆ ನಡೆದಾಗ ಹಾಗೂ ಆಂಧ್ರದಲ್ಲಿ ಟಿ. ಪ್ರಕಾಶಂ ಅವರ ವಿಷಯದಲ್ಲಿ ಕಾಂಗ್ರೆಸ್ಸು ದುರ್ವ್ಯವಹಾರ ನಡೆಸಿದಾಗ, ತಿರುವಾಂಕೂರ್-ಕೊಚ್ಚಿನ್ ವಿಧಾನಸಭಾ ಚುನಾವಣೆಯಲ್ಲಿ ಕಮ್ಯುನಿಸ್ಟರ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ ಅವರು ಸಮರ್ಥನೆ ನೀಡಿದ್ದರು. ಆದರೆ ಚುನಾವಣೆ ಕಾಲದ ಇಂಥ ಹೊಂದಾಣಿಕೆಯ ಧೋರಣೆಯನ್ನು ಇಡೀ ದೇಶಕ್ಕೆ ಏಕಪ್ರಕಾರವಾಗಿ ಅನ್ವಯಿಸುವ ಬಗ್ಗೆ ಅವರ ಸಮ್ಮತಿಯಿರಲಿಲ್ಲ. ಉತ್ತರ ಪ್ರದೇಶದಲ್ಲಿ ಒಬ್ಬ ಸದಸ್ಯರು ಈ ಪ್ರಶ್ನೆ ಎತ್ತಿದಾಗ, ಅಲ್ಲಿಯ ಸಮಾಜ ವಾದಿಗಳು ತಮ್ಮ ಸಾಮರ್ಥ್ಯ ಹಾಗೂ ದೌರ್ಬಲ್ಯಗಳನ್ನು ಮೊದಲು ಅರಿತುಕೊಂಡೇ ಮುಂದಿನ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು. ಅವರ ದೃಷ್ಟಿಯಲ್ಲಿ ಸಮಾಜವಾದಿಗಳು ಸಮರ್ಥರಿದ್ದ ಕಡೆಗೆಲ್ಲ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳುವುದು ಅಗತ್ಯವೇ ಇರಲಿಲ್ಲ.

ಕಾಂಗ್ರೆಸ್‌ನ 2/3 ಬಹುಮತವನ್ನು ಕಡಿಮೆಮಾಡುವ ದೃಷ್ಟಿಯಿಂದ 1957ರಲ್ಲಿ

ಆಳುವ ಪಕ್ಷದ ಹೊರತಾಗಿ ಉಳಿದವರು ಚುನಾವಣೆಯ ಹೊಂದಾಣಿಕೆ ಮಾಡಿಕೊಳ್ಳಬೇಕೆಂದು ಜಯಪ್ರಕಾಶರು ಸೂಚಿಸಿದ್ದರು. ಬಂಗಾಳ, ಮಹಾರಾಷ್ಟ್ರ ಇತ್ಯಾದಿ ರಾಜ್ಯಗಳಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷವು ಈ ಪ್ರಸ್ತಾಪವನ್ನು ಆಚರಣೆಯಲ್ಲೂ ತಂದಿತು. ಆದರೆ ಇದು ಸಮಯ ಸಾಧಕತೆಯ ರಾಜನೀತಿ ಎಂದು ಲೋಹಿಯಾ ಅವರು ಕಟುವಾಗಿ ಟೀಕಿಸಿದರು. ಚುನಾವಣೆಯ ಕಾರ್ಯಗಳಲ್ಲಿ ಸಂಯುಕ್ತ ಹೋರಾಟದ ನೀತಿಯನ್ನು ಅನುಸರಿಸುವುದರಿಂದ, ತಮ್ಮ ಪಕ್ಷದ ಮೂಲಭೂತ ಸಿದ್ಧಾಂತಗಳ ಅವಹೇಳನವಾಗುತ್ತದೆಂದೂ ಈ ನೀತಿಯೊಡನೆ ಸಮ್ಮತಿಸದ ಕಾರ್ಯಕರ್ತರು ಮುಕ್ತರೀತಿಯಲ್ಲಿ ಚುನಾವಣೆಯ ಪ್ರಚಾರ ಮಾಡಬಹುದೆಂದೂ ಅವರು ಅಭಿಪ್ರಾಯಪಟ್ಟರು. ಆದರೆ ಪಕ್ಷದ ಧೋರಣೆಯೇ ಬದಲಾಗದ ಹೊರತು ಅದರ ವಿರುದ್ಧವಾಗಿ ಯಾವ ಸದಸ್ಯನೂ ಯಾವ ಕೆಲಸವನ್ನೂ ಮಾಡಬಾರದೆಂದು ಅವರು ನುಡಿದರು. 1962ರವರೆಗೂ ಲೋಹಿಯಾ ಅವರು ಇದೇ ಧೋರಣೆಗೆ ಅಂಟಿಕೊಂಡಿದ್ದರು. ವಿಧಾನಸಭೆ ಅಥವಾ ಲೋಕಸಭೆಗೆ ಆರಿಸಿಬರಲು ಇಂಥ ಸಮಯ ಸಾಧಕ ಹೊಂದಾಣಿಕೆಯ ದಾರಿ ಸರಿಯಲ್ಲವೆಂದೇ ಅವರು ಭಾವಿಸಿದ್ದರು. ಕೆಲವು ವರ್ಷಗಳ ನಂತರ ಸಮಾಜವಾದಿ ಪಕ್ಷವು ಯಾಕೋ ಬೇರು ಬಿಡುತ್ತಿಲ್ಲವೆಂದು ಅವರಿಗೆ ಭಾಸವಾಗಲಾರಂಭಿಸಿತು. ಕೆಲಕಾಲದವರೆಗೆ ಪ್ರಾಯಶಃ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಜನಸಂಘ, ಪ್ರಜಾ ಸೋಷಲಿಸ್ಟ್ ಪಾರ್ಟಿ ಇತ್ಯಾದಿ ಪಕ್ಷಗಳ ಘಟಕಗಳನ್ನು ಸೋಷಲಿಸ್ಟ್ ಪಾರ್ಟಿಯೊಡನೆ ಸೇರಿಸಿ ಪರಿವರ್ತನಾಕಾಂಕ್ಷಿ ಪಕ್ಷವೊಂದನ್ನು ರೂಪಿಸಬಹುದೆಂಬ ಅಭಿಲಾಷೆ ಅವರದಾಗಿತ್ತು. ಆದರೆ ಇದು ಕೇವಲ ಕಲ್ಪನಾಲಹರಿ ಎಂದು ಅವರಿಗೆ ಬಲುಬೇಗ ಮನವರಿಕೆಯಾಯಿತು. 1963ರಿಂದ ಅವರು ಕಾಂಗ್ರೆಸ್ಸನ್ನು ಸೋಲಿಸಲು ಹೊಂದಾಣಿಕೆಯ ನೀತಿಯನ್ನು ಒಪ್ಪಿಕೊಳ್ಳಲೇಬೇಕಾಯಿತು. ಆದರೂ ಜಯಪ್ರಕಾಶ ಹಾಗೂ ಲೋಹಿಯಾ ಅವರ ಧೋರಣೆಯಲ್ಲಿ ಮೂಲಭೂತವಾದ ಒಂದು ವ್ಯತ್ಯಾಸ ಇದ್ದೇ ಇತ್ತು. ಜಯಪ್ರಕಾಶರಿಗೆ ಕಾಂಗ್ರೆಸ್‌ನ ಶಕ್ತಿಯನ್ನು ಕುಂದಿಸಬೇಕೆಂದು ಅನಿಸುತ್ತಿದ್ದರೂ, ರಾಷ್ಟ್ರೀಯ ಸ್ತರದಲ್ಲಿ ಏಕಾಭಿಪ್ರಾಯದ ಮರೀಚಿಕೆಯ ಮೋಹವೂ ಅವರನ್ನು ಆವರಿಸಿಕೊಂಡಿತ್ತು. ಅವರು ಪಕ್ಷಾತೀತ ಪ್ರಜಾತಂತ್ರ, ಪಕ್ಷಾತೀತ ರಾಜನೀತಿ ಇತ್ಯಾದಿ ಅವಾಸ್ತವ ಕಲ್ಪನಾ ಜಾಲದಲ್ಲಿ ಸಿಲುಕಿಕೊಂಡವರಾಗಿದ್ದರು.

ಪಕ್ಷಾತೀತ ಪ್ರಜಾತಂತ್ರದ ವಿಚಾರವೆಂದರೆ ಏಕಪ್ರಭುತ್ವಾಧಿಕಾರದ ಒಂದು ರೂಪವೆಂದೇ ಲೋಹಿಯಾ ಭಾವಿಸುತ್ತಿದ್ದರು. ಪಕ್ಷ-ವಿಪಕ್ಷಗಳು ಇದ್ದರೇ ವಾದವಿವಾದ ಹಾಗೂ ಚರ್ಚೆ ನಡೆಯುವುದು ಸಾಧ್ಯವೆಂದು ಅವರು ಹೇಳುತ್ತಿದ್ದರು. ಪಕ್ಷವೂ ಬೇಡ, ವಿಪಕ್ಷವೂ ಬೇಡ ಎಂದರೆ ವಾದವೂಬೇಡ, ವಿವಾದವೂ ಬೇಡ;

ವಿಚಾರವೂ ಬೇಡ, ಚರ್ಚೆಯೂ ಬೇಡ ಎಂದಂತೆಯೇ ಸರಿ. ಪ್ರಜಾತಂತ್ರ ಹಾಗೂ ಪಕ್ಷೀಯ ಆಡಳಿತ ಪದ್ಧತಿಯ ಮೇಲೆ ಲೋಹಿಯಾ ಅವರಿಗೆ ಸಂಪೂರ್ಣ ಭರವಸೆಯಿತ್ತು. ಪ್ರಜಾತಂತ್ರ ಬಲಗೊಳ್ಳಬೇಕೆಂಬುದೇ ಅವರ ಬಯಕೆಯಾಗಿತ್ತು. ಕಾಂಗ್ರೆಸ್‌ನ ಏಕಾಧಿಕಾರಶಾಹಿಯನ್ನು ಅಳಿಸಿಹಾಕಿ ಭಾರತದ ರಾಜಕೀಯದಲ್ಲಿ ಬದಲಾವಣೆ ತರಬೇಕೆಂದು ಅವರಿಗೆ ಅನಿಸುತ್ತಿತ್ತು. ಕಾಂಗ್ರೆಸ್‌ನ ಪರಾಜಯದ ಅಡಿಪಾಯದ ಮೇಲೆ ಇತರ ಪಕ್ಷಗಳ ಪುನರ್‌ರಚನೆ ಮಾಡುವ ಕನಸು ಅವರದಾಗಿತ್ತು.

ಭಾರತದ ವಿಧಾನ ಸಭೆಗಳು- ವಿಶೇಷವಾಗಿ ಸಂಸತ್ತು- ಪ್ರಜಾತಂತ್ರದ ಹಿರಿಮೆಯನ್ನು ಬೆಳೆಸುವ ಬದಲು ಅಧಿಕಾರಾರೂಢ ಪಕ್ಷ ಹಾಗೂ ಅದರ ನಾಯಕರ ಹಿಂಬಾಲಕರ ಹಾಗೆ ವರ್ತಿಸುವುದನ್ನು ಕಂಡು ಲೋಹಿಯಾ ಅವರಿಗೆ ತುಂಬ ಬೇಸರವೆನಿಸುತ್ತಿತ್ತು. 1947ರಿಂದ 1963ರವರೆಗೂ ಸ್ವತಂತ್ರ ಭಾರತದ ಸಂಸತ್ತಿನಲ್ಲಿ ವಿಪಕ್ಷದವರು ಸರಕಾರದ ವಿರುದ್ಧ ಒಮ್ಮೆಯೂ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಲಿಲ್ಲ. ಬಹಳಷ್ಟು ಮುಂದಾಳುಗಳು ತಮ್ಮ ಸಂಸದೀಯ ಕೌಶಲ್ಯದ ಬಗ್ಗೆ ಹೇಳಿಕೊಳ್ಳುತ್ತಲಿದ್ದರು. ಆದರೆ ಲೋಹಿಯಾ ಅವರು ಲೋಕಸಭೆಯಲ್ಲಿ ಪದಾರ್ಪಣ ಮಾಡಿದ ನಂತರವೇ ಸರಕಾರದೊಡನೆ ನೇರವಾಗಿ ಮುಖಾಮುಖಿ ಚರ್ಚೆ ಮಾಡುವ ಹಾಗೂ ವಾಗ್ವಾದಕ್ಕಿಳಿಯುವ ಶಿಕ್ಷಣವು ವಿಪಕ್ಷಗಳಿಗೆ ದೊರೆತಂತಾಯಿತು. ಸಂಸತ್ತೆಂದರೆ ಜನತೆಯ ದುಃಖ ದುಮ್ಮಾನಗಳಿಗೆ ಹಿಡಿದ ಕನ್ನಡಿಯಾಗಬೇಕೆಂದು ಲೋಹಿಯಾ ಪ್ರತಿಪಾದಿಸುತ್ತಿದ್ದರು. ಅವರು ತಮ್ಮ ನಡೆವಳಿಕೆಯಿಂದ ಈ ಮಾತನ್ನು ಸಾರ್ಥಕಗೊಳಿಸಿ ತೋರಿಸಿದರು.

ಲೋಹಿಯಾ ಅವರ ನೇರವಾದ ಹಾಗೂ ಖಾರವಾದ ಪ್ರಹಾರದ ಒಂದೇ ಒಂದು ದೃಷ್ಟಾಂತವನ್ನು ಕೊಡಬಯಸುತ್ತೇವೆ. 1963 ರಲ್ಲಿ ಲೋಕಸಭೆಯಲ್ಲಿ ಅವಿಶ್ವಾಸ ಗೊತ್ತುವಳಿ ಮಂಡಿಸಿದ ಸಂದರ್ಭದಲ್ಲಿ ಲೋಹಿಯಾ ನುಡಿದರು: 'ನಾವು ಸದಾ ನೆನಪಿನಲ್ಲಿಡಬೇಕಾದ ಸಂಗತಿಯೆಂದರೆ, ನಮ್ಮ 60% ಕುಟುಂಬಗಳು ಅಂದರೆ 27 ಕೋಟಿ ಜನರು ಪ್ರತಿ ದಿನವೂ ಮೂರಾಣೆ ವೆಚ್ಚದಲ್ಲಿ ಜೀವನ ಸಾಗಿಸುತ್ತಿರುವಾಗ ನಮ್ಮ ಪ್ರಧಾನ ಮಂತ್ರಿಗಳ ನಾಯಿಯ ಸಲುವಾಗಿ ಪ್ರತಿದಿನ ಮೂರು ರೂಪಾಯಿ ವೆಚ್ಚ ಮಾಡಬೇಕಾಗುತ್ತಿದೆ'. ಈ ಮಾತಿನಿಂದ ಸ್ವಾಭಾವಿಕ ವಾಗಿಯೇ ಪ್ರಧಾನ ಮಂತ್ರಿಗಳು ಸಿಡಿಮಿಡಿಗೊಂಡರು. ಮರುದಿನ ಅವರು ಸಮರ್ಥನೆ ನೀಡುತ್ತ ನುಡಿದರು: 'ಡಾ॥ ಲೋಹಿಯಾ ಅವರ ಲೆಕ್ಕದ ಪ್ರಕಾರ, ದೇಶದ 60% ಜನತೆಯಲ್ಲಿ ಪ್ರತಿ ವ್ಯಕ್ತಿಯ ಪ್ರತಿದಿನದ ಸರಾಸರಿ ಆದಾಯ ಮೂರಾಣೆಯಿದೆ. ಈ ತೀರ್ಮಾನಕ್ಕೆ ಅವರು ಹೇಗೆ ತಲುಪಿದರೋ ನನಗೆ ತಿಳಿಯದು. ಲೆಕ್ಕ ಮಾಡುವುದರಲ್ಲಿ

ಅವರು ಸಾಕಷ್ಟು ತಪ್ಪಿದ್ದಾರೆ . ಡಾ॥ ಲೋಹಿಯಾ ಪ್ರತಿ ವ್ಯಕ್ತಿಯ ಪ್ರತಿ ತಿಂಗಳ ಸರಾಸರಿ 25 ರೂಗಳ ಆದಾಯವನ್ನು ಪ್ರತಿ ಕುಟುಂಬದ ಆದಾಯವೆಂದು ಭಾವಿಸಿದ್ದಾರೆ. ಅವರ ನಿಷ್ಕರ್ಷೆಯೆಲ್ಲ ಈ ಭ್ರಾಂತಿಯ ಮೇಲೆ ಆಧರಿಸಿದ್ದು. ನನ್ನ ಬಳಿ ಒಬ್ಬ ಅರ್ಥತಜ್ಞರ ಟಿಪ್ಪಣಿಯುಂಟು'.

ಲೋಹಿಯಾ : ಯಾರ ಟಿಪ್ಪಣಿ?

ನೆಹರೂ : ಒಬ್ಬ ಗಣ್ಯ ವಿದ್ವಾಂಸರದು.

ಲೋಹಿಯಾ : ಆ ಮಹನೀಯರೊಡನೆ ಸಾಯಂಕಾಲ ಮಾತಾಡಿ ನೋಡಿರಿ. ನಿಮಗೆ ತುಂಬಾ ಪಶ್ಚಾತ್ತಾಪವೇ ಆಗಬಹುದು.

ನೆಹರೂ : ಪಶ್ಚಾತ್ತಾಪ?

ಲೋಹಿಯಾ : ಹೊಲ, ಕಾರ್ಖಾನೆಗಳ ಬಗ್ಗೆ ನಿಮಗೆ ಸಾಕಷ್ಟು ತಿಳಿವಳಿಕೆಇಲ್ಲ.

ಲೋಹಿಯಾ ಅವರ ಈ ನೇರವಾದ ಹೊಡೆತದಿಂದ ನೆಹರೂ ಸರಕಾರ ಗಡಬಡಿಸಿತು. ಅದರ ಕಾಲುಗಳು ಕಂಪಿಸತೊಡಗಿದವು. ಯೋಜನಾ ಮಂತ್ರಿ ನಂದಾ ಅವರೂ ಹೊಸ ಸ್ಪಷ್ಟೀಕರಣ ನೀಡಿದರೂ, ಅದರಲ್ಲಿನೆಹರೂ ಅವರ ಹೇಳಿಕೆಯ ಹದಿನೈದಾಣೆ ತರ್ಕವನ್ನು ಬಿಟ್ಟು ಬಿಟ್ಟಿದ್ದರು. ಅವರ ಹೇಳಿಕೆಯ ಪ್ರಕಾರ ರಾಷ್ಟ್ರೀಯ ಮಾದರಿ ಸಮೀಕ್ಷೆಯಲ್ಲಿ ಜುಲೈ 1962ರ ವರೆಗೆ ಪ್ರತಿವ್ಯಕ್ತಿಗೆ ಸರಾಸರಿ 7.5 ಆಣೆ ಆದಾಯ ಬರುತ್ತದೆ. ಗ್ರಾಮಾಂತರ ಪ್ರದೇಶದ 10% ಜನರು 4.3ಆಣೆಗಳ ಸರಾಸರಿ ವೆಚ್ಚದಲ್ಲಿ ಜೀವನ ಸಾಗಿಸುತ್ತಿದ್ದರು. ಇದು ಒಂದು ರೀತಿಯಿಂದ ನೆಹರೂ ಅವರ ಪರಾಜಯವೇ ಆಗಿತ್ತು. ಆದ್ದರಿಂದ ಲೋಹಿಯಾ ಸಂಸತ್ತಿನಲ್ಲಿ ಪ್ರವೇಶಿಸುವುದು ಹಾಗೂ ಅಲ್ಲಿರುವುದು ಸರಕಾರಕ್ಕೆ ಚುಚ್ಚುತ್ತಿತ್ತು. ಲೋಹಿಯಾ ಅವರಿಂದ ಪ್ರೇರಣೆ ಪಡೆದ ನಾವು (ನಾನು ಮತ್ತು ಜ್ಯೋತಿರ್ಮಯಿ ಬಸು) ಅವರ ಅನುಯಾಯಿಗಳಾದೆವು.

ಸಾರ್ವಜನಿಕ ಜೀವನದಲ್ಲಿ ಬೆಳೆಯುತ್ತ ನಡೆದ ಅಪ್ರಾಮಾಣಿಕತೆ ಹಾಗೂ ಸ್ವಾರ್ಥಸಾಧಕ ಪ್ರವೃತ್ತಿಗಳನ್ನು ಕಂಡು ಲೋಹಿಯಾ ಅವರು ಒಳಗೊಳಗೇ ನೊಂದುಕೊಳ್ಳುತ್ತಿದ್ದರು. ವಿರೋಧ ಪಕ್ಷಗಳೂ ಈ ಖಾಯಿಲೆಗೆ ಬಲಿಯಾದದ್ದು ಅವರ ಹೆಚ್ಚಿನ ಚಿಂತೆಗೆ ಕಾರಣವಾಗಿತ್ತು. ನೆಹರೂವಾದ ಹಾಗೂ ಕಾಂಗ್ರೆಸ್‌ವಾದಗಳೇ ಈ ಖಾಯಿಲೆಗೆ ಮೂಲಕಾರಣವೆಂದು ಅವರ ಅಭಿಪ್ರಾಯವಾಗಿತ್ತು. ಈ ಮೂಲಕಾರಣದ ಸಂಪೂರ್ಣ ನಿವಾರಣೆಗಾಗಿಯೇ, ಕಾಂಗ್ರೆಸ್‌ವಾದಿಗಳ ಹೊರತಾಗಿ ಇತರರೊಡನೆ

ಹೊಂದಾಣಿಕೆಯ ಧೋರಣೆಯನ್ನು ಅವರು ಅಂಗೀಕರಿಸಿದ್ದರು. ಸಂಸತ್ತಿನಲ್ಲಿ ಹಾಗೂ ಸಂಸತ್ತಿನ ಹೊರಗೆ ಲೋಹಿಯಾ ಮತ್ತು ಅವರ ಅನುಯಾಯಿಗಳು ನಡೆಸಿದ ನಿರಂತರ ಸಂಘರ್ಷ ಹಾಗೂ ದೇಶವನ್ನು ಎಚ್ಚರಿಸುವ ಕೆಲಸದ ಪರಿಣಾಮವಾಗಿ, 1967ರ ಚುನಾವಣೆಗಳಲ್ಲಿ ಎಂಟು ರಾಜ್ಯಗಳಲ್ಲಿ ಕಾಂಗ್ರೆಸ್‌ನ ಪರಾಭವವಾಯಿತು. ವಿಪಕ್ಷಗಳಲ್ಲಿ ಒಡಕು ಹುಟ್ಟಿಸುವ ಸಲುವಾಗಿ ಪ್ರಲೋಭನೆ ಹಾಗೂ ಪಕ್ಷ ಬದಲಾವಣೆಯ ಕೈಚಳಕವನ್ನು ಕಾಂಗ್ರೆಸ್ ಅನುಸರಿಸಿತ್ತು. 1967ರಲ್ಲಿ ಲೋಹಿಯಾ ಅವರು ಇದೇ ಧೋರಣೆಯನ್ನು ಕಾಂಗ್ರೆಸ್‌ನ ವಿರುದ್ಧ ಆಚರಿಸಿ ತೋರಿಸಿದರು. ಆದರೆ, ಕಾಂಗ್ರೆಸ್ಸೇತರವಾದದ ಪರಿಣಾಮವೇನಾಯಿತೆಂದರೆ ಮೊದಲಿನ ಕಾಂಗ್ರೆಸಿಗರೇ ಹೆಚ್ಚಿನ ಸಂಖ್ಯೆಯಲ್ಲಿ ಮುಖ್ಯಮಂತ್ರಿಗಳಾಗಿ ಬಿಟ್ಟಿದ್ದು-ಹರಿಯಾಣದಲ್ಲಿ ರಾವ್ ಬೀರೇಂದ್ರ ಸಿಂಗ್, ಮಧ್ಯಪ್ರದೇಶದಲ್ಲಿ ಗೋವಿಂದ ನಾರಾಯಣ ಸಿಂಗ್, ಬಿಹಾರದಲ್ಲಿ ಮಹಾಮಾಯಾ ಪ್ರಸಾದ್ ಸಿನ್ಹಾ, ಉತ್ತರ ಪ್ರದೇಶದಲ್ಲಿ ಚರಣಸಿಂಗ್ ಹಾಗೂ ಪಶ್ಚಿಮ ಬಂಗಾಳದಲ್ಲಿ ಅಜಯ ಮುಖರ್ಜಿ.

ರಾಜನೀತಿ ಚಲನಶೀಲವಾಗಬೇಕು, ಕಾಂಗ್ರೆಸ್‌ನ ಏಕಾಧಿಪತ್ಯ ಸಮಾಪ್ತ ಗೊಳ್ಳಬೇಕು, ರಾಜಕೀಯ ಪಕ್ಷಗಳು ಕಾರ್ಯಕ್ರಮಾಭಿಮುಖ ಗೊಳ್ಳಬೇಕೆಂಬುದು ಲೋಹಿಯಾ ಅವರ ಇಚ್ಛೆಯಾಗಿತ್ತು. ಅವರು ಕಾಂಗ್ರೆಸ್ಸೇತರ ಸರಕಾರಗಳ ರಚನೆಗೆ ಸಮರ್ಥನೆ ನೀಡಿದ್ದು ಕೆಲವು ಮುಂದಾಳುಗಳನ್ನು ಮುಖ್ಯಮಂತ್ರಿ ಹಾಗೂ ಮಂತ್ರಿಗಳನ್ನಾಗಿ ಮಾಡಲು ಅವಕಾಶ ದೊರೆಯಬೇಕೆಂದು ಮಾತ್ರವಲ್ಲ. ಅವರು ಆರು ತಿಂಗಳ ಕಾಲಾವಧಿಯನ್ನು ನಿಗದಿಗೊಳಿಸಿ, ಕಾಲಬದ್ಧ ಕಾರ್ಯಕ್ರಮದ ಷರತ್ತು ಹಾಕಿಕೊಂಡಿದ್ದರು. ಉತ್ತರ ಪ್ರದೇಶದಲ್ಲಿ ಈ ಕರಾರಿನನ್ವಯ ಕೆಲಸ ಕೈಗೊಳ್ಳುವ ಲಕ್ಷಣ ಕಂಡುಬರದಿದ್ದಾಗ, ಸರಕಾರವನ್ನುರುಳಿಸುವ ವಿಚಾರವನ್ನೂ ಅವರು ಮಾಡತೊಡಗಿದರು. ಅವರ ಮಟ್ಟಿಗೆ ಇದೊಂದು ಸಿದ್ಧಾಂತ ಅಥವಾ ತತ್ವಜ್ಞಾನವಾಗಿರದೆ, ಕಾಂಗ್ರೆಸೇತರವಾದಿಗಳ ರಣನೀತಿಯಾಗಿತ್ತು. ಕೇಂದ್ರದಲ್ಲಿ ಚಲಾವಣೆಯಲ್ಲಿದ್ದ ಕಾಂಗ್ರೆಸ್ ಆಡಳಿತಾಧಿಕಾರವನ್ನು ಕಿತ್ತೆಸೆಯುವವರೆಗೆ ಮಾತ್ರ ಈ ರಣನೀತಿಯನ್ನು ಅನುಸರಿಸಬೇಕೆಂಬುದು ಅವರ ಇಚ್ಛೆಯಾಗಿತ್ತು. ಆದರೆ, ಅಲ್ಲಿಯ ವರೆಗೆ, ಎಂಥ ಪರಿಸ್ಥಿತಿಯಲ್ಲೂ ರಾಜ್ಯಗಳ ಕಾಂಗ್ರೆಸ್ಸೇತರ ಸರಕಾರಗಳನ್ನು ಸಹಿಸಿಕೊಂಡೇ ಇರಬೇಕೆಂಬ ಅಭಿಪ್ರಾಯವೂ ಅವರದಾಗಿರಲಿಲ್ಲ. ಅವರ ಈ ಇಚ್ಛೆ ಪೂರ್ತಿಯಾಗಲಿಲ್ಲ. ಅಧಿಕಾರಕ್ಕೆ ಬಂದ ನಂತರ ಚರಣಸಿಂಗರಂಥ ಮುಖ್ಯ ಮಂತ್ರಿಗಳು ಶಕ್ತಿಶಾಲಿಗಳಾಗಿಬಿಟ್ಟರಲ್ಲದೆ, ಸಮಾಜವಾದಿ ಆಂದೋಲನದಿಂದಾಗಿ ಹಿಂದುಳಿದ ವರ್ಗಗಳಿಗೆ ದೊರೆಯುತ್ತಿದ್ದ ಆಧಾರವನ್ನೇ ಕಸಿದುಕೊಂಡುಬಿಟ್ಟರು. ಜನಸಂಘದ ಬೆಂಬಲದ ಮೇಲೆಯೂ ಇದರ ಪ್ರತಿಕೂಲ ಪರಿಣಾಮವಾಯಿತು. ಕಾಂಗ್ರೆಸ್ಸೇತರವಾದದ ಚಕ್ರವ್ಯೂಹದಲ್ಲಿ ಸಿಲುಕಿಕೊಂಡ ಬಳಿಕ ತನ್ನ ಬೆಂಬಲ

ಉಳಿಸಿಕೊಂಡು ಹೊರಬೀಳುವುದು ಅದಕ್ಕೆ ಅಸಾಧ್ಯವೆನಿಸಿಬಿಟ್ಟಿತು. ವಿಪಕ್ಷಗಳ ನಡವಳಿಕೆಯಲ್ಲಿ ಬೀಳುಂಟಾಗತೊಡಗಿತು. ನಾಯಕರಿಗೂ ಕಾರ್ಯಕರ್ತರಿಗೂ ಅಧಿಕಾರಲಾಲಸೆಯ ಗಾಳಿ ಆವರಿಸಿಕೊಂಡಿತು. ಬರುಬರುತ್ತಾ ಸಂಪೂರ್ಣ ವಿಪಕ್ಷವೂ ಕಾಂಗ್ರೆಸ್‌ಮಯವಾಗಿ ಬಿಟ್ಟಿತು. ಇಂದು ಡಿ.ಎಂ.ಕೆ. ಪಾರ್ಟಿ, ಜನತಾ ಹಾಗೂ ಕಾಂಗ್ರೆಸ್ (ಎಸ್) ಇವೆಲ್ಲವುಗಳ ನೇತೃತ್ವ ಹಳೆಯ ಕಾಂಗ್ರೆಸ್ಸಿಗರ ಕೈಯಲ್ಲಿದೆ. ಕಾಂಗ್ರೆಸ್‌ನ ಏಕಾಧಿಪತ್ಯವನ್ನು ಸಮಾಪ್ತಗೊಳಿಸುವ ಪ್ರಕ್ರಿಯೆಯಲ್ಲಿ ವಿಪಕ್ಷವಿಡೀ ಕಾಂಗ್ರೆಸ್‌ಮಯ ಹಾಗೂ ಸಿದ್ಧಾಂತಹೀನವಾಗಿ ಬಿಟ್ಟಿದ್ದರೂ, ದುರದೃಷ್ಟವಶಾತ್ ಜಯಪ್ರಕಾಶರು ಸಮಾಜವಾದಿ ಆಂದೋಲನವನ್ನು ನಿರ್ಜೀವಗೊಳಿಸಿದರು; ಪರ್ಯಾಯ ಶಕ್ತಿಯೊಂದು ರೂಪುಗೊಳ್ಳುವ ಸಾಧ್ಯತೆಯನ್ನೆಲ್ಲ ಇಲ್ಲವಾಗಿಸಿಬಿಟ್ಟರು. ಅದರ ನಂತರ ಒಡಕು-ಕೆಡಕು ಹಾಗೂ ವಿಘಟನೆಯ ಪ್ರಕ್ರಿಯೆ ಆರಂಭಗೊಂಡಿತು. ಅಂತಿಮವಾಗಿ ಸಮಾಜವಾದಿ ಆಂದೋಲನವೇ ಸಮಾಪ್ತವಾಗಿಬಿಟ್ಟಿತು. ಪಕ್ಷರಹಿತ ಜಯಪ್ರಕಾಶರ ಮೂಲಕವೇ ಕೇಂದ್ರದಲ್ಲಿನ ಕಾಂಗ್ರೆಸ್ ಆಡಳಿತವನ್ನು ಮುಗಿಸಿ ಬಿಡುವ ಇಚ್ಛಾಪೂರ್ತಿಯಾದದ್ದು ಒಂದು ವ್ಯಂಗ್ಯವೇ. ಇದರಿಂದ ಪರ್ಯಾಯ ವೇನೋ ಏರ್ಪಟ್ಟಿತು. ಆದರೆ ಅದು ಸಮಾಜವಾದಿ ಪರ್ಯಾಯ ವಾಗಿರಲಿಲ್ಲ. ಅದೊಂದು ಖಿಚಡೀ (ಚೌಚೌ) ಪಕ್ಷವಾಗಿತ್ತು; ಸಣ್ಣಪುಟ್ಟ ಸ್ವಾರ್ಥ, ದೂರದೃಷ್ಟಿ ಹಾಗೂ ವೈಯಕ್ತಿಕ ಮಹತ್ವಾಕಾಂಕ್ಷೆಗಳ ಸಂಘರ್ಷಗಳ ಕೂಟ ಸ್ಥಾನವೆನಿಸಿ, ಕೊನೆಕೊನೆಗೆ ದುಃಖಾಂತ ಪ್ರಕರಣವಾಗಿ ಪರಿಣಮಿಸಿಬಿಟ್ಟಿತು.

ಲೋಹಿಯಾ ಅವರ 'ದರ್ಶನ' ಜ್ವಲಂತವಾಗಿರುವುದು ಅವರ ಸಪ್ತಕ್ರಾಂತಿಯ ಪರಿಕಲ್ಪನೆಯಲ್ಲಿ. ಲೋಹಿಯಾ ಅವರ ಸಪ್ತಕ್ರಾಂತಿ ಹಾಗೂ ಜಯಪ್ರಕಾಶರ ಸಂಪೂರ್ಣಕ್ರಾಂತಿ ಇವೆರಡರ ಅಂತಿಮ ಉದ್ದೇಶಗಳಲ್ಲಿ ಯಾವ ಅಂತರವೂ ಇರಲಿಲ್ಲ. ಆದರೆ ಜಯಪ್ರಕಾಶರ ವಿಚಾರಗಳಲ್ಲಿ ಸ್ಪಷ್ಟತೆಯೆಂಬುದಿರಲಿಲ್ಲ. ಸಂಪೂರ್ಣ ಕ್ರಾಂತಿಯ ಸ್ಪಷ್ಟ ವ್ಯಾಖ್ಯೆ ಇದ್ದರೊಳಿತೆಂದು ನಾನು ಸೂಚಿಸಿದಾಗ, 'ಆ ಕೆಲಸ ನಿಮ್ಮದು; ನೀವು 'ಎವೆರಿಮನ್ಸ್ ವೀಕ್ಲಿ' ಯಲ್ಲಿ ಬರೆಯಿರಿ'' ಎಂದು ಅವರು ಉತ್ತರವಿತ್ತರು. ನಿಮ್ಮ ಸಂಪೂರ್ಣ ಕ್ರಾಂತಿಯ ಅರ್ಥ ಲೋಹಿಯಾ ಅವರ ಸಪ್ತಕ್ರಾಂತಿಯೇ ಹೌದೆಂದು ನಾನು ನುಡಿದಾಗ, ಅವರು ನಗುನಗುತ್ತಲೆ ತಮ್ಮ ಸಮ್ಮತಿ ಸೂಚಿಸಿದರು. ಲೋಹಿಯಾ ಅವರ ಜೀವಿತಕಾಲದಲ್ಲಿ ಅಲ್ಲವಾದರೂ ಅವರ ಮರಣಾನಂತರ ಜಯಪ್ರಕಾಶರು ಮುಕ್ತಕಂಠದಿಂದ ಅವರ ಪ್ರಶಂಸೆ ಮಾಡುತ್ತಿದ್ದರು. ಜಯಪ್ರಕಾಶರು ತಮ್ಮ ಸಂಪೂರ್ಣಕ್ರಾಂತಿಯ ಘೋಷಣೆಯನ್ನು ಸಮೀಕರಿಸಿದ ಲೋಹಿಯಾ ಅವರ ಸಪ್ತಕ್ರಾಂತಿಯ ತಿರುಳು ಏನಾಗಿತ್ತು? ಅದರ ಮುಖ್ಯಾಂಶಗಳೆಂದರೆ (1) ಪುರುಷ-ಸ್ತ್ರೀ ಸಮಾನತೆ (2) ವರ್ಣಭೇದ ಆಧಾರಿತ ಅಸಮಾತೆಯ ಸಮಾಪ್ತಿ (3) ಜನ್ಮ ಅಥವಾ ಜಾತಿಯ ಆಧಾರದ ಮೇಲಿನ

ಅಸಮಾನತೆಯ ನಿವಾರಣೆ (4) ವಿದೇಶಿ ದಬ್ಬಾಳಿಕೆಯ ಅಂತ್ಯ ಹಾಗೂ ವಿಶ್ವಸರಕಾರದ ಸ್ಥಾಪನೆ (5) ವ್ಯಕ್ತಿಗತ ಸಂಪತ್ತಿನಿಂದ ಉದ್ಭವಿಸುವ ಆರ್ಥಿಕ ಅಸಮಾನತೆಯ ನಾಶ ಹಾಗೂ ಸಮಾನತೆಯ ಸಾಧನೆ (6) ಶಸ್ತ್ರಾಸ್ತ್ರಗಳ ಬಳಕೆಯ ಮೇಲೆ ಹತೋಟಿ ಹಾಗೂ ಸಾರ್ವಜನಿಕ ಕಾನೂನುಭಂಗ ತತ್ವದ ಪ್ರತಿಷ್ಠಾಪನೆ (7) ವೈಯಕ್ತಿಕ ಸ್ವಾತಂತ್ರ್ಯದ ಮೇಲಾಗುವ ಅತಿಕ್ರಮಣದ ವಿರುದ್ಧ ಹೋರಾಟ.

ಅಂತಿಮ ಸೂತ್ರವೂ ಮಹತ್ವದ್ದೇ. ತಮ್ಮ ಜೀವನದುದ್ದಕ್ಕೂ ಅವರು ಅನ್ಯಾಯದ ವಿರುದ್ಧ ಹೋರಾಡುತ್ತಲೇ ಬಂದರು. ಹಾಗೂ ಪ್ರಜಾತಂತ್ರದ ಅಧಿಕಾರದ ದುರುಪಯೋಗದ ಪ್ರತಿಯಾಗಿ ನ್ಯಾಯಾಲಯದ ವೇದಿಕೆಯನ್ನೂ ಬಳಸಿದರು. ನೀರಾವರಿ ಆಂದೋಲನದಲ್ಲಿ ತಮ್ಮನ್ನು ಬಂಧಿಸಲಾದಾಗ, ಅಲಹಾಬಾದ್ ಉಚ್ಚನ್ಯಾಯಾಲಯದಲ್ಲಿ ಅದರ ವಿರುದ್ಧ ಹೋರಾಡಿ ಎರಡು ಸಲ ಅವರು ಸರ್ವೋಚ್ಚ ನ್ಯಾಯಾಲಯದಲ್ಲಿ ಸ್ವತಃ ವಾದಮಂಡನೆ ಮಾಡಿ ಯಶಸ್ವಿಯಾದರು. ಅವರಿಂದ ನಾನು ಸಾಕಷ್ಟು ಪ್ರೇರಣೆ ಪಡೆದೆ ಹಾಗೂ ಜೀವನದುದ್ದಕ್ಕೂ ಸರ್ವೋಚ್ಚನ್ಯಾಯಾಲಯ, ಸಂಸತ್ತು ಮುಂತಾದ ವೇದಿಕೆಗಳಲ್ಲಿ ವ್ಯಕ್ತಿಸ್ವಾತಂತ್ರ್ಯದ ರಕ್ಷಣೆಗಾಗಿ ಹೋರಾಡುತ್ತಲೇ ಬಂದೆ. ಸೇನಾಕಾಯಿದೆಯ 107ನೇ ಕಲಮು ಇತ್ಯಾದಿಗಳ ಬಗ್ಗೆ ಲೋಹಿಯಾ ಅವರ ಸಮ್ಮತಿಯಿರಲಿಲ್ಲ. ಸರ್ವೋಚ್ಚ ನ್ಯಾಯಾಲಯದ ವಿಶೇಷ ಪೀಠ ನನ್ನ ಮೊಕದ್ದಮೆಯ ಮೇಲೆ ನೀಡಿದ ನಿರ್ಣಯದಿಂದ, ನೊಂದ ಬೆಂದು ಜನಕ್ಕೆ ಪೂರ್ಣವಲ್ಲದಿದ್ದರೂ, ಕೊಂಚವಾದರೂ ನೆಮ್ಮದಿ ದೊರೆತೇದೊರೆಯಿತು. ಇದರ ಹಿನ್ನೆಲೆಯಲ್ಲಿದ್ದುದೂ ಲೋಹಿಯಾ ಅವರ ಪ್ರೇರಣೆಯೇ.

ಲೋಹಿಯಾ ಅವರದೊಂದು ಸಮ್ಯಕ್ ದಾರ್ಶನಿಕ ದೃಷ್ಟಿಕೋನವಾಗಿತ್ತು. ಅವರು ಸಿದ್ಧಾಂತ ಹಾಗೂ ಕಾರ್ಯಕ್ರಮನೀತಿಯ ಪರಸ್ಪರ ಸಂಬಂಧವನ್ನು ಚೆನ್ನಾಗಿ ಅರಿತವರಾಗಿದ್ದರು. ಅವರು ಸಿದ್ಧಾಂತಕ್ಕೆ ದೀರ್ಘಾವಧಿ ಕಾರ್ಯಕ್ರಮ ನೀತಿಯ ಮಹತ್ವವನ್ನೂ, ಕಾರ್ಯಕ್ರಮ ನೀತಿಗೆ ಅಲ್ಪಾವಧಿ ಸಿದ್ಧಾಂತದ ಮಹತ್ವವನ್ನೂ ಕೊಡುತ್ತಿದ್ದರು. ಅವರ ಸಕಲ ನೀತಿಗಳಲ್ಲಿ ಅನ್ಯೋನ್ಯಾ ಶ್ರಯದ ಸಂಬಂಧವಿರುತ್ತಿತ್ತು. ಈ ಸಮ್ಯಕ್ ಸಂಬಂಧವನ್ನರಿಯದೆ ಅದರ ಯಾವ ನೀತಿಯನ್ನಾಗಲಿ ಕಾರ್ಯಕ್ರಮವನ್ನಾಗಲೀ ಕಾರ್ಯಗತಗೊಳಿಸಲಾಗುವುದಿಲ್ಲ. ಅವರು ವಿಕೇಂದ್ರಿ ಕರಣದ ಚತುಸ್ತಂಭ ಆಡಳಿತ ಪದ್ಧತಿಯನ್ನು ಪುರಸ್ಕರಿಸುತ್ತಿದ್ದರು. ಆದರೆ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟರ ಆಡಳಿತ ಸ್ವಾಯತ್ತತೆಯ ಬೇಡಿಕೆ ಹಾಗೂ ಅಕಾಲಿಗಳ ಆನಂದಪುರ ಗೊತ್ತುವಳಿಯೊಡನೆ ಲೋಹಿಯಾ ಅವರ ಚತುಸ್ತಂಭ ಆಡಳಿತದ ಸಂಬಂಧವೇನೂ ಇಲ್ಲ. ವರ್ತಮಾನದ ಆಡಳಿತ ಪದ್ಧತಿ ದ್ವಿಸ್ತಂಭಗಳ ಮೇಲೆ

ನಿಂತಿದ್ದು, ಕೇಂದ್ರೀಯ ಹಾಗೂ ಪ್ರಾದೇಶಿಕ ಸ್ತಂಭಗಳ ಮಧ್ಯೆಯೇ ರಾಜ್ಯಾಡಳಿತ ಹಂಚಿಹೋಗಿದೆಯೆಂದು ಲೋಹಿಯಾ ಅನ್ನುತ್ತಿದ್ದರು. ಸಮಾಜವಾದಿಗಳು ಇಂಥ ರಾಜ್ಯಾಡಳಿತದ ಬದಲು ಗ್ರಾಮ, ಜಿಲ್ಲಾ, ರಾಜ್ಯ ಹಾಗೂ ಕೇಂದ್ರ ಹೀಗೆ ನಾಲ್ಕು ಸ್ತರಗಳಲ್ಲಿ ಆಡಳಿತಾಧಿಕಾರವಿರುವ ಪದ್ಧತಿಯನ್ನು ತರಬಯಸುತ್ತಾರೆಂದೂ ಅವರು ಹೇಳುತ್ತಿದ್ದರು. ಜಿಲ್ಲೆ ಹಾಗೂ ಗ್ರಾಮ ಪಂಚಾಯ್ತಿಗಳಿಗೆ ರಾಜ್ಯದ ಆದಾಯದ ಒಂದೊಂದು ನಾಲ್ಕಾಂಶ ಪಾಲು ದೊರೆಯುವುದೆಂದೂ, ಇದೇ ಪ್ರಮಾಣದಲ್ಲಿ ಆಡಳಿತದ ವೆಚ್ಚವನ್ನೂ ಆಯಾ ಸ್ತರದ ಸಂಸ್ಥೆಗಳ ಮೂಲಕ ಮಾಡಲಾಗುವುದೆಂದೂ ಅವರು ಸೂಚಿಸಿದ್ದರು. ಯಾವುದೇ ನಿರ್ದಿಷ್ಟ ವಿಷಯದ ಮೇಲೆ ಕಾನೂನು ರಚಿಸುವ ಅಧಿಕಾರವೂ ಪಂಚಾಯಿತಿಗಳಿಗಿರುತ್ತದೆ ಹಾಗೂ ಯೋಜನೆಗಳ ಯೋಗ್ಯ ರೂಪುರೇಷೆಗಳನ್ನೂ ಅವುಗಳಿಂದಲೇ ಪಡೆದುಕೊಳ್ಳಲಾಗುವುದು. ಆದರೆ ಮಾರ್ಕ್ಸ್‌ವಾದಿಗಳಿಗೂ ಅಕಾಲಿಗಳಿಗೂ ಈ ಮಾತು ಒಪ್ಪಿಗೆಯಿರಲಿಲ್ಲ. ಅವರಿಗೆ ರಾಜ್ಯಗಳ ಹಂತದಲ್ಲಿ ಅಧಿಕಾರ ಕೇಂದ್ರೀಕರಿಸುವುದರ ಕಡೆಗೆ ಒಲವಿದ್ದರೆ ಕಾಂಗ್ರೆಸ್ಸಿನ ದೃಷ್ಟಿ ದೆಹಲಿಯಲ್ಲಿ ಅಧಿಕಾರ ಕೇಂದ್ರೀಕರಣ ಮಾಡುವುದರ ಕಡೆಗಿತ್ತು.

ಇಲ್ಲಿ ಇನ್ನೊಂದು ನೆನಪಿಡಬೇಕಾದ ಸಂಗತಿಯೆಂದರೆ ಡಾ॥ ಭೀಮರಾವ್ ಅಂಬೇಡ್ಕರ್ ಅವರು ವಿಕೇಂದ್ರೀಕರಣ ಹಾಗೂ ಪಂಚಾಯ್ತಿ ರಾಜ್ಯದ ಘೋರ ವಿರೋಧಿಗಳಾಗಿದ್ದರೆಂಬುದು. ಅದೇಕೆ? ಯಾಕೆಂದರೆ 'ನಮ್ಮ ಗ್ರಾಮೀಣ ಸಮಾಜ ಜಾತಿಗತ ಅಸಮಾನತೆ ಹಾಗೂ ದೊಡ್ಡ ಜಾತಿಗಳ ಅತ್ಯಾಚಾರದಿಂದ ಜರ್ಜರಿತ ಗೊಂಡಿದೆ. ಶಕ್ತಿಶಾಲಿ ಜಾತಿಗಳಿಗೆ ಜಿಲ್ಲಾ ಪರಿಷತ್ ಹಾಗೂ ಗ್ರಾಮಪಂಚಾಯ್ತಿಯ ಸ್ತರಗಳಲ್ಲಿ ಹೆಚ್ಚಿನ ಅಧಿಕಾರ ದೊರೆತುದಾದರೆ, ಅವರು ದಲಿತರನ್ನು ಹತ್ತಿಕ್ಕಿ ಬಿಡಬಹುದು. ಆದ್ದರಿಂದ ನಮಗೆ ಶಕ್ತಿಶಾಲಿ ಕೇಂದ್ರವಿರಬೇಕು. ಅದು ನಮ್ಮ ಹಿತರಕ್ಷಣೆ ಮಾಡುವಂತಿರಬೇಕು'. ಅಂಬೇಡ್ಕರ್ ವಿರೋಧಕ್ಕೆ ಮುಖ್ಯ ಕಾರಣ ಇದು. ಈ ಕಾರಣದಿಂದಾಗಿಯೇ ಲೋಹಿಯಾ ಅವರು ಜಾತಿ ಪದ್ಧತಿಯನ್ನೇ ಅಳಿಸಿ ಹಾಕುವ, ವಿಶೇಷ ಅವಕಾಶ ನೀಡುವ ಹಾಗೂ ಸಾಮಾಜಿಕ ನ್ಯಾಯ ಒದಗಿಸುವ ಕುರಿತು ಮಾತನಾಡುತ್ತಿದ್ದರು. ವಿಕೇಂದ್ರೀಕರಣ ಹಾಗೂ ವಿಶೇಷ ಅವಕಾಶಗಳ ಸಿದ್ಧಾಂತಗಳು ಜೊತೆಜೊತೆಗೇ ರೂಪುಗೊಂಡಂಥವು. ಲೋಹಿಯಾ ಅವರ ನೀತಿ, ಧೋರಣೆಗಳೆಲ್ಲವೂ ಹೀಗೆ ಪರಸ್ಪರ ಸಂಬಂಧವುಳ್ಳವಾಗಿದ್ದವು. ಇಂಗ್ಲಿಷ್ ಬಳಕೆಯನ್ನು ನಿಲ್ಲಿಸುವ ವಿಚಾರವೂ ಲೋಕಸಭೆ, ಪ್ರಜಾತಂತ್ರ, ರಾಷ್ಟ್ರೀಯ ಗೌರವರಕ್ಷಣೆ ಹಾಗೂ ಸಾಮಾಜಿಕ ನ್ಯಾಯಗಳ ಸರಪಣಿಯಲ್ಲೊಂದು ಕೊಂಡಿಯೆಂದು ಅವರು ಪ್ರತಿಪಾದಿಸುತ್ತಿದ್ದರು.

ಲೋಹಿಯಾ ಅವರ ದೃಢ ಅಭಿಪ್ರಾಯದಲ್ಲಿ ಭಾರತೀಯರು ತಮ್ಮ ಭೂತಕಾಲದತ್ತ -ವಿಶೇಷವಾಗಿ, ಕಳೆದು ಹೋದ ಸಾವಿರ ವರ್ಷಗಳ ಇತಿಹಾಸದತ್ತ- ದೋಷಪೂರಿತ ದೃಷ್ಟಿ ಹಾಯಿಸುತ್ತಾ ಕೂತಿರುವುದು ರಾಷ್ಟ್ರೀಯತಾ ವಿಕಾಸ ಕ್ರಮದಲ್ಲಿ ದೊಡ್ಡ ಬಾಧೆಯುಂಟು ಮಾಡುತ್ತದೆ. ಪ್ರತಿಯೊಬ್ಬ ಮಗುವಿಗೆ ಪ್ರತಿಯೊಂದು ಶಾಲೆಯಲ್ಲಿ, ಪ್ರತಿಯೊಂದು ಮನೆಯಲ್ಲಿ, ಹಿಂದುಗಳಿರಲಿ, ಮುಸಲ್ಮಾನರಿರಲಿ, ಸಿಕ್ಖರಿರಲಿ, ರಜಿಯಾ ಶೇರ್‌ಶಾಹ್, ಜಾಯಸೀ ಮುಂತಾದವರೆಲ್ಲ ನಮ್ಮ ಪೂರ್ವಜರೆಂದು ತಿಳಿಸಿ ಹೇಳಬೇಕು. ದೇಶೀಯರು ಯಾರು, ವಿದೇಶೀಯರು ಯಾರು? ಲೋಹಿಯಾ, ಅವರ ಅಭಿಪ್ರಾಯದಲ್ಲಿ ಸೆಲ್ಯುಕಸ್ ವಿದೇಶಿ ಹಾಗೂ ಕಾನಿಷ್ಕ ದೇಶಿ, ಗಜನಿ ವಿದೇಶಿ ಹಾಗೂ ಶೇರಶಹಾ ದೇಶಿ, ಹೂಣರು ವಿದೇಶಿ ರಾಣಾ-ಸಾಂಗಾ ದೇಶಿ, ಬಾಬರ್ ವಿದೇಶಿ, ಬಹಾದ್ದೂರ್ ಶಾಹ ದೇಶಿ-ಹೀಗೆಲ್ಲ ಭಾರತದ ಚರಿತ್ರೆಯನ್ನು ಓದಬೇಕಾದೀತು. ಆದರೆ ಈ ದೇಶೀಯರ ಪಾಡು ಕೇಳುವುದು ಬೇಡ. ಇವರಿಗೆ ಸೋಲೆಂದರೆ ಕೊಂಚ ಸಂತೋಷದ ಸಂಗತಿ. ಸೋಲುವುದೂ ಇವರ ಮಟ್ಟಿಗೊಂದು ಶೌರ್ಯದ ಕಾರ್ಯ. ಇವರ ಸೋಲಿನ ಕತೆಗಳನ್ನು, ವೃತ್ತಾಂತಗಳನ್ನು ಕೇಳಿ ಇವರ ಮಕ್ಕಳು ಮರಿಗಳು ಖುಷಿ ಪಡುತ್ತಾರೆ. ಈ ಮಾನಸಿಕ ದೌರ್ಬಲ್ಯವನ್ನು ದೂರಗೊಳಿಸುವುದು ಹೇಗೆಂದು ಲೋಹಿಯಾ ಹಗಲಿರುಳೂ ಚಿಂತೆ ಮಾಡುತ್ತಿದ್ದರು.

ಲೋಹಿಯಾ ಅವರು ರಾಷ್ಟ್ರೀಯತೆಯ ಜಾಗೃತ ಕಾವಲುಗಾರರಾಗಿದ್ದರು. ಅವರಿಗೆ ಹಿಂದೂ ರಾಷ್ಟ್ರ, ಸಿಖ್‌ರಾಷ್ಟ್ರ, ಮುಸ್ಲಿಮ್ ರಾಷ್ಟ್ರ, ಕ್ರಿಶ್ಚಿಯನ್ ರಾಷ್ಟ್ರ ಇವೆಲ್ಲ ಇಷ್ಟವಿರಲಿಲ್ಲ. ದೇಶದ ಏಕತೆಯೆ ಅವರಿಗೆ ಮುಖ್ಯವಾಗಿತ್ತು. ಅಲಿಪ್ತ ನೀತಿಯನ್ನು ಕೂಡಾ ಅವರು ರಾಷ್ಟ್ರದ ಒರೆಗಲ್ಲಿನ ಮೇಲೆ ಪರೀಕ್ಷಿಸಿ ನೋಡ ಬಯಸುತ್ತಿದ್ದರು. ಅವರು ಅನ್ನುತ್ತಿದ್ದರು: 'ನಮ್ಮ ದೇಶದ, ನಮ್ಮ ರಾಜ್ಯದ ರಕ್ಷಣೆಮಾಡುವುದು ಎಲ್ಲಕ್ಕಿಂತ ದೊಡ್ಡ ಕರ್ತವ್ಯ. ಅದರಿಂದಾಗಿಯೇ ಎಲ್ಲ ಸಿದ್ಧಾಂತಗಳೂ ನಿಷ್ಕರ್ಷಗೊಳ್ಳಬಹುದು. ನಾಡನ್ನು ವಿನಾಶಕ್ಕೆ ತಳ್ಳಿ ಯಾವ ಸಿದ್ಧಾಂತವೂ ನಿಲ್ಲಲಾರದು. ರಾಜಕೀಯದಲ್ಲಿ ಇದನ್ನು ಅಗತ್ಯವಾಗಿ ನೆನಪಿಡಬೇಕು. ಎಲ್ಲಕ್ಕೂ ಮಹತ್ವದ್ದು ರಾಷ್ಟ್ರರಕ್ಷಣೆ. ಪ್ರತಿಯೊಬ್ಬ ಭಾರತೀಯನಿಗೆ ನನ್ನ ವಿನಂತಿ ಎಂದರೆ, ಕಳೆದ ಸಾವಿರ ವರ್ಷಗಳ ನಮ್ಮ ದೌರ್ಭಾಗ್ಯದ ಮೇಲೊಮ್ಮೆ ದೃಷ್ಟಿ ಹಾಯಿಸಿರಿ. ಸಾವಿರ-ಒಂದೂಕಾಲುಸಾವಿರ ವರ್ಷಗಳಲ್ಲಿ ನಡೆದದ್ದೇನು? ರಾಷ್ಟ್ರವನ್ನು ಕಳೆದುಕೊಂಡು ಯಾವ್ಯಾವ ಗಂಡಾಂತರಗಳು, ಯಾವ್ಯಾವ ಅಪಮಾನಗಳು, ಯಾವ್ಯಾವ ನರಕಸದೃಶ ನೋವುಗಳು ನಮ್ಮ ಪಾಲಿಗೆ ಬಂದವು? ನಮ್ಮ ರಾಷ್ಟ್ರ ನಮ್ಮದಾಗಿ ಉಳಿಯಲಿಲ್ಲ. ನಮಗೆ ನಮ್ಮರಾಷ್ಟ್ರ ಎಲ್ಲಕ್ಕಿಂತ ಮುಖ್ಯವಾದದ್ದು. ಅಬಾಧಿತವಾಗಿ ಮುಂದುವರಿಯಬೇಕಾದದ್ದು. ರಾಷ್ಟ್ರದ ರಕ್ಷಣೆಗಾಗಿ ನಾವು ಉಳಿದೆಲ್ಲ

ಸಿದ್ಧಾಂತಗಳನ್ನು ಎರಡನೆಯ ಸ್ಥಾನಕ್ಕೆ ತಳ್ಳಿದರೂ, ರಾಷ್ಟ್ರರಕ್ಷಣೆಯ ಮೂಲಕವೆ ಎಲ್ಲ ಸಿದ್ಧಾಂತಗಳೂ ನೆಲೆಗೊಳ್ಳಬಹುದು'.

ಲೋಹಿಯಾ ಅವರು ಪ್ರಖರ ರಾಷ್ಟ್ರೀಯತೆಯ ವಕ್ತಾರರಾಗಿದ್ದರಲ್ಲದೆ ಮುರುಟಿಕೊಳ್ಳುವ ರಾಷ್ಟ್ರೀಯತೆಯ ಪ್ರತಿಪಾದಕರಾಗಿರಲಿಲ್ಲ. ಅವರ ಆದರ್ಶಗಳು ಉತ್ತುಂಗ ಸ್ವರೂಪದವಾಗಿದ್ದವು. ಜಯಪ್ರಕಾಶರ ಆದರ್ಶಗಳೂ ಅಂತಹವೇ. ನಾಗಾಲ್ಯಾಂಡ್, ಕಾಶ್ಮೀರ, ಬಾಂಗ್ಲಾದೇಶ, ಇತ್ಯಾದಿ ಸಮಸ್ಯೆಗಳ ಬಗ್ಗೆ ಜಯ ಪ್ರಕಾಶರು ಪ್ರತಿಪಾದಿಸಿದ ಧೋರಣೆ ಅವರ ಆದರ್ಶವಾದಕ್ಕೆ ಉತ್ತಮ ಸಾಕ್ಷಿ ಯಾಗಿತ್ತು. ಪೂರ್ವ ಪಾಕಿಸ್ತಾನವು ಪಾಕಿಸ್ತಾನದಿಂದ ಪ್ರತ್ಯೇಕಗೊಳ್ಳುವುದು ಅನಿ ವಾರ್ಯವೆಂದು ಲೋಹಿಯಾ ಬಹುದಿನಗಳ ಹಿಂದೆಯೇ ನುಡಿದಿದ್ದರು.

ಲೋಹಿಯಾ ಅವರಿಗೆ ಕೃತಕ ವಿಶ್ವಪ್ರೇಮದ ಬಗ್ಗೆ ತಾತ್ಸಾರವಿತ್ತು. ಅವರು ರಾಷ್ಟ್ರೀಯ ಸಾರ್ವಭೌಮತ್ವವನ್ನು ಭಾಗಶಃ ತ್ಯಾಗಮಾಡಲು ಸಿದ್ಧರಿದ್ದರು. ಎಲ್ಲದೇಶಗಳೂ ಹೀಗೆಯೇ ಮಾಡಲು ಒಪ್ಪಿದರೆ ಆ ಎಲ್ಲ ಭಾಗಶಃ ಅಧಿಕಾರವನ್ನು ವಿಶ್ವಸರಕಾರಕ್ಕೆ ಒಪ್ಪಿಸಿಬಿಡಬಹುದು. ಈ ರೀತಿಯಲ್ಲಿ ಅವರು ನಿಜವಾದ ಅರ್ಥದಲ್ಲಿ ಅಂತರರಾಷ್ಟ್ರೀಯವಾದಿಗಳಾಗಿದ್ದರು. ನನಗನ್ನಿಸುವ ಮಟ್ಟಿಗೆ ಸಣ್ಣ-ಪುಟ್ಟ ಘಟಕ ಹಾಗೂ ವಿಶ್ವಸರಕಾರ-ಇವುಗಳ ಮಧ್ಯೆ ಅವಶ್ಯಕವೆನಿಸುವ ರಾಷ್ಟ್ರೀಯತೆಯ ಕೊಂಡಿಯ ಮಹತ್ವವನ್ನು ಜಯಪ್ರಕಾಶರಿಗಿಂತ ಲೋಹಿಯಾ ಅವರೇ ಚೆನ್ನಾಗಿ ಗುರುತಿಸುತ್ತಿದ್ದರು.

ವಿದೇಶಗಳಲ್ಲಿ ನಿಧನರಾಗುವ ಮುಂದಾಳುಗಳ ಅಂತಿಮ ಕ್ರಿಯೆಗಾಗಿ ಅವರ ಮೃತಶರೀರಗಳನ್ನು ಸ್ವದೇಶಕ್ಕೆ ತರುವ ವಿಚಾರವೂ ಲೋಹಿಯಾ ಅವರಿಗೆ ಸರಿಯೆನಿಸುತ್ತಿರಲಿಲ್ಲ. ಇಡೀ ಜಗತ್ತೇ ನಮ್ಮ ಮನೆಯಲ್ಲವೇನು? ಅಲ್ಲಿಯ ಭೂಮಿ, ಇಲ್ಲಿಯ ಭೂಮಿ ಒಂದೇ ಅಲ್ಲವೇನು? ಪ್ರತಿಯೊಬ್ಬ ವ್ಯಕ್ತಿಯ ಶರೀರದ ಕಣಕಣವೂ ಅದೇ ಭೂಮಾತೆಯ ಮಣ್ಣಿನಲ್ಲಿ ಬೆರೆತು ಹೋಗುವುದಿಲ್ಲವೆ? ಮಾನವತೆಯ ಭಾಗ-ವಿಭಾಗಗಳನ್ನೆಲ್ಲ ಜೋಡಿಸುವ ಬಯಕೆ ಲೋಹಿಯಾ ಅವರ ದಾಗಿತ್ತು. ಪಾಸ್‌ಪೋರ್ಟ್ ಇಲ್ಲದೆಯೆ ವಿಶ್ವಪರ್ಯಟನ ಸಾಧ್ಯವಾಗಬೇಕೆಂಬುದು ಅವರ ಮಧುರ ಹಾಗೂ 'ಹುಚ್ಚು' ಕನಸಾಗಿತ್ತು.

●

ಹಿಂದಿಯಿಂದ ಕನ್ನಡಕ್ಕೆ : ಬಿ. ಎ. ಸನದಿ

ರಾಮಮನೋಹರ ಲೋಹಿಯಾ : ಬದುಕಿನ ಘಟ್ಟಗಳು

1910 : ಮಾರ್ಚ್ ಇಪ್ಪತ್ತಮೂರರಂದು ಉತ್ತರ ಪ್ರದೇಶದ ಫೈಜಾಬಾದ್ ಜಿಲ್ಲೆಯ ಅಕ್ಬರ್‌ಪುರದಲ್ಲಿ ಜನನ. ತಂದೆ : ಹೀರಾಲಾಲ್, ತಾಯಿ : ಚಂದ್ರಿ; ಒಬ್ಬನೇ ಮಗ; ಎಳೆತನದಲ್ಲೇ ತಾಯಿಯ ಮರಣ; ಪ್ರಾಥಮಿಕ ಶಾಲಾ ಶಿಕ್ಷಣ ಅಕ್ಬರ್‌ಪುರದಲ್ಲಿ.

1920 : ಅಸಹಕಾರ ಚಳುವಳಿಯಲ್ಲಿ ಬಾಲಕ ರಾಮಮನೋಹರ ; ತಂದೆಯೊಡನೆ ಗಾಂಧೀಜಿಯ ಭೇಟಿ.

1925 : ಮೆಟ್ರಿಕ್ ಪರೀಕ್ಷೆ; ಮಾರವಾಡಿ ವಿದ್ಯಾಲಯ, ಮುಂಬಯಿ.

1927 : ಇಂಟರ್ ಮೀಡಿಯೇಟ್; ಕಾಶಿವಿಶ್ವವಿದ್ಯಾನಿಲಯ, ವಾರಣಾಸಿ.

1928 : ಸೈಮನ್ ಕಮೀಷನ್ ಬಹಿಷ್ಕರಿಸುವ ಸಭೆಯ ಅಧ್ಯಕ್ಷತೆ, ಕಲ್ಕತ್ತ; ಜವಾಹರಲಾಲ್ ನೆಹರೂ ಮತ್ತು ಸುಭಾಷ್‌ಚಂದ್ರ ಬೋಸರ ನಿಕಟ ಸಂಪರ್ಕ.

1929 : ಬಿ.ಎ. ಪದವಿ; ವಿದ್ಯಾಸಾಗರ ಕಾಲೇಜು, ಕಲ್ಕತ್ತ. ವಿದ್ಯಾರ್ಥಿದೆಸೆಯಿಂದಲೇ ಯುವ ಸ್ವಾತಂತ್ರ್ಯ ಹೋರಾಟಗಾರರಾಗಿ ಚಳುವಳಿಗಳಲ್ಲಿ ಭಾಗವಹಿಸುವಿಕೆ.

1932 : ಜರ್ಮನಿಯ ಬರ್ಲಿನ್ ವಿಶ್ವವಿದ್ಯಾನಿಲಯದಿಂದ ಅರ್ಥಶಾಸ್ತ್ರದಲ್ಲಿ ಪಿಎಚ್.ಡಿ ಪದವಿ.

1934 : ಕಾಂಗ್ರೆಸ್ ಸಮಾಜವಾದಿ ಪಕ್ಷ ಸ್ಥಾಪನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಿಕೆ; ಪಕ್ಷದ ವಾರಪತ್ರಿಕೆ'ಕಾಂಗ್ರೆಸ್ ಸೋಷಲಿಸ್ಟ್'ನ ಸಂಪಾದಕ. ಗಾಂಧೀಜಿಯ ಒಡನಾಟ, ಮುಕ್ತ ಚರ್ಚೆಯ ಕ್ಷಣಗಳು.

1936-38 : ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ವಿದೇಶಾಂಗ ವ್ಯವಹಾರ ವಿಭಾಗದ ಕಾರ್ಯದರ್ಶಿ. ಭಾರತ ವಿದೇಶಾಂಗ ನೀತಿಗೆ ಭದ್ರವಾದ

ಬುನಾದಿ ಹಾಕುವಲ್ಲಿ ಗಮನಾರ್ಹ ದುಡಿಮೆ; ಹಲವಾರು ಕಿರುಹೊತ್ತಗೆಗಳು ಮತ್ತು ಲೇಖನಗಳ ಪ್ರಕಟಣೆ. ''ಸ್ವರಾಜ್ಯ : ಏನು ಮತ್ತು ಹೇಗೆ?'' ಕೃತಿಯ ಎಲ್ಲ ಪ್ರತಿಗಳನ್ನು ಉತ್ತರ ಪ್ರದೇಶ ಸರ್ಕಾರ ಮುಟ್ಟುಗೋಲು ಹಾಕಿದ್ದು.

1938 : ಮೇ ಇಪ್ಪತ್ತನಾಲ್ಕರಂದು ಕಲ್ಕತ್ತದಲ್ಲಿ ದಸ್ತಗಿರಿ; ಕಲ್ಕತ್ತ ನ್ಯಾಯಾಲಯದಲ್ಲಿ ತಾವೇ ವಾದಮಾಡಿ ಗೆದ್ದಿದ್ದು.

1939 : ಅಕ್ಟೋಬರ್ ಒಂಬತ್ತರಂದು ವಾರ್ಧಾದಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ''ಭಾರತವು ಯುದ್ಧದಲ್ಲಿ ಬ್ರಿಟಿಷರಿಗೆ ಬೆಂಬಲ ನೀಡುತ್ತದೆ'' ಎಂಬ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಗೊತ್ತುವಳಿಯನ್ನು ವಿರೋಧಿಸಿದ್ದು.

1940 : ಮೇ ಹನ್ನೊಂದರಂದು ಉತ್ತರ ಪ್ರದೇಶದ ಸುಲ್ತಾನ್‌ಪುರ ಜಿಲ್ಲೆಯ ದೋಸ್ತ್‌ಪುರದಲ್ಲಿ ಬಂಧನ; ಮತ್ತೆ ಜೂನ್ ಏಳರಂದು ಅಲಹಾಬಾದ್ ಸ್ವರಾಜ್ ಭವನದಲ್ಲಿ ಬಂಧನ; ಕಠಿಣ ಶಿಕ್ಷೆಯ ಸೆರೆಮನೆವಾಸ. 1941ರ ಡಿಸೆಂಬರ್ ನಾಲ್ಕರಂದು ಬಿಡುಗಡೆ.

1942 : ಗಾಂಧೀಜಿಯ ಒಡನಾಟ; ಪರಸ್ಪರ ತುಂಬುಮನಸ್ಸಿನ ಚರ್ಚೆ; ''ಕ್ರಿಪ್ಸ್‌ರಹಸ್ಯ'' ಕುರಿತು ಲೇಖನ. ಆಗಸ್ಟ್ ಎಂಟರಂದು ''ಭಾರತ ಬಿಟ್ಟು ತೊಲಗಿ'' ಚಳುವಳಿಯ ತೀರ್ಮಾನ; ಒಂಬತ್ತರ ನಸುಕಿನಲ್ಲಿ ಗಾಂಧೀಜಿ ಮತ್ತಿತರ ಹಿರಿಯರ ಬಂಧನ: ಹೋರಾಟಕ್ಕೆ ಮಾರ್ಗದರ್ಶನ ನೀಡಲು ಲೋಹಿಯಾ ಅವರು ಅಚ್ಚುತ ಪಟವರ್ಧನ್, ಜಯಪ್ರಕಾಶ ನಾರಾಯಣ್ ಜೊತೆಯಲ್ಲಿ ಭೂಗತರಾದದ್ದು; ಕರಪತ್ರಗಳು, ಕಿರುಹೊತ್ತಿಗೆಗಳ ಪ್ರಕಟಣೆ ಹಾಗೂ ಮುಂಬಯಿ ಮತ್ತು ಕಲ್ಕತ್ತ ಮಹಾನಗರಗಳ ಭೂಗತ ಬಾನುಲಿ ಕೇಂದ್ರಗಳ ಮೂಲಕ 13-8-1942ರಿಂದ 14-11-1942ರ ತನಕ ಹೋರಾಟಕ್ಕೆ ಅಪಾರ ಉತ್ತೇಜನ, ಸ್ಫೂರ್ತಿ ನೀಡಿದ್ದು; ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಬ್ರಿಟಿಷ್ ಸರ್ಕಾರದ ಹಿಂಸೆಯನ್ನು ಪ್ರತಿಭಟಿಸಿ ಭಾರತದ ವೈಸ್‌ರಾಯ್‌ಗೆ ಹೃದಯಸ್ಪರ್ಶಿಯಾದ ಬಹಿರಂಗಪತ್ರ ಬರೆದದ್ದು.

1944 : ಮೇ ಇಪ್ಪತ್ತರಂದು ಮುಂಬಯಿಯಲ್ಲಿ ಬಂಧನ; ಲಾಹೋರ್ ಕೋಟೆಯ ಸೆರೆಮನೆಯಲ್ಲಿ ಉಗ್ರಶಿಕ್ಷೆ; ನಿರಂತರ ಚಿತ್ರಹಿಂಸೆಯ ಭೀಕರ ಹಗಲು-ರಾತ್ರಿಗಳು; ಆಗ್ರಾ ಜೈಲಿಗೆ ವರ್ಗಾವಣೆ; ತಂದೆಯ ಸಾವಿನ ಸುದ್ದಿ ಕೇಳಿಯೂ ಪೆರೋಲ್ ಮೇಲೆ ಬಿಡುಗಡೆಯಾಗಲು ಒಪ್ಪದ ಲೋಹಿಯಾ.

1946 : ಏಪ್ರಿಲ್ ಹನ್ನೊಂದರಂದು (ಜಯಪ್ರಕಾಶ ನಾರಾಯಣ ಅವರ ಜೊತೆಗೆ) ಜೈಲಿನಿಂದ ಬಿಡುಗಡೆ. ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಲು ನಿರಾಕರಿಸಿದ್ದು. ಕಾಂಗ್ರೆಸ್ ಸಮಾಜವಾದಿ ಸಮ್ಮೇಳನದ ಅಧ್ಯಕ್ಷತೆ.

ಸೆರೆವಾಸದಿಂದ ಹದಗೆಟ್ಟ ಆರೋಗ್ಯ; ಗೆಳೆಯರ ಆಹ್ವಾನದ ಮೇಲೆ ಜೂನ್ ಆರರಂದು ಗೋವಾಕ್ಕೆ ಪ್ರಯಾಣ. ಅಲ್ಲಿನ ಪೋರ್ಚುಗೀಸ್ ಸರ್ಕಾರ ನಾಗರಿಕ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ದಮನ ಮಾಡಿರುವುದನ್ನು ಮನಗಂಡು ಜೂನ್ ಹದಿನೆಂಟರಂದು ಪ್ರತಿಭಟನಾ ಸಭೆ; ಬಂಧನ, ಬಿಡುಗಡೆ. ಮತ್ತೆ ಸೆಪ್ಟೆಂಬರ್ ಇಪ್ಪತ್ತೊಂಬತ್ತರಂದು ಬಂಧನ; ಹತ್ತು ದಿನಗಳ ಕಾಲ ಚಿತ್ರಹಿಂಸೆ; ಬಿಡುಗಡೆ.

ಗೋವಾ ಹೋರಾಟದ ಲೋಹಿಯಾ ಕನಸುಗಳ ಬಗ್ಗೆ ಗಾಂಧೀಜಿಯವರಿಂದ ಅಪಾರ ಮೆಚ್ಚುಗೆ, ಬೆಂಬಲ. ಗಾಂಧೀಜಿಯವರ ಅಂತರಂಗಕ್ಕೆ ಲೋಹಿಯಾ ಇನ್ನಷ್ಟು ಹತ್ತಿರ.

1947 : ಜೂನ್ ತಿಂಗಳಿನಲ್ಲಿ ಭಾರತ ವಿಭಜನೆ ಕುರಿತು ಚರ್ಚಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ; ತಾವೇ ಅಧ್ಯಕ್ಷರಾಗಿದ್ದ ಸಮಾಜವಾದಿ ಪಕ್ಷದ ತಾಟಸ್ಥ್ಯ ನೀತಿ; ಆದರೆ, ರಾಷ್ಟ್ರವಿಭಜನೆಯ ಯೋಜನೆಗೆ ವೈಯಕ್ತಿಕವಾಗಿ ಲೋಹಿಯಾ ವಿರೋಧ.

ಕೋಮುಗಲಭೆಯಿಂದಾಗಿ ಕಲ್ಕತ್ತ ಮಹಾನಗರವು ಹೊತ್ತಿ ಉರಿಯುತ್ತಿದ್ದಾಗ, ಗಾಂಧೀಜಿಯವರ ಕರೆಯ ಮೇರೆಗೆ ಕಲ್ಕತ್ತೆಗೆ ಹೋಗಿ, ಹಳೆಯ ಗೆಳೆಯರನ್ನೆಲ್ಲ ಭೇಟಿಯಾಗಿ ಮಾನವ ಸೌಹಾರ್ದ ಕಾರ್ಯದಲ್ಲಿ ತೀವ್ರವಾಗಿ ಪಾಲ್ಗೊಂಡದ್ದು.

1948 : ಗಾಂಧೀಜಿಯವರೊಡನೆ ಸತತ ಒಡನಾಟ; ಜನವರಿ

ಇಪ್ಪತ್ತಾರರಂದು ಭೇಟಿ; ಮತ್ತೆ ಇಪ್ಪತ್ತೆಂಟು; ಇಪ್ಪತ್ತೊಂಬತ್ತರಂದು ಭೇಟಿಯಾದಾಗ ಗಾಂಧೀಜಿ ಹೇಳಿದರು: "ನಾಳೆ ಸಾಯಂಕಾಲ ಅಗತ್ಯ ಬನ್ನಿ. ಮನಸ್ಸುಪೂರ್ತಿ ಮಾತಾಡೋಣ". ಮರುದಿನ ಗಾಂಧೀಜಿಯ ಕಗ್ಗೊಲೆ; ದುಃಖತಪ್ತ ಲೋಹಿಯಾ ಮಹಾತ್ಮರ ಮೃತಶರೀರವನ್ನು ಕಂಡು ತತ್ತರಿಸಿದರು : "ನೀವು ನಡುನೀರಿನಲ್ಲೇ ನಾಡಿನ ಜನತೆಯನ್ನು ಕೈಬಿಟ್ಟು ಹೋದುದ್ದೇಕೆ? ಹೀಗೇಕೆ ಮೋಸಮಾಡಿದಿರಿ?"

ಮಾರ್ಚಿಯಲ್ಲಿ ನಾಸಿಕ್‌ನಲ್ಲಿ ಸೇರಿದ್ದ ಸಮಾಜವಾದಿಗಳು ಕಾಂಗ್ರೆಸ್ ಪಕ್ಷದಿಂದ ಹೊರಬರುವ ತೀರ್ಮಾನ ತೆಗೆದುಕೊಂಡಿದ್ದು; ಭಾರತದ ಸ್ಥಳೀಯ ಪ್ರಾಂತ್ಯಗಳ ಸಮಸ್ಯೆಗಳ ಪರಿಹಾರಕ್ಕೆ ಲೋಹಿಯಾ ಆರು ಅಂಶಗಳ ಕಾರ್ಯಕ್ರಮ ರೂಪಿಸಿದ್ದು.

1949 : ಜನವರಿ ಎಂಟರಂದು ವಿಂಧ್ಯಪ್ರದೇಶದ ರೇವಾದಲ್ಲಿ ಬಂಧನ, ಬಿಡುಗಡೆ.

"ಹಿಂದ್ ಕಿಸಾನ್ ಪಂಚಾಯತ್" ಸಂಸ್ಥೆಯ ಮೊದಲ ಅಧ್ಯಕ್ಷರು.

ನೇಪಾಳದಲ್ಲಿನ ನಿರಂಕುಶ ಪ್ರಭುತ್ವದ ವಿರುದ್ಧ ಪ್ರತಿಭಟನೆ; ಈ ಸಂಬಂಧದ ಮೆರವಣಿಗೆಯ ಮುಂದಾಳಾಗಿದ್ದಾಗ ದೆಹಲಿಯಲ್ಲಿ ಮೇ ಇಪ್ಪತ್ತೈದರಂದು ದಸ್ತಗಿರಿ; ಎರಡು ತಿಂಗಳು ಸೆರೆಮನೆವಾಸ.

ಆಗಸ್ಟ್ ಇಪ್ಪತ್ತನಾಲ್ಕರಂದು ಸ್ವೀಡನ್ನಿನ ರಾಜಧಾನಿ ಸ್ಟಾಕ್ ಹೋಮ್‌ನಲ್ಲಿ ವಿಶ್ವಸರ್ಕಾರವನ್ನು ಬೆಂಬಲಿಸುವ ಸದಸ್ಯರ ಸಮ್ಮೇಳನದಲ್ಲಿ ಪಾಲ್ಗೊಂಡದ್ದು.

1951 : ಜುಲೈ ಮೂರರಂದು ಫ್ರಾಂಕ್‌ಫರ್ಟ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಸಮಾಜವಾದಿಗಳ ಸಮ್ಮೇಳನದಲ್ಲಿ ಭಾಗವಹಿಸಿದ್ದು; ಪ್ರಿನ್ಸ್‌ಟನ್‌ನಲ್ಲಿ ವಿಜ್ಞಾನಿ ಆಲ್‌ಬರ್ಟ್ ಐನ್‌ಸ್ಟೀನ್ ಭೇಟಿ; ವಿಶ್ವದ ಹಲವಾರು ರಾಷ್ಟ್ರಗಳಲ್ಲಿ ಸಂಚಾರ, ಚರ್ಚೆ.

1952 : ಪ್ರಜಾ ಸಮಾಜವಾದಿ ಪಕ್ಷದ ರಚನೆ.

1953 : ಪ್ರಜಾ ಸಮಾಜವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿ.

1954 : ತಿರುವಾಂಕೂರು-ಕೊಚ್ಚಿನ್ ಪ್ರಾಂತ್ಯದ ಆಡಳಿತ ಸೂತ್ರ ಹಿಡಿದಿದ್ದ ಪಿ.ಎಸ್.ಪಿ. ಸರ್ಕಾರ ಪ್ರದರ್ಶನಕಾರರ ಮೇಲೆ ನಡೆಸಿದ ಗೋಲಿಬಾರ್ ಘಟನೆಯ ನೈತಿಕ ಹೊಣೆಹೊತ್ತು ಅಲ್ಲಿನ ಮುಖ್ಯಮಂತ್ರಿ ರಾಜೀನಾಮೆ ನೀಡದಿದ್ದಾಗ - ತಾವು ಸ್ವತಃ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದು.

ಉತ್ತರ ಪ್ರದೇಶ ಸರ್ಕಾರ ನೀರಾವರಿ ದರಗಳನ್ನು ಹೆಚ್ಚಿಸಿದಾಗ ನಡೆದ ಸತ್ಯಾಗ್ರಹದ ಅಂಗವಾಗಿ ಫರೂಕಾಬಾದ್‌ನಲ್ಲಿ ದಸ್ತಗಿರಿ, ಜೈಲು; ನಂತರ ನೈನಿ ಜೈಲಿಗೆ ವರ್ಗಾವಣೆ.

1955 : ಡಿಸೆಂಬರ್‌ನಲ್ಲಿ ಹೈದರಾಬಾದ್‌ನಲ್ಲಿ ಸಮಾಜವಾದಿಗಳು ಒಟ್ಟಾಗಿ ರಚಿಸಿದ ಸಮಾಜವಾದಿ ಪಕ್ಷದ ಅಧ್ಯಕ್ಷರು.

ಲಖ್ನೋದಲ್ಲಿ ಮಾರ್ಚ್ ಒಂದರಂದು ರೈತರ ಭಾರೀ ಮೆರವಣಿಗೆಯ ನೇತೃತ್ವ.

1956 : ''ಮ್ಯಾನ್‌ಕೈಂಡ್'' ಇಂಗ್ಲಿಷ್ ಪತ್ರಿಕೆಯ ಪ್ರಧಾನ ಸಂಪಾದಕರು.

1957 : ಮೇ ತಿಂಗಳಿನಲ್ಲಿ ಉತ್ತರ ಪ್ರದೇಶದಲ್ಲಿ ತೀವ್ರ ಅಸಹಕಾರ ಚಳುವಳಿ; ನವೆಂಬರ್ ಎರಡರಂದು ಲಖ್ನೋದಲ್ಲಿ ಲೋಹಿಯಾ ದಸ್ತಗಿರಿ; ಡಿಸೆಂಬರ್ ಇಪ್ಪತ್ತಮೂರರಂದು ಬಿಡುಗಡೆ.

1959 : ನವೆಂಬರ್ ಇಪ್ಪತ್ತಮೂರರಂದು ನೇಫಾ ಪ್ರದೇಶದ ಊರ್ವಶೀಯಂ ಭಾಗದಲ್ಲಿ ದಸ್ತಗಿರಿ.

1960 : ಏಪ್ರಿಲ್‌ನಲ್ಲಿ ಕಾನ್‌ಪುರ ಪ್ರವಾಸಿ ಮಂದಿರದಲ್ಲಿ ಬಂಧನ.

1961 : ''ಇಂಗ್ಲಿಷ್ ತೊಲಗಿಸಿ'' ಚಳುವಳಿ. ಮತ್ತೆ ವಿದೇಶಯಾತ್ರೆ; ಬೇರೆ ಬೇರೆ ರಾಷ್ಟ್ರಗಳ ಸಮಾಜವಾದಿ ಮುಖಂಡರುಗಳ ಭೇಟಿ.

1962 : ಭಾರತದಲ್ಲಿ ವ್ಯಕ್ತಿಪೂಜೆ ಪರಂಪರೆಯನ್ನು ಕಿತ್ತೊಗೆಯುವ ಆಶಯದ ಸಂಕೇತವಾಗಿ ಫೂಲ್‌ಪುರ ಲೋಕಸಭಾ ಚುನಾವಣಾ ಕ್ಷೇತ್ರದಲ್ಲಿ ನೆಹರೂ ವಿರುದ್ಧ ಸ್ಪರ್ಧೆ; ಪರಾಭವ.

1963 : ಫರೂಕಾಬಾದ್ ಉಪಚುನಾವಣೆಯಲ್ಲಿ ಸ್ಪರ್ಧಿಸಿ ಪ್ರಚಂಡ ಬಹುಮತದಿಂದ ಲೋಕಸಭೆಗೆ ಆಯ್ಕೆ.

1964 : ಏಪ್ರಿಲ್ ಹದಿನೈದರಿಂದ ಮತ್ತೆ ವಿದೇಶಯಾತ್ರೆ; ಮೇ ಇಪ್ಪತ್ತೇಳರಂದು (ನೆಹರೂ ನಿಧನರಾದ ವೇಳೆಯಲ್ಲಿ) ಅಮೆರಿಕೆಯ ಮಿಸಿಸಿಪಿಯ ಜಾಕ್‌ಸನ್‌ನಲ್ಲಿ ವರ್ಣಭೇದವನ್ನು ವಿರೋಧಿಸಿ ಹೋಟೆಲನ್ನು ಪ್ರವೇಶಿಸುವ ಯತ್ನ; ಬಂಧನ; ಕೆಲವೇ ಗಂಟೆಗಳಲ್ಲಿ ಬಿಡುಗಡೆ ಮಾಡಿದ ಅಮೆರಿಕಾ ಸರ್ಕಾರ ಲೋಹಿಯಾರ ಕ್ಷಮೆ ಕೇಳಿಕೊಂಡಿತು.

1965 : ಜೂನ್‌ನಲ್ಲಿ ಜರ್ಮನಿ, ರಷ್ಯಾ ಮತ್ತು ಆಫ್ಘಾನಿಸ್ತಾನಗಳಿಗೆ ಭೇಟಿ; ಗಡಿನಾಡುಗಾಂಧಿ ಜೊತೆಗೆ ಮಾತುಕತೆ.

1965 : ಆಗಸ್ಟ್ ಎಂಟರಂದು ಪಾಟ್ನಾ ಬಂದ್ ನಡೆದಾಗ ಜನಸ್ತೋಮವನ್ನು ಉದ್ದೇಶಿಸಿ ಮಾತನಾಡಿ ವಿಧಾನಸಭೆಯನ್ನು ಘೆರಾವೋ ಮಾಡಲು ಕರೆಕೊಟ್ಟಿದ್ದು.

1966 : ಜುಲೈ ಹನ್ನೊಂದರಂದು ಬೆಲೆಏರಿಕೆಯನ್ನು ಪ್ರತಿಭಟಿಸಿದಾಗ ಆಗ್ರಾ ರೈಲುನಿಲ್ದಾಣದಲ್ಲಿ ಬಂಧನ.

1967 : ಕನೌಜ್ ಕ್ಷೇತ್ರದಿಂದ ಲೋಕಸಭೆಗೆ ಮತ್ತೆ ಆಯ್ಕೆ. ಸೆಪ್ಟೆಂಬರ್ ಮೂವತ್ತರಂದು ಹಿಗ್ಗಿದ ಪ್ರಾಸ್ಟೇಟ್ ಗ್ರಂಥಿಯ ಚಿಕಿತ್ಸೆಗಾಗಿ ನವದೆಹಲಿಯ ವಿಲ್ಲಿಂಗ್‌ಡನ್ ಆಸ್ಪತ್ರೆ ಸೇರಿ ಶಸ್ತ್ರಕ್ರಿಯೆಗೆ ಒಳಗಾದರು. ಅಕ್ಟೋಬರ್ ಹನ್ನೆರಡರಂದು ಮರಣಹೊಂದಿದರು.

ಲೋಹಿಯಾ ಅವರ ಪ್ರಮುಖ ಕೃತಿಗಳು

ಇಂಗ್ಲಿಷ್

1. An Interval During Politics
2. Fragments of a World Mind
3. Guilty Men of India's Partition
4. India, China and Northern Frontiers
5. Language
6. Marx, Gandhi and Socialism
7. Rupees 25,000/- A Day
8. The Caste System
9. The Mystery of Sir Stafford Cripps
10. Wheel of History
11. Will to Power
12. Note and Comments Vol. I and II
13. Fundamentals of a World Mind
14. Foreign Policy

ಹಿಂದಿ

1. ಸಮಾಜವಾದಿ ಆಂದೋಲನ್ ಕಾ ಇತಿಹಾಸ್
2. ಲೋಕ್‌ಸಭಾ ಮೆ ಲೋಹಿಯಾ (ಸಂಪುಟಗಳು)
3. ಹಿಂದೂ ಔರ್ ಮುಸಲ್ಮಾನ್
4. ಸುಧರೋ ಅಥವಾ ಟೂಟೋ
5. ಅನ್ನ ಸಮಸ್ಯಾ
6. ಉತ್ತರ್ ಪ್ರದೇಶ್ ಔರ್ ಬಿಹಾರ್ ಕೆ ದೌರೋಂಕೆ ಕುಚ್ ಅನುಭವ್
7. ಆಜಾದ್ ಹಿಂದೂಸ್ತಾನ್ ಕಿ ನಯಿಾ ರುಜ್‌ಹಾನ್
8. ಜರ್ಮನ್ ಸೋಷಲಿಸ್ಟ್ ಪಾರ್ಟಿ
9. ನರಮ್ ಔರ್ ಗರಮ್ ಪಂಥ್
10. ಭಾರತ್, ಚೀನ್ ಔರ್ ಉತ್ತರಿ ಸೀಮಾಯೇ
11. ಭಾರತ್ ಮೆ ಸಮಾಜ್‌ವಾದ್
12. ಸಚ್, ಕರ್ಮ್, ಪ್ರತೀಕಾರ್ ಔರ್ ಚರಿತ್ರನಿರ್ಮಾಣ್: ಆವಾಹನ್
13. ಸರ್ಕಾರಿ, ಮಠಿ ಔರ್ ಕುಜಾತ್ ಗಾಂಧೀವಾದಿ

ಈ ಕೃತಿಯ ಸಂಪಾದಕರು ಮತ್ತು ಅನುವಾದಕರು

ಡಾ. ಕಾಳೇಗೌಡ ನಾಗವಾರ
ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು - 570 006

ಡಾ. ನಟರಾಜ್ ಹುಳಿಯಾರ್
ನಂ.27, 15ನೆಯ ಅಡ್ಡರಸ್ತೆ
18ನೆಯ ಮುಖ್ಯರಸ್ತೆ
ಜೆ. ಪಿ. ನಗರ, ಎರಡನೆಯ ಹಂತ
ಬೆಂಗಳೂರು - 560 070

ಮಂಗ್ಳೂರು ವಿಜಯ
ಯುವಜನಸೇವಾ ಮತ್ತು ಕ್ರೀಡಾ ನಿರ್ದೇಶನಾಲಯ
ನೃಪತುಂಗ ರಸ್ತೆ, ಬೆಂಗಳೂರು- 560 002

ಬಿ. ಎ. ಸನದಿ
ಎ-4, ಅನುಜ್, ಸಿ.ಹೆಚ್. ಎಸ್.
ಪರ್ವತ ನಗರ, ದಾಹಿಸರ್ (ಈಸ್ಟ್)
ಮುಂಬಯಿ-400 068

ಡಾ. ಎಸ್. ಲಕ್ಷ್ಮೀನಾರಾಯಣ ಅರೋರಾ
ರೀಡರ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು- 570 006

ಡಾ. ತಿಪ್ಪೇಸ್ವಾಮಿ
ಹಿಂದಿ ಪ್ರಾಧ್ಯಾಪಕರು
ಮಾನಸಗಂಗೋತ್ರಿ, ಮೈಸೂರು-570 006

ಕೆ. ವಿ. ಸುಬ್ಬಣ್ಣ
ಹೆಗ್ಗೋಡು, ಸಾಗರ ತಾಲ್ಲೂಕು
ಶಿವಮೊಗ್ಗ ಜಿಲ್ಲೆ

ಹಸನ್ ನಯೀಂ ಸುರಕೋಡ
199, ಮಡ್ಡಿಗಲ್ಲಿ
ರಾಮದುರ್ಗ, ಬೆಳಗಾವಿ ಜಿಲ್ಲೆ - 591 123

ಪ್ರೊ. ಕೆ. ಎಸ್. ಭಗವಾನ್
ಇಂಗ್ಲಿಷ್ ವಿಭಾಗ, ಯುವರಾಜ ಕಾಲೇಜು
ಮೈಸೂರು - 570 005

ಕೆ. ಪಿ. ಪೂರ್ಣಚಂದ್ರ ತೇಜಸ್ವಿ
ಹ್ಯಾಂಡ್‌ಪೋಸ್ಟ್, ಮೂಡಿಗೆರೆ
ಚಿಕ್ಕಮಗಳೂರು ಜಿಲ್ಲೆ

ಗುರುರಾಜ ಬೀಡಿಕರ್
ಅಧ್ಯಾಪಕರು,ಸಮಾಜಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು-570 006

ಸಿ. ನಾಗಣ್ಣ
ಅಧ್ಯಾಪಕರು, ಮಹಾರಾಜ ಕಾಲೇಜು
ಮೈಸೂರು - 570 005

ಆಧುನಿಕ ಭಾರತದ ಶ್ರೇಷ್ಠ ಸಮಾಜವಾದಿ ಚಿಂತಕ ಹಾಗೂ ಧೀಮಂತ ರಾಜಕಾರಣಿ ಡಾ. ರಾಮಮನೋಹರ ಲೋಹಿಯಾ ಅವರ ಸಿದ್ಧಾಂತಗಳು ಹಾಗೂ ಲೋಕ ದರ್ಶನಗಳ ಸ್ವರೂಪವನ್ನು ಪರಿಚಯಿಸುವ ಗ್ರಂಥ ಇದು. ಲೋಹಿಯಾ ಪ್ರಾತಿನಿಧಿಕ ಬರಹಗಳ ಜೊತೆಗೇ ಲೋಹಿಯಾ ವ್ಯಕ್ತಿತ್ವ ಕುರಿತು ಅವರ ಸಮಾಜವಾದಿ ಸಂಗಾತಿಗಳಾದ ಮಧು ಲಿಮಯೆ, ಜಾರ್ಜ್ ಫರ್ನಾಂಡಿಸ್ ಮೊದಲಾದವರು ಬರೆದ ಬರಹಗಳೂ ಇಲ್ಲಿವೆ.

ಕರ್ನಾಟಕದ ರಾಜಕೀಯ ಹಾಗೂ ಸಾಂಸ್ಕೃತಿಕ ಬದುಕಿನ ಮೇಲೆ ಮಹತ್ವದ ಪ್ರಭಾವ ಬೀರಿದ ಲೋಹಿಯಾ ಅವರ ಸಮಗ್ರ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕರ್ನಾಟಕ ರಾಜ್ಯ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಕೈಗೆತ್ತಿಕೊಂಡಿದೆ. ಈ ಯೋಜನೆಯ ಮೊದಲ ಸಂಪುಟ ಸ್ವಾತಂತ್ರ್ಯದ ಅಂತರ್ಜಲ.

ಬೆಲೆ : ಇಪ್ಪತ್ತೈದು ರೂಪಾಯಿಗಳು



